ಸಂಪುಟ 4

"ಸುಪ್ರಭಾತ"

1946

ಪ್ರಥಮ ಸಂಪಿಕೆ 24-9-46

ಸಂಪಿಕೆಗಳು 1000 21

ಪ್ರತಿಗಳು 1000 214

Harijan Uplift Number.
ಹರಿಜನೋದ್ಧಾರ ಸಂಚಿಕೆ.

ಜೈ ಹಿಂದ್.

Reg. No. M. 4746

ಸಮಚಾರ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

ಕಟ್ಟು ೫
ಸಂಚಿಕೆ ೪

ಬಳ್ಳಾರಿ ಆಗಸ್ಟು ೨೪ ಶನಿವಾರ ೧೯೪೬

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ್.

ಕೇಂದ್ರದಲ್ಲಿ ತಾತ್ಕಾಲಿಕ ಸರಕಾರ.

ಕಾಂಗ್ರೆಸ್ ಅಧ್ಯಕ್ಷರಾದ ಪಂಡಿತ ಜವಹರ ಲಾಲ ನೆಹರೂರವರು ದೆಹಲಿ ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವನ್ನು ರಚಿಸಬೇಕೆಂದು ವೈಸ್ರಾಯರಿಂದ ಕರೆ ಬಂದ ಕಾರಣ ಅವರು ದಿಲ್ಲಿಗೆ ಹೋಗಿರುವರು. ಅವರಿಗೆ ಸಹಾಯ ಮಾಡಲು ಪಾರ್ಲಿಮೆಂಟರಿ ಸಮಿತಿಯ ಸದಸ್ಯರಾದ ಮೌಲಾನಾ ಆಜಾದ್, ಸರ್ದಾರ ವಲ್ಲಭಭಾಯಿ ಪಟೇಲ, ಬಾಬೂರಾಜೇಂದ್ರಪ್ರಸಾದರು ದೆಹಲಿಗೆ ಆಗಮಿಸಿರುವರು. ಕಾಂಗ್ರೆಸ್ ಅಧ್ಯಕ್ಷರು ಹೋಗುವ ಮುಂಚೆ ಬೊಂಬಾಯಲ್ಲಿ ಮುಸ್ಲಿಂಲೀಗಿನ ಜಿನ್ನಾಸಾಹೇಬರನ್ನು ಕಂಡು ಸಹಕಾರವನ್ನು ಕೋರಿದರು. ಅವರು ಸಹಕಾರ ಕೊಡಲು ನಿರಾಕರಿಸಿದರು. ತಾತ್ಕಾಲಿಕ ಸರಕಾರದಲ್ಲಿ ಲೀಗೇತರ ಮತ್ತು ರಾಷ್ಟ್ರೀಯ ಪ್ರವೃತ್ತಿಯ ಮುಸಲ್ಮಾನರಿಗೆ ಕೆಲಸ್ಥಾನಗಳು ಹೋಗಲಿವೆಯೆಂದೂ, ಸಂಖ್ಯೆಯು 14 ಅಥವಾ 15 ಇರಬಹುದೆಂದೂ ಅಂದಾಜು ಮಾಡಲಾಗಿದೆ. ಕಾಂಗ್ರೆಸ್ ಅಧ್ಯಕ್ಷರಿಂದ ಮಂತ್ರಿಗಳ ಯಾದಿಯು ವೈಸ್ರಾಯರ ಕೈಸೇರಿದ್ದು ಇಂದೋ ನಾಳೆಯೋ ಅಧಿಕೃತವಾಗಿ ಪ್ರಕಟವಾಗಲಿದೆ. ತಾತ್ಕಾಲಿಕ ಸರಕಾರದಲ್ಲಿ ಕಾಂಗ್ರೆಸಿನ ಪರವಾಗಿ ಪಂಡಿತ ನೆಹರು, ಸರ್ದಾರ ವಲ್ಲಭಭಾಯಿ, ರಾಜಗೋಪಾಲಾಚಾರಿ, ಬಾಬೂರಾಜೇಂದ್ರಪ್ರಸಾದರೂ, ಜಗಜೀವನರಾಮ ಮತ್ತು ಕಾಂಗ್ರೆಸಿನಿಂದ ಸ್ವೀಕೃತ ಕೆಲಮುಖ್ಯ ಕಾಂಗ್ರೆಸೇತರ ಮುಖಂಡರು ಇರುವರೆಂದು ನಂಬಲಾಗಿದೆ.

ಮದ್ರಾಸ್ ಪ್ರಾಂತದಲ್ಲಿ ಮದ್ಯನಿಷೇಧ.

1-10-1946 ರಿಂದ ಬಳ್ಳಾರಿ ಅನಂತಪುರ, ಕರ್ನೂಲು, ಕಡಪಾ, ಚಿತ್ತೂರು, ಉತ್ತರ ಆರ್ಕಾಟು ಸೇಲಂ, ಕೊಯಂಬತ್ತೂರು ಈ ಎಂಟು ಜಿಲ್ಲೆಗಳಲ್ಲಿ ಪಾನನಿರೋಧ ಶಾಸನವು ಜಾರಿಯಲ್ಲಿ ಬರುವುದು. ಆ ದಿನದಿಂದ ಮೇಲ್ಕಾಣಿಸಿದ ಜಿಲ್ಲೆಗಳಲ್ಲಿ ಹೆಂಡ ಸಾರಾಯಿ ಮತ್ತು ನಿಶಾದ್ರವಗಳ, ಸರ್ಕಾರದಿಂದ ಲೈಸನ್ಸುಪಡೆದುಂಗಡಿಗಳಿಲ್ಲಾ ಮುಚ್ಚಲ್ಪಡುವುವು. ಕಾಂಗ್ರೆಸ್ ಸರಕಾರದ ಈ ಶಾಸನವನ್ನು ಯಶಸ್ವಿ ಮಾಡಲು ಸಾರ್ವಜನಿಕರೆಲ್ಲಾ ಸಹಕರಿಸಲು ಬೇಡಿಕೆ.

ಬಳ್ಳಾರಿ ಪುರಸಭೆಯ ಚುನಾವಣೆಗಳಲ್ಲಿ ಸಾಧ್ಯವಿದ್ದ ಸ್ಥಳಗಳಿಗೆಲ್ಲಾ ಕಾಂಗ್ರೆಸ್‌ನವರು ಅಭ್ಯರ್ಥಿಗಳನ್ನು ನಿಲ್ಲಿಸಬೇಕೆಂದು ನಿಶ್ಚಯಿಸಿರುವರು.

ಆದವಾನಿ :

ಆಂಧ್ರಜಿಲ್ಲಾ ಕಾಂಗ್ರೆಸ್ ಸಮಿತಿಯು ಶ್ರೀ ಎ. ವೆಂಕಟರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಮಾವೇಶವಾಗಿ ಡಾಕ್ಟರ್ ಲಕ್ಷ್ಮಣರವರನ್ನು ಅಧ್ಯಕ್ಷರನ್ನಾಗಿಯೂ, ಹಾಲ್ವಿ ಸತ್ಯನಾರಾಯಣರಾಯರನ್ನು ಕಾರ್ಯದರ್ಶಿಗಳನ್ನಾಗಿಯೂ ಆರಿಸುವುದರಲ್ಲಾಯಿತು. ಆದವಾನಿ ಮುನಿಸಿಪಾಲಿಟಿ ಮತ್ತು ಆದವಾನಿ, ಆಲೂರು, ರಾಯದುರ್ಗ ತಾಲೂಕುಗಳಿಂದ ಬಳ್ಳಾರಿ ಜಿಲ್ಲಾ ಬೋರ್ಡು ಸದಸ್ಯರಾಗಿ ನಿಲ್ಲಿಬಯಸುವ ಉಮೇದುವಾರರು - 100- ಡಿಪಾಜಿಟ್ ಹಣದೊಂದಿಗೆ ಅಧ್ಯಕ್ಷರಿಗೆ ಅರ್ಜಿ ಇಟ್ಟುಕೊಳ್ಳಲು ಡಾಕ್ಟರ್ ಲಕ್ಷ್ಮಣರು ತಿಳಿಸುತ್ತಾರೆ.

ಕಂಪಲಿ ಬೋರ್ಡು ಹೈಸ್ಕೂಲಿನ ಪ್ರಗತಿ.

1943 ರಲ್ಲಿ ಮಿಡಲ್ ಸ್ಕೂಲಿನ ಅಸ್ತಿತ್ವವೇ ಅನುಮಾನಕರವಾಗಿದ್ದಾಗ ಶ್ರೀ R. ವೀರನಗೌಡ ಬಿ ಎಸ್ಸಿ. ಎಲ್. ಟಿ. ಯವರು ಶಾಲೆಗೆ ಮುಖ್ಯೋಪಾಧ್ಯಾಯರಾಗಿ ಬಂದು ವಿದ್ಯಾವಿಷಯಗಳಲ್ಲಿ ಹಿಂದುಳಿದ ಈ ಭಾಗದವರನ್ನು ಜಾಗೃತಗೊಳಿಸಿ ಶ್ರದ್ಧೆ ಉತ್ಸಾಹ ಅವಿರತ ತಾಳ್ಮೆಯಿಂದ ಕಾರ್ಯಸಾಧನೆಯ ಉದ್ದೇಶವನ್ನು ಗುರಿಯಲ್ಲಿಟ್ಟು ಇದನ್ನು ಹೈಸ್ಕೂಲು ಶಾಲೆಯನ್ನಾಗಿ ನಿರ್ಮಾಣಮಾಡಿಸಿದರು. ಡಿವಿಜನಲ್ ಇನ್‌ಸ್ಪೆಕ್ಟರ್ ಆಫ್ ಸ್ಕೂಲ್ಸ್ ಶ್ರೀ. ಡಿ. ಸದಾಶಿವರೆಡ್ಡಿಯವರು ಬೋರ್ಡು ಅಧ್ಯಕ್ಷ ಶ್ರೀ ನಾಗನಗೌಡರು, ಶ್ರೀನಟರಾಜನ್, ಶ್ರೀ ನರಸಿಂಹಶಾಸ್ತ್ರಿ ಇವರು ಶಾಲೆಯ ಸ್ಥಾಪನೆಗೆ ಸಹಾಯನೂಡಿದರು. ಪ್ರಾಂತ್ಯದ ವಿದ್ಯಾಖಾತೆಯ ಮುಖ್ಯಾಧಿಕಾರಿಗಳು ಅರನೆಯ ಘಾರಂತೆರೆಯಲು ಮನ್ನಣೆ ಮತ್ತು ತಮ್ಮ ಸಮ್ಮತಿಯನ್ನಿತ್ತು ಸಹಾಯ ಮೂಡಿದರು.

ಹೈಸ್ಕೂಲಿನ ಭವ್ಯವಾದ ಕಟ್ಟಡವನ್ನು ಕಟ್ಟಿಸಲು ಸುಮಾರು ರೂ 40000 ವರಿಗೂ ಖರ್ಚುಮಾಡಿ ತಮ್ಮ ಪಿತೃಗಳ ಹೆಸರಿನಲ್ಲಿ ಶಾಶ್ವತ ಸ್ಮಾರಕವನ್ನು ವಿದ್ಯಾಮಂದಿರದ ಮೂಲಕ ಏರ್ಪಡಿಸಿದ ಶ್ರೀ ನೋತಿ ಲಾಲಸೇಟರವರು ಕಂಪ್ಲಿಜನರ ಚಿರಕೃತಜ್ಞತೆಗೆ ಅರ್ಹರಿರುವರು. ಶ್ರೀಗೌಡ ವೆಂಕೋಬರಾಯರಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಇವರನ್ನೆಲ್ಲಾ ವಂದಿಸಲಾಯಿತು.



ಕಾಶ್ಮೀರು ಅರುಕ್

(ಮನೆಯ ವೈದ್ಯ)

ಕೆಮ್ಮು, ಉಬ್ಬಸ, ಶೀತಜ್ವರ, ಭಳಜ್ವರ, ಆರ್ಜಿರ್ಣ ಮೊದಲಾದ ವ್ಯಾಧಿಗಳಿಗೆ ದಿವ್ಯೌಷಧ ಎಲ್ಲಾ ಸೋಪುಗಳಿಗೆ ಹಾವು ಚೇಳು ಕಚ್ಚಿದುದಕ್ಕೆ ದಿವ್ಯೌಷಧ ಎಲ್ಲಾ ಷಾಪುಗಳಲ್ಲಿ ದೊರೆಯುತ್ತದೆ

ಹೆಚ್. ಯಸ್. ಅಂಡ್ ಸನ್ಸ್,

ಬಳ್ಳಾರಿ.

ಪ್ಲಾಂಟರ್ಸ್ ಕಾಫಿ.

ಮೈಸೂರು ದೇಶದ ಮತ್ತು ನೀಲಗಿರಿ ಪ್ರಾಂತದ ಎತ್ತರವಾದ ಪರ್ವತ ಪ್ರದೇಶಗಳಲ್ಲಿ ಬೆಳೆದ ಶ್ರೇಷ್ಠ ಕಾಫಿಯು ಈಗ ಜಿಲ್ಲೆಯಾಗಿ ಮುಖ್ಯ ವರ್ತಕರಲ್ಲೆಲ್ಲಾ ಶೀಲಾದ ಪ್ಯಾಕೆಟ್ಟುಗಳಲ್ಲಿ ಈ ಕೆಳಗಿನ ದರಗಳಿಗೆ ದೊರೆಯುತ್ತದೆ.

೧ ಪ್ಲಾಂಟರ್ಸ್ ಎಕ್ಸ್‌ಟ್ರಾಸ್ಪೆಶಲ್ ಪೌಂಡು ೧ ಕ್ಕೆ ರೂ. 1—8—6

೨ ಪ್ಲಾಂಟರ್ಸ್ ಬ್ಲೆಂಡ್ ,, 1—5—6

೩ ರೋಬಸ್ಟ ಪಾವುಡರ್ ,, 1—3—6

ಪ್ಲಾಂಟರ್ಸ್ ಡಿಸ್ಟ್ರಿಬ್ಯೂಟರ್ಸ್,

ಕರೆಕಟ್ಟೆ ಬೀದಿ, ಬಳ್ಳಾರಿ.

9th Year of Publication.

24TH AUGUST 1946

PRESS & GOVT.

While giving below excerpts from the joint letter addressed to the premier, Revenue Minister and Minister for Information by Messrs. T. V. Krishna Rao of the Hindu and S R. Vattam of the Madras Mail etc., we heartily endorse the plea for fuller facilities than those obtaining now to the Press in the Congress Regime. We fervently hope that the Cabinet would give the matter priority of consideration and issue urgent orders to the Heads of Departments with a view to *entente-cordiale* between them and the Press.

Messrs. Krishna Rao and Vattam say in the course of the letter:-

"The transition from the Section - 93 - Government to the popular Congress Regime in our province, far from improving the gubernatorial relations with the Press, marks a lamentable deterioration in them, thanks to the apathetic attitude towards the Press of some of your colleagues in the Cabinet. While every care is taken to accord full facilities to the Pressmen on the occasion of the Governor's tours utter absence of even a semblance of an amenity prevails in the case of the Ministers' tours starting from the point of not furnishing to them a copy of the tour-programmes. Lack of facilities to the Press is not only a blatant injustice to the Fourth Estate but the very negation of the democratic principles"

After recounting their wearisome experience at the Tungabhadra Dam site when they accompanied the Public Works Minister, the letter further observes:-" Such unmerited neglect of the Press could have been easily mitigated had the Minister whose activities we were assigned to

cover been pleased to put in a word about us to the organisers, the P. W. D., whose imagination was obviously too restricted to reckon with the Press. It ill becomes the Popular Ministers to ignore the Press out of hand. Why this should be so especially with such an eminent ex-editor of "Swarajya" as yourself at the helm of affairs passes our comprehension.

"May we request you, in the circumstances to include the subject of Press relations in the agenda for the next Cabinet meeting so as to evolve a workable plan on the following lines:—

I. Instructions should be sent forthwith to the Heads of Departments to mainatain close and cordial relations with the Press.

2. The Station Waggon should be put into use exclusively to give lifts to the Pressmen on the occasion of the Ministers' in the mofussil."

We suggest that a Government Order be issued early embodying the points raised above.

The First who came, lost the game.

He was the First to come and jump into the fray while dark clouds were fast gathering and the forebodings ominous. Even a mild gale scattered & drove away the glittering birds to their dove-cotes. He stood up against the storm only with a hardened few.

Years of suffering at last yielded a brief respite of hope. The silver lining on the horizon only gave opportunity to muzzled ones to come out and feather their nests. They came, reaped without sowing and went back to their places of safety.

The lull was brief and the hurricane that succeeded was devastating. It shook the country from end to end. It enveloped him and the many that came in the way.

Again the law of nature changed from storm to calm This-time it was more promising It yielded some places of power and pres-tige. The shrewd and the astute booked their berths by penetrating-devices. So to him that jumped in the First there was no place. Thus the First who came lost the game.

A. V S.

ಬಳ್ಳಾರಿ ಜಿಲ್ಲಾ ಲೇಬರ್ ಶಾಲೋಪಾಧ್ಯಾಯರ ಸಂಘದ ಸ್ಥಾಪನೆ.

11-8-46

ನಿಯಮಗಳು—ಉದ್ದೇಶ.

1) ಮದ್ರಾಸ್ ಸರ್ಕಾರದ ನಂ॥1116 ಪಬ್ಲಿಕ್ ಸರ್ವಿಸಸ್ ತಾ॥ 30-6-1938 ರ ಪ್ರಕಾರಕ್ಕೆ ಬಳ್ಳಾರಿ ಜಿಲ್ಲೆಗೂ ಕೂಡ ಲೇಬರ್ ಶಾಲೋಪಾಧ್ಯಾಯರ ಸಂಘವನ್ನು ಸ್ಥಾಪಿಸಿಕೊಳ್ಳಲು ಮತ್ತು ಈ ಸಂಘವನ್ನು ಮದ್ರಾಸ್ ಪ್ರಾಂತೀಯ ಸಂಘಕ್ಕೆ ಸಂಭಂದಿಸಲು ನಿಶ್ಚಯವಾಯಿತು ಸರ್ಕಾರದ ಸಮ್ಮತಿಯನ್ನು (Recognition) ಪಡೆಯಬೇಕೆಂದಾಯಿತು,

2) ಸಂಘದಉದ್ದೇಶ: ಲೇಬರ್ ಶಾಲೋಪಾಧ್ಯಾಯರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿ ಅವರನ್ನು ತೃಪ್ತರಾಗಿಡುವ ಮೂಲಕ ಶಾಲೆಗಳ ಅಭಿವೃದ್ಧಿ ನೋಡುವದು, ಉಪಾಧ್ಯಾಯರ ಹಕ್ಕುಗಳಿಗಾಗಿ ಅವರ ಮೇಲೆ ನಡೆಯುವ ಅನ್ಯಾಯಗಳಿಗಾಗಿ ಮೇಲಧಿಕಾರಿಗಳೊಂದಿಗೆ ಕನ್‌ಪರ್ಸ್, ಟ್ರಾನ್ಸ್‌ಫರ್ ಪನಿಷ್‌ಮೆಂಟ್ ವಗೈರೆ ವಿಷಯಗಳಲ್ಲಿ ನ್ಯಾಯ ಮತ್ತು ಸತ್ಯವಾದಂಶಗಳಿಗಾಗಿ ಹೋರಾಟವನ್ನು ನಡೆಸುವುದು—ಉಪಾಧ್ಯಾಯರಿಗೆ ಆಧುನಿಕ ಶಿಕ್ಷಣ ಪದ್ಧತಿಗಳನ್ನು ತಿಳಿಸುವುದು, ವಗೈರೆ.

3) ಕಾರ್ಯಕಾರೀ ಸಮಿತಿಯ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳ ಸೂಚನೆಯು ಮೇರೆಗೆ ವರ್ಷದಲ್ಲಿ ಎಷ್ಟುಸಲವಾದರೂ ಕರೆಯಬಹುದು. ಇದಕ್ಕೆ ಕೋರಂ ⅓ ಭಾಗ.

4) ಸಾಮಾನ್ಯಸಭೆಯು (General Body) ವರ್ಷಕ್ಕೊಂದು ಸಲ ಸಮಾವೇಶವಾಗಿ ಕಾರ್ಯವರದಿ ಮತ್ತು ಲೆಕ್ಕಪತ್ರಗಳ ವಿಮರ್ಶೆ ಮಾಡಿ ಅಧಿಕಾರಿ ವರ್ಗವನ್ನು ಆರಿಸುವುದು. 10 ಸದಸ್ಯರು ನೋಟೀಸು ಕೊಟ್ಟು ಈಸಭೆಯನ್ನು ಯಾವಾಗ ಬೇಕಾದರೂ ಕರೆಯಬಹುದು,

5) ಲೇಬರ್ ಶಾಲೆಗಳಲ್ಲಿನ ಉಪಾಧ್ಯಾಯರು ವರ್ಷ 1 ಕ್ಕೆ 1—0—0 ಕೊಟ್ಟು ಸದಸ್ಯರಾಗತಕ್ಕದ್ದು ಇತರ ಸಂದರ್ಭಗಳಲ್ಲಿ ಹೆಚ್ಚಿನ ಹಣದ ಅಗತ್ಯಬಿದ್ದರೆ ವಸೂಲಿ ಮಾಡಲಾಗುವುದು.

6) ಸಂಘದ ವರ್ಷವು 1 ನೆಯ ಜೂನ್‌ದಿಂದ ಪ್ರಾರಂಭವಾಗಿ 31 ನೆಯ ಮೇ ಗೆ ಅಂತ್ಯವಾಗುವುದು.

[ಲೇಬರ್" ಕಮಿಶನರವರಿಂದ ಸೂಚನೆಗಳು ಬಂದಮೇಲೆ ಇತರ ನಿಯಮಗಳನ್ನು ಮಾಡಿ ಅವರ ವಪ್ಪಿಗೆ ಪಡೆಯಲಾಗುವುದು.]

1946—47 ಕಾರ್ಯಕಾರೀ ಸಮಿತಿ

1 ಅಧ್ಯಕ್ಷರು: **ಟಿ. ಬಿ. ಕೇಶವರಾವ್, ಬಳ್ಳಾರಿ.**
2 ಕಾರ್ಯದರ್ಶಿ: **ಎಂ. ಇ. ಜೋನಾಥನ್, ನಗರೂರು.**

ಸದಸ್ಯರು.

3 ಎ. ದೇವದಾನಂ ಸಂಗನಕಲ್ಲು (ಬಳ್ಳಾರಿ)
4 ಅನ್ನಮ್ಮ ,, ,,
5 ಆರ್. ರಾಮನಾಯ್ಕ ಹೊನ್ನಳ್ಳಿತಾಂಡ ,,
6 ಎಂ ಓಬಪ್ಪ ಕಕ್ಕಬೇವಿನಹಳ್ಳಿ ,,
7 ಎಂ. ಜಹಿರುದ್ದೀನ್ ಬಿ. ಬೆಳಗಲ್ಲು ,,
8 ಡಿ. ಕ್ರಿಷ್ಟಪ್ಪ ಬೆಣ್ಣೆಕಲ್ಲು ,,
9 ಡಿ. ನಾಗಪ್ಪ ಹೊಳಗುಂದಿ (ಆಲೂರು)
10 ಡಿ. ನರಸಿಂಹಯ್ಯ ಕವ್ವತಾಳಂ (ಆದವಾನಿ)
11 ಕೆ. ಮೋಸೆಸ್, ಇನ್ನಿ ,,
12 ಹೆಚ್. ಮರಿಯಮ್ಮ ಪೆದ್ದತುಂಬಳಂ ,,
13 ಜೆ. ಗುರುಲಿಂಗಪ್ಪ, ಹಾಲ್ವಿ ,,
14 ಡಿ. ನರಸಿಂಹಪ್ಪ ಓಬಳಾಪುರಂ (ರಾಯದುರ್ಗ)
15 ಎಂ.ಜೆ. ವೈಕ್ಲಿಫ್ ಗುತಿಕಲ್ಲು (ಎಮ್ಮಿಗನೂರು)
16 ಬಿ. ವೀರನಾಯ್ಕ ಗುಡೇಕೋಟೆ (ಕೂಡ್ಲಿಗೆ)

17 ಜಿ. ಮಲೆಪ್ಪ ಕೊಮಾರ್ನಹಳ್ಳಿತಾಂಡ(ಹರಪನಹಳ್ಳಿ)
19 ಹೆಚ್.ಎಂ. ಶಿದ್ಬರಾಮಯ್ಯ ಬೇವಿನಹಳ್ಳಿತಾಂಡ (ಹರಪನಹಳ್ಳಿ)
19 ಜೆ. ಬಸಲಿಂಗಪ್ಪ ಕಗ್ಗಲಕಟ್ಟೆತಾಂಡ- ,,
20 ಡಿ. ಚಿನ್ನ ನರಸಿಂಹದಾಸ್ ಕೆ. ಸೂಗೂರು (ಸಿರುಗುಪ್ಪ)

(ಕಾರ್ಯಕಾರೀ ಸಮಿತಿಯ ಸದಸ್ಯತ್ವವನ್ನು ಒಪ್ಪದೆ ಅಧ್ಯಕ್ಷರಿಗೆ ರಾಜೀನಾಮೆ ಪತ್ರವನ್ನು ಕಳುಹಿಸಿದರೆ ಬೇರೆಯವರನ್ನು ತುಂಬಲಾಗುವುದು. ಕಾರ್ಯಕಾರೀ ಸಮಿತಿಯ ಸದಸ್ಯರನ್ನು ಹೆಚ್ಚಿಸುವ ಅಥವಾ ಕಡಮೆ ಮಾಡುವ ಅಧಿಕಾರವು ಸಂಘಕ್ಕಿದೆ.)

ಬಳ್ಳಾರಿಜಿಲ್ಲಾ ಲೇಬರಶಾಲೋಪಾಧ್ಯಾಯರ ಸಭೆ.

ಈ ಸಭೆಯು 11—8—46 ಪ್ರಾತಃಕಾಲ ಮತ್ತು ಸಾಯಂಕಾಲ ಬಳ್ಳಾರಿ ನಗರದ ಸರ್ಕಾರದ ಟ್ರೈನಿಂಗ್ ಶಾಲೆಯಲ್ಲಿ ಶ್ರೀಟಿ ಬಿ ಕೇರವರಾಯರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಜಿಲ್ಲೆಯ ಪೂರ್ವ ಮತ್ತು ಪಶ್ಚಿಮ ತಾಲೂಕುಗಳ ಶಾಲೆಗಳಿಂದ ಉಪಾಧ್ಯಾಯ ಪ್ರತಿನಿಧಿಗಳು ಬಂದಿದ್ದರು. ಅಧ್ಯಕ್ಷರು ತಮ್ಮ ಪ್ರಾರಂಭ ಭಾಷಣದಲ್ಲಿ ಹರಿಜನೋದ್ಧಾರವಾಗಬೇಕಾದರೆ ವಿದ್ಯಾಭ್ಯಾಸವು ಮುಖ್ಯವೆಂದೂ ಉಪಾಧ್ಯಾಯರನ್ನು ತೃಪ್ತಿರಾಗಿಡದೆ, ಈ ಕೆಲಸ ನಡೆಸುವುದು ಅಸಾಧ್ಯವೆಂಬಲೂ ಈ ಕಾರಣ ಬಂದ ಪ್ರತಿನಿಧಿಗಳು ತಮ್ಮಕುಂದು ಕೊರತೆಗಳನ್ನು ನಿರ್ಭಯವಾಗಿ ವಿಮರ್ಶಿಸಿ, ತೀರ್ಮಾನಗಳನ್ನು ಮಾಡಿ ಸರ್ಕಾರಕ್ಕೆ ಕಳುಹಿಸಬೇಕೆಂತಲೂ ಹೇಳಿದರು ನಂತರ ಅನೇಕರು ತಮ್ಮ ತಮ್ಮ ಶಾಲೆಗಳಿಗೆ ಸಂಬಂಧಿಸಿದ ಕುಂದು ಕೊರತೆಗಳನ್ನು ಹೇಳಿದರು.

ಸಾಯಂಕಾಲ ಲೇಬರ್ ಅಫೀಸರವರಾದ ಮಿಸ್ಟರ್ ಸಾಮುಯಲ್‌ರವರೂ, ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀನರಸಿಂಹಶಾಸ್ತ್ರಿಯವರೂ, ಬಂದಿದ್ದರು. ಕಲೆಕ್ಟರವರು ಅಧ್ಯಕ್ಷರಿಗೆ ಒಂದು ಪತ್ರಬರೆದು ಆ ಹ್ವಾನಕ್ಕಾಗಿ ವಂದಿಸುತ್ತಾ ತನಗೆ ಬರಲಾಗದುದಕ್ಕಾಗಿ ವಿಷಾದವನ್ನು ಸೂಚಿಸುತ್ತಾ ಕಾಮಲಾಪುರದಿಂದ ಒಂದು ಪತ್ರವನ್ನು ಬರೆದಿದ್ದರು. ಲೇಬರ್ ಅಫೀಸರವರು ಕ್ಯಾಜ್ಯುಲೈಜೇಷನ್ ವಿಷಯವಾಗಿ ಮಾತಾಡುತ್ತಾ ಫಿಬ್ರವರಿ 1946 ರ ಸರ್ಕಾರದ ಆಜ್ಞೆಯಪ್ರಕಾರಕ್ಕೆ ಹತ್ತುವರ್ಷಗಳಿಗಿಂತ ಕಡಿಮೆ ಖಾಯಂಕನ್ಫರ್ಮ್ ಇಲ್ಲದ ಉಪಾಧ್ಯಾಯರನ್ನು ಸೀನಿಯಾರ್ಟಿ ಪ್ರಕಾರಕ್ಕೆ ಕ್ಯಾಜ್ಯುಲೈಜ್ ಮಾಡುವುದಾಗಿ ತಿಳಿಸಿದರು. ಅನುಭವ ಮತ್ತು ಕೆಲಸವನ್ನು ಬಲ್ಲ ಗುಮಾಸ್ತರಿಲ್ಲದ ಕಾರಣ ಈ ಕೆಲಸದಲ್ಲಿ ಅಲಸ್ಯವಾಗುತ್ತಿರುವದೆಂದರು. ಬರಬೇಕಾದ ಇಂಕ್ರಿಮೆಂಟ್‌ಗಳಿದ್ದರೆ, ಇವುಗಳನ್ನು ಕೊಡುವುದರಲ್ಲಿ ಏನಾದರೂ ಅನ್ಯಾಯವಾಗಿದ್ದರೆ ಸರಿಪಡಿಸುವೆನೆಂದರು. ಇನ್ನುಮೇಲೆ ಡಿ. ಇ. ಒರ ಸಮಿತಿಪಡೆದು ವರ್ಗಗಳನ್ನು ಮಾಡುತ್ತೇವೆಂದರು. ಶಾಲೆಗಳಿಗೆ ಸಂಭಂಧಿಸಿದ ಇತರ ನಿಯಮಗಳನ್ನು ಸ್ಪಷ್ಟಗೊಳಿಸಿ ಅಭಿವೃದ್ಧಿಯಲ್ಲಿರುವ ಶಾಲೆಗಳಿಗೆ, ಅಲ್ಲಿ ಕೆಲಸಮಾಡುವ ಉಪಾಧ್ಯಾಯರಿಗೆ ಉತ್ತೇಜನ ಕೊಡುವದಾಗಿ ಹೇಳಿದರು.

ನಂತರ ಶ್ರೀನರಸಿಂಹಶಾಸ್ತ್ರಿಯವರು ಉಪಾಧ್ಯಾಯರ ಔದಾಸೀನ್ಯ, ಕಾರ್ಯದಲ್ಲಿನ ಅಶ್ರದ್ಧೆಗಾಗಿ ವಿಷಾದಪಟ್ಟು ಪತಿತರ ವಿದ್ಯಾಭಿವೃದ್ಧಿಯಾಗಬೇಕಾದರೆ ಉಪಾಧ್ಯಾಯರು ಹೆಚ್ಚಿನಶ್ರದ್ಧೆ ವಹಿಸಬೇಕೆಂದರು. ಪತಿಪತ್ನಿಯರು ಉಪಾಧ್ಯಾಯರಾಗಿ ಒಂದೇಕಡೆಯಲ್ಲಿರಬೇಕೆಂಬ ಕತ್ಯಕ್ಕೆ ತಾವು ವಿರೋಧಿಗಳೆಂದರು. ಏಕೆಂದರೆ ಅಂಥಾಶಾಲೆಯಲ್ಲಿ ಕೆಲಸ ನಡೆಯುವದಿಲ್ಲೆಂದರು. ಎಲ್ಲಾ ವಿಷಯಗಳಲ್ಲೂ ಉಪಾಧ್ಯಾಯರು ನಿಯಮಬದ್ಧರಾಗಿದ್ದು ಚನ್ನಾಗಿ ಕೆಲಸಮಾಡಿದರೆ ಅವರ ಎಲ್ಲಾ ಸೌಕರ್ಯಗಳಿಗಾಗಿ ಆಂದೋಳನ ಹೂಡುವುದು ನ್ಯಾಯವಾಗಿದ್ದು ಇದಕ್ಕೆ ತಾವು ಸಹಾಯ ಮಾಡುವೆವೆಂದರು :—

ಹರಿಜನರು ತಮ್ಮೊಳಗೆ ನಿಶ್ಚಯಿಸಿದ ತೀರ್ಮಾನಗಳು.

1. ಪ್ರತಿ ಕೇರಿಯಲ್ಲಿಯೂ ಭಜನ ಮಂದಿರಗಳನ್ನು ಸ್ಥಾಪಿಸಿ, ವಾರಕ್ಕೊಂದು ದಿನವಾದರೂ ಭಜನೆಮಾಡಿ ಊರಲ್ಲಿ ತೆಗೆದುಕೊಂಡು ಹೋಗಬೇಕು.

2. ನಿತ್ಯವೂ ಸ್ನಾನಮಾಡಿ, ಶುಭ್ರವಾಗಿ ಸ್ವಚ್ಛವಾದ ಬಟ್ಟೆ ಧರಿಸಬೇಕು.

3 ಸತ್ತ ಪಶುವಿನ ಮಾಂಸ, ಹೆಂಡ, ಸಾರಾಯಿ ಗಾಂಜಾ ಸೇವಿಸಬಾರದು

4. ಲಗ್ನ - ನಿಶ್ಚಯ ಮತ್ತು ಇತರ ಶುಭ ಕಾರ್ಯಗಳಲ್ಲಿ ಮತ್ತು ಯಾತ್ರಾದಿಯೂ ಸತ್ತಾಗ ಹೆಂಡ ಕುಡಿಯಬಾರದು.

5 ಗಂಡನ ಕಡೆಯಿಂದಾಗಲಿ, ಹೆಣ್ಣಿನ ಕಡೆಯಿಂದಾಗಲಿ ಕೆರ ತೆಗೆದುಕೊಳ್ಳಬಾರದು ಶುಭ ಕಾರ್ಯಗಳಲ್ಲಿ ಮಾಂಸಹಾರ ಮಾಡದೆ ಹೋಳಿಗೆ, ಹುಗ್ಗಿಗಳಿಂದ ಭೋಜನ ಮಾಡಬೇಕು.

6. ಪ್ರತಿಯೊಬ್ಬ ಹರಿಜನ ಕುಟುಂಬವೂ ತಮ್ಮಲ್ಲಿನ ಗಂಡು, ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಕೊಡಬೇಕು.

7. ಸಾಧ್ಯವಾದಮಟ್ಟಿಗೂ ಸಾಲ ತರಬಾರದು ತಂದರೂ ಸುಲಭ ಬಡ್ಡಿಗೆ ತರಬೇಕು. ಸ್ವಲ್ಪತಂದು ಬಹಳ ಹಣಕ್ಕೆ ಪತ್ರ ಬರೆಸುವ ಮತ್ತು ಜಲ್ಲು(ಜವಾ) ಹುಕದೆ ಹಣ ಕೊಡುವ ಪದ್ಧತಿಯನ್ನು ಕೊನೆಗಾಣಿಸಬೇಕು.

8. ಬಿಟ್ಟಿಕೆಲಸ ಮಾಡಬಾರದೆಂದು ನಿರ್ಧರಿಸಬೇಕು. ಕೇರಿಯಲ್ಲಿ ಯಾರ ಮೇಲಾದರೂ ಅನ್ಯಾಯದ ಕೇಸುಬಂದರೆ, ಕೇರಿಯವರೆಲ್ಲಾ ಕಲೆತು ಸಹಾಯ ಮಾಡಿ ಕೋರ್ಟಿಗೆ ಹೋದರೂ ಗೆಲ್ಲುವಂತೆ ಮಾಡಬೇಕು.

9 ಯಾವ ಕಾಗದಕ್ಕಾದರೂ ಸುಮ್ಮನೇ ಹೆಬ್ಬಟ್ಟು ಒತ್ತಬಾರದು. ಕೇರಿಯಲ್ಲಿ ಓದು ಕಲಿತವರೇ ಇಲ್ಲವಾದರೆ ಬೇರೊಬ್ಬರಿಗೆ ತೋರಿಸಿ ನಂತರ ಮಾನ್ಯ ಮಾಡಬೇಕು.

10. ಕಡಮೆ ಕೂಲಿ ತೆಗೆದುಕೊಳ್ಳಬಾರದು. ಹೊಟ್ಟೆತುಂಬುವಷ್ಟು ಕೇಳಬೇಕು.

11. ಸುಳ್ಳುಸಾಕ್ಷಿ ಹೇಳಲು ಎಂಥಾ ಸಂದರ್ಭದಲ್ಲೂ ಹೋಗಬಾರದು.

12 ಕೇರಿಯಲ್ಲಿ ಪಾರ್ಟಿ ಕಟ್ಟಬಾರದು. ದುರ್ಭಾವನೆಗಳನ್ನಾಡದೆ ಅಣ್ಣ ತಮ್ಮಂದಿರಂತೆ ಕೇರಿಯೆಲ್ಲಾ ಒಂದು ಕುಟುಂಬದಂತೆ ಸುಖ ದುಃಖದಲ್ಲಿ ಭಾಗಿಗಳಾಗಿರಬೇಕು.

13 ಇನ್ನುಮೇಲೆ ಯಾವ ಗ್ರಾಮದಲ್ಲೂ "ಬಸವಿ" ಸೂಳೆ ಬಿಡಬಾರದು. ಅಂತಹವರನ್ನು ಬಹಿಷ್ಕರಿಸಬೇಕು.

14 ಪ್ರತಿಗ್ರಾಮದಲ್ಲಿಯೂ ಹರಿಜನ ಸಂಘಗಳನ್ನು, ಪಂಚಾಯ್ತಿಗಳನ್ನು ಏರ್ಪಡಿಸಿಕೊಂಡು ಸಮಾಜಕ್ಕೆ ಸಂಬಂಧಿಸಿದ ಸಕಲ ಜಗಳಗಳನ್ನು ಬಗೆಹರಿಸಿಕೊಳ್ಳಬೇಕು. ಸಮಾಜೋನ್ನತಿಗೆ ಸಂಬಂಧಿಸಿದ ವಿಷಯಗಳನ್ನೆಲ್ಲಾ ನಿರ್ಧರಿಸಬೇಕು. ಕೋರ್ಟಿಗೆ ಹೋಗಬಾರದು. ಅಂಥಾ ಸಂಘಗಳಿಗೆ ಸಂಬಂಧಿಸಬೇಕು.

15 ಗಂಡು ಮಕ್ಕಳಿಗೂ, ಹೆಣ್ಣು ಮಕ್ಕಳಿಗೂ ವಿದ್ಯಾಭ್ಯಾಸ ಕೊಡಿಸಬೇಕು. ಪ್ರತ್ಯೇಕವಾಗಿ ಶಾಲೆ ಇಲ್ಲವಾದರೆ ಬೋರ್ಡು ಯಾ ಗ್ರಾಂಟು ಶಾಲೆಗಳಿಗೆ ಸೇರಿಸಬೇಕು. ಮಕ್ಕಳಿಗೆ ಸ್ನಾನಮಾಡಿಸಿ ಸ್ವಚ್ಛವಾದ ಬಟ್ಟೆಗಳನ್ನು ತೊಡಿಸಿ ಶಾಲೆಗಳಿಗೆ ಕಳುಹಿಸಬೇಕು.

16 ಮದುವೆ, ಪ್ರಸ್ಥಗಳಲ್ಲಿ ಪುರೋಹಿತರನ್ನು ಕರೆಸಿ, ಮಂತ್ರಪೂರಿತ ವಿವಾಹ ಮಾಡಬೇಕು. ಮೆರವಣಿಗೆಗಳಿಗೆ ಅಡ್ಡಿಇಲ್ಲದಿರುವ ಕಾರಣ ಊರಿನ ಬೀದಿಗಳಲ್ಲಿ ವಧೂವರರ ಮೆರವಣಿಗೆ ತೆಗೆಯಬೇಕು.

ಬಳ್ಳಾರಿ ಜಿಲ್ಲಾ ಕಾಮಲಾಪುರದಲ್ಲಿ ನಡೆದ 3 ನೆಯ ಹರಿಜನರ ಮಹಾಸಭೆಯಲ್ಲಿ ಸ್ವೀಕೃತವಾದ ತೀರ್ಮಾನಗಳು.

1 ಪೊರಂಬೋಕು ಭೂಮಿಗಳಿಲ್ಲದವರಿಗೆ ಸರಕಾರದವರು ಭೂಮಿಗಳನ್ನು ಕೊಟ್ಟು ಖಾಯಂ ಪಟ್ಟಾ ಮಾಡಬೇಕು. ಈಗ ಜಾರಿಯಲ್ಲಿರುವ ಜಿ. ಒ. ರದ್ದುಮಾಡಬೇಕು.

2 ಹರಿಜನರ ಭೂಮಿಗಳನ್ನು ಇತರರು ಕಸಿದು ಕೊಂಡು ಅನುಭವಿಸುತ್ತಿದ್ದರೆ ಅವರನ್ನು ಬಿಡಿಸಿ ಸರಿಯಾದ ಹಕ್ಕುದಾರರಿಗೆ ಕೊಡಿಸಬೇಕು.

3 ಬಿಟಿ, ಕೆಲಸ ಮಾಡುವದನ್ನು ಹೆಚ್ಚು ಕೆಲಸಮಾಡಿ ಕಡಿಮೆ ಕೂಲಿಕೊಡುವ ಪದ್ಧತಿಯನ್ನು ಪ್ರತಿಬಂಧಿಸಬೇಕು. ಲಬ್ಬೀಜನರ ಮತ್ತು ಇತರ ಕಂಟ್ರಾಕ್ಟರರ ತಂಗ್ಲೀ ಚಕ್ಕೆಯ ವ್ಯಾಪಾರವನ್ನು ನಿಯಂತ್ರಣಗೊಳಿಸಿ ಸರಿಯೂದ ಕೂಲಿಯನ್ನು ಕೊಡುವಂತೆ ಮಾಡಬೇಕು.

4 ಪ್ರತಿಗ್ರಾಮದಲ್ಲಿಯೂ ಎತ್ತರವಾದ ಮತ್ತು ಆರೋಗ್ಯಕರ ಪ್ರದೇಶದಲ್ಲಿ ಜಾಗಗಳನ್ನು ಕೊಟ್ಟು ಮನೆಗಳನ್ನು ಕಟ್ಟಿಸಿ ಸರಕಾರದವರು ಸುಲಭವಾದ ಮತ್ತು ದೀರ್ಘಕಾಲದ ಕಂತುಗಳ ಸಾಲಕೊಟ್ಟು ತೀರಿಸಿಕೊಳ್ಳಬೇಕು.

5 ದೇಶದ ಎಲ್ಲಾಕಡೆಯಲ್ಲೂ ಹೆಂಡ, ಸಾರಾಯಿ, ಅಫೀಮು, ಭಂಗಿ, ಮೊದಲಾದ ಮಾದಕ ದ್ರವ್ಯಗಳನ್ನು ತರದಂತೆ ಶಾಸನದಿಂದ ನಿಷೇಧಿಸಬೇಕು. ಅಷ್ಟರವರಿಗೆ ಹರಿಜನರ ಕೇರಿಗಳಿಗೆ ಹೊಂದಿಕೊಂಡಿರುವ ಅಂಗಡಿಗಳನ್ನು ದೂರವಾಗಿಡಬೇಕು. ಅಲ್ಲದೆ ಕೂಲಿಕೊಡುವ ದಿನ ಅಥವಾ ಪಂಬಳಕೊಡುವ ದಿನ ಹೆಂಡದಂಗಡಿಗಳನ್ನು ಮುಚ್ಚಬೇಕು.

6 ಹರಿಜನ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲಿಸುವಂತೆ ಅವರಿಗೆ ಬಟ್ಟೆ ಮುಖ್ಯಾಹ್ನದ ಊಟವನ್ನು ಎಲ್ಲಾ ಶಾಲೆಗಳಲ್ಲೂ ಒದಗಿಸಬೇಕು. ಮಾಧ್ಯಮಿಕಮತ್ತು ಕಾಲೇಜು ಶಿಕ್ಷಣವನ್ನು ಖಾಸಗಿ ಮತ್ತು ಸರ್ಕಾರಿ ಶಾಲೆಗಳಲ್ಲಿ ಉಚಿತವಾಗಿ ಕೊಟ್ಟು ಸಾಕಷ್ಟು ವೇತನ ಕೊಡಬೇಕು. ಹರಿಜನ ವಿದ್ಯಾರ್ಥಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆಲ್ಲಾ ಬೋರ್ಡಿಂಗ್ ಗ್ರ್ಯಾಂಟ್ ಕೊಡಬೇಕು.

7 ನಿರುದ್ಯೋಗಿಗಳು ನಮ್ಮಲ್ಲಿ ಬಹಳವಿರುವದರಿಂದ, ಸರಕಾರದ ಶಾಖೆಗಳಲ್ಲಿ ಇಂತಿಷ್ಟು ಜನರು ಇರಲೇಬೇಕೆಂಬ ಸರಕಾರದ ಆಜ್ಞೆ ಯಾಗಬೇಕು. ಮದ್ರಾಸ್ ಪ್ರಾಂತದಲ್ಲಿ ಕೊನೆಯಪಕ್ಷ 1/4 ಭಾಗ ಯಾದರೂ ಇರಲಿಕ್ಕೇಬೇಕು.

8. ಸಾರ್ವಜನಿಕ ಭಾವಿಗಳಲ್ಲಿ ನಮಗೆ ಪ್ರವೇಶ ವಿಲ್ಲದಿರುವ ಕಾರಣ, ಎಲ್ಲಾ ಗ್ರಾಮಗಳಲ್ಲಿಯೂ ನಮಗಾಗಿ ಪ್ರತ್ಯೇಕ ಭಾವಿಗಳನ್ನು ತೋಡಿಸಬೇಕು. ಗ್ರಾಮದಲ್ಲಿ ಸರ್ಕಾರದವರು ಭಾವಿ ತೆಗಿಸಬೇಕಾದರೆ ಎಲ್ಲಾಜಾತಿಯವರಿಗೆ ಅದರ ಪ್ರವೇಶವಿದೆಯೆಂದು ಬಹಿರಂಗವಾಗಿ ತಿಳಿಸಬೇಕು.

9. ಎಲ್ಲಾ ಬೀದಿಗಳಲ್ಲಿ ಮೆರವಣಿಗೆಯಿಂದ ಹೋಗುವ ಹಕ್ಕು, ಎಲ್ಲಾ ಶಾಲೆಗಳಲ್ಲಿ ಸಮಾನ ವರ್ತನೆ, ಎಲ್ಲಾ ಕಛೇರಿಗಳಲ್ಲಿ ಆದರ ದೊರಕುವಂತೆ ಆಗಲು ಸರ್ಕಾರದವರು ಸ್ಪಷ್ಟವಾದ ಆಜ್ಞೆಗಳನ್ನು ಕಳುಹಿಸಬೇಕು, ಕೇಳಿದ ಕಡೆಗಳಲ್ಲೆಲ್ಲಾ ಪೋಲೀಸ ರಕ್ಷಣೆ ಕೊಡಬೇಕು.

10. ಗ್ರಾಮ - ಸಾಹುಕಾರರ ಬಾಧೆಯಿಂದ ಹರಿಜನರನ್ನು ತಪ್ಪಿಸಿ, ಸರಕಾರದವರೇ ಸುಲಭ ಬಡ್ಡಿಯಿಂದ ಸಾಲ ಕೊಡುವ ಸಂಸ್ಥೆಗಳನ್ನು ವಿಸ್ತರಿಸಿ, ಕೂಲಿಕಾರರಿಗೆ, ರೈತರಿಗೆ, ಸಾಲ ಒದಗಿಸಬೇಕು. ಈಗಿರುವ ಅನ್ಯಾಯದ ಸಾಲಗಳನ್ನು ರದ್ದು ಮಾಡಬೇಕು.

11. "ಬಸವಿ" ಯಾ ದೇವದಾಸಿ ಪದ್ಧತಿಯನ್ನು ಶಾಸನದಿಂದ ಪ್ರತಿಬಂಧಿಸಬೇಕು.

ವಟ್ಟಿನಲ್ಲಿ ಜಿಲ್ಲಾ ಲೇಬರ್ ಆಫೀಸರವರು 2-3 ತಿಂಗಳಿಗೊಮ್ಮೆ ಬದಲಾಗುತ್ತಿರುವ ಕಾರಣ, ಹೊಸದಾಗಿ ಬಂದವರು ಅನನುಭವಿಗಳಾಗಿ ಎಲ್ಲಾ ಕೆಲಸಗಳಿಗೂ ಗುಮಾಸ್ತರಮೇಲೆ ಆಧಾರಪಡುತ್ತಿರುವದರಿಂದ ಉಪಾಧ್ಯಾಯರಿಗೆ ತೊಂದರೆಯಾಗುತ್ತಿರುವ ಅಂಶವು ಸಭೆಯಲ್ಲಿ ನಡೆದ ಕಾರ್ಯಕಲಾಪಗಳಿಂದ ಸ್ಪಷ್ಟಪಟ್ಟಿತು. ಕೆಲವೇ ತಿಂಗಳಲ್ಲಿ ಉಪಾಧ್ಯಾಯರನ್ನು ಮನಬಂದಂತೆ ವಿವಿಧಸ್ಥಳಗಳಿಗೆ ಟ್ರಾನ್ಸ್‌ಫರ್ ಮಾಡುವುದು, ವರ್ಷಗಟ್ಟಲೆ ಟಿ. ಎ. ಕೊಡದಿರುವುದು ಸರ್ವಿಸಾದ ಉಪಾಧ್ಯಾಯರನ್ನು ಲೀವ್‌ವೇಕನ್ಸಿಗೆ ಹಾಕುವುದು ವಗೈರೆ ಅನೇಕ ಅಕ್ರಮಗಳು ಗಟ್ಟಿಯೂದ ಮತ್ತು ಕಾಯಂ ಇಲ್ಲದ ಲೇಬರ್ ಆಫೀಸರ್ ಇಲ್ಲದಕಾರಣ ಈ ಹಿಂದೆ ನಡೆದಿರಬೇಕೆಂದು ಧೃಡವಾಗಿ ಹೇಳಬಹುದು.

ನಿರ್ಣಯಗಳು.

1) ಉಪಾಧ್ಯಾಯರು ತಾವು ಸರ್ವಿಸಿಗೆ ಸೇರಿದದಿನದಿಂದ ಕನ್‌ಫರ್ಮ್‌ಮಾಡಬೇಕು. ಶೇ 50 ಭಾಗ ಮತ್ತು 10 ವರ್ಷಗಳಿಗಿಂತ ಹೆಚ್ಚು ಸರ್ವಿಸ್ ಇರಬೇಕೆಂಬ ನಿಯಮಗಳನ್ನು ತೆಗೆದು ಎಲ್ಲಾ ಉಪಾಧ್ಯಾಯರನ್ನು ಕನ್‌ಫರ್ಮ್‌ಮಾಡಬೇಕು.

2) ಲೇಬರಶಾಲೆಗಳಿರುವ ಕಡೆಗಳಲ್ಲಿ ನಿರ್ಬಂದ ವಿದ್ಯಾಭ್ಯಾಸವನ್ನು ಜಾರಿಯಲ್ಲಿ ತಂದು ಶಾಲೆಯ ಮಕ್ಕಳಿಗೆ ವಾರದಲ್ಲಿ 6 ದಿನಗಳು ಮಧ್ಯಾಹ್ನದ ಊಟ ಕೊಡಬೇಕು,

3) ಜಿಲ್ಲಾ ಲೇಬರ್ ಆಫೀಸರವರನ್ನು ಕೊನೆಯಪಕ್ಷ 3 ವರ್ಷಗಳ ಅವಧಿಗಾದರೂ ಅಧಿಕಾರದಲ್ಲಿಟ್ಟು ಪದೇಪದೇ ಬದಲಿ ಮಾಡದೆ ಉಪಾಧ್ಯಾಯರ ಮತ್ತು ಹಿಂದುಳಿದವರವಿದ್ಯಾಭ್ಯಾಸದ ಹಿತವನ್ನು ಸಾಧಿಸಬೇಕೆಂದು ಈಸಭೆಯು ಕಲೆಕ್ಟರರನ್ನು ಕೋರುತ್ತದೆ.

4) ಜಿಲ್ಲಾ ಕಲೆಕ್ಟರವರು ರೆವಿನ್ಯೂ ಅಧಿಕಾರಿಗಳಿಗೆ ಉತ್ತರವೂಡಿ ಉಪಾಧ್ಯಾಯರಿಗೆ ಆಹಾರ ಧಾನ್ಯಗಳು ಸಾಕಷ್ಟು ಸಕಾಲಕ್ಕೆ ವದಗಿಸಲು ಬಿನ್ನೈಸುತ್ತದೆ. ಮೇಲ್ಕಾಣಿಸಿದ ಅಂಶಗಳನ್ನು ನಿರ್ಣಯಗಳನ್ನೂ ಒಳಗೊಂಡ ಅಧಿಕೃತ ಪತ್ರವು ಅಧ್ಯಕ್ಷರಿಂದ ಲೇಬರ್‌ಕಮಿಶನರ್, ಜಿಲ್ಲಾಕಲೆಕ್ಟರ್' ಎಡುಕೇಶನಲ್ ಆಫೀಸರ್, ಮತ್ತು ಜಿಲ್ಲಾಲೇಬರ್ ಆಫೀಸರವರಿಗೂ ಕಳುಹಿಸಲಾಗಿದೆ,

---

ಬಳ್ಳಾರಿ ಜಿಲ್ಲಾ ಶಾಸನ ಸಭ್ಯರಲ್ಲಿ ಪ್ರಾರ್ಥನೆ.

ಹರಿಜನೋದ್ಧಾರ ಕಾರ್ಯಕ್ಕೆ ಸಹಾಯಮಾಡಿರಿ.

ಶ್ರೀಮತಿಅಲ್ಲಂ ಸುಮಂಗಲಮ್ಮ, ಎಂ.ಎಲ್ ಎ. ಶ್ರೀ ಬಿ. ಭೀಮರಾವ್ ಎಂ.ಎಲ್.ಎ. ಶ್ರೀ ಹಾಲವರ್ತಿ ಶೇತಾರಾಮರೆಡ್ಡಿ, ಎಂ ಎಲ್ ಎ. ಶ್ರೀ ಬೂದಿಹಾಳು ಅನಂತಾಚಾರ್ಯ ಎಂ. ಎಲ್. ಎ. ಮತ್ತು ಶ್ರೀ ಡಿ. ಗೋವಿಂದದಾಸ್ ಎಂ. ಎಲ್. ಎ.

—ಇವರಲ್ಲಿ-ವಿಜ್ಞಾಪನೆ.—

ಹರಿಜನೋದ್ಧಾರ ಕಾರ್ಯವು ಯಾವರಾಜಕೀಯಕ್ಕೂ ಸಂಭಂಧಿಸಿಲ್ಲ. ಇದರಲ್ಲಿ ಸರ್ವರೂ ಹೃತ್ಪೂರ್ವಕವಾಗಿ ಸಹಾಯ ಮಾಡತಕ್ಕದ್ದಿದೆ.— ಹರಿಜನೋದ್ಧಾರಮಾಡಿಜನ್ಮದಾತರಾದ ಮಹಾತ್ಮಗಾಂಧಿಯವರು ತಮ್ಮಸರ್ವಸ್ವವನ್ನೂ ಉಪಯೋಗಿಸಿ ಕಳೆದ 20 ವರ್ಷಗಳಿಂದ ಹರಿಜನರ ಉದ್ಧಾರಮಾಡಲು ತೊಡಗಿದ್ದಾರೆ. ಮಹಾತ್ಮರ ಇಚ್ಛೆಯ ಪ್ರಕಾರಕ್ಕೆ ಕಾಂಗ್ರೆಸ್‌ನ ರಚನಾತ್ಮಕ ಕಾರ್ಯಗಳಲ್ಲಿ ಹರಿಜನೋದ್ಧಾರವು ಬಹಳ ಪ್ರಮುಖಸ್ಥಾನವನ್ನು ಹೊಂದಿದೆ. ಅಖಿಲಭಾರತ ಹರಿಜನಸೇವಕಸಂಘದ ಅಸ್ತಿತ್ವವೂ ಗಾಂಧೀಜೀ ಮತ್ತು ಕಾಂಗ್ರೆಸ್‌ನ ಮುಖ್ಯಕ್ಷಪೆಯನ್ನವಲಂಬಿಸಿದೆ. ಅಧ್ಯಕ್ಷರಾದ ಘನಶ್ಯಾಮದಾಸಬಿರ್ಲಾ ಕಾರ್ಯದರ್ಶಿಗಳಾದ ಆಮೃತಲಾಲಥಕ್ಕರ್‌ರವರು ಗಾಂಧೀಜಿಯವರ ಸಲಹೆ ಸೂಚನೆಗಳಿಗನುಸಾರವಾಗಿ ನಡೆಯುತ್ತಲಿರುವರು.

ಗಾಂಧೀಜಿಯವರ ಆಮರಣಾಂತ ಉಪವಾಸವು, ಶಾಂತಿಯಿಂದ ಮುಗಿದನಂತರ 1932 ನೆಯ ಸೆಪ್ಟಂಬರ್‌ದಲ್ಲಿ ಬಳ್ಳಾರಿಜಿಲ್ಲಾ ಹರಿಜನ ಸೇವಕಸಂಘವು ಪ್ರಾಂತೀಯ ಮತ್ತು ಕೇಂದ್ರಸಂಘಗಳ ಸಂಬಂಧಿತವಾಗಿ ಸ್ಥಾಪಿತವಾಗಿ ಅದರ ಘಟನೆ ಕಾರ್ಯಕ್ರಮದನ್ವಯ ಕಾರ್ಯಮಗ್ನವಾಗಿದೆ. ಈ 14 ವರ್ಷಗಳಲ್ಲಿ ಅದರ ಅಲ್ಪಸೇವೆಯ ಪರಿಚಯವು ತಮಗಾಗಿರಲು ಸಾಕು. ಎಲ್ಲಾ ಅಭಿವೃದ್ಧಿಗಳಿಗೂ ಮೂಲವಾದ ವಿದ್ಯಾಭ್ಯಾಸಕ್ಕೆ ವಿಶೇಷ ಗಮನ ಕೊಡಲಾಗುತ್ತಿದೆ. ಜಿಲ್ಲೆಯ ಹರಿಜನ ಮತ್ತು ಇತರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಹರಿಜನವಿದ್ಯಾರ್ಥಿ ವಿದ್ಯಾರ್ಥಿನಿಯರು ೨೧೦೦ಕ್ಕಿಂತಲೂ ಹೆಚ್ಚಿಗಿರುವರು. ಸುಮಾರು 90 ವಿದ್ಯಾರ್ಥಿಗಳಿಗೆ ಸಂಘದ ಮತ್ತು ಇತರ ಹಾಸ್ಟೆಲ್‌ಗಳಲ್ಲಿ ಊಟದ ಸೌಕರ್ಯವನ್ನು ದೊರಕಿಸಲಾಗಿದೆ. 25 ವಿದ್ಯಾರ್ಥಿಗಳು ಕಾಲೇಜು ವಿದ್ಯಾಭ್ಯಾಸವನ್ನು ಹೊಂದಿರುವರು. ಸಂಘದ ಪ್ರಯತ್ನಗಳಿಂದ ಸುಮಾರು 300 ಜನರಿಗೆ ಸರ್ಕಾರದ ವಿವಿಧ ಶಾಖೆಗಳಲ್ಲಿ ಕೆಲಸ ಸಿಕ್ಕಿದೆ. ಪೇಪರ್ ಮೇಕಿಂಗ್ (ಕಾಗದತಯಾರಿ) ಬಡಗಿಕೆಲಸ ಮೆಕಾನಿಕ್, ಡ್ರಾಯವಿಂಗ್, ವಗೈರೆ ಶಿಕ್ಷಣ ಕೊಡಲಾಗಿದೆ. ಹಳ್ಳಿಗಳಲ್ಲಿ ವೈದ್ಯಸಹಾಯ, ಸಾಲವನ್ನು ಶಾಂತಕರವಾಗಿ ಬಗೆಹರಿಸುವುದು ಪೊರಂಬೋಕು ಭೂಮಿಗಳನ್ನು ಕೊಡಿಸುವುದು. ಕುಡಿಯುವ ನೀರಿನ ಭಾವಿ ತೆಗೆಸುವುದು, ಮನೆಕಟ್ಟಿಸಿಕೊಳ್ಳಲು ಜಾಗಕೊಡಿಸುವುದು, ಕುಡಿತ ದುರ್ಮಾಂಸ ಭಕ್ಷಣೆ. ದುರಾಚಾರಗಳಿಂದ ಅವರನ್ನು ತಾರು ಮಾಡಲು ಸಂಘ, ಭಜನೆ ಮಂದಿರಗಳನ್ನು ಸ್ಥಾಪಿಸುವುದು, ಸಾಮಾಜಿಕ ಹಕ್ಕುಗಳನ್ನು ಕೊಡಿಸುವುದು. ಮುನಿಸಿಪಾಲಿಟಿ ಮತ್ತು ಪಂಚಾಯ್ತಿಬೋರ್ಡು ಕ್ಷೇತ್ರಗಳಲ್ಲಿನ ಕಸಗುಡಿಸುವರು ಕೋಟಿಗಳ ಪರಿಸ್ಥಿತಿ ಸುಧಾರಿಸುವುದು ವಗೈರೆ ಅನೇಕಕಾರ್ಯಗಳನ್ನು ಸಂಘವು ಮಾಡಿದೆ. ಅನೇಕಸಂದರ್ಭಗಳಲ್ಲಿ ಕೋರ್ಟಿಗೆ ಹೋಗಿ ಹರಿಜನರನ್ನು ಸಿವಿಲ್ ಮತ್ತು ಕ್ರಿಮಿನಲ್ ತೊಂದರೆಗಳಿಂದ ತಪ್ಪಿಸಿದ್ದೂ ಉಂಟು. ಕಾರ್ಯಕರ್ತರ ಅಭಾವದಿಂದ ಹೆಚ್ಚಿನ ಕೆಲಸವಾಗಿಲ್ಲ.

ಸಂಘದ ಲೆಕ್ಕಗಳು ಪ್ರತಿವರ್ಷ ಆಡಿಟ್ ಆದನಂತರ ಕಾರ್ಯಕ್ರಮದ ವಿವರಗಳೊಂದಿಗೆ ಪ್ರಕಟವಾಗುತ್ತವೆ.

ತಿಳಿದವರಿಗೆ ಹೆಚ್ಚಿಗೆ ಹೇಳಿಕೊಳ್ಳುವುದು ಅನಾವಶ್ಯಕ. ತಾವು ಈಕಾರ್ಯಕ್ಕೆ ತಮಗೆ ಬರುವ ವರಮಾನದಿಂದ ಹತ್ತಂಶ್ಲೊಂದು ಭಾಗವನ್ನು ಮಾಸಿಕವಾಗಿ ಸಹಾಯಮಾಡಬೇಕಲ್ಲದೆ ಸ್ನೇಹಿತರಿಂದಲೂ ಸಹಾಯಮಾಡಿಸಲು ಕೋರುತ್ತೇವೆ.

ತಾವು ಸೂಚಿಸಬಹುದಾದ ಹರಿಜನೋದ್ಧಾರದ ಯಾವಕಾರ್ಯಕ್ರಮಕ್ಕಾದರೂ ತಮ್ಮ ಸಲಹೆಯಂತೆ ಹಣವು ಜಿಲ್ಲೆಯ ಯಾವ ಭಾಗದಲ್ಲಾದರೂ ವಿನಿಯೋಗಿಸಲ್ಪಡುವುದು.

ತಮ್ಮ

ಕಾರ್ಯಕಾರೀ ಸಮಿತಿ ಸದಸ್ಯರು.

ಬಳ್ಳಾರಿಜಿಲ್ಲಾ ಹರಿಜನ ಸೇವಕ ಸಂಘ

ಕಲಕತ್ತೆಯಲ್ಲಿ ರಕ್ತದ ಕಾಲುವೆ

ಮುಸ್ಲಿಂಲೀಗಿನ 16 ನೆಯ ತಾ. ಹೋರಾಟದ ಪರಿಣಾಮವಾಗಿ ಹಿಂದೂಸ್ತಾನಲ್ಲೇ ದೊಡ್ಡನಗರವಾದ ಕಲ್ಕತ್ತೆಯಲ್ಲಿ ಹಿಂದೂ ಮುಸಲ್ಮಾನರದಂಗೆಯು ಭಯಂಕರ ಸ್ವರೂಪವನ್ನು ಹೊಂದಿದೆ ಇಲ್ಲಿಯವರೆವಿಗೆ 3000 ಜನರು ಮರಣಹೊಂದಿರುವರು. ಅನೇಕಸಾವಿರಜನರು ಗಾಯಗೊಂಡಿರುವರು. ಅಂಗಡಿಗಳು ಲೂಟಿಯಾಗಿವೆ. ನಗರ ಬೀದಿಗಳಲ್ಲಿ ಹೆಣಗಳನ್ನು ಹದ್ದುಗಳು ತಿನ್ನುತ್ತಲಿವೆ. ಮಿಲಿಟರಿ ಪೋಲೀಸರು ಪರಿಸ್ಥಿತಿಯನ್ನು ಹದಕ್ಕೆ ತರಲು ಯತ್ನಿಸುತ್ತಲಿರುವರು.

ಕಾಮಲಾಪುರದಲ್ಲಿ ನಡೆದ ಬಳ್ಳಾರಿ ಜಿಲ್ಲಾ 3 ನೆಯ ಹರಿಜನ ಮಹಾ ಸಭೆಯ ಪ್ರತಿನಿಧಿಗಳು.

ಅಧ್ಯಕ್ಷರು:— ಶ್ರೀ ಫಕೀರಪ್ಪ ಹೋಡ್ಕೆ, ಹುಬ್ಬಳ್ಳಿ, **ಉದ್ಘಾಟಕರು:—** ಶ್ರೀ ವೇಮುಲ ಕೂರ್ಮಯ್ಯ, ಮದ್ರಾಸು ಸರ್ಕಾರದ ಮಂತ್ರಿ, **ಮಾನ್ಯ ಅತಿಥಿಗಳು:—** ಶ್ರೀ ಗೋವಿಂದದಾಸ್ ಎಂ.ಎಲ್.ಎ. ಶ್ರೀ ಮತ್ತು ಶ್ರೀಮತಿ ನಾಗಪ್ಪ ಎಂ.ಎಲ್.ಎ.

ಕಾಮಲಾಪುರ

1 ಕವಡಿ ಹನುಮಂತಪ್ಪ 2 ,, ಪಕ್ಕೀರಪ್ಪ 3 ಎಂ. ಬಸಪ್ಪ 4 ಹಂಪಿ ಕೆಂಚಪ್ಪ 5 ವೆಂ ಕೆಂಚಪ್ಪ 6 ಮಿಲಟರಿ ಲಿಂಗಪ್ಪ 7 ಬಾರೆಮರದ ಗಾದೆಪ್ಪ 8 ಪ. ಧರ್ಮಪ್ಪ 9 ವ ಕಾಸಿಮಪ್ಪ 10 ಸಣ್ಣ ಮದಗಪ್ಪ 11 ಸಣ್ಣ ಹನುಮಂತಪ್ಪ.

ಬಳ್ಳಾರಿ.

1 ನಾರಪ್ಪ ಶ್ರೀರಾಂಪುರ 2 ಕುಲ್ಲಾಯಪ್ಪ 3 ನರಸಪ್ಪ ಹಂಪಯ್ಯಗೇರಿ 4 ಬಸಪ್ಪ ಕೌಲುಬ ಜಾರ 5 ವರಸಪ್ಪ 6 ಕೆಂಚಯ್ಯ 7 ನರಸಪ್ಪ ಹಿರಾಳುಕ್ಕಡ 8 ದುರ್ಗಪ್ಪ ಪು. ದೊಡ್ಡಿ 9 ಹೊ ಟ್ಟೆ ಈರಪ್ಪ 10 ಗೋಪಾಲಪ್ಪ

ನಾಗೇನಹಳ್ಳಿ.

1 ನರೆ ಹನುಮಪ್ಪ 2 ಚ. ತಿಪ್ಪಯ್ಯ 3 ನೀಲಗಿರೆಪ್ಪ 4 ಸಣ್ಣ ದುರ್ಗಪ್ಪ.

ನಲ್ಲಾಪುರ. 1 ತಿ. ಹುಲುಗಪ್ಪ.

ಮಲುಸನಗುಡಿ.

1 ಪೋತಪ್ಪ 2 ಪರುಸಪ್ಪ

1 ಬಂಡೂರು ಹನುಮಪ್ಪ.

ಸಂಕಲಾಪುರ. ಮುಲಗಿರಿದಾಸ್, ಫಕೀರಪ್ಪ.

ಮೆಟ್ರಿ. 1 ಪಟ್ಟಗೆಪ್ಪ 2 ಲಿಂಗಪ್ಪ.

ಕಾಕುಬಾಳು. 1 ಪಂಪಯ್ಯ.

ಅಮರಾವತಿ. 1 ಸಕ್ಕರಪ್ಪ 2 ಗಂಗಪ್ಪ.

ಕೆಲ್ಲಂಬ. 1 ಹನುಮಂತಪ್ಪ.

ಕುರುಗೋಡು. 1 ಹಿರೇ ಲಿಂಗಪ್ಪ.

ಯಲ್ಲಾಪುರ. 1 ಕೆಂಚಪ್ಪ.

ಬುಕ್ಕಸಾಗರ. 1 ಹುನೇನಪ್ಪ.

ತಾಳೂರು. 1 ಮುದುಕಪ್ಪ.

ಉಬ್ಬಲಗಂಡಿ.

1 ಹನುಮಪ್ಪ 2 ಗಿಡ್ಡಪ್ಪ.

ನಾಗಲಾಪುರ. 1 ಕರೇ ಹನುಮಪ್ಪ.

ಕುಡಿತಿನಿ. 1 ಗೋವಿಂದಪ್ಪ,

ಕೊನ್ನಾಯ್ಕನಳ್ಳಿ

1 ತ. ದುರ್ಗಪ್ಪ 2 ಅರ್ಜುನಪ್ಪ 3 ಸಣ್ಣ ದುರ್ಗಪ್ಪ.

ಮುದ್ದಾಪುರ. 1 ರಾಮುಪ್ಪ.

ಕೊಟಗಿನಹಾಳು 1 ಪಂಪಣ್ಣ.

ಗಾದಿಗನೂರು. 1 ಕೆಂಚಪ್ಪ.

ತೋರಣಗಲ್ಲು. 1 ದೊಡ್ಡಪ್ಪ.

ಆನಂತಶಯನಗುಡಿ.

1 ದೊಡ್ಡ ಹುಲುಗಪ್ಪ.

ಹರಪನಹಳ್ಳಿ. 1 ಕೆಂಚಪ್ಪ.

ಕೊಟ್ಟೂರು.

1 ಮೂಗ ಬಸಪ್ಪ 2 ಶಿವಪ್ರಸಾದ.

ಕೊಡ್ಲಿಗಿ. 1 ತಾ. ದುರ್ಗಪ್ಪ.

ತೂಲಹಳ್ಳಿ. 1 ಬಸಪ್ಪ ಹೆಚ್.

ಪೂಲ್ಯ ರಾಯದುರ್ಗ ತಾ॥ 1 ಕಾಜಪ್ಪ.

ಕಣೇಕಲ್ಲು. 1 ಹೊನ್ನೂರಪ್ಪ.

ಉವ್ವಾರಳ್ಳಿ. 1 ಭೀಮಪ್ಪ.

ತಾರಾನಗರ. 1 ಅಳ್ಳಪ್ಪ.

ವಡ್ರಳ್ಳಿ. 1 ಹುಲುಗಪ್ಪ.

ಬೈಲುವದ್ದಿಗೇರಿ.

1 ಮೂಕಪ್ಪ 2 ತಿಮ್ಮಪ್ಪ.

ಗುಂಡ್ರವದ್ದಿಗೇರಿ. 1 ಸಣ್ಣಪ್ಪ.

ಪಾಪಿನಾಯ್ಕನಳ್ಳಿ.

1 ಮುದುಕಪ್ಪ. 2 ಮಸ್ತಾನಪ್ಪ,

ಬಳ್ಳಾರಿ ಜಿಲ್ಲಾ ಕಾಮಲಾಪುರದಲ್ಲಿ ನಡೆದ 3 ನೆಯ ಹರಿಜನ ಮಹಾಸಭೆ.

ಆಯ-ವ್ಯಯದ ಲೆಕ್ಕ

ಜ ಮಾ.		ಖ ರ್ಚು.	
1) ಹರಿಜನರಿಂದಲೂ ಇತರರಿಂದಲೂ ಚಂದಾರೂಪವಾಗಿ ಬಂದ ಹಣ	951-12-0	ಬಂದ ಅತಿಥಿಗಳ ಆದರಕ್ಕಾಗಿ	553-5-6
2) ಉಳಿದ ಸಕ್ಕರೆ ಮತ್ತು ಬೇಳೆಯನ್ನು ಮಾರಿದ್ದರಿಂದ ಬಂದಹಣ	20—0—0	ಹಣ ಸಂಗ್ರಹ ಮಾಡಲು ಹೋದ ಪ್ರಚಾರಕರ ಮಾರ್ಗ ವ್ಯಯ	158-7-0
3) ಸಾಲವಾಗಿ ತಂದಿರುವ ಹಣ	54—4—6	ಕಾರ್ ಮತ್ತು ಪೆಟ್ರೋಲ ಖರ್ಚು	97—8-0
		ಮುದ್ರಣ ಮತ್ತು ಪ್ರಚಾರ ಸಾಹಿತ್ಯ	57—0-0
		ಟಪಾಲು ಮತ್ತು ತಾರಿನ ಖರ್ಚು	33—8-9
		ಮೆರವಣಿಗೆ (ಬ್ಯಾಂಡ್ ಡೊಳ್ಳು ಮಂಟಪ) ಅಲಂಕಾರ ಧ್ವಜ ವಗೈರೆ	42—7-3
		ಫೋಟೋಗ್ರಾಫ್	38—0-0
		ಇತರ ವಿವಿಧ ಖರ್ಚುಗಳು	45-12-0
ವಟ್ಟು ಮೊತ್ತ--	1026—0—6	ವಟ್ಟು ಮೊತ್ತ—	1026—0—6

ಈ ಲೆಕ್ಕಗಳನ್ನು ರಸೀದಿಗಳೊಂದಿಗೆ ಪರಿಶೀಲಿಸಿ ನೋಡಿದ್ದೇನೆ, ಸರಿಯಾಗಿವೆ.

ಕೆ. ವೆಂಕೋಬರಾವು, ರಿಜಿಸ್ಟರ್ಡ ಇಕಂಟ್ಯಾಕ್ಟೆಸ್ಪ್ರಾಕ್ಟಿಷನರ್ ಮತ್ತು ಆಡಿಟರ್ ಹೊಸಪೇಟೆ.

ಹರಿಜನ ಸ್ವಾಗತ ಸಮಿತಿ, ಕಾಮಲಾಪುರ.



S. V. SETTY & BROS, BELLARY.

ಯಸ್. ವಿ. ಶೆಟ್ಟಿ, ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಸ್ಥಿತಿಯು ಈಗ ಸುಧಾರಿಸಿದೆ. ನಾವು ಈಗ ಆದಷ್ಟು ಶೀಘ್ರವಾಗಿ ನಿಶ್ಚಿತ ಮತ್ತು ನಿಗದಿ ಬೆಲೆಗೆ **ವೆಸ್ಟ್‌ಎಂಡ್ ಕೈ ಗಡಿಯಾರ**ಗಳನ್ನು ಒದಗಿಸಲಿದ್ದೇವೆಂದು ತಿಳಿಸಲು ಸಂತೋಷಿಸುತ್ತೇವೆ

ಇಂದೇ ನಿಮ್ಮ ಬೇಡಿಕೆಯನ್ನು ತಿಳಿಸಿರಿ.

ಬಳ್ಳಾರಿ ಜಿಲ್ಲಾ ಹರಿಜನ ಸೇವಕ ಸಂಘ.

— 14 ನೆಯ ವಾರ್ಷಿಕ ಸಭೆ —

ಅಗಡಿಯವರ ಛತ್ರದಲ್ಲಿ 10-8-46 ನೆಯ ಸಾಯಂಕಾಲ ಸಮಾವೇಶವಾಗಿ ಕಳೆದವರ್ಷದ ಕಾರ್ಯದವರದಿ ಮತ್ತು ಲೆಕ್ಕಪರಿಶೋಧಕರಿಂದ ವಿಮರ್ಶಿತವಾದ ಸಂಘದ ಮತ್ತು ಕಾಮಲಾಪುರದಲ್ಲಿ ನಡೆದ 3 ನೆಯ ಜಿಲ್ಲಾ ಹರಿಜನ ಮಹಾಸಭೆಯ ಲೆಕ್ಕಗಳು ಸ್ವೀಕೃತವಾದವು. ಅನೇಕ ವರ್ಷಗಳು ಸಂಘಾಧ್ಯಕ್ಷರಾಗಿ ಹರಿಜನೋದ್ಧಾರಕ್ಕೆ ಅಮೂಲ್ಯಸೇವೆ ಸಲ್ಲಿಸಿದ ಅಗಲಿದ ಟಿ. ರಾಘವ ಇವರ ಬಗ್ಗೆ ದುಃಖಸೂಚಕ ನಿರ್ಣಯವಾಯಿತು. ಜಿಲ್ಲೆಯಲ್ಲಿ ಹರಿಜನ ಕಾರ್ಯವು ಬಹಳ ಬೆಳೆದಿರುವ ಕಾರಣ ಮುಖ್ಯವಾಗಿ ಹರಿಜನರ ವಿದ್ಯಾಭ್ಯಾಸಕ್ಕೆ ವಿಶೇಷಗಮನ ಕೊಡುತ್ತಿರುವದರಿಂದ ಜಿಲ್ಲೆಯಲ್ಲಿ ಆರಿಸಿಬಂದ ಶಾಸನಸಭ್ಯರು ತಮ್ಮಮಾಸಿಕವೇತನದ ಹತ್ತರಲ್ಲೊಂದು ಪಾಲನ್ನು ಕೊಡಲು, ಕೇಳಿಕೊಳ್ಳಬೇಕೆಂಬ ನಿರ್ಣಯವಾಯಿತು.

1946—47 ನೆಯ ವರ್ಷಕ್ಕಾಗಿ ಈ ಕೆಳಗೆ ಕಾಣಿಸಿದ ಮಹನೀಯರು ಕಾರ್ಯಕಾರೀ ಸಮಿತಿಗೆ ಆರಿಸಲ್ಪಟ್ಟರು—

ಅಧ್ಯಕ್ಷ: ಶ್ರೀ ಟಿ.ಜಿ ಸತ್ಯನಾರಾಯಣ,
ಉಪಾಧ್ಯಕ್ಷ: ಶ್ರೀ ಡಿ.ಯಲ್. ಗಂಗಾಧರಶೆಟ್ಟಿ
ಕೋಶಾಧ್ಯಕ್ಷ: ಗುಡುದೂರು ಪದ್ಮನಾಭನ್.
ಪ್ರಧಾನಕಾರ್ಯದರ್ಶಿ: ಶ್ರೀ ಟಿ.ಬಿ. ಕೇಶವರಾವ್.
ಉಪ ಕಾರ್ಯದರ್ಶಿ: ಶ್ರೀ ಜಿ. ನಾಗಭೂಷಣಂ.

1) ಶ್ರೀ ಟಿ ಸುಬ್ರಹ್ಮಣ್ಯಂ
2) ,, ಅಗಡಿ ಲಕ್ಷ್ಮೀನಾರಾಯಣ.
3) ,, ಮುಲ್ಲಂಗಿ ದೊಡ್ಡಬಸಪ್ಪ.
4) ,, ಡಿ. ಯಚ್. ವೆಂಕೋಬರಾವು.
5) ,, ಯಸ್. ಸಿ. ವಿ. ಶೆಟ್ಟಿ.
6) ,, ತೋರಣಗಲ್ಲು ಮರೆಪ್ಪ.
7) ,, ಕೃಷ್ಣಗೋಪಾಲಸಿಂಗಿ
8) ,, ಕಾ. ತಿಮ್ಮಪ್ಪ.
9) ,, ಡಿ. ವೇಣುಗೋಪಾಲಾಚಾರಿ.
10) ,, ಪೋಲಾ ವೆಂಕಯ್ಯ.
11) ,, ಆರ್. ಯನ್. ಪಂಪಾರಾವು, ಆಡಿಟರ್.
12) ,, ಕರೂರು ನರಸಿಂಹಶಾಸ್ತ್ರಿ.
13) ,, ಹೆಚ್. ಸೀತಾರಾಮರೆಡ್ಡಿ.
14) ,, ಡಾಕ್ಟರ್ ಎಸ್ ಕೆ. ಹನುಮಂತರಾವು.
15) ,, ಹೆಚ್. ರಾಮಲಿಂಗಾರೆಡ್ಡಿ.

ಹರಿಜನ ಪ್ರತಿನಿಧಿಗಳು.

16) ಶ್ರೀ ಡಿ. ಗೋವಿಂದದಾಸ್.
17) ,, ಎಂ. ಭೀಮಪ್ಪ.
18) ,, ಎಸ್. ದುರುಗಪ್ಪ.

ತಾಲೂಕು ಪ್ರತಿನಿಧಿಗಳು.

19) ,, ಇ. ಟಾಕಪ್ಪ ಹೊಸಪೇಟೆ.
20) ,, ಲಕ್ಷ್ಮಣಮೂರ್ತಿ ,,
21) ,, ಟಿ. ಯಸ್. ಗುರುಲಿಂಗಪ್ಪ ಕೊಟ್ಟೂರು.
22) ,, ಆರ್. ಯಸ್ ಸತ್ಯನಾರಾಯಣ ,,
23) ,, ಆಗ್ನಿಹೋತ್ರಿ ನಾರಾಯಣಭಟ್ ಹರಪನಹಳ್ಳಿ.
24) ,, ಟಿ. ಪಂಚಾಕ್ಷರಯ್ಯ. ,,
25) ,, ಬನ್ನಿಹಟ್ಟಿ ಲಂಕೆಪ್ಪ. ಹಡಗಲಿ.
26) ,, ಸಣ್ಣನಗೌಡ ನಿಟ್ಟೂರು. (ಶಿರುಗುಪ್ಪ)
27) ,, ಡಾಕ್ಟರ್ ಲಕ್ಷ್ಮಣ್. (ಆದವಾನಿ)
28) ,, ಶಾಲೆನರಮೇಶ್ವರಪ್ಪ (ಕೋಶಿಗಿ)
29) ,, ವೀರಭದ್ರರೆಡ್ಡಿ. ನೇಮಕಲ್ಲು (ಆಲೂರು)
20) ,, ಎಂ. ವೈ. ಸೋಮಪ್ಪ. (ಎಮ್ಮಿಗನೂರು.)
31) ,, ಬಿ. ವಿಶ್ವನಾಥಶಿಂಗ್ (ರಾಮಸಾಗರ)

ಆರಿಸಲ್ಪಟ್ಟ ಸದಸ್ಯರು ಕಾರ್ಯಕಾರೀ ಸಮಿತಿಯಲ್ಲಿ ಕೆಲಸಮಾಡಲು ತಮ್ಮ ಸಮ್ಮತಿಯನ್ನು ಸೂಚಿಸುತ್ತಾ, ಹರಿಜನೋದ್ಧಾರ, ಅಸ್ಪೃಶ್ಯತಾ ನಿವಾರಣಾಕಾರ್ಯದಲ್ಲಿ ಅಸಕ್ತಿಯನ್ನು ವಹಿಸಬೇಕೆಂದೂ, ವಾರ್ಷಿಕ ಸದಸ್ಯತ್ವದ ಕುಲ್ಕ 10—0—0 ಹತ್ತು ರೂಪಾಯಿಗಳನ್ನು ಕೊಡಲೇ ಕೋಶಾಧ್ಯಕ್ಷರಿಗೆ ಕಳುಹಿಸಬೇಕೆಂದೂ ಕಾರ್ಯದರ್ಶಿಗಳು ಸೂಚಿಸುತ್ತಾರೆ.

14

The Rayalaseema Bank Limited, Bellary.

[G. statement under Section 136 Indian Companies Act]

The share capital of the Company is Rs. 10,00,000 divided in 10,000 shares of Rs. 100 each. The number of shares issued is 50 shares of Rs. 100 each. All the 5000 shares issued have been allotte Calls to the amount of Rs. 100 per share have been made under whi a sum of Rs. 4,96,925 has been received.

LIABILITIES: Debts owing to the Sundry persons by the Compan 30—6—46

On Notes, bills or Hundies	...	Rs. 971264-10—8
On estimated liabilities	...	.. 2647669—5-

ASSETS: Government Securities 30th June 1946

3% 1952 Madras Loan Face value	Rs. 19000	Rs.	18268-12—0
3% 1953 Madras Loan Face value	,, 5000	,,	4968-12—0
3½% 1965 Gov f India loan F. V.	,, 7700	,,	7238—0—0
4% 1960—70 Madras loan F. V.	,, 200	,,	196—0—0
3% 1956 Madras Loan F. V.	,, 100000	,,	99500—0—0
3% 1953—55 Madras Loan F. V.	,, 105400	,,	104005-8—0
3% 1957 First Victory Loan F. V.	,, 111800	,,	109512—0—0
3% 1959—61 Second Victory F V.	,, 17600	,,	17592—0—0
Shares of other Companies	...	,,	6500—0—0
			367781—0—0
Bills of exchange, Hundies and Promisory Notes		Rs.	2670505-11—5
Cash at Banks on hand		,,	619371—5—2
Other Assets		,,	458180-15-3

B. V. SESHAGIRI RAO,
Secretary.

NAVA BHARAT, BELLARY
ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು. Subscription Rates.

ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To
SRI..... .. ..
.....
.....

Printed at Krishna Press Bellary Edited & Published by T. B. KESAVA RAO.

ಜೈಹಿಂದ್. Reg. No. M. 4746

ಸಮಾಚಾರ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

ಕಟ್ಟು ೫ ಸಂಚಿಕೆ ೫ | ಬಳ್ಳಾರಿ ಸೆಪ್ಟಂಬರು ೨ ಸೋಮವಾರ ೧೯೪೬ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವು.

ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರ. ಸಂಗಡಿಸಿದ ಜವಹರಲಾಲರು ರಚಿಸಿದರು.

ಸರ್ದಾರ್
ವಲಭಬಾಯಿ ಪಟೇಲ್.

ಬಾಬೂ
ರಾಜೇಂದ್ರ
ಪ್ರಸಾದ

ಹೊಸದಿಲ್ಲಿ:– ಗವ್ಹರ್ನರ ಜನರಲ್‌ರ ಕಾರ್ಯಕಾರಿ ಮಂಡಳಿಯ ಸದ್ಯದ ಸಭಾಸದರ ರಾಜೀನಾಮೆಯನ್ನು ಚಕ್ರವರ್ತಿಗಳು ಮಾನ್ಯಮಾಡಿ ಕೆಳಗಿನವರನ್ನು ಸಭಾಸದರನ್ನಾಗಿ ನೇಮಿಸಿರುವರೆಂದು ಸರಕಾರದ ಪತ್ರಿಕೆ ಹೊರಟಿದೆ.

೧. ಪಂ. ಜವಾಹರಲಾಲ ನೆಹರೂ, ೨. ಸರದಾರ ವಲ್ಲಭಭಾಯಿ ಪಟೇಲ, ೩. ಡಾ. ರಾಜೇಂದ್ರ ಪ್ರಸಾದ, ೪. ಶ್ರೀ. ಅಸಫ ಅಲ್ಲಿ, ೫. ಶರಶ್ಚಂದ್ರಬೋಸ, ೬. ಶ್ರೀ. ರಾಜ ಗೋಪಾಲಾಚಾರಿ, ೭. ಡಾ. ಜಾನ ಮಥಾಯಿ, ೮. ಸರ್. ಶಾಫತ ಅಹಮ್ಮದಖಾನ, ೯೦. ಶ್ರೀ ಜಗಜೀವನರಾಮು, ೧೧. ಸಯ್ಯದ ಅಲಿ ಜಾಹೀರ, ೧೨. ಶ್ರೀ ಕುಸರಸಿ ಹೊರಮುಸಜಿ ಬಾಥಾ.

ಇಬ್ಬರು ಮುಸಲ್ಮಾನ ಸಭಾಸದರು ಹಿಂದುಗಡೆ ನೇಮಿಸಲ್ಪಡುವರು.

ನಡುಗಾಲ ಸರಕಾರವು ಸೆಪ್ಟೆಂಬರ್ ೨ನೇ ತಾರೀಕಿಗೆ ಅಧಿಕಾರವನ್ನು ವಹಿಸಿತು.

ಶಾಫತ್‌ರಮೇಲೆ ಪುಂಡರಹಲ್ಲೆ.

ದೆಹಲಿ ಕೇಂದ್ರದಲ್ಲಿ ರಚಿತವಾದ ರಾಷ್ಟ್ರೀಯ ಸರಕಾರದ ಮಂತ್ರಿಗಳಲ್ಲೊಬ್ಬರಾದ ಸರ್. ಶಾಫತ್ ಅಹ್ಮದ್ ಖಾನರು ಸಾಯಂಕಾಲ ತಮ್ಮ ಮನೆಗೆ ಹಿಂದಿರುಗುತ್ತಿದ್ದ ಸಮಯದಲ್ಲಿ ಇಬ್ಬರು ತರುಣರು ಅವರಮೇಲೆ ಏರಿಹೋಗಿ ಕತ್ತಿಗಳಿಂದ ಇರಿದರು. ಅವರಿಗೆ ಮರಣಾಂತಕ ಗಾಯಗಳಾಗಿಲ್ಲ. ಆಸ್ಪತ್ರೆಯಲ್ಲಿ ಗುಣ ಹೊಂದುತ್ತಿರುವರು. ಈ ಘಟನೆಯನ್ನು ಎಲ್ಲಾ ಮುಖಂಡರೂ ಖಂಡಿಸಿರುವರು.

ವೈಸ್ರಾಯರ ಆಕಾಶವಾಣಿ ಭಾಷಣ.

ವೈಸ್ರಾಯರು 24ನೆಯ ತಾ. ರಾತ್ರಿ 8½ ಘಂಟೆಗೆ ಆಕಾಶವಾಣಿಯಲ್ಲಿ ಭಾಷಣಮಾಡುತ್ತ ಕೇಂದ್ರದಲ್ಲಿ ಪಂಡಿತ ಜವಹರಲಾಲರಿಂದ ಸ್ಥಾಪಿತವಾದ ರಾಷ್ಟ್ರೀಯ ಸರಕಾರದ ನಿತ್ಯದಾಡಳಿತೆಯಲ್ಲಿ ತಾವು ಕೈ ಹಾಕುವದಿಲ್ಲೆಂದೂ ಅದಕ್ಕೆ ಪರಮಾವಧಿ ಸ್ವಾತಂತ್ರ್ಯ ಇರುವದೆಂದೂ, ಮುಸ್ಲಿಂಲೀಗದವರು 5 ಹೆಸರುಗಳನ್ನು ಸೂಚಿಸಬಹುದೆಂದೂ ಅವರ ಸಹಕಾರವು ಅವಶ್ಯವೆಂದೂ, ಹೇಳಿದರು. ಲೀಗ ತನ್ನ ಧೋರಣದ ಪುನರ್ವಿಚಾರ ಮಾಡಬೇಕೆಂದರು.

ಹಿಂಸಾಕೃತಿಯಿಂದ ಶಬ್ದಗಳಿಂದ ಹಾನಿ ಇದೆ. ಸ್ವಾಂತೈಗಳಲ್ಲಿ ಶಾಂತತೆಯನ್ನು ಕಾಯ್ದುಕೊಂಡು ಹೋಗುವ ಆವಶ್ಯಕವಿದೆ. ವಿಚಾರಶೀಲರೂ, ಶಾಂತ ತಾಪ್ರಿಯರೂ ಇದನ್ನಾಲೋಚಿಸಬೇಕೆಂದರು.

ವೈಸ್ರಾಯರ ಕಲ್ಕತ್ತಾ ಸಂದರ್ಶನ.

ಕಲ್ಕತ್ತೆಯ ಹಿಂದೂ ಮುಸ್ಲಿಂಗಲಭೆಗಳಲ್ಲಿ ಹಾನಿಗೀಡಾದ ಪ್ರದೇಶಗಳನ್ನೂ ಅದರ ವಿವರಗಳನ್ನೂ ಅರಿಯಲು ವೈಸ್ರಾಯರಾದ ಲಾರ್ಡ್ ವೇವಲ್‌ರವರು ಕಲ್ಕತ್ತೆಗೆ ಹೋಗಿ ಎಲ್ಲಾ ಪ್ರದೇಶಗಳನ್ನು ಪರೀಕ್ಷಿಸಿ ಮುಖ್ಯರಿಗೆ ಭೇಟಿ ಇತ್ತರು.

ಗೋವಾ.

ಗೋವೆಯ ಜನರ ಬಾಯಿಗೆ ಬೀಗ ಹಾಕಿ 'ಮಾನವೀಕರಣದ ತಮ್ಮ ಚಟುವಟಿಕೆಗಳನ್ನು ಗೋವೆಯ ಅಧಿಕಾರಿಗಳು ಬಹಳ ಆನಂದದಿಂದ ಮುಂದುವರಿಸಿರುವರು. ನಾಗರಿಕ ಸ್ವಾತಂತ್ರ್ಯದ ತಮ್ಮ ಪ್ರಾಥಮಿಕ ಹಕ್ಕನ್ನು ಒತ್ತಿ ಹೇಳಿದ ಅಪರಾಧಕ್ಕಾಗಿ ಶ್ರೀ ಬ್ರಾಗಂರ್ಜೂ ಕುನ್ಹಾರವರಿಗೆ ಎಂಟು ವರ್ಷಗಳ ಶಿಕ್ಷೆಯನ್ನು ವಿಧಿಸಿ ಆಫ್ರಿಕೆಯಲ್ಲಿರುವ ದೂರದ ಪೋರ್ತುಗೀಜ ಒಕ್ಕಲ ನಾಡಿಗೆ ಗಡಿಪಾರು ಮಾಡಿದ ದಂಡಿನ ನ್ಯಾಯಾಲಯದ ಶಿಕ್ಷೆಯೇ ಆ ಚಟುವಟಿಕೆಗಳ ಬಿಸಿ ಉದಾಹರಣೆ ಬ್ರಿಟಿಷ ಹಿಂದೂಸ್ಥಾನದ ಜನರ ಸುಖ ದುಃಖಗಳಲ್ಲಿ ಬೇಕೆಂತು ತೊಡಗಲು ಪ್ರೋತ್ಸಾಹಿಸಿದ ಫ್ರೆಂಚಗವರ್ನರರ ಕೃತಿಗೆ ವಿರುದ್ಧವಾಗಿರುವ ಗೋವೆಯ ಅಧಿಕಾರಿಗಳ ಧೋರಣವನ್ನು ನಿಷೇಧಿಸುವ ಗೊತ್ತುಪಳಿಯನ್ನು ಕಾಂಗ್ರೆಸ ಕಾರ್ಯಸಮಿತಿಯು ಅಂಗೀಕರಿಸಿದ್ದುದು ವಿಹಿತವಾಗಿದೆ.

ಸೇವಾಗ್ರಾಮ ಮೋ. ಕ. ಗಾಂಧಿ

೧೨—೮—೪೬

ರಷ್ಯಾ—ತುರ್ಕಿ ತಿಕ್ಕಾಟ.

ಕಪ್ಪುಸಮುದ್ರದಿಂದ ಹೊರಬೀಳಲು ರಷ್ಯಾಕ್ಕೆ ಡಾರ್ಡಿನಲ್ಸ್ ಜಲಸಂಧಿಯು ಮಾರ್ಗವಾಗಿದೆ. ಈ ಜಲಸಂಧಿಯು ತುರ್ಕಿಯ ಅಧೀನದಲ್ಲಿದೆ. ಅದರ ಆಡಳಿತದಲ್ಲಿ ರಷ್ಯಾಭಾಗವನ್ನು ಕೇಳಿತು. ತುರ್ಕಿಯು ಅಮೆರಿಕಾ-ಇಂಗ್ಲೆಂಡುಗಳ ಬಲುಮೆಯಿಂದ ರಷ್ಯಾದ ಬೇಡಿಕೆಯನ್ನು ನಿರಾಕರಿಸಿದೆ.

ಎಸ್. ಐ. ಆರ್. ರೈಲ್ವೆ ಕೆಲಸಗಾರರ ಸಂಪು ೨೪ನೆಯತಾ. ಪ್ರಾರಂಭವಾಗಿ ಉಗಿ ಬಂಡಿಗಳ ಓಡಾಟವೆಲ್ಲಾ ಕಟ್ಟಾಗಿದೆ.

THE NAVA BHARAT
ನವಭಾರತ
ಸಂಪಾದಕ-ಟಿ.ಬಿ.ಕೇಶವರಾವ್

9th Year of Publication.

2nd SEPTEMBER 1946

ಆಹಾರ ಧಾನ್ಯ

ಗ್ರಾಮ ಸಮಿತಿಗಳು.

ಕಾಂಗ್ರೆಸ್ ಸರ್ಕಾರವ ಆಜ್ಞೆಯ ಪ್ರಕಾರಕ್ಕೆ ಮುದ್ರಾಸ ಪ್ರಾಂತದ ಹಳ್ಳಿಗಳಲ್ಲಿ ಗ್ರಾಮಸಮಿತಿಗ ಳೇರ್ಪಟ್ಟು ಅವುಗಳಲ್ಲಿ ಮುಖ್ಯಪಂಗಡದವರ ಪ್ರಾತಿನಿಧ್ಯವು ಇರಬೇಕೆಂಬುದಾಗಿ ವಿಧಾಯಕವಾಗಿ ರುವುದು ಸರಿಯಷ್ಟೆ. ಈ ಸಮಿತಿಗಳ ನಿರ್ಮಾಣವು ಗ್ರಾಮ ಮುಖ್ಯರನ್ನು ಅವಲಂಬಿಸಿದೆ. ಅವರು ತಮಗೆ ಬೇಕಾದವರನ್ನು ಸಮಿತಿಯ ಸದಸ್ಯರನ್ನಾಗಿ ಆರಿಸಿ ಬರಲು ಸುಲಭವಾಗಿ ವರ್ಜಿಸಬಹುದಾಗಿದೆ. ಈಗಾ ಗಲೇ ಗ್ರಾಮಸಮಿತಿಗಳೇರ್ಪಟ್ಟಿರುವ ಹಳ್ಳಿಗಳಲ್ಲಿ ಕೆಲ ಸದಸ್ಯರಿಗೆ ಗ್ರಾಮಸಮಿತಿಗಳಿರುವುದು ಗೊತ್ತಿಲ್ಲ ಅವುಗಳ ಉದ್ದೇಶವೂ ಮನವರಿಕೆಯಾಗಿಲ್ಲ. ಗ್ರಾಮ ದಲ್ಲಿ ಕಾಳಿಲ್ಲದವರಿಗೆಲ್ಲ ಸರ್ಕಾರದವರು ವಿಧಿಸಿದ ಪ್ರಕಾರಕ್ಕೆ ಆಹಾರ ಧಾನ್ಯಗಳನ್ನೊದಗಿಸುವ ಜವಾಬ್ದಾರಿಯು ಗ್ರಾಮ ಸಮಿತಿಯ ಸದಸ್ಯರ ಮೇಲುಂಟು. ಈ ಕಾರಣ ಗ್ರಾಮದ ಜನಸಂಖ್ಯೆಯ ಲೆಕ್ಕಾ ಚಿಟ್ಟು ಕೇರಿಯವಟ್ಟಿ (Blocklists) ಗಳನ್ನು ಮಾಡಿ ಜನರಿಗೆ ಕಾಳನ್ನೊದಗಿಸಲು, ಕಾಲ ಕಾಲಕ್ಕೆ ಕೇಂದ್ರಡಿಪೋದಿಂದ ಆಹಾರ ಧಾನ್ಯಗಳನ್ನು ತರಬೇಕಾದ ಕರ್ತವ್ಯವಿರುತ್ತದೆ.

ನಾವು ನೋಡಿದ ಅನೇಕ ಹಳ್ಳಿಗಳಲ್ಲಿ ಗ್ರಾಮ ಸಮಿತಿಗಳು ಮತ್ತು ಸದಸ್ಯರು ಕರ್ತವ್ಯ ಶೂನ್ಯರಾಗಿ ರುವುದು ಕಂಡು ಬಂದಿದೆ. ಹರಿಜನರೂ ಇತರ ಪಂಗ ಡಗಳ ಅನೇಕ ಬಡವರೂ, ಕಾಳುಸರಿಯಾಗಿ ಒದಗು ತ್ತಿಲ್ಲವೆಂದೂ ಉಪವಾಸವಿರಬೇಕಾದ. ಹೊತ್ತು ಬಂದಿದೆಯೆಂತಲೂ ದೂರುತ್ತಿರುವರು, ಸಂಭಂಧಿಸಿ ದವರು ಕಾಳಿಲ್ಲದವರ ಪಟ್ಟಿಯನ್ನು ತಯಾರಿಸಬೇಕಾ ದರೆ ಅನೇಕರ ಹೆಸರನ್ನು ಬಿಟ್ಟಿರುವುದು ಗಮನಕ್ಕೆ ಬಂದಿದೆ. ಬೆಳೆಯ ಮತ್ತು ಕಾಳಿನ ಸಂಗ್ರಹದ ಉತ್ಪ್ರೇಕ್ಷೆಯ ಲೆಕ್ಕಗಳು ಕೆಲವೆಡೆಗಳಲ್ಲಿ ತಯಾರಾ ಗುತ್ತಿರುವದು ಸ್ವಾಭಾವಿಕವಿದೆ- ಒಬ್ಬಿಬ್ಬ ಕಳ್ಳರು ಕಾಳನ್ನು ಬಚ್ಚಿಡುವ ಕಾರಣದಿಂದ ಇತರ ರೈತರೂ ಇಂತಹವರೇ ಎಂಬುದಾಗಿ ಅವರನ್ನೂ ವಂದೇ ವರಕೆ ಯಿಂದ ಝಾಡಿಸುವ ಕೆಲಸವಾಗುತ್ತಿರುವುದು ವಿಷಾದ ಕರವಾಗಿದೆ. ಚಿಮ್ಮಿಎಣ್ಣೆಯ ಮುಖವನ್ನು ಅನೇಕ ವರ್ಷಗಳಿಂದ ಕಾಣದ ಹಳ್ಳಿಗರಿರುತ್ತಾರೆ. ಎಣ್ಣೆಯ ಪರಿಸ್ಥಿತಿ ಸುಧಾರಿಸಿರುವುದಾದರೂ, ಹಳ್ಳಿಯ ಡಿಪೋ ಯಜಮಾನರಲ್ಲಿ ಸ್ವಭಾವವು ಬದಲಾಯಿಸಿಲ್ಲ. ಹಳ್ಳಿಗೆ ಬರುವ ಅಲ್ಪ- ಸ್ವಲ್ಪ ಅಕ್ಕಿಯ ಸಂಗ್ರಹವೂ ಮಾಯವಾಗುತ್ತಲಿದೆ. ಇನ್ನು ಪೇ ಊರಲ್ಲಿ ಪ್ರಬಲರಾದ 4-5 ಮನೆಗಳಲ್ಲಿ ಹಂಚಲ್ಪ ಡುವುದು ಎಣ್ಣೆ, ಅಕ್ಕಿಯಮಾತು ಹಾಗಿರಲಿ. ಜನತೆಗೆ ನಿತ್ಯವೂ ಆವಶ್ಯಕವಾಗಿ ಬೇಕಾದ ಆಹಾರ ಧಾನ್ಯಗಳ್ಳೆಹಂಚಿಕೆಯಲ್ಲಿ ಇನ್ನೂ ಅವ್ಯವಸ್ಥೆಯುಂಟು,

ಹಳ್ಳಿಗಳಿಗೆ ಧಾನ್ಯಾದಿಗಳು ಸರಿಯಾಗಿ ಸಕಾ ಲಕ್ಕೆ ಒದಗಿಸಬೇಕೆಂದರೆ ಕೇಂದ್ರ ಡಿಪೋಗಳವರು ಗ್ರಾಮದ ಪೂರ್ತಿಕೆಗೆ ಸಾಕಾಗುವಷ್ಟು ಲೆಕ್ಕದ ಪ್ರಕಾ ರಕ್ಕೆ ಒದಗಿಸುತ್ತಾ ಹೋಗಬೇಕಾದುದು ಅಗತ್ಯವಿದೆ. ಆದರೂ ಇದ್ದ ಸಂಗ್ರಹದಲ್ಲಿ ಸರ್ವ ಸಮುತ್ಪ ದೃಷ್ಟಿ ಯಿಂದ ಎಲ್ಲರಿಗೂ ಸಮನಾಗಿ ಹಂಚುವ ಒಳ್ಳೆಯ ಗುಣವನ್ನು ಗ್ರಾಮ ಡಿಪೋಗಳವರು ಕಲಿಯಬೇಕಾ ಗಿದೆ ದಿನಗೂಲಿಯವರು ಬಾರದವರಿಗೂ ತಡೆದು

ಕಾಳನ್ನು ಕೊಳ್ಳಬೇಕೆಂದರೆ ಕಷ್ಟವಾಗುತ್ತದೆ. ಈ ಕಾರಣ ಕೊನೆಯ ಪಕ್ಷ, ವಾರಕ್ಕೆ ಎರಡು ಸಲವಾದರೂ ಗ್ರಾಮದಂಗಡಿಗಳಲ್ಲಿ ಕಾಳು ದೊರೆಯುವಂತಾಗಬೇಕು. ಗಾಮಡಿಪೋಗಳವರು ತಮ್ಮ ಅಂಗಡಿಗಳನ್ನು ಮುಚ್ಚಿ ಕೊಂಡು ಹೋದರೆ ಅವರನ್ನು ತೆಗೆದು, ಸರಿಯಾಗಿ ಕೆಲಸಮಾಡುವ ಬೇರೆಯವರನ್ನು ನಿಯಮಿಸಬೇಕು. ಕಾಳಿಲ್ಲದವರ ಜನಸಂಖ್ಯೆಯ ಪಟ್ಟಿಯನ್ನು ಪುನರವಿಮರ್ಶಿಸಿ, ಸರಿಯಾದ ಪಟ್ಟಿಗಳನ್ನು ಬರೆಸಲು ಏರ್ಪಾಟಾಗಬೇಕು. ಕಷ್ಟಪಟ್ಟು ದುಡಿಯುವ ಕೂಲಿಗಳಿಗೆಲ್ಲಾ ಪೂರಗಿಟ್ಟೀಸ್ ಆಹಾರ ದೊರೆಯುವಂತಾಗಬೇಕು. ಕೂಲಿಕಾರರಪಟ್ಟಿಯೇ ಬೇರೆಇರಬೇಕು. ಕಲೆಕ್ಟರವರು ಈ ಸೂಚನೆಗಳನ್ನೆಲ್ಲಾ ಮಾನ್ಯ ಮಾಡುವರೆಂದು ಆಶಿಸುತ್ತೇವೆ.

ಸೆಪ್ಟಂಬರ್ 10 ರಳಗಾಗಿ ಗ್ರಾಮಸಮಿತಿಗಳು ಸ್ಥಾಪಿಸಲ್ಪಟ್ಟಿರಬೇಕು. ಯಾವ ಗ್ರಾಮಗಳಾಗಿ ಊರಲ್ಲಿ ದ್ವೇಷಾಸೂಯೆಗಳಿಂದ ಸಮಿತಿಗಳನ್ನು ಸ್ಥಾಪಿಸಲುಸಾಧ್ಯವಿಲ್ಲದೆ ಹೋಗಿದ್ದರೆ ಕಾರಣಗಳನ್ನು ಸೂಚಿಸಿ ಆಗಷ್ಟ್ 28 ರ ಳಗಾಗಿ ಸರಕಾರಕ್ಕೆ ತಿಳಿಸಿರಬೇಕೆಂದು ಸರಕಾರದ ಪ್ರಕಟನೆಯೊಂದು ತಿಳಿಸುತ್ತದೆ.

ಕಾಂಗ್ರೆಸ್ ವಾರ್ತೆಗಳು.

ಪಂಡಿತ ಜವಹರಲಾಲರು ಕೇಂದ್ರಸರಕಾರದ ಮಂತ್ರಿಗಳಾಗಿ ಹೋದ ಕಾರಣ ಆಚಾರ್ಯಕೃಪಲಾನಿಯವರು ಕಾಂಗ್ರೆಸ್ ಅಧ್ಯಕ್ಷರಾಗಲಿರುವರೆಂದು ನಂಬಲಾಗಿದೆ.

ಮಹಾತ್ಮಗಾಂಧಿ ಮತ್ತು ಪಂಡಿತ ಜವಹರಲಾಲ ನೆಹರೂರವರು ವೈಸ್ರಾಯರನ್ನು ಕಂಡು ಕಲ್ಕತ್ತಾದಂಗೆ ಮತ್ತು ಇತರ ಮುಖ್ಯ ವಿಷಯಗಳನ್ನು ಚರ್ಚಿಸಿದರು.

ಜಾತೀಯ ವಿಷಮತೆಯು ಹೆಚ್ಚಿರುವ ಕಾರಣ, ಶಾಂತಿಪಾಯ ಸಂಭವಿಸಬಾರದೆಂದು ಕಾಂಗ್ರೆಸ್ ಮುಖಂಡರ ಭವನಗಳನ್ನು ಪೋಲೀಸರು ಕಾಯುತ್ತಿರುವರು.

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯು ದಿಹಲಿಯ ಗಾಂಧೀಜಿಯವರ ಸದನದಲ್ಲಿ 27 ನೆಯ ತಾರೀ ಸಮಾವೇಶವಾಗಿ ದೇಶದಲ್ಲಿನ ಸದ್ಯದ ಪರಿಸ್ಥಿತಿಯನ್ನೂ ವೈಸ್ರಾಯರ ಅಭಿಪ್ರಾಯವನ್ನೂ ವಿಮರ್ಶಿಸಿತು. ಕಾಂಗ್ರೆಸಿಗರಿಗೆ ಹೇಗೆ ವರ್ತಿಸಬೇಕೆಂಬ ಬಗ್ಗೆ ಸೂಚನೆಗಳು ಹೋಗಲಿವೆ. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನವು ಸೆಪ್ಟಂಬರ್ ೨೭ ಕ್ಕೆ ದಿಹಲಿಯಲ್ಲಿ ಸೇರಲಿದೆ.

ಕಾಂಗ್ರೆಸ್‌ನ ಮಹಾಧಿವೇಶನವು ಸಂಯುಕ್ತ ಪ್ರಾಂತ್ಯದಲ್ಲಿ ನವಂಬರ ೨೨, ೨೩, ೨೪ ಕ್ಕೆ ಸಮಾವೇಶವಾಗಬೇಕೆಂದು ಕಾಂಗ್ರೆಸ್ ಮುಖ್ಯರು ನಿಶ್ಚಯಿಸಿದ್ದಾರೆ. ಸರಿಯಾದ ಸ್ಥಳವನ್ನು ಏರ್ಪಡಿಸುವ ಹೊಣೆಯು ಪ್ರಾಂತೀಯ ಕಾಂಗ್ರೆಸ್‌ನ ಮೇಲಿನದೆ

ಕಲ್ಕತ್ತಾ ಗಲಭೆ—ಪಂಡಿತ ಜವಹರಲಾಲರ ಅಭಿಪ್ರಾಯ.

ಕಾಂಗ್ರೆಸ ಅಧ್ಯಕ್ಷರಾದ ಪಂ. ಜವಹರಲಾಲರು ಪತ್ರಿಕೆಗಳಿಗೆ ಒಂದು ಹೇಳಿಕೆ ಕೊಟ್ಟು ಹಿಂಸೆಯ ಹೊಸ ಸ್ವರೂಪವನ್ನು ಖಂಡಿಸಿದ್ದಾರೆ. ಕಲ್ಕತ್ತೆಯ ಅಮಾನುಷ ಜಿತ್ಯಾಚಾರ ಸಂಹಾರದ ಭಯಾನಕ ದುರಂತಪರಂಪರೆ ಹೊಸಗಿ ಇದರಿಂದ ಸಂಘಟಿತ ಜೀವನವೇ ಅಸಾಧ್ಯವಾಗುವುದು. ಪ್ರತಿಯೊಬ್ಬ ಮಾನವನು ತನ್ನ ಸದಸದ್ವಿವೇಕ ಬುದ್ಧಿಯಿಂದ ಆಲೋಚಿಸಿ ಪರಿಣಾಮಕರ ಕ್ರಮಗಳನ್ನು ತೆಗೆದುಕೊಳ್ಳ ಬೇಕಾದುದು ಅವಶ್ಯಕವಾಗಿದೆ.

ಪ್ರತಿಯೊಂದು ಓಣಿಯ ನಿವಾಸಿಗಳು ಸ್ವರಕ್ಷಣೆಗಾಗಿ ತಮ್ಮತಮ್ಮ ಓಣಿಗಳಲ್ಲಿ ಸಂಘಟಿತರಾಗಬೇಕು. ಅಲ್ಲಿ ವಾಸಿಸುವ ಜನರ ರಕ್ಷಣೆಯನ್ನು ಮಾಡುವುದು ಅವರ ಕರ್ತವ್ಯವಾಗಿರಬೇಕು. ಅಂಥ ಸಮಿತಿಗಳು ಸಹಕಾರ ಮತ್ತು ಆತ್ಮವಿಶ್ವಾಸ ಹುಟ್ಟಿಸುವಂಥಾಗಿರಬೇಕು.

ಮದ್ರಾಸ ಸರಕಾರದ ಗ್ರಾಮ ಸುಧಾರಣೆ ಯೋಜನೆಗಳು.

ಶ್ರೀ ಪ್ರಕಾಶಂ ಅವರ ಭಾಷಣ.

ಪುನರ್ಘಟಿತ ಗ್ರಾಮ ಪಂಚಾಯಿತಿಗಳ ಮುಖಾಂತರ ಗ್ರಾಮಗಳ ಅಭಿವೃದ್ಧಿಯಲ್ಲಿ ಭಾಗವಹಿಸಲು ಗ್ರಾಮಸ್ಥರಿಗೆ ಅವಕಾಶ ಕೊಡುವುದಕ್ಕಾಗಿ ಮದ್ರಾಸ ಸರಕಾರದವರು ಶಾಸನಸಭೆಯ ಅಧಿವೇಶನದಲ್ಲಿ ಒಂದು ಮಸೂದೆಯನ್ನು ತರಲಿದ್ದಾರೆ, ಎಂದು ಮುಖ್ಯ ಮಂತ್ರಿ ಪ್ರಕಾಶಂ ಅವರು ಹೇಳಿದರು.

ಮಸೂದೆಗೆ "ಗ್ರಾಮ ಪ್ರಜಾ ರಾಜ್ಯ ಮಸೂದೆ" ಎಂದು ಹೆಸರಿಡಲಾಗುವದು. ಈ ಮಸೂದೆಯು ಈಗಿರುವ ಪಂಚಾಯತ ಬೋರ್ಡುಗಳನ್ನು ಗ್ರಾಮಸ್ಥರ ಹಿತಕ್ಕಾಗಿ ಹೆಣಗುವ ಸಾರ್ವಜನಿಕ ಸಂಸ್ಥೆಗಳನ್ನಾಗಿ ಮೂರ್ತಿಸುವುದು ಎಂದು ತಿಳಿಸಿದರು.

ಶ್ರೀ ಪ್ರಕಾಶಂ ಅವರು ಇನ್ನೂ ಹೇಳಿದ್ದೇನೆಂದರೆ. ಕೂಲಿಕಾರರ ಏಳಿಗೆಯನ್ನು ಸಾಧಿಸುವ ಹೊಸಮಸೂದೆಗಳನ್ನು ಅಧಿವೇಶನದಲ್ಲಿ ಮಂಡಿಸಲಾಗುವುದು. ಔದ್ಯೋಗಿಕ ತಂಟೆ ಮಸೂದೆ, ಅಂಗಡಿ ಗುಮಾಸ್ತರ ಮಸೂದೆ' ವಾರದ ರಜೆಯ ಮಸೂದೆ; ಹೆರಿಗೆ ಸೌಕರ್ಯದ ಮಸೂದೆ. ಮೊದಲಾದುವುಗಳು ಇವುಗಳಲ್ಲಿ ಮುಖ್ಯವಾಗಿರುವುವು.

ಉಚ್ಚಶಿಕ್ಷಣದ ಬಗ್ಗೆ ಒಂದು ಯೋಜನೆಯನ್ನು ತಯಾರಿಸಲು ಪ್ರಸಿದ್ಧ ಶಿಕ್ಷಣ ತಜ್ಞರು ಹಾಗೂ ಪ್ರಾಂತದಲ್ಲಿರುವ ಮೂರು ವಿಶ್ವವಿದ್ಯಾಲಯಗಳು ವೈಸ ಚಾನ್ಸಲರರನ್ನೊಳಗೊಂಡು ಒಂದು ಸಮಿತಿಯನ್ನು ನೇಮಿಸಲಾಗಿದೆ.

ದೇಶೀಯ ಔಷಧಗಳ ಬಗ್ಗೆ ಕೇಂದ್ರ ಸಂಶೋಧನಾಲಯವನ್ನು ಮದ್ರಾಸದಲ್ಲಿ ತೆರೆಯಲಾಗುವದು ಪ್ರಾಂತದಲ್ಲಿ ಐದು ಹಿಂದೀ ವೈದ್ಯಶಾಲೆಗಳನ್ನು ಸ್ಥಾಪಿಸಲಾಗುವದು. ಆಯುರ್ವೇದದಲ್ಲಿ ಪೋಷ್ಟ ಗ್ರಾಜುಯೇಟ ಶಿಕ್ಷಣವನ್ನು ಏರ್ಪಡಿಸಲಾಗುವದು

ಮೂರು ವರ್ಷಗಳಲ್ಲಿ ಪ್ರಾಂತದಲ್ಲೆಲ್ಲ ಪಾನ ನಿರೋಧವನ್ನು ಜಾರಿಗೆ ತರಲಾಗುವದು. ಎಂಟು ಜಿಲ್ಲೆಗಳಲ್ಲಿ ಇದೇ ಅಕ್ಟೋಬರ ೧ ನೇ ತಾರೀಖಿನಿಂದ ಪಾನ ನಿರೋಧವು ಬಳಕೆಯಲ್ಲಿ ಬರುವದು. ಇದಕ್ಕೆ ೫. ೦೦ ಕೋಟಿ ರೂ ಗಳ ವೆಚ್ಚ ತಗಲುವದು (ಮೂರಾಟಕರದ ಉತ್ಪನ್ನವಾದರೂ ಇಷ್ಟೇ ಇದೆ.)

ಖಾದಿ ಯೋಜನೆಗಾಗಿ ೩ ಕೋಟಿ ರೂಪಾಯಿಗಳನ್ನು ತೆಗೆದಿಡಲಾಗಿದೆಂದೂ ಇದರಿಂದ ಹಳ್ಳಿಗರ ಸುಧಾರಣೆಯಾಗಲಿದೆಯೆಂದೂ ಶ್ರೀ ಪ್ರಕಾಶಂ ಅವರು ಹೇಳಿ ತಮ್ಮ ಭಾಷಣ ಮುಗಿಸಿದರು.

ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಸಮಿತಿ.

ಜಿಲ್ಲಾಬೋರ್ಡು ಮತ್ತು ಮುನಿಸಿಪಾಲಿಟಿಗಳ ಚುನಾವಣೆಯಲ್ಲಿ ಕಾಂಗ್ರೆಸ್ ಭಾಗವಹಿಸೆಬಾರದೆಂದೂ ಹೊಸಪೇಟೆಯಲ್ಲಿ ನಡೆದ ಸಭೆಯಲ್ಲಿ ನಿಶ್ಚಯವಾಯಿತು. ತುಂಗಭದ್ರಾ ಯೋಜನೆಯಬಗ್ಗೆ ಉಪಯುಕ್ತವಾದುದನ್ನು ಏಕೆ ಕೈಗೊಳ್ಳಲಿಲ್ಲವೆಂಬುದರ ಸ್ಪಷ್ಟೀಕರಣ ಕೇಳಲು ಮದ್ರಾಸಿಗೆ ಒಂದು ಶಿಷ್ಟಮಂಡಲ ಹೋಗಬೇಕೆಂಬ ನಿರ್ಣಯವಾಯಿತು. ಕೇಂದ್ರದಲ್ಲಿ ತಾತ್ಕಾಲಿಕ ರಾಷ್ಟ್ರೀಯ ಸರಕಾರವನ್ನು ರಚಿಸಿದುದಕ್ಕಾಗಿ ಕಾಂಗ್ರೆಸನ್ನು ಅಭಿನಂದಿಸುವ ನಿರ್ಮಾನವಾಯಿತು.

ಬಳ್ಳಾರಿ ವೀರಶೈವ ಕಾಲೇಜು ನಿಧಿ.

ವಾಗ್ದಾನ ಮಾಡಿದ ದಾತರು.

ಶ್ರೀ ಸೌದ್ರಿಮಹಂತಪ್ಪನವರು, ಕಣೇಕಲ್ಲು	೧೦,೦೦೦
ಶ್ರೀ ಎಲೆ ಮಲ್ಲೇಶಪ್ಪನವರು, ಆದವಾನಿ.	೧೦,೦೦೦
ಶ್ರೀ ಜಿ. ಯಂ. ಶರಭಣ್ಣನವರು, ಎಮ್ಮಿಗನೂರು.	೨,೫೦೦
ಶ್ರೀ ಕ್ಯರುಫಳಿಪ್ಪನವರು, ,,	೨,೦೦೦
ಶ್ರೀ ವಜ್ರಗಿರಿ ಶರಭಣ್ಣನವರು, ,,	೧,೫೦೦
ಶ್ರೀ ಗುರುಲಿಂಗಪ್ಪನವರು, ..	೧೦೦

Municipal Sweepers & Scavengers Union, Bellary.

An earnest appeal to the Municipal Councillors & Citizens of Bellary.

We have issued the notice of a strike to the municipal authorities to take effect from 10-9-46 after days of deliberation and finding our efforts through petitions, addresses & deputations since 1935, futile. The very fact that we have been patiently agitating for the past 10yrs or more and using the good offices of every minister, who came, to get our grivances redressed. confirms beyond doubt the genuiness of our contemplated strike which is neither communist inspired nor a part of whirlwind of strikes. The presentation of a memorandum of grievances to the Hon'ble Sri V. Kurmaiah minister for Harijan uplift, in the presence of the municipal commissioner and the visit of our present collector to learn at first hand our miserable condition, are very recent events:

The municipality continues to be indifferent & negligent towards our interests inspite of our peaceful and best endevours all these years and the result is we are where we were. The monthly basic pay of Rs. 8, 9, 10 & 11 is unchanged while every one in every imaginable department inclusive of the freshly created ones got several increments in conformity with the periodical rise in the prices of necessaries of life.

About our housing conditions less said the better In absence of the Municipal quarters, we tried to secure about 10 to 15 acres on the left bank of the road to Gonhal (continuation of Goldsmith street) behind the bungalow of the conservator of forests which is the only available sanitary site & for which we have been corresponding with the Govt. since 1937, but nothing has materialised so far- we continue to live in the most insanitary & filthy quarters where all the town-drains with their stinking and nauseating water breed terrible and fierce mosquitoes to harass us. We do not know how to thank the municipality for this gift.

Our youths though educated are denied employment either as Sanitary Maistries or as peons & almost always illeterates are prefered. Our children have been denied the fecilities of even Elementary Education and only one school meant for us was closed a few years ago, the demolition of the fine building and the sale of stones & material (site also?) are the solid achievements of the municipality Service rules & provident fund do not apply to us & there is no medical inspection when we are dispensed with for age or disability. Added to all this we get only 12 ounces of food grains. Our miserable plight can better be imagined.

Our demands are just and reasonable and we request your co-operation in the name of humanity for the fulfilment of the same.

OUR DEMANDS.

1. The sweepers must be paid the monthly basic salary of Rs 30/- and all the rest Rs. 35/-

2. Service rules in conformity with other services should be introduced with the provident fund fecilities.

3. We must immediately be given a decent and sanitary site to build houses preferably behind the bungalows of the conservator of forests.

4. Our educated youths also, should be appointed as peons & sanitary maistries.

5. Annually two uniforms should be given and fecilities afforded for washing after the daily work.

6. Maternity leave of 3 months should be sanctioned, 1½ months before 1½ months after delivery.

7. With the increase in population and the area of the town, adequate number of emyloyees should be employed.

8. Scavenging work must be on an equitable basis & the scavenger should not be converted as a sweeper the same day.

9. We want an elementary school in or near our colonies

10. As we work under exceptionally bad conditions we must be treated as heavy manual labourers & we must be given full 16 ounces of food grains.

Municipal Sweepers & Scavengers etc; BELLARY.

Strike notice withdrawn.

On 21 st Aug' 46. The municipal Commissioner and Health officer met the members of the strike committee and persuaded them to withdraw their strike in view of the appointment by the Govt. of Madras of a Coinciliation Board to to enquire into their grievances. They also said that the other demands in regard to the site to build houses, provident fund and educational fecilities etc., were being favourably considered by the Council and they were shortly opening the schools in Harijan colonies. The Hon'ble Sri V. Kurmaiah also wrote to the Secretary of the Municipal sweepers and scavengers union that the Coinciliation Board was considering their grievances. The strike Committee met on 24-8-1946 and resolved to withdraw the notice in view of the above circumstances hoping that all their demands would be met favourably and the resolution was conveyed to the Municipal authorities.

ಪ್ಲಾಂಟರ್ಸ್ ಕಾಫಿ.

ಮೈಸೂರು ದೇಶದ ಮತ್ತು ನೀಲಗಿರಿ ಪ್ರಾಂತದ ಎತ್ತರವಾದ ಪರ್ವತ ಪ್ರದೇಶಗಳಲ್ಲಿ ಬೆಳೆದ ಶ್ರೀಪ್ಲ್ಯಾಂಟರ್ಸ್ ಕಾಫಿಯು ಈಗ ಚಿಲ್ಲರೆಯಾಗಿ ಮುಖ್ಯ ವರ್ತಕರಲ್ಲೆಲ್ಲಾ ಶೀಲಾದ ಪ್ಯಾಕೆಟ್ಟುಗಳಲ್ಲಿ ಈ ಕೆಳಗಿನ ದರಗಳಿಗೆ ದೊರೆಯುತ್ತಿದೆ.

೧ ಪ್ಲಾಂಟರ್ಸ್ ಎಕ್ಸ್‌ಟ್ರಾಸ್ಪೆಶಲ್ ಪೌಂಡು ೧ ಕ್ಕೆ ರೂ. 1—8—6

೨ ಪ್ಲಾಂಟರ್ಸ್ ಬ್ಲೆಂಡ್ ,, 1—5—6

೩ ರೋಬಸ್ಟ ಪಾವ್ಡರ್ ,, 1—3—6

ಪ್ಲಾಂಟರ್ಸ್ ಡಿಸ್ಟ್ರಿಬ್ಯೂಟರ್ಸ್,
ಕೆರೆಕಟ್ಟೆ ಬೀದಿ, ಬಳ್ಳಾರಿ.

ರಾಷ್ಟ್ರೀಯ ಸರಕಾರ.

ಅಭಿನಂದನೆ

ಪ್ರಪಂಚದ ಎಲ್ಲಾಭಾಗಗಳಿಂದಲೂ, ಭಾರತ ರಾಷ್ಟ್ರೀಯ ಸರಕಾರವನ್ನು ಅಭಿನಂದಿಸುವ ಸಂದೇಶಗಳು ಬರುತ್ತಲಿವೆ.

'ಶಿಯಾ' ವಿದ್ಯಾರ್ಥಿ ಮಹಾ ಮಂಡಲದ ಕಾರ್ಯಕಾರೀಸಭೆಯು ಸೇರಿ ಪ್ರಥಮ ರಾಷ್ಟ್ರೀಯ ಸರಕಾರದಲ್ಲಿ ಅಖಿಲ ಭಾರತ ಶಿಯಾ ರಾಜಕೀಯ ಪರಿಷತ್ತಿನ ಅಧ್ಯಕ್ಷರಾದ ಸೈಯದ್ ಅಲಿ ಜಹೀರರನ್ನು ಮಂತ್ರಿಗಳನ್ನಾಗಿ ಆರಿಸಿದ್ದಕ್ಕೆ ತನಗಾದ ಮಹಾನಂದವನ್ನು ವ್ಯಕ್ತಪಡಿಸಿ ಶಿಯಾ ಪಂಥದವರಿಗೆ ನ್ಯಾಯ ತೋರಿಸಿದ್ದಕ್ಕೆ ಕಾಂಗ್ರೆಸ್ಸಿಗೆ ವಂದನೆಗಳನ್ನರ್ಪಿಸಿ, ಜಹೀರರನ್ನು ಅಭಿನಂದಿಸಲಾಯಿತು.

ಹರಪನಹಳ್ಳಿ:—ಬಸವೇಶ್ವರ ವಾಚನಾಲಯವು ಸ್ಥಾಪಿಸಲ್ಪಟ್ಟಿದೆ. ಶ್ರೀ ವೈದ್ಯ ಅನಂತಗಿರಿಯವರು 'ಮ್ಯುಸಿಕ್ ಅಕಾಡೆಮಿ' ಎಂಬ ಹೆಸರಿನಿಂದ ಒಂದು ಸಂಗೀತ ಶಿಕ್ಷಣಶಾಲೆಯನ್ನು ಏರ್ಪಡಿಸಿದ್ದಾರೆ.

— ಶಾಂತಿ ಪರಿಷತ್ತು —
ಅಶಾಂತಿಯ ವಾತಾವರಣ.

ಫ್ರಾನ್ಸ್‌ದೇಶದ ಪ್ಯಾರಿಸ್ ನಗರದಲ್ಲಿ ಸಮಾವೇಶವಾಗಿರುವ ಶಾಂತಿಪರಿಷತ್ತಿನಲ್ಲಿ ಒಂದು ಕಡೆ ಅಮೆರಿಕಾ ಬ್ರಿಟನ್, ಮತ್ತೊಂದು ಕಡೆ ರಷ್ಯಾ, ತಮ್ಮ ಸ್ವಾರ್ಥಸಾಧನೆಗಾಗಿ, ಅಧಿಕಾರಲಾಲಸೆಗಾಗಿ ಜಗ್ಗಾಡುತ್ತಲಿವೆ. ಯುದ್ಧವು ಮುಗಿದು ಒಂದು ವರ್ಷದ ವಾದರೂಶಾಂತಿಯ ಲಕ್ಷಣಗಳೇ ಇಲ್ಲ. ಎ. ಪಿ. ಎ. ಸುದ್ದಿಗಾರಾದ ರಿಲ್ಮನ್ ವೋರಿನ್‌ರವರು ಹೀಗೆ ಬರೆಯುತ್ತಾರೆ. **"ಶಾಂತಿ ಪರಿಷತ್ತು ನಿಶ್ಚಿತವಾಗಿ ಕುಸಿದು ಬಿದ್ದಂತಾಗಿದೆ. ಪ್ಯಾರಿಸ್ ನಗರದಲ್ಲಿ ಸೇರಿರುವ ಪರದೇಶದವರೂ, ಮತ್ತು ಫ್ರೆಂಚರೂ ಒಬ್ಬೊಬ್ಬರೂ ಸ್ಥಾನಗಳನ್ನೆಲ್ಲಾ ಅರಿತು ಆತ್ಯಂತ ಖಿನ್ನವದನರಾಗಿರುತ್ತಾರೆ. ಮೂರನೆಯ ಮಹಾಯುದ್ಧವು ಅತಿ ಶೀಘ್ರದಲ್ಲೇ ಬರುವುದೆಂದು ಅವರ ನಂಬಿಕೆ. ಈ ವರ್ಷ ಅಥವಾ ಬರುವ ವರ್ಷ ವಲ್ಲದಿದ್ದರೂ, ನಿಕಟ ಭವಿಷ್ಯದಲ್ಲಿ ಮತ್ತೆ ಯುದ್ಧವಾಗಲಿರುವುದೆಂದು ಬೀದಿಯಲ್ಲಿನ ಸಾಮಾನ್ಯ ಮನುಷ್ಯನಿಗೆ ಗೊತ್ತಿದೆ.**

ಜಿನ್ನಾರವರ ಪ್ರಲಾಪ

ಮುಸ್ಲಿಂಲೀಗಿನ ಅಧ್ಯಕ್ಷರಾದ ಮಿ॥ ಜಿನ್ನಾರವರು ರಂಜಾನ ಹಬ್ಬದ ಸಮಯದಲ್ಲಿ ಒಂದು ಸಂದೇಶವಿತ್ತು ಮುಸಲ್ಮಾನರು ಹೆಚ್ಚಿನ ಒಕ್ಕಟ್ಟಿನಿಂದಿರಬೇಕೆಂದು ಕೋರಿರುವರು. ವೈಸ್ರಾಯರೂ, ಬ್ರಿಟಿಷ್ ಸರ್ಕಾರದವರೂ, ಹಿಂದೂಸ್ಥಾನದಲ್ಲಿ ಕಾಂಗ್ರೆಸ್ಸಿಗೆ ರಾಜ್ಯಭಾರ ಸೂತ್ರಗಳನ್ನು ವಹಿಸಿ ಮುಸಲ್ಮಾನರನ್ನು ವಂಚಿಸಿದ್ದಾರೆ. ನಾವು ಈ ಸಮಯದಲ್ಲಿ ಎದೆಗುಂದಬಾರದು. ಧೈರ್ಯವಾಗಿ ಹೋರಾಟವನ್ನು ಸಾಗಿಸಬೇಕು.

ಗಿಡಗಳನ್ನು ಕಡಿಯಬಾರದು.

ರೈತರ ವಶದಲ್ಲಿರುವ ಬೀಳು ಅಥವಾ ಅರಣ್ಯ ಪ್ರದೇಶದಲ್ಲಿರುವ ಗಿಡಗಂಟೆಗಳನ್ನು ಕತ್ತರಿಸಿ ಅದನ್ನು ನಿರುಪಯುಕ್ತ ಮಾಡದಂತೆ ಮದ್ರಾಸ್ ಮಂತ್ರಿವರ್ಗದವರು ಈ ಅಧಿವೇಶನದಲ್ಲಿ ಒಂದು ಶಾಸನವನ್ನು ತರಲಿದ್ದಾರೆ.

ಭಾರತಕ್ಕೆ ಅಕ್ಕಿ.

ಅಂತರಾಷ್ಟ್ರೀಯ ಆಹಾರ ಸಮಿತಿಯವರು ಬರ್ಮಾ– ಸಯ್ಯಾಂ ಮತ್ತು ಬ್ರೆಜಿಲಗಳಿಂದ ಹಿಂದೂಸ್ತಾನಕ್ಕೆ ಎರಡುಲಕ್ಷ ಎಪ್ಪತ್ತುಸಾವಿರ ಟನ್ ಅಕ್ಕಿ ಕಳುಹಿಸಲು ಏರ್ಪಡಿಸಿರುವರು. ಸಯಾಮದಿಂದ ಈವರ್ಷದ ಅಂತ್ಯದೊಳಗಾಗಿ 1,50000 ಟನ್ ಅಕ್ಕಿ ಬರಬೇಕಾಗಿದೆ. ಮದ್ರಾಸಿನಿಂದ ಬರ್ಮಾಕ್ಕೆ ಈ ಉದ್ದೇಶ ಹೋಗಿದ್ದ ಮಿ॥ ಡಿಕ್ಸನ್‌ರವರು ಬರ್ಮಾದಿಂದ ಹೆಚ್ಚಿನ ಅಕ್ಕಿ ಬರಬಹುದೆಂಬ ಭರವಸೆ ಇತ್ತಿರುವರು.

ಸರ್ ಶಾಫತರ ಘಾಯ ನೂಯುತ್ತಲಿದೆ.

" ಇಂಥಾ ೨೦ ದಾಳಿಗಳಿಂದಲೂ ನಾನು ಎದೆಗುಂದುವಂತಿಲ್ಲ. ನಾನು ಯಾವ ಉದ್ದೇಶ ಸಾಧನೆಗಾಗಿ ರಾಷ್ಟ್ರೀಯ ಸರಕಾರವನ್ನು ಸೇರಿರುವೆನೋ ಅದರಿಂದ ಹಿಂಜರಿಯುವಂತಿಲ್ಲ " ಎಂಬುದಾಗಿ ಕೇಂದ್ರಮಂತ್ರಿಗಳಲ್ಲೊಬ್ಬರಾದ ಸರ್ ಶಾಫತ ಅಹಮ್ಮದ್ ಖಾನರು ಪತ್ರಿಕಾವಿಲೇಖರಿಗೆ ಹೇಳಿದರು. ಅವರ ಘಾಯಗಳು ನೂಯುತ್ತಲಿದ್ದು ಗುಣಮುಖವಾಗುತ್ತಲಿರುವರು.

ನವಭಾರತದ ಚಂದಾದಾರರಾಗಿರಿ.

ಬಳ್ಳಾರಿ ವೀರಶೈವ ಕಾಲೇಜು.

ಕಾಲೇಜಿನ ವಿವಿಧ ಸಂಸ್ಥೆಗಳವರು ಏರ್ಪಡಿಸಿದ ಸಾಮೂಹಿಕ ಸಭೆಯಲ್ಲಿ ಶ್ರೀ ಟಿ. ಸುಬ್ರಮಣ್ಯಂ ರವರು ವಿದ್ಯಾರ್ಥಿಗಳಿಗೆ ಸಮಯೋಚಿತ ಉಪದೇಶವನ್ನಿತ್ತರು. "ಜಾತೀಯತೆಯು ಕೂಗಿಗೂ, ಪ್ರಜಾರಕ್ಕೂ ಒಳಗಾಗಬಾರದು. ನಿಜವಾದ ರಾಷ್ಟ್ರೀಯತ್ವದ ಮಹತ್ವವನ್ನರಿತು ತತ್ವಾವಲಂಬಿಗಳಾಗಬೇಕು. ಆಧುನಿಕ ಯಂತ್ರಯುಗದಲ್ಲಿ ವಿಜ್ಞಾನವು ರಚನಾತ್ಮಕ ವಿರದೆ ವಿಘಾತಕವಾಗಿದೆ. ವಿದ್ಯಾರ್ಥಿಗಳು ಇದನ್ನರಿಯಬೇಕು. ತಾರುಣ್ಯದಲ್ಲಿ ಉಕ್ಕೇರುತ್ತಿರುವ ಉತ್ಸಾಹದ ದುರುಪಯೋಗವು ಎಂದೂ ಆಗಬಾರದು "ಅಧ್ಯಕ್ಷತೆಯನ್ನು ವಹಿಸಿದ ಶ್ರೀ ಭಾಯಪ್ಪನವರು ಸ್ವಾರೋಪ ಭಾಷಣಮಾಡಿ ಉಪನ್ಯಾಸಕರನ್ನು ವಂದಿಸಿದರು, ಶ್ರೀ ಬಸವರಾಜ್ ವಿದ್ಯಾರ್ಥಿಗಳ ಪರವಾಗಿ ವಂದನಾರ್ಪಣೆ ಮಾಡಿದನು.

ಕರ್ನಾಟಕ ಏಕೀಕರಣ ಮತ್ತು ಅಖಿಲ ಕರ್ನಾಟಕದ ಸಮಸ್ಯೆಗಳನ್ನು ವಿಮರ್ಶಿಸಿ ನಿರ್ಣಯಕ್ಕೆ ಬರಲು ದಾವಣಗೆರೆಯಲ್ಲಿ ಕರ್ನಾಟಕಸ್ಥರ ಮಹಾಸಭೆಯು 31-8-46 ಕ್ಕೆ ಸಮಾವೇಶವಾಗಿತ್ತು.

ಕೈಮಗ್ಗದ ಬಟ್ಟೆ, ಕಂಟ್ರೋಲ ಬೆಲೆ.

ಸರಕಾರದವರು ಕೈಮಗ್ಗದಿಂದ ತಯಾರಾದ ಬಟ್ಟೆಗಳನ್ನು ಸ್ವೇಚ್ಛೆಯಾಗಿ ಮಾರಲು ಅವಕಾಶವಿಲ್ಲದಂತೆ ಒಂದು ಶಾಸನ ಮಾಡಿದ್ದಾರೆ. ಬಟ್ಟೆಯು ತಯಾರಾದ ಬೆಲೆಗಿಂತ ಶೇಕಡ ೧೫ ಕ್ಕೆ ಮೀರದಂತೆ ಹೆಚ್ಚಿಸಿ ನಿರಂಕಿಗಳಿಗೆ ಮೂರತಕ್ಕದ್ದು.

ಮದ್ರಾಸ್ ಪ್ರಾಂತ್ಯದ ಮ್ಯುನಿಸಿಪಾಲ್ಟಿ ಜಿಲ್ಲಾಬೋರ್ಡು ವಗೈರೆ ಸ್ಥಾನಿಕ ಸಂಸ್ಥೆಗಳಲ್ಲಿರುವ ಕಸಗುಡಿಸುವವರು ಮತ್ತು ತೋಟಿಗಳ ಸಂಬಳವನ್ನು ಶೇಕಡ ೩೩ ರಷ್ಟು ಹೆಚ್ಚಿಸಬೇಕೆಂದು ನಿಶ್ಚಯಿಸಿರುವರು.

ಮದ್ರಾಸ್ ಸ್ಥಾನಿಕ ಸಂಸ್ಥೆಗಳು.

ಇನ್ನು ಮೇಲೆ ಸರಕಾರದವರು ಸದಸ್ಯರನ್ನಾರಿಸುವುದಿಲ್ಲ.

ವಿಶೇಷ ಪರಿಸ್ಥಿತಿಗಳಲ್ಲಿ ಜಿಲ್ಲಾ ಬೋರ್ಡು ಮತ್ತು ಮ್ಯುನಿಸಿಪಾಲಿಟಿಗಳಿಗೆ ಸರಕಾರದವರು ನಾಮಕರಣದ ಸದಸ್ಯರನ್ನಾರಿಸಿ ನಿಯಮಿಸುತ್ತಿದ್ದರು. ಇನ್ನು ಮುಂದೆ ಸರಕಾರದವರು ಹೀಗೆಮಾಡಲಿಕ್ಕೆ ಬರದಂತೆ ಕಾನೂನಿನಲ್ಲಿ ಸವರಣೆಮಾಡಿ ಸದಸ್ಯರು ಆರಿಸಿ ಬರತಕ್ಕದ್ದೆಂದು ನಿಶ್ಚಯಿಸಿದ್ದಾರೆ. ಈಗ ಸ್ಥಾನಿಕ ಸಂಸ್ಥೆಗಳಲ್ಲಿ ಅಧಿಕಾರಾರೂಢರಾಗಿರುವವರು ತಮ್ಮ ಪ್ರತಿಭೆಯನ್ನು ಉಪಯೋಗಿಸಿ ಚುನಾವಣೆಗಳಲ್ಲಿ ನಿಷ್ಪಕ್ಷಪಾತವಾದ ಚರ್ಯೆಗೆ ಅಡ್ಡಬರುವರೆಂಬ ಕಾರಣದಿಂದ ಸರ್ಕಾರದವರು ಈಗಿರುವವರನ್ನು ಮನೆಗೆ ಕಳುಹಿಸಿ ಸದರಿ ಸಂಸ್ಥೆಗಳಿಗೆ ಸ್ಪೆಶಲ್ ಆಫೀಸರವರನ್ನು ಏರ್ಪಡಿಸಲಿರುವರು.

ಸಂಬಂಧಿಸಿದ ಸವರಣೆಯು ಸೆಪ್ಟಂಬರ್ ಅಧಿವೇಶನದಲ್ಲಿ ಬರತಕ್ಕದ್ದಿದೆ.

ಮದ್ರಾಸಿಗೆ 6000 ಟನ್ ಅಕ್ಕಿ.

ಮದ್ರಾಸ ಪ್ರಾಂತದ ಬಳಕೆಗಾಗಿ ಕರಾಚಿಯಿಂದ **ಜಲಗಂಗಾ,** ಎಂಬ ನಾಮಧೇಯದ ಹಡಗು 6000 ಟನ್ ಅಕ್ಕಿನ ಸಂಗ್ರಹದೊಂದಿಗೆ ಕೊಚಿನ್ ಬಂದರನ್ನು ಮುಟ್ಟಿದೆ. ದಕ್ಷಿಣ ಇಂಡಿಯಾ ರೈಲ್ವೆ ಮುಷ್ಕರವಿರುವದರಿಂದ ಪಂಚಿಕೆಯಲ್ಲಿ ತಡವಾಗಬಹುದು.

ಬೊಂಬಾಯಿಯಲ್ಲಿ ದಂಗೆಕೋರರಿಗೆ ಅನುಕೂಲವಾಗಲೆಂಬ ಕಾರಣದಿಂದಲೋ ಏನೋಎಂಬಂತೆ ಅಲಿಫರ ಮತ್ತು ವಜೀರಾಬಾದಕಡೆಯಿಂದ ಹೆಸರಿಲ್ಲದೆ (Self) ಬಂದ ನೂರಾರು ಪೆಟ್ಟಿಗೆಗಳ ಚಾಕು ಕತ್ತಿಗಳನ್ನು ಪೋಲೀಸರು ಸತ್ತೆ ಹಚ್ಚಿರುವರು.

ಕಾಮಲಾಪುರದ ಹರಿಜನ ಮಹಾಸಭೆಯಲ್ಲಾದ ತೀರ್ಮಾನಗಳು.

(ಕಳೆದ ಸಂಚಿಕೆಯಿಂದ)

12. ಹೋಟಲ ಮತ್ತು ಇತರ ತಿಂಡಿ, ತಿನಸುಗಳನ್ನು ಮಾರುವ ಅಂಗಡಿಗಳಲ್ಲಿ ನಮಗೆ ಪ್ರವೇಶವಿಲ್ಲದೆ, ಇತರ ಎಲ್ಲಾ ಜಾತಿಗಳವರಿಗೆ ಸೌಕರ್ಯವಿರುವ ಕಾರಣ ಅವುಗಳಿಗೆ ಲೈಸನ್ಸ್ ಕೊಡುವ ಮೊದಲು ಎಲ್ಲಾ ಜಾತಿಯವರಿಗೆ ಅವು ತೆರೆದಿಡಬೇಕೆಂಬ ಶರ್ತು ಹಾಕಲು, ಸ್ಥಾನಿಕ ಸಂಸ್ಥೆಗಳವರಿಗೆ ಸರ್ಕಾರವು ಕಟ್ಟಾಯವಾದ ಆಜ್ಞೆ ಮಾಡಬೇಕು.

13. ಜಿಲ್ಲಾ ಬೋರ್ಡು, ಮುನಿಸಿಪಾಲಿಟಿಗಳಲ್ಲಿ ನಮಗಾಗಿ ಹೆಚ್ಚಿನ ಸ್ಥಾನಗಳನ್ನು ಕಾದಿಡಬೇಕು. ಜನಸಂಖ್ಯೆಗನುಗುಣವಾಗಿ ನಮಗೆ ಕೊಡಬೇಕು.

14. ಹರಿಜನರೆಲ್ಲಾ ಕಷ್ಟದ ಕೂಲಿ ಕೆಲಸ ಮಾಡುವವರಾದ ಕಾರಣ ಅವರಿಗೆ ಆಹಾರಧಾನ್ಯಗಳು ಸಾಲುವಂತಿಲ್ಲ. ಈ ಕಾರಣ ಪೂರ್ಣವಾಗಿ 16-ಔನ್ಸುಗಳ ಆಹಾರವಾದರೂ ದೊರೆಯಬೇಕು.

15. ನಮ್ಮ ಉದ್ಧಾರಕ್ಕಾಗಿ ಏರ್ಪಡಿಸಿದ ಲೇಬರ್ ಶಾಖೆಯು ಭಾವಿ, ಲೇಬರ್ ಶಾಲೆಗಳ ವಿನಹಾ ಬೇರೆ ಕೆಲಸ ಮಾಡುತ್ತಿಲ್ಲ. ಅಲ್ಲದೆ 2, 3 ತಿಂಗಳಿಗೊಂದು ಸಲ ಜಿಲ್ಲಾ ಲೇಬರ್ ಆಫೀಸರವರು ಬದಲಾಗುತ್ತಲಿದ್ದು ಅಲ್ಲಿ ಗುಮಾಸ್ತರ ರಾಜ್ಯಭಾರವಿದೆ. ಈ ಕಾರಣ 3 ವರ್ಷಗಳವರೆಗಾದರೂ ಖಾಯಂ ಆಫೀಸರವರನ್ನಿಟ್ಟು ಹರಿಜನೋದ್ಧಾರಕ್ಕೆ ಸಂಬಂಧಿಸಿದ ಅಂಶಗಳನ್ನೆಲ್ಲಾ ಅವರಿಗೆ ಒಪ್ಪಿಸಬೇಕು.

16. ಹರಿಜನೋದ್ಧಾರ ಶಾಖೆಯೇ ಬೇರ್ಪಟ್ಟು ಜಿಲ್ಲಾ ಲೇಬರ್ ಆಫೀಸರವರು ಜಿಲ್ಲೆಯಲ್ಲಿನ ಹರಿಜನರ ಸಮಸ್ತ ಕುಂದುಕೊರತೆಗಳನ್ನೂ ವಿಚಾರಿಸಲು ಅಧಿಕಾರವನ್ನು ಹೊಂದಿ ಪ್ರಾಂತದ ಶಾಖೆಯ ಕೆಳಗೆ ನೇರವಾಗಿ ಕೆಲಸ ಮಾಡಬೇಕು. ಈ ಕಾರಣ ಜಿಲ್ಲೆಯಲ್ಲಿ ಹರಿಜನರ ಸಮಸ್ಯೆಗಳನ್ನು ಬಲ್ಲ, ಸಮಾಜ ಸುಧಾರಣೆಯ ಹಂಬಲವುಳ್ಳ, ಹರಿಜನ ಸೇವೆಯನ್ನು ಹೃತ್ಪೂರ್ವಕ ಮಾಡಬಲ್ಲ, ಸ್ವತಂತ್ರ ಪ್ರವೃತ್ತಿಯುಳ್ಳವರನ್ನು ಲೇಬರ್ ಆಫೀಸರವರ ಕೆಲಸಕ್ಕೆ ಏರ್ಪಡಿಸಬೇಕು.

17 ನಮ್ಮ ಮಕ್ಕಳ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ತೃಪ್ತಿಕರವಾದ ಏರ್ಪಾಟುಗಳು ಎಲ್ಲಿಯೂ ಆಗಿಲ್ಲ. ನಮ್ಮ ಕೇರಿಯಿಂದ ಬೋರ್ಡ ಯೂ ಗ್ರಾಂಟ್ ಶಾಲೆಗಳು ದೂರವಿದ್ದು ಶಿಕ್ಷಣಕ್ಕೆ ಅನುಕೂಲವಿಲ್ಲ. ಎಲ್ಲರು ಕಲೆಯಬೇಕೆಂಬ ತತ್ವವು ಮಾನ್ಯವಿದ್ದರೂ ಅಗತ್ಯವಿರುವ ಎಲ್ಲಾ ಊರುಗಳಲ್ಲಿಯೂ ಪ್ರಾಥಮಿಕ ಶಾಲೆಗಳು ಏರ್ಪಟ್ಟು ಮಧ್ಯಾಹ್ನದ ಊಟಕ್ಕೆ ಸೌಕರ್ಯವೊದಗಬೇಕು.

ಹರಿಜನ ವಿದ್ಯಾರ್ಥಿಗಳಿಗೆ ಉಡುಪು ಕಲೆಕ್ಟರವರ ಸೂಚನೆ.

ಆಲೂರಿನಲ್ಲಿ ಹರಿಜನ ವಿದ್ಯಾರ್ಥಿಗಳಿಗೆ ಸಾಕಷ್ಟು ಉಡುಪಿಲ್ಲದೆ ಕಷ್ಟಕ್ಕೀಡಾಗಿರುವರೆಂಬುದನ್ನು ಸ್ವತಃ ನೋಡಿ ಜಿಲ್ಲೆಯಲ್ಲಿನ ಹರಿಜನ ಹೊಸ್ಟೆಲ್‌ಗಳಲ್ಲಿರುವ ಬಾಲಕರಿಗೆ ಬಟ್ಟೆಗಳನ್ನು ಕೊಡಿಸಬೇಕೆಂದೂ ತಾವು ½ ಭಾಗ ಸಹಾಯನೂಡಿದರೆ, ಸಾರ್ವಜನಿಕರು ½ ಭಾಗ ಸಹಾಯನೂಡಬೇಕೆಂಬುವ ಸೂಚನೆಯನ್ನು ಬಳ್ಳಾರಿ ಜಿಲ್ಲಾ ಕಲೆಕ್ಟರವರಾದ ಶ್ರೀ ಅನಂತರಾವ್‌ನ್‌ರವರು ಕಲೆಕ್ಟರಾಫೀಸಿನಲ್ಲಿ ಸಭೆ ಕರೆದು ಹಾಜರಾದ ಸಿರಸ್ತೇದಾರರ ಮೂಲಕ ಹರಿಜನಸೇವಕ ಸಂಘದವರಿಗೆ ತಿಳಿಸಿದರು. ಸಂಘದವರು ಹಾಸ್ಟೆಲ್ ಹೊರಗಿರುವ ಹರಿಜನ ವಿದ್ಯಾರ್ಥಿಗಳಿಗೂ ಸಹಾಯವೂಡತಕ್ಕದ್ದು ಅವಶ್ಯಕವೆಂತಲೂ, ಪಟ್ಟಿನಲ್ಲಿ ಮಧ್ಯಮಿಕ ಶಾಲೆಗಳ 150 ಬಾಲಕರಿಗೆ ಸಹಾಯನೂಡಬಹುದೆಂತಲೂ ಸೂಚಿಸಿದರು. ಸಂಘದವರು ನಿಶ್ಚಯಮಾಡಿದ್ದನಂತರ ಕಲೆಕ್ಟರವರ ಸೂಚನೆಯು ಕಾರ್ಯರೂಪಕ್ಕೆ ಬರಬಹುದು.

The Rayalaseema Bank Limited, Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:—

ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ.
ಅನಂತಪುರ:- ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ.
ಚಿತ್ತೂರು:- ಚಿತ್ತೂರು, ಮದನಪಲ್ಲಿ, ತಿರುಪತಿ. **ಕರ್ನೂಲು:**- ಕರ್ನೂಲು ಪತ್ತಿಕೊಂಡ. **ಕಡಪ:**-ರಾಜಂಪೇಟೆ

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2ವರ್ಷಗಳಿಗೆ 3½%.
ಕರಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:- 3%.

ಬಿ ವಿ. ಶೇಷಗಿರಿರಾವ್, ಕಾರ್ಯದರ್ಶಿ.



ಕಾಶ್ಮೀರು ಅರುಕ್

(ಮನೆಯ ವೈದ್ಯ)

ಕೆಮ್ಮು, ಉಬ್ಬಸ, ಶೀತಜ್ವರ, ಅಜೀರ್ಣ ಮೊದಲಾದ ವ್ಯಾಧಿಗಳಿಗೆ ದಿವ್ಯಾಮೃತ ಎಲ್ಲಾನೋವುಗಳಿಗೆ ಹಾವು ಚೇಳು ಕಚ್ಚಿದುದಕ್ಕೆ ದಿವ್ಯೌಷಧ ಎಲ್ಲಾ ಪಾಪುಗಳಲ್ಲಿ ದೊರೆಯುತ್ತದೆ

ಹೆಚ್. ಯುಸ್. ಅಂಡ್ ಸನ್ಸು,
ಬಳ್ಳಾರಿ.

ಬೆಳ್ಳಿಯ ಪಾತ್ರೆಗಳು.

ಶುದ್ಧ ಮತ್ತು ಸ್ವಚ್ಛ ಬೆಳ್ಳಿಯಲ್ಲಿ ನಂಬಿಕಸ್ತರಾದ ನಮ್ಮ ಕೆಲಸಗಾರರಿಂದ ತಯಾರಿಸಲ್ಪಟ್ಟ ತಂಬಿಗೆ, ತಾಲಿ, ಕಪ್ ಸಾಸರ್, ಟೀ ಸೆಟ್ ಮತ್ತು ಮದುವೆ ಮುಂತಾದ ಶುಭಕಾರ್ಯಗಳಲ್ಲಿ ಬಹುಮಾನ ರೂಪವಾಗಿ ಕೊಡಬಹುದಾದ ಎಲ್ಲಾ ಆಧುನಿಕ ನಮೂನೆಗಳು ನಮ್ಮಲ್ಲಿ ಸರಿಯಾದ ಬೆಲೆಗೆ ದೊರೆಯುತ್ತವೆ. ನಮ್ಮ ಸೀಲಿರುವ ಪಾತ್ರೆಗಳನ್ನು ಯಾವಾಗ ಬೇಕಾದರೂ ಹಿಂದಕ್ಕೆ ಕೊಟ್ಟು ಎಕ್ಸ್‌ಚೇಂಜ್, ಕೂಲಿ ಕಳೆದನಂತರ ಹೊಸ ಪಾತ್ರೆಕೆಳನ್ನು ಪಡೆಯಬಹುದು.

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

NAVA BHARAT, BELLARY Reg. No. M. 474[6]

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗ ಳಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

SRI..... ....

....

... .

Printed at Krishna Press Bellary Edited & Published by T. B. KESAVA RAO.

ಜೈಹಿಂದ್. Reg. No. M. 4746

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

ಕಟ್ಟು ೫ ಸಂಚಿಕೆ ೬ | ಬಳ್ಳಾರಿ ಸೆಪ್ಟಂಬರು ೯ ಸೋಮವಾರ ೧೯೪೬ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

ಭಾರತದ ಪ್ರಥಮ ರಾಷ್ಟ್ರೀಯ ಮಂತ್ರಿ ಮಂಡಳ.

ಖಾತೆಗಳ ಹಂಚಿಕೆ.

೧ ಪಂಡಿತ ಜವಹರಲಾಲ ನೆಹರೂ—ವಿದೇಶ ಖಾತೆ-ಕಾಮನವೆಲ್ತ.

೨ ಸರದಾರ ವಲ್ಲಭಭಾಯಿ ಪಟೇಲ—ಗೃಹಖಾತೆ ಸುದ್ದಿ-ಆಕಾಶವಾಣಿ.

೩ ಸರದಾರ ಬಲದೇವ ಸಿಂಗ—ಸಂರಕ್ಷಣೆ.

೪ ಜಾನ್ ಮತ್ತಾಯಿ—ಹಣಕಾಸು.

೫ ಅಸಫಲ್ಲಿ—ಯುದ್ಧ-ಸಾರಿಗೆ-ರೈಲ್ವೆ.

೬ ಡಾಕ್ಟರ್ ರಾಜೇಂದ್ರ ಪ್ರಸಾದ—ಒಕ್ಕಲತನ ಮತ್ತು ಆಹಾರ.

೭ ಶ್ರೀ ಜಗಜೀವನರಾಮ—ಕೂಲಿಕಾರ.

೮ ಸರ್ ಶಾಫತ ಅಹಮ್ಮದ್ ಖಾನ—ಆರೋಗ್ಯ, ಶಿಕ್ಷಣ ಮತ್ತು ಕಲೆ.

೯ ಸಯದ್ ಆಲಿ ಜಹೀರ—ಶಾಸನ ನಿರ್ಮಾಣ, ಅಂಚೆ ಮತ್ತು ವಿಮಾನ.

೧೦ ಶ್ರೀ ರಾಜಗೋಪಾಲಾಚಾರಿ—ಔದ್ಯೋಗಿಕ ಮತ್ತು ಪೂರ್ವಿಕೆ.

೧೧ ಶ್ರೀ ಶರಚಂದ್ರ ಬೋಸ—ಲೋಕೋಪಯೋಗಿ, ಕಣಿ ಮತ್ತು ವಿದ್ಯುಚ್ಛಕ್ತಿ.

೧೨ ಶ್ರೀ ಶಿ. ಹೆಚ್. ಭಾಬಾ—ವಾಣಿಜ್ಯ.

ಹೊಸಮಂತ್ರಿಗಳ ಅಧಿಕಾರ ಸ್ವೀಕಾರವಾಯಿತು. ಉಳಿದಿಬ್ಬರು ಮಂತ್ರಿಗಳು ನಿಯಮಿಸಲ್ಪಟ್ಟಾಗ ಅಂಚೆ, ವಿಮಾನ, ಸುದ್ದಿ, ಆಕಾಶವಾಣಿ, ಖಾತೆಗಳಲ್ಲಿ ಸ್ವಲ್ಪ ಬದಲಾವಣೆಯಾಗುವುದು.

ಡಾವಣಗೆರೆಯಲ್ಲಿ
ಕರ್ನಾಟಕ ಮಹಾಸಭೆ.

ಡಾವಣಗೆರೆಯಲ್ಲಿ 31—8—46 ನೆಯ ಶನಿವಾರ ಕರ್ನಾಟಕ ಮಹಾಸಭೆಯು ಶ್ರಿ ರಾ. ಹನುಮಂತಪ್ಪನವರ ಛತ್ರದ ಆವರಣದ ಭವ್ಯಮಂಟಪದಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಈ ಸಭೆಗೆ ಕರ್ನಾಟಕದ ಎಲ್ಲಾ ಭಾಗಗಳಿಂದಲೂ ಪ್ರತಿನಿಧಿಗಳು ಪ್ರೇಕ್ಷಕರು ಆಗಮಿಸಿದ್ದರು. ಸ್ವಾಗತಾಧ್ಯಕ್ಷರಾದ ಶ್ರೀ ಉ. ಚನ್ನಬಸಪ್ಪನವರು ಎಲ್ಲರನ್ನು ಸ್ವಾಗತಿಸಿ ಒಂದು ಚಿಕ್ಕ ಭಾಷಣವನ್ನೋದಿದರು. ನಂತರ ಸಭೆಗೆ ಯಶಸ್ಸನ್ನು ಕೋರಿದ ಸಂದೇಶಗಳ ವಾಚನ ವಾಯಿತು.

ಮದ್ರಾಸ್ ಅಧಿಪತ್ಯದ ಕಂದಾಯ ಸಚಿವರಾದ ಶ್ರೀ ಕೆ. ಅರ್. ಕಾರಂತರು ಮಹಾಸಭೆಯನ್ನು ಉದ್ಘಾಟಿಸುತ್ತ, ಕರ್ನಾಟಕ ಏಕೀಕೃತ ಪ್ರಾಂತದಿಂದಾಗುವ ಲಾಭವನ್ನು ವಿವರಿಸಿ, ಮೈಸೂರು ಮಹಾರಾಜರು ಕರ್ನಾಟಕದ ಘಟನಾತ್ಮಕ ಅರಸರಾಗುವಂತೆ ದಿವಾಣ ಸರ್ ರಾಮಸ್ವಾಮಿ ಮೊದಲಿಯಾರರು ಸಲಹೆಕೊಡಬೇಕೆಂದು ಅಮೂಲ್ಯ ಸೂಚನೆ ಕೊಟ್ಟರು. **ಭಾರತಕ್ಕೆ ಸ್ವಾತಂತ್ರ್ಯವು ಹೇಗೊ ಹಾಗೆ ಕರ್ನಾಟಕಕ್ಕೆ ಸ್ವಾಯತ್ತತೆಯು ನೈಸರ್ಗಿಕವಾಗಿರುವದೆಂದೂ ಕರ್ನಾಟಕವು ವಿಸ್ತೀರ್ಣ, ಜನಸಂಖ್ಯೆ, ಆರ್ಥಿಕ ಸಂಪತ್ತು ಯಾವದೇ ದೃಷ್ಟಿಯಿಂದ ನೋಡಿದರೂ ಸ್ವಾಯತ್ತ ಪ್ರಾಂತವಾಗಿ ನಿಲ್ಲಲು ಅರ್ಹವಾಗಿರುವದೆಂದೂ ಅದು ೨೦ ಕೋಟಿಗಿಂತ ಹೆಚ್ಚು ಉತ್ಪನ್ನದ ಪ್ರಥಮ ವರ್ಗದ ಪ್ರಾಂತವಾಗುವದೆಂದೂ"** ಅಖಿಲ ಕರ್ನಾಟಕ ಏಕೀಕರಣ ಮಹಾಪರಿಷತ್ತಿನಲ್ಲಿ ಅಧ್ಯಕ್ಷ ಸ್ಥಾನದಿಂದ ಭಾಷಣ ಮಾಡುತ್ತ ಮುಂಬಯಿ ಸರಕಾರದ ಒಕ್ಕಲತನ ಹಾಗು ಅರಣ್ಯ-ಖಾತೆ ಮಂತ್ರಿಗಳಾದ ಮಾನ್ಯ ಮಲ್ಲನಗೌಡ ಪಾಟೀಲರವರು ತಿಳಿಸಿದರು.

ಹಾಗೆಯೆ ಅವರು ಮುಂದೆ ಸಾಗಿ ಕನ್ನಡದ್ದಲ್ಲ ಒಂದು ಗುಂಜಿ ತೂಕದ ಧೂಳಿ ಮಣ್ಣು ನಮಗೆ ಬೇ ಇತರರ ನ್ಯಾಯವಾದ ಪಕ್ಕು ಬಾಧ್ಯತೆಗಳನ್ನು ಆಕ್ರಮಿಸುವುದು ನಮಗೆ ಬೇಕಾಗಿಲ್ಲ, ಆದರೆ ಕನ್ನಡ ಒಂದಂಗುಲ ನೆಲವೂ ನಮ್ಮ ಕೈತಪ್ಪಿ ಹೋಗುವದನ್ನು ನಾವು ಸಹಿಸಲಾರೆವು ಎಂದು ಹೇಳಿದರು. ಕೊನೆ ಅವರು ಅಲ್ಪಸಂಖ್ಯಾಕರಿಗೂ ಆಶ್ವಾಸನ ಕೊಟ್ಟು ತಮ್ಮ ಭಾಷಣ ಮುಗಿಸಿದರು.

ತೀರ್ಮಾನಗಳು.

1) ಬ್ರಿಟಿಷ್ ಕರ್ನಾಟಕ ವಿಭಾಗಗಳನ್ನು ಮೊದಲು ಒಂದೆಡೆ ಸೇರಿಸಿ ಕರ್ನಾಟಕ ಪ್ರಾಂತವನ್ನು ನಿರ್ಮಿಸುವದಕ್ಕೆ ಅಂತಕರ್ತುಂಟಾಗದಂತೆ ಬ್ರಿಟಿಷ್ ಕರ್ನಾಟಕ, ಸಂಸ್ಥಾನಿ ಕರ್ನಾಟಕ ಎಂಬ ಭೇದವನ್ನೆಣಿಸದೆ ಎಲ್ಲ ಕರ್ನಾಟಕಸ್ಥರ ಸಾಮಾನ್ಯ ಬೆಳವಣಿಗೆಗಾಗಿ ಅವರೆಲ್ಲರಿಗೂ ಒಂದೇ ಆಡಳಿತೆಯುಳ್ಳ ಸರಕಾರ ಸಂಯುಕ್ತ ಬಗೆಯದ್ದಾಗಲಿ ಅಥವಾ ಬೇರೆಬಗೆಯದ್ದಾಗಲಿ ಸ್ಥಾಪಿತವಾಗುವುದರಿಂದಲೇ ಅಖಂಡ ಕರ್ನಾಟಕದ ಹಿತ ಸರಿಯಾಗಿ ಸಾಧಿಸುವದೆಂದು ಸಂಸ್ಥಾನ ಕರ್ನಾಟಕವನ್ನೊಳಗೊಂಡ ಅಖಿಲ ಕರ್ನಾಟಕದ ಪ್ರತಿನಿಧಿಗಳ ಈ ಮಹಾ ಪರಿಷತ್ತು ಸಾರುತ್ತದೆ. ಅಖಂಡ ಕರ್ನಾಟಕಕ್ಕೆ ಈ ರೀತಿಯ ಒಂದೇ ಸರಕಾರದ ಸ್ಥಾಪನೆ ಸುಲಭ ಸಾಧ್ಯವಾಗಲು ಎಲ್ಲ ಸಂಸ್ಥಾನಗಳಲ್ಲಿ ಪೂರ್ಣ ಪ್ರಜಾಸತ್ತಾತ್ಮಕ ಹೊಣೆಗಾರಿಕೆಯ ಸರಕಾರ ಸ್ಥಾಪಿತವಾಗುವುದು ಅವಶ್ಯವೆಂದು ಈ ಮಹಾಸಭೆ ಅಭಿಪ್ರಾಯ ಪಡುತ್ತದೆ.

ಶ್ರಿ ದಿವಾಕರರು ಭಾಷಣ ಮಾಡಿದನಂತರ ಉಪಸೂಚನೆಗಳೆಲ್ಲಾ ಹಿಂತೆಗೆದುಕೊಳ್ಳಲ್ಪಟ್ಟು ಮೂಲಗೊತ್ತುವಳಿಯು ಪ್ರಚಂಡ ಬಹುಮತದಿಂದ ಸ್ವೀಕೃತವಾಯಿತು.

(ಗನೇ ಪುಟದಲ್ಲಿ ಮುಂದುವರಿದಿದೆ)



ಸಂಪಾದಕ-ಟಿ.ಎಸ್.ವೇಂಕಟರಾವ್

9th Year of Publication.

9th SEPTEMBER 1946

ಆಲೂರಲ್ಲಿ ಖಾದಿ ಯೋಜನೆ.

ಮದ್ರಾಸ್ ಸರ್ಕಾರದವರು ಪ್ರತಿಯೊಂದು ಜಿಲ್ಲೆಯಲ್ಲಿ ಒಂದು ಫಿರ್ಕಾ ಏರಿಸಿ, ಅದಕ್ಕೆ ಸಂಬಂಧಿಸಿದ ಹಳ್ಳಿಗಳನ್ನೆಲ್ಲಾ ಸ್ವಯಂಪೋಷಕ ಮಾಡಲು ನಿಶ್ಚಯಿಸಿರುತ್ತಾರೆ. ಜಿಲ್ಲೆಯಲ್ಲಿ ಅನುಕೂಲ ವಾತಾವರಣವುಳ್ಳ ಫಿರ್ಕಾವನ್ನು ಆರಿಸುವ ಮುಂಚೆ ಸಂಬಂಧಿಸಿದ ಮಂತ್ರಿಗಳಾಗಲಿ, ಪ್ರಧಾನಮಂತ್ರಿಗಳಾಗಲಿ. ಜಿಲ್ಲೆಯ ಕಾಂಗ್ರೆಸ್ ಸಮಿತಿಯನ್ನು, ಅನುಭವಿಕರನ್ನು ವಿಚಾರಿಸಿ ಸುವದವಶ್ಯಕವಿತ್ತು ನಮ್ಮ ಜಿಲ್ಲೆಯ ಮಟ್ಟಿಗೆ ಹೇಳಬೇಕೆಂದರೆ ಯಾವ ಮಂತ್ರಿಗಳಾಗಲಿ ಇಲ್ಲಿಯ ಪ್ರಮುಖರನ್ನು ವಿಚಾರಿಸಿದಂತೆ ತಿಳಿದು ಬರುವುದಿಲ್ಲ. ಗ್ರಾಮೋದ್ಧಾರಕ್ಕೆ ನಿಕಟ ಸಂಬಂಧವುಳ್ಳ ಖಾದಿಯೋಜನೆ ಇತರ ರಚನಾತ್ಮಕ ಕಾರ್ಯಗಳಿಗೆ ಮುಖ್ಯವಾಗಿ ಕಾರ್ಯಕರ್ತರ ಆವಶ್ಯಕವಿದೆ. ಕಾರ್ಯಕರ್ತರ ಸಹಕಾರವಿಲ್ಲದೆ ಸರಕಾರದ ಗ್ರಾಮೋದ್ಧಾರ ಕಾರ್ಯವು ಯಶಶ್ವಿಯಾಗಲಾರದು.

1-9-46 ರ ಪ್ರಾತಃಕಾಲ ಬಳ್ಳಾರಿಯ ಖಾದಿ ಪ್ರೇಮಿಗಳು ಅಸಿಸ್ಟೆಂಟ್ ಕಲೆಕ್ಟರಾಯಿಲ್ ಕವಿಷ ನರ್‌ರವರಾದ ಮೆ!!! ಖಾದಿರ್‌ರವರೊಡನೆ ಮದ್ರಾಸ್ ಮಂತ್ರಿವರ್ಗದ ಖಾದಿ ಯೋಜನೆಯನ್ನು ಕುರಿತು ಚರ್ಚಿಸಿ, ಆಲೂರು ಫಿರ್ಕಾ ಅನುಕೂಲವಾದುದೆಂದು ತಿಳಿಸಿದರು. ಅಲ್ಲಿ ಕಾರ್ಯಕರ್ತರ ಅಭಾವವಷ್ಟೇ ಅಲ್ಲ. ನೂಲುವವರ ಮತ್ತು ನೆಯ್ಯುವವರ ಅಭಾವವಿದೆಯೆಂದು ಹೇಳಿದರು. ಅಖಿಲ ಭಾರತ ಚರಕಾ ಸಂಘದವರು ಬಳ್ಳಾರಿ ತಾಲೂಕು ಕುರುಗೋಡಿನಲ್ಲಿ, ಆದವಾನಿ ತಾಲೂಕು ಎಮ್ಮಿಗನೂರಿನಲ್ಲಿ ಕೆಲ ವರ್ಷಗಳಿಂದ ಕೆಲಸ ಸಾಗಿಸಿರುವರು. ಅಲ್ಲಿ ನೂಲುವ ಮತ್ತು ನೆಯ್ಯುವ ಏರ್ಪಾಟಿದೆ. ಕೆಲ ಚರಖಾಗಳನ್ನು ಹಳ್ಳಿಗಳಲ್ಲಿ ಹಂಚಲಾಗಿದ್ದು ನೂತನೂಲು ಸರಿಯಾಗಿ ಸಂಗ್ರಹವಾಗುತ್ತಲಿದೆ. ಒಟ್ಟಿಯೂಕೂಡ ದೊಡ್ಡಪ್ರಮಾಣದಲ್ಲಿ ಅಲ್ಲವಾದರೂ, ತಯಾರಾಗುತ್ತಲಿದೆ. ಈ ಕಾರ್ಯದಲ್ಲಿ ಶ್ರದ್ಧೆ ಮತ್ತು ಹೃತ್ಪೂರ್ವಕವಾಗಿ ಕೆಲಸಮಾಡುವ ನುರಿತ ಕಾರ್ಯಕರ್ತರೂಕೂಡ ಅಲ್ಲಿರುವರು ಕುರುಗೋಡಲ್ಲಾಗಲಿ, ಎಮ್ಮಿಗನೂರಲ್ಲಾಗಲಿ, ಸರ್ಕಾರದವರು ಸ್ವಯಂ ಪೋಷಕ ಯೋಜನೆಯನ್ನು ಜಾರಿಯಲ್ಲಿ ತಂದರೆ ಅದು ಯಶಶ್ವಿಯಾಗಲು ಸಂಶಯವಿಲ್ಲೆಂದು ಅಧಿಕಾರಿಗಳಿಗೆ ತಿಳಿಸಲಾಯಿತು. ಈ ಬಗ್ಗೆ ಒಂದು ಸಕಾರಣ ಯುಕ್ತವಾದ ಪರಿಪತ್ರವನ್ನು ಕಳುಹಿಸಲು ಖಾದಿ ಪ್ರೇಮಿಗಳ ಪರವಾಗಿ ಶ್ರೀ ಟಿ. ಸುಬ್ರಹ್ಮಣ್ಯರವರು ಒಪ್ಪಿದರು.

ಮದ್ರಾಸ್ ಮಂತ್ರಿವರ್ಗದವರು ಪುನರ್ವಿಮರ್ಶಿಸಿ ಪೀಡಿತ ಪ್ರದೇಶವೂ ಸುಲಭ ಕೂಲಿಯೂ ದೊರೆಯ ಬಹುದಾದ ಕುರುಗೋಡಿನಲ್ಲಿಯೇ ಈ ಯೋಜನೆಯನ್ನು ಪ್ರಾರಂಭಿಸಲು ತಕ್ಕ ಪ್ರಯತ್ನಗಳಾಗಬೇಕು. ಬಳ್ಳಾರಿ ಜಿಲ್ಲಾ ಗ್ರಾಮೋದ್ಧಾರ ಸಂಘದವರು ಪ್ರಾರಂಭಿಸಿದ ಕುರುಗೋಡು. ಕೇಂದ್ರದ ಖಾದಿ ಸಮಿತಿಯವರು ಈಗಾಗಲೇ ತಮ್ಮ ಯೋಜನೆಯನ್ನು ಸರ್ಕಾರಕ್ಕೆ ಮುಟ್ಟಿಸಿರುತ್ತಾರೆ. ಅಲ್ಲಿ ಸಹಾಯದ ಅವಶ್ಯಕತೆಇದೆ ಸಂಬಂಧಿಸಿದವರು ಕೂಡಲೇ ಈ ವಿಷಯದಲ್ಲಿ ಕೈಹಾಕಿ ತಕ್ಕ ಯತ್ನಗಳನ್ನು ಮಾಡಬೇಕು

ಮುಂದಿನ ವರ್ಷ.

ಶಾಂತಿಮಯ ಚಂದ್ರನು ಉದಯವಾಗಲಿ.

ಶ್ರೀ ಸರೋಜಿನಿಯರ ಈದ ಸಂದೇಶ.

"ಇಲ್ಲಯವರಿಗೆ ನನ್ನ ಎಷ್ಟೋ ಮುಸಲ್ಮಾನ ಬಾಂಧವರೊಡನೆ ಅವರ ಹಬ್ಬೋತ್ಸವಗಳಲ್ಲಿ ಸುಖ ಪಟ್ಟಿದ್ದೇನೆ. ಆದರೆ ದುರ್ದೈವದಿಂದ ಕೆಲವುಮುಸಲ್ಮಾನರು ಮಾಡಿದ ಅತ್ಯಾಚಾರ ಹಾಗೂ ಹಿಂಸೆಯ ಮೂಲಕ ನಾನು ಇಂದು ಅವರೊಡನೆ ಅವಮಾನವನ್ನು ಸಹಿಸಿ ಪ್ರಾಯಶ್ಚಿತ್ತವನ್ನು ಬೇಡುತ್ತ ತಲೆ ಕೆಳಗೆ ಹಾಕುಬೇಕಾಗಿದೆ. ದೊಂಬಿಗಾರರು ರಂಜಾನದಂಥ ಪವಿತ್ರ ತಿಂಗಳಲ್ಲಿ ಇಷ್ಟೊಂದು ಹಿಂಸೆಯಿಂದ ತಮ್ಮ ಬಾಂಧವರಿಗೆ ದುಃಖವನ್ನುಂಟುಮಾಡಿ, ತಮ್ಮ ಧರ್ಮ ಗುರುವಿನ ವಿಶ್ವ- ಬಂಧುತ್ವ ಮತ್ತು ಶಾಂತಿಯ ದಿವ್ಯ ಉಪದೇಶವನ್ನು ಮೀರಿದ್ದಾರೆ. ಮುಸಲ್ಮಾನರಿಗೆ ನಾನು ದೋಷವನ್ನು ಕೊಡುತ್ತಿದ್ದರೂ ದೊಂಬಿಗಳಲ್ಲಿ ಭಾಗವಹಿಸಿದ ಬೇರೆ ಜಾತೀಯರನ್ನು ಕ್ಷಮಿಸಿದ್ದೇನೆಂದು ಯಾರೂ ತಿಳಿಯಬಾರದು. ಇಂಥವರು ಕೂಡ ತಮ್ಮ ಹಾನಿಕಾರಕ ಮತ್ತು ಅವಮಾನಕಾರಕ ದುಷ್ಕೃತ್ಯಗಳಿಂದ ತಮ್ಮ ಸಂಸ್ಕೃತಿಗೆ ತಮ್ಮ ಧರ್ಮಕ್ಕೆ ಅವಮಾನ ಮಾಡಿದ್ದಾರೆ. ಮಾನವ ಧರ್ಮದ ಮೂಲ ತತ್ವಗಳಾದ ದಯೆ ಮತ್ತು ಸದ್ಬುದ್ಧಿಗಳನ್ನೇ ತುಳಿದು ಬಿಟ್ಟಿದ್ದಾರೆ.

ನನ್ನ ಎಲ್ಲ ಜಾತಿಯ ಸಹೋದರರಿಗೆ ನನ್ನ ರಕ್ತದಲ್ಲಿ ತೊಯ್ದ ಈ ಸಂದೇಶವನ್ನು ಕೊಡ ಬಯಸುತ್ತೇನೆ. ನಮ್ಮ ಸ್ವಬಾಂಧವರ ಮೇಲೆ ನಮ್ಮ ಸ್ವಬಾಂಧವರೇ ಮಾಡಿದ ಅತ್ಯಾಚಾರಗಳ ಸಲುವಾಗಿ ಪ್ರಾಯಶ್ಚಿತ್ತವನ್ನು ಬೇಡೋಣ. ವಿನಯ ಧೈರ್ಯ ಮತ್ತು ಸಹನ ಶೀಲತೆಗಳ ಬಲದಿಂದ ಕೊಲೆ ಸುಲಿಗೆಗಳಿಂದ ಯುಕ್ತವಾದ ಕಾಡು ಪ್ರದೇಶವನ್ನು ಸೌಂದರ್ಯೈಶ್ವರ್ಯಗಳಿಂದೊಡಗೂಡಿದ ದಿವ್ಯ ನಾಡನ್ನಾಗಿ ಮಾಡೋಣ. ಇಷ್ಟೊಂದು ಅಪಾರ ಹಾನಿಯನ್ನು ತಂದೊಡ್ಡಿದ, ನಮ್ಮ ದೇಶದ ಹೃದಯವನ್ನು ಇಬ್ಭಾಗಿಸಿದ ಜಾತಿದ್ವೇಷವನ್ನು ಬಿಟ್ಟುಗೊಟ್ಟು ವಿಂಗಡವಾದರೆ ಬಾಡುವೆವು, ಸಂಗಡ ಹೊರಟರೆ ಮಾತ್ರ ಬಾಳುವೆವು ಎಂಬುದನ್ನು ಚೆನ್ನಾಗಿ ಲಕ್ಷ್ಯದಲ್ಲಿಟ್ಟು ಕೊಳ್ಳೋಣ. ಮುಂದಿನ ವರ್ಷ ಸೌಂದರ್ಯ, ಸೌಭಾಗ್ಯ ಶಾಂತಿಗಳಿಂದೊಡಗೂಡಿದ ಚಂದ್ರನು ಮೂಡಿ ಸ್ವಾತಂತ್ರ್ಯ ಆಶೆಗಳನ್ನು ಬೀರತೊಡಗಲಿ. ನಾವು ಪರಸ್ಪರರನ್ನು 'ಈದ ಮುಬಾರಕ' ಹೇ ಬಾಂಧವ/ ನಿನಗೆ ಈದ ಮುಬಾರಕ 'ಎಂದು ಸ್ವಾಗತಿಸೋಣ"

ಬೊಂಬಾಯಿಯಲ್ಲಿ ಹಿಂದೂ ಮುಸಲ್ಮಾನರ ದಂಗೆಯಾಗಿ 124 ಸತ್ತಿರುವರೆಂದೂ, 500 ಜನರಿಗೆ ಘಾಯಗಳಾಗಿವೆಯೆಂಬೂ ವಾರ್ತೆ ಬಂದಿದೆ. ಸರ್ಕಾರದವರು ತಕ್ಕ ಉಪಾಯಗಳನ್ನು ಕೈಗೊಳ್ಳುತ್ತಿರುವರು.

ಪೂರ್ಣ ಸ್ವಾತಂತ್ರ್ಯ

"ಹಿಂದೂಸ್ತಾನಕ್ಕೆ ಪೂರ್ಣ ಸ್ವಾತಂತ್ರ್ಯವನ್ನು ದೊರಕಿಸುವುದೇ ನಮ್ಮ ಧ್ಯೇಯ, ಇದುವರಿಗೆ ವಿರೋಧಿಸುತ್ತಿದ್ದ ಸರಕಾರದೊಡನೆ ಈಗ ಸಹಕರಿಸುತ್ತಿರುವೆವು. ನಮಗೆ ಎಲ್ಲಾ ಭಾರತೀಯರ ಸಹಕಾರವು ಬೇಕಾಗಿದೆ. ಇನ್ನುಮೇಲೆ ಹಿಂದೂಸ್ತಾನದ ಸರಕಾರವನ್ನು ಹಿಂದೀಯರೇ ಆಳುವರು." ಎಂದು ಪಂಜವಹರಲಾಲರು ವೃತ್ತ ಪತ್ರಿಕೆಗಳವರಿಗೆ ತಿಳಿಸಿದರು.

ಬಳ್ಳಾರಿಗೆ ಅಕ್ಕಿ ಕೋಟ ಕೆಡಿಮೆ ಬಂತು.

ಸೆಪ್ಟಂಬರ್ ತಿಂಗಳಿಗಾಗಿ ಬಳ್ಳಾರಿ ಜಿಲ್ಲೆಗೆ ೫೦೦ ಟನ್ ಅಕ್ಕಿ ಮಾತ್ರ ಬಂದಿದೆ, ಪ್ರತಿ ತಿಂಗಳೂ ೧೫೦೦ ಟನ್ ಅಕ್ಕಿ ಕೋಟಾ ಇದ್ದಿತು. ಈಗ ಇರುವ ಸಂಗ್ರಹವು ಒಂದು ತಿಂಗಳವರೆಗೆ ಮಾತ್ರ ಸಾಲುವದೆಂದು ಸೊತ್ತಾಗಿದೆ.

ದಾವಣಗೆರೆ ಮಹಾ ಸಭೆ.

(ಒಂದನೇ ಪುಟದಿಂದ ಮುಂದುವರಿದಿದ್ದು)

2) ಭಾಷಾನುಗುಣ ಪ್ರಾಂತ ರಚನೆಯು ಮಹತ್ವ ದ್ದೆಂದು ಭಾವಿಸಿ, ಈ ಪ್ರಶ್ನೆಯನ್ನು ಘಟನಾ ಸಮಿತಿ ಯವರು ತೆಗೆದುಕೊಂಡು, ಕರ್ನಾಟಕ ಪ್ರಾಂತರಚನೆ ಗಾಗಿ ಶೀಘ್ರವಾಗಿಯೇ ಕಾರ್ಯಪ್ರವೃತ್ತರಾಗಲು ಈ ಮಹಾಪರಿಷತ್ತು ಆಗ್ರಹ ಪೂರ್ವಕವಾಗಿ ಸೂಚಿಸುತ್ತದೆ.

3) ಈ ಕಾರ್ಯವನ್ನು ಮಾಡಲು ಶ್ರೀಗಳಾದ ಎಂ. ಪಿ. ಪಾಟೀಲ, ನಿಜಲಿಂಗಪ್ಪ ಮತ್ತು ಜಿನರಾಜ ಸಮಿತಿಯಲ್ಲಿರಬೇಕು. ಹೆಚ್ಚಿನ ಸದಸ್ಯರನ್ನು ತೆಗೆದು ಕೊಳ್ಳಲು ಅವರಿಗೆ ಅವಕಾಶವಿದೆ.

4) ಘಟನಾ ಸಮಿತಿ ಸದಸ್ಯರನ್ನು ಶಾಸನಸಭೆಯ ವರು ಚುನಾಯಿಸಬೇಕಲ್ಲದೆ, ಸರಕಾರದವರು ನಿಯಮಿಸಬಾರದು.

ದಾವಣಗೆರೆಯವರು ಸಭಾ ವ್ಯವಸ್ಥೆಯನ್ನು ಚನ್ನಾಗಿ ಮಾಡಿದ್ದಕ್ಕೆ ವಂದನಾರ್ಪಣವಾಯಿತು. ಮುಂದಿನ ಕಾರ್ಯಕ್ಕಾಗಿ ಒಂದುಲಕ್ಷ ರೂಪಾಯಿಗಳ ಅವಶ್ಯಕತೆಯಿದೆ ಎಂದೂ, ದಾವಣಗೆರೆಯವರು ಕನಿಷ್ಠ ಐದು ಸಾವಿರವಾದರೂ ಕೊಡಬೇಕೆಂದೂ, ಶ್ರೀ ನಿಜ ಲಿಂಗಪ್ಪನವರು ಹೇಳಿದರು. ರಾಷ್ಟ್ರಗೀತೆ ಜಯಜಯ ಕಾರದೊಡನೆ ಸಭೆಯು ಮುಗಿಯಿತು.

ಖಾಸಗಿಶಾಲೆ—ಶಾಲೆಸಂಬಳ.

'ನವ ಭಾರತ' ದ ಸಂಪಾದಕರಿಗೆ:

ಪ್ರಾಯವೇಟ್ ಯಾ ಖಾಸಗಿ ಶಾಲೆಗಳ ವ್ಯವ ಸ್ಥಾಪಕರು ಶಾಲೆಸಂಬಳವನ್ನು ಹೆಚ್ಚಿಸಲು ಮದ್ರಾಸ್ ವಿದ್ಯಾ ಖಾತೆಯ ಮಂತ್ರಿಗಳು ಅನುಮತಿ ಕೊಡುವ ರೆಂಬುದನ್ನು ಕೇಳಿ ತಂದೆ ತಾಯಿಗಳಿಗೂ, ಪೋಷ ಕರಿಗೂ ಗಾಬರಿಯಾಗಿದೆ. ಈಗಿನ ಬಿಡಿಕ ಪರಿಸ್ಥಿತಿ ಯಲ್ಲಿ ಮಕ್ಕಳನ್ನು ಓದಿಸುವುದೇ ಕಷ್ಟವಾಗಿರಬೇಕಾ ದರೆ ಈ ಹೆಚ್ಚಳದಿಂದ ವಿಶೇಷ ಕಷ್ಟವಾಗುವುದು.

ಕಾಂಗ್ರೆಸ್ ಮಂತ್ರಿವರ್ಗದವರು ಪ್ರಜೆಗಳ ನಿಜವಾದ ಪ್ರತಿನಿಧಿಗಳಿದ್ದು ಎಲ್ಲಾಶಾಲೆಗಳಲ್ಲಿ ಸಮಾನ ವರ್ತನೆಯನ್ನು ತೋರಿಸಿ ವಿಧಾಯಕವಾದ ವೇತನ ಗಳನ್ನು ನಿಶ್ಚಯಿಸಬೇಕಿತ್ತು. ಉಪಾಧ್ಯಾಯರಿಗೆ ಹೆಚ್ಚಿನ ಸಂಬಳ, ಅಲೋರ್ಯನ್ಸ್ ಕೊಡಬೇಕಾದ್ದು ಅವಶ್ಯಕ. ಆದರೆ ಸರ್ಕಾರದವರು ಹೆಚ್ಚಿನ ಗ್ರಾಂಟು ಕೊಡುವ ಆಶಯವನ್ನು ತೋರಿಸಬೇಕಿತ್ತು. ಇದು ಪ್ರಗತಿಯ ಲಕ್ಷಣವಲ್ಲ.

ಒಬ್ಬ ಪೋಷಕ

ಹೊಸಪೇಟೆ

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಇಲ್ಲಿ ಗಮಕ ಕಲಾ ಶಿಕ್ಷಣ ವರ್ಗದ ಪ್ರಾರಂಭೋತ್ಸವವು ಕಳೆದ ವಾರ ಶ್ರೀ ಬೂದಿಹಾಳ ಅನಂತಾಚಾರ್ಯರ ಅಧ್ಯ ಕ್ಷತೆಯಲ್ಲಿ ವಿಜೃಂಭಣೆಯಿಂದ ಜರುಗಿತು. ವರ್ಗದ ಉದ್ಘಾಟನೆಯನ್ನು ಶ್ರೀ ಮೈದೂರು ತಿರುಮಲಾಚಾರ್ಯ ರು ನೆರವೇರಿಸಿದರು.

ಅಂಜಿಕೆಯು ಬೇಡ.

ಗಾಂಧೀಜೀಯ ಭಾಷಣ.

ಹೊಸವಿಲ್ಲಿ:- ಮಹಾತ್ಮ ಗಾಂಧಿಯವರು ಪ್ರಾರ್ಥನಾ ಸಭೆಯಲ್ಲಿ ಭಾಷಣ ಮಾಡುತ್ತ ಹೃದಯದೊಳಗೆ ಹುದಗಿಕೊಂಡಿದ್ದ ಎಲ್ಲ ಅಂಜಿಕೆಯನ್ನು ಹೊಡೆದೋ ಡಿಸುವ ಅವಶ್ಯಕತೆಯನ್ನು ಒತ್ತಿ ಹೇಳಿದರು. ಸಂಕಟ ಕಾಲದಲ್ಲಿ ಧಾವಿಸಿ ಬರುವ ನಿಜವಾದ ಮಿತ್ರನು ದೇವನೊಬ್ಬನೇ ಇರುವನು. ಅವನನ್ನೆ ನಾವು ನಂಬ ಬೇಕು. ಅವನನ್ನು ನಂಬುವಷ್ಟು ವ್ಯಾಯಿಸರಾಯ ರನ್ನೂ ಈಗ ನನ್ನು ಮೊದಲನೆ ಮಖ್ಯಪ್ರಧಾನರಾಗಿ ರುವ ಪಂಡಿತ ಜವಾಹರಲಾಲರನ್ನೂ ನಾವು ನಂಬಲಾರೆವು ಎಂದು ಅವರು ನುಡಿದರು.

The Rayalaseema Bank Limited, Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೧೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:—

ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ.
ಅನಂತಪುರ:- ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾವಿಡಿ, ತಿಮ್ಮನಚೆರ್ಲ, ಉರವಕೊಂಡ.
ಚಿತ್ತೂರು:- ಚಿತ್ತೂರು, ಮದನಪಲ್ಲಿ, ತಿರುಪತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ. **ಕಡಪ:-** ರಾಜಂಪೇಟೆ

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:- 3%.

ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.



ಕಾಶ್ಮೀರು ಅರುಕ್

(ಮನೆಯ ವೈದ್ಯ)

ಕೆಮ್ಮು, ಉಬ್ಬಸ, ಶೀತಜ್ವರ, ಭಳಜ್ವರ, ಅಜೀರ್ಣ ಮೊದಲಾದ ವ್ಯಾಧಿಗಳಿಗೆ ದಿವ್ಯಾಮೃತ ಎಲ್ಲಾ ನೋವುಗಳಿಗೆ ಹಾವು ಜೇಳು ಕಚ್ಚಿದುದಕ್ಕೆ ದಿವ್ಯೌಷಧ ಎಲ್ಲಾ ಷಾಪುಗಳಲ್ಲಿ ದೊರೆಯುತ್ತದೆ

ಹೆಚ್. ಯುಸ್. ಅಂಡ್ ಸನ್ಸು,
ಬಳ್ಳಾರಿ.

ಬೆಳ್ಳಿಯ ಪಾತ್ರೆಗಳು.



ಶುದ್ಧ ಮತ್ತು ಸ್ವಚ್ಛ ಬೆಳ್ಳಿಯಲ್ಲಿ ನಂಬಿಕಸ್ತರಾದ ನಮ್ಮ ಕೆಲಸಗಾರರಿಂದ ತಯಾರಿಸಲ್ಪಟ್ಟ ತಂಬಿಗೆ, ತಾಲಿ, ಕಪ್ ಸಾಸರ್, ಟೀ ಸೆಟ್ ಮತ್ತು ಮದುವೆ ಮುಂತಾದ ಶುಭಕಾರ್ಯಗಳಲ್ಲಿ ಬಹುಮಾನ ರೂಪವಾಗಿ ಕೊಡಬಹುದಾದ ಎಲ್ಲಾ ಆಧುನಿಕ ನಮೂನೆಗಳು ನಮ್ಮಲ್ಲಿ ಸರಿಯಾದ ಬೆಲೆಗೆ ದೊರೆಯುತ್ತವೆ. ನಮ್ಮ ಸೀಲಿರುವ ಪಾತ್ರೆಗಳನ್ನು ಯಾವಾಗ ಬೇಕಾದರೂ ಹಿಂದಕ್ಕೆ ಕೊಟ್ಟು ವೇಸ್ಟೇಜ, ಕೂಲಿ ಕಳೆದನಂತರ ಹೊಸ ಪಾತ್ರೆತೆಳನ್ನು ಪಡೆಯಬಹುದು.

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

NAVA BHARAT, BELLARY Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗ ಳಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

SRI..... .....

.....

....

Printed at Krishna Press Bellary Edited & Published by T. B. KESAVA RAO.

Reg. No. M. 4746

ಜೈಹಿಂದ್.

ನವಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

ಕಟ್ಟು ೫ ಸಂಚಿಕೆ ೭ | ಬಳ್ಳಾರಿ, ಸೆಪ್ಟೆಂಬರು ೧೬ ಸೋಮವಾರ ೧೯೪೬ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವು.

ಶ್ರೀ ಸುಬಾಸ ಚಂದ್ರಬೋಸ್
ಜೀವಂತರಾಗಿದ್ದಾರೆಯೋ ?

ದೆಹಲಿಯಲ್ಲಿ ಆರೂಢವಾಗಿರುವ ರಾಷ್ಟ್ರೀಯ ಸರಕಾರವು ಸಾರ್ವಜನಿಕರಿಂದ ಬಂದ ಅನೇಕ ವಿನಂತಿಗಳನ್ನು ಮನ್ನಿಸಿ ಸುಭಾಸ ಚಂದ್ರರ ಮೇಲಿನ ಹುಕುಮುಗಳನ್ನು ರದ್ದು ಮಾಡಿದ್ದಾರೆ. ಅವರು ಜೀವಂತವಿರುವ ಬಗ್ಗೆ ಹಿಂದೂಸ್ತಾನಕ್ಕೆ ಹಿಂದುರುಗಿ ಬಂದಿರುವ ಬಗ್ಗೆ ಯಾವ ವಿಶ್ವಾಸಾರ್ಹ ಪುರಾವೆಯೂ ಇಲ್ಲ. ಅವರು ಬದುಕಿದ್ದಲ್ಲಿ ಯಾವದೇ ನಿರ್ಬಂಧಗಳು ಅವರನ್ನು ಬಂಧಿಸಲಾರವು.

ಪಿ. ಬಿ. ಸೀಲರ ಹೇಳಿಕೆ.

ಲಂಡನ ೭—ನೇತಾಜಿ ಸುಭಾಸ ಬೋಸರು ಜೀವಂತ ಇದ್ದಾರೆ. ಮತ್ತು ಅವರು ರಶಿಯಾದಲ್ಲಿ ಎಲ್ಲಿಯೋ ಇದ್ದಾರೆಂದು ನಾನು ಹಿಂ-ರಾ ಸೇನೆಯ ಅಧಿಕಾರಿಯೊಡನೆ ನಡೆಸಿದ ಸಂಭಾಷಣೆಯಿಂದ ಹೇಳಬಲ್ಲೆ ಯಾಕಂದರೆ ಇದುವರೆಗೆ ಯಾರೂ ಸುಭಾಸರ ಕಲೇವರವನ್ನು ನೋಡಿಲ್ಲವೆಂದು ಅವರ ಪರಮ ಸ್ನೇಹಿತನಾದ ಮಿ ಪಿ ಬಿ ಸೀಲರು ಹೇಳುತ್ತಾರೆ. ಇವರು ಬ್ರಿಟನ್ನಿನಲ್ಲಿಯ ಹಿಂದಿ ಕಾಂಗ್ರೆಸ್ಸಿಗರ ಸಮಿತಿಯ ಕಾರ್ಯದರ್ಶಿಗಳಿದ್ದಾರೆ.

ಬಳ್ಳಾರಿ ಜಿಲ್ಲಾ ಗ್ರಾಮಸ್ಥರಿಗೆ.

ಅನೇಕ ಹಳ್ಳಿಗಳಿಂದ ಕಾಳು ಸರಿಯಾಗಿ ಪೂರೈಕೆಯಾಗುವುದಿಲ್ಲೆಂದೂ, ಡಿಪೋದವರು ಸರಿಯಾಗಿ ಹಂಚುತ್ತಿಲ್ಲವೆಂತಲೂ ಬರೆಯುತ್ತಿರುವರು,- ಗ್ರಾಮ ಸಮಿತಿ ಸದಸ್ಯರ ಹೆಸರು- ಡಿಪೋ ಕೀಪರ್ ಹೆಸರು ಮತ್ತು ಯಾರಿಗೆ ಕಾಳು ಸರಿಯಾಗಿ ಕೊಟ್ಟಿಲ್ಲ ವಗೈರೆ ಎಲ್ಲಾ ವಿವರಗಳನ್ನು ತಿಳುಹಿಸಿ- ಸಹಿಮಾಡಿದ ಪತ್ರಗಳನ್ನು ಕಳುಹಿಸಿದರೆ, ಲೋಪಗಳನ್ನು ನಾವು ಬರೆದು ಅಧಿಕಾರಿಗಳಿಂದ ಸರಿಪಡಿಸಲು ಅನುಕೂಲವಾಗುತ್ತದೆ- ವಾಚಕರು ಇದನ್ನು ಗಮನದಲ್ಲಿಡಬೇಕು.

ಸಂಪಾದಕ - 'ನವಭಾರತ' ಬಳ್ಳಾರಿ.

ವಿದೇಶಕ್ಕೆ ಹೋಗುವುದೇಕೆ?

ಶಸ್ತ್ರಚಿಕಿತ್ಸೆಯಲ್ಲಿ ಹೆಚ್ಚಿನ ತರಬೇತಿ ಪಡೆಯಲು ಹಿಂದೀ ಡಾಕ್ಟರನೊಬ್ಬನು ಅಮೇರಿಕೆಗೆ ಹೋದನು. ತಿರುಗಿ ಬಂದು ಇಲ್ಲಿನ ಜನರ ಸೇವೆ ಹೆಚ್ಚಾಗಿ ಮಾಡ ಬೇಕೆಂಬುದೇ ಅವನ ಉದ್ದೇಶ ಒಳ್ಳೇಪರಿಶ್ರಮದಿಂದ ಅವನು ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಸ್ಥಳ ವೊಂದನ್ನು ಪಡೆದನು. ವೈದ್ಯನೆಂದು ಅವನೀಗ ಅಲ್ಲಿ ಕೆಲಸ ಮಾಡುತ್ತಿರುವನು.

ಪರದೇಶಗಳಿಗೆ ಹೋಗದಂತೆ ವಿದ್ಯಾರ್ಥಿಗಳ ಮನವೊಲಿಸಬೇಕೆಂದು ಅವನು ಬರೆದ ಕೆಳಗಿನ ಕಾರಣಗಳನ್ನು ಕೊಡುತ್ತಾನೆ.

ಅ) ಪರದೇಶಗಳಲ್ಲಿ ಹತ್ತು ವಿದ್ಯಾರ್ಥಿಗಳ ಶಿಕ್ಷಣ ಕ್ಕಾಗಿ ನಮ್ಮೀಬಡರಾಷ್ಟ್ರ ಎಷ್ಟು ಹಣ ವೆಚ್ಚಮಾಡಬೇ ಕಾಗುವುದೋ ಅಷ್ಟೇ ಹಣವನ್ನು ೪೦ ವಿದ್ಯಾರ್ಥಿಗ ಳನ್ನು ಚೆನ್ನಾಗಿ ತರಬೇತಿಗೊಳಿಸಿ ಪ್ರಯೋಗಶಾಲೆಯ ನ್ನೂ ಸಜ್ಜುಗೊಳಿಸಲು ಒಬ್ಬ ಅತ್ಯುತ್ತಮ ಉಪಾಧ್ಯಾ ಪಕನ ಸೇವೆಗಾಗಿ ವೆಚ್ಚಮಾಡಬಹುದಾಗಿದೆ.

ಬ) ಇಲ್ಲಿಗೆ ಬರುವ ವಿದ್ಯಾರ್ಥಿಗಳು ಸಂಶೋಧ ಧನೆಯಲ್ಲಿ ಪ್ರಾರಂಭದ ಜ್ಞಾನ ಪಡೆಯುವರು. ಆದರೆ ಮರಳಿ ಸ್ವದೇಶಕ್ಕೆ ಹೋದ ಬಳಿಕ ಪ್ರಯೋಗಶಾಲೆ ಯನ್ನೆಂತು ಸಜ್ಜುಗೊಳಿಸಬೇಕೆಂಬುದು ಅವರಿಗೆ ತಿಳಿಯುವುದಿಲ್ಲ.

ಕ) ತಮ್ಮ ಕೆಲಸವನ್ನು ಹಾಗೆಯೆ ಮುಂದರಿ ಸಲು ಅವರಿಗೆ ಅವಕಾಶವಿರುವುದಿಲ್ಲ.

ಡ)ತಜ್ಞರು ನಮ್ಮಲ್ಲಿದ್ದರೆ ನಮ್ಮ ಪ್ರಯೋಗ ಶಾಲೆಗಳೂ ಹೆಚ್ಚು ಪರಿಪೂರ್ಣವಾಗುವವು.

ನಮ್ಮ ವಿದ್ಯಾರ್ಥಿಗಳು ಪರದೇಶಗಳಿಗೆ ಹೋಗಬೇಕೆಂದು ನಾನೆಂದಿಗೂ ಪ್ರತಿಪಾದಿಸಿಲ್ಲ ನಮ್ಮ ವಿದ್ಯಾರ್ಥಿಗಳು ಪರದೇಶದಿಂದ ಮರಳಿ ಬಂದ ನಂತರ ಇಲ್ಲಿನ ಪರಿಸ್ಥಿತಿ ಅನೇಕ ಸಂದರ್ಭಗಳಲ್ಲಿ ಅವರಿಗೆ ಒಗ್ಗುವುದಿಲ್ಲೆಂಬುದು ನನ್ನ ಅನುಭವ. ನಮ್ಮ ದೇಶ ದಲ್ಲಿ ದೊರೆವ ಅನುಭವ ಅಮೂಲ್ಯವಾಗಿದ್ದು ಅ ವೃದ್ಧಿಗೆ ಸಹಾಯಕರವಾಗುತ್ತದೆ. ಅವರಿಂತು ವಿದೆ ಶಕ್ಕೆ ಹೋಗುವ ಉನ್ಮಾದ ವಿದ್ಯಾರ್ಥಿಗಳಿಗೆ ಫೈ ವಾಗಿ ಅಂಟಕೊಂಡಿದೆ. ಮೇಲೆ ಉಲ್ಲೇಖಿಸಿದ ಅವ ರಣಿಕೆ ಎಚ್ಚರಿಕೆಯಾಗಿ ಪರಿಣಮಿಸುವದೊ?

ಹೊಸದಿಲ್ಲಿ ಮೋ. ಕ ಗಾಂ

—ಜಿನ್ನಾರ ಹೊಸ ಪ್ರಲಾಪ—

"ಇತರರೊಡನೆ ನನ್ನನ್ನು ಸರಿ ಸಮಾನವಾಗಿ ನಡೆಸಿ ಕೊಂಡು ಲಂಡನ್ನಿನಲ್ಲಿ ಸಭೆಸೇರಿಸಿ ಆಮಂತ್ರಿಸುವದಾ ದರೆ, ಸದ್ಯದ ನಡುಗಾಲ ಸರಕಾರವು ಅಧಿಕಾರದಲ್ಲಿ ರುವದನ್ನು ನಾನು ಒಪ್ಪುವೆನು. ಬ್ರಿಟಿಷರು ತಮ್ಮ ಬಂದೂಕಬಲದಿಂದ ಸರಕಾರಕ್ಕೆ ಬೆಂಬಲಕೊಡಲು ಸಿ ದ್ಧರಾದರೆ ಮುಸ್ಲಿಂರು ಅದನ್ನು ಸಹಿಸಲಾರರು. ಅ ವರು ನನ್ನನ್ನು ಬಂಧಿಸುವದಾದರೆ ನಾನು ಸೆರೆಮನೆಗೆ ಹೋಗಲು ಸಿದ್ಧನಿದ್ದೇನೆ ನನ್ನನ್ನು ಇರಿಯಲಾಗಿದೆ. ಪಂಡಿತ ನೆಹರೂರ ಭಾಷಣದ ಸವಿಮಾತುಗಳಿಂದ ಘಾ ಯಗಳು ಮಾಯವಾಗುವುದಿಲ್ಲ ಬ್ರಿಟಿಷ ಕೂಲಿಕಾರ ಸರಕಾರವು ಕಾಂಗ್ರೆಸಿಂದ ವಂಚಿತವಾಗಿದೆ. ಅದು ಅನಪ್ರಭವಿಕವಿದ್ದು ನನಗೆ ಕರಾಳ ಭವಿಷ್ಯವು ಕಂಡು ಬರುತ್ತಲಿದೆ. ಆಂಗ್ಲೊ-ಅಮೆರಿಕನ ಮತ್ತು ರಷ್ಯ ಗಳಲ್ಲಿನ ಸಂಬಂಧವು ಕೆಟ್ಟುಹೋದರೆ ಮುಸ್ಲಿಂರಿತ್ತ ಕಾಲ್ದೆಗೆಯುವರೆಂಬುದನ್ನು ಹೇಳಲಾಗುವುದಿಲ್ಲ-" ಎಂಬುದಾಗಿ ಡೇಲಿ ಮೇಲ ಸುದ್ದಿಗಾರನಿಗೆ ಹೇಳಿ ದರು.

ಸಿಂಧ ಮತ್ರಿಮಂಡಲದಲ್ಲಿ ನಾಲ್ವರು ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದು ಬೇರೆ ಸದಸ್ಯರನ್ನು ಸಮಾಧಾ ನ ಮಾಡುವ ಕೆಲಸ ಸಾಗಿದೆ. ಗವರ್ನರರು ಈ ರಾಜೀ ನಾಮೆಗಳನ್ನು ಸ್ವೀಕರಿಸಿ ಶಾಸನಸಭೆಯನ್ನು ಮುಂದುವರಿಸಿರುವರು

THE NAVA BHARAT

ಸಂಪಾದಕ-ಟಿ.ಪಿ.ಕೇಶವರಾವ್

9th Year of Publication.

16th SEPTEMBER 1946

ಮದ್ರಾಸ್ ಪ್ರಾಂತದಲ್ಲಿ ಬಟ್ಟೆಗಳ ಹಂಚುವಿಕೆ.

ಕಾಂಗ್ರೆಸ್ ಮಂತ್ರಿವರ್ಗದವರು ಒಂದು ಯೋಜನೆಯನ್ನು ತಯಾರು ಮಾಡಿ ಅದರ ಪ್ರಕಾರಕ್ಕೆ ಪ್ರಾಂತದ ಎಲ್ಲಾ ಭಾಗಗಳಲ್ಲಿರುವ ಜನರಿಗೆ ಬಟ್ಟೆಗಳನ್ನೊದಗಿಸುವದನ್ನು ನವಂಬರ್ ತಿಂಗಳಿಂದ ಜಾರಿಯಲ್ಲಿ ತರುವದಾಗಿ ಪ್ರಕಟಿಸಿದ್ದಾರೆ- ಜಿಲ್ಲೆಗೆ ಬೇಕಾಗುವಷ್ಟು ಬಟ್ಟೆಯನ್ನು ಆಯಾ ಜಿಲ್ಲೆಗಳಿಗೆ ವದಗಿಸಲಾಗುವುದು. ಜಿಲ್ಲೆಯಿಂದ ತಾಲೂಕಿಗೆ ಬೇಕಾಗುವಷ್ಟು ಬಟ್ಟೆಗಳು ಒದಗಿಸಲ್ಪಡುವವು. ಅಂಗಡಿಗಳನ್ನು ನಿರ್ದೇಶಿಸಿ ಇಂತಿಷ್ಟು ಹಳ್ಳಿಗಳವರು ಇಂಥಾ ಅಂಗಡಿಗಳಲ್ಲಿ ಕೊಳ್ಳಬೇಕೆಂದು ನಿಶ್ಚಯಿಸುವರು. ಸದ್ಯಕ್ಕೆ ೫೦ ಸಾವಿರಜನ ಸಂಖೆಗಿಂತ ಹೆಚ್ಚಿನ ನಗರಗಳಲ್ಲಿ ಪ್ರತಿ ದೊಡ್ಡವರಿಗೆ ಒಂದು ವರ್ಷಕ್ಕೆ 9 ಗಜ ಬಟ್ಟೆ ೧೦ ಸಾವಿರದಿಂದ ೫೦ ಸಾವಿರದ ವರೆಗೆ ಇರುವ ನಗರದವರಿಗೆ ವರ್ಷಕ್ಕೆ ವಯಸ್ಕರಿಗೆ ೭ ಗಜ ಬಟ್ಟೆ ಇನ್ನು ಕಡಮೆ ಜನಸಂಖೆಯಿರುವ ಹಳ್ಳಿಗಳಲ್ಲಿ ವಯಸ್ಕರಿಗೆಲ್ಲಾ ವರ್ಷಕ್ಕೆ ೪ ಗಜ ಬಟ್ಟೆ ದೊರೆಯಬೇಕೆಂಬ ಸೂಚನೆ ಈ ಯೋಜನೆಯಲ್ಲಿದೆ. ಈ ಭೇದ ಬುದ್ಧಿಗೆ ಕಾರಣವು ಗೊತ್ತಾಗಿಲ್ಲ. ಪಟ್ಟಣಕ್ಕಿಂತಲೂ ಹಳ್ಳಿಯವರಿಗೆ ಬಟ್ಟೆಗಳನ್ನು ಒದಗಿಸಬೇಕಾದುದು ಮತ್ತು ಹಳ್ಳಿಗರು ಪಟ್ಟಣದವರಿಗಿಂತಲೂ ಶುಭ್ರರಿರುವಂತೆ ಮಾಡಬೇಕಾದುದು ಸಾರ್ವಜನಿಕರ ಮತ್ತು ಸರಕಾರದ ಕರ್ತವ್ಯವಾಗಿದೆ. ಎಲ್ಲಾ ವಿಷಯಗಳಲ್ಲೂ ಪಟ್ಟಣಿಗರಿಗೇ ಹೆಚ್ಚಿನ ಸೌಲಭ್ಯಗಳನ್ನೊದಗಿಸುತ್ತಿರುವ ಹಿಂದಿನ ಸರಕಾರದವರ ಮನೋವೃತ್ತಿಯು- ಪ್ರಜಾಪ್ರತಿನಿಧಿಗಳ ಈ ಸರಕಾರದಲ್ಲಿ ಹೋಗಬೇಕಾದುದು ಅವಶ್ಯವಿತ್ತು ಆದರೆ ಅದನ್ನೇ ಅಲ್ಪರೂಪದಲ್ಲಾದರೂ ಮುಂದುವರಿಸುವ ಈ ಧೋರಣವನ್ನು ನಾವು ಖಂಡಿಸುತ್ತೇವೆ.

ಇನ್ನು ಬಟ್ಟೆಗಳ ಪೂರ್ಕೆಯ ವಿಷಯ. ಜನ ಸಂಖೆಗನು ಗುಣವಾಗಿ ಬೇಕಾಗುವಷ್ಟು ಬಟ್ಟೆಯನ್ನು ಸಕಾಲಕ್ಕೆ ಒದಗಿಸುವೆವೆಂದು, ಅಲ್ಲದೆ ಜನರಿಗೆ ಅವಶ್ಯವಾಗಿ ಬೇಕಾಗುವ ಬಟ್ಟೆಯನ್ನೇ ಒದಗಿಸುವೆವೆಂದು ಸರಕಾರವು ಭರವಸೆ ಕೊಡುವಂತಿಲ್ಲ. ಅಂದ ಮೇಲೆ ಇವರು ನಿಶ್ಚಯಿಸಿದಷ್ಟು ಬಟ್ಟೆ 9, 7, 4 ಗಜಗಳು ವರ್ಷ ಒಂದಕ್ಕೆ ಸಿಕ್ಕೀತೆಂಬುವೆಂದು ಹೇಳಲು ಆಧಾರಗಳಿಲ್ಲ. ದೊರಕಿದರೂ ಉಡುವಧೋತ್ರದ ಬದಲು- ಗೀರಿನಶರ್ಟಿಂಗ್, ಶರ್ಟಿಂಗಿನ ಬದಲು ಕೋಟ ಬಟ್ಟೆ, ಸೀರೆಯ ಬದಲು ಹಚ್ಚಡ ಹೀಗೆ ಅಂಗಡಿಯಲ್ಲಿರುವ, ಸ್ಟಾಕ್‌ನಲ್ಲಿರುವ, ಬಟ್ಟೆಯನ್ನೇ ಹರಿಸಿಕೊಂಡು ಹೋಗುವ ಪ್ರಸಂಗ ಬೀಳುವುದು.

ಇದು ಬಟ್ಟೆಗಳ ಕ್ಷಾಮವನ್ನು ನಿವಾರಿಸಿದಂತಾಗುವುದಿಲ್ಲ. ಹಳ್ಳಿಗರಿಗೆ ಬೇಕಾದ ಬಟ್ಟೆಯನ್ನೇ ಒದಗಿಸುತ್ತೇವೆಂದು ಸರಕಾರವು ವಚನ ಕೊಡಬೇಕು ಪಟ್ಟಣ ಮತ್ತು ಹಳ್ಳಿಗರ ಭೇದವನ್ನು ಹೋಗಲಾಡಿಸಬೇಕು. ಬಂದ ಮಾಲನ್ನು ಮೊದಲು ಹಳ್ಳಿಗರಿಗೊದಗಿಸಬೇಕು- ಅಂಗಡಿಗಳವರು ಹಳ್ಳಿಗಳ ಲೀಸ್ಟನ್ನು ಸರಿಯಾಗಿ ತಯಾರಿಸಿ ಅವರಿಗೆಲ್ಲಾ ಬಟ್ಟೆಗಳನ್ನೊದಗಿಸಿದುದಕ್ಕೆ ತಕ್ಕಆಧಾರ ಭೂತ ಲಿಕ್ಕಗಳನ್ನು ಹಳ್ಳಿಗರ ಸಹಿಮೂಲಕ ತೋರಿಸಬೇಕು- ಸರಕಾರವು ದೇಶದಲ್ಲಿರುವ ಬಟ್ಟೆಯನ್ನು ಸಮವಾಗಿ ಹಂಚಲು ಪ್ರಯತ್ನಿಸಬೇಕು

ಪತ್ರವ್ಯವಹಾರ.

ಕಾಂಗ್ರೆಸ್ ಹೆಸರಿನಿಂದ ಜಿಲ್ಲಾ ಬೋರ್ಡು ಚುನಾವಣೆಗಳು ಬೇಡ.

ಸಂಪಾದಕ "ನವಭಾರತ" ಬಳ್ಳಾರಿ, ಇವರಿಗೆ

13 ನೇಯ ತಾ! ಸಂಯುಕ್ತ- ಕರ್ನಾಟಕ ದಿನಪತ್ರಿಕೆಯಲ್ಲಿ ಶ್ರೀಬಿ. ಲಂಕೆಪ್ಪನವರು ಜಿಲ್ಲಾಬೋರ್ಡ ಚುನಾವಣೆಗಳನ್ನು ಕಾಂಗ್ರೆಸ್ ಹೆಸರಿನಿಂದ ಸ್ಪರ್ಧಿಸಬೇಕೆಂದು ಬರೆದು, ಜಿಲ್ಲಾಬೋರ್ಡಿನಿಂದ ಜಿಲ್ಲೆಗೆ ಆಗುವ 'ಅಮೋಘ' ಉಪಕಾರಗಳನ್ನು ವರ್ಣಿಸಿದ್ದಾರೆ- ರಸ್ತೆರಿಪೇರಿ- ವಿದ್ಯಾಸೌಕರ್ಯ, ಕನ್ನಡಪ್ರಗತಿ, ಹರಿಜನರಶಾಲೆ- ದೇವಸ್ಥಾನ- ಶಾಲೆ- ಕೆರೆ ಪ್ರವೇಶ ವಗೈರೆ ಆಗಬೇಕೆಂದು ಹೇಳಿದ್ದಾರೆ-

ಈ ಲಂಕೆಪ್ಪನವರಿಗೆ ಈ ವಿಷಯಗಳು ಗೊತ್ತಿರಲಿಕ್ಕಿಲ್ಲ-

1) ಜಿಲ್ಲಾಬೋರ್ಡು ಕಾಂಗ್ರೆಸ್ ಪಾರ್ಟಿಯ 39 ಸದಸ್ಯರ ಪೈಕಿ ಅಧ್ಯಕ್ಷಚುನಾವಣೆಯ ಶ್ರೀ ಗಣೇಶ ಪೂಜೆಯಲ್ಲೇ 11 ಜನರು ಕಾಂಗ್ರೆಸ್ ವಿರೋಧವಾಗಿ ನಿಂತವರಿಗೆ ಮತಕೊಟ್ಟರು.

2) ಒಂದು ಅಂಗುಲ ಖಾದಿಯನ್ನು ಧರಿಸದ ಕಾಂಗ್ರೆಸ್ ಹೆಸರಿನ ಸದಸ್ಯರಿರುವರು. ಕಾಂಗ್ರೆಸ್‌ತತ್ವಗಳಿಗೆ ವಿರೋಧವಾಗಿ ವರ್ತಿಸುವರಿರುವರು. ಅವರ ಕ್ಷೇತ್ರಕ್ಕೆ ಹೋದಾಗ ಕೊನೆಗೆ ನಾಲ್ಕಾಣೆಯ ಒಬ್ಬ ಸದಸ್ಯನನ್ನಾಗಲಿ ಮಾಡದಿರುವವರಿರುವರು.

3) ಸದಸ್ಯರಲ್ಲಿ 4-5 ಜನರನ್ನು ಬಿಟ್ಟರೆ ಉಳಿದವರು ಕಾಂಗ್ರೆಸ್ ರಚನಾತ್ಮಕ ಕಾರ್ಯಕ್ಕೆ ಈ 9 ವರ್ಷಗಳಲ್ಲಿ ಒಂದು ದಂಬಡಿ ಸಹಾಯ ಮಾಡಿಲ್ಲ

(4) ದೇಶಕ್ಕೆಲ್ಲಾ ಬೆಂಕಿಹತ್ತಿ ಉರಿಯುತ್ತಿರಬೇಕಾದರೆ- ದೇಶದ ಮೂಢ ಮುಖಂಡರನ್ನು ಏಕಾಏಕಿ ಬಂಧಿಸಿ- ಸಂಬಂಧಿಸಿದ, ಸಂಬಂಧವಿಲ್ಲದ ಸ್ತ್ರೀ ಪುರುಷರಮೇಲೆ (ಚೀಮೂರು, ಅಷ್ಟಿ ಈಸೂರು ವಗೈರೆ) ಅಮಾನುಷ ಅತ್ಯಾಚಾರಗಳನ್ನು ನಡೆಸುತ್ತಿರುವಾಗ ಬ್ರಿಟಿಷ್ ಸರ್ಕಾರವು ತನ್ನ ಶಕ್ತಿಸರ್ವಸ್ವವನ್ನೂ ಉಪಯೋಗಿಸಿ- ಭೂಮಿಯಿಂದ, ಆಕಾಶದಿಂದ ಗುಂಡಿನ ಮಳೆಕರೆಯುತ್ತಾ ಸ್ವಾತಂತ್ರ್ಯೋದ್ಯಮವನ್ನು ಬಗ್ಗುಬಡಿಯುತ್ತಿರುವಾಗ- ಈ ಜಿಲ್ಲಾ ಬೋರ್ಡು ಕಾಂಗ್ರೆಸ್ ಸದಸ್ಯರೇನು ಮಾಡಿದರು?

(5) ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ನಾಗನಗೌಡರು ಜೈಲಿಗೆ ಹೋಗಬೇಕಾದ ಸಂದರ್ಭ ಬಂದೀತೆಂದು- ಅಖಿಲ ಭಾರತ ಕಾಂಗ್ರೆಸ್ ಸದಸ್ಯತ್ವ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಪದ- ಜಿಲ್ಲಾ ಕಾಂಗ್ರೆಸ್ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು- ಕಾಂಗ್ರೆಸ್ ಹೆಸರಿನಿಂದ ಅತಿ ಕಷ್ಟಪಟ್ಟು ಸದಸ್ಯರನ್ನೆಲ್ಲಾ ಬಂಧನದಲ್ಲಿರಿಸಿ ದೊರಕಿಸಿದ ಅಧ್ಯಕ್ಷ ಪದವನ್ನು ಬಿಡದಂತೆ ಹಿಡಿದುಕೊಂಡು ಉಳಿದ ಕಾಂಗ್ರೆಸ್ ಸದಸ್ಯರಿಗೆ ಮಾರ್ಗದರ್ಶಿಗಳಾದರು.

(6) ಇಡೀ ಜಿಲ್ಲಾ ಬೋರ್ಡು ಸದಸ್ಯರು ಅಗಷ್ಟ ಚಳವಳೀ ಕಾಲಕ್ಕೆ ರಾಜೀನಾಮೆ ಕೊಡಬೇಕೆಂದು ಕಾಂಗ್ರೆಸ್ ಸಮಿತಿಯವರೆಷ್ಟು ಕೇಳಿಕೊಂಡರೂ- ಕೊಡಲಿಲ್ಲ. ಇಷ್ಟೇ ಅಲ್ಲ. ಜಿಲ್ಲಾ ಬೋರ್ಡು ರದ್ದಾಗಿ ತಮ್ಮ ಸ್ವಾರ್ಥ ಸಾಧನೆಗೆ ಅಡ್ಡೀಯಾಗುವುದೆಂದು ಸಹಾನುಭೂತಿಪರ ತೀರ್ಮಾನವನ್ನಾದರೂ ಮಾಡಲಿಲ್ಲ.

ಬಹು ಸಂಖ್ಯಾಕ ಕಾಂಗ್ರೆಸ್ ಸದಸ್ಯರಿರುವ ಜಿಲ್ಲಾ ಬೋರ್ಡಿನ ರಸ್ತೆಗಳೂ, ಶಾಲೆಗಳೂ ಯಾವ ಸ್ಥಿತಿಯಲ್ಲಿರುವವೆಂಬುದನ್ನು ಎಲ್ಲರೂ ಒಪ್ಪುವರು. ತಮ್ಮ ಸ್ವಲಾಭಕ್ಕೆ ಬೇರೆಯವರ ಹೆಸರು ಹಚ್ಚಿ ಜಿಲ್ಲಾ ಬೋರ್ಡಿನ ಕಂಟ್ರಾಕ್ಟುಗಳನ್ನು ಪಡೆಯೋಗಿಸುವ ಸದಸ್ಯರಿಂದ ಜಿಲ್ಲೆಯು ಯಾವ ಏಳಿಗೆಯಾಗುತ್ತದೆ-?

ಮುದ್ರಾಸಕ್ಕೆ ಇಂಪೀರಿಯಲ್ ಲಂಡನ್ ಟೆಸ್ಟ್ ಭತ್ತದ ಮೊದಲಿನ ಹಡಗು ಸೆಪ್ಟೆಂಬರ ೨೦ ರಂದು ಮಾರಿಷಸ್ಸಿಗೆ ಬರಲಿರುವದೆಂದು ಗೊತ್ತಾಗಿದೆ-

ಇನ್ನು ಬಡ ಕಾಂಗ್ರೆಸ್ ಕಾರ್ಯಕರ್ತರು ಆರಿಸಿ ಬರುವ ಸಂಭವವೇ ಇಲ್ಲ. ಬಳ್ಳಾರಿ ಸ್ತ್ರೀ ಸ್ಥಳದ ಚುನಾವಣೆಯಲ್ಲಿ ಕಾಗ್ರೆಸ್‌ನ ಅಭಿಮಾನ, ಕಾಂಗ್ರೆಸ್ ಸದಸ್ಯರ "ಅನನ್ಯಸೇವೆ" ಚನ್ನಾಗಿ ವ್ಯಕ್ತಪಟ್ಟಿದೆ— ಹೆಚ್ಚಿನ ಶ್ರೀಮಂತರೂ, ಸಂಬಂಧಿಸಿದ ಕ್ಷೇತ್ರಗಳಲ್ಲಿ ಪ್ರತಿಭೆ ಇರುವ ವ್ಯಕ್ತಿಗಳೂಬೇಕು. ಬಡವರಿಗೆ ಇಂಥಾ ಸಂಸ್ಥೆಗಳಲ್ಲಿ ಸ್ಥಾನವೇ ಇಲ್ಲ. ಈಗ ಇರುವ ಸದಸ್ಯರ ನೇಕರು ಕಾಂಗ್ರೆಸ್ ಹೆಸರು ಟಿಕಟ್ಟುಕೊಡಲಿ' ಕೊಡದಿರಲಿ ಬರುವರು ಒಂದುವೇಳೆ ಕಾಂಗ್ರೆಸ್ ಹೆಸರಿನಿಂದ ಆರಿಸಿಸ್ಪರ್ಧಿಸಿದರೂ ಈಪ್ರಬಲಸ್ಥರನ್ನೇ ಆರಿಸಬೇಕು. ಇಲ್ಲವಾದರೆ-ಕಾಂಗ್ರೆಸನ್ನು ವಿರೋಧಿಸಿ ಗೆದ್ದು ಬರುವ ಸಾಮರ್ಥ್ಯವೂ, ಧೈರ್ಯವು ಇವರಲ್ಲುಂಟು—

ಪ್ರಾಂತ ಸರಕಾರವೂ, ಕೇಂದ್ರ ಸರಕಾರವೂ ಕಾಂಗ್ರೆಸ್‌ನವರದಿರಬೇಕಾದರೆ ಯಾವ ಅಧ್ಯಕ್ಷರೇಬರಲಿ- ಯಾವ ಸದಸ್ಯರೇ ಇರಲಿ- ಮೇಲಿಂದ ಕಾಂಗ್ರೆಸ್ ನವರು ಹಾಕಿಕೊಟ್ಟ ರೀತಿ, ನೀತಿಗಳನ್ನು ಪಾಲಿಸಲೇ ಬೇಕಾಗುತ್ತದೆ. ಇನ್ನು ಪ್ರೌಢ ವಿದ್ಯಾಭ್ಯಾಸ ರಸ್ತೆ- ಶಾಲೆ ಹರಿಜನರ ಏಳಿಗೆಗಾಗಿ ಪ್ರತ್ಯೇಕ ಶಾಖೆಗಳೇ ಏರ್ಪಟ್ಟು- ಮದ್ರಾಸಿನಿಂದ ಎಲ್ಲಾ ಕಾರ್ಯ ಭಾಗವೂ ನಡೆಯುತ್ತದೆ, ಇವರು ಸ್ವತಂತ್ರವಾಗಿ ಮಾಡಬೇಕಾದ್ದು ಏನೂ ಇರುವುದಿಲ್ಲ. ಶಾಲೆಯ ಮಾಸ್ತರರನ್ನು ಅಲ್ಲಿಂದ ಇಲ್ಲಿಗೆ ಸದಸ್ಯರು ಹೇಳಿದಂತೆ ವರ್ಗಾಯಿಸುವ ಕುಚೇಷ್ಟೆಗಳೂ ಅಂತವಾಗಲಿವೆ-

ಜಿಲ್ಲೆಯಲ್ಲಿ ಅನೇಕ ಆಂತರಿಕ ಕಾರಣಗಳಿಂದ ಜಿಲ್ಲಾಬೋರ್ಡು, ಮ್ಯುನಿಸಿಪಾಲಿಟಿಗಳನ್ನು ಕಾಂಗ್ರೆಸ್ ಹೆಸರಿನಿಂದ ಸ್ಪರ್ಧಿಸುವುದು ಜಿಲ್ಲೆಯ ಮೇಲಾಗಿ ಕಾಂಗ್ರೆಸ್‌ನ ಹಿತದೃಷ್ಟಿಯಿಂದ ಒಳ್ಳೆಯದಲ್ಲವೆಂದು ನಮ್ರಪೂರ್ವಕವಾಗಿ ಸೂಚಿಸುತ್ತೇನೆ

"ಎಲ್ಲಾ ಬಲ್ಲವ"

ಹೊಸಪೇಟೆ ಕುಂಗಭದ್ರಾ ಅಣೆಕಟ್ಟಿನ ಕೆಲಸಕ್ಕಾಗಿ ಬಂದ ೧೫೫ ಅಜಾದ್ ಹಿಂದ ಸೈನಿಕರಿಗೆ ಇಲ್ಲಿಯ ಕಾಂಗ್ರೆಸಿಗರು, ಪ್ರಮುಖರು ಸ್ವಾಗತವಿತ್ತರು.ಕಳೆದ ವಾರ ಜಿಲ್ಲಾದ ಕಲೆಕ್ಟರರ ಅಧ್ಯಕ್ಷತೆಯಲ್ಲಿಸಭೆ ಸೇರಿ ಕಬ್ಬನ್ನು ಸಕ್ಕರಿ ಗಿರಿಣಿಗೆ ವಶಪಡಿಸಿಕೊಳ್ಳುವ ಧೋರಣವನ್ನು ನಿಲ್ಲಿಸಬೇಕೆಂಬುವದಕ್ಕೆ ಕಲೆಕ್ಟರರು ಸಕ್ಕರೆ ಮುಖ್ಯ ಆಹಾರ ವಸ್ತುವೆಂದೂ ಆ ಪದ್ಧತಿಯನ್ನು ತಪ್ಪಿಸಲಾಗುವದಿಲ್ಲೆಂದೂ ಹೇಳಿದರು. ಮಾರ್ಗ ಸೌಕರ್ಯ ಕಡಿಮೆ ಇರುವದರಿಂದ ೧೬ ಹಳ್ಳಿಗೆ ಮಾತ್ರ ಕಮಾಂಡರಿಂಗ ಪದ್ಧತಿ ಇರಬೇಕೆಂದೂ ಮಿಕ್ಕ ಹಳ್ಳಿಗಳಿಗೆ ಅನ್ವಯಿಸಲಾಗುವದಿಲ್ಲೆಂದೂ ಗೊತ್ತಾಯಿತು. ಈ ಪದ್ಧತಿ ಜಾರಿಯಲ್ಲಿದ್ದರೆ ಬೆಲ್ಲ ತಯಾರಿಕೆ ಕಲೆ ಮಾಯವಾಗುವದೆಂದು ಶ್ರೀ ಅನಂತಾಚಾರ್ಯರು ಹೇಳಿದರು. ೧ ಎಕರೆಗೆ ೨೦ ಟನ್ನಿಗಿಂತ ಹೆಚ್ಚು ಕಬ್ಬು ಬೆಳೆಯದಿರುವದು ಶೋಚನೀಯವೆಂದು ಡಾ ಆರ್, ನಾಗನಗೌಡರು ಅಭಿಪ್ರಾಯ ವ್ಯಕ್ತ ಮಾಡಿದರು.

ಬಾಬೂ ರಾಜೇಂದ್ರರು

ಮದ್ರಾಸಿಗೆ ಬರುವರು.

ಕೇಂದ್ರ ಸರಕಾರದ ಆಹಾರ ಶಾಖೆ ಮಂತ್ರಿಗಳಾದ ಬಾಬು ರಾಜೇಂದ್ರ ಪ್ರಸಾದರು, ಅಕ್ಟೋಬರ್ 6 ನೆಯ ತಾ| ಮದ್ರಾಸಿಗೆ ಬಂದು- ಕೊಚಿನ್‌ಗೆ ಹೋಗಿ ಅಲ್ಲಿನ ಆಹಾರ ಸಮಸ್ಯೆಯನ್ನು ಪರಿಶೀಲಿಸುವರು- ಮದ್ರಾಸಿನ ಆಹಾರಖಾತೆ ಅಧಿಕಾರಿಗಳೊಂದಿಗೆ ಅವರು ಚರ್ಚಿಸಿ- ಆಹಾರ ಪದಾರ್ಥಗಳ ಕೊರತೆಯನ್ನು ನೀಗಿಸಲು ಉಪಾಯಗಳನ್ನು ಆಲೋಚಿಸುವರು. ಪ್ರಧಾನಮಂತ್ರಿಗಳಾದ ಪ್ರಕಾಶರು- ಮದ್ರಾಸ್ ಪ್ರಾಂತ್ಯಕ್ಕೆ ಸಾಕಷ್ಟು ಅಕ್ಕಿ ಪೂರೈಸಲು ಕೇಳಿ ಕೊಂಡಿದ್ದರು- ಅವರು ಕ್ಷಾಮಪ್ರದೇಶಗಳನ್ನೂ ಸಂದರ್ಶಿಸಬಹುದು.

ಮುಸ್ಲಿಂಲೀಗಿನ ಜನರು ಪಂಜಾಬಿನಲ್ಲಿ ಕರನಿರಾಕರಣೆ ಸಿದ್ಧತೆಗಾಗಿ ತಮ್ಮ ಚರಾಚರಾಸ್ತಿಗಳನ್ನು ಹೆಂಡತಿ ಮತ್ತು ಸಮೀಪದ ಇತರ ಬಂಧುಗಳ ಹೆಸರಿನಲ್ಲಿ ವರ್ಗಾಯಿಸುತ್ತಲಿರುವರು- ಇದು ಪ್ರತ್ಯಕ್ಷ ಹೋರಾಟದ ಸಿದ್ಧತೆಯೆಂದು ಗೊತ್ತಾಗಿದೆ—

ಆಟಂ ಬಾಂಬು.

ಓಜಿ ಹೌ. ತೂಕದ ಬಾಂಬು ೨ ಲಕ್ಷ ಜನರ ಆಹುತಿ ತೆಗೆದುಕೊಂಡಿತು.)

ವಾಶಿಂಗಟನ್ ನಗರದ ಡಾಕ್ಟರ್ ಗೈಸ್ಟಾವೆಲಿಯವರು- ನ್ಯೂಜೆರ್ಸಿ ಪ್ರಾಂತದ ಅಟ್ಲಾಂಟಿಕ್ ನಗರದಲ್ಲಿ ಭಾಷಣಮಾಡುತ್ತ-

"ಕಳೆದವರ್ಷ ಪ್ಯಾಸಿಫಿಕ್ ಪ್ರದೇಶದಲ್ಲಿ 65 ಟನ್ ತೂಕದ ಬಾಂಬನ್ನು ಸೆದೆವು. ಅದು ಎರಡು ಲಕ್ಷ ಜನರನ್ನು ಕೊಂದಿತು. ಶಾಂತಿ ಪ್ರಿಯ ದೇಶದವರಾದ ನಾವು ಇಂಥಾ ಕೃತ್ಯವನ್ನು ಕೈಗೊಂಡದ್ದು ಘಾತಕವಾಗಿದೆ- ಎಂದು ಹೇಳಿದರು.

ಸರಕಾರ ಮತ್ತು ಮಿಟರಿಕ್ಷೇತ್ರಗಳಲ್ಲಿನ ಮುಖ್ಯರು ಈಗುಟ್ಟು ಕೆಲವಿಜ್ಞಾನಕಾರರಿಗಲ್ಲದೆ ಮತ್ತಾರಿಗೂ ಗೊತ್ತಿಲ್ಲವೆಂದರು ವಿಮೋಚನಶಾಖೆಯವರಿಗಲ್ಲದೆ ಇತರರ್ಯಾರೂ, ಅದರ ತೂಕವನ್ನರಿಯಲು ಸಾಧ್ಯವಿಲ್ಲೆಂದರು.—

ಮನೆಗಳಿಲ್ಲದವರು ಖಾಲಿಮನೆಗಳನ್ನಾಕ್ರಮಿಸಿದರು.

ಸುರಿಯುತ್ತಿರುವ ಮಳೆಯಲ್ಲಿ ತಮ್ಮ ತಮ್ಮ ಸಾಮಾನುಗಳೊಂದಿಗೆ ೧೫೦೦ ಜನರನ್ನುಳ್ಳ ೫೦೦— ಕುಟುಂಬೀಕರು ಲಂಡನ್ನಿನ ವೆಸ್ಟ್‌ಕೆನ್ಸಿಂಗಟನ್ ಭಾಗಕ್ಕೆ ಬಂದು ಖಾಲಿಮನೆಗಳನ್ನೆಲ್ಲಾ ಆಕ್ರಮಿಸಿದರು ಪೋಲೀಸರನ್ನು ಕರೆಕಳುಹಿಸಿದರೆ ಅವರು ಪ್ರಜೆಗಳಿಗೆ ಸಹಾಯ ಮಾಡಿದರು. ಪೋಲೀಸ್ ಇನ್‌ಸ್ಪೆಕ್ಟರನು ಫಳಾರದ ಗಾಡಿ ತರಿಸಿ ಎಲ್ಲರಿಗು ಬಿಸಿಬಿಸಿ ಸಾಸೀಮ್ಯವನ್ನು ಕೊಡಿಸಿದನು. ವಾರಕ್ಕೆ ೧೦ ಗಿನಿಗಳಂತೆ ಬಾಡಿಗೆ ಗೆಕೊಡಲು ಸಾಹುಕಾರನು, ನಿಶ್ಚಯಿಸಿದ್ದನಂತೆ-

ಪಾಲಿಸ್ತಾನದಲ್ಲಿ ಯಹೂದಿಗಳು ಅನೇಕ ಹಿಂಸಾಚಾರಗಳನ್ನು ನಡೆಸಿ- ಬ್ರಿಟಿಶ ಅಧಿಕಾರಿಗಳನ್ನು ಕೊಲ್ಲುತ್ತಿರುವರು. ಲಂಡನ್ನಿನಲ್ಲಿ ಸೇರಿದ ಪಾಲಿಸ್ತಾನ ಪರಿಷತ್ತಿಗೆ ಯಹೂದಿ ಪ್ರತಿನಿಧಿಗಳು ಹೋಗಿಲ್ಲ.

ಬಳ್ಳಾರಿ ಸ್ಟೂಡೆಂಟ್ಸ್ ಕಾಂಗ್ರೆಸ್.

ಶ್ರೀ ಬಿಂದೂರ ಅಧ್ಯಕ್ಷತೆಯಲ್ಲಿ ಸಮೂಹೇಕವಾಗಿ 1946–47 ಕ್ಕೆ ಈ ಕೆಳಗಿನ ಅಧಿಕಾರಿವರ್ಗದವರು ಆರಿಸಲ್ಪಟ್ಟರು —

ಅಧ್ಯಕ್ಷ— ಶ್ರೀ ಕೆ. ಚಿದಾನಂದ ಶಾಸ್ತ್ರಿ
ಪ್ರಧಾನ ಕಾರ್ಯದರ್ಶಿ,, ಐ.ಬಸವರಾಜ.
ಸಹಕಾರ್ಯದರ್ಶಿಗಳು,, ಭಾರದ್ವಾಜ
ರಿಷಭೇಂದ್ರಸ್ವಾಮಿ,
ಖಜಾಂಚಿ ಜಿ. ಸಿದ್ದನಗೌಡು,

ಪ್ರತಿ ಹೈಸ್ಕೂಲಿಗೆ ಇಬ್ಬರು, ಕಾಲೇಜಿನಿಂದ 3 ಪ್ರತಿನಿಧಿಗಳನ್ನಾರಿಸಲು ಕಾರ್ಯದರ್ಶಿಗೆ ಅಧಿಕಾರವಿದೆ- ಬಿಂದೂರವರು- ರಚನಾತ್ಮಕ ಕಾರ್ಯಗಳಿಗೆ ಪ್ರೋತ್ಸಾಹ ಕೊಡಲು ಬೇಡಿದನಂತರ- ಕೇಂದ್ರ ಮತ್ತು ಪ್ರಾಂತಗಳಲ್ಲಿ ಕಾಂಗ್ರೆಸ್ ಮಂತ್ರಿವರ್ಗಕ್ಕೆ ಬೆಂಬಲವೀಯುವ- ಪ್ರಾಂತೀಕರಣವನ್ನು ಸಮರ್ಥಿಸುವ ತೀರ್ಮಾನಗಳಾದವು.

ನೇತಾಜಿಯವರಿಗೆ ಅಧ್ಯಕ್ಷಪದ ಕೊಡಿರಿ.

ನೇತಾಜಿ ಸುಭಾಸಚಂದ್ರ ಬೋಸರನ್ನು ಆಮಂತ್ರಿಸಿ ಕಾಂಗ್ರೆಸ ಅಧ್ಯಕ್ಷರನ್ನಾಗಿ ಮಾಡಬೇಕು ಮತ್ತು ಅವರು ಅಧ್ಯಕ್ಷಪದವನ್ನು ಸ್ವೀಕರಿಸಲು ಎಲ್ಲಿದ್ದರೂ ಅಲ್ಲಿಂದ ಬರಬೇಕೆಂದು ನಡುಗಾಲ ಸರಕಾರವು ಅ. ಭಾ. ಆಕಾಶವಾಣಿಯ ಮೂಲಕ ಬಿನ್ನವಿಸಿಕೊಳ್ಳುವಂತೆ ಕೇಳಿಕೊಳ್ಳಬೇಕು ಎಂಬ ಠರಾವೊಂದನ್ನು ಶೀಲಭದ್ರ ಯಾಜಿಯವರು ಅ. ಭಾ. ಕಾಂ. ಕಮೀಟಿಯಲ್ಲಿ ಮಂಡಿಸಲಿದ್ದಾರೆ

ನೇತಾಜಿಯವರು ಈ ತಿಂಗಳ ಕೊನೆಯೊಳಗಾಗಿ ಹಿಂದೂಸ್ಥಾನದಲ್ಲಿ ಪ್ರಕಟವಾಗಲಿರುವರೆಂದು ಪಂಜಾಬ್ ಪ್ರಾವರ್ಡ್ ಬ್ಲಾಕಿನ ಅಧ್ಯಕ್ಷರಾದ ಮೋಟಾಸಿಂಗರು ಸರದಾರ ಶಾರ್ದೂಲಸಿಂಗ ಕವೀಶ್ವರರ ಮನೆಯಲ್ಲಿ ಸೇರಿದ್ದ ಸಭೆಯೊಂದರಲ್ಲಿ ತಿಳಿಸಿದರು.

ಸರಕಾರದ ನೌಕರರಿಗೆ ಸಂಬಳದ ಬಡ್ತಿ

ಗ್ರಾಮೋದಿಕಾರಿಗಳಿಗೆ!–

ಸರಕಾರದ ನೌಕರರಿಗೆ ತಾತ್ಕಾಲಿಕವಾಗಿ ಕೊಡ ಬಹುದಾದ ಸಹಾಯವನ್ನು .ಸರ್ಕಾರದವರು -ಪ್ರಕಟಿಸಿರುತ್ತಾರೆ. ಇದಕ್ಕಾಗಿ ಒಂದು ಉಪಸಮಿತಿಯು ನಿಯಮಿಸಲ್ಪಟ್ಟು- ಅಕ್ಟೋಬರ್ ಮಧ್ಯದಲ್ಲಿ- ತಮ್ಮ ಶಿಫಾರ್ಸುಗಳನ್ನು ಸರ್ಕಾರಕ್ಕೆ ವರದಿಯ ರೂಪದಿಂದ ಕೊಡುವವರಿದ್ದಾರೆ, ಈಗ 40/-ಅಥವಾ ಅದಕ್ಕಿಂತ ಕಡಮೆ ಮೂಸಿಕ ಸಂಬಳ ಇರುವವರಿಗೆ 3/- ಮತ್ತು 40 ರಿಂದ 196 ರವರಿಗೆ 4/– ಹೆಚ್ಚಿಸಿರುವರು.

ಗ್ರಾಮೋದ್ಯೋಗಿಗಳಾದ ಗೌಡ–ಶಾನುಭೋಗ ತಳವಾರರಿಗೆ ಆಗಸ್ಟು 1 ರಿಂದ 3/-ಹೆಚ್ಚಿಸಿರುವರು.

ಹಂಪಿಕೆಟ್ಟಿಡ- ಅಧಿಕಾರಿಗಳುಪಯೋಗಿಸಬಾರದು –ಕಲೆಕ್ಟರವರ ಆಜ್ಞೆ –

"ಲೋಟಸ್ ಮಹಲ್" ಎಂಬ ಕಮಲದಾಕಾರದ ಮತ್ತುವಿಜಯನಗರದ ರಾಣಿಯರ ಸ್ನಾನಾಗಾರದಲ್ಲಿ ಹಂಪೆಯಜಾತ್ರೆಕಾಲಕ್ಕೆ ಹೂಸಪೇಟೆಯ ಮುಸಲ್ಮಾನ ಡೆಪ್ಯುಟಿ ಸೂಪರಿಂಟರು ಇಳಿದುಕೊಂಡು-ಬಂದಯಾತ್ರೀಕರು ಅದನ್ನುನೋಡದಂತೆ ಪ್ರತಿಬಂಧಿಸಿದ್ದರೆಂದು- ಮದ್ರಾಸ್ ಸರ್ಕಾರದೊಡನೆ ಪತ್ರವ್ಯವಹಾರನಡೆಸಿದ ಶ್ರೀ ಶಿವದೇಶಾಯಿಯವರಿಗೆ- "ಸರ್ಕಾರದಧಿಕಾರಿಗಳು ಇನ್ನುಮುಂದೆ ಹೀಗೆ ಮಾಡಬಾರದೆಂದು ವಿಧಿಸಲಾಗಿದೆ" ಎಂದು ಕಲೆಕ್ಟರವರು ಬರೆದಿರುತ್ತಾರೆ-

---

ಬಳ್ಳಾರಿ:– ಮುನಿಸಿಪಾಲಿಟಿಯಲ್ಲಿರುವ ಕೆಳದರ್ಜೆಯ ನೌಕರರಿಗೆ ಪ್ರತ್ಯೇಕವಾಗಿ ಆಹಾರಧಾನ್ಯಗಳ ಡಿಪೋ ತೆಗೆಯಲು (ಸರ್ಕಾರದಸೂಚನೆಗನುಸಾರವಾಗಿ) ನಿಶ್ಚಯವಾಯಿತು. ಶ್ರೀವಿಠಲಶೇಷಪ್ಪನವರು ಮುನಿವಾಚನಾಲಯದ ಕಟ್ಟಡಕ್ಕಾಗಿ ಸುಮಾರು ರೂಗಳಂಂ ಇತ್ತ ನಾಗ್ದಾನವನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲಾಯಿತು.

ಭಾರತಕ್ಕೆ

ಅಮೇರಿಕಾದಿಂದ ಊಟದ ಪಟ್ಟಿಗಳು.

ಮದ್ರಾಸ-ಸರ್ಕಾರವು ಅಮೆರಿಕದಿಂದ ಎರಡು ಲಕ್ಷ ರೂಪಾಯಿಬೆಲೆ ಬಾಳುವ ಊಟದ ಪಟ್ಟಿಗಳನ್ನು ಕಳುಹಿಸಲು ಬರೆದಿದೆಯೆಂದು ಪ್ರಕಟವಾಗಿದೆ. ಒಂದೊಂದು ಪಟ್ಟಿದಲ್ಲಿ ೪ ಔನ್ಸ್ ಅನ್ನ ಪದಾರ್ಥ, ಮತ್ತು ಒಣಗಿಸಿಡಲ್ಪಟ್ಟ ಕಾಯಿಪಲ್ಯವಿರುತ್ತದೆ. ಇವುಗಳನ್ನೆಲ್ಲಾ ಬೇಯಿಸಿದರೆ ೧೬ ಔನ್ಸಿನಷ್ಟು ಆಹಾರವು ತಯಾರಾಗಿ ಈಗಿನ ಲೆಕ್ಕದ ಪ್ರಕಾರ ಒಬ್ಬನಿಗೆ ಎರಡೂಟಕ್ಕೆ ಸಾಕಾಗುವುದು. ಈ ಪುಡಿಕೆಗಳು ಬರಲು ಇನ್ನೂ ಎರಡು ತಿಂಗಳು ಬೇಕಾಗಬಹುದು.

ಮದ್ರಾಸ ಪ್ರಾಂತದಲ್ಲಿ ಅಕ್ಟೋಬರ್ ೨ ರಿಂದ ಜಾರಿಗೆ ತರಲಿರುವ ಖಾದಿ ಯೋಜನೆಯನ್ನು ಕುರಿತು ಪ್ರಾಂತೀಯ ಟೆಕ್ಸ್‌ಟಾಯಿಲ ಕಮೀಶನರವರಾದ ಶ್ರೀ ಯಸ್. ವೆಂಕಟೇಶ್ವರನ್‌ರವರು ಮಹಾತ್ಮ ಗಾಂಧಿಯವರೊಡನೆ ಸಂಭಾಷಿಸಿದರು. ಗಾಂಧೀಜಿಯವರ ಸಲಹೆಯನ್ನು ಮದ್ರಾಸ್ ಸರ್ಕಾರವು ಪೂರ್ಣವಾಗಿ ಸ್ವೀಕರಿಸಿದೆ ಇದನ್ನು ಕಾರ್ಯರೂಪಕ್ಕೆ ತರಲು ತಮಿಳು, ಆಂಧ್ರಕೇರಳ ಕಾರ್ಯದರ್ಶಿಗಳು ಅಹ್ವಾನಿಸಲ್ಪಟ್ಟಿರುವರು.

ನಾನಗೆಜೆಟೆಡ್ ಆಫೀಸರ್ಸ ಅಸೋಶಿಯೇಷನ್ ಎಂಬ ಮಧ್ಯಮವರ್ಗದ ಸರ್ಕಾರಿ ನೌಕರರ ಸಂಘಕ್ಕೆ ಸರ್ಕಾರದವರು ಕೊಟ್ಟ ಮುನ್ನಣೆಯನ್ನು ಹಿಂದೆಗೆದು ಕೊಂಡಿರುವರು.–

ಕಾಶ್ಮೀರ ಪ್ರಜಾಪರಿಷತ್ತಿನ ಮುಖಂಡರಾದ ಶೇಖ ಅಬ್ದುಲ್ಲಾರವರಿಗೆ ರಾಜದ್ರೋಹದ ಆರೋಪದ ಮೇಲೆ 3 ವರ್ಷ ಸಾದಾ ಶಿಕ್ಷೆ ೧೫೦೦ ದಂಡ ಹೇರಲಾಗಿದೆ.

The Rayalaseema Bank Limited, Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:—

ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ.
ಅನಂತಪುರ:- ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ.
ಚಿತ್ತೂರು:- ಚಿತ್ತೂರು, ಮದನಪಲ್ಲಿ, ತಿರುಪತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ. **ಕಡಪ:-**ರಾಜಂಪೇಟೆ

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ್ ಫಂಡ ಡಿಪಾಜಿಟ್:- 3%.

ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.



ಕಾಶ್ಮೀರು ಅರುಕ್

(ಮನೆಯ ವೈದ್ಯ)

ಕೆಮ್ಮು, ಉಬ್ಬಸ, ಶೀತಜ್ವರ, ಥಳಜ್ವರ, ಅಜೀರ್ಣ ಮೊದಲಾದ ವ್ಯಾಧಿಗಳಿಗೆ ದಿವ್ಯಾಮೃತ ಎಲ್ಲಾ ನೋವುಗಳಿಗೆ ಹಾವು ಜೇಳು ಕಚ್ಚಿದುದಕ್ಕೆ ದಿವ್ಯೌಷಧ ಎಲ್ಲಾ ಷಾಪುಗಳಲ್ಲಿ ದೊರೆಯುತ್ತದೆ

ಹೆಚ್. ಯಸ್. ಅಂಡ್ ಸನ್ಸ್,
ಬಳ್ಳಾರಿ.

ಬೆಳ್ಳಿಯ ಪಾತ್ರೆಗಳು.

ಶುದ್ಧ ಮತ್ತು ಸ್ವಚ್ಛ ಬೆಳ್ಳಿಯಲ್ಲಿ ಸಂಬಿಕಸ್ತರಾದ ನಮ್ಮ ಕೆಲಸಗಾರರಿಂದ ತಯಾರಿಸಲ್ಪಟ್ಟ ತಂಬಿಗೆ, ತಾಲಿ, ಕಪ್ ಸಾಸರ್, ಟೀ ಸೆಟ್ ಮತ್ತು ಮದುವೆ ಮುಂತಾದ ಶುಭಕಾರ್ಯಗಳಲ್ಲಿ ಬಹುಮಾನ ರೂಪವಾಗಿ ಕೊಡಬಹುದಾಗ ಎಲ್ಲಾ ಆಧುನಿಕ ನಮೂನೆಗಳು ನಮ್ಮಲ್ಲಿ ಸರಿಯಾದ ಬೆಲೆಗೆ ದೊರೆಯುತ್ತವೆ. ನಮ್ಮ ಸೀಲಿರುವ ಪಾತ್ರೆಗಳನ್ನು ಯಾವಾಗ ಬೇಕಾದರೂ ಹಿಂದಕ್ಕೆ ಕೊಟ್ಟು ವೇಸ್ಟೇಜ್, ಕೂಲಿ ಕಳೆದನಂತರ ಹೊಸ ಪಾತ್ರೆಗಳನ್ನು ಪಡೆಯಬಹುದು.

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

NAVA BHARAT, BELLARY

Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರು ತಿಂಗಳ ಕೆಳಗಿನ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

SRI.....

.....

.....

Printed at Krishna Press Bellary Edited & Published by T. B. KESAVA RAO.

(Q. H. No. B-5)

Reg. No. M. 4746

ಜೈಹಿಂದ್.

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

ಕಟ್ಟು ೫ ಸಂಚಿಕೆ ೮ | ಬಳ್ಳಾರಿ ಸೆಪ್ಟಂಬರು ೨೩ ಸೋಮವಾರ ೧೯೪೬ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವು.

ಮಹಾತ್ಮಾ ಗಾಂಧಿ

ಮತ್ತು

ಭಾರತ ಮಂತ್ರಿ

ಶಾರ್ದಪಟೇಲರ ಇವರ ಭೇಟಿ

(ದೆಹಲಿಯಲ್ಲಿ)

ಮಹಾತ್ಮ ಗಾಂಧಿಯವರ ಲೇಖನಗಳು

(೧) ಒತ್ತಾಯದ ವಿವಾಹ

ಭಗಿನಿಯೊಬ್ಬಳು ಬರೆಯುತ್ತಾಳೆ-

"ವಿವಾಹವಾಗಲೇ ಬೇಕು, ಇಲ್ಲವೆ ಮನೆಯನ್ನು ಬಿಟ್ಟು ಹೋಗಬೇಕು ಎಂದು ಪಾಲಕರು ಒತ್ತಾಯ ಪಡಿಸಿದಲ್ಲಿ ಮನಸ್ಸಿಲ್ಲದ ಹೆಣ್ಣುಮಗಳು ಎನುಮಾಡಬೇಕು? ಸ್ವಂತ ಜೀವನವನ್ನು ಸಾಗಿಸುವಷ್ಟು ಅವಳು ಸುಶಿಕ್ಷಿತಳಾಗಿರದಿದ್ದರೆ ಅವಳಿಲ್ಲಿಗೆ ಹೋಗಬೇಕು? ಯಾರ ರಕ್ಷಣೆಯನ್ನು ಅವಳು ಆಶ್ರಯಿಸಬೇಕು"

ಈ ಪ್ರಶ್ನೆ ಓದಿ ವಿಷಾದವಾಗುತ್ತದೆ. ತಮ್ಮ ಮಕ್ಕಳನ್ನು ಒತ್ತಾಯದಿಂದ ಮದುವೆಗೆ ಒಪ್ಪಿಸುವುದು ಪಾಲಕರ ಮಹಾದೋಷ. ಹೆಣ್ಣು ಮಕ್ಕಳು ಸ್ವಂತ ಜೀವನವನ್ನು ಸಾಗಿಸಿಕೊಳ್ಳದಂತಹ ಸ್ಥಿತಿಯಲ್ಲಿ ಇಡುವದು ದೊಡ್ಡ ತಪ್ಪು. ಮದುವೆಯಾಗಲು ಒಪ್ಪದಿದ್ದ ಯಾವ ಹೆಣ್ಣುಮಗಳನ್ನೂ ಮನೆ ಹೊರಗೆ ದೂಡುವ ಅಧಿಕಾರ ಯಾವ ಪಾಲಕರಿಗೂ ಇರುವುದಿಲ್ಲ. ಇಂಥ ಕ್ರೂರ ಉದಾಹರಣೆಗಳು ಕಡಮೆ ಇರುವವೆಂದು ಆಸಿಸುವಾ. ಯಾವದೇ ಕೆಲಸ ಮಾಡುವದು ಕಸಗುಡಿಸುವದು ಕೂಡ ತನ್ನ ದರ್ಜೆಗೆ ಕಡಮೆಯಾದುದೆಂದು ಯಾವ ಹೆಣ್ಣುಮಗಳೂ ಭಾವಿಸಬಾರದೆಂದು ನಾನು ಹೆಣ್ಣು ಹುಡಿಗಿಯರಿಗೆ ಸಲಹೆ ಕೊಡಬಯಸುತ್ತೇನೆ. ಹೆಣ್ಣುಮಕ್ಕಳು ಗಂಡಸರ ರಕ್ಷಣೆಯನ್ನೂ ಅವಲಂಬಿಸಬಾರದು. ಪುರಾತನ ಕಾಲದ ದ್ರೌಪದಿಯಂತೆ ಹೆಣ್ಣುಮಕ್ಕಳು ತಮ್ಮ ಶಕ್ತಿಯನ್ನು, ವಿಶುದ್ಧ ಶೀಲವನ್ನು ಮತ್ತು ಪರಮಾತ್ಮನನ್ನೇ ಅವಲಂಬಿಸಬೇಕು.

ಹೊಸದಿಲ್ಲಿ

ಮೋ. ಕ. ಗಾಂಧಿ

(೨) ಪಾನ ನಿರೋಧ

ರೆವರೆಂಡ ಈ ಗಾರ್ಡನ್ನರ ಬರೆಹದ ಈ ಕೆಳಗಿನ ಅವತರಣಿಕೆಗಳು ನಿಚಾರ ಪ್ರಚೋದಕವಾಗಿವೆ.

"ಬರಗಾಲ ದೇಶವನ್ನು ಬೆದರಿಸುತ್ತಿರುವ ಈ ಕಾಲದಲ್ಲಿ ಅವರ ಭಯವನ್ನು ನಿವಾರಿಸುವ ಕಳಕಳಿಯ ಪ್ರಯತ್ನಗಳಿಗೆ ಹೆಸರಿಡುವದು ಸಲ್ಲದು. ಆದರೆ ಹಲ್ಯಾ. ಅಯಿಸ್ಕ್ರೀಮು ಮೊದಲಾದ ನಿಜವಾದ ಆಹಾರಸತ್ವವುಳ್ಳ ಪದಾರ್ಥಗಳಿಗೆ ನಿಷೇಧವೇಕೆ? ಸೋಡಾ ವಾಟರ ಮೊದಲಾದ ಖನಿಜ ಜಲಗಳನ್ನು ತಯಾರಿಸುವವರ ಸಕ್ಕರೆ ಪೂರೈಕೆಯನ್ನು ನಿಲ್ಲಿಸಿಬಿಡುವ ಅಥವಾ ಬಹುಭಾಗ ಕತ್ತರಿಸಿಬಿಡುವ ಮಾತೇಕೆ ಮತ್ತು ಅದಕ್ಕಾಲಕ್ಕೆ ಮಾದಕ ಪದಾರ್ಥಗಳ ಭಟ್ಟಿಗಳಿಗೆ ಮಾತ್ರ ಧಾನ್ಯ-ಸಕ್ಕರೆಗಳಪೂರೈಯವನ್ನು ಪೂರ್ಣಅಥವಾ ಬಹಳ ಭಾಗ ಕತ್ತರಿಸಿಬಿಡುವ ವಿಷಯದಲ್ಲಿ ಮಾತ್ರ ಶುದ್ಧ ಮೌನವೇಕೆ? ಹಲವಾಕೇಕ್, ಪೈ ಮೊದಲಾದವುಗಳನ್ನು ತಿನ್ನುವುದಕ್ಕಿಂತ ಮಾದಕ ಪೇಯಗಳನ್ನು ಕುಡಿಯುವದು ಕಡಿಮೆ ದುಂದುಗಾರಿಕೆಯೆ? ವಿಸ್ಕಿ. ಬೀರಮೊದಲಾದವುಗಳನ್ನು ತಯಾರಿಸಲು ಅವಶ್ಯವುಳ್ಳ ಧಾನ್ಯ, ಸಕ್ಕರೆಗಳನ್ನು ಕಡಿಮೆಮಾಡಬಾರದೆನ್ನುವಷ್ಟು ಮಟ್ಟಿಗೆ ಈ ಮಾದಕ ಪೇಯಗಳು ಪ್ರಾಣಧಾರಣೆಗೆ ಅವಶ್ಯವೆಂದು ಅತ್ಯಂತ ಮದ್ಯಪ್ರಿಯರಾದವರು ಕೂಡ ವಾದಿಸಬಲ್ಲರೆ?

"ಬೀರಿನಲ್ಲಿ ಒಂದಿಷ್ಟು ಆಹಾರ ಸತ್ವವಿದೆಯೆಂದೇ ಒಪ್ಪಿದರೂ ಅದು ಆ ಪೇಯವನ್ನು ಮಾಡುವದರಲ್ಲಿ ಉಪಯೋಗಿಸಲ್ಪಡುವ ಬಾರ್ಲಿಯಿಂದ ರೊಟ್ಟಿ ಅಥವಾ ಕೇಕ್ ಮಾಡಿದರೆ ಅದರಲ್ಲಿ ಸಿಗುವ ಸತ್ವಕ್ಕೆ ಸರಿದೂಗೀತೆ?

ಅಮೇರಿಕೆಯ ಅಧ್ಯಕ್ಷರು ಮಾದಕ ಭಟ್ಟಿಗಳಿಗೆ ಒದಗಿಸುವ ಗೋಧಿಯ ಪ್ರಮಾಣದಲ್ಲಿ ತೀವ್ರವಾದ ಕಡಿತವಾಗಬೇಕೆಂದು ಆಜ್ಞಾಪಿಸಿದ್ದಾರೆ. ಹಿಂದುಸ್ತಾನಕ್ಕೆ ಆಯಾತವಾದ ಅಥವಾ ಇಲ್ಲಿಯೆ ಬೆಳೆದ ಧಾನ್ಯಗಳನ್ನು ಮಾದಕ ಪೇಯಗಳ ತಯಾರಿಕೆಗೆ ಉಪಯೋಗಿಸಲಾಗುವದಿಲ್ಲೆಂದು ಯಾವ ಅಧಿಕೃತ ಪ್ರಕಟನೆಯೂ ಆಶ್ವಾಸನ ಕೊಡದಿರುವಾಗ ಅನ್ನವಿಲ್ಲದೆ,

(11 ನೆಯ ಪುಟವನ್ನು ನೋಡಿರಿ)

9th Year of Publication.

23rd SEPTEMBER 1946

ಕಲೆಕ್ಟರವರ ಸೂಚನೆ.

ಆಹಾರ ಧಾನ್ಯಗಳ ಕೊರತೆ ಸಾರ್ವತ್ರಿಕವೆಂಬುದು ಜನಜನಿತವಾದ ವಿಷಯವಾಗಿದೆ. ಯೂರೋಪಿನಲ್ಲಿ ಯುದ್ಧದ ಕಾರಣ ನಷ್ಟಕ್ಕೊಳಗಾದ ದೇಶಗಳಲ್ಲಿ ರೈತಾಕಿಯಿಲ್ಲದೆ ಬೆಳೆಯನ್ನು ಬೆಳೆಸುವವರ ಅಭಾವವಾಗಿದೆ. ಪ್ರಪಂಚದ ಆಹಾರಧಾನ್ಯಗಳನ್ನೆಲ್ಲಾ ಒಂದೆಡೆಯಲ್ಲಿ ಸಂಗ್ರಹಿಸಿ ಕಡಮೆ ಬಿದ್ದ ದೇಶಗಳಿಗೆಲ್ಲಾ ಸೀದಾಪದ್ಧತಿಯಂತೆ ಆಹಾರಧಾನ್ಯಗಳ ರವಾನೆಯಾಗುತ್ತಲಿದೆ. ಹಿಂದೂಸ್ತಾನದ ಬಂಗಾಳ ವಗೈರೆ ಪ್ರದೇಶಗಳಲ್ಲಿ ಅದರಲ್ಲಿಯೂ, ದಕ್ಷಿಣ ಹಿಂದೂಸ್ತಾನದಲ್ಲಿ ಬರಗಾಲ ವಿದ್ದಂತಿದೆ. ಬೇರೆ ದೇಶಗಳಿಂದ ಆಹಾರ ಧಾನ್ಯಗಳು ಬರದಿದ್ದರೆ ನಮ್ಮಲ್ಲಿ ಬರಗಾಲವೇ ಆರಂಭವಾಗುತ್ತದೆ.

ಅಕ್ಕಿಯು ಎಲ್ಲಾ ಕಡೆಯಲ್ಲೂ ಉಪಯೋಗಿಸಲ್ಪಡುತ್ತಿರುವ ಸಾಮಾನ್ಯ ಆಹಾರದ ಧಾನ್ಯ ಜನರಿಗೆ ಸಾಕಾಗುವಷ್ಟು ಪೂರೈಕೆಯಾಗದೆ, ಅದರ ಪ್ರಮಾಣವನ್ನೇ ಕಡಮೆ ಮಾಡಬೇಕಾದ ಭೀಕರ ಪರಿಸ್ಥಿತಿಯೊದಗಿದೆ.

ಕಡಮೆ ಬಿದ್ದ ಆಹಾರಧಾನ್ಯಗಳಿಗಾಗಿ ಬೇರೊಂದರ ಪೂರೈಕೆಮಾಡಿ ಜನರ ಹಸಿವನ್ನು ಇಂಗಿಸಲು ಜನತೆಯಾಯೋಗಕ್ಷೇಮದ ಜವಾಬ್ದಾರಿಯನ್ನು ವಹಿಸಿದ ಸರ್ಕಾರದ ಕರ್ತವ್ಯವಾಗಿದೆ.

ಈ ಕಾರಣದಿಂದಲೇ ಅಮೇರಿಕಾ ದೇಶದ ಮೆಕ್ಕೆ ಜೋಳವನ್ನು ತರಿಸಿ ಅದರ ಉಪಯೋಗವನ್ನರಿಯದ ನಮ್ಮ ದೇಶದವರಿಗೆ ಕೊಡುತ್ತಲಿರುವುದು. ಇದರ ಉಪಯೋಗದಿಂದ ಹೊಟ್ಟೆನೋವು ವಗೈರೆ ಉದರ ರೋಗಗಳಿಗೆ ಕಾರಣವಾಗಿರುವದೆಂದು ಅನೇಕ ಹಳ್ಳಿಗರು ಹೇಳುತ್ತಿರುವರು. ಆದರೆ ಕಲೆಕ್ಟರವರು ಹೇಳುವ ಪ್ರಕಾರಕ್ಕೆ ಅದನ್ನು ನೆನೆಸಿ ಕುಟ್ಟಿ ಹೊಟ್ಟುತೆಗೆದು ಉಪಯೋಗಿಸಿ ನೋಡಿದರೆ ನಿಜಾಂಶವು ವ್ಯಕ್ತವಾಗುತ್ತದೆ. ಇದರಲ್ಲಿ ಅತುರವು ಬೇಡ. ಅದು ಫಟ್ಟಯೂದ ವಸ್ತುವಿದ್ದು ಶೀಘ್ರ ಜೀರ್ಣಕಾರಿಯಲ್ಲವೆಂದು ಹೇಳಬಹುದಾದರೂ ಮಿತವಾದ ಬಳಕೆಯಿಂದ ದೇಹಕ್ಕೆ ಒಗ್ಗಬಹುದು.

ಅಂತೂ ಕಷ್ಟಕ್ಕೆ ಸಿಕ್ಕಿರುತ್ತೇವೆ. ಸರ್ಕಾರದವರು ಕೊಡುವ ಆಹಾರ ಧಾನ್ಯಗಳನ್ನು ಉಪಯೋಗಿಸಲೇ ಬೇಕಾಗಿದೆ. ನಮಗೆ ಬೇಕಾದ ಆಹಾರ ಧಾನ್ಯಗಳ ಅಭಾವವಿರಬೇಕಾದರೆ ಬೇರೊಂದು ಉಪಾಯವೇ ಕಂಡುಬರುವದಿಲ್ಲ. ಚನ್ನಾಗಿ ಪರೀಕ್ಷಿಸಿ ನೋಡಬೇಕು ಭಗವಂತನ ದಯದಿಂದ ನಮಗೆ ಜೋಳದ ಬೆಳೆಯು ಒಳ್ಳೆಯದಾಗಿ ಬಂದರೆ ಮೆಕ್ಕೆ ಜೋಳವನ್ನು ದನಗಳಿಗೆ ಹಾಕಬಹುದು.

ರಾಜಿಯ ಪ್ರಯತ್ನ.

ಮುಸ್ಲಿಂ ಲೀಗಿನ ಅಧ್ಯಕ್ಷರಾದ ಜಿನ್ನಾರವರು ಈಗ ವೈಸ್ರಾಯರೊಡನೆ ಮಾತುಕತೆ ನಡೆಸಿದ್ದಾರೆ. ತಾತ್ಕಾಲಿಕ ಸರಕಾರದಲ್ಲಿ ಸೇರುವ ವಿಷಯಕ್ಕೆ ಚರ್ಚೆ ನಡೆದಿರಬೇಕೆಂದು ಗೊತ್ತಾಗಿದೆ.

ಭಾರತ ರಾಜಕೀಯ

ಹಿಂದೂಸ್ತಾನಕ್ಕೆ ಒಂದು ರಾಜ್ಯ ಘಟನೆಯನ್ನು ನಿರ್ಮಿಸಲು ಏರ್ಪಟ್ಟ ವಿವಿಧ ಪ್ರಾಂತಗಳ ಸಭ್ಯರು ಡಿಸಂಬರ್ 9 ನೇಯ ತಾ. ದೆಹಲಿಯಲ್ಲಿ ಕಲೆಯಬೇಕೆಂದು ನಿಶ್ಚಯವಾಗಿದೆ.

ಹರಿಜನ ಕಾರ್ಯಕ್ಕೆ ಉದಾರ ಸಹಾಯ.

೧ ಶ್ರೀ.ಕೆ. ಎನ್. ಅನಂತರಾಮನ್ ಐ ಶಿ. ಯಸ್ ಕಲೆಕ್ಟರ್ ಬಳ್ಳಾರಿ.

ಬಳ್ಳಾರಿ ಜಿಲ್ಲೆಯ ಆಲೂರಿನಲ್ಲಿರುವ ಹರಿಜನ ವಿದ್ಯಾರ್ಥಿನಿಲಯ, ಬಳ್ಳಾರಿ ನಗರದಲ್ಲಿರುವ ಎರಡು ಹರಿಜನ ವಿದ್ಯಾರ್ಥಿ ನಿಲಯಗಳಲ್ಲಿರುವ ಸುಮಾರು ೭೦ ಬಾಲಕರಿಗೆ ಒಬ್ಬೊಬ್ಬರಿಗೆ ಒಂದು ಥಲೋ ಬ್ಲಾಂಕೆಟ್, ಚಾಪೆ, ಊಟದ ತಟ್ಟೆ ಲೋಟಾ— ಈಪ್ರಕಾರ ಕೊಡಲೇರ್ಪಡಿಸಿ ತಮ್ಮ ಆಧೀನದಲ್ಲಿದ್ದ ಹಣದಿಂದ ರೂ. ೭೫೦/— ಸ್ಯಾಂಕ್ಷನ್ ಮಾಡಿರುವರು."ಹಿಂದೂಗಳು ಪ್ರಾಯಶ್ಚಿತ್ತರೂಪದಿಂದ ಹರಿಜನರ ಸೇವೆ ಮಾಡಬೇಕು. ನಾವು ಆವರ ಮೇಲೆ ಮಾಡಿರುವ ಅತ್ಯಾಚಾರಗಳ ಪಾಪವು ನಾಶವಾಗಬೇಕೆಂದರೆ ಬೇರೊಂದು ಪಾಯವಿಲ್ಲ ಎಂದು ಹೇಳುತ್ತಾ ಕಳಿದವಾರ ಇವುಗಳ ಹಂಚಿಕೆಯಾಗಲು ಸಮಾವೇಶವಾದ ಸಭೆಯಲ್ಲಿ ಹೇಳಿದರು. ಹರಿಜನರ ಪುರೋಭಿವೃದ್ಧಿಯ ವಿಷಯಕ್ಕೆ ಶ್ರೀಗಳಾದಸುಬ್ರಹ್ಮಣ್ಯಂ, ಮಹಾಬಲೇಶ್ವರಪ್ಪ ವಿಠಲಶೇಷಪ್ಪನವರು, ಮಾತಾಡಿದನಂತರ ಶ್ರೀ ಕೇಶವರಾಯರು ಎಲ್ಲರನ್ನೂ ವಂದಿಸಿನಡೆದ ಕಾರ್ಯದ ಸಂಕ್ಷಿಪ್ತ ವಿವರಣೆ ಮಾಡಿ ಶ್ರೀ ಶೇಷಪ್ಪನವರ ೧೦೦/ ದೇಣಿಗೆಯನ್ನು ಪ್ರಕಟಿಸಿ ಅವರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಿದರು.

೨ ಶ್ರೀಬಿಲ್ಲೋಣ ಭೀಮರಾಯರು ಎಂ.ಎಲ್.ಶಿ.

ಮದ್ರಾಸ್ ಮೇಲ್ಮನೆಯ ಸದಸ್ಯರಾದ ಶ್ರೀ ಬಿಲ್ಲೋಣ ಭೀಮರಾಯರು- ತಮಗೆ ಬರುತ್ತಿರುವ ಶಾಸನಸಭ್ಯರ ಮಾಸಿಕ ವೇತನದ ಹತ್ತಿರಲ್ಲೊಂದು ಭಾಗ ಅಂದರೆ ರೂ 15/- ಹದಿನೈದುರೂಪಾಯಿಗಳನ್ನು ಜಿಲ್ಲೆಯಲ್ಲಿ ನಡೆಯುವ ಹರಿಜನಕಾರ್ಯಕ್ಕಾಗಿ ಪ್ರತಿಂಗಳೂ ಕೊಡಲೊಪ್ಪಿ ಸೆಪ್ಟಂಬರ್ 1946 ರಿಂದ ಪ್ರಾರಂಭಿಸಿರುವರು. ಇದು ಮಾದರಿಯದಾಗಿದ್ದು ಉಳಿದ ಶಾಸನಸಭ್ಯರೂ ಜಿಲ್ಲಾ ಹರಿಜನ ಸೇವಾ ಸಂಘದ ಭೇಡಿಕೆಯನ್ನು ಮನ್ನಿಸುವರೆಂದು ಆಶಿಸಲಾಗಿದೆ.

೩ ಶ್ರೀ ವಿಠಲ್ ಶೇಷಪ್ಪನವರು

ಬಳ್ಳಾರಿ ಹರಿಜನ ವಿದ್ಯಾರ್ಥಿನಿಲಯದಲ್ಲಿ ಪಾತ್ರೆಗಳು ಏನೂ ಇಲ್ಲದ್ದುಕಂಡು- ನಗರದ ಸುಪ್ರಶಿದ್ಧ ವರ್ತಕರೂ, ಉದಾರಿಗಳೂ ಆದ ಶ್ರೀ ವಿಠಲಶೇಷಪ್ಪನವರು- ೧೦೦/- ಒಂದುನೂರು ರೂಪಾಯಿ ದೇಣಿಗೆ ಕೊಟ್ಟು ಹೊಸಪಾತ್ರೆಗಳನ್ನು ಕೊಂಡು ಕೊಟ್ಟರು.

ಹರಿಜನರಿಗೆ ಹೋಟೆಲ ಪ್ರವೇಶ.

—ಶಾಸನ.

ಈಗ ಇರುವ ಶಾಸನದಲ್ಲಿ ಸ್ವಲ್ಪಬದಲಾವಣೆ ಮಾಡಿ ಹರಿಜನರನ್ನು ಹೋಟೆಲ್ ಮತ್ತು ಇತರ ತಿಂಡಿ ತಿನಸುಗಳ ಅಂಗಡಿಗಳಿಗೆ ಪ್ರವೇಶ ದೊರೆಯುವಂತೆ ಮಾಡಲು ಮದ್ರಾಸ್ ಸರ್ಕಾರದವರು ಏರ್ಪಡಿಸುವುದರಲ್ಲಿರುವರು. ಅದು ಶೀಘ್ರದಲ್ಲಿಯೇ ಜಾರಿಗೆ ಬರಲಿದೆ.

ಮುನಿಸಿಪಾಲಿಟಿಗಳ ಚುನಾವಣೆ

(ಸರಕಾರದ ಪ್ರಕಟನೆ.)

4-11-46 ವೋಟರ್ಸಲೀಸ್ಟು ಪ್ರಕಟನಾ ದಿನ,
11-11-46 ನಾಮಪತ್ರ ಕೊಡಬೇಕಾದ ದಿನಗಳು,
14-11-46 ನಾಮಪತ್ರಗಳ ಪರಿಶೀಲನೆ.
9-12-46 ಪೋಟಿ ಇಲ್ಲವಾದರೆ ಚುನಾವಣೆಯ ದಿನ
10-12-46 ಫಲಿತಾಂಶದ ಪ್ರಕಟನೆ.

ಬಳ್ಳಾರಿ ಜಿಲ್ಲಾ ಬೋರ್ಡು ಚುನಾವಣೆ

(ಸರ್ಕಾರದ ಪ್ರಕಟನೆ)

7-11-46 ಪೊಟರ್ಸಲೀಸ್ಟ್ ಪ್ರಸಿದ್ಧಿಸುವ ದಿನ,
18-11-46 ಸದಸ್ಯರು ಅರ್ಜಿಕೊಡಬೇಕಾದ ದಿನ
20-11-46 ನಾಮಪತ್ರದ ಅರ್ಜಿ ಪರಿಶೀಲನೆ.
21-12-46 ಚುನಾವಣೆ ನಡೆಯುವ ದಿನ

—ಲೇಬರ್ ಶಾಲೋಪಾಧ್ಯಾಯರಿಗೆ— ಸಭಾ ಸೂಚನೆ.

ಬಳ್ಳಾರಿ ಜಿಲ್ಲಾ ಲೇಬರ್ ಶಾಲೆಗಳ ಉಪಾಧ್ಯಾಯರ ಸಾಮಾನ್ಯ ಸಭೆಯು 3-10-1946 ಗುರುವಾರ ಮಧ್ಯಾಹ್ನ 3 ಘಂಟೆಯಿಂದ ಬಳ್ಳಾರಿಯಲ್ಲಿ ಸಮಾವೇಶವಾಗುವುದು. ಮದ್ರಾಸಿನಲ್ಲಿ ಡಿಶಂಬರ್‌ನಲ್ಲಿ ಕೂಡುವ ಪ್ರಾಂತೀಯ ಸಭೆಗೆ ಪ್ರತಿನಿಧಿಗಳನ್ನು ಕಳುಹಿಸುವ ಮತ್ತು ಇತರ ಮುಖ್ಯ ವಿಷಯಗಳು ಚರ್ಚಿಸಲ್ಪಡುವುವು- ಉಪಾಧ್ಯಾಯರು ಮತ್ತು ಶಾಲೆಗಳಿಗೆ ಸಂಬಂಧಿಸಿದ ಸಮಸ್ತ ವಿಷಯಗಳನ್ನೂ ಸಂಗ್ರಹಿಸಿ ತರಬೇಕು- ಇಂಕ್ರಿಮೆಂಟ್ ಪಟ್ಟಿಯನ್ನು ತಯಾರಿಸಲು ಅನುಕೂಲವಾಗುತ್ತದೆ- ಅನೇಕ ಉಪಾಧ್ಯಾಯರು ಕೊಡಬೇಕಾದ ಚಂದಾಗಳನ್ನೇ ಕೊಟ್ಟಿಲ್ಲ. ಕಳುಹಿಸಬೇಕು. ಸೆಪ್ಟಂಬರ್ ಸಂಬಳ ಇಲ್ಲಿಯೇ ಕೊಡಲು ಕೇಳಿಕೊಳ್ಳಲಾಗಿದೆ—ಎಲ್ಲರೂ ಬರಬೇಕೆಂದು ಕೋರಿಕೆ.—

ಬಳ್ಳಾರಿ ಜಿಲ್ಲಾ ಲೇಬರ್ ಶಾಲೋಪಾಧ್ಯಾಯರ ಸಂಘ.

ಎಂ. ಇ. ಜೋನಾಥನ್.
ಕಾರ್ಯದರ್ಶಿ

ಟಿ. ಬಿ. ಕೇಶವರಾವ್
—ಅಧ್ಯಕ್ಷ—

An Appeal to use Maize as Food.

It is a well-known fact that there is scarcity of food throughout the world. It is more so in South India and **specially so in our district, on account of the adverse seasonal conditions which prevailed last year.** In orders to conserve the stock of food-grains we have got, we will have to use a proportion of maize also in our diet. **The maize we are getting from America is very good and quite cheap. It sprouts easily and is free from any damage by insects.** We are accustomed to use maize-cobs as food. A new article of diet causes disturbance in the system in the beginning. A person who is accustomed to rice diet will experience some difficulty if he adopts wheat diet straightway But the sysiem will adjust itself if the new article of diet is used gradually.

In order to facilitate quick adjustment, thorough cleaning and cooking in a slow fire and preparation of suitable and appetizing dishes are necessary. Separate recipes have been given and it is up to us to adopt those recipes which are suitable to our taste and to modify them if necessary and evolve other recipes.

It is important to remove the husk. This can be done by soaking the maize for about 5 minutes in water and pounding it. The maize can be converted into Ravai, or flour like wheat.

Maize flour can be used like cholam for making cakes, Chapathies, Poories, Dosai, Upma Pongal and Pagodas. Bread can also be prepared out of it. We have imported only 3000 tons of maize and if it is properly distributed it ought not to be difficult for 11,00,000 of people in this district to utilise it within a month **I am sure that if a fair trial is given, people will like it.**

K. N. ANANTHARAMAN, *Collector, Bellary.*

ಮೆಕ್ಕೆ ಜೋಳವನ್ನು ಆಹಾರವಾಗಿ ಉಪಯೋಗಿಸಿರಿ.

ಬಳ್ಳಾರಿ ಜಿಲ್ಲಾ ಕಲೆಕ್ಟರವರ ವಿಜ್ಞಾಪನೆ.

ಪ್ರಪಂಚದ ಎಲ್ಲಾ ಭಾಗಗಳಲ್ಲೂ ಆಹಾರ ಧಾನ್ಯಗಳ ಕೊರತೆಯಿದೆಯೆಂಬುದು ಸರ್ವರಿಗೂ ವಿದಿತವಾದ ಅಂಶವಾಗಿದೆ. ಈ ಅಭಾವವು ದಕ್ಷಿಣ ಹಿಂದೂಸ್ತಾನದಲ್ಲಿ ಅಧಿಕವಾಗಿದ್ದು, **ಕಳೆದ ವರ್ಷದ ವಿರೋಧುರುತು ನೂನ ಪರಿಸ್ಥಿತಿಯಿಂದ ನಮ್ಮ ಜಿಲ್ಲೆಯ ಅಭಾವವು ಇನ್ನು ಹೆಚ್ಚಿಗಿದೆ.** ನಮ್ಮ ಸಂಗ್ರಹದಲ್ಲಿರುವ ಆಹಾರ ಧಾನ್ಯಗಳನ್ನು ಕಾಪಾಡಿಕೊಂಡು ಮಿತವಾಗಿ ಬಳಸಬೇಕೆಂದರೆ, ನಮ್ಮ ಆಹಾರದ ಜೊತೆಯಲ್ಲಿ ಸ್ವಲ್ಪ ಮೆಕ್ಕೆಜೋಳದ ಅಂಶವನ್ನು ಬೆರೆಸಬೇಕು. ಅಮೆರಿಕಾ ದೇಶದಿಂದ ನಮ್ಮ ಉಪಯೋಗಕ್ಕಾಗಿ ಬರುತ್ತಿರುವ ಮೆಕ್ಕೆಜೋಳವು ಶ್ರೇಷ್ಠವಾದುದೂ ಮತ್ತು ಅಗ್ಗವಾದುದೂ ಆಗಿದೆ. ಅದು ಸುಲಭವಾಗಿ ಬೆಳೆದು, ಹುಳಗಳಿಂದ ನಷ್ಟಕೊಳಗಾಗದೆ ಇದೆ. ಮೆಕ್ಕೆಜೋಳವು ಹಸಿ ಇದ್ದಾಗ ಸುಟ್ಟು ತಿನ್ನುವ ಅಭ್ಯಾಸ ನಮ್ಮವರಿಗುಂಟು. ಪ್ರಾರಂಭದಲ್ಲಿ ಹೊಸ ಆಹಾರ ಪದಾರ್ಥದ ಸೇವನೆಯಿಂದ ಶರೀರಕ್ಕೆ ತೊಂದರೆಯಾಗಬಹುದು. ಅಕ್ಕಿಯ ಅನ್ನದ ಅಭ್ಯಾಸವಿರುವ ಮನುಷ್ಯನು ಒಂದೇ ಸಲಕ್ಕೆ ಗೋಧಿಯನ್ನು ಬಳಸುವುದಾದರೆ ಸ್ವಲ್ಪ ಕಷ್ಟವಾದೀತು. ಕ್ರಮೇಣವಾಗಿ ಈ ಕಷ್ಟವು ಕಡಮೆಯಾಗುತ್ತದೆ. ಶರೀರದ ಜೀರ್ಣಾಂಗವೂ ಹೊಸ ಆಹಾರವನ್ನು ಸ್ವಾಗತಿಸುತ್ತದೆ. ಶೀಘ್ರವಾಗಿ ದೇಶಕ್ಕೆ ಒಗ್ಗುವಂತಾಗಬೇಕಾದರೆ, ಚನ್ನಾಗಿ ತೊಳೆದು ಸಣ್ಣನಾಗುರಿಯುವ ಬೆಂಕಿಯಲ್ಲಿ ಸಧಿಯಾದ ಮತ್ತು ರುಚಿಕರವಾದ ಫಲಾರವನ್ನು ಮಾಡಬೇಕು. ಪ್ರತ್ಯೇಕವಾದ ಭಕ್ಷ್ಯಗಳ ತಯಾರಿಕೆಗಾಗಿ ಸೂಚನೆಗಳು ಕೊಡಲ್ಪಟ್ಟಿವೆ. ನಮ್ಮ ರುಚಿ - ಗುಣಕ್ಯಾನುಸಾರವಾಗಿ ಬದಲಾಯಿಸಿಕೊಳ್ಳಬಹುದು. ಇಲ್ಲವೇ ಇನ್ನಿತರ ಭಕ್ಷ್ಯಗಳನ್ನು ಕೂಡ ಮಾಡಿಕೊಳ್ಳಬಹುದು.

ಹೊಟ್ಟನ್ನು ಬೇರ್ಪಡಿಸುವುದು ಅತ್ಯಂತಾವಶ್ಯಕ. ಐದು ನಿಮಿಷಗಳವರಿವಿಗೆ ನೀರಲ್ಲಿ ನೆನೆಯಿಟ್ಟು, ಅನೇಲೆ ಕುಟ್ಟುವುದರಿಂದ ಹೊಟ್ಟು ತೆಗೆಯುವ ಕೆಲಸವಾಗುತ್ತದೆ ಗೋಧಿಯಂತೆ ಮೆಕ್ಕೆ ಜೋಳದಿಂದ ರವೆಯನ್ನು ತೆಗೆಯಬಹುದು. ಹಿಟ್ಟನ್ನು ಮಾಡಬಹುದು. ಮೆಕ್ಕೆ ಜೋಳದ ಹಿಟ್ಟನ್ನು ಜೋಳದಂತೆ ಉಪಯೋಗಿಸಬಹುದು. ಇದರಿಂದ ರೊಟ್ಟಿ, ಚಪಾತಿ, ಪೂರಿ, ದೋಸೆ, ಉಪ್ಪಿಟ್ಟು, ಪೊಂಗಲ, ಪಕೋಡ ವಗೈರೆ ಮಾಡಬಹುದು. ಇದರಿಂದ 'ಬ್ರೇಡ್' ಥಾ ನಾನ್‌ರೊಟ್ಟಿಯೂ ತಯಾರಾಗುತ್ತದೆ. ನಾವು 3000 ಟನ್ನುಗಳಷ್ಟು ಮಾತ್ರ ಮೆಕ್ಕೆ ಜೋಳವನ್ನು ತರಿಸಿರುತ್ತೇವೆ. ಅದು ಸರಿಯಾಗಿ ಹಂಚಲ್ಪಟ್ಟರೆ, ಈ ಜಿಲ್ಲೆಯ 11 ಲಕ್ಷ ಜನರು ಒಂದೇ ತಿಂಗಳಲ್ಲಿ ಇದನ್ನು ಒಳ್ಳೇಯ ರೀತಿಯಲ್ಲಿ ಉಪಯೋಗಿಸಬಹುದು ಒಳ್ಳೆಯ ರೀತಿಯ ಉಪಯೋಗಕ್ಕೆ ಜನರು ಲಕ್ಷ್ಯ ಕೊಟ್ಟಲ್ಲಿ ಜನತೆಗೆ ಇದು ಬೇಕಾಗಿ ಇದರ ಉಪಯೋಗವು ಹೆಚ್ಚುವುದೆಂದು ಆಶಿಸುತ್ತೇನೆ.

ಕೆ. ಎನ್. ಅನಂತರಾಮನ್,

ಕಲೆಕ್ಟರ್ — ಬಳ್ಳಾರಿ.

ಬಳ್ಳಾರಿ ನಗರ ವಾರ್ತೆಗಳು.

ಗ್ರಾಮೋದ್ಯೋಗಿಗಳಿಗೆ ಸೂಚನೆ.

† ಚುನಾವಣೆಯ ಕಾರ್ಯಕ್ರಮ. †

1 1946-47 ಕ್ಕೆ ಸದಸ್ಯರಾಗಬೇಕಾದ ಅಖ್ಖೆರು ದಿನ 30—9—46

2 ತಾಲೂಕು ಸಂಘಗಳು ತಮ್ಮ ಕೋಟಾ ಹಣದೊಂದಿಗೆವೋಟರ್ಸ್ ಲೀಸ್ಟ್‌ಸಮೇತ ಜಿಲ್ಲಾ ಸಂಘಗಳಿಗೆ ಕಳುಹಿಸಬೇಕಾದ ಕೊನೆಯ ತಾರೀಖು. } 2-10-46

3 ಜಿಲ್ಲಾ ಸಂಘಗಳು ಕೇಂದ್ರ ಸಂಘಕ್ಕೆ ಹೀಗೆಯೇ ಕಳುಹಿಸ ಬೇಕಾದ ತಾ|| 4—10—46

4 ಅಕ್ಸೇಪಣೆಗಳನ್ನು ದಾಖಲು ಮಾಡಬೇಕಾದ ಕೊನೆಯ ದಿನ. ತಾ|| 9—10—46

5 ನಿಖರ ಜಾಬಿತಾ (ನಿಶ್ಚಿತ ಪಟ್ಟಿ) ಪ್ರಕಟನೆಯ ದಿನ ತಾ|| 8—10—46

ತಾಲೂಕು, ಜಿಲ್ಲಾ ಸಂಘಗಳಿಲ್ಲದ ಕಡೆಗಳಲ್ಲಿ ಸಭ್ಯರಾಗಲಿಚ್ಛಿಸುವವರು ಪ್ರವೇಶ ಶುಲ್ಕ ಸೇರಿ 1—4—0 ಕಳುಹಿಸಬೇಕು.

(5) ಕೇಂದ್ರ ಸಂಘದ ಚುನಾವಣೆಗಳು ಪ್ರೊದಟೂರಿನಲ್ಲಿ 13—10—46 ನಡೆಯಲಿವೆ. ಅಷ್ಟರೊಳಗಾಗಿ ಎಲ್ಲಾ ಜಿಲ್ಲಾ ಸಂಘಗಳೂ ನಿಯಮಗಳ ಪ್ರಕಾರ ನಡೆದು ಸಂಬಂಧಿತವಾಗಿರಬೇಕು.

13 ನೆಯ ತಾ|| ರಾಯಲಸೀಮಾ ಗ್ರಾಮೋದ್ಯೋಗಿಗಳ ಮಹಾಸಭೆ ಪ್ರೊದಟೂರಿನಲ್ಲಿ ನಡೆಯಲಿದೆ ಅಲ್ಲಿಗೆ ತೀರ್ಮಾನಗಳನ್ನು ಕಳುಹಿಸಲಿರುವವರು— 30—9—46 ರಪಳಗಾಗಿ 5/- ಶುಲ್ಕದೊಂದಿಗೆ ಕಳುಹಿಸಬೇಕು.

ಕೆ. ವೆಂಕಟಶೇಷಗಿರಿರಾವು.
ಪ್ರಧಾನ ಕಾರ್ಯದರ್ಶಿ

Consumers' Association Bellary.

ಬಳ್ಳಾರಿ ಗಿರಾಕಿಗಳ ಸಂಘ.

ಈ ಸಂಘದ ಸಭೆಯು ಶ್ರೀ ಎ. ವೀರಾಸ್ವಾಮಿಗಳ ಮನೆಯಲ್ಲಿ ಶ್ರೀ ಯಸ್. ವಿ. ಶಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಸಮಾವೇಶವಾಗಿ ಈ ಕೆಳ ತೀರ್ಮಾನಗಳಾದವು.—

(1) ಆರ್.ಡಿ.ಒ. ರವರು 13 ಜನರ ಸಭೆಯನ್ನು ಕರೆದು 32 ಜನರ ಸೀದಾಸಲಹೆಸಮಿತಿ (Rationing Advisory Committee) ನಿರ್ಮಾಣ ಮಾಡಿದುದು ಅನ್ಯಾಯವೂ, ಅಪ್ರಾತಿನಿಧಿಕವಾಗಿಯು ಇದೆ. ಸಭೆಯ ಸೂಚನೆಯನ್ನು ಮುಖ್ಯ ಸಂಸ್ಥೆಗಳಿಗಾಗಲಿ—ವ್ಯಕ್ತಿಗಳಿಗಾಗಲಿ ಕೊಟ್ಟಿಲ್ಲ. ಕಲೆಕ್ಟರವರು ಇದನ್ನು ರದ್ದುಮಾಡಿ ಬೇರೆ ಸಮಿತಿಯನ್ನು ಏರ್ಪಡಿಸಬೇಕು.

(2) ಬಟ್ಟೆಗಳ ಹಂಚುವಿಕೆಯಲ್ಲಿ ಅವ್ಯವಸ್ಥೆ ಇದೆ. ರೇಷ್ ಕಾರ್ಡುಗಳವರಿಗೆ ಬೇಕಾದ ಎಲ್ಲಾ ಬಟ್ಟೆಗಳೂ ಒಂದೇ ಅಂಗಡಿಯಲ್ಲಿ ದೊರೆಯವಂತಿಲ್ಲ. ಈ ಕಾರಣ ರೇಷ್ ಕಾರ್ಡುಗಳವರು ತಮ್ಮ ಬೇಡಿಕೆಗಳನ್ನು ಒಂದಕ್ಕಿಂತ ಹೆಚ್ಚು ಅಂಗಡಿಗಳಲ್ಲಿ ಕೊಳ್ಳಲು ಅವಕಾಶವಿರಬೇಕು.

(3) ಸಿದ್ಧಪಡಿಸಿದ ಉಡುಪನ್ನು ಮಾರುವ ಅಂಗಡಿಗಳವರೂ ಬಟ್ಟೆಯನ್ನು ಉಡುಪಾಗಿ ಮಾಡದಂತೆ ಪ್ರತಿಬಂಧಿಸಬೇಕು. ಶ್ವೇತ್ಯಬಟ್ಟೆಯನ್ನು ಬಟ್ಟೆಯಾಗಿ ಮಾಡಿಸಿಹೆಚ್ಚಿನ ಬೆಲೆಗೆ ಮಾರುವ ಪದ್ಧತಿ ಹೋಗಬೇಕು.

(4) ಕೇಂದ್ರ ಮತ್ತು ಶಾಖಾಸಂಘಗಳ ಕೋ ಆಪರೇಟಿವ ಸ್ಟೋರ್ಸ್‌ದವರು ಬಟ್ಟೆಗಳನ್ನು ವ್ಯವಹರಿಸಲು ಅವಕಾಶವಾಗಬೇಕು.

(ಹಿಂದಿನ ಪುಟದಿಂದ)

(5) ದಸರಾ ಹಬ್ಬದಲ್ಲಿ ಕೊನೆಗೆ ಒಂದು ದಿನಕ್ಕಾದರೂ, ಒಳ್ಳೆಯ ಅಕ್ಕಿಯನ್ನು ಒದಗಿಸಬೇಕು.

(6) ಕಟ್ಟಿಗೆಯ ಹಂಚುವಿಕೆಗಾಗಿ ಒಬ್ಬ ತಹಶಿಲ್ದಾರ್ ಮತ್ತು ಸಿಬ್ಬಂದಿಯನ್ನು ಏರ್ಪಡಿಸಿದ್ದರೂ ಕಟ್ಟಿಗೆಯೇ ಸಿಗುವುದಿಲ್ಲ. ಇದನ್ನು ಕೂಡಲೇ ಸರಿಪಡಿಸಬೇಕು.

ಬಳ್ಳಾರಿ ವೀರಶೈವ ಕಾಲೇಜಿನ ಚರಿತ್ರಶಾಖೆಯ ಆಶ್ರಯದಲ್ಲಿ ರೆವರೆಂಡ್ ಬ್ರಾವುನರವರ ಅಧ್ಯಕ್ಷತೆಯಲ್ಲಿ ಲಿಂಗರಾಜಕಾಲೇಜು ಬೆಳಗಾವಿಯ ಪ್ರೊಫೆಸರ್ ಬಿ. ಯಂ. ರಾಮಲಿಂಗಯ್ಯನವರು ಕಳೆದವಾರ **ತಾತ್ಕಾಲಿಕ ಸರಕಾರ ಮತ್ತು ಘಟನಾ ಸಮಿತಿ** ಯ ಮೇಲೆ ವಿಚಾರೋತ್ಪಾದಕ ಭಾಷಣವಿತ್ತರು.

ಮಲ್ಲಸಜ್ಜನ ವ್ಯಾಯಾಮಶಾಲೆ ಬಳ್ಳಾರಿ.

—13 ನೆಯ ವಾರ್ಷಿಕೋತ್ಸವ.—

(ನಮ್ಮಪ್ರೇಷಿತ ಪ್ರತಿನಿಧಿಯಿಂದ)

ಉತ್ಸಾಹೀ ಬಾಲಕರ ಕಾರ್ಯಕ್ರಮವು ಉತ್ಸಾಹಯುಕ್ತವಾಗಿ ಜೀವಕಳೆಯಿಂದ ತುಂಬಿರುತ್ತದೆ. ಭಾವಿ ಜನಾಂಗದ ಬುನಾದಿಯು ಈಗಿನ ಬಾಲರನ್ನೆ ಅವಲಂಬಿಸಿರುವ ಕಾರಣ ಅವರ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಆಕರವಾದ ಈ ವ್ಯಾಯಾಮ ಶಾಲೆಗೂ, ಅದರ ಸಂಚಾಲಕರಾದ' ಬಿಂದು' ರವರಿಗೂ ವಿಶೇಷ ಮಹತ್ವವುಂಟು. ವ್ಯಾಯಾಮ ಶಾಲೆಗಳಸಂಚಾಲಕರು ಭವಿಷ್ಯ ಜನಾಂಗದ ನಿರ್ಮಾತರೆಂದು ಹೇಳಬಹುದು.

ಪ್ರಾತಃಕಾಲದ ಧ್ವಜವಂದನೆ- ಸಾಯಂಕಾಲದ ಮೆರವಣಿಗೆಯ ಈ ಸಲದ ವೈಶಿಷ್ಟ್ಯವೆನ್ನವೇಳಗಿ ಸ್ವಾವಲಂಬನದ ಪಾಠವನ್ನು ಬೇಕಾದವರಿಗೆ ಕಲಿಸುವಂತಿದ್ದಿತು. ಹೊಸಬ್ಯಾಂಡ್- ಬಾಜಾಡೊಂದಿಗೆ ತಾವೇ ಅದರ ಸಂಚಾಲಕರಾಗಿ ಬರುವುದೆಂದರೆ- ಹೊಸ ಮಾತು. ಕಲಿತ ಮಕ್ಕಳಿಗೂ, ಕಲಿಸಿದ ಮಾಸ್ತರರಿಗೂ ವಂದನೆ. ಸ್ಫೂರ್ತಿದಾಯಕವಾದ ಹಿಂದೀಕವಾಯಿತ ಚಿತ್ತಾಕರ್ಷಕವಾಗಿದ್ದಿತು. ಹಗ್ಗಜಗ್ಗುವುದರಲ್ಲಿ ಎರಡು ಕಡೆಗಳವರೂ ಒಳ್ಳೆಯ ಶಕ್ತಿ ಪ್ರದರ್ಶನ ಮಾಡಿದರು. ಸ್ವಲ್ಪ ಮುಂಚೆಯೇ ನಡೆದ ಆಟ ಪಾಟಗಳೂ ಇಷ್ಟೇಉತ್ಸಾಹಕರವಿದ್ದವು.

ಪ್ರಾರ್ಥನಾನಂತರ ಶ್ರೀ ಸರಾಫರು ಶಾಲೆಯ ವರದಿಯನ್ನೋದಿ ಪರಿಶೀಲಿಸಲ್ಪಟ್ಟ ಲೆಕ್ಕಗಳನ್ನರ್ಪಿಸಿದರು. 1747—2—8 ಆಯಬಂದಿದೆ. 14-8—4 ಶಿಲ್ಕು ಇದ್ದು ಉಳಿದುದೆಲ್ಲಾ ಖರ್ಚಾಗಿದೆ. ಈ ವರ್ಷದ ಹೊಸ ಕಾರ್ಯಕ್ರಮವೆಂದರೆ ವಾದ್ಯ ಮೇಳಗಳ ಶಿಕ್ಷಣ ಬಾಸ್ಕೆಟಬಾಲ್ ಸ್ಪೀಗ್ರಾವುಂಡಬಾಲ ಇವುಗಳ ಪ್ರಾರಂಭವಾಗಿದೆ.

"1942 ರ ಸ್ವಾತಂತ್ರೋದ್ಯಮದದಿನಗಳಲ್ಲಿ ಯುವಕರಪ್ರೀತಿಗೆ ಪಾತ್ರರಾದ ಶ್ರೀ ಸುಬ್ಬರಾಯನ್‌ರ ಪರಿಚಯ ಮಾಡುವದು ಸಾಹಸದ ಮಾತು ಅವರು ಮಾದರಿಯ ಮನುಷ್ಯರಿದ್ದಾರೆ" ಎಂದು ಬಿಂದೂರವರು ಹೇಳಿದರು ಶ್ರೀ ಹಯವದನರವರು ಚಿಕ್ಕ ಹಿಂದೂಸ್ತಾನಿಭಾಷಣಮಾಡಿ ಶಾಲೆಯ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಕೇಳಿದರು.

ಶ್ರೀ ಸುಬ್ಬರಾಯನ್

"ನಾನು ಡಿ. ಯಸ್.ಪಿ. ಯಾಗಿ ಬರಬೇಕೆಂಬುದುಕೆಲವರಇಚ್ಛೆ, ನಾನು ವ್ಯಕ್ತಿಯಾಗಿರಲಿ, ಅಧಿಕಾರಿಯಾಗಿರಲಿ ಬಳ್ಳಾರಿಯು ನನ್ನನ್ನು ಆಕರ್ಷಿಸಿದೆ 1942ರ ಘಟನೆಗಳನ್ನು ನಾನು ಮರೆಯುವಂತಿಲ್ಲ. ಶಿಸ್ತು ಸಂಘಟನೆಗಳಿಂದ ದೇಶದ ಪ್ರಗತಿಯೂಗಬಲ್ಲದು. ಯುವಕರು ಮಾಡುವ ಕೆಲಸಗಳೆಷ್ಟೋಇವೆ. ಅಕ್ಟೋಬರ್ 1 ರಿಂದ ಈ ಜಿಲ್ಲೆಯಲ್ಲೂ ಮದ್ಯನಿಷೇಧಶಾಸನವು ಜಾರಿಯಲ್ಲಿ ಬರುವುದು. ಇದಕ್ಕಾಗಿ ಬಹಳ ದುಡಿಯಬೇಕು ಸಾರ್ವಜನಿಕರ ಸಹಕಾರವಿಲ್ಲದೆ ಏನೂ ನಡಿಯಲಾರದು ಸರಕಾರದ ಆಟವೂಸಾಗುವುದಿಲ್ಲ ನೀವೆಲ್ಲಾ ಇದಕ್ಕೆ ಸಹಕರಿಸಿರಿ. ಹಣದ ಕೊರತೆಗಾಗಿ ಸಾರ್ವಜನಿಕರನ್ನು ಬೇಡಬೇಕು. ಉದಾರಿ

ಗಳಿಗೆ ಕೊರತೆಯಿಲ್ಲ. ನಾನು ನಿಮಗೆ ಯಾವಾಗಲೂ ಸಹಾಯ ಮಾಡಲು ಸಿದ್ಧನಿದ್ದೇನೆ.

ಶ್ರೀ ಬಹದೂರ್‌ರವರ ವಂದನಾರ್ಪಣೆಯೊಂದಿಗೆ— ವಂದೇಮಾತರಂ ರಾಷ್ಟ್ರಗೀತೆಯಿಂದ ಸಭೆಯು ಮುಕ್ತಾಯವಾಯಿತು.

ಬಳ್ಳಾರಿ ಅಧಿಕಾರಿಗಳಲ್ಲಿ- ಬದಲಾವಣೆ

ಪೋಲಿಸ್ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್‌ರವರಾದ ಶ್ರೀ. ಕೆ. ಪಿ. ಜನಾರ್ದನರಾಯರು ತಮ್ಮ ನಿವೃತ್ತಿಗೆ ಮುಂಚೆ ರಜಾತೆಗೆದುಕೊಂಡ ಕಾರಣ ಅವರ ಸ್ಥಳದಲ್ಲಿ- ವಿಶಾ. ಯಸ್. ಡಬ್ಲ್ಯು. ರಿಟ್‌ರವರು ನಿಯುಕ್ತರಾಗಿದ್ದಾರೆ- ಅವರು ಛಾರ್ಜು ವಹಿಸಿಕೊಂಡರು.

ಬಳ್ಳಾರಿ ತಾಲೂಕು ಪೋಲೀಸ್ ಸರ್ಕಲ್ ಇನ್‌ಸ್ಪೆಕ್ಟರವರಾದ Mr. ಸಿರಾಜುದ್ದೀನ್‌ರವರು ತಾವಪರ್ತಿಗೆ ವರ್ಗಾಯಿಸಲ್ಪಟ್ಟು ಶ್ರೀ ಬಿ ಯನ್. ನಾರಾಯಣಸ್ವಾಮಿಯವರು ಅಧಿಕಾರ ಸ್ವೀಕಾರ ಮಾಡಿದರು. ಇವರು ಇಲ್ಲಿ ಈ ಹಿಂದೆ 4 ವರ್ಷಗಳಕಾಲ S. I. ರವರಾಗಿದ್ದರು.

ಗ್ರಾಮಸುಧಾರಣಾ ಯೋಜನೆ.

ಮದ್ರಾಸ ಸರ್ಕಾರದ ಗ್ರಾಮ ಸುಧಾರಣಾ ಯೋಜನೆಗಾಗಿ ಜಿಲ್ಲೆಯೊಂದರಂತೆ ೨೫ ಫಿರ್ಕಾಗಳಲ್ಲಿ ಕಾರ್ಯಕ್ಕೇರ್ಪಡಿಸಿ ೨೫ ಫಿರ್ಕಾ ಡೆವಲಪ್‌ಮೆಂಟು ಆಫೀಸರ್‌ರವರು ೧೭೫ ವಿಲೇಜ ಡೆವಲಪ್‌ಮೆಂಟು ಆಫೀಸರ್‌ರವರನ್ನು ಒಂದು ವರ್ಷದವರೆಗೆ ನಿಯಮಿಸಿದ್ದಾರೆ. ಬಳ್ಳಾರಿ ಜಿಲ್ಲೆಯ ಆಲೂರು ಫಿರ್ಕಾ (ಆಲೂರು ತಾಲೂಕು)ವನ್ನು ಗ್ರಾಮ ಸುಧಾರಣೆಗಾಗಿ ಆರಿಸಿದ್ದಾರೆ.

ಉಪ್ಪಿನ ಕರ ಹೋಗುವುದು.

ಉಪ್ಪಿನ ಮೇಲೆ ಕರವು ಮಾಯವಾಗಿ ಉಪ್ಪು ಎಲ್ಲಾ ಕಡೆಯಲ್ಲೂ ಬಡವರಿಗೆ ಸುಲಭವಾಗಿ ದೊರೆಯುವಂತಾಗಲು ಗಾಂಧೀಜಿಯವರು ಯತ್ನಿಸುತ್ತಿರುವರು.

ಜಾತೀಯ ಗಲಭೆ.

ಕಳೆದ ವಾರ ಅಹಮದಾಬಾದಿನಲ್ಲಿ ಇರೀತಿಗಳಾದವು. ಇಬ್ಬರು ಸತ್ತು, ಕೆಲವರು ಗಾಯಗೊಂಡರು ಈಗ ಶಾಂತವಾಗಿದೆ.

ಬೊಂಬಾಯಿ- ಕಳೆದ 15 ದಿನಗಳಲ್ಲಿ 250 ಅಂಗಡಿಗಳ ಲೂಟಿಯಾಗಿದೆ. 17 ನೆಯ ತಾ. ಮುಂಡರು ಗಲಭೆಯ ಪ್ರದೇಶದಲ್ಲಿ ಒಂದು ಅಂಗಡಿಯನ್ನು ಲೂಟಿ ಮಾಡುತ್ತಿರುವಾಗಲೇ ಮಿಲಿಟರಿಯವರು ಅದನ್ನು ಸುತ್ತುಗಟ್ಟಿ- ಅಶ್ರುವಾಯುವನ್ನು ಉಪಯೋಗಿಸಿದರು 16 ಮುಂಡರು ಲಕ್ಷಂತರ ಒಡವೆಗಳೊಂದಿಗೆ ಬಂಧಿಸ್ಪಟ್ಟರು- (ಮೋಟಾರ್ ಕಾರನ್ನು ಬಾಡಿಗೆ ಮಾಡಿಕೊಂಡು ಇಬ್ಬರು ಮುಂಡರು- ಎಡ ಬಲ ಭಾಗಗಳಿಂದ ಕಾರ್ ವೇಗವಾಗಿ ಹೋಗುತ್ತಿರುವಾಗಲೇ- ಸಿಕ್ಕಾಪಟ್ಟೆ ಗುಂಡು ಹಾರಿಸುತ್ತಾ ಹೋದರು. ಇದರಿಂದ 50-60 ಜನರಿಗೆ ಘಾಯವಾಯಿತು. 5 ಜನರು ಸತ್ತಿರುವರು. ನಗರದಲ್ಲಿ ಅಶಾಂತ ಪರಿಸ್ಥಿತಿಯಿದೆ.

ಢಾಕಾ- ಪೂರ್ವ ಬಂಗಾಲದ ಈ ಪ್ರದೇಶದಲ್ಲಿ ಆಗಾಗ್ಗೆ ಇರಿತಗಳೂ. ಅಂಗಡಿಗಳ ಲೂಟಿ- ಸುಡಿಕೆ ಸಂಭವಿಸಿದ್ದರಿಂದ. ಸರ್ಕಾರದವರು ಹಿಂದೂ-ಮುಸಲ್ಮಾನರ ಎರಡು ಪಕ್ಷಗಳ ಮೇಲೂ ಮುಂಡುಗಂದಾಯವನ್ನು ವಿಧಿಸಿದ್ದಾರೆ.

ರಾಷ್ಟ್ರೀಯ ಸರಕಾರದ ಮಂತ್ರಿಗಳಲ್ಲೊಬ್ಬರಾದ ಶ್ರೀ ರಾಜಗೋಪಾಲಾಚಾರಿಯವರ ಕಾರ್ ಮೇಲೆ- ಶನಿವಾರ ಮಧ್ಯಾಹ್ನ ಯಾರೋ ಗುಂಡು ಹಾರಿಸಿದರು ಯಾರಿಗೂ ಅಪಾಯವಾಗಲಿಲ್ಲ.

ಅಮೇರಿಕದವರು ರಷ್ಯಾದ ಗಡಿಗಳಲ್ಲಿ (ಅಫ್ಘಾನಿಸ್ತಾನದಲ್ಲಿ) ರಸ್ತೆ ಸೇತುವೆಗಳನ್ನು ಕಟ್ಟಿ ಟೆಲಿಫೋನ ಟೆಲಿಗ್ರಾಫ-ಮತ್ತು ರೇಡಿಯೋಗಳನ್ನು ಸರಿಪಡಿಸುತ್ತಾ- ಯುದ್ಧಸನ್ನದ್ಧರಾಗುತ್ತಲಿರುವ ಲಕ್ಷಣಗಳವೆಯೆಂದು ರಷ್ಯಾದ ಸುಪ್ರಸಿದ್ಧ ಪತ್ರಿಕೆಯಾದ ಇಜ್ವಸ್ಟಿಯಾ ಬರೆದಿದೆ.

ನವ ಭಾರತ.

ಚಂದಾದಾರರಾಗಿರಿ.

ಚಂದಾದಾರರನ್ನು ಮಾಡಿರಿ.

ನೀವು ನಮಗೆ ಪೂರ್ವಪರಿಚಿತರಿರುವಿರಿ. 'ನವಭಾರತ'ವು ಹಳ್ಳಿಯ ರೈತರಿಗಾಗಿ, ಬಡವರಿಗಾಗಿ ಬಡ ಉಪಾಧ್ಯಾಯರಿಗಾಗಿ ಸೇವೆ ಮಾಡಿರುವುದು, ಮಾಡುತ್ತಿರುವುದು ನಿಮಗೆಲ್ಲಾ ತಿಳಿದ ವಿಷಯ. ಅಲ್ಪ ವೇತನದ, ಅಲ್ಪ ವರಮಾನದ ಸಮಸ್ತ ವರ್ಗದವರೂ ಸುಖಜೀವಿಗಳಾಗಬೇಕೆಂಬುದೇ ನವ ಭಾರತದ ಮಹತ್ವಾಕಾಂಕ್ಷೆ. ಭಾರತದ ಸ್ವಾತಂತ್ರ್ಯೋದ್ಯಮದ ಬಿರುಗಾಳಿಗೆ ಸಿಕ್ಕಿ, ಸಂಪಾದಕರು ಬಂಧಿಸಲ್ಪಟ್ಟ ಕಾರಣ ,ನವ ಭಾರತವ, ನಿಲ್ಲಬೇಕಾದ ಪ್ರಸಂಗ ಒದಗಿತ್ತು. ಮತ್ತೆ ನಿಮ್ಮೆಲ್ಲರ ಸಹಾಯದ ಭರವಸೆಯಿಂದ ಪ್ರಾರಂಭವಾಗಿದೆ.

ಇದು ಬಹಳ ಕಷ್ಟಕಾಲ ಎಲ್ಲಾ ವಿಷಯಗಳೆಲ್ಲೂ ಒಂದಕ್ಕೆ ನಾಲ್ಕರಷ್ಟು ತೆರಬೇಕಾಗಿದೆ. **ವಾರವಾರವು ಹಣದ ಬೇಡಿಕೆಯನ್ನು ಪೂರೈಸಬೇಕಾಗಿದೆ. ಉದ್ರೇಕೆಲಸ ನಡೆಯುವುದಿಲ್ಲ.** ಪ್ರತಿಯೊಂದು ಹಳ್ಳಿಗೂ ನಾವೇ ಬರಬೇಕೆಂದರೆ ಸದ್ಯಕ್ಕೆ ಸಾಧ್ಯವಾಗುವಂತಿಲ್ಲ. ನೀವೇ ದಯವಿಟ್ಟು ನಮ್ಮ ಕೆಲಸಮಾಡಿ ನಿಮ್ಮ ಚಂದಾಹಣ. ಚಂದಾದಾರರನ್ನು ಮಾಡಿದ ಹಣ ಕಳುಹಿಸಿ ಸಹಾಯ ಮಾಡಿರಿ.

ನಿಮ್ಮೂರಿನ ಎಲ್ಲಾ ಕುಂದು ಕೊರತೆ ಮತ್ತು ಇತರ ಸಮಾಚಾರಗಳನ್ನು ಬರೆಯುತ್ತಿರಲು ಕೋರಿಕೆ.

ಟಿ. ಬಿ. ಕೇಶವರಾವ್, ಸಂಪಾದಕ ನವಭಾರತ

(We draw the attention of the R. D. O. & Tahsildar to the above complaint & hope that if the grievonces mentioned are true, they will be expeditiously redressed. Editor Nava Bharat)

ಪತ್ರವ್ಯವಹಾರ.

ಕಾಮಲಾಪುರ (ಬಡಜನರಿಗೆ ಕೊಂದರಿ)

'ನವಭಾರತ' ಸಂಪಾದಕರಿಗೆ.

ಇಲ್ಲಿಯ ಕೋಆಪರೇಟಿವ್ ಸ್ಟೋರ್ಸ್‌ದವರು ಈ ಗ್ರಾಮಕ್ಕೂ, ಸುತ್ತಮುತ್ತಲ ಆರುಹಳ್ಳಿಗಳಿಗೂ ಆಹಾರ ಧಾನ್ಯಗಳನ್ನು ಹಂಚಲು ವಹಿಸಿಕೊಂಡಿರುತ್ತಾರೆ. ಇಲ್ಲಿಯ ಜನಸಂಖ್ಯೆ 5000- ಬಡಜನರಿಗೂ, ಹರಿಜನರಿಗೂ ಕಾಳು ಸರಿಯಾಗಿ ದೊರೆಯದೆ- ಅವರು ಒಂದೆರಡುದಿನ- ಕೆಲಸಂದರ್ಭಗಳಲ್ಲಿ ಕೂಲಿಯನ್ನು ಕಳೆದುಕೊಂಡು ಹಾನಿಗೀಡಾಗಬೇಕಾಗುತ್ತದೆ. ಧಾನ್ಯಗಳನ್ನು ಕೊಡುವುದಾದರೂ ವಾರಕ್ಕೊಂದು ಸಲ. ಕೊಡುವ ಅಳತೆಯೂ ಕಡಿಮೆಯೆಂಬ ಅಪಾದನೆಗಳಿವೆ- ರೇಷನ್ ಕಾರ್ಡುಗಳನ್ನು ಇಸುಗೊಂಡು- ಮತ್ತೆ ಬರಲು ತಿಳಿಸುವಕಾರಣ ಬಹಳ ಕಷ್ಟಕ್ಕೆ ಕಾರಣವಾಗುತ್ತಲಿದೆ. ಇದನ್ನೆಲ್ಲಾ ಮೇಲಧಿಕಾರಿಗಳು ಸರಿಯಾಗಿ ವಿಚಾರಿಸಬೇಕು.

ಇಲ್ಲಿ ಬೆಳೆದ ಒಳ್ಳೆಯ ನೆಲ್ಲನ್ನೂ, ಇತರಧಾನ್ಯಗಳನ್ನೂ ಬೇರೆಕಡೆಸಾಗಿಸಿ- ಇಲ್ಲಿಗೆ ಮೆಕ್ಕೆ ಜೋಳ ಹಿಟ್ಟನ್ನು (ಅಭ್ಯಾಸವಿಲ್ಲದಿದ್ದೂ ಹೊಟ್ಟೆನೋವಿಗೆ ಕಾರಣವಾಗಿದೆ) ಕೊಡುವುದುಯಾವ ಧರ್ಮ? ಇಲ್ಲಿ ಬೆಳೆದದ್ದು ಇಲ್ಲಿಗೆ ಸಾಕಾದನಂತರ ಬೇರೆಕಡೆ ಕೊಡಬೇಕು- 5 ಸಾವಿರ ಜನಸಂಖ್ಯೆ ಯೂರಿಗೆ 2 ಚೀಲ ಸಕ್ಕರೆ ಹೇಗಾಗಬೇಕು? ಇಲ್ಲಿಯ ಕಬ್ಬನ್ನೆಲ್ಲಾ ಸಕ್ಕರೆ ಕಾರ್ಖಾನೆಗೆ ಕೊಟ್ಟದ್ದಕ್ಕಾಗಿ ಇಷ್ಟೇ ಉಪಕಾರವೇ? ಬೆಲ್ಲವನ್ನೂ ಮಾಡೋಣವೆಂದರೆ ಅಪ್ಪಣೆ ಇಲ್ಲ- ಊರಿನಲ್ಲಿ ಬಡಜನರ ಸರಿಯಾದ ಹಂಚಿಕೆಗಾಗಿ ಹೆಚ್ಚು ಅಂಗಡಿಗಳಾಗಬೇಕು. ಸಕ್ಕರೆಯಕೋಟಾ 10 ಚೀಲಗಳಿಗಾದರೂ ಹೆಚ್ಚಿಸಬೇಕು-- ನೀವು ಮೇಲ್ಕಾಣಿಸಿದ ಅಂಶಗಳನಿವಾರಣೋಪಾಯಕ್ಕಾಗಿ ಮೇಲಧಿಕಾರಿಗಳಗಮನವನ್ನೆಳೆದು ನಮಗೂ, ಹರಿಜನರಿಗೂ ಶೀಘ್ರ ಪರಿಹಾರಕೊಡಿಸಿ

ಕೆ. ನಾಗೇಶರಾವ್.

ಮಹಾತ್ಮ ಗಾಂಧಿಯವರ ಲೇಖನಗಳು.

(2 ನೆಯ ಪುಟದಿಂದ ಮುಂದುವರಿದಿದೆ)

ಸಾಯುವ ಲಕ್ಷಾಂತರ ಹಿಂದೀಯರನ್ನು ಉಳಿಸಲು ನಮಗೆ ದೊಡ್ಡ ಪ್ರಮಾಣದಲ್ಲಿ ಧಾನ್ಯವನ್ನು ಕಳಿಸಿರೆಂದು ನಾವು ಹಿಂದಿಯರ ಯಾವ ಮುಖದಿಂದ ಅಮೇರಿಕೆಯನ್ನು ಕೇಳಿಕೊಳ್ಳೋಣ?

"ಸಾಧ್ಯವಿದ್ದಷ್ಟು ಬೇಗ ಪಾನ ನಿರೋಧವನ್ನು ಅಮಲಿನಲ್ಲಿ ತರಬೇಕೆಂಬ ಮದ್ರಾಸಿನ ಕಾಂಗ್ರೆಸ್ ಮಂತ್ರಿಮಂಡಲದ ಇಚ್ಛೆಗೆ ನಾವು ಹಾರ್ದಿಕ ಬೆಂಬಲ ಕೊಡುತ್ತೇವೆ. ಪಾನನಿರೋಧ ವಿರೋಧಿಗಳು ಅಮೇರಿಕೆಯಲ್ಲಿ ಪಾನನಿರೋಧ ಅಯಶಶ್ವಿಯಾದುದನ್ನು ಎಷ್ಟು ಬೇಕಾದರೆ ಎತ್ತಿ ತೋರಿಸಲಿ. ಅವರು ಈ ಚಿತ್ರದ ಇನ್ನೊಂದು ಮಗ್ಗಲನ್ನೂ ನೋಡಿದರೆ ಅಂದಿಗಿಂತ ಇಂದು ಕಡಿತ ಮತ್ತಷ್ಟು ಹದಗೆಟ್ಟಿದೆಯೆಂದೂ ವರ್ಷ ವರ್ಷಕ್ಕೆ ಮಾದಕ ಪಾನೀಯಗಳ ಹುಟ್ಟುವಳಿ ಹೆಚ್ಚುತ್ತಿದೆಯೆಂದೂ ಕಂಡು ಹಿಡಿಯುವದರಲ್ಲಿ ಸಂಶಯವಿಲ್ಲ ಇತರ ಅಂಶಗಳು ಸಮಾನವಾಗಿರುತ್ತ, ಪಾನನಿರೋಧವಿದ್ದ ಹಿಂದುಸ್ತಾನ ಅದಿಲ್ಲದ ಹಿಂದುಸ್ತಾನಕ್ಕಿಂತ ಎಷ್ಟೋ ಹೆಚ್ಚು ರಭಸದ ಪ್ರಗತಿಯನ್ನು ಸಾಧಿಸಿಕೊಳ್ಳಬಹುದೆಂದು ನಮ್ಮ ದೃಢವಿಶ್ವಾಸ. ಪ್ರಾಮಾಣಿಕತೆಯಿಂದ ಪಾನ ನಿರೋಧವನ್ನು ಪ್ರಯತ್ನಿಸಿ ಅವಿಶ್ರಾಂತವಾಗಿ ಅಮಲಿನಲ್ಲಿ ತಂದರೆ, ಮದ್ಯದಿಂದ ರಾಷ್ಟ್ರಗಳು ಕಂಡು ಮುತ್ತು ಕಾಣುತಿರುವ ಅಧಃಪಾತಕ ಅಳವೆಷ್ಟೆಂದು ಜಗತ್ತಿಗೆ ಅದು ತೋರಿಸಿ ಕೊಡದಿರದು"

ರೆವರೆಂಡ್ ಮಹಾಶಯರೆನ್ನುವದು ನಿಜವಾದರೂ ನಿರೋಧದ ವಿಷಯದಲ್ಲಿ ಜಗತ್ತಿಗೆ ದಾರಿತೋರುವ ಯೋಗ್ಯತೆಯೂ ಸಂಧಿಯೂ ಹಿಂದುಸ್ತಾನಕ್ಕಿವೆ. ಈ ಪಾತಕವುಳ್ಳ ವ್ಯಾಪಾರದಿಂದೊಗುವ ಕಂದಾಯವನ್ನು ಕಳೆದುಕೊಳ್ಳಲು ಆದಕ್ಕೆ ಸಾಧ್ಯವಿದೆಯೆ? ಅದು ಬಾಳ ಬೇಕಾದರೆ ಕಳೆದುಕೊಳ್ಳಬೇಕು. ದಕ್ಷಿಣ ಆಫ್ರಿಕೆಯ ಪ್ರಥಮ ಸತ್ಯಾಗ್ರಹದ ವೀರನಾದ ಸ್ವರ್ಗವಾಸಿ ಶ್ರೀ ಗಜಾಲಿಯಾ, ಅವರ ಸಹಸ್ರಾರಾದ ಸತ್ಯಾಗ್ರಹಿ ಗಜಾಲಿಯಾ (ಕಿರಿಯ) ಅವರಿಂದ ಅಲ್ಲಿಯ ಬೀಭತ್ಸ ಕಥೆಯೊಂದು ನನಗೆ ಬಂದಿದೆ. ವಿವೇಕಶೂನ್ಯ ಚಳವಳಿಯ ಫಲವಾಗಿ ಅಲ್ಲಿಯ ಹಿಂದೀಯರಿಗೆ ಪಾನ ಸ್ವಾತಂತ್ರ್ಯ ದೊರೆತುದರ ಫಲವಾಗಿ ಅವರ ನೈತಿಕ ಶಕ್ತಿ ಕುಂದುತಿದೆ. ಈ ಭಯಾನಕ ಸ್ವಾತಂತ್ರ್ಯದ ಸ್ವರೂಪ ನನಗೆ ಚನ್ನಾಗಿ ಗೊತ್ತು ಈ ವಿಷಯದಲ್ಲಿ ಹಿಂದುಸ್ತಾನದ ಹಿಂದೀಯರಲ್ಲಿ ಮುಸಲ್ಮಾನರಿಗೂ ಇತರರಿಗೂ ಮತಭೇದವಿಲ್ಲ. ಪಾನವ್ಯಾಪಾರಿಗಳದು ಮಾತ್ರ ಇದಕ್ಕಿರುವ ವಿರೋಧ.

ಬಡ ಕುಡುಕರ ನೈತಿಕ ಮತ್ತು ಆರ್ಥಿಕ ಶಕ್ತಿಯನ್ನು ಹೀರುತಿರುವ ಮದ್ಯದಿಂದೊದಗುವ ಕಂದಾಯ ಹಾನಿಯನ್ನು ಅವರಿಗೆ ಪಾನನಿರೋಧದಿಂದಾಗುವ ಪ್ರಯೋಜನ ತುಂಬಿಕೊಡುವದೆಂಬಬಗ್ಗೆ ನನಗೇನೂ ಸಂದೇಹವಿಲ್ಲ. ಇದಲ್ಲದೆ, ಹಿಂದುಸ್ತಾನದ ಮೇಲೆ ಹೇರಿದ್ದ ಸೈನಿಕ ವೆಚ್ಚದ ಹೊರೆಯ ಹೆಸರಲ್ಲಿ ಅಬಕಾರಿ ಉತ್ಪನ್ನಕ್ಕೆ ಬೆಂಬಲವೀಯುತಿದ್ದವರ ವಾದದಲ್ಲಿ ಇನ್ನು ಮುಂದೆ ಸ್ವತಂತ್ರ ಹಿಂದುಸ್ತಾನದಲ್ಲಿ ಆ ಹೊರೆ ಇಲ್ಲದಿರುವಾಗ ಏನೂ ಹುರುಳು ಉಳಿಯಲಾರದು ಆದುದರಿಂದ ಅಬಕಾರಿ ಉತ್ಪನ್ನವನ್ನು ತಡವಿಲ್ಲದೆ ಚಂಚಲವಿಲ್ಲದೆ ತ್ಯಜಿಸಿ ಬಿಡಬೇಕು. ಉತ್ಪನ್ನದ ಹಾನಿಯ ಚಿಂತೆಯಿಂದ ಈ ಅತ್ಯವಶ್ಯಕ ಸುಧಾರಣೆಯನ್ನು ತಡೆಹಿಡಿಯುವದು ಸಲ್ಲದು. ಕಾಂಗ್ರೆಸ್-ಲೀಗುಗಳಲ್ಲಿ ಸಹಕಾರ ಕೈಗೂಡಿದರಂತೂ ಸಂತೋಷವೆ ಇಲ್ಲದಿದ್ದರೂ ಕಾಂಗ್ರೆಸ ಪ್ರಾಂತಗಳು ಯುಕ್ತವಾದುದನ್ನು ಕೈಕೊಳ್ಳುವ ದಿಟ್ಟತನ ತೋರಿಸಬೇಕು.

ಪಾನನಿರೋಧದ ನಿಷೇಧಕ ಅಂಗದೊಡನೆ ವಿಧಾಯಕ ಅಂಗವೂ ಕಾರ್ಯಕಲ್ಪವಾಗಬೇಕು. ವಿಧಾಯಕ ಅಂಗವೆಂದರೆ ಕುಡುಕನಿಗೆ ನಿರ್ದೋಷ ಮನೋರಂಜನೆಯನ್ನೂ ದೇಹಾರೋಗ್ಯವನ್ನೂ ಕೊಡಬಲ್ಲ ಬೇರೆ ಬಗೆಯ ಆಕರ್ಷಣೆಗಳನ್ನು ಒದಗಿಸುವದು.

ಪೂನಾದಲ್ಲಿ. ಮೋ. ಕ. ಗಾಂಧಿ

The Rayalaseema Bank Limited, Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:—

ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ.
ಅನಂತಪುರ:- ಅನಂತಪುರ, ಬೆಳಗುಪ್ಪ. ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ.
ಚಿತ್ತೂರು:- ಚಿತ್ತೂರು, ಮದನಪಲ್ಲಿ, ತಿರುಪತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ. **ಕಡಪ:-** ರಾಜಂಪೇಟೆ

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ;— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು** 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:- 3%.

ಬಿ ವಿ. ಶೇಷಗಿರಿರಾವ್, ಕಾರ್ಯದರ್ಶಿ.



ಕಾಶ್ಮೀರು ಅರುಕ್

(ಮನೆಯ ವೈದ್ಯ)

ಕೆಮ್ಮು, ಉಬ್ಬಸ, ಶೀತಜ್ವರ, ಥಳಜ್ವರ, ಅಜೀರ್ಣ ಮೊದಲಾದ ವ್ಯಾಧಿಗಳಿಗೆ ದಿವ್ಯಾಮೃತ ಎಲ್ಲಾ ನೋವುಗಳಿಗೆ ಹಾವು ಚೇಳು ಕಚ್ಚಿದುದಕ್ಕೆ ದಿವ್ಯೌಷಧ ಎಲ್ಲಾ ಷಾಪುಗಳಲ್ಲಿ ದೊರೆಯುತ್ತದೆ

ಹೆಚ್. ಯಸ್. ಅಂಡ್ ಸನ್ಸು,

ಬಳ್ಳಾರಿ.

ಬೆಳ್ಳಿಯ ಪಾತ್ರೆಗಳು.

ಶುದ್ಧ ಮತ್ತು ಸ್ವಚ್ಛ ಬೆಳ್ಳಿಯಲ್ಲಿ ನಂಬಿಕಸ್ತರಾದ ನಮ್ಮ ಕೆಲಸಗಾರರಿಂದ ತಯಾರಿಸಲ್ಪಟ್ಟ ತಂಬಿಗೆ, ತಾಲಿ, ಜವ್ವಾಸರ್, ಟೀ ಸೆಟ್ ಮತ್ತು ಮದುವೆ ಮುಂತಾದ ಶುಭಕಾರ್ಯಗಳಲ್ಲಿ ಬಹುಮಾನ ರೂಪವಾಗಿ ಕೊಡಬಹುದಾದ ಎಲ್ಲಾ ಅಧುನಿಕ ನಮೂನೆಗಳು ನಮ್ಮಲ್ಲಿ ಸದಿಯಾದ ಬೆಲೆಗೆ ದೊರೆಯುತ್ತವೆ. ನಮ್ಮ ಸೀಲಿರುವ ಪಾತ್ರೆಗಳನ್ನು ಯಾವಾಗ ಬೇಕಾದರೂ ಹಿಂದಕ್ಕೆ ಕೊಟ್ಟು ವೇಸ್ಟೇಜ, ಕೂಲಿ ಕಳೆದನಂತರ ಹೊಸ ಪಾತ್ರೆಕೆಳನ್ನು ಪಡೆಯಬಹುದು.

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

NAVA BHARAT, BELLARY Reg. No. M. 4746

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗ ಳಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

SRI..... .. ..

.....

.....

Printed at Krishna Press Bellary QH NO. B 17 FOR (Q.H. NO. B-5.)
Edited & Published by T. B. KESAVA RAO.

Gandhiji's Birthday Number
ಗಾಂಧಿಜೀ ಜನ್ಮದಿನ ನಂಬಿಕೆ

Reg. No. M. 4746

ಜೈಹಿಂದ್.

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟ ೫ ಸಂಚಿಕೆ ೯

ಬಳ್ಳಾರಿ ಸೆಪ್ಟಂಬರು ೩೦ ಸೋಮವಾರ ೧೯೪೯

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವು.

78 78

Mahatma Gandhi
I S
78 today.
Long live Gandhijee

ಮಹಾತ್ಮ ಗಾಂಧಿ ಯವರಿಗೆ ಇಂದು ೭೮ ವರ್ಷ.

ಗಾಂಧೀಜಿಯವರು ದೀರ್ಘಾಯುಗಳಾಗಲಿ ಅವರ ಜೀವಿತ ಕಾಲದಲ್ಲೇ ಭಾರತವು ಪೂರ್ಣ ಸ್ವರಾಜ್ಯವನ್ನು ಪಡೆಯಲಿ.

೭೮ ೭೮

ಕಾಂಗ್ರೆಸ್—ಮುಸ್ಲಿಂಲೀಗ್ ರಾಜಿ ಮಾತು ಕತೆ.

ಲೀಗ್ ಅಧ್ಯಕ್ಷರಾದ ಮಿ|| ಜಿನ್ನಾರವರೂ ವೈಸ್ರಾಯರೊಡನೆ ಮಾತುಕತೆ ನಡೆಸಿರುವರು. ಗಾಂಧೀಜೀ ಮತ್ತು ಜವಹರಲಾಲ ನೆಹರೂರವರು ವೈಸ್ರಾಯರೊಡನೆ ಸಂಭಾಷಣೆ ನಡೆಸಿರುವರು. ಕಾಂಗ್ರೆಸನ್ನು ಹಿಂದೂ ಸಂಸ್ಥೆಯಾಗಿ ಮಾಡಲು ಜಿನ್ನಾರವರು ಯತ್ನಿಸುತ್ತಿರುವರು. ಕಾಂಗ್ರೆಸ್ ಮಂತ್ರಿಗಳಲ್ಲಿ ಮುಸಲ್ಮಾನ ಪ್ರಾತಿನಿಧ್ಯವೇ ಇರಬಾರದೆಂಬುದು ಜಿನ್ನಾರಹಟ. ಅಲ್ಲದೆ ತಾವು ಮಾಡುವ ಕೆಲಸಗಳಲ್ಲಿ ಕಾಂಗ್ರೆಸ್ ಕೈಹಾಕಬಾರದಂತೆ. ಸದ್ಯಕ್ಕೆ ಒಪ್ಪಂದದ ಲಕ್ಷಣಗಳು ತೋರಿಬರುವುದಿಲ್ಲ. ಕಾಂಗ್ರೆಸ್ ಕೇಂದ್ರ ಮಂತ್ರಿಗಳ ಐಕ್ಯತೆಯನ್ನು ನೋಡಿ ವೈಸ್ರಾಯರು ವಿರೋಧ ಪಕ್ಷವನ್ನು ತರಲು ಯತ್ನಿಸುತ್ತಿರುವರೆಂದು ಕಾಣುತ್ತಲಿದೆ.

ಭಾರತ ದೇಶವನ್ನು ಅಧಿಕಾರೀರೀತ್ಯ ಆಳಲು ಲಂಡನ್ನಿನಲ್ಲಿರುವ ಇಂಡಿಯಾ ಆಫೀಸ್ ಎಂಬ ಶ್ವೇತ ಭವನವನ್ನು ತೆಗೆದು ಹಾಕುವೆವೆಂದು ಪರರಾಷ್ಟ್ರ ಮಂತ್ರಿಗಳಾದ ಜವಹರಲಾಲ ನೆಹರೂರವರು ಹೇಳಿದ್ದಾರೆ.

ಪಂಡಿತ ನೆಹರೂರ ರಾಜೀನಾಮೆ.

ಪಂಡಿತ ನೆಹರೂರವರು, ಅಧ್ಯಕ್ಷ ಪದವಿಗೆ ರಾಜೀನಾಮೆ ಇತ್ತಿರುವರು. ಸರ್ಕಾರದಲ್ಲಿ ತಮ್ಮೊಡನೆ ಸೇರದ ೫ ಮಂತ್ರಿಗಳು ಯಾವಾಗ ಅಪೇಕ್ಷಿಸಿದರು ರಾಜೀನಾಮೆ ಕೊಡಲು ಸಿದ್ಧರಿರುವರೆಂದು ಅವರು ವ್ಯಕ್ತ ಪಡಿಸಿದರು.

ಬರ್ಮಕ್ಕೆ ರಾಷ್ಟ್ರೀಯ ಸರ್ಕಾರ

ಹಿಂದೂಸ್ತಾನಕ್ಕೆ ಕೊಟ್ಟಂತೆ, ಬರ್ಮಾಕ್ಕೂ ಕೂಡಾ ತಾತ್ಕಾಲಿಕ ಸರ್ಕಾರವು ಪ್ರದಾನವಾಗಿ ಪ್ರಜಾಧುರೀಣರು ಅಧಿಕಾರ ಸೂತ್ರಗಳನ್ನು ವಹಿಸಲು. ಬರ್ಮಾಗವರ್ನರರು ವಿನಂತಿ ಮಾಡಿಕೊಂಡಿರುವರು.

ಬ್ರಿಟಿಶ ಅಧಿಕಾರಿಗಳು

ಗುಂಡಿನಿಂದ ಪತ್ತಾರು.

ದಕ್ಷಿಣ ವಜೀರಿಸ್ತಾನದ ಪೊಲಿಟಿಕಲ್ ಏಜಂಟರಾದ ಮೇಜರ್ ಡೊನಾಲ್ಡರವರ ದೇಹವು ಡೇರ್ ಇಸ್ಮಾಯಿಲ್ ಖಾನ್ ಎಂಬೂರಿನಲ್ಲಿ ಒಂದು ಕೆರೆಯಲ್ಲಿ ತೇಲುತಿದ್ದದು ಈಗ ಸಿಕ್ಕಿದೆ. ಅವರ ದೇಹದಲ್ಲಿ ಗುಂಡಿನ ಗಾಯವಿದೆ. ರಂಜಾಕ್ ಹತ್ತರ ಸ್ವತಂತ್ರ ಸರಹದ ಪ್ರಾಂತದ ಜನರು ಅವರನ್ನು ಜೂನ್‌ನಲ್ಲಿ ಕದ್ದೊಯ್ದರು. ಬ್ರಿಟಿಷ್ ಸರಕಾರದವರು ವಜೀರ್ ಸ್ತಾನದ ಮೇಲೆ ಈಚೆಗೆ ಬಾಂಬುಗಳನ್ನು ಸುರಿಸಿದ್ದರು.

ಹೈದರಾಬಾದಿನಲ್ಲಿ ಅತ್ಯಾಚಾರ.

ಹೈದರಾಬಾದ ಸಂಸ್ಥಾದದ ಓರಂಗಲಿನಲ್ಲಿ ಪೋಲೀಸರು ನಡೆಸಿದ ಅತ್ಯಾಚಾರ ವಿಷಯವನ್ನು ಕುರಿತು ನಿಷ್ಪಕ್ಷಪಾತ ವಿಚಾರಣೆಯು ನಡೆಯಬೇಕೆಂದು ಮಹಾತ್ಮ ಗಾಂಧಿಯವರು ಹೈದರಾಬಾದಿನ ಮುಖ್ಯ ಸಚಿವರಾದ ಸರ್ ವಿಚಾರ್ಡರವರಿಗೆ ಬರೆದಿರುವರೆಂದು ಪ್ರಕಟವಾಗಿದೆ.

ಗಾಂಧಿ ಜಯಂತಿ.

ಬಳ್ಳಾರಿ ನಗರದಲ್ಲೂ ಇತರ ಕಡೆಯಲ್ಲೂ ಗಾಂಧಿ ಜಯಂತಿ ಕಾರ್ಯ ಕ್ರಮವು ಉತ್ಸಾಹ ಪೂರ್ವಕವಾಗಿ ಆಚರಿಸಲ್ಪಡುತ್ತಿದೆ.

ಮಧ್ಯನಿಷೇಧ.

ಬಳ್ಳಾರಿ ಜಿಲ್ಲೆಯಲ್ಲಿ 1–10–'46 ರಿಂದ ಜಾರಿಯಲ್ಲಿ ಬರಲಿರುವ ಮಧ್ಯನಿಷೇಧ ಶಾಸನದ ಬಂದೊಬಸ್ತಿಗಾಗಿ ಸರ್ಕಾರದವರು ಎಲ್ಲಾ ಎಚ್ಚರಿಕೆಗಳನ್ನು ತೆಗೆದು ಕೊಳ್ಳುತ್ತಿರುವರು. 28 ನೆಯ ಸಾಯಂಕಾಲ ಜಿಲ್ಲಾ ಕಲೆಕ್ಟರವರು ಪ್ರಮುಖ ರೊಡನೆ ವಿಚಾರ ವಿನಿಮಯಮಾಡಿ ಈ ಶಾಸನವನ್ನು ಯಶಶ್ವಿ ಮಾಡಲು ಕೇಳಿದರು. ಇದನ್ನು ಉಲ್ಲಂಘಿಸಿದವರನ್ನು ಹಿಡಿದು ಶಿಕ್ಷೆಗೆ ಗುರಿಪಡಿಸಲು ಅಧಿಕಾರಿಗಳು ಜೀಪ್‌ಕಾರ್‌ಗಳು ತಯಾರಾಗಿವೆ.

THE NAVA BHARAT
ನವಭಾರತ
ಸಂಪಾದಕ-ಟಿ.ಪಿ.ಈಶ್ವರಶಾಸ್ತ್ರಿ

9th Year of Publication.

30th SEPTEMBER 1946

ಗಾಂಧೀಜಿ ದಿರ್ಘಕಾಲ ಬಾಳಲಿ

ಮಹಾತ್ಮಗಾಂಧಿಯವರಿಗೆ ಹಿಂದೂಪಂಚಾಂಗದಪ್ರಕಾರ ೨೩ ನೆಯ ತಾ. ಗೆ ೭೭ ವರ್ಷಗಳುತುಂಬಿ ೭೮ ನೆಯ ವರ್ಷವಾರಂಭವಾಗಿದೆ, ಅರ್ಧಶತಮಾನಕ್ಕಿಂತಲೂ ಹೆಚ್ಚಿಗೆ ದೇಶಸೇವೆಯಲ್ಲಿ ತೊಡಗಿ, ಭಾರತದ ರಾಜಕೀಯ ಸ್ವಾತಂತ್ರ್ಯ ಸಾಮಾಜಿಕ ಮತ್ತು ನೀತಿಯ ಸುಧಾರಣೆಮಾಡಲು. ಅವರಿಗೆ ಸಮಾನರಾದ ಬೇರೊಬ್ಬ ಮುಖಂಡರು ಇಲ್ಲ. ಪರದೇಶಗಳಲ್ಲಿ ಗಾಂಧಿಯೆಂದರೆ ಹಿಂದೂಸ್ತಾನನೆಂಬರ್ಥದಲ್ಲಿ ಉಪಯೋಗಿಸಿ "ನೀವು ಗಾಂಧಿದೇಶದಿಂದ ಬಂದವರೇ ಎಂದು" ಗೌರವಿಸುವುದು ವಾಡಿಕೆಯಾಗಿದೆ, ಹಿಂದೂಸ್ತಾನದ ಜೀವನವನ್ನು ಇಂಘಾತುಚ್ಚ ಮಟ್ಟಕ್ಕೇರಿಸಿದ ಈಲೋಕೈಕ ಮಹಾಪುರುಷನಲ್ಲಿ ಭಗವದಂಶವಿದೆಯೆಂದು ಭಾರತೀಯರಾದ ನಾವೆಲ್ಲಾ ನಂಬುತ್ತೇವೆ.

ಗಾಂಧೀಜೀಯ ಜೀವನಕಾಲದಲ್ಲಿ ರಾಷ್ಟ್ರೀಯ ಸರಕಾರವು ತಾತ್ಕಾಲಿಕವಾದರೂ ಜಾರಿಯಲ್ಲಿ ಬಂದಿತು ತಮ್ಮ ಅಮೂಲ್ಯಅರ್ಧಶತಮಾನದ ಜೀವನವನ್ನು ಆಶ್ಚೇಯಕ್ಕಾಗಿಯೇಸಲ್ಲಿಸಿದ, ಗಾಂಧೀಜಿಯ ಜೀವಿತಕಾಲದಲ್ಲೇ ಪೂರ್ಣಸ್ವರಾಜ್ಯವು ಲಭಿಸಲೆಂದೂ, ಭಾರತದ ಸಮಸ್ತ ಕಲ್ಯಾಣಕ್ಕಾಗಿ ಕೃಷಿಮಾಡುತ್ತಿರುವ ಗಾಂಧೀಜೀಗೆ ದೀರ್ಘಾಯುರಾರೋಗ್ಯವನ್ನು ಪ್ರದಾನಮಾಡಲೆಂದೂ, ಭಗವಂತನನ್ನು ಪ್ರಾರ್ಥಿಸುತ್ತೇವೆ.

ಡಾ. ರಾಜೇಂದ್ರ ಪ್ರಸಾದರ ಆಕಾಶವಾಣಿ ಭಾಷಣ.

ಭಾರತದಲ್ಲಿ ಬೆಳೆಸಾಕಷ್ಟು ಚನ್ನಾಗಿಲ್ಲದ್ದರಿಂದ ಪರದೇಶದಿಂದ ಬರತಕ್ಕ ಧಾನ್ಯವು ತೀರ ಕಡಿಮೆಯಾದ್ದರಿಂದ, ಜಾವಾ ಸಯಾಮುಗಳಲ್ಲಿ ಸಾರಿಗೆಯ ತೊಂದರೆಯಿರುವುದರಿಂದ, ಅರ್ಜೆಂಟೇದಿಂದ ನಿರೀಕ್ಷಿತಧಾನ್ಯದ ಆಯಾತದಲ್ಲಿ ತೊಡಕುಂಟಾದ್ದರಿಂದ ಇನ್ನು ೨-೩ ತಿಂಗಳುಗಳು ನಾವುಕಠಿಣ ಪರಿಸ್ಥಿತಿಯಲ್ಲಿ ಕಾಲಕಳೆಯಬೇಕಾಗಿದೆ. ಆದರೂ ನಿರಾಶರಾಗುವ ಕಾರಣವಿಲ್ಲ ನಾವೆಲ್ಲರೂ ಧೈರ್ಯದಿಂದ ಈಕಠಿಣ ಪರಿಸ್ಥಿತಿಯಿಂದ ಪಾರಾಗುವ ನಿರ್ಧಾರಮಾಡಬೇಕು ಶಿಸ್ತು ಏದೆಗಾರಿಕೆ, ಸಹಭಾವಗಳಿಂದ ನಾವು ಈ ಗಂಡಾಂತರವನ್ನು ದಾಟಬಹುದು ಎಂದು ಆಹಾರ ಮಂತ್ರಿಗಳಾದ ಡಾ. ರಾಜೇಂದ್ರ ಪ್ರಸಾದರು ೨೩ ನೆ ತಾರೀಖು ರಾತ್ರೆ ೮ ಗಂಟೆಗೆ ದಿಲ್ಲಿ ಆಕಾಶವಾಣಿಯಲ್ಲಿ ಭಾಷಣಮಾಡುತ್ತಾ ಹೇಳಿದರು.

ಕಾಂಗ್ರೆಸ್ ನಿರ್ಣಯಗಳು.

1) ಕಾಂಗ್ರೆಸ್ ತಾತ್ಕಾಲಿಕ ಸರಕಾರವನ್ನು ರಚಿಸಿದುದಕ್ಕೆ ಒಪ್ಪಿಗೆ ಕೊಡಲಾಯಿತು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ೩೫೫ ಸದಸ್ಯರಲ್ಲಿ ೧೨ ಜನರು ತಮ್ಮ ವಿರೋಧ ಮತ ಕೊಟ್ಟರು.

2) ತಾತ್ಕಾಲಿಕ ಸರಕಾರ ಮಂತ್ರಿಗಳು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿರಬಹುದೆಂಬ ತೀರ್ಮಾನವು ೧೩೫ ಪರ ೬೦ ವಿರೋಧ ಮತಗಳಿಂದ ಸ್ವೀಕೃತವಾಯಿತು.

ಗೆಣಕೇಹಾಳು

ಗಾಂಧೀ ಜಯಂತಿಯ ವಾರದಲ್ಲಿ, ಬಳ್ಳಾರಿಯಿಂದ ಶ್ರೀ ಟಿ. ಬಿ. ಕೇಶವರಾಯರೂ, ಕರ್ನಾಟಕ ಚರಖಾಸಂಘದ ಶ್ರೀ ಪಾಟೀಲರೂ ಬಂದು ಗ್ರಾಮಸ್ಥರಿಗೂ ಹರಿಜನರಿಗೂ, ಕಾಂಗ್ರೆಸ್ ರಚನಾತ್ಮಕ ಕಾರ್ಯದ ಅನೇಕ ವಿಷಯಗಳನ್ನು ತಿಳಿಯಹೇಳಿ- ಪ್ರಜಾಸರಕಾರವಿರುವ ಈ ಕಾಲದಲ್ಲಿ ಜಾಗೃತರಿಲ್ಲದಿದ್ದರೆ' ಹಳ್ಳಿಗರ ಕುಂದು ಕೊರತೆಗಳು ನಿವಾರಣೆಯಾಗುವುದು ಸಾಧ್ಯವಿಲ್ಲೆಂದರು- ಈ ಊರಿನಲ್ಲಿ ಕಾಳಿನ ಹಂಚುವಿಕೆಯ ವ್ಯವಸ್ಥೆಯು ಸರಿಯಾಗಿಲ್ಲ. ಇದನ್ನು ಸರಿಪಡಿಸಬೇಕು.

ಜೂನ್, ಜುಲೈ ಆಗಷ್ಟ ತಿಂಗಳುಗಳಲ್ಲಿ ಈ ಊರು, ಮುಷ್ಟಗಟ್ಟಿ, ಕ್ಯಾದಿಗೇಹಾಳು ವಗೈರೆ ಗ್ರಾಮಗಳಲ್ಲಿ ನೂರಾರು ದನಗಳು ಸತ್ತವು. ವಾರವಾರವೂ ವರದಿಗಳನ್ನು ತಹಸಿತಲ್ದಾರರ ಮುಲಕ ವೆಟರ್ನರಿ ಅಧಿಕಾರಿಗಳಿಗೆ ಕಳುಹಿಸಿದರೂ, ಇಲ್ಲಿಯವರೆವಿಗೂ ಒಬ್ಬರೂ ಬರಲಿಲ್ಲ, ಈಗ ಮೇಕೆಗಳು ಸಾಯುತ್ತಲಿವೆ, ಸರಕಾರದ ಅಧಿಕಾರಿಗಳು ಪ್ರಜಾಸರ್ಕಾರದ ಕಾಲದಲ್ಲೂ ಇಷ್ಟು ಬೇದಾಶೀನ್ಯವನ್ನು ತಾಳಿಸಿದರೆ ಹಳ್ಳಿಗರನ್ನಾರು ಕೇಳಬೇಕು?

THE DISTRICT VETERIMARY ~~DOCTOR~~.

Owes on explanation to the public and particularly the villagers of Kurugodu Firca as to why he did not visit or arrange for treatment when more than hundred cattle died there, even in spite of the weekly reports.

Editor NAVABHARAT

ಹೊಸಪೇಟೆ

(ನಮ್ಮ ಸುದ್ದಿಗಾರರಿಂದ)

ಸ್ಟೂಡೆಂಟ್ಸ ಕಾಂಗ್ರೆಸ್- ಶ್ರೀ ಲಕ್ಷ್ಮಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಬರುವ ವರ್ಷಕ್ಕಾಗಿ ಈ ಕೆಳ ಅಧಿಕಾರೀವರ್ಗದವರು ಆರಿಸಲ್ಪಟ್ಟರು,

ಪ್ರಧಾನ ಕಾರ್ಯದರ್ಶಿ:- ಜನಾಬ ಸಯ್ಯದ್ ಇಸ್ಮಾಯಿಲ್.

ಜಂಟಿ ಕಾರ್ಯದರ್ಶಿಗಳು ೧ ನಾಗಮಲ್ ಸಿಂಗ್, ೨ ಎಂ. ಶ್ರೀನಿವಾಸನ್

ಎಳುಜನರ ಕಾರ್ಯಕಾರಿಸಮಿತಿಯಾಯಿತು

ಮದ್ಯ ನಿಷೇಧ ಪ್ರಚಾರ:- 15 ನೆಯ ತಾ. ಸಮಾವೇಶವಾದ ಸರ್ಕಲ ಕಾಂಗ್ರೆಸ್‌ನಲ್ಲಿ ತೀರ್ಮಾನವಾದಂತೆ, ಯುವಕರ ಮತ್ತು ವಿದ್ಯಾರ್ಥಿಗಳ ನಾಲ್ಕೈದು ತಂಡಗಳೇರ್ಪಟ್ಟು, ಹೊಸಪೇಟೆ ಹಡಗಲಿ ತಾಲೂಕುಗಳಲ್ಲಿ ಸಂಚಾರಕ್ರಮವೇರ್ಪಟ್ಟು ಅನೇಕ ಹಳ್ಳಿಗಳಲ್ಲಿ ಮದ್ಯನಿಷೇಧ ಶಾಸನವನ್ನು ಯಶಶ್ವಿ ಮಾಡಲು, ಗ್ರಾಮಸಮಿತಿಗಳೇರ್ಪಟ್ಟವು. ಶ್ರೀ ಅನಂತಾಚಾರ್ಯರು ಕೂಡ್ಲಿಗಿತಾಲೂಕಿನ ಹಳ್ಳಿಗಳಲ್ಲಿ ೩ ದಿನ ಸಂಚರಿಸಿ, ಪ್ರಚಾರಮಾಡಿಬಂದರು. ಪ್ರಚಾರಕ್ಕೆ ಹೋದವರೆಲ್ಲಾ ೨೩ ನೆಯ ತಾ. ವರದಿಗಳನ್ನೊಪ್ಪಿಸಿದರು, ಇತರ ಕಾಂಗ್ರೆಸ್ ಸಮಿತಿಗಳೂ ಈರೀತಿ ಕಾರ್ಯಕ್ರಮವನ್ನಾಚರಿಸಲು ಕಾರ್ಯದರ್ಶಿ ಶ್ರೀತಿರುಮಲರಾವ ಅಸುಂಡಿಕರ್‌ರವರು, ಸೂಚನೆಗಳನ್ನು ತಿಳುಹಿಸಿದವರು.

Planters Coffee.

The Best Quality available at leading merchants.

Planters Coffee Distributers.

Tank Bund, BELLARY.

ಪ್ಲಾಂಟರ್ಸ ಕಾಫಿ

ಶ್ರೇಷ್ಠತೆಗೆ ಹೆಸರುವಾಸಿಯಾದ ನಮ್ಮ "ಪ್ಲಾಂಟರ್ಸ ಕಾಫಿ" ಈಗ ಎಲ್ಲಾ ಮುಖ್ಯ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ

ಪ್ಲಾಂಟರ್ಸ ಕಾಫಿ ಡಿಸ್ಟ್ರಿಬ್ಯೂಟರ್ಸ

ಕೆರೆಕಟ್ಟೆ ಬೀದಿ ಬಳ್ಳಾರಿ

ಪ್ರಧಾನ ಮಂತ್ರಿಗಳ ವಿನಂತಿ.

ಅಕ್ಕಿಯು ಸಾಕಷ್ಟು ಪ್ರಮಾಣದಲ್ಲಿ ಒದಗಿಸಲ್ಪಟ್ಟು ಜನತೆಗೆ ೧೦ ಹತ್ತು ಔನ್ಸ್‌ಗಳಷ್ಟು ಪೂರೈಕೆಯಾಗುವುದು ಅನಿಶ್ಚಿತವೆಂದು ತೋರಿಬಂದ ಕಾರಣ,ಅಕ್ಕಿಯನ್ನು ಉಪಯೋಗಿಸುವ ಮತ್ತು ನೆಲ್ಲನ್ನು ಬೆಳೆಯದಿರುವ ಜನರಿಗೆ, ವಯಸ್ಕರಿಗೆ ದಿನ ವಂಡಕ್ಕೆ ಎಂಟು ಔನ್ಸ್ ಅಕ್ಕಿಯ ಪ್ರಮಾಣಕ್ಕೆ ಸರ್ಕಾರದವರು 4-8-1946 ರಿಂದ ತಗ್ಗಿಸಿದುದನ್ನು ಎಲ್ಲರೂ ಬಲ್ಲರು. ಅನುಕೂಲ ಪರಿಸ್ಥಿತಿ ಒದಗಿದೊಡನೆಯೇ ಮತ್ತೆ ಹತ್ತು ಔನ್ಸುಗಳಿಗೇರಿಸಬೇಕೆಂಬುದು ಆಗ ನನ್ನ ದೃಢನಿಶ್ಚಯವಿದ್ದಿತು. ಅದರೆ ಈಚೆಗೆ ಬಂದ ಸುದ್ದಿಗಳ ಮೂಲಕ ಪರದೇಶಗಳಿಂದ ಅಕ್ಕಿಯು ಸಾಕಷ್ಟು ಬರುವ ಲಕ್ಷಣಗಳಿಲ್ಲ. ಇಷ್ಟೇ ಅಲ್ಲ! ಕಾಲಕ್ಕೆ ಸರಿಯೂಗಿ ಹೊರಗಿನ ಸಹಾಯದಿಂದ ಒದಬೇಕಷ್ಟಾದರೂ, ಅಕ್ಕಿಯು ಬಂದು ಈಗಿನ ೮ ಎಂಟು ಔನ್ಸ್ ಪ್ರಮಾಣವನ್ನಾದರೂ ಕಾಯಂ ಇಡಬಹುದಾದ ಭರವಸೆಯು ತೋರಿ ಬರುವದಿಲ್ಲ. ಈಕಾರಣದಿಂದ ಮುಂಬರುವ ಜನವರಿ ತಿಂಗಳ ಸುಗ್ಗಿವರಿವಿಗೆ, ಸಾಧ್ಯವಿದ್ದಷ್ಟು ಹೆಚ್ಚು ಸಮಯದ ಬಳಕೆಯಿಂದ ನಮ್ಮಲ್ಲಿರುವ ಸಂಗ್ರಹವನ್ನು ಕಾದಿಡಬೇಕಾದುದು, ಮೊದಲಿಗಿಂತ ಹೆಚ್ಚಿನ ಮಹತ್ವದ ಪ್ರಶ್ನೆಯಾಗಿದೆ. ಬೆಳೆಯುವ ರೈತರಲ್ಲದವರಿಗೆ "ಅಕ್ಕಿಯ ರೇಷ್" ಅ ಔನ್ಸ್‌ಗಳಿಗೆ ಇಳಿಸಬೇಕೆಂಬ ಸೂಚನೆಗಳು ನನಗೆ ಬಂದಿವೆ.—ಸ್ಥಾನಿಕ ಪರಿಸ್ಥಿತಿಯನ್ನು ಪೂರ್ಣವಾಗಿ ಉಪಯೋಗಿಸಿ, ಇನ್ನುಳಿದ ಎಲ್ಲಾ ಉಪಾಯಗಳು ವ್ಯರ್ಥವಾಗುವವರೆಗೆ, ನಾನು ಈಸೂಚನೆಯನ್ನು ಅನುಮೋದಿಸಲು ಹಿಂಜರಿಯುತ್ತೇನೆ. ವಿಶೇಷ ಪರಿಸ್ಥಿತಿಯನ್ನೆದುರಿಸಲು ಅಮೇರಿಕಾ ಖಂಡದಿಂದ ೭೫ ಲಕ್ಷ ಅಹಾರ ಪಟ್ಟಗಳನ್ನು ೨೪ ಲಕ್ಷ ರೂ-ಗಳ ಖರ್ಚಿನಿಂದ ತರಿಸಬೇಕೆಂಬ ಯೋಜನೆಯನ್ನು ಆಲೋಚಿಸಿದೆವು. ವಿಮರ್ಶಿಸಿ ನೋಡಲಾಗಿ ಈ ಪಟ್ಟಗಳಲ್ಲಿ ಎರಡು ಲಕ್ಷ ರೂ. ಬೆಲೆಯ ಅಕ್ಕಿಯ ಸಾರಮಾತ್ರ ಇದೆಯೆಂಬುದು ಗೊತ್ತಾಯಿತು. ಕಷ್ಟಕಾಲದಲ್ಲಾದರೂ, ಸರಕಾರದ ೨೪ಲಕ್ಷ ರೂ ಗಳ ವ್ಯಯಮಾಡಿ, ೨ಲಕ್ಷ ರೂ. ಅಕ್ಕಿ ಕೊಳ್ಳುವುದು ಬಹಳ ಹೆಚ್ಚಿನ ಬೆಲೆಯೆಂದು ನಿಶ್ಚಯಿಸಿ, ಆಯೋಜನೆಯನ್ನು ಬಿಟ್ಟುಕೊಟ್ಟೆವು. **ಪ್ರಾಂತವನ್ನು ಬಿಟ್ಟು ಹೊರಗಿನ ಪ್ರದೇಶಗಳಿಂದ ಬಹಳ ಹೆಚ್ಚಿನ ಬೆಲೆಗೆ ಕೊಳ್ಳುವುದಕ್ಕಿಂತಲೂ, ನಮ್ಮಹಣವನ್ನು ನಮ್ಮವರಾದ ಬೆಳೆಯುವ ರೈತರ ಹಿತಕ್ಕಾಗಿಯೇ ವಿನಿಯೋಗಿಸುವುದು ಹೆಚ್ಚು ಉಪಯುಕ್ತವೆಂದು ನನ್ನ ಮತ.**

ವಯಸ್ಕರಿಗೆ ನಿತ್ಯದ ಬಳಕೆಗಾಗಿ ಒಂದು ಪೌಂಡು ತೂಕದಷ್ಟು ನೆಲ್ಲನ್ನು ಕುಟುಂಬದ ಬಳಕೆಗಾಗಿ ಇಟ್ಟು ಕೊಳ್ಳುವ ಸೌಲಭ್ಯವು ಬೆಳೆಯುವ ಎಲ್ಲಾ ರೈತರಿಗೂ ಒದಗಿಸಲಾಗಿದೆ. ಕೊಳ್ಳುವ ಜನರಿಗೆ 6ಔನ್ಸ್‌ಗಳಷ್ಟುಮಾತ್ರ ತಗ್ಗಿಸಿ ಕೊಡಲ್ಪಡುವುದಾದರೆ, ಕೊಳ್ಳುವ ಮತ್ತು ಬೆಳೆಯುವ ಜನರ ಪ್ರಮಾಣದಲ್ಲಿ ಬಹಳ ಅಂತರವಾಗುತ್ತದೆ.

ರೇಷ್ ಕಾರ್ಡ್‌ಗಳನ್ನು ಅರು ಔನ್ಸ್‌ಗಳಷ್ಟು ಅಕ್ಕಿಕೊಂಡು ಪಡುವ ಭವಣೆಗಳನ್ನೂ, ಕಷ್ಟಗಳನೂ. ನೋಡಿ ಬೆಳೆಯುವ ರೈತರಿಗೇ ಮನಸ್ಸಿನಲ್ಲಿ ಕನವಿಸಿಯೂಗದಿರಲಾರದೆಂದು ನನ್ನ ನಂಬಿಕೆ.

ನಮ್ಮ ಪ್ರಾಂತದ ಬೆಳೆಯುವ ರೈತರು ಇನ್ನುಳಿದ ಭಾಗದ ವರ್ಷದಲ್ಲಿ ತಮ್ಮ ಪೂರೈಕೆಗಾಗಿ ೧೨ ಹನ್ನೆರಡು ಔನ್ಸ್‌ಗಳಂತೆ ಲೆಕ್ಕಾಹಾಕಿ, ಅಕ್ಕಿಯ ಖರ್ಚನ್ನು ಕಡಿಮೆ ಮಾಡಬೇಕು ನಾನು ಕೋರುತ್ತೇನೆ. ಅಲ್ಲದೆ, ಸಾಧ್ಯವಾದಲ್ಲಿ ಇನ್ನೂ ಕಡಿಮೆ ಮಾಡಿ, ತಮ್ಮಲ್ಲಿಂದ ಕೊಡಬಹುದಾದಷ್ಟು ಅಕ್ಕಿಯನ್ನಾಗಲಿ, ನೆಲ್ಲನ್ನಾಗಲಿ ಸರ್ಕಾರದ ಕಡೆಯಿಂದ ಬರುವ ಏಜಂಟರಿಗೆ ಸೂಚಬೇಕೆಂದು ನನ್ನ ಬೇಡಿಕೆ. ತಮ್ಮಲ್ಲಿನ ಸಂಗ್ರಹಗಳನ್ನು ಬಿಡುಗಡೆ ಮಾಡಿರೆಂದು ನಾನು ಈ ಹಿಂದೆಕೋರಿದ ಪ್ರಕಾರಕ್ಕೆ ಬೆಳೆದ ರೈತರಿಂದ ಬೇಕಾದಷ್ಟು ಸಹಕಾರ- ಸಹಾನು ಭೂತಿಯು ದೊರಕಿದೆ ಈಗ ಇನ್ನಷ್ಟು ತ್ಯಾಗವು ಅಗತ್ಯವಿದೆ.

ಕಾಲವಿಳಂಬವು ಅಪಾಯಕ್ಕೆ ಕಾರಣವಾಗುವುದರಿಂದ, ರೈತರು ತಮ್ಮ ಸಂಗ್ರಹಗಳನ್ನು ಶೀಘ್ರವಾಗಿ ತೆರೆದಿಡಬೇಕೆಂದು ನನ್ನ ಬೇಡಿಕೆ ಇದೆ. ಈತ್ಯಾಗಕ್ಕಾಗಿ -31-10-1946 ರವರೆಗೆ- ಒಂದು ಮಣನೆಲ್ಲಿಗೆ ೨ ಎರಡುರೂ. ಮತ್ತು ಒಂದು ಮಣ ಅಕ್ಕಿಗೆ 3 ಮೂರು ರೂ. ಬೋನಸ್ ಕೊಡಬೇಕೆಂದು ಅಧಿಕಾರ ಕೊಟ್ಟಿರುವೆನು. ಸರ್ಕಾರದವರು ಕೊಳ್ಳಲು ನಿಶ್ಚಯಿಸಿರುವ ಹಣದ ಮೇಲೆ ಇದನ್ನು ಬೆಳೆದವರಿಗೆ ಕೊಡಲಾಗುತ್ತೆ. ಸೆಪ್ಟಂಬರ್‌ದಿಂದ ನವಂಬರ್ ಮಧ್ಯದವರಿಗೆ ಕೊಟ್ಟನೆಲ್ಲಿನ ಬೋನಸ್ ೧ ಒಂದು ರೂಪಾಯಿಗೂ- ಈಗ ಹೊಸದಾಗಿ ಕೊಡುವುದಕ್ಕೂ ಸಂಬಂಧವಿಲ್ಲ. ಇವುಗಳನ್ನೆಲ್ಲಾ ಹೊರತಾಗಿ ಅದು ಬೇರೆಕೊಡಲಾಗುತ್ತೆ.

ತನುಗೆ ಬೇಕಾದುದಕ್ಕಿಂತಲೂ ಹೆಚ್ಚಿನಮಾಲನ್ನು ಬಚ್ಚಿಟ್ಟುಕೊಂಡು ಈಗ ಮಾರಲು ಮುಂದೆ ಬಂದ ಕಾರಣ ಶಿಕ್ಷೆಗೊಳಗಾಗುವರೆಂಬ ಭಯವನ್ನು ಎಳ್ಳಷ್ಟೂ ಇಟ್ಟುಕೊಳ್ಳಬೇಡಿರಿ. ನಿಮ್ಮ ತ್ಯಾಗವನ್ನು ಕೊಂಡಾಡುವೆವು- ನಿಮ್ಮಮೇಲೆ ಯಾವ ಚರ್ಯೆಯನ್ನೂ ತೆಗೆದುಕೊಳ್ಳುವುದಿಲ್ಲ.

ಭವಿಷ್ಯಕ್ಕಾಗಿ ರೈತರು ಹೆದರಬೇಕಾದುದಿಲ್ಲ. ರುತುಮಾನ ಪರಿಸ್ಥಿತಿಯು ಅನುಕೂಲವಿರುವ ಲಕ್ಷಣಗಳಿವೆ ಈಗ ಇಷ್ಟು ತ್ಯಾಗವನ್ನು ಮಾಡುವುದರಿಂದ ಬರುವ ಸುಗ್ಗಿಯಸಮಯಕ್ಕೆ- ಕಾಳು, ಪೇಟಿಗೆ ಒರುವ ಹೊತ್ತಿಗೆ ನಾವು ಅಕ್ಕಿಯ ರೇಷ್ಮ ಹೆಚ್ಚಿಸಬಹುದೆಂದು ಧಾರಾಳವಾಗಿ ಹೇಳಬಹುದು.

(ಬಳ್ಳಾರಿ ಜಿಲ್ಲೆಯಲ್ಲಿ ವಿಸ್ತೃತ ಪ್ರಕಟನೆಗಾಗಿ)

ಟಿ. ಪ್ರಕಾಶಂ,
ಗಿಳ-೯-೪೬.

ಕೆ. ಎನ್. ಅನಂತರಾಮನ್,
ಕಲೆಕ್ಟರ್–ಬಳ್ಳಾರಿ.

ಎಣ್ಣೆಗಾಗಿ ಭೀಕರ ಹೋರಾಟ.

ರಷ್ಯಾದ ಸುಪ್ರಶಿದ್ಧ ಪತ್ರಿಕೆಯೂದು ನ್ಯೂಮಟ್ಸ್ಸ್
—ಹೀಗೆ ಬರೆದಿದೆ. –

"ಮಧ್ಯಪೂರ್ವದ ಎಣ್ಣೆಯ ಭೂಮಿಗಳನ್ನು ಆಕ್ರಮಿಸಲು ಬ್ರಿಟಿಷ್ ಮತ್ತು ಅಮೇರಿಕಾದೇಶಗಳು ತಮ್ಮ ಸಂಪೂರ್ಣ. ಶಕ್ತಿವರ್ಚಸ್ಸುಗಳನ್ನುಪಯೋಗಿಸುತ್ತಲಿವೆ. ಪ್ರಪಂಚದ ಎಲ್ಲಾ ಭಾಗಗಳಲ್ಲಿ ಬ್ರಿಟಿಷ್ ಮತ್ತು ಅಮೇರಿಕಾಗಳು, ತಮ್ಮ ಪ್ರತಿಭೆಯನ್ನು ಕಾಯ್ದುಕೊಳ್ಳಲು ಎರಡನೆಯ ಮಹಾಯುದ್ಧದ ನಂತರ ಭೂಜಲನಿಲ್ದಾಣಗಳನ್ನು ಸ್ಥಾಪಿಸಿರುವರು. ಇದಕ್ಕಾಗಿ ಇವರಿಗೆ ಹೆಚ್ಚು ಎಣ್ಣೆಯ ಅಗತ್ಯವಿದೆ.

ಮಧ್ಯಪೂರ್ವದ ಎಣ್ಣೆಗಣಿಗಳಿಗೆ 1945ರ ಸೆಪ್ಟಂಬರದೊಳಗಾಗಿ- ಅಮೆರಿಕಾದವರು ಶೇಕಡ 40 ಭಾಗ ಹಣವನ್ನು ಸುರಿಸಿರುವರು. ಅದೇ ತಿಂಗಳಲ್ಲಿ ಬ್ರಿಟಿಷ್- ಅಮೆರಿಕಾದ ಒಪ್ಪಂದದ ಪ್ರಕಾರಕ್ಕೆ ಇನ್ನೂ ಹೆಚ್ಚಿನ ಅಮೆರಿಕಾ ಬಂಡವಾಳವು ಬರಬಹುದು. ಈ ಕಾರಣದಿಂದಲೇ ಸಣ್ಣ-ಪುಟ್ಟ ಸುಮಾರು ೧೨ ಅರಬ್ಬಿದೇಶಗಳನ್ನು ಕೂಡಿಸಿ, ಮಧ್ಯಪೂರ್ವದ ತಮ್ಮ ಎಣ್ಣೆಯ ಸ್ವಾಸ್ತಿಗಳನ್ನು ಭದ್ರಪಡಿಸಿಕೊಳ್ಳುವ ಯೋಜನೆಯನ್ನು ಬ್ರಿಟಿಷ್‌ದವರು ಮಾಡಿರುವುದು

ಸುಭಾಸರು ಸರಹದ್ದಿನಲ್ಲಿ.

ಸುಭಾಸ ಚಂದ್ರಬೋಸರು ಸ್ವತಂತ್ರ ಸರಹದ ಪ್ರಾಂತ್ಯದ ಮುಖ್ಯ ಧುರೀಣರಾದ ಇಪಿ ಫಕೀರರ ಅತಿಥಿಗಳಾಗಿರುವರೆಂದು ಶಿಂಧ ಪತ್ರಿಕೆಯಾದ "ಟುಮಾರೊ" ಬರೆದಿದೆ.

ಬೊಂಬಾಯಿ, ಕಲಕತ್ತಾ ಡಾಕಾಗಳಲ್ಲಿ ಇನ್ನೂ ಜಾತೀಯ ಜಗಳಗಳ ಪರಿಣಾಮವಾಗಿ ಕತ್ತಿಯ ಇರಿತಗಳೂ, ಮರಣಗಳು ಸಂಭವಿಸುತ್ತಲಿವೆ.

ಮಹಾತ್ಮಾ ಗಾಂಧಿಯವರ ಲೇಖನಗಳು.

ಈ ಸಮಯದಲ್ಲಿ ಏನುಮಾಡಬೇಕು?
(ಪ್ರಶ್ನೆಗಳಿಗೆ ಗಾಂಧೀಜಿಯವರ ಉತ್ತರ)

ಪ್ರಃ- ೧ ಮುಂಡರು ಇಲ್ಲವೆ ಬೇರೆಯವರುದಾಳಿ ಮಾಡಿದಾಗಲೂ ಜನರು ಅತ್ಯಂತಿಕ ಅಹಿಂಸೆಯನ್ನು ಪಾಲಿಸತಕ್ಕದ್ದೆಂದು ನೀವು ಎಂದಿನಿಂದಲೂ ಅಭಿಪ್ರಾಯ ಪಡುತಿದ್ದು ಅದನ್ನು ಪ್ರಚಾರಪಡಿಸಿರುವಿರಿ. ಹೆಣ್ಣುಮಕ್ಕಳ ಮೇಲೆ ದಾಳಿಇಲ್ಲವೆ ಅತ್ಯಾಚಾರವಾದಾಗಲೂ ಇದೇ ಮಾರ್ಗವನ್ನನುಸರಿಸಬೇಕೋ? ಅಹಿಂಸೆಯ ಸಂಬಂಧದಲ್ಲಿ ಜನರು ನಿಮ್ಮ ಮಾರ್ಗವನ್ನನುಸರಿಸಲು ಅಸಮರ್ಥರಾದರೆ ಹೇಡಿಗಳಂತೆ ಸಾಯಲು ನೀವನರಿಂದ ಸಲಹೆ ಕೊಡುವಿರೊ ಇಲ್ಲವೆ ಹಿಂಸಾತ್ಮಕ ಪ್ರತೀಕಾರದಿಂದ ದಾಳಿಯನ್ನೆದುರಿಸಬೇಕೆಂದು ಹೇಳುವಿರೊ?

ಪ್ರಃ- ೨ ಮುಸ್ಲಿಂ ಲೀಗು ಇಂದು ಇಬ್ಬಗೆಯ ಆಟವನ್ನು ಆಡುವದು, ಅದನ್ನು ನೀವು ತೀವ್ರವಾಗಿ ಖಂಡಿಸುವದಿಲ್ಲವೊ? ಅವರ ಧುರೀಣರು ಹಿಂದುಗಳ ವಿರುದ್ಧ ಪ್ರತ್ಯಕ್ಷ ಹಿಂಸೆ ಮತ್ತು ಜೋಹಾದವನ್ನು ಪ್ರಚಾರಮಾಡುತಿರುವಾಗಲೆ ಅವರು ಮಂತ್ರಿಪದದಲ್ಲಿದ್ದುಕೊಂಡು ಪೋಲೀಸು ಮತ್ತು ನ್ಯಾಯಸ್ಥಾನದ ಎಲ್ಲ ಸೂತ್ರಗಳನ್ನು ನಡೆಸುತ್ತಿರುವರು.

ಪ್ರಃ- ೩ ಇತಿಹಾಸದಲ್ಲಿಯೇ ಅಪೂರ್ವವಾದ ಇಂಥ ಅಕ್ರಮವನ್ನು ತಡೆಯಲ್ಲಿಕ್ಕೆ ಹಿಂದುಸ್ತಾನದಲ್ಲಿ ಯಾವದೊಂದು ಸತ್ತೆ ಇರುವದಿಲ್ಲವೆ?

ಪ್ರಃ- ೪ ಸದ್ಯದಂಥ ಘಟನೆಗಳನ್ನು ಹಾಗೆಯೆ ನಡೆಯಗೊಟ್ಟರೆ ಯಾದವೀ ಯುದ್ಧವೇ ಅಪರಿಹಾರ್ಯವೆಂದು ನಿಮಗೆನಿಸುವದಿಲ್ಲವೆ? ಇಂಥ ಭೀಕರ ಪ್ರಸಂಗ ಬಂದರೆ ಅದನ್ನು ಎದುರಿಸಲು ನಿಮ್ಮ ದೇಶ ಬಾಂಧವರಿಗೆ ಎಂತು ಸಲಹೆ ಕೊಡುವಿರಿ?

ಉಃ- ೧ ನನ್ನ ಕಲ್ಪನಾಸಮಾಜದಲ್ಲಿ ಈ ಪ್ರಶ್ನೆಗಾರರು ಎತ್ತಿ ತೋರಿಸುವಂಥ ಅತ್ಯಾಚಾರಗಳು ಸಂಭವಿಸುವದೇ ಇಲ್ಲ. ಆದರೆ ನಾವೀಗ ಇರುವ ಸಮಾಜದಲ್ಲಿ ಇಂಥ ಅತ್ಯಾಚಾರಗಳು ಸಂಭವಿಸುವದುಂಟು. ನನ್ನ ಉತ್ತರ ಸುಸ್ಪಷ್ಟವಾಗಿದೆ. ಅಹಿಂಸಾನಿಷ್ಠ ಸ್ತ್ರೀ-ಪುರುಷರು ಪ್ರತೀಕಾರ ಮಾಡದೆ ಮರಣ ಹೊಂದಬೇಕು ಸಿಟ್ಟುಇಲ್ಲವೆ ದ್ವೇಷ ಭಾವನೆ ತಳೆಯತಕ್ಕದ್ದಲ್ಲ. ಆತ್ಮರಕ್ಷಣೆಯಲ್ಲಿಯೂ ಹೆಣ್ಣುಮಕ್ಕಳ ಮಾನರಕ್ಷಣೆಯಲ್ಲಿಯೂ ಇದೇ ಮಾತು ಸರಿ ಹೋಗುವದು. ಶೌರ್ಯದ ಅತ್ಯುಚ್ಚ ಆದರ್ಶವಿದು. ನನ್ನ ಧುರೀಣತ್ವವೆಂದು ತಪ್ಪಾಗಿ ಕರೆಯುತಿರುವ ಈ ಮಹಾಕಾಯದೆಯಂತೆ ನಡೆಯಲು ಯಾವದೊಂದು ವ್ಯಕ್ತಿ ಇಲ್ಲವೆ ಜನರ ಗುಂಪು ಅಸಮರ್ಥವಾದರೆ ಇಲ್ಲವೆ ಇಷ್ಟಪಡದಿದ್ದರೆ ಪ್ರತೀಕಾರ, ಅಮರಣ ಪ್ರತಿಕಾರ ಎರಡನೆಯ ದರ್ಜೆಯಮಾರ್ಗ. ಮೊದಲನೆಯದ್ದಕ್ಕಿಂತ ಇದು ಬಹಳ ಭಿನ್ನವಾಗಿದೆ. ಹೇಡಿತನವು ಹಿಂಸೆಗಿಂತ ಕನಿಷ್ಠವಾದ ಅಧಮತನವು. ಹೇಡಿಯು ಸೇಡು ತೆಗೆದುಕೊಳ್ಳಬಯಸುವನು. ಆದರೆ ಸಾಯುವದಕ್ಕೆ ಅಂಜಿ ಎರಡನೆಯವರ ಸಹಾಯವನ್ನು ಅಪೇಕ್ಷಿಸುವನು. ತನ್ನ ಸಂರಕ್ಷಣೆಯ ಸಲುವಾಗಿ ಆಗಿನ ಸರಕಾರಕ್ಕೆ ಶರಣು ಹೋಗಬಹುದು. ಹೇಡಿಯು ಮಾನವರಿಗಿಂತ ಅಧಮನು. ಸ್ತ್ರೀ-ಪುರುಷ ಸಮಾಜದ ಘಟಕನಾಗಲುಕೂಡ ಅವನು ಅನರ್ಹನು. ಕೊನೆಯದಾಗಿ ಹೆಣ್ಣುಮಕ್ಕಳು ನನ್ನ ಸಲಹೆಯಂತೆ ನಡೆದಿದ್ದರೆ ಈಗ ನಡೆದರೆ ಅಣ್ಣ ತಮ್ಮಂದಿರ ಇಲ್ಲವೆ ಅಕ್ಕತಂಗಿಯರ ಸಹಾಯವನ್ನಪೇಕ್ಷಿಸದೆ ಆತ್ಮರಕ್ಷಣೆ ಮಾಡಿಕೊಳ್ಳಬಲ್ಲರು.

ಉತ್ತರ- ೨ ಇಬ್ಬಗೆಯ ಆಟ ಹೂಡಿದ್ದು ನಿಜವಾಗಿ ತೀರ ಅನುಚಿತ. ನಮ್ಮ ರಾಷ್ಟ್ರೀಯ ಜೀವನದ ಇತಿಹಾಸದಲ್ಲಿ ಅದೊಂದು ವಿಷಾದನೀಯ ಪರಿಚ್ಛೇದ

ನನ್ನ ನಿಷೇಧ ಸಾಮೂಹಿಕವಾಗಿ ಅನ್ವಯಿಸುತ್ತದೆ ಅದು ಬಹಳ ಅನಿಷ್ಟವಿದ್ದುದರಿಂದ ಬಹಳ ದಿನ ಬಾಳಲಾರದು.

ಉತ್ತರ— ೩. ಘಟನಾಬದ್ಧ ಅಧಿಕಾರಿಗಳೆಂದರೆ ಬ್ರಿಟಿಶರೆ. ನಾವೆಲ್ಲ ಅವರ ಕೈಗೊಂಬೆಗಳು. ಆದರೆ ಸತ್ಯೆಯನ್ನು ನಿಂದಿಸುವದು ತಪ್ಪು ಮತ್ತು ಮೂರ್ಖ ತನದ್ದು. ಅದು ತನ್ನ ಸ್ವಭಾವದಂತೆ ವರ್ತಿಸುವದು. ಆಡಳಿತವೇನು ನಮಗೆ ಕೈಗೊಂಬೆಗಳಾಗಲಿಕ್ಕೆ ಒತ್ತಾಯಪಡಿಸುವದಿಲ್ಲ. ನಾವೇ ಮುಂದಾಗಿ ಅವರ ತಿಬಿರದಲ್ಲಿ ಹೋಗುವೆವು. ಆದುದರಿಂದ ನಮ್ಮಲ್ಲಿಯ ಪ್ರತಿಯೊಬ್ಬರಿಗೆ ಬ್ರಿಟಿಶರ ಆಟವನ್ನಾಡಲು ನಿರಾಕರಿಸಲು ಮುಕ್ತದ್ವಾರವಿದೆ.

ಬ್ರಿಟಿಶ ಅಧಿಕಾರ ಇಲ್ಲಿಂದ ಕಾಲ್ದೆಗೆಯಲು ಒದ್ದಾಡುತಿದೆಂಬುದನ್ನು ನಾವು ನಿಸಂದೇಹವಾಗಿ ಒಪ್ಪ ಬೇಕು. ಹೇಗೆಂಬುದು ಅದಕ್ಕೆ ತಿಳಿಯದಾಗಿದೆ. ಪ್ರಾಮಾಣಿಕವಾಗಿ ಅದು ಹಿಂದೂಸ್ತಾನ ಬಿಡಬಯಸುತ್ತದೆ. ಆದರೆ ಬಿಡುವ ಮೊದಲು ಈವರಿಗೆ ಮೂಡುತ್ತ ಬಂದ ತಪ್ಪಗಳ ಪರಿಮಾರ್ಜನೆ ಮಾಡಲೂ ಇಷ್ಟಪಡುತಿದೆ. ಒನಿಕೆ ಪೆಟ್ಟುತಿನ್ನುವವನಿಗೆ ಅದರ ನೋವು ಗೊತ್ತಾಗುವದು. ಹಿಂದೂಸ್ಥಾನವನ್ನು ಅದರ ಮಟ್ಟಿಗೇ ಬಿಟ್ಟುಗೊಟ್ಟು ಹಿಂದೆ ಮಾಡಿದ ತಪ್ಪುಗಳ ಪರಿಮಾರ್ಜನೆ ಮಾಡಿರೆಂದು ನಾನು ಮೊದಲಿನಿಂದ ಬ್ರಿಟಿಶರಿಗೆ ಹೇಳುತ್ತ ಬಂದಿರುವೆನು. ಈ ಸತ್ಯ ಸಂಗತಿಯು ಬ್ರಿಟಿಶ್ ಅಧಿಕಾರದಲ್ಲಿದ್ದವರಿಗೆ ಹೊಳೆಯಲೊಲ್ಲದು. ನಮಗಿಂತ ಹೆಚ್ಚು ತಮಗೇ ಹಿಂದೂಸ್ತಾನದ ಬಗ್ಗೆ ಗೊತ್ತಿದೆಂದು ಅವರು ಜಂಭ ಕೊಚ್ಚಿಕೊಳ್ಳುವರು. ಶತವಾನಕ್ಕಿಂತ ಹೆಚ್ಚು ಅವಧಿಯವರೆಗೆ ನಮ್ಮನ್ನು ಯಶಶ್ವಿಯಾಗಿ ದಾಸ್ಯದಲ್ಲಿಟ್ಟದ್ದರಿಂದ ನಮ್ಮ ಭವಿತವ್ಯದ ನಿರ್ಣಾಯಕರು ತಾವೇ ಎಂದು ಅವರು ಹೇಳಿಕೊಳ್ಳುತಿರುವರು. ಶಾಂತ ಮಾರ್ಗದಿಂದ ನಾವು ನಮ್ಮುದನ್ನು ಗಳಿಸಿಕೊಂಡರೆ ಅವರು ಗುಣಗುಡತಕ್ಕದ್ದಲ್ಲ. ಸತ್ಯಾಗ್ರಹವೆಂದಿಗೂ ಸೋಡುತೀರಿಸಿ ಕೊಳ್ಳುವ ಮಾರ್ಗವಲ್ಲ. ವಿಧ್ವಂಸನದಲ್ಲಿ ಅದರ ವಿಶ್ವಾಸವಿಲ್ಲ. ಆದರೆ ಮುತಪರಿವರ್ತನದಲ್ಲಿ ಅದರ ಅಪಯಶಶ್ವಿಗೆ ಸತ್ಯಾಗ್ರಹ ಶಾಸ್ತ್ರದಲ್ಲಿ ದೋಷ ವಿದೆಂಬುದು ಕಾರಣವಲ್ಲ. ಆದರೆ ಸತ್ಯಾಗ್ರಹಿಯ ಅಶಕ್ತತೆಯೆ ಅದಕ್ಕೆ ಕಾರಣ. (ಕಾರಣವೇನೇ ಇರಲಿ) ಬ್ರಿಟಿಶ್‌ರು ಇಲ್ಲಿಂದ ಕಾಲ್ದೆಗೆಯಲು ನಿರ್ಧರಿಸಿದರಿಂದ ತನ್ನದೆ ಲೋಪದೋಷಗಳನ್ನು ಹೆಚ್ಚಾಗಿ ಪ್ರದರ್ಶಿಸುತಿರುವದು.

ಸ್ವಾತಂತ್ರ್ಯೋತ್ಸವ

ಇಜಿಪ್ತದಿಂದ ಹಿಂದೀ ಗೆಳೆಯನೊಬ್ಬ ಬರೆಯುತ್ತಾನೆ.

"ಹಿಂದೂಸ್ತಾನ ಬೇಗನೆ ತನ್ನ ಸ್ವಾತಂತ್ರ್ಯ ಪಡೆಯಲಿದೆ ಮತ್ತು ದೇಶದಲ್ಲೆಲ್ಲ ಆ ಉತ್ಸವವನ್ನು ಆಚರಿಸಲಾಗುತಿದೆಂದು ರೇಡಿಯೋ ಮೂಲಕ ಮತ್ತು ವೃತ್ತಪತ್ರಗಳ ಮೂಲಕ ನಾವು ತಿಳಿದುಕೊಂಡೆವು. ಇಲ್ಲಿರುವ ಹಿಂದೀ ಜನಾಂಗ ಈ ಉತ್ಸವದಲ್ಲಿ ಭಾಗವಹಿಸಬೇಕೆಂದು ಬಯಸುತಿದೆ. ದೇಶವು ನಿಜವಾಗಿ ಸ್ವತಂತ್ರವಾಗಿದೆಂಬ ಬಗ್ಗೆ ನೀವು ಸಂಪೂರ್ಣ ಸಮಾಧಾನ ಹೊಂದುವ ವರೆಗೆ ನಾವು ಇತ್ತ ಲಕ್ಷ ಪೂರಯಿಸುವದಿಲ್ಲ. ನಿಮ್ಮಿಂದ ಉತ್ತರವನ್ನು ಅಪೇಕ್ಷಿಸುತ್ತೇವೆ."

ಗಾಂಧೀಜಿ ಉತ್ತರ ರೂಪವಾಗಿ ಹೀಗೆ ಬರೆದಿದ್ದಾರೆ.

"ನಿಮ್ಮ ಪತ್ರಮುಟ್ಟಿತು. ದಾರಿನೋಡುವದಾಗಿ ನಿರ್ಧರಿಸಿ ನೀವು ಒಳ್ಳೆಯದನ್ನೆ ಮಾಡಿದಿರಿ. ನಾವು ನಿಜವಾಗಿ ಸ್ವತಂತ್ರರಾಗುವವರೆಗೆ ಉತ್ಸವ ಮಾಡುವದರಲ್ಲಿ ಅರ್ಥವೇನಿದೆ? ಸ್ವಾತಂತ್ರ್ಯದ್ವಾರವೀಗ ತೆರದಿದೆಂದು ಮಾತ್ರ ಬಹಳಾದರೆ ಹೇಳಬಹುದು. ಆದರೆ ಅದರಿಂದ ಸಮಾಧಾನ ಹೊಂದುವದು ಅತಿ ಮೂರ್ಖತನದ್ದಾಗುವದು. ನಮ್ಮ ನಗರಗಳಲ್ಲಿ ಹಿಂದೂ ಮುಸಲ್ಮಾನರಿಂದು ಪರಸ್ಪರ ಬಡದಾಡ

ಹತ್ತಿದ್ದಾನೆ. ಈ ಪರಿಸ್ಥಿತಿಯಲ್ಲಿ ಹೊರನಾಡುಗಳಲ್ಲಿರುವ ಹಿಂದೀಯರು ಏಕ್ಯದ ಸಂದೇಶ ಬೀರುತ್ತ ಸ್ವಾತಂತ್ರ್ಯ ದ್ವಾರದಲ್ಲಿ ಉತ್ತಮ ರೀತಿಯಿಂದ ಸಹಾಯಕರಾಗಬಲ್ಲರು. ಇಜಿಪ್ತದಲ್ಲಿರುವ ನೀವು ಈ ವಿಷಯದಲ್ಲಿ ಅಮೂಲ್ಯ ಸೇವೆಯನ್ನು ಸಲ್ಲಿಸಬಲ್ಲಿರಿ"

ಚರಕಾ ಜಯಂತಿ.

ಚರಕಾ ಜಯಂತಿಯೆಂದು ಕರೆಯಲ್ಪಡುವ ದಿನವು ನನ್ನ ಜಯಂತಿಯ ದಿನವೇ ಯಾವಾಗಲೂ ಬರುವದಾದರೂ ಅದು ಗಾಂಧೀ ಜಯಂತಿಯಲ್ಲ. ಕಾರಣವು ಸ್ಪಷ್ಟವಿದೆ. ಪ್ರಾಚೀನ ಕಾಲದಲ್ಲಿ ಚರಕಾಕ್ಕೂ ಸ್ವಾತಂತ್ರ್ಯಕ್ಕೂ ಏನೂ ಸಂಬಂಧವಿರಲಿಲ್ಲ. ಏನಾದರೂ ಇದ್ದರೆ ದಾಸ್ಯದ ಹಿನ್ನೆಲೆ ಅಡಕ್ಕಿದ್ದಿತು. ಒಣಗಿದ ರೊಟ್ಟಿ ತುಣಕಿಗಾಗಿ ಬಡ ಹೆಣ್ಣುಮಕ್ಕಳು ನೂಲಲೇ ಬೇಕಾಗುತ್ತಿತ್ತು. ಆಗಿನ ಸರಕಾರದವರು ಮನಸಿಗೆ ಬಂದಷ್ಟು ಕವಡಿಗಳನ್ನು ಅವರಿಡೆಗೆ ಎಸೆಯುತ್ತಿದ್ದರು. ರಾಜಕೋಟೆಯ ಹಿಂದಿನ ರಾಜಾ ಸಾಹೇಬರು ಯಾವುದೋ ಒಂದು ದಿವಸ ಬಡಜನರ ಕೆಡೆಗೆ ರೊಕ್ಕ ಚೆಲ್ಲುತಿದ್ದರೆಂಬುದನ್ನು ಬಾಲ್ಯದಲ್ಲಿ ನಾನು ನೋಡಿದ್ದು ಇದೀಗ ಸ್ಮರಣೆಗೆ ಬರುತಿದೆ. ಆಗ ನನಗೆ ಅದೊಂದು ಜಾತ್ರೆಯು ಸೋಜನಿಸುತಿತ್ತು. ಹಿಂದಿನ ಕಾಲದಲ್ಲಿ ಬಡ ನೂಲುವವರು ತಮ್ಮ ಕಡೆಗೆ ಚಲ್ಲಲ್ಪಡುತಿದ್ದ ಕೆಲವೆ ಕವಡಿಗಳನ್ನು ಹೇಗೆ ಅತು ರತೆಯಿಂದ ಆರಿಸಿಕೊಳ್ಳುತಿದ್ದರೆಂಬುದರ ಕಲ್ಪನಾ ಚಿತ್ರವನ್ನು ನಾನು ರೇಖಿಸಿಕೊಳ್ಳಬಲ್ಲೆನು.

ಬಡತನದಿಂದ ಬಳಲುತಿರುವ ಹಿಂದೂಸ್ಥಾನ ಪರಕೀಯ ದಾಸ್ಯದಿಂದ ಮುಕ್ತವಾಗಬೇಕಾದರೆ ಕೈನೂಲು ಮತ್ತು ಚರಖಾ ದಾಸ್ಯದ ಚಿನ್ಹವಾಗಿರದೆ ಸ್ವಾತಂತ್ರ್ಯದ ಚಿನ್ಹವಾಗಿದೆಂಬುದನ್ನು, ಅದು ಕಲಿಯಲಿಕ್ಕೇಬೇಕೆಂದು ೧೯೦೮ ರಲ್ಲಿ ದಕ್ಷಿಣ ಆಫ್ರಿಕೆಯಲ್ಲಿ ನನಗೆ ಹೊಳೆಯಿತು. ರೊಟ್ಟಿಯಮೇಲೆ ಬೆಣ್ಣೆಯಂತೆ ಅದು ಎಂದೂ ಅದರ ಅರ್ಥ. ಈ ಸತ್ಯವನ್ನು ಶ್ರೀ ನಾರಾಯಣದಾಸ ಗಾಂಧಿಯವರು ಬೇಗ ತಿಳಿದು ಕೊಂಡರು. ಅಂತೆಯೆ ಚರಖಾ ಜಯಂತಿಯ ನಿಜ ಮಹತ್ವ ಅವರ ಮನವರಿಕೆಯಾಯಿತು. ಚರಖಾ ಜಯಂತಿಯ ತಾರೀಖಿಗೂ ನನ್ನ ಜನ್ಮ ತಿಥಿಗೂ ತಳಕು ಹಾಕುವವರೆಗೆ ನನ್ನ ಜನ್ಮ ತಿಥಿಯನ್ನೆಂದೂ ಆಚರಿಸುತಿರಲಿಲ್ಲೆಂದು ನನ್ನ ನೆನವರಿಕೆ. ದಕ್ಷಿಣ ಆಫ್ರಿಕೆಯಲ್ಲಿ ನನ್ನನ್ನು ಬಲ್ಲವರು ಅನೇಕರಿದ್ದರೂ ಯಾರೂ ಈ ಜನ್ಮತಿಥಿಯನ್ನು ಲಕ್ಷಿಸಲಿಲ್ಲ. ಇಲ್ಲಿ ಮಾತ್ರ ಚರಖಾ ಜಯಂತಿಗೂ ಜನ್ಮತಿಥಿಗೂ ತಳಕು ಹಾಕಲಾಯಿತು. ಇದರಲ್ಲಿ ನಾರಾಯಣದಾಸ ಗಾಂಧಿಯವರು ಪ್ರಮುಖ ಪಾತ್ರ ವಹಿಸಿರುವರು. ಈ ವಾಕ್ಯಗಳನ್ನು ಬರೆಯುತಿರುವಾಗಲೇ ಉತ್ಸವ ದಿನಗಳು ನನ್ನ ಸ್ಮರಣೆಗೆ ಬರುವವು. ಸ್ವಾತಂತ್ರ್ಯದ ಮತ್ತು ಅಹಿಂಸೆಯ ಪ್ರತೀಕವಾದ ಚರಖದ ಗುಂಯಿಗುಂಯಿ ನಾದವು ಪ್ರತಿಯೊಂದು ಮನೆಯಲ್ಲಿ ಕೇಳಿದಾಗಲೆ ನಿಜವಾದ ಉತ್ಸವ ಮಾಡಿದಂತಾಗುವದೆಂದು ನನ್ನ ಅಭಿಪ್ರಾಯ. ಹೊಟ್ಟೆತುಂಬಿಕೊಳ್ಳುವದಕ್ಕಾಗಿ ಹಲವು ಬಡ ಹೆಣ್ಣುಮಕ್ಕಳು ಅಷ್ಟೇ ಏಕೆ ಕೋಟಿ ಹೆಣ್ಣು ಮಕ್ಕಳು ನೂಲಹತ್ತಿದರೂ ಅವರಿಗೆ ಈ ಉತ್ಸವದ ರಹಸ್ಯವೇನು ಗೊತ್ತಾಗಬೇಕು.? ಅದರಿಂದ ಯಾವ ಪುರುಷಾರ್ಥ ಸಾಧಿಸಿದಂತಾಗುವುದು? ನಿರಂಕುಶ ಆಡಳಿತದಲ್ಲಿಯೂ ಇದು ಸಾಧ್ಯವಾಗಬಹುದು. ಒಂದವಲಂಬಿಗಾರಿಕೆಯು ಪ್ರಭುತ್ವವಿಪ್ಪಲ್ಲೆಲ್ಲ ಇಂದು ಅದು ಕಾಣಿಸಿಕೊಳ್ಳುತಲಿದೆ. ಬಡವರಿಗೆ ಕೊಡುತಿರುವ ದಾನ ಧರ್ಮದಿಂದ-ಕೂಲೀ ರೂಪವಾಗಿಯೂ ಅದು ಇದ್ದಿರಬಹುದು.— ಕೋಟ್ಯಾಧೀಶರು ಸಹ್ಯರಾಗಿರುವರು.

ಪರಮಾತ್ಮನ ದೃಷ್ಟಿಯಲ್ಲಿ ಎಲ್ಲರೂ ಸಮಾನರು, ಪ್ರತಿಯೊಬ್ಬ ತನ್ನ ದರ್ಜೆಯಲ್ಲೆಯೆ ಸ್ವಂತ ಪರಿಶ್ರಮದಿಂದ ತನ್ನ ಉಪಜೀವನ ಸಾಗಿಸಬೇಕು, ಎಂಬುದು ಬಡವರಿಗೆ, ಬಲ್ಲಿದರಿಗೆ ಮನವರಿಕೆಯಾದಾಗಲೆ

ಈ ಉತ್ಸವ ನಿಜವಾಗಿ ಸಾರ್ಥಕವಾಗುವುದು. ಅದೇ ರೀತಿಯಾಗಿ ಮದ್ದು ಗುಂಡುಗಳಿಂದಲ್ಲ. ಅದರೆ ಕೈನೂಲಿನ ಕುಕ್ಕಡಿ ರೂಪದಲ್ಲಿಯ ಗುಂಡುಗಳಿಂದ ಅಂದರೆ ಹಿಂಸೆಯಿಂದಲ್ಲ; ಅದರೆ ಅಹಿಂಸೆಯಿಂದ ಸರ್ವರ ಸ್ವಾತಂತ್ರ್ಯ ರಕ್ಷಿಸಲಾಗುತಿದೆಂಬುದು ಬಡವರಿಗೆ ಮತ್ತು ಶ್ರೀಮಂತರಿಗೆ ಗೊತ್ತಾದಾಗಲೆ ಈ ಉತ್ಸವ ಸಾರ್ಥಕವಾಗುವುದು.

ಇಂದಿನ ಜಗತ್ತಿನಲ್ಲಿಯ ವಾತಾವರಣವನ್ನು ವಿಚಾರಿಸಿದರೆ ಇದು ಹಾಸ್ಯಾಸ್ಪದವೆನಿಸಬಹುದು. ಅದರೆ ಅಂತರ್ಮುಖಿಗಳಾಗಿ ನಾವು ವಿಚಾರಿಸಿದರೆ ಇದೇ ಸತ್ಯ, ಶಾಶ್ವತ ಸತ್ಯವಾಗಿದೆ. ಸದ್ಯದಲ್ಲಿ ನಾರಾಯಣದಾಸ ಗಾಂಧಿ ಮತ್ತು ಇತರ ರಾಟೀ ಭಕ್ತರು ವಿಶ್ವಾಸದಿಂದ ಅದನ್ನು ಪ್ರವರ್ಶಿಸಲು ಪ್ರಯತ್ನಿಸುತಿರುವರು. ಈ ನಿಷ್ಠಾಕಾರ್ಯಕರ್ತರು ಯಾವ ಭಾವನೆಯಿಂದ ಪ್ರೇರಿತರಾಗಿ ಈ ಜಯಂತಿಯನ್ನಾಚರಿಸುತ್ತಿರುವರೆಂಬುದನ್ನು ಪ್ರತಿಯೊಬ್ಬರು ತಿಳಿದುಕೊಂಡು ಅದನ್ನು ಆಚರಿಸಲಿ.

ಮೋ. ಕ. ಗಾಂಧಿ

ಯಾದವೀ ಯುದ್ಧ

(ಗಾಂಧೀಜಿ)

ಮುರಿದ ಗಲುಗು ಅದೆಂದು ಪಕ್ಷಪಂಗಡಗಳಿಗೆ ಹೆಚ್ಚಾಗಿ ಎನಿಸಹತ್ತಿದೆ. ಹಿಂದು ಮುಸಲ್ಮಾನರಂತೆ ಪಕ್ಷ ಪಂಗಡಗಳೂ ಬಡದಾಡಹತ್ತಿದರೆ ಅವರಲ್ಲಿ ಯಾವದೊಂದು ಪಕ್ಷವಾದರೂ ಕೆಳಗಿನ ಮಾತನ್ನು ತಿಳಿದುಕೊಳ್ಳಲಿಕ್ಕೆಬೇಕು.

ಹಿಂದೂಸ್ತಾನ ಸ್ವತಂತ್ರ ರಾಷ್ಟ್ರವಾಗಬೇಕಾದರೆ ಸಂರಕ್ಷಣೆಗಾಗಿ ಬ್ರಿಟಿಶ್ ಅಧಿಕಾರವನ್ನವಲಂಬಿಸತಕ್ಕದ್ದಲ್ಲ. ಯಾವದೊಂಪು ಪಕ್ಷವು ಇಲ್ಲವೆ ಎರಡೂ ಪಕ್ಷಗಳು ಬ್ರಿಟಿಶ್ ಸತ್ತೆಯನ್ನು ಬೇಕಂತಲೇ ವಲಂಬಿಸತಕ್ಕದ್ದಲ್ಲ.

ಉ.— ಯಾದವೀ ಯುದ್ಧದ ಮುಖ್ಯದಲ್ಲಿ ನಾವಿನ್ನೂ ಇರುವದಿಲ್ಲ. ಅದರೆ ನಾವದನ್ನು ಸಮೀಪಿಸುತಿರುವೆವು. ಸದ್ಯಕ್ಕೆ ನಾವು ಅದರೊಂದಿಗೆ ಪರೋಕ್ಷ ಗಾಟವಾಡುತಿರುವೆವು. ಯುದ್ಧವೆಂದರೆ ಸಾಮೂಹಿಕ ಇಲ್ಲವೇ ರಾಷ್ಟ್ರೀಯ ಪ್ರಮಾಣದಲ್ಲಿ ನಡೆದ ಪುಂಡಗಿರಿಯ ಗೌರವದ ಶಬ್ದ, ಬ್ರಿಟಿಶ್‌ರು ಜಾಣರಾಗಿದ್ದರೆ ಅವರು ಅದರಿಂದ ಅಲಿಪ್ತರಾಗುತಾಳಿಯುವರು. ಅದರೆ ಲಕ್ಷಣಗಳು ಮಾತ್ರ ಹಾಗೆ ತೋರುವದಿಲ್ಲ. ೧೯೩೫ನೇ ಕಾಯಿದೆಯಿಂದ ಇಂಗ್ಲೀಶ್‌ರಿಗೆ ಪ್ರಾಂತಿಕ ಶಾಸನ ಸಭೆಗಳಲ್ಲಿ ಸ್ಥಾನ ಸಿಕ್ಕದ್ದು, ಅಧಿಕಾರದಿಂದಲ್ಲ. ಅದರೆ ಬ್ರಿಟಿಶ್‌ರ ಹಿತಸಂಬಂಧಗಳನ್ನು ಅವರು ರಕ್ಷಿಸಬಹುದೆಂದು ಹಿಂದು-ಮುಸಲ್ಮಾನರನ್ನು ಪ್ರತ್ಯೇಕವಾಗಿಡುವದಕ್ಕೆಂದು ಎಂಬುದನ್ನು ತಿಳಿದುಕೊಳ್ಳಬಯಸುವದಿಲ್ಲ. ಇದೊಂದು ಸಣ್ಣ ಮಾತು. ಅದರೆ ಗಾಳಿ ಎತ್ತ ಬೀಸುತಿದೆಂಬುದನ್ನು ಇದು ತೋರಿಸುತ್ತಿದೆ. ಈ ಶಕುನಗಳಿಂದ ಸ್ವರಾಜ್ಯ ಪ್ರೇಮಿಗಳು ಮತ್ತು ನಿರ್ಮಾಪಕರು ಎದೆಗುಂದತಕ್ಕದ್ದಲ್ಲ. ಸತ್ಯಾಗ್ರಹವೆ ಸರ್ವಶ್ರೇಷ್ಠವಾದ ಸಾಧನ. ಸ್ವರಾಜ್ಯಕ್ಕೆ ಇದಕ್ಕೂ ಶ್ರೇಷ್ಠವಾದ ಬೇರೆ ಸಾಧನವಿಲ್ಲ. ಸ್ವಾತಂತ್ರ್ಯ ಸುಧೆಯ ಪಾನವನ್ನೂಡಬಯಸುವವರು ಸೈನ್ಯದ ಇಲ್ಲವೆ ಪೋಲೀಸರ ಸಹಾಯವನ್ನಪೇಕ್ಷಿಸದೆ ತಮ್ಮ ಶಕ್ತಿಯನ್ನು ಅವಲಂಬಿಸತಕ್ಕದ್ದು. ಅದಕ್ಕೂ ಮಹತ್ವದ್ದೆಂದರೆ ಮಾನಸಿಕ ಬಲವನ್ನು ಅವಲಂಬಿಸುವದು ಅವಶ್ಯವಾಗಿದೆ. ಈ ಮಾನಸಿಕಬಲ, ಆತ್ಮಬಲ, ಶಸ್ತ್ರಬಲಕ್ಕಿಂತ ಭಿನ್ನವಾಗಿನೆ.

ಮೋ. ಕ. ಗಾಂಧಿ.

ಬಳ್ಳಾರಿಗೆ ರೆವಿನ್ಯೂ ಮಂತ್ರಿಗಳು ಬರುವರು.

1-10-46 ರಿಂದ ಜಾರಿಯಲ್ಲಿ ಬರುವ ಮದ್ಯನಿಷೇಧ ಶಾಸನದ ಪ್ರಾರಂಭೋತ್ಸವವನ್ನು ನೆರವೇರಿಸಲು, ಮದ್ರಾಸ್ ರೆವಿನ್ಯೂ ಮಂತ್ರಿಗಳಾದ ಶ್ರೀ ಕಾರಂತರು ಬರುವರೆಂದು ತಿಳಿದು ಬಂದಿದೆ.

ಬಳ್ಳಾರಿಯಲ್ಲಿ
ನಾಡಹಬ್ಬದ ಕಾರ್ಯಕ್ರಮ

ಪ್ರತಿವರ್ಷದಂತೆ ಈಸಲವೂ ಬಳ್ಳಾರಿ ನಾಡಹಬ್ಬಸಮಿತಿಯವರು ಮ್ಯುನಿಸಿಪಲ್ ಹೈಸ್ಕೂಲಿನಲ್ಲಿ ಆಶ್ವೀಜ ಶು। ೧ ರಿಂದ ಕಾರ್ಯಕ್ರಮವನ್ನಿಟ್ಟಿರುವರು ಶ್ರೀ ಸಿ. ಶಾಮರಾಯರ ಚಿತ್ರಕಲಾಪ್ರದರ್ಶನ, ಕನ್ನಡ ಕಾವ್ಯಗಳ ತಾಡ ಓಲೆಗ್ರಂಥ ಸಂಗ್ರಹವು, ಕಾರ್ಯಕ್ರಮದ ಅಂಗವಾಗಿ ಏರ್ಪಡಾಗಿದೆ. ೨೬ ನೆಯ ತಾ. ಸಿಂಗಿರಾಜಪುರಾಣ ೨೭ ಅಕ್ಕಮಹಾದೇವಿ ಈ ಎರಡು ವಿಷಯಗಳಮೇಲೆ ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಯವರ ಭಾಷಣ, ೨೭ ಭಾರತ ವಾಚನ ಶ್ರೀ ಶಿವರಾಮಶಾಸ್ತ್ರಿಯವರು ೨೮ ಕರ್ನಾಟಕ ವಿಶ್ವವಿದ್ಯಾಲಯ ಶ್ರೀ ಮಾಳವಾತ, ಆದಿಕವಿ ಪಂಪ, ಶ್ರೀ ತಿ. ನ. ಶ್ರೀಕಂಠಯ್ಯ ೨೯ ಭಾಸ್ಕರಾಚಾರ್ಯ ಲೀಲಾವತಿ ಶ್ರೀ ಬಿ. ಶೀತಾರಾಮಶಾಸ್ತ್ರಿ ೩೦ ಕಾವ್ಯೋದಯ "ಕ್ಷೀರಸಾಗರ" ೧ನೆಯ ಅಕ್ಟೋಬರ್ ಶ್ರೀ ಕೆ. ಯಸ್. ಕಾರಂತರ ಭಾಷಣ ೨೩ ನೆಯ ತಾ. ಶ್ರೀ ಮಲಬಾದಿ ವೀರಭದ್ರಪ್ಪನವರು ಕಿತ್ತೂರ ಚನ್ನಮ್ಮನ ಇತಿಹಾಸ ಕೆ. ವೀರಭದ್ರಪ್ಪನವರು ವಿಜ್ಞಾನ ಮತ್ತು ಧರ್ಮ, ಸಾಮ್ಯವಾದದ ಮೇಲೆ ಭಾಷಣ ಕೊಡುವರು. ವಾಚಕಾಭಿನಯ ಮತ್ತು ಯಕ್ಷಗಾನ ಪ್ರಸಂಗ ೩೦ ಮತ್ತು ೪ ನೆಯ ತಾ "ಮೇಧಾವಿ" ಯವರಿಂದ ನಡೆವುದು.

ಏಡೆಡ್ ಶಾಲೆಗಳ ಮ್ಯಾನೇಜರರ ಶಿಷ್ಟಮಂಡಳ.
ಬಳ್ಳಾರಿ ಜಿಲ್ಲೆಗೆ ಶ್ರೀ ವಿ. ಆನಂದತೀರ್ಥಾಚಾರ್ಯರು.

ಪ್ರಾಂತೀಯ ಏಡೆಡ್ ಶಾಲೆಗಳ ಮ್ಯಾನೇಜರವರ ಶಿಷ್ಟಮಂಡಲದಲ್ಲಿ ಬಳ್ಳಾರಿ ಜಿಲ್ಲೆಯ ಪರವಾಗಿ ಗಾಂಧೀನಗರದ ಏಡೆಡ್ ಹೈಯರ್ ಎಲಿಮೆಂಟರಿ ಶಾಲೆಯ ಮ್ಯಾನೇಜರ್ ಶ್ರೀ ವಿ. ಆನಂದ ತೀರ್ಥಾಚಾರ್ಯರು ಆರಿಸಲ್ಪಟ್ಟಿರುತ್ತಾರೆ. ಏಡೆಡ್ ಶಾಲೆಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿ, ಉಪಾಧ್ಯಾಯರನ್ನು ಇತರ ಶಾಲೆಗಳವರ ಮಟ್ಟಕ್ಕೆ ತರಲು ಸರಕಾರದವರು ಉದಾರರೀತಿಯಲ್ಲಿ ಸಹಾಯ ಮಾಡಬೇಕೆಂದು ಶಿಷ್ಟಮಂಡಳವು ವಿದ್ಯಾಧಿಕಾರಿಗಳನ್ನು (ಡೈರೆಕ್ಟರ್) ಮತ್ತು ಮಂತ್ರಿಗಳನ್ನು ಮದ್ರಾಸಿನಲ್ಲಿ ಕಾಣಲಿದೆ.

ರಾಯದುರ್ಗ.

ಕನ್ನಡ ಶೀಘ್ರಲಿಪಿಕಾರರನ್ನು ಏರ್ಪಡಿಸಲು ಖಾದಿಯೋಜನೆಗಾಗಿ ಕರ್ನಾಟಕ ಚರಖಾ ಸಂಘದ ಕಾರ್ಯದರ್ಶಿಗಳೊಡನೆ ವಿಮರ್ಶಿಸಲು, ರೇಡಿಯೋ ಕೇಂದ್ರದಲ್ಲಿ ಕನ್ನಡಕ್ಕೆ ಸ್ಥಾನ ಕೊಡಲು ಜಿಲ್ಲೆಯ ಸರಕಾರೀ ವ್ಯವಹಾರಗಳನ್ನು ಕನ್ನಡದಲ್ಲಿ ನಡೆಸಲು ಮದ್ರಾಸ್ ಸರ್ಕಾರವನ್ನು ಕೇಳುವ ತೀರ್ಮಾನಗಳು ತಾಲೂಕು ಕರ್ನಾಟಕ ಏಕೀಕರಣ ಸಂಘದಲ್ಲಾದವು. ರಾಯದುರ್ಗ ತಾಲೂಕು ಹಳ್ಳಿಗಳಲ್ಲಿ ಮತ್ತು ಹೈಸ್ಕೂಲಿನಲ್ಲಿ ಕನ್ನಡಕ್ಕೆ ಪ್ರಾಶಸ್ತ್ಯ ಕೊಡಲು ಜಿಲ್ಲಾ ಬೋರ್ಡ್ ಅಧ್ಯಕ್ಷರನ್ನು ಕೇಳುವ ಗೊತ್ತುವಳಿಗಳಾದವು. ಪಂಡಿತ ನೆಹರೂರವರು ಕೇಂದ್ರದಲ್ಲಿ ತಾತ್ಕಾಲಿಕ ರಾಷ್ಟ್ರೀಯ ಸರಕಾರ ರಚಿಸಿದುದಕ್ಕೆ, ಬಳ್ಳಾರಿ ಜಿಲ್ಲೆಯಲ್ಲಿ ಮದ್ಯನಿಷೇಧ ಶಾಸನವನ್ನು ಜಾರಿಯಲ್ಲಿ ತಂದುದಕ್ಕೆ ಅಭಿನಂದನೆ ವ್ಯಕ್ತವಾಯಿತು. ರಾಜಾಜೀಯವರು ಅಪಾಯದಿಂದ ಪಾರಾದುದಕ್ಕೆ ಸಂತೋಷವು ಸೂಚಿಸಲ್ಪಟ್ಟಿತು. ವಿಜಯೇಂದ್ರ--ಕಾರ್ಯದರ್ಶಿ]



Building Materials at Reasonable Rates.

ಕಟ್ಟಿಡದ ಉಪಕರಣಗಳು ನಮ್ಮಲ್ಲಿ ಸರಿಯಾದ ಬೆಲೆಗೆ ದೊರೆಯುತ್ತವೆ.

N M. Gurappa & Sons, BELLARY.

ಎಂ. ಯಂ. ಗುರಪ್ಪ ಅಂಡ್ ಸನ್, ಬಳ್ಳಾರಿ.

ಗಾಂಧೀಜಿ ಅನಂತರೂಪಿ

(ಶಿದ್ದವನಹಳ್ಳಿ ಕೃಷ್ಣಶರ್ಮ)

ಗಾಂಧೀಜೀ ಎಂದರೆ ಒಬ್ಬ ವ್ಯಕ್ತಿಯಲ್ಲ. ಅದು ಒಂದು ಪಂಥ ಶಿಲ್ಪದಲ್ಲಿ ಜಕಣಾಚಾರಿ ಇದ್ದ ಹಾಗೆ. ಜಕಣಾಚಾರಿ ಎಂಬ ಒಬ್ಬ ವ್ಯಕ್ತಿ ಇದ್ದಿರಬಹುದು. ನಮಗೆ ಆ ನಾಮರೂಪಗಳಲ್ಲಿ ಈಗ ರುಚಿಯಿಲ್ಲ. ಜಕಣಾಚಾರಿ ಶಿಲ್ಪದ ಒಂದು ಹಾದಿ.

ಗಾಂಧೀಜೀ ವ್ಯಕ್ತಿಯನ್ನು ವರ್ಣಿಸುವುದು ಕಷ್ಟವಲ್ಲ. ಅದರ ಅಗತ್ಯವೂ ಕಡಿಮೆ. ನಮ್ಮ ದೇಶದಲ್ಲಿ ಕೋಟ್ಯಾನುಕೋಟಿ ಜನ ಅವರನ್ನು ಪ್ರತ್ಯಕ್ಷವಾಗಿ ನೋಡಿದಾರೆ. ಅವರ ಹಾಗೆ ಹಿಂದೂಸ್ತಾನದ ಹಳ್ಳಿಗಳನ್ನು ತಿರುಗಿದವರು ಯಾರೂ ಇಲ್ಲ. ಕೋಟಿ ಗುಡಿಸಿಲುಗಳಲ್ಲಿ ಅವರ ಚಿತ್ರ ಇವೆ. ಕೋಟಿ ಬಾಯಲ್ಲಿ ಮಹಾತ್ಮ ಗಾಂಧೀಕಿ ಜೈ ಎಂಬ ಹರಿಕೆ ಸಾದಾ ಕೇಳಿಸುತ್ತದೆ. ದೊಡ್ಡ ದೊಡ್ಡ ಸಭೆಗಳಲ್ಲಿ ಲಕ್ಷೋಪಲಕ್ಷ ಜನ ಗಾಂಧೀಜಿಯ ಬರವಿಗಾಗಿ ಕಣ್ಣಲ್ಲೇ ಜೀವ ತುಂಬಿಕೊಂಡು ಕೂತಿರುತ್ತಾರೆ. ಆ ಉತ್ಸಾಹದಲ್ಲಿ ಅವರ ಉಸಿರೇ ನಿಂತ ಹಾಗೆ ಇರುತ್ತದೆ. ಮಾತ್ರ ಆ ಭಾವಕ್ಕೆ ಭಂಗ. ನಿಶ್ಶಬ್ದವಾಗಿ ಗಳಿಗೆಯೊಂದು ಯುಗವಂತೆ ಮನಸ್ಸೆಲ್ಲ ಹಿರಿದುಮಾಡಿ ಕುಳಿತಿರುತ್ತಾರೆ.

ಹಿಂದೂಸ್ತಾನದ ಜನಕ್ಕೆ ಗಾಂಧೀಜಿ ಒಂದು ಮೋಹನ ಮಂತ್ರ. ಅವರು ನಡೆದ ದಾರಿಯ ಧೂಳನ್ನು ಜನ ಹಣೆಗೆ ಹಚ್ಚುತ್ತಾರೆ. ಸಾವಿರಾರು ಕಡೆಯಿಂದ ಅವರ ದರ್ಶನಕ್ಕಾಗಿ ಬರುತ್ತಾರೆ. ಆ ದರ್ಶನದಿಂದ ತಮ್ಮ ಸಕಲ ಪಾಪವೂ ಹರಿಯುತೆಂದು ತಿಳಿಯುತ್ತಾರೆ. ಬುದ್ಧದೇವರ ಹಾಗೆ ಗಾಂಧೀಜಿಗೆ ಪೂಜೆ ಸಲ್ಲುತ್ತದೆ. ಶ್ರೀರಾಮಚಂದ್ರನ ಹಾಗೆ ಗಾಂಧೀಜೀ ಒಂದು ಅವತಾರ ಎಂದು ತಿಳಿಯುತ್ತಾರೆ. ಈ ಅದರ ಈ ಭಕ್ತಿ ಹಿಂದುಸ್ತಾನದ ನಾಲ್ಕು ದಿಕ್ಕುಗಳನ್ನು ದಾಡಿ ಜಗತ್ತಿನಲ್ಲಿ ಮೊಳೆತಿದೆ. ಮಿದುವಾದ ಕಪ್ಪುಗಣ್ಣಿನ ಈ ಬಡಕಲು ಬೈರಾಗಿಯ ಹೆಸರು ಜಗತ್ತಿನ ಮೂಲೆ ಮೂಲೆಗೂ ತಿಳಿದಿದೆ.

ಮೈಸೂರಿನ ಸದ್ಯಾಸಿಯೊಬ್ಬರು ಫ್ರಾನ್ಸ್ ದೇಶಕ್ಕೆ ಹೋಗಿದ್ದರು. ಅಲ್ಲಿ ಒಂದು ಕಡೆ ರೇಲವೇ ನಿಲುತಾಣದಲ್ಲಿ ಇತರ ಸಾಮಾನು ಇಳಿಸಿದ ಮೇಲೆ ಇವರು ಕೂಲಿ ಕೊಟ್ಟರೆ ಜೇಡ ಎಂದು ನಿರಾಕರಿಸಿದನಂತೆ; ಇವರಿಗೆ ಅವನ ನಡತೆ ಅರ್ಥವಾಗಲಿಲ್ಲ, ಏಕೆಯೆಂದು ಕೇಳಿದರು. 'ಹಾ: ನೀವು ಗಾಂಧಿ ದೇಶದವರು!' ಎಂದನಂತೆ ಗಾಂಧೀಜೀ ದೇವರು, ಅವತಾರ ಅವರ ಮನೆಯರಿಗೆ ಅಷ್ಟಾದರೂ ಗೌರವ ಬೇಡವೇ? ಯಾರೋ ಒಬ್ಬ ಮನುಷ್ಯ ಲಂಕೆಗೆ ದಾರಿತಪ್ಪಿ ಬಂದು ಬಿದ್ದಿದ್ದಾಗ ಅವನನ್ನು ಪಲ್ಲಕ್ಕಿಯಲ್ಲಿ ವಿಭೀಷಣ ಮೆರೆಸಿ ಅಳಿಸಿದನಂತೆ, ಹಾಗೆಯೇ.

ಒಬ್ಬ ಹಿಂದೀ ಕ್ರೈಸ್ತರ ಬಿಷಪ್ ಇಟಲಿಗೆ ಹೋದಾಗ ಅಲ್ಲಿ ಪೋಪರ ಅರಮನೆಯ ಬಾಗಿಲು ಕಾಯುವವನು ಇವರ ಭೇಟಿಚೀಟಿ ನೋಡಿ 'ಇಂಡಿಯಾನೇ?' ಎಂದು ಕೇಳಿದ. ಇವರು ಹೌದು ಎಂದರು. 'ಗಾಂಧೀ..?' ಎಂದು ಕೇಳಿದ ಅವನು ಗಾಂಧೀ ದೇಶವಲ್ಲವೆ ಎಂದು ಅವನ ಭಾವ. ಇಂಡಿಯಾ ಕಾರ್ಯದರ್ಶಿಯ ಸಲಹೆಗಾರರಾದ ಸರ್ ಅಬ್ದುಲ್ ಕಾದರ್ ವಿಯನ್ನಾ ಪಟ್ಟಣದಲ್ಲಿ ಒಂದು

ಗಾಂಧೀಜಿ ಅನಂತರೂಪಿ

ಹೋಟಲಿಗೆ ಹೋದಾಗ ಅಲ್ಲಿ ಪರಿಚಾರಿಕ ಒಬ್ಬ 'ನೀವು ಗಾಂಧೀ ದೇಶದವರಲ್ಲವೇ ?' ಎಂದು ಕೇಳಿದ 'ಹೌದು. ನನಗೆ ಗಾಂಧೀ ಚೆನ್ನಾಗಿ ಗೊತ್ತು. ನಾನು ಅವರ ಸಂಗಡ ಮಾತಾಡಿದೇನೆ'— ಎಂದರು ಇವರು ಅವನ ಸಂತೋಷಕ್ಕೆ ಪಾರವೇ ಇಲ್ಲವಾಯಿತು. 'ಹೋ! ಗಾಂಧಿಯನ್ನು ನೋಡಿ ಮಾತಾಡಿಸಿದವರನ್ನು ಒಬ್ಬರನ್ನು ನಾನು ನೋಡಿದ್ದೆ ಎಂತ ಎಲ್ಲರಿಗೂ ಹೇಳಬಹುದು'— ಎಂದು ಹೇಳಿದ.

ವ್ಯಕ್ತಿಮಾತ್ರಕ್ಕೆ ಈ ಗೌರವ ಸಾಧ್ಯವಿಲ್ಲ. ಅಂತಲೇ ಗಾಂಧೀಜೀ ಒಂದು ಪಂಥ ಎಂದದ್ದು. ಆದರೂ ಗಾಂಧೀಜಿಯನ್ನು ವ್ಯಕ್ತಿ ಎಂಬ ಬೆಳಕಿನಲ್ಲಿ ಅರಿಸದೆ ಇದ್ದರೆ ಆ ಪಂಥವೂ ಕೈಜಾರಿ ಹೋದೀತು. ಆ ಪಂಥದ ಒಳಬೆಳಕು ಪರಿಶುದ್ಧ; ಅದರಲ್ಲಿ ಮಾನವತ್ವ ತುಂಬಿದೆ ಎಂಬುದು ತಿಳಿಯದಾದೀತು. ಆ ಎರಡು ಮಾತು ಒಂದರ ಹೊರಮೈ ಒಳಮೈ ಬೇರೆ ಬೇರೆ ಅಲ್ಲ.

ಗಾಂಧೀಜಿಯನ್ನು ಹೀಗೆ, ಅವರು ಇಂಥವರು ಎಂದು ಹೇಳಲು ಯಾರಿಗಾದರೂ ಎದೆ ಬಹಳಬೇಕು. ಅವರನ್ನು ನೆನದರೆ ಬೇರೆ ಬೇರೆ ಭಿದ್ರ ಕಣ್ಣ ಮುಂದೆ ನಿಂತಾವು. ನಾನಾ ಭಾವ ಮನಸ್ಸಿನಲ್ಲಿ ಮೂಡಿಯಾವು ಸರೋಜಿನಿದೇವಿ ಹೇಳಿದ ಹಾಗೆ ಗಾಂಧೀಜೀ ಬಹು ರೂಪಿ. ಕೆಲವರಿಗೆ ನಗೆಗಾರ ಗಾಂಧಿ ನೆನಪಾದರೆ ಕೆಲವರಿಗೆ ಹಟಗಾರ ಗಾಂಧೀಯ ನೆನಪಾಗುತ್ತದೆ. ಒಬ್ಬರಿಗೆ ಗಾಂಧೀ ಶುದ್ಧ ಬೈರಾಗಿ. ಇನ್ನೊಬ್ಬರಿಗೆ ಉತ್ತಮ ಗೃಹಸ್ಥ. ಚಾಣಾಕ್ಷ ರಾಜಕಾರಿಣಿ ಎಂದು ಕೆಲವರಿಗೆ, ಜಗದ್ವಂದ್ಯ ಕರ್ಮಯೋಗಿ ಎಂದು ಕೆಲವರಿಗೆ, ಅನಿಸಿದರೆ ಒರೀ ಹುಚ್ಚ ಎಂದು ಕೆಲವರು ತಿಳಿದಿದಾರೆ. ಒಬ್ಬೊಬ್ಬರದು ಒಂದು ನೋಟ. ಎಲ್ಲರೂ ಆನೆಯನ್ನು ಮುಟ್ಟಿದವರು.

ಗಾಂಧೀಜಿ ಅನಂತರೂಪಿ. ಅವರನ್ನು ಬೇರೆ ಬೇರೆಯಾಗಿ ಗುರುತಿಸಿ ಕೊಂಡವರಿದಾರೆ. ರಾಜಕಾರಣದಲ್ಲಿ ಸಲಹೆ ಕೇಳಲೆಂದೇ ಹೋಗಿದ್ದರೂ ಮನಸಿನ ಮೇಲೆ ಮುದ್ರಿತವಾದುದು ಅವರ ಧಾರ್ಮಿಕ ಜೀವನ ಅವರ ಸಂಸ್ಕೃತಿ. ಪರ್ಣಕುಟಿಯ ಅಂಗಳದಲ್ಲಿ ನಡೆದ ಪ್ರಾರ್ಥನೆಯೇ ಆ ಗುಡಿಯ ಮಹಾದ್ವಾರ. ಅಲ್ಲಿಂದ ಒಳಹೊಕ್ಕು ವಿಶಾಲವಾದ ಪ್ರಾಕಾರದಲ್ಲಿ ಅಲೆದಾಡಿದೆನೆ. ಅಲ್ಲಿ ಕಂಡುಬಂದ ಬೇರೆ ಬೇರೆ ಪ್ರತಿಮೆಗಳನ್ನು ನೋಡಿದೇನೆ.

ಪ್ರಾರ್ಥನೆಯ ಬಲದ ಮೇಲೆ ನಿಂತ ಆ ಬಾಳಿನಲ್ಲಿ ದರಿದ್ರನಾರಾಯಣನೇ ಆರಾಧ್ಯದೇವತೆ. ಖಾದಿಯೇ ಆ ದೇವತೆಯ ಪೂಜಾ ವಿಧಾನ. ಆ ಪೂಜೆಯಲ್ಲಿ ಕಣ್ಣಿಗೆ ಸುಲಭವಾಗಿ ಕಾಣದ ಒಂದು ಸೊಬಗು ಇದೆ ಇದೇ ಸೊಬಗು, ಅದೇ ಸೋಬಗು ಎಂದು ಹೇಳಲಿಲ್ಲವರು ಯಾರು ? ಹೀಗೆ ಆಲೋಚನೆ ಮಾಡುತ್ತ ಸೊಗಸು ಎಂಬುದರ ಮೂಲ ಏನು ? ಗಾಂಧೀಜಿ ಅದಕ್ಕೆ ಏನು ಹೇಳುತಾರೆ, ಎಂದು ಕೊಂಡಾಗ ಗಾಂಧೀಜಿಯ ಬಾಳಿನಲ್ಲಿ ನಿಜವಾದ ಕಲೆ ಇದೆ ಅನಿಸುತ್ತದೆ. ಆ ಅಂತಃಕರಣದ ರಸಿಕತೆ ಸತ್ಯದಲ್ಲಿ ಹುಟ್ಟಿ ಸತ್ಯದಿಂದ ಬೆಳೆದು ಬಂದದು ಎಂಬುದು ಹೊಳೆಯುತ್ತದೆ.

ಆ ಕಲಾಪುರುಷನ ಬದುಕು ಮಾನವ ಸಂಬಂಧಗಳಲ್ಲಿ, ಹೆಂಗಸರೊಡನೆ ಮಕ್ಕಳೊಡನೆ, ತನ್ನ ಕುಟುಂಬದೊಡನೆ, ಹೇಗೆ ರೂಪುಗೊಂಡಿದೆ; ಹೇಗೆ ಆ ರೀತಿಯಲ್ಲಿಒಂದು ಉಚ್ಚ ಸಂಸ್ಕೃತಿ, ಆಳವಾದ ಸಿದ್ಧಾಂತ ಇದೆ ಎಂಬುದು ಅರ್ಥವಾಗುತ್ತದೆ.

ಆ ಕಲೆಗೆ, ಆ ಸಾಹಿತ್ಯಕ್ಕೆ, ಆ ವಿನೋದದ ರುಚಿಗೆ, ಆ ಸಲಿಗೆಯ ಸ್ವಭಾವಕ್ಕೆ, ವಿಶ್ವಕುಟುಂಬದ ಭಾವನೆಗೆ ಎಲ್ಲಕ್ಕೂ ಆ ಸತ್ಯದೃಷ್ಟಿಯೇ ಆಧಾರ. ಎಲ್ಲಕ್ಕೂ ಸತ್ಯಶೋಧನೆಯ ಹಪಹ ಇದೆ. ಕಸ್ತೂರಬಾ ನೊಡನೆ ಅವರು ನಡೆಸಿದ ಸಂಸಾರದಲ್ಲಿಯೂ ಅದೇ ಹೆಜ್ಜೆ. ದರಿದ್ರನಾರಾಯಣ ಅವರ ವ್ಯವಹಾರ ದೇವತೆಯಾದರೆ, ಸತ್ಯನಾರಾಯಣ ಅವರ ಅಂತರಂಗದ ಇಷ್ಟದೇವತೆ.

ಗಾಂಧೀಜಿ ಅನಂತರೂಪಿ

ಆ ದೇವತೆಯ ಕಲ್ಪನೆ ಅವರಿಗೆ ಸ್ಪಷ್ಟವಾಗಿದೆ. ಅದರ ಸ್ಥಿರವಾದ ಅರಿವೇ ಅವರ ಕೈದೀಪ. ತಮ್ಮ ಸಾಧನೆಯ ಹಾದಿ ಎಲ್ಲಾ ಅದೇ. ಆ ಸತ್ಯದ ಬೆಳಕು ಅವರಿಗೆ ಗೀತೆಯಲ್ಲಿ ನಂದಾ ದೀಪವಾಗಿ ಸದಾ ಕಾಣಬರುತ್ತಿದೆ. ಗೀತೆಯನ್ನು ಅವರು ಅಷ್ಟು ಬಲವಾಗಿ ನಂಬಿದ್ದಾರೆ.

ಆ ಮಹಾ ಜೀವ ನಡೆದ ಹಾದಿಯೂ ಅಷ್ಟೇ; ಒಂದು ಚಳುವಳಿಯಲ್ಲ, ಕಡೆಗೆ ಒಂದು ದೇಶವೂ ಅಲ್ಲ ಸಾಧನೆಯ ಮಾರ್ಗವೂ ಎಂಥದು? ಒಂದು ಖಾದಿಯೇ; ಒಂದು ಹರಿಜನ ಸೇವೆಯೆ; ಅಸಹಕಾರವೆ, ಶಾಸನೋಲ್ಲಂಘನವೆ; ಸಹಕಾರವೆ, ಶಾಸನ ನಿರ್ಮಾಣವೆ; ಬಹಿಶ್ಕಾರವೆ, ಉಪವಾಸವೆ? ಬ್ರಹ್ಮಚರ್ಯವೆ, ಭಕ್ತಿಯೆ? ಒಂದು ವಿಧವಲ್ಲ, ಒಂದು ರೂಪವಲ್ಲ. ಒಂದು ದಿನ ದಂಡದಾರಿಯಾಗಿ ಸೀತಾ ವಿಮೋಚನೆಗಾಗಿ ಹೊರಟ ರಾಮನಂತೆ ಸತ್ಯಾಗ್ರಹಿಗಳ ಗುಂಪಿನೊಡನೆ ದಂಡೀಯಾತ್ರೆಗೆ ಹೊರಟರು. ಇನ್ನೊಂದು ಹೊತ್ತಿನಲ್ಲಿ ಪರದೇಶೀ ಬಟ್ಟೆಗಳನ್ನು ರಾಶಿ ಹಾಕಿಸಿ ಸುಡುತ್ತ ಊರಿಂದೂರಿಗೆ ಲಂಕಾದಹನ ಕಥೆ ನೆನಪಿಗೆ ತರುತ್ತ ತಿರುಗಾಡಿದರು. ಬಡವರನ್ನು ತಲೆಯ ಮೇಲೆ ಹೊತ್ತು ದರಿದ್ರ ನಾರಾಯಣನನ್ನು ಪೂಜಿಸಿದರು ಶ್ರೀಮಂತರ ಬೆನ್ನು ತಟ್ಟಿ ಸತ್ಯದ ಹಾದಿಗೆ ಎಳದು ಲಕ್ಷ್ಮೀನಾರಾಯಣನನ್ನು ಗುರುತಿಸಿದರು.

ಇಂಥ ಜೀವಿಯ ಸನ್ನಿಧಿಯಲ್ಲಿ ಹಿಂದುಸ್ತಾನಕ್ಕೆ ಹಿಂದುಸ್ತಾನವೇ ತಲೆಬಾಗಿ ನಿಂತಿರುವದರಲ್ಲಿ ಏನು ಆಶ್ಚರ್ಯ? ಹಿಂದುಸ್ತಾನಕೂ ಗಾಂಧೀಜಿಗೂ ಒಂದು ವಿಲಕ್ಷಣ ಸಂಬಂಧ ಬೆಳೆದಿದೆ. ಮಾತೇ ಇಲ್ಲದೆಯೆ ಭಾವ ಅರಿತು ಕೊಳ್ಳುವ ಬಲ ಎರಡೂ ಕಡೆಯಲ್ಲೂ ಇದೆ. ಅದರ ಪರಿಣಾಮ ಗಾಂಧೀಜೀ ಅಂದರೆ ಹಿಂದುಸ್ತಾನ ಅಂದರೆ ಗಾಂಧೀಜೀ ಎಂಬ ಹಾಗೆ ಆಗಿದೆ.

ಗಾಂಧೀಜಿಯ ಈ ಅವರ್ಣನೀಯ ಪ್ರಭಾವವನ್ನು ನೆನೆದರೆ ಒಂದು ಚಿತ್ರ ಕಣ್ಣಿಗೆ ಕಟ್ಟಿ ನಿಲ್ಲುತ್ತದೆ. ಅವರ ಜೀವನದ ಈ ವಿಲಕ್ಷಣ ಶಕ್ತಿಯ ನೆಲೆ ಎಲ್ಲಿದೆ ಎಂಬ ವಿಚಾರ ಬಂದಾಗ ಒಂದು ನೋಟ ನೆನಪಿಗೆ ಬರುತ್ತದೆ. ಗಾಂಧೀಜಿಯ ಹೆಸರನ್ನು ಕೇಳಿದರೆ ಸಾಕು. ನೂರಾರು ಮೈಲು ದಾಟಿ ಅ ಧ್ವನಿ ಕೇಳಿಬರುತ್ತಿದೆ.

ಒಂದೇ ಮನಸಿನಿಂದ ಅಖಂಡ ಶ್ರದ್ಧೆಯಿಂದ ಗುಂಪಿಗೆ ಗುಂಪೇ ರಾಮದುನ್ ಹಾಡುತ್ತಿದಾರೆ. ರಾಕುನಾಮವು ಕಡಲಿನ ತೆರೆಗಳಂತೆ ಉಕ್ಕಿ ಬರುತ್ತಿದೆ. ಪರಿಮಳ ಗಾಳಿಯಲ್ಲಿ ಹರಡಿದಂತೆ ಸುತ್ತಲಿನ ಬಯಲಲ್ಲಿ ಸವಿಯಾಗಿ ಕರಗಿ ಹೋಗುತ್ತಿದೆ. ಯಜ್ಞ ನಾರಾಯಣನ ಕುಡಿಗಳು ಮೇಲೇರಿ ಹೋಗುವಂತೆ ಮುಗಿಲಿನಕಡೆ ಸಾಗಿ ಹೋಗುತ್ತಿದೆ. ನಸುಕಿನ ಕತ್ತಲು. ಮೇಲೆ ಕಾಣುವ ಚಿಕ್ಕೆಗಳ ಬೆಳಕಿನಲ್ಲಿ ಮೋರೆ ಅಸ್ಪಷ್ಟವಾಗಿದೆ. ಜಗತ್ತಿಗೆ ಜಗತ್ತೇ ನಿಶ್ಶಬ್ದವಾಗಿದೆ. ಸಾವಿನಲ್ಲೂ ಜೀವ ಕೊನರಿನಿಲ್ಲುವ ಹಾಗೆ ಸರ್ವವ್ಯಾಪಿಯಾದ ಮೌನದಲ್ಲಿ ಈ ರಾಮನಾಮ.

ಪಕ್ಕದಲ್ಲೇ ಪರ್ಣಕುಟಿ, ಸುತ್ತಲೂ ಶಿಷ್ಯವರ್ಗ ಅಥವಾ ಜೊತೆಗಾರರು. ನಡುವೆ ಪದ್ಮಾಸನದಲ್ಲಿ ಬಾಪೂಜಿ. ಆಶ್ರಮದ ಗುಡಿಸಲಾಗಿ ದೂರದ ಗಿಡ ಮರಗಳಾಗಲಿ ಕಾಣವು. ಗಾಂಧೀಜಿಯ ಮೋರೆ ಪೂರಾ ಅರಳಿದ ಕಮಲದ ಹೂವಿನಂತೆ ವರ್ಣಿಸಲು ಬಾರದ ಒಂದು ಆನಂದದಿಂದ ತುಂಬಿದೆ. ಪ್ರಕಾಶಮಾನವಾದ ವಿದ್ಯುದ್ದೀಪದ ಬೆಳಕಿನ ಕಾಂತಿ ಸುತ್ತಲೂ ಹರಡಿದಂತೆ ಆ ಆನಂದದ ತೆರೆಗಳ ಸುತ್ತಲೂ ಹೂಳಿ ಹೊಳೆವ ರೂಪಿನಿಂದ ಹರಿದಿವೆ. ಅಲ್ಲಿ ನೆನಪು, ತಿಳಿವು ಇದ್ದೂ ಇಲ್ಲದಂತೆ ಕರಗಿ ಹೋಗಿದೆ. ಆಟವಾಡಿ ಸೋತು ನಿದ್ದೆಗೆ ಬಂದಮಗುವಿನ ಮೈಮೇಲೆ ತಾಯಿ ಹೊದಿಸಿದ ತನ್ನ ಸೆರಗಿನಂತೆ ಅಖಂಡ ಶಾಂತಿಯ ಒಂದು ಭಾವ ತುಂಬಿ ಕವಿದಿದೆ.

ನೂರಾರು ಮೈಲು ದಾಟಿ ಕೇಳಿಸುತ್ತಿದೆ. ಅದೇ ಧ್ವನಿ. ರಘುಪತಿ ರಾಘವ ರಾಜಾರಾಂ
ಪತಿತ ಪಾವನ ಸೀತಾರಾಂ.

ಬಳ್ಳಾರಿ ನಗರ.

ಆಂಧ್ರ ಮಹಾಸಭೆ-ಕಾರ್ಯಕಾರೀ ಸಮಿತಿ.

ಬಳ್ಳಾರಿ ನಗರದಲ್ಲಿ ಆಂಧ್ರ ಮಹಾಸಭೆ ಸ್ಥಾಯಿ ಸಮಿತಿ, ಕಾರ್ಯಕಾರೀ ಸಮಿತಿಯ ಸಭೆಯು ಶ್ರೀ ಜಿ. ಹರಿಸರ್ವೋತ್ತಮ ರಾಯರ ಅಧ್ಯಕ್ಷತೆಯಲ್ಲಿ 24 ನೆಯ ತಾ|| ಸಮಾವೇಶವಾಗಿ ದೆಹಲಿಯಲ್ಲಿ ಘಟನಾ ಸಮಿತಿಯು ಸೇರಿದಾಗ ಆಂಧ್ರ ಪ್ರಾಂತರಚನೆಗೆ ಸಹಾಯ ಮಾಡುವಂತೆ ಕೇಳಿ ಕೊಳ್ಳಲು ೧೬ ಜನರ ಶಿಷ್ಟಮಂಡಲವನ್ನು ಕಳುಹಿಸಬೇಕೆಂದಾಯಿತು ಅಲ್ಲಿಯೇ ಒಂದು ಕಛೇರಿಯನ್ನು ತೆಗೆಯಬೇಕೆಂದಾಗಿ, 500 ರೂ. ಗಳ ಮೊತ್ತವು ಸಭೆಯಲ್ಲಿ ಶೀಘ್ರವಾಯಿತು. ಶ್ರೀ ಕೊಂಡಾ ವೆಂಕಟಪ್ಪ ನವರ ಸೂಚನೆಯು ಆಂಧ್ರ ಮಹಾಸಭೆಯಲ್ಲಿನ ಋಣಗಳನ್ನು ಬಂದು ಮಾಡಲು, ಸ್ವೀಕೃತವಾಯಿತು.

ಮದ್ರಾಸ್‌ದಲ್ಲಿ ನವಂಬರ್ ತಿಂಗಳಲ್ಲಿ ಕೂಡಲಿರುವ ಪ್ರತ್ಯೇಕ ಸಮಾವೇಶಕ್ಕೆ ಉಯ್ಯೂರಿನ ಕುಮಾರ ರಾಜರವರು ಅಧ್ಯಕ್ಷರಾಗಬೇಕೆಂದು ಒಪ್ಪಲಾಯಿತು.

24 ನೆಯ ತಾ|| ನ ಬಹಿರಂಗ ಸಭೆಯಲ್ಲಿ ಶ್ರೀಮತಿ ರಾಮಸುಬ್ಬಮ್ಮ, ಯಂ. ರಾಮರಾವು ಮತ್ತು ರಾಮಮೂರ್ತಿಯವರು ಭಾಷವಾರ ಪ್ರಾಂತ ತತ್ವಕ್ಕೆ ಮನ್ನಣೆ ಇರಬೇಕೆಂದು, ಜನತೆಯು ಇದಕ್ಕೆ ಬೆಂಬಲ ಕೊಡಬೇಕೆಂದು, ಭಾಷಣ ಮಾಡಿದರು. ಕನ್ನಡಿಗರ ಮೇಲೆ ನಡೆಯುತ್ತಿರುವ ಅನ್ಯಾಯ, ಆಕ್ರಮಣ ಸ್ವವೃತ್ತಿಯನ್ನು ಖಂಡಿಸಿ, ನ್ಯಾಯವಾದ ತಳಹದಿಯಮೇಲೆ ಭಾಷಾವಾರ ಪ್ರಾಂತಗಳ ರಚನೆಗೆ ತಮ್ಮ ಬೆಂಬಲವಿದೆಯೆಂದು ಕನ್ನಡಿಗರ ಪರವಾಗಿ ಶ್ರೀ ರೇವಣ ಸಿದ್ದಯ್ಯನವರು ತಿಳಿಸಿದರು.

ಬಳ್ಳಾರಿ ಆಂಧ್ರ ಕಾಂಗ್ರೆಸ್ ಸಮಿತಿ.

ಅಧಿಕಾರೀ ವರ್ಗದ ಚುನಾವಣೆಯು ಸಕ್ರಮವಾಗಿ ನಡೆದಿಲ್ಲೆಂಬ ಕಾರಣದ ಮೇಲೆ ಆಂಧ್ರ ಪ್ರಾಂತೀಯ ಚುನಾವಣಾ ಮಂಡಳಿಯು ಬಳ್ಳಾರಿ ಜಿಲ್ಲಾ ಆಂಧ್ರ ಕಾಂಗ್ರೆಸ್ ಸಮಿತಿ, ಪಶ್ಚಿಮ ಗೋದಾವರಿ ಮತ್ತು ನೆಲ್ಲೂರು ಜಿಲ್ಲೆಗಳಲ್ಲಿ ಚುನಾವಣೆಗಳನ್ನು ರದ್ದು ಮಾಡಿದೆ.

ಶ್ರೀ ಬಿ. ಯಸ್ ಮೂರ್ತಿ

ಮದ್ರಾಸ್ ಪ್ರಾಂತದ ಲೇಬರ್ ಮಂತ್ರಿಗಳ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾದ ಶ್ರೀ ಬಿ. ಯಸ್ ಮೂರ್ತಿಯವರು ಬಳ್ಳಾರಿ ಜಿಲ್ಲೆಯಲ್ಲಿ 29-30 ಮತ್ತು 1 ನೆಯ ತಾ. ಗಳಲ್ಲಿ ಸಂಚರಿಸಲಿರುವರೆಂದು ಕಾರ್ಯಕ್ರಮವು ಕೈಸೇರಿದೆ.

ಮದ್ರಾಸ್ ಯೋಜನೆಗಳು
ಗಾಂಧೀಜಿ ಸಂತೋಷ

ಮದ್ರಾಸ್ ಸರ್ಕಾರದವರು ಕೈಗೊಂಡ ಗ್ರಾಮೋದ್ಧಾರ ಯೋಜನ, ಖಾದಿಉತ್ಪತ್ತಿ, ಮದ್ಯನಿಷೇಧಕ್ಕಾಗಿ ಮ. ಗಾಂಧಿಯವರು ತಮ್ಮ ಪ್ರಾರ್ಥನಾನಂತರ ಸಂತೋಷವನ್ನು ವ್ಯಕ್ತಪಡಿಸಿ, ಬಟ್ಟೆ ಗಿರಣಿಗಳನ್ನೆಲ್ಲಾ ಮುಚ್ಚುವೆವೆಂಬ ಶ್ರೀ ಪ್ರಕಾಶರ ಹೇಳಿಕೆಯು ಸತ್ಯವಾಗಲೆಂದು ಆಶಿಸಿದರು.

ಪ್ರಭಾಕರ (ರಿಜಿಸ್ಟರ್ಡ್)

"ಶಾನಿಟಾಲ್"

ಕ್ರಿಮಿನಾಶಕ ದ್ರವ. (ಫೆನಾಯಿಲ್)

ಎಲ್ಲಾ ಕಡೆಯಲ್ಲೂ ದೊರೆಯುತ್ತದೆ.

ಕೆ. ವಿ. ಅಂಡ್ ಸನ್ಸು,

ಬಳ್ಳಾರಿ.

The Rayalaseema Bank Limited, Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗೆಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— (ಕಳೆದವಾರ ಬಳ್ಳಾರಿಜಿಲ್ಲಾ **ಕೂಡ್ಲಿಗೆ,** ಚಿತ್ತೂರುಜಿಲ್ಲಾ **ನಾಗರಿಯಲ್ಲಿ** ನಮ್ಮ ಶಾಖೆಗಳನ್ನು ಪ್ರಾರಂಭಿಸಿದೆವೆಂದು ತಿಳಿಸಲು ಹರ್ಷಿಸುತ್ತೇವೆ.

ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ.
ಅನಂತಪುರ:- ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾವಿಡಿ, ತಿಮ್ಮನಚೆರ್ಲ, ಉರವಕೊಂಡ.
ಚಿತ್ತೂರು:- ಚಿತ್ತೂರು, ಮದನಪಲ್ಲಿ, ತಿರುಪತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ. **ಕಡಪ:-** ರಾಜಂಪೇಟ

ಫಿಕ್ಸಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:- 3%.

ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.



ಕಾಶ್ಮೀರು ಅರುಕ್
(ಮನೆಯ ವೈದ್ಯ)

ಕೆಮ್ಮು. ಉಬ್ಬಸ, ಶೀತಜ್ವರ, ಅಜೀರ್ಣ ಮೊದಲಾದ ವ್ಯಾಧಿಗಳಿಗೆ ದಿವ್ಯಾಮೃತ ಎಲ್ಲಾ ನೋವುಗಳಿಗೆ ಹಾವು ಚೇಳು ಕಚ್ಚಿದುದಕ್ಕೆ ದಿವ್ಯೌಷಧ ಎಲ್ಲಾ ಪಾಪುಗಳಲ್ಲಿ ದೊರೆಯುತ್ತದೆ

ಹೆಚ್. ಯುಸ್. ಅಂಡ್ ಸನ್ಸು,
ಬಳ್ಳಾರಿ.

ಹಿಂದೂಸ್ತಾನಿಯು ರಾಷ್ಟ್ರಭಾಷೆ

ಇದನ್ನು ತಪ್ಪದೆ ಕಲಿಯಿರಿ

ಪ್ರಾರಂಭಿಕ ಪರೀಕ್ಷೆಗಳಾದ ವ್ಯಾಧವಿಕ- ಮಧ್ಯಮ ರಾಷ್ಟ್ರಭಾಷೆ, ಉನ್ನತ ಪರೀಕ್ಷೆಗಳಾದ ವ್ರವೇಕ, ವಿಶಾರದ- ಪ್ರಚಾರಕ, ಮದ್ರಾಸ್ ವಿಶ್ವವಿದ್ಯಾಲಯದ ಹಿಂದೀ- ವಿದ್ವಾನ್ ಪರೀಕ್ಷೆಗಳ ಮಾಹಿತಿಯನ್ನು ಉಚಿತವಾಗಿ ಕೊಟ್ಟು- ಶಿಕ್ಷಣದ ಏರ್ಪಾಟಿಗೆ ಸಲಹೆಗಳನ್ನು ಕೊಡಲಾಗುವುದು- ಎಲ್ಲಾವಸ್ತಕಗಳು ದೊರೆಯುತ್ತವೆ. **ಬಹಳ ಸುಲಭ ಭಾಷೆ-ಅತ್ಯಲ್ಪಕಲದಲ್ಲಿಕಲಿಯಬಹುದು.** ಟಿ. ಬಿ. ಕೇಶವರಾವ್
ಹಿಂದೀಪ್ರಚಾರಕ, ಬಳ್ಳಾರಿ

NAVA BHARAT, BELLARY Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾವರಗಳು.	Subscription Rates
ವರ್ಷಕ್ಕೆ 5-0-0	One Year 5-0-0
೬ ತಿಂಗಳಿಗೆ 3-0-0	Six months 3-0-0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To
SRI.....
.....
.....

Printed at Krishna Press Bellary QH No. B 17 FOR (Q.H No. B-5)
Edited & Published by T. B. KESHAVA RAO.

ಜೈಹಿಂದ್. Reg. No. M. 474

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೫ ಸಂಚಿಕೆಗಂ | ಬಳ್ಳಾರಿ ಅಕ್ಟೋಬರು ೭ ಸೋಮವಾರ ೧೯೪೬ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವು.

ಪಶು ಧನ

ದನಗಳ ಸಮಸ್ಯೆಯನ್ನು ಬಿಡಿಸುವ ಪ್ರಯತ್ನ ಜೋರಿಸಿಂಪ ಮಾಡದಿದ್ದರೆ ಹಿಂದುಸ್ತಾನದ ಭೂ ಸುಧಾರಣೆಯ, ಗ್ರಾಮ ಪುನರ್ಘಟನೆಯ ಯಾವ ಯೋಜನೆಯೂ ಯಶಸ್ವಿಯಾಗಲಾರದು. ಯುದ್ಧದಲ್ಲಿ ಆಕಳು ಹಾಗು ಎತ್ತುಗಳು ಪರದೇಶದ ಸೈನಿಕರ, ಹಾಗೂ ರಾಜಕೈದಿಗಳ ಹೊಟ್ಟೆಗೆ ಬೇಕಾಗುವ ಮಾಂಸವನ್ನು ಒದಗಿಸಲು ವಿಶೇಷವಾಗಿ ಸಂಹಾರವಾಗಿವೆ. ಈ ಮೊದಲೇ ಇರುವ ದನಗಳ ದುಸ್ಥಿತಿ ಇದರಿಂದ ಹೆಚ್ಚಿದೆ.

ದನಗಳನ್ನು ಒಂದೇ ದಿನದಲ್ಲಿ ಬೆಳಸಲಾಗುವ ನಿಜ. ಹೇಳಿಕೊಳ್ಳುವಷ್ಟು ಕೆಲಸವಾಗಬೇಕಾದರೆ ಕನಿಷ್ಠ ನಾಲ್ಕೈದು ವರ್ಷಗಳನ್ನಾದರೂ ಕಳೆಯಬೇಕಾಗುವದು. ಆದುದರಿಂದ ಈ ಕೆಲಸವನ್ನು ನಾವು ಕೂಡಲೇ ಕೈಕೊಳ್ಳುವದು ಉಚಿತವಾಗಿದೆ. ಆದರೆ ದುರ್ದೈವದಿಂದ ಕಾಲಹರಣವೇ ಈ ದೇಶದಲ್ಲಿ ಒಂದು ರೂಢಿಯಾಗಿ ಹೋಗಿದೆ. ದನಕರುಗಳ ಬೆಳವಣಿಗೆಯ ಕೆಲಸವು ಯಶಸ್ವಿಯಾಗಬೇಕಿದ್ದರೆ ಸರಕಾರೀ ಅಧಿಕಾರಿಗಳು ಹೊಸ ಹುರುಪಿನಿಂದ ಈ ಕಾರ್ಯ ಕೈಕೊಳ್ಳಬೇಕು. ಒಂದು ಸೇರು ದನಕರುಗಳ ಬೆಳವಣಿಗೆಯಾಗದಿದ್ದರೆ, ಹಳ್ಳಿಯ ಉಳಿದ ಬೆಳವಣಿಗೆಗೆ ತನ್ನಿಂದ ತಾನೇ ಕುಂಠಿತವಾಗುವದು.

ಪ್ರಾಂತಿಕ ಹಾಗು ಕೇಂದ್ರ ಸರಕಾರಗಳು ಸರಿಯಾಗಿ ಅರ್ಧ-ಅರ್ಧ ವೆಚ್ಚ ಕೊಡಲು ಒಪ್ಪಿ, ಸುಧಾರಿಸಿದ ದನಗಳ ಪೀಳಿಗೆಯನ್ನು ಬೆಳಸುವ ಬಗ್ಗೆ ಅಲ್ಲಲ್ಲಿ ಗೋಶಾಲೆಗಳನ್ನು ಸಂಘಟಿಸುವ ಯೋಜನೆಯನ್ನು ಗೊತ್ತುಮಾಡಿ ಸ್ವೀಕರಿಸಿವೆ. ಈ ಯೋಜನೆಯನ್ನು ಯೋಗ್ಯರೀತಿಯಿಂದ ಕಾರ್ಯರೂಪಕ್ಕಿಳಿಸಿದರೆ, ಯೋಗ್ಯ ದಿಶೆಯಲ್ಲಿ ಸಾಗಿದಂತಾಗುವದು.

—ಮೀರಾಬೆನ್

ಬಳ್ಳಾರಿಯಲ್ಲಿ ರೆವಿನ್ಯೂ ಮಂತ್ರಿಗಳಾದ ಶ್ರೀ ಕೆ. ಆರ್ ಕಾರಂತರು.

ಶ್ರೀ ಕೆ. ಕಾರಂತರು, 30ನೆ ಪ್ರಾ॥ ಬಳ್ಳಾರಿಗೆ ಬಂದು ಆದಿನ ಹೊಸಪೇಟೆಯನ್ನು ಸಂದರ್ಶಿಸಿ ಬಳ್ಳಾರಿಗೆ ಹಿಂದಿರುಗಿದರು. 1—10—46 ನೆ ಮಂಗಳವಾರ ಶಿರುಗುಪ್ಪೆ— ಕೆಕ್ಕಲಕೋಟೆಗಳನ್ನು ನೋಡಿ ಮಧ್ಯಾಹ್ನ ಬಳ್ಳಾರಿಗೆ ಹಿಂದಿರುಗಿದರು. ಎಲ್ಲಾ ಕಡೆಗಳಲ್ಲೂ ರೈತರ ಸಂಕಷ್ಟಗಳನ್ನು ವಿಚಾರಿಸಿ ನಿವಾರಣೋಪಾಯಗಳನ್ನು ಶೀಘ್ರದಲ್ಲಿ ಮಾಡುವದಾಗಿ ವಚನವಿತ್ತರು. ಮತ್ತು ಸರ್ಕಾರದ ಮದ್ಯನಿಷೇಧ ಶಾಸನವನ್ನು ಯಶಸ್ವಿಮಾಡಲು ಬಿನ್ನಹಿಕೊಂಡರು

ಮದ್ಯನಿಷೇಧ ದಿನಾಚರಣೆ. ಮದ್ಯನಿಷೇಧ ಶಾಸನದ —ಪ್ರಾರಂಭೋತ್ಸವ—

ಬಳ್ಳಾರಿ ನಗರದಲ್ಲಿ ಮದ್ಯನಿಷೇಧದ ಪ್ರಾರಂಭೋತ್ಸವವು ಬಹಳ ವಿಜೃಂಭಣೆಯಿಂದಲೂ ಉತ್ಸಾಹದಿಂದಲೂ ಅಕ್ಟೋಬರ್ 1 ನೆಯ ತಾ॥ನೆರವೇರಿತು. ಶಾಲಾಬಾಲಕ ಬಾಲಕಿಯರು, ಜೂನಿಯರ ಸರ್ಟಿಫೈಡ್ ಶಾಲಾಬಾಲಕರು, ಪೋಲೀಸ್ ಮತ್ತು ರಿಸರ್ವ ಬ್ಯಾಂಡುಗಳೊಂದಿಗೆ— ನಗರದಲ್ಲಿ ನಾಲು ಕಡೆಗಳಿಂದಲೂ ಮೆರವಣಿಗೆಯಲ್ಲಿ ಹೊರಟು ಊರಿನ್ನ ವಿವಿಧ ಹೆಂಡದಂಗಡಿಗಳ ಹತ್ತರ ದೊಡ್ಡ ದೊಡ್ಡ ಸಭೆಪಳನ್ನೇರ್ಪಡಿಸಿದ ಹತ್ತರ ಕೂಡಿದರು. ಅಲ್ಲಿ ಜನರಿಗೆಲ್ಲಾ ಪಾನಕ-ಉಪ್ಪಿಟ್ಟು ಕುಡುಕರಿಗೆ ಕೊಡಲೇರ್ಪಡಿಸಿದರು. ಸರಕಾರಿ ಕಾಂಗ್ರೆಸ್ ಜನರು ಇತರ ಸಾರ್ವಜನಿಕರ ದೊಡ್ಡ ಸಹಕಾರ ಸಮೂರಂಭವು ಇದಾಗಿದ್ದಿತು—

ಫುಟಬಾಲ ಮೈದಾನದಲ್ಲಿ ಶ್ರೀ ಕಾರಂತರ (ರೆವಿನ್ಯೂಮಂತ್ರಿ) ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಮುಸ್ಲಿಂಲೀಗಿನ ಪರವಾಗಿ ಸಂಪೂರ್ಣ ಸಹಕಾರವನ್ನು ಕೊಡುವೆವೆಂದು ಅಧ್ಯಕ್ಷರಾದ ರಾವುಫುಸಾಹೇಬರು ಹೇಳಿದರು. ಡಾ. ಲಕ್ಷ್ಮಿದೇವಿ, ಸುಬ್ರಮಣ್ಯಂ, ಭೀಮರಾವು, ಜಡ್ಜರಾದ ಮ್ಯೂಕ್‌ಸಾಹೇಬರು, ಅಧಿಕಾರೀ ಅನಧಿಕಾರೀ ವರ್ಗದವರ ಸಹಕಾರ ಕೋರಿದರು. ಶ್ರೀ ವೇಣುಗೋವಾಲಚಾರ್ಯರು ಎಲ್ಲರನ್ನು ವಂದಿಸಿದರು.

ಹೊಸಪೇಟೆ:— ಇಲ್ಲಿ ಈ ದಿನದಾಚರಣೆಯು ಉತ್ಸಾಹದಿಂದಾಚರಿಸಲ್ಪಟ್ಟಿತು. ರೆವಿನ್ಯೂಮಂತ್ರಿಗಳಾದ ಶ್ರೀ ಕಾರಂತರವರು ಮದ್ರಾಸ್ ಸರ್ಕಾರದ ಧ್ಯೇಯ ನೀತಿಗಳನ್ನು ತಿಳಿಸಿ ಮದ್ಯನಿಷೇಧ ಶಾಸನಕ್ಕೆ ಜನತೆಯ ಸಹಕಾರಕೋರಿದರು.

ರಾಯದುರ್ಗ:— ಶ್ರೀ ಅಸೂರು ಓಬಳಾಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀ॥ ನಿಪಾಣಿ ರಂಗರಾವ್ ನಾಗಭೂಷಣಂ, ಅರೇಬಿಕ್ ಕಾಲೇಜದ ಮೌಲಾನಾ ಸಾಹೇಬರು ಮದ್ಯನಿಷೇಧ ಶಾಸನದ ಲಾಭಗಳನ್ನು ತಿಳಿಸಿ ಬಡವರ ಉದ್ಧಾರವು ಇದರಿಂದಾಗುವದೆಂದು ಸೂಚಿಸಿ ಇದಕ್ಕೆ ಎಲ್ಲಾ ಜನರೂ ಪೂರ್ಣ ಸಹಕಾರ ಕೊಡಬೇಕೆಂದರು. ಕಾಂಗ್ರೆಸ್ ಜಯಜಯಕಾರಗಳೊಂದಿಗೆ ಪ್ರಾತಃಕಾಲ, ಸಾಯಂಕಾಲ ಮೆರವಣಿಗೆಗಳು ಹೊರಟಿದ್ದವು.

ಅಲೂರು – ಮುದ್ದನಗೆರೆ – ಅದವಾನಿಗಳಲ್ಲಿ ಶ್ರೀ ಬಿ. ಯಸ್. ಮೂರ್ತಿ ಪಾರ್ಲಿಮೆಂಟರಿ ಸೆಕ್ರೆಟರಿಯವರು ಪ್ರಾರಂಭೋತ್ಸವವನ್ನು ನೆರನೇರಿಸಿದರು ಜಿಲ್ಲೆಯ ಎಲ್ಲಾ ಭಾಗಗಳಲ್ಲೂ ಉತ್ಸಾಹವಿದೆ.

ಸಿರುಗುಪ್ಪೆ:— ತಹಶೀಲ್ದಾರರ ಕಛೇರಿ ಆವರಣದಲ್ಲಿ ಸಭೆಯಲ್ಲಿ ಮದ್ರಾಸ್ ರೆವಿನ್ಯೂ ಮಂತ್ರಿಗಳಾದ ಶ್ರೀ ಕಾರಂತರು-ಬಳ್ಳಾರಿಯ ಶ್ರೀ ಸುಬ್ರಹ್ಮಣ್ಯಂರವರು ಮದ್ಯನಿಷೇಧ ಬಗ್ಗೆ ಉಪನ್ಯಾಸವಿತ್ತರು. ಶ್ರೀ ರತ್ನಂರವರು ಎಲ್ಲರನ್ನು ವಂದಿಸಿದ ಬಳಿಕ ಮಂತ್ರಿಗಳು ವ್ಯವಸಾಯ ಪರಿಶೋಧನಾಲಯವನ್ನು ಸಂದರ್ಶಿಸಿ ಬಳ್ಳಾರಿಗೆ ತೆರಳಿದರು.

ಭಾರತದ ರಾಜಕೀಯ

ಅಕ್ಟೋಬರ್ 3ರ ಕ್ಕೆ ಕಾಂಗ್ರೆಸ್ ಅಧ್ಯಕ್ಷರ ಹೆಸರು ಪ್ರಕಟವಾಗುವದು. ಇಲ್ಲಿಯನರಿಗೆ ಶ್ರೀ ಕೃಪಾಲಿನಿ ಮತ್ತು ಮೌಲಾನಾ ಆಜಾದರ ಹೆಸರುಗಳು ಸೂಚಿತವಾಗಿವೆ.

ಪಂಜಾಬದ ಮುಖ್ಯ ಮಂತ್ರಿಗಳಾದ ಖಿಜಾರ ಬಯೂತಖಾನತಿವಾನರನ್ನು ಮುಸ್ಲಿಂಲೀಗಿನಲ್ಲಿ ಸೇರಿಸುವ ಪ್ರಯತ್ನಗಳು ವಿಫಲವಾಗಿವೆಯೆಂದು ತಿಳಿದು ಬಂದಿದೆ.

ಬೆಂಗಳೂರಿನಲ್ಲಿದ್ದ ವೈಸ್‌ರಾಯರ ಕಾರ್ಯನಿರ್ವಾಹಕ ಮಂತ್ರಿಮಂಡಲವನ್ನು ಪುನರ್ರಚಿಸಲು ನಿಶ್ಚಯಿಸಿದ್ದಾರೆ.

9th Year of Publication.

7th OCTOBER 1946

ಬಳ್ಳಾರಿ ಜಿಲ್ಲೆಯಲ್ಲಿ
ಮದ್ಯನಿಷೇಧ ದಿನಾಚರಣೆ.

1-10-1946 ನೆಯ ಮಂಗಳವಾರವನ್ನು ಬಳ್ಳಾರಿ ಜಿಲ್ಲೆಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬೇಕಾಗಿದೆ. ಕೂಲಿಕಾರನಿಗೂ, ದರಿದ್ರ ನಾರಾಯಣನಿಗೂ ಮೃತ್ಯು ಸ್ವರೂಪವಾದ ಸುರಾವಾನವು ಅಂದು ಅಂತವಾಯಿತು. ಸರಕಾರವು ಅಧಿಕೃತ ಅಂಗಡಿಗಳನ್ನಿಟ್ಟು ಮಾದಕದ್ರವಗಳನ್ನು ಮಾರಲು ಪಾಂತದ ಎಲ್ಲಾ ಕಡೆಯಲ್ಲೂ ಏರ್ಪಡಿಸಿ ತನ್ಮೂಲಕ ಬಂದ ಕೋಟ್ಯಂತರ ರೂಪಾಯಿಗಳಿಂದ ವಿದ್ಯಾಭ್ಯಾಸ ವಗೈರೆ ಖಾತೆಗಳನ್ನು ನಡೆಸುತ್ತಿದ್ದಿತು ಬಡವರಿಗೂ, ಬಲ್ಲಿದವರಿಗೂ ಸಮಾನ ವರ್ತನೆಯನ್ನು ತೋರಿಸಬೇಕಾದ ಸರ್ಕಾರವು ಬಡವರನ್ನು ಆರ್ಥಿಕ ಸಾಮಾಜಿಕ ನೈತಿಕ ದೃಷ್ಟಿಗಳಿಂದ ಹಾಳು ಮಾಡುವ ಮಾದಕದ್ರವಗಳ ಸೇವನೆಯನ್ನು ಅಧಿಕಾರೀ ರೀತ್ಯಾ ಅಂಗೀಕರಿಸಿ ಬಡವರ ಕೇರಿಗಳಲ್ಲೇ ಅಂಗಡಿಗಳನ್ನಿಟ್ಟು, ಅವರ ಕಷ್ಟಾರ್ಜಿತ ಧನದ ಬಹುಭಾಗವನ್ನು ಸೂರೆಗೊಳ್ಳುತ್ತಲಿದ್ದಿತು. ನರಕೀಯ ಸರಕಾರದಲ್ಲಿ ಬಿಳಿಯರ ಸರ್ಕಾರದಲ್ಲಿ ಈ ಭೇದವು ನೂರಾರು ವರ್ಷಗಳಿಂದ ಜಾರಿಯಲ್ಲಿದ್ದಿತು. 1937 ರಲ್ಲಿ ಮದ್ರಾಸ್ ಸರ್ಕಾರವು ಪಾನನಿಷೇಧ ಶಾಸನವನ್ನು ನಾಲ್ಕು ಜಿಲ್ಲೆಗಳಲ್ಲಿ ಜಾರಿಗೆ ತಂದುದನ್ನು 1939 40 ರಲ್ಲಿ ಸಲಹೆಗಾರ ಸರ್ಕಾರವು ಮತ್ತೆ ಅಂತಗೊಳಿಸಿ ಕುಡಿತವನ್ನು ಪ್ರಾರಂಭಿಸಿತ್ತು.

1946 ರಲ್ಲಿ ಮದ್ರಾಸ್‌ದಲ್ಲಷ್ಟೇ ಅಲ್ಲ, ಕೇಂದ್ರದಲ್ಲೂ ಕೂಡ ಕಾಂಗ್ರೆಸ್ ಸರ್ಕಾರವು ಅಸ್ತಿತ್ವದಲ್ಲಿ ಬಂದಿದೆ ಶಕ್ತಿಯು ಇಮ್ಮಡಿಯಾಗಿದೆ. ಪ್ರಜಾಪ್ರತಿನಿಧಿಗಳು ಅಧಿಕಾರಾರೂಢರಾಗಿದ್ದಾರೆ. ಪ್ರಜೆಗಳಿಗೂ ಬಡವರಿಗೂ ಹಿತಕರವಾದ ಶಾಸನಗಳು ಜಾರಿಯಲ್ಲಿ ಬರಲಿವೆ.

ಪ್ರಾಂತ್ಯದ ಅತ್ಯಂತೋಪಯುಕ್ತವಾದ ಶಾಖೆಗಳಿಗೆ ಧಕ್ಕೆ ತಟ್ಟುವಂತಿದ್ದರೂ 15 ಕೋಟಿ ರೂ. ಗಳ ನಷ್ಟವನ್ನು ಭರಿಸಲು ಎದೆಗಾರಿಕೆಯನ್ನು ತೋರಿಸಿ ಈ ವರ್ಷ 8 ಜಿಲ್ಲೆಗಳಲ್ಲಿ ಪಾನನಿಷೇದವನ್ನು ಜಾರಿಯಲ್ಲಿ ತಂದು ಅದನ್ನು ಯಶಶ್ವಿಮಾಡಲು ಸರ್ಕಾರೀ ಅಧಿಕಾರಿಗಳಿಗೆ ಕಟ್ಟಾಜ್ಞೆವಿಧಿಸಿ ತಮ್ಮವರಾದ ಸಾರ್ವಜನಿಕರನ್ನು ಕೋರಿದ್ದಾರೆ.

ಕಾಂಗ್ರೆಸ್‌ನವರನ್ನು ಮೈಮುರಿಯುವಂತೆ ಒದ್ದು ಗುಂಡಿನಿಂದ ಸುಟ್ಟು ಪೋಲೀಸ್, ರಿಸರ್ವಪೋಲೀಸ್ ನವರು ತಮ್ಮ ಬ್ಯಾಂಡಿನಿಂದ ತ್ರಿವರ್ಣಧ್ವಜಯುಕ್ತವಾದ ಕಾಂಗ್ರೆಸ್ ಸ್ತ್ರೀ ಪುರುಷರ ಮೆರವಣಿಗೆಯನ್ನು ಊರ ಬೀದಿಗಳಲ್ಲಿ ಕೊಂಡೊಯ್ಯುವ ದೃಶ್ಯವು ಹಿಂದಿನ ರಾಜಭಕ್ತರಿಗೆ ಎದೆಯೊಡೆಯುವಂತಿದ್ದಿತು. ಕಲೆಕ್ಟರವರು, ಜಿಲ್ಲಾ ಪೋಲೀಸಧಿಕಾರಿಗಳು ಊರಲ್ಲೆಲ್ಲಾ ಅಡ್ಡಾಡಿ ಹೆಂಡದಂಗಡಿಗಳನ್ನು ಶೃಂಗರಿಸಿ ಸಭೆಗಳನ್ನೇರ್ಪಡಿಸುವುದೆಂದರೇನು ? ಈಗ ಎಲ್ಲರೂ ನಮ್ಮವರೇ !

ಆರಂಭ ಶೂರತ್ವವಾಗಲಿ, ಆರಂಭ ಉತ್ಸಾಹವಾಗಲಿ, ಕೊನೆಯವರಿಗಿನ ಶ್ರದ್ಧೆ ಇಲ್ಲದಿದ್ದರೆ ವ್ಯರ್ಥವಾಗುವುದು. ಕುಡುಕನಿಗಿಂತಲೂ, ಕಳ್ಳಬಟ್ಟಿ ಇಳಿಸುವವನು ಹೆಚ್ಚು ಅಪಾಯಕರ ಮನುಷ್ಯನೆಂಬುದನ್ನು ಜ್ಞಾಪಕದಲ್ಲಿಟ್ಟು ಅವನನ್ನು ಪತ್ತೆ ಹಚ್ಚಲು ಸರ್ವ ಸನ್ನಾಹಗಳನ್ನು ಅಧಿಕಾರಿಗಳು ಮಾಡಬೇಕು. ಜನತೆಯು ಪೂರ್ಣಸಹಕರಿಸಬೇಕು. ಸರ್ಕಾರದವರು ಜಾರಿಯಲ್ಲಿ ತರುವ ಶಾಸನಗಳಿಗೆಲ್ಲಾ ಪ್ರಜಾಸಹಕಾರ ಸಹಾನುಭೂತಿಬೇಕು. ಪ್ರಜೆಗಳ ಬೆಂಬಲವಿಲ್ಲದೆಯೂ ಶಾಸನವು ಯಶಶ್ವಿಯಾಗಲಾರದು ಎಲ್ಲಾ ಬಣದವರು ಈ ಶಾಸನವನ್ನು ಯಶಶ್ವಿನಾಡಲು ನನ್ನ ಬೇಡಿಕೆ.

ಜನ ಹೆಚ್ಚೋ? ಕೃಷಿ ಕಡಿಮೆಯೊ?

ಹಿಂದುಸ್ತಾನದಲ್ಲಿ ತಿರುತಿರುಗಿ ಒದಗುತಿರುವ ಬರಗಾಲಗಳಿಗೆ ಜನ ಸಂಖ್ಯೆಯ ಅತಿರೇಕ ಬೆಳವಣಿಗೆಯೇ ಕಾರಣವೆಂದು ಹೇಳುವದು, ಈಚೆಗೊಂದು ಚಟವೇ ಆಗಿಬಿಟ್ಟಿದೆ. ಈ ಸಿದ್ಧಾಂತಕ್ಕೆ ಎಷ್ಟೋ ಪ್ರತಿವಾದಗಳು ಬಂದಿವೆ. ಅದರಲ್ಲಿ ಹೊಣೆ ತಪ್ಪಿಸಿಕೊಳ್ಳುವ ದುವೃತ್ತಿಯ ಝಲಕೂ ಇದೆ. ಹಿಂದುಸ್ತಾನದ ಆಹಾರೋತ್ಪಾದನ ಸಾಮರ್ಥ್ಯವನ್ನು ಪೂರ್ತಿಯಾಗಿ ಬೆಳೆಸಿದರೆ ಹೆಚ್ಚುತ್ತಿರುವ ಜನಸಂಖ್ಯೆಯ ಹೊಟ್ಟೆಯನ್ನು ಇನ್ನೂ ಎಷ್ಟೋ ಕಾಲ ಸರಿಯಾಗಿ ತುಂಬಬಹುದೆಂಬ ಬಗ್ಗೆ ಬೇಕಾದಷ್ಟು ಆಧಾರ, ಪ್ರಮಾಣಗಳನ್ನು ಎತ್ತಿ ತೋರಬಹುದು. ಪತ್ರಲೇಖಕನೊಬ್ಬನು ಈ ವಿಷಯದಲ್ಲಿ ನಮ್ಮ ಒಕ್ಕಲತನದ ಕೆಲ ಸ್ಥಿತಿಗತಿಗಳ ಕಡೆಗೆ ಗಮನ ಸೆಳೆದಿದ್ದಾನೆ.

(೧) ಸರಕಾರದ ಕೃಷಿಭೂಮಿಗಳಲ್ಲಿ ಮಾಡಿದ ಪ್ರಯೋಗಗಳಿಂದ, ಸುದಾರಿಸಿದ ಬೀಜಗಳನ್ನು ಬಿತ್ತಿದರೆ ಸದ್ಯದ ಹುಟ್ಟುವಳಿಯನ್ನು ನೂರಕ್ಕೆ ೨೯ ರಷ್ಟು ಹೆಚ್ಚಿಸಬಹುದೆಂದು ತೋರಿಬಂದಿದೆ.

(೨) ಎಣ್ಣೆಕಾಳು, ಹಿಂಡಿ, ಎಲುಬು, ಮೊದಲಾದವುಗಳ ನಿರ್ಯಾತವನ್ನು ತಡೆದು, ಹಳ್ಳಿಗರ ಅನುಗೆ ಮೊದಲಾದವುಗಳಿಗಾಗಿ ಕಟ್ಟಿಗೆಯ ಉರವಲನ್ನು ಒದಗಿಸುವ ಮೂಲಕ ಸಗಣಿ ಮೊದಲಾದುವನ್ನು ಗೊಬ್ಬರವೂಡಿ ಹಾಕಿದರೆ, ಸದ್ಯದ ಪೈರಿನ ಉತ್ಪಾದನೆಯನ್ನು ಇಮ್ಮಡಿಸಬಹುದು.

(೩) ನೀರಾವರಿ ಕಾಲಿವೆಗಳನ್ನು ಇನ್ನಷ್ಟು ವಿಸ್ತರಿಸುವ ಮತ್ತು ಸಾಕಷ್ಟು ಭಾವಿ ಕೆರೆಗಳನ್ನು ತೋಡುವ ಮೂಲಕ ಈಗ ಒಂದೇ ಬೆಳೆ ಹುಟ್ಟುತ್ತಿರುವ ಪ್ರದೇಶಗಳಲ್ಲಿ ಎರಡು ಪೈರುಗಳನ್ನು ತೆಗೆಯಬಹುದು. ಹಿಂದುಸ್ತಾನದ ೨೪೫ ಕೋಟಿ ಎಕರೆ ಕೃಷಿ ಭೂಮಿಯಲ್ಲಿ ಬರಿ ೩೨ ಕೋಟಿ ಎಕರೆ ಮಾತ್ರ ಎರಡು ಬೆಳೆಗಳನ್ನು ಕೊಡುತ್ತವೆ.

(೪) ಹಿಂದೂಸ್ಥಾನದ ಪ್ರತಿ ಎಕರೆಯ ಹುಟ್ಟುವಳಿಯೊಡನೆ ಬೇರೆ ದೇಶಗಳ ಹುಟ್ಟುವಳಿಯನ್ನು ಹೋಲಿಸಿದರೂ ಇದೇ ಅರ್ಥ ಹೊರಡುತ್ತದೆ. ಅಕ್ಕಿಯ ಹುಟ್ಟುವಳಿಯ ಪ್ರತಿ ಎಕರೆಯ ಅಂಕಿಗಳು ಇಂತಿವೆ.

ಇಜಿಪ್ತ	೩೪೪೭	ಪೌಂಡು
ಜಪಾನ	೩೯೦೯	,,
ಇಟಲಿ	೪೪೧೦	,,
ಫೊರ್ಮೋಸಾ	೨೪೦೭	,,
ಹಿಂದೂಸ್ತಾನ	೯೩೯	,,

ಗೋದಿಯ ತತ್ಸಮಾನ ಅಂಕಿಗಳಿವು

ಜಪಾನ	೨೦೧೦	ಪೌಂಡು
ಇಟಲಿ	೧೩೭೪	,,
ಕೆನಡಾ	೧೧೯೭	,,
ಇಂಗ್ಲಂಡ್	೨೦೪೫	,,
ಹಿಂದುಸ್ತಾನ	೭೭೪	,,

(೫) ಸರಕಾರಿ ಹೇಳಿಕೆಗಳು ಇನ್ನೂ ಸೂಚಿಸುವ ದೇನೆಂದರೆ, ಯೋಗ್ಯ ಉಗ್ರಾಣದ ವ್ಯವಸ್ಥೆಗಳ ಕೊರತೆಯ ಕಾರಣದಿಂದ ಇಲಿ ಹೆಗ್ಗಣ; ಹೆಳ, ಹುಪ್ಪಡಿ ಮೊದಲಾದವುಗಳ ಬಾಳಿಯೂಗಿ ವರ್ಷಕ್ಕೆ ೧೦ ಲಕ್ಷ ಟನ್ ಆಹಾರ ಧಾನ್ಯಗಳು ನಾಶವಾಗುತ್ತವೆ.

(೬) ಕೃಷಿ ಯೋಗ್ಯವಾಗಿದ್ದರೂ ಕೃಷಿ ಮಾಡಲ್ಪಡದಿರುವ ೯ ಕೋಟಿ ಎಕರೆ ಪತ ಭೂಮಿ ಬಿದ್ದಿದೆ.

(೭) ಕೊನೆಯದಾಗಿ "ವ್ಯಾಪಾರಿ ಪೈರುಗಳು" ಅಥವಾ "ಹಣದ ಪೈರುಗಳು" ಇವು ೧೯೦೦ರಲ್ಲಿ ವ್ಯಾಪಾರಿ ಪೈರುಗಳಿಗೆ ಎಳೆಗಾಗಿದ್ದ ಭೂಮಿ ೧೬೫ ಲಕ್ಷ ಎಕರೆ. ೧೯೩೦ ರಲ್ಲಿ ಈ ಅಂಕೆ ೨೪೦ ಲಕ್ಷ ಎಕರೆಗೇರಿತು. ಈ ಅವಧಿಯಲ್ಲಿ ಎಣ್ಣೆ ಕಾಳುಗಳನ್ನು ಬೆಳೆಯುತ್ತಿದ್ದ ಭೂಮಿಯ ಪ್ರಮಾಣ ೧೩೦ ಲಕ್ಷ ಎಕರೆಯಿಂದ ೧೬೦ ಲಕ್ಷ ಎಕರೆಗೇರಿತು. (೧೦ ನೆಯ ಪುಟ ನೋಡಿರಿ

ಮದ್ಯ ನಿಷೇಧ ಶಾಸನ
"ತಪ್ಪಿತಸ್ಥರನ್ನು ಕ್ರೂರವಾಗಿ ಶಿಕ್ಷಿಸುವೆವು"
(ಶ್ರೀ ಕೋಟಿರೆಡ್ಡಿ)

ಮದ್ರಾಸ್ ಪ್ರಾಂತ್ಯದಲ್ಲಿ ಮದ್ಯನಿಷೇಧ ಶಾಸನವು 1-10-46 ರಿಂದ ಜಾರಿಗೆ ಬಂದದ್ದು ಸರಿಯಷ್ಟೆ 29 ನೆಯ ತಾ. ಇದರ ಸಂಬಂಧದ ಶಾಖೆಯ ಮಂತ್ರಿಗಳಾದ (ಎಕ್ಸಾಯ್ಸ್) ಶ್ರೀ ಕೋಟಿರೆಡ್ಡಿಯವರು ಕಲೆಕ್ಟರ್‌ರ ಕಛೇರಿಯಲ್ಲಿ ಅಧಿಕಾರಿಗಳಿಗೂ, ಅಧಿಕಾರೇತರಿಗೂ ಈ ಶಾಸನವನ್ನು ಜಾರಿಗೆ ತರುವುದರಲ್ಲಿ ಕೆಲ ಸಲಹೆಗಳನ್ನಿತ್ತರು.

" ಮದ್ಯ ಪಾನಕ್ಕಾಗಿ ಏರ್ಪಡಿಸಿದ ಅಂಗಡಿಗಳ ಆಡಳಿತವನ್ನು ಇದುವರೆವಿಗೆ ಮಾಡುತ್ತಿದ್ದ ಎಕ್ಸಾಯ್ಸ್ ಡಿಪಾರ್ಟ್‌ಮೆಂಟಿನವರೇ ಮದ್ಯ ನಿಷೇಧ ಶಾಸನವಾಡಲು ಸರ್ಕಾರದಿಂದ ನಿಯುಕ್ತರಾದುದು ಸಂಶಯಗಳಿಗೆ ಕಾರಣವಾಗಿದೆ ಹೀಗೆ ಅಧಿಕಾರಿಗಳ ವಿಷಯದಲ್ಲಿ ಅಪನಂಬಿಕೆ ಬೇಡ ಸರ್ಕಾರದ ನೀತಿಯನ್ನು ಜಾರಿಗೆ ತರುವುದರಲ್ಲಿ ಅವರಿಗೆಲ್ಲಾ ಉತ್ಸಾಹವಿದೆ. ಸರ್ಕಾರ ಸಾರ್ವಜನಿಕರು ಎಂಬ ಭೇದವನ್ನು ಮರೆತು ಎಲ್ಲರೂ ಉತ್ಸಾಹದಿಂದ ಗುರಿಯನ್ನು ಸಾಧಿಸಬೇಕು. ಭಾರತದಲ್ಲಿನ ಎಲ್ಲಾ ಧರ್ಮಗಳೂ ಮದ್ಯವಾನವನ್ನು ನಿಷೇಧಿಸಿವೆ. ಅಮೆರಿಕಾದಲ್ಲಿ ಯಶಶ್ವಿಯಾಗದ ಈಯೋಜನೆಯು ಇಲ್ಲಿ ಯಶಶ್ವಿಯಾಗುವುದರಲ್ಲಿ ಎಳ್ಳಷ್ಟು ತಪಕ ಪಡಬೇಕಾಗಿಲ್ಲ.

ಜಿಲ್ಲಾ ಕಲೆಕ್ಟರವರು ಹೆಚ್ಚಿನ ಉತ್ಸಾಹದಿಂದ ಕೆಲಸಮಾಡಿ ಸಹಕರಿಸಿದರೆ ಇದು ಖಂಡಿತವಾಗಿ ಯಶಶ್ವಿಯಾಗುತ್ತದೆ. ಖೂನಿಯು ಎಲ್ಲೇ ಆಗಲಿ, ಕುಡಿತದ ಕೆಡುಕು ತಡೆಹಿಡಿಯಲ್ಪಟ್ಟರೆ, ಅನೇಕ ಅಪರಾಧಗಳು ಮಾಯವಾಗುತ್ತವೆ. ಪೋಲೀಸರ ಮತ್ತು ಕ್ರಿಮಿನಲ್ ಕೋರ್ಟುಗಳ ಕೆಲಸವೇ ಇಲ್ಲದಂತಾಗುತ್ತದೆ.

ಇನ್ನು ಶಾಸನವು ಜಾರಿಯಲ್ಲಿರುವ ಕಾಲಕ್ಕೆ, ಕುಡುಕರಿಗಿಂತಲೂ ಕಳ್ಳ ಭಟ್ಟಿ ಇಳಿಸುವ ಜನರಿಂದ ಹೆಚ್ಚು ಅಪಾಯವಿದೆ. ಅವರನ್ನು ಕ್ರೂರವಾಗಿ ಶಿಕ್ಷಿಸುತ್ತೇವೆ. ಕಾಯ್ದೆಯಲ್ಲಿ ಹೆಚ್ಚಿನಶಿಕ್ಷೆಯನ್ನು ಅವರು ಅನುಭವಿಸಬೇಕಾಗಬಹುದು. ಇನ್ನು ಲಂಚದ ಆರೋಪವು ಸ್ಥಿರಪಟ್ಟರೆ ಅಧಿಕಾರಿಗಳೂ ಮನೆಗೆ ಹೋಗಬೇಕಾಗಬಹುದು. ಕೂಲಂಕಷವಾಗಿ ವಿಚಾರಿಸದೆ ಯಾವ ಚರ್ಯೆಯನ್ನೂ ತೆಗೆದುಕೊಳ್ಳುವುದಿಲ್ಲ.

ಶ್ರೀ ವೀರಾಸ್ವಾಮಿಯವರು ಕೇಳಿದ ಪ್ರಶ್ನೆಗಳಿಗೆ ಕಲೆಕ್ಟರವರೂ ಮಂತ್ರಿಗಳೂ ಸಮರ್ಪಕ ಉತ್ತರ ಕೊಟ್ಟರು. ಅಧಿಕಾರಿಗಳ ಪರವಾಗಿ ಕಲೆಕ್ಟರವರೂ. ಇತರರ ಪರವಾಗಿ ಶ್ರೀ ಬಿ. ಭೀಮರಾಯರೂ ವಂದನಾರ್ಪಣೆಮಾಡಿ, ಮದ್ಯನಿಷೇಧವನ್ನು ಜಾರಿಗೆ ತರುವುದರಲ್ಲಿ ಸಂಪೂರ್ಣವಾಗಿ ಸಹಕರಿಸುವೆವೆಂದು ವಚನವಿತ್ತರು.

ಶ್ರೀ ಬಿ. ಯಸ್. ಮೂರ್ತಿ.

ಮದ್ರಾಸ್ ಲೇಬರ ಶಾಖೆಯ ಪಾರ್ಲಮೆಂಟರಿ ಕಾರ್ಯದರ್ಶಿಗಳಾದ ಶ್ರೀ ಬಿ. ಯಸ್. ಮೂರ್ತಿಯವರು 30 ನೆಯ ತಾ. ಇಲ್ಲಿಬಂದು ಆಜಾದ್ ಕ್ಲಬ್ ಶ್ರೀರಾಂಪುರ, ಕೌಲುಬಜಾರು ದತ್ತಾತ್ರೇಯ ಮಂದಿರ ಮತ್ತು ಕಡಪಕೇರಿ ತಾರಾಶಾಲೆಗಳಲ್ಲಿನ ಸಭೆಗಳಲ್ಲಿ ಭಾಷಣ ಮಾಡಿದರು. ಆಜಾದ್ ಕ್ಲಬ್ ನವರು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಶ್ರೀ ಜಿ. ಹೆಚ್. ಕೃಷ್ಣಸಿಂಗರು ಸ್ವಾಗತ ಭಾಷಣ ಮಾಡಿ ಯುವಕರ ಜಾಗ್ರತೆಗಾಗಿ ಶ್ರಮಿಸುತ್ತಿರುವ ಶ್ರೀ ಮೂರ್ತಿಯವರನ್ನು ಅಭಿನಂದಿಸಿದರು.

ಬಂಗಾಳದಲ್ಲಿ ಶಾಂತಿಯಿಲ್ಲ

ಕಲ್ಕತ್ತೆಯಲ್ಲಿ ಜಾತೀಯ ಗಲಭೆಯಿಂದ ಇರಿತ ಮರಣಗಳು ಸಂಭವಿಸುತ್ತಲೇ ಇವೆ. ಪೂರ್ವ ಬಂಗಾಳದ ಚಿಟ್ಟಾಗಾಂಗ— ಢಾಕಾದ ಹಳ್ಳಿಗಳ ಭಾಗದಲ್ಲಿ ಬಹಳ ಅಪಾಯಕರವಾದ ಘಟನೆಗಳು ಆಗುತ್ತಲಿವೆ. ಹಿಂದೂ ಸ್ತ್ರೀಯರ ಅಪಹರಣವು ನಡೆಯುತ್ತಲಿದೆ

ಮದ್ಯ ನಿಷೇಧ ಶಾಸನ
"ತಪ್ಪಿತಸ್ಥರನ್ನು ಕ್ರೂರವಾಗಿ ಶಿಕ್ಷಿಸುವೆವು"
(ಶ್ರೀ ಕೋಟಿರೆಡ್ಡಿ)

ಮದ್ರಾಸ್ ಪ್ರಾಂತ್ಯದಲ್ಲಿ ಮದ್ಯನಿಷೇಧ ಶಾಸನವು 1-10-46 ರಿಂದ ಜಾರಿಗೆ ಬಂದಿದ್ದು ಸರಿಯಷ್ಟೆ 29 ನೆಯ ತಾ. ಇದರ ಸಂಬಂಧದ ಶಾಖೆಯ ಮಂತ್ರಿಗಳಾದ (ಎಕ್ಸಾಯ್ಸ್) ಶ್ರೀ ಕೋಟಿರೆಡ್ಡಿಯವರು ಕಲೆಕ್ಟರ್‌ರ ಕಛೇರಿಯಲ್ಲಿ ಅಧಿಕಾರಿಗಳಿಗೂ, ಅಧಿಕಾರೇತರಿಗೂ ಈ ಶಾಸನವನ್ನು ಜಾರಿಗೆ ತರುವುದರಲ್ಲಿ ಕೆಲ ಸಲಹೆಗಳನ್ನಿತ್ತರು.

" ಮದ್ಯ ಪಾನಕ್ಕಾಗಿ ಏರ್ಪಡಿಸಿದ ಅಂಗಡಿಗಳ ಆಡಳಿತವನ್ನು ಇದುವರೆವಿಗೆ ಮಾಡುತ್ತಿದ್ದ ಎಕ್ಸಾಯ್ಸ್ ಡಿಪಾರ್ಟ್‌ಮೆಂಟಿನವರೇ ಮದ್ಯ ನಿಷೇಧ ಶಾಸನವಾಡಲು ಸರ್ಕಾರದಿಂದ ನಿಯುಕ್ತರಾದುದು ಸಂಶಯಗಳಿಗೆ ಕಾರಣನಾಗಿದೆ ಹೀಗೆ ಅಧಿಕಾರಿಗಳ ವಿಷಯದಲ್ಲಿ ಅಪನಂಬಿಕೆ ಬೇಡ ಸರ್ಕಾರದ ನೀತಿಯನ್ನು ಜಾರಿಗೆ ತರುವುದರಲ್ಲಿ ಅವರಿಗೆಲ್ಲಾ ಉತ್ಸಾಹವಿದೆ. ಸರ್ಕಾರ ಸಾರ್ವಜನಿಕರು ಎಂಬ ಭೇದವನ್ನು ಮರೆತು ಎಲ್ಲರೂ ಉತ್ಸಾಹದಿಂದ ಗುರಿಯನ್ನು ಸಾಧಿಸಬೇಕು. ಭಾರತದಲ್ಲಿನ ಎಲ್ಲಾ ಧರ್ಮಗಳೂ ಮದ್ಯಪಾನವನ್ನು ನಿಷೇಧಿಸಿವೆ. ಅಮೆರಿಕಾದಲ್ಲಿ ಯಶಸ್ವಿಯಾಗದ ಈಯೋಜನೆಯು ಇಲ್ಲಿ ಯಶಸ್ವಿಯಾಗುವುದರಲ್ಲಿ ಎಳ್ಳಷ್ಟು ತವಕ ಪಡಬೇಕಾಗಿಲ್ಲ.

ಜಿಲ್ಲಾ ಕಲೆಕ್ಟರವರು ಹೆಚ್ಚಿನ ಉತ್ಸಾಹದಿಂದ ಕೆಲಸಮಾಡಿ ಸಹಕರಿಸಿದರೆ ಇದು ಖಂಡಿತವಾಗಿ ಯಶಸ್ವಿಯಾಗುತ್ತದೆ. ಖೂನಿಯು ಎಲ್ಲೇ ಆಗಲಿ, ಕುಡಿತದ ಕೆಡುಕು ತಡೆಹಿಡಿಯಲ್ಪಟ್ಟರೆ, ಅನೇಕ ಅಪರಾಧಗಳು ಮಾಯವಾಗುತ್ತವೆ. ಪೋಲೀಸರ ಮತ್ತು ಕ್ರಿಮಿನಲ್ ಕೋರ್ಟುಗಳ ಕೆಲಸವೇ ಇಲ್ಲದಂತಾಗುತ್ತದೆ.

ಇನ್ನು ಶಾಸನವು ಜಾರಿಯಲ್ಲಿರುವ ಕಾಲಕ್ಕೆ, ಕುಡುಕರಿಗಿಂತಲೂ ಕಳ್ಳ ಭಟ್ಟಿ ಇಳಿಸುವ ಜನರಿಂದ ಹೆಚ್ಚು ಅಪಾಯವಿದೆ. ಅವರನ್ನು ಕ್ರೂರವಾಗಿ ಶಿಕ್ಷಿಸುತ್ತೇವೆ. ಕಾಯ್ದೆಯಲ್ಲಿ ಹೆಚ್ಚಿನಶಿಕ್ಷೆಯನ್ನು ಅವರು ಅನುಭವಿಸಬೇಕಾಗಬಹುದು. ಇನ್ನು ಲಂಚದ ಆರೋಪವು ಸ್ಥಿರಪಟ್ಟರೆ ಅಧಿಕಾರಿಗಳೂ ಮನೆಗೆ ಹೋಗಬೇಕಾಗಬಹುದು. ಕೂಲಂಕಷವಾಗಿ ವಿಚಾರಿಸದೆ ಯಾವ ಚರ್ಯೆಯನ್ನೂ ತೆಗೆದುಕೊಳ್ಳುವುದಿಲ್ಲ.

ಶ್ರೀ ವೀರಾಸ್ವಾಮಿಯವರು ಕೇಳಿದ ಪ್ರಶ್ನೆಗಳಿಗೆ ಕಲೆಕ್ಟರವರೂ ಮಂತ್ರಿಗಳೂ ಸಮರ್ಪಕ ಉತ್ತರ ಕೊಟ್ಟರು. ಅಧಿಕಾರಿಗಳ ಪರವಾಗಿ ಕಲೆಕ್ಟರವರೂ. ಇತರರ ಪರವಾಗಿ ಶ್ರೀ ಬಿ. ಭೀಮರಾಯರೂ ವಂದನಾರ್ಪಣೆಮಾಡಿ, ಮದ್ಯನಿಷೇಧವನ್ನು ಜಾರಿಗೆ ತರುವುದರಲ್ಲಿ ಸಂಪೂರ್ಣವಾಗಿ ಸಹಕರಿಸುವೆವೆಂದು ವಚನವಿತ್ತರು.

ಶ್ರೀ ಬಿ. ಯಸ್. ಮೂರ್ತಿ.

ಮದ್ರಾಸ್ ಲೇಬರ ಶಾಖೆಯ ಪಾರ್ಲಮೆಂಟರಿ ಕಾರ್ಯದರ್ಶಿಗಳಾದ ಶ್ರೀ ಬಿ. ಯಸ್. ಮೂರ್ತಿಯವರು 30 ನೆಯ ತಾ. ಇಲ್ಲಿಬಂದು ಆಜಾದ್ ಕ್ಲಬ್ ಶ್ರೀರಾಂಪುರ, ಕೌಲುಬಜಾರು ದತ್ತಾತ್ರೇಯ ಮಂದಿರ ಮತ್ತು ಕಡಪಕೇರಿ ತಾರಾಶಾಲೆಗಳಲ್ಲಿನ ಸಭೆಗಳಲ್ಲಿ ಭಾಷಣ ಮಾಡಿದರು. ಆಜಾದ್ ಕ್ಲಬ್ ನವರು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಶ್ರೀ ಜಿ. ಹೆಚ್. ಕೃಷ್ಣಸಿಂಗರು ಸ್ವಾಗತ ಭಾಷಣ ಮಾಡಿ ಯುವಕರ ಜಾಗ್ರತೆಗಾಗಿ ಶ್ರಮಿಸುತ್ತಿರುವ ಶ್ರೀ ಮೂರ್ತಿಯವರನ್ನು ಅಭಿನಂದಿಸಿದರು.

ಬಂಗಾಳದಲ್ಲಿ ಶಾಂತಿಯಿಲ್ಲ.

ಕಲ್ಕತ್ತೆಯಲ್ಲಿ ಜಾತೀಯ ಗಲಭೆಯಿಂದ ಇರಿತ ಮರಣಗಳು ಸಂಭವಿಸುತ್ತಲೇ ಇವೆ. ಪೂರ್ವ ಬಂಗಾಳದ ಚಿಟ್ಟಾಗಾಂಗ— ಢಾಕಾದ ಹಳ್ಳಿಗಳ ಭಾಗದಲ್ಲಿ ಬಹಳ ಅಪಾಯಕರವಾದ ಘಟನೆಗಳು ಆಗುತ್ತಲಿವೆ. ಹಿಂದೂ ಸ್ತ್ರೀಯರ ಅಪಹರಣವು ನಡೆಯುತ್ತಲಿದೆ

ಮಹಾತ್ಮ ಗಾಂಧಿಯವರ ಲೇಖನಗಳು

ಆಹಾರ ಕೊರತೆ.

ವಾತಾವರಣದಲ್ಲಿ ಭೀತಿ ಮುಸುರಿದಾಗ ಉಂಟಾಗುವ ವ್ಯಾಕುಲತೆಗಿಂತ ತೀವ್ರವಾದುದು ಬೇರೊಂದಿಲ್ಲ. ಇಲ್ಲಿ ನನಗೊಂದು ಸನ್ನಿವೇಶ ನೆನಪಿಗೆ ಬರುತ್ತದೆ. ಸಾಬರಮತಿ ನದಿಯಲ್ಲಿ ನೀರು ಸುಮಾರು ಹೆಚ್ಚಾಗಿಯೇ ಏರಿತ್ತು. ಮಧ್ಯರಾತ್ರಿ ಕಳೆದು ಹೋಗಿತ್ತು. ಇನ್ನೊಂದು ತಾಸಿಗೆ ಆಶ್ರಮದಲ್ಲಿ ನೀರು ನುಗ್ಗುವದು. ಮತ್ತು ನಾವು ಅದನ್ನು ತೆರವು ಮಾಡಿ ಹೋಗದಿದ್ದರೆ ನಾವೆಲ್ಲರೂ ಮುಳುಗಿ ಹೋಗುವ ಸಂಭವವುಂಟು ಎಂದು ಸರದಾರ ಪಟೇಲರು ಹೇಳಿ ಕಳಿಸಿದ್ದರೆಂದು ಸುದ್ದಿ ಬಂತು. ನಮಗೆ ಸ್ತ್ರೀ ಪುರುಷ ಬಾಲಕರಿಗೆಲ್ಲ ಅದು ಬಹಳ ಕಾತರದ ಗಳಿಗೆಯಾಯಿತು. ಉಗ್ರ ಜಲಪ್ರವಾಹ ಸೊತ್ತುಗಳಿಗಷ್ಟೆತುಸು ಹಾನಿಯೊದಗಿಸಿ ಶಾಂತವಾಗಿ ಇಳಿಯ ತೊಡಗಿದೆಯೆಂದೂ ಪ್ರಾಣಹಾನಿಯ ಭಯವಿಲ್ಲೆಂದೂ ತಿಳಿದು ಬಂದ ನಂತರ ಸಮಾಧಾನದ ನಿಟ್ಟುಸಿರೊಂದು ಆಕಾಶದತ್ತ ಹರಿದು ಹೊಯಿತು.

ಇದೇ ರೀತಿಯಲ್ಲಿ ಅಧಿಕಾರಿ ವರ್ಗಗಳ ವರದಿಗಳಿಂದ ತೋರಿ ಬರುವ ಕೊರತೆಯು ಗಂಡಾಂತರವೂ ನನ್ನನ್ನು ಗಾಬರಿಗೊಳಿಸುವದರಲ್ಲಿ ಸಮರ್ಥವಿಲ್ಲ. ಇದು ನಿಜವಾದ ಉಪವಾಸಕ್ಕಿಂತಲೂ ಅವಾಯಕರ. ತಿರುವಾಂಕೂರಿನ ಎದೆಗಾರ ದಿವಾಣರು ತಮ್ಮ ಸಂಸ್ಥಾನದಲ್ಲಿ ಬರಿ ಎರಡು ವಾರಗಳ ಆಹಾರ ಸಂಗ್ರಹವುಂಟೆಂದು ಗಂಭೀರವಾಗಿ ಪ್ರತಿಪಾದಿಸಿದ ಸುದ್ದಿಯನ್ನು ಪತ್ರಿಕೆಯಿಂದ ಓದಿಸಿ ಕೇಳಿದಾಗ ನನ್ನ ಅವಸ್ಥೆಯೂ ಇದೇ ಬಗೆಯಾಯಿತು. ತಿರುವಾಂಕೂರಿನ ಆದ್ಯಂತವಸ್ಥೆಲ್ಲ ಅರಿತವನಾನು, ತಿರುವಾಂಕೂರಿನಲ್ಲಿ ಮಾತ್ರವಲ್ಲ. ಇಡಿ ಹಿಂದೂಸ್ತಾನದಲ್ಲಿ ಸಂಭವಿಸ ಬಹುದಾದ ಅನಾಹುತಗಳನ್ನೆಲ್ಲ ಕಲ್ಪಿಸಿ ಕಲ್ಪಿಸಿ ಚಿಂತೆಗೊಳಗಾದೆನು. ಗಡ್ಡೆ ಗೆಣಸು, ತೆಂಗಿನಕಾಯಿ, ಮೀನು ಧಾರಾಳವಾಗಿ ಬೆಳೆಯುವ ತಿರ್ವಾಂಕೂರು, ಹಿಂದುಸ್ತಾನದ ಬೇರೆ ಭಾಗಗಳಿಂದ ಏನೂ ಬಾರದಿದ್ದರೆ ಸಹ,ಒಂದು ದಿನವೂ ಉಪವಾಸ ಬೀಳಬೇಕಾಗಿದ್ದಿಲ್ಲ. ತಿರ್ವಾಂಕೂರಿನಲ್ಲಿ ನನಗಿದ್ದ ವಿಶ್ವಾಸವೊಂದೇ ನನಗೆ ಧೈರ್ಯಕೊಟ್ಟಿತು. ಕೊರತೆ ಬಿದ್ದಿರುವದು ಆಹಾರದ್ದಲ್ಲ. ಅದರೆ ಗೋಧಿ ಅಕ್ಕಿಗಳದೆಂದು ಮತ್ತೆ ತಿಳಿದು ಬಂದಾಗ ನನಗಾದ ಆನಂದ ಅಷ್ಟಿಷ್ಟಲ್ಲ. ತಿರ್ವಾಂಕೂರು ಅಕ್ಕಿಯನ್ನು ಬಿಳಿಯುಬಲ್ಲದಲ್ಲದೆ ಗೋದಿಯನ್ನೆಲ್ಲ ಧಾನ್ಯಗಳ ಮಟ್ಟಿಗೆ ತಿರ್ವಾಂಕೂರಿನ ನಿವಾಸಿಗಳು ಅಕ್ಕಿಯನ್ನು ಅವಲಂಬಿಸುವವರು. ಅವರು ಗೋಧಿಯನ್ನು ಉಪಾಯವಿಲ್ಲದಾಗ, ಅದೂ ಬಹಳ ಕಷ್ಟದಿಂದ ಬಳಸುತ್ತಾರೆ. ಇಂದಿನ ಸಂಕಷ್ಟ ಪರಿಸ್ಥಿತಿಯಿಂದಾದರೂ ನಾವು ನಮ್ಮ ವ್ಯಾಂಶಿಕತೆಯನ್ನು ತೊರೆದು ಹಿಂದೂಸ್ತಾನದಲ್ಲೆಲ್ಲ ಒಂದೇ ಬಗೆಯ ಅಭ್ಯಾಸಗಳನ್ನು ಇಟ್ಟುಕೊಳ್ಳುವಂತಾದರೆ ಎಷ್ಟು ಒಳಿತಾಗುತಿತ್ತು. ಹಾಗಾದರೆ ಈ ದೇಶದ ಯಾವ ಭಾಗದಲ್ಲಿ ಇರುವ ಕಾಲ ಬಂದರೂ ನಾವು ತೊಂದರೆ ಪಟ್ಟುಕೊಳ್ಳದೆ ಬಾಳಬಲ್ಲೆವು. ಸಧ್ಯಕ್ಕಂತೂ ಹಿಂದೂಸ್ತಾನದಲ್ಲಿರುವ ಹೊಣೆಗಾರ ಜನರೆಲ್ಲರೂ ತಮ್ಮ ತಮ್ಮ ವ್ಯಾಂತ, ಜಿಲ್ಲಾ, ಸಂಸ್ಥಾನಗಳ ಜನರಿಗೆ ಹಿಂದುಸ್ತಾನದ ಹೊರಗಿಂದ ಆಹಾರ ಪೂರೈಕೆಯನ್ನು ನಿರೀಕ್ಷಿಸದೆ ತಾವೇ ಸಾಧ್ಯವಿದ್ದಷ್ಟು ಬೆಳಸಿಕೊಂಡು ತಮ್ಮ ಹುಟ್ಟುವಳಿಯಂದಲೇ ಜೀವನ ಸಾಗಿಸಲು ಕಲಿಯಬೇಕೆಂದು ಉಪದೇಶಿಸಿದರೆ ಸಾಕು.

ನನಗೆ ಬರುತ್ತಿರುವ ಅನೇಕ ಪತ್ರಗಳು ನಿಜಸ್ಥಿತಿಯನ್ನು ಇದ್ದಕ್ಕಿದ್ದಂತೆ ಅಧಿಕವಾ ಇರಬೇಕಾದಂತೆ ಬಣ್ಣಿಸುತಿದ್ದರೆ, ಜೀವ ನದಾಯಿಯಾದ ಕಾಯಿಪಲ್ಲೆಗಳೊಡನೆ ಶಾಕಾಹಾರಿಗಳಿಗೆ ಸ್ವಲ್ಪ ಹಾಲು, ಮಾಂಸ ಹಾರಿಗಳಿಗೆ ಸ್ವಲ್ಪ ಮೀನು, ಮಾಂಸ ಇಲ್ಲವೆ ಕೋಳಿ

ಇವುಗಳ ಅಭಾವವುಂಟಾಗುವ ಭಯವಿಲ್ಲದ್ದರಿಂದ ನಾವು ನಿರಾಹಾರದ ಗಂಡಾಂತರಕ್ಕೆ ಬೆದರಬೇಕಾಗಿಲ್ಲ.

ನಮ್ಮ ಸೀಮೆಯ ಹೊರಗಿಂದ ನಮಗೆ ಹೇಳಿ ಕೊಳ್ಳುವಷ್ಟು ಆಹಾರ ಪೂರೈಕೆ ಸಿಗುವಂತಿಲ್ಲವೆಂದು ಹಿಂದೂಸ್ತಾನ ಮನಗಾಣಲಿ. ನೆರವು ನೀಡಲು ಬಯಸುವವರಿಗೇನು ಕೊರತೆಯಿಲ್ಲ. ಆದರೆ ಅವರೂ ಬಹಳ ಮಟ್ಟಿಗೆ ಸೀಮಿತರು. ಇನ್ನು ಕೆಲವರಲ್ಲಿ ಬಂದಿರುವ ಬೇಡಿಕೆಗಳು ಅವರ ಶಕ್ತಿಗೆ ಮೀರಿದಷ್ಟು ಇವೆ. ಅಮೆರಿಕ್ಕಿನಂಥ ಸಾರಿಗೆಯ ತೊಡಕುಗಳು ವಿಶೇಷವಾಗಿವೆ. ಹೊರಗಿಂದ ಆಹಾರ ಬಂದು ನಮ್ಮ ತೀರದಲ್ಲಿ ಬಿದ್ದಾಗ ನಮಗೂ ಆ ತೊಡಕು ತಪ್ಪಿದ್ದಲ್ಲ. ಅಂತರಿಕ ಸಾರಿಗೆ ಹೆಂಚಿಕೆಗಳು ಚಿಕ್ಕ ಸಮಸ್ಯೆಗಳಲ್ಲ. ಆದುದರಿಂದ, ವಿವೇಕದ ಹಾದಿಯೆಂದರೆ ಹೊರಾಟಕ್ಕೆ ನಾವೇ ಟೊಂಕಕಟ್ಟಿ ನಮ್ಮ ಆಹಾರವನ್ನು ನಾವೇ ಹುಟ್ಟಿಸಿ ಕೊಳ್ಳುವೆವು. ಇಲ್ಲವೆ ಆ ಪ್ರಯತ್ನದಲ್ಲಿ ಅವಶ್ಯವಾದರೆ ಪ್ರಾಣಕೊಡುವೆವು, ಎಂಬ ಧೀರ ಪ್ರತಿಜ್ಞೆಯನ್ನು ತೊಡುವದು.

ಇದೊಂದೇ ತರಣೋಪಾಯ— ಎರಡನೆಯದಿಲ್ಲ.

ಆಹಾರ ಸೀದಾ (ರೇಷನ್)

ಹಿಂದುಸ್ಥಾನದಲ್ಲಿ ಆಹಾರ ಸೀದಾ ಕಾರ್ಯದಲ್ಲಿ ಒಂದು ತಪ್ಪು ನೂಡುತ್ತಾರೆ. ಸಂಗ್ರಹ, ಸಾರಿಗೆ ಉಗ್ರಾಣ, ವಿತರಣ ಇವೆಲ್ಲವುಗಳ ವೆಚ್ಚವನ್ನು ಆಹಾರದ ಬೆಲೆಗೆ ಸೇರಿಸಿ ಬಿಡುವುದೇ ಆ ತಪ್ಪು. ಪರಿಣಾಮವಾಗಿ ಆಹಾರವನ್ನು ಹುಟ್ಟಿಸಿದವನಿಗೆ ಸಿಗುವ ಮೌಲ್ಯಕ್ಕೂ ಒಳಸುಬನನು ಕೊಡುವ ಬೆಲೆಗೂ ನೂರಕ್ಕೆ 30 ರಿಂದ 50 ಕ್ಕೆ ಕಡಿಮೆಯಿಲ್ಲದಷ್ಟು (ಒಮ್ಮೊಮ್ಮೆ ಅದಕ್ಕೂ ಹೆಚ್ಚು) ಅಂತರ ಕಾಣುತ್ತದೆ. ಬೆಲೆಗಳ ಈ ಅಂತರದ ಫಲಗಳು ಇಂತಿವೆ.

(೧) ತಾನು ಮಾರಿದರೆ ವಿ ಎಂದೆ ಕೊಳ್ಳಬೇಕಾದ ಪ್ರಸಂಗದಲ್ಲಿ ತನಗೆ ದೊರೆತ ಬೆಲೆಗಿಂತ ಹೆಚ್ಚು ತೆರ ಬೇಕಾಗುವದೆಂಬ ಭಯದಿಂದ ಉತ್ಪಾದಕನು ಆಹಾರವನ್ನು ಮೂರಲು ಹಿಂದೆ ಮುಂದೆ ನೋಡುತ್ತಾನೆ.

(೨) ಸರಕಾರದ ನಿಯಂತ್ರಣ ಮತ್ತು ಹಸ್ತಕ್ಷೇಪದ ಭಯದಿಂದ ರೈತನು ಹೆಚ್ಚು ಹೆಚ್ಚು ಬಿತ್ತಲು ಮನಸು ಮಾಡುವದಿಲ್ಲ.

(೩) ಲಾಭಾಂಶ ಬಹಳವಾಗಿರುವದರಿಂದ ಕಳ್ಳ ಪೇಟೆಯಲ್ಲಿ ಮೂರಲು ಅವನಿಗೆ ಉತ್ತೇಜನ ಸಿಗುತ್ತದೆ.

ಆದುದರಿಂದ ಆಹಾರ ನಿಯಂತ್ರಣದ ಅನುಷಂಗಿಕ ವೆಚ್ಚಗಳನ್ನೆಲ್ಲ (ಸಂಗ್ರಹ ಇತ್ಯಾದಿ) ಸರಕಾರವೇ ವಹಿಸಿ ಆಹಾರವನ್ನು ಉತ್ಪಾದಕನಿಂದ ಕೊಂಡ ಬೆಲೆಗೇ ಬಳಸುವವನಿಗೆ ಮಾರಬೇಕು.

ಇದಲ್ಲದೆ ಆಹಾರದ ಬೆಲೆಯನ್ನು ಒಂದರಿಂದ ಮೂರು ವರ್ಷ ಮುಂಚಿತವಾಗಿಯೇ ಗೊತ್ತುಪಡಿಸಬೇಕು. ಇದರಿಂದ ಆಹಾರದ ಉತ್ಪಾದಕನಿಗೂ ಬಳಸುವವನಿಗೂ ತನಗೆ ಸಿಗುವ ಇಲ್ಲವೆ ತಾನು ತೆರಬೇಕಾದ ಬೆಲೆಯೆಷ್ಟೆಂಬುದು ಮುಂಚಿತವಾಗಿಯೇ ತಿಳಿದು ಅನುಕೂಲವಾಗುತ್ತದೆ.

ಆಹಾರ ಧಾನ್ಯವು ಹೇಗೆ ಹಾಳಾಗುತ್ತಿದೆ.

ಅಕ್ಷಮ್ಯ--ಅಪವ್ಯಯ

ಸ್ವಂತ ಅನುಭವದಿಂದ ಬರೆದ ದೀರ್ಘವಾದ ಒಂದು ಪತ್ರದ ಸಾರಾಂಶವನ್ನು ಕೆಳಗೆ ಕೊಡಲಾಗಿದೆ ಲೇಖಕರು. ಸಂಬಂಧಪಟ್ಟ ಅಧಿಕಾರಿಗಳ ಅವ್ಯವಸ್ಥೆಯಿಂದಾಗಲೀ, ಅಯೋಗ್ಯ ಆಚರಣೆಯಿಂದಾಗಲೀ ಎಷ್ಟು ದೊಡ್ಡ ಪ್ರಮಾಣದಲ್ಲಿ ಧಾನ್ಯವು ಹಾಳಾಗುತ್ತಿರುವದೆಂಬುದನ್ನು ಐದು ಉದಾಹರಣೆಗಳಿಂದ ತೋರಿಸಿದ್ದಾರೆ.

(೧) ಸಂಗ್ರಹದ ಬಗ್ಗೆ ಯೋಗ್ಯ ವ್ಯವಸ್ಥೆ ಇಲ್ಲದೆ ಇರುವದರಿಂದ ಇಲಿ, ಹೆಗ್ಗಣ, ಹುಳ, ಇವುಗಳಿಂದ ಧಾನ್ಯ ನಾಶವಾಗುವದು.

೨) ಅಂಗಡಿಗಳಲ್ಲಿ, ಗೂಡ್ಸುಗಾಡಿಗಳಲ್ಲಿ, ಸ್ಟೇಶನ್ ಪ್ಲಾಟುಫಾರ್ಮಿನಲ್ಲಿ ಆಹಾರ ಧಾನ್ಯಗಳನ್ನು ಮಳೆ ಹತ್ತುವಂತೆ ಮುಚ್ಚದೆ ಇಡುವದರಿಂದ.

(೩) ವಖಾರಗಳಲ್ಲಿ, ಕಿರಾಣಿ ಅಂಗಡಿಗಳಲ್ಲಿ ಧಾನ್ಯ ಗಳನ್ನು ಮುಚ್ಚದೇ ಲಕ್ಷಾಂತರ ಹಕ್ಕಿ ಪಕ್ಷಿಗಳು ಇಡೀ ವರ್ಷ ಕಾಳು ತಿಂದು ಬದುಕುವಂತೆ ರಾಶೀ ಹಾಕಿಡುವದರಿಂದ.

(೪) ಹಳೆಯ ಜೀರ್ಣವಾದ ಚೀಲಗಳನ್ನೇ ಧಾನ್ಯ ತುಂಬಲು ಉಪಯೋಗಿಸುವದರಿಂದ ದಾರಿಯಲ್ಲಿ ಕಾಳು ಉದುರಿ ಬಿದ್ದ ಇಲ್ಲವೆ ಚಪ್ಪವಾಗಿ ಕಡಿಮೆ ಯಾಗುವದರಿಂದ.

(೫)ಕಾಳನ್ನು ಸ್ವಚ್ಛ ಮಾಡದೇ ಕೊಳ್ಳುವ ಮಾರುವ ಪ್ರಚಲಿತ ಪದ್ಧತಿಯಿಂದ ಧಾನ್ಯ ಬೆಳೆಯುವವರಿಗೂ ಕೊಳ್ಳುವವರಿಗೂ ಹಾನಿಯಾಗುವದಿಷ್ಟೇ ಅಲ್ಲ ಅದ ರಿಂದ ವಿನಾಕಾರಣ ಸಾರಿಗೆ ವೆಚ್ಚದ ಹಾನಿಯೂ ಬರುವದು.

ಯೋಗ್ಯವಾದ ಧಾನ್ಯ ಭಂಡಾರಗಳಿಲ್ಲದ್ದರಿಂದ ಬರುವ ಹಾನಿಯೇ 35 ಲಕ್ಷ ಟನ್ನುಗಳಷ್ಟಾಗುವ ದೆಂದು ಮತ್ತು ಉಳಿದ ನಾಲ್ಕು ಕಾರಣಗಳಿಂದಾಗುವ ಹಾನಿ ಒಟ್ಟಿಗೆ ೧೫ ಲಕ್ಷ ಟನ್ನುಗಳಷ್ಟಾಗುವದೆಂದೂ ಅಂತೂ ಒಟ್ಟಿನ ಮೇಲೆ ೫೦,೦೦,೦೦೦ ಟನ್ನುಗಳ ನಾಶವು ಪ್ರತಿವರ್ಷ ಆಗುವದೆಂದು ಲೆಕ್ಕ ಮಾಡಲಾಗಿದೆ.

ಸಂಗ್ರಹದ ಯೋಗ್ಯ ವ್ಯವಸ್ಥೆ ಇಲ್ಲದಿರುವದರಿಂದ ಇಲಿ, ಹುಳಗಳು ಧಾನ್ಯದ ಉತ್ತಮ ಭಾಗವನ್ನು ತಿನ್ನಲಾಗಿ ನೂರಕ್ಕೆ ೫---೧೦ ರಷ್ಟು ಧಾನ್ಯದ ತೂಕ ಕಡಿಮೆಯಾಗುತ್ತದಿಷ್ಟೇ ಅಲ್ಲ. ಮಳೆಗಾಳಿಗೆ ಬಿದ್ದು ಧಾನ್ಯದ ಸತ್ವವೂ ಕಡಿಮೆಯಾಗುತ್ತದೆ. ಈ ಬಗ್ಗೆ ಧಾನ್ಯದ ವ್ಯಾಪಾರಿಗಳು ಚಿಂತಿಸುವದಿಲ್ಲ; ಅಧಿಕಾರಿ ಗಳು ಅಸ್ಥೆ ತೋರಿಸಿದರೂ ಅವರು ಅಸಮರ್ಥರು. ಆಲಸಿಗರೂ ಇದ್ದಾರೆ. ಪತ್ರ ಬರೆದವರು ಕೆಳಗಿನಂತೆ ಸೂಚಿಸುತ್ತಾರೆ. ಧಾನ್ಯದ ಸಂಗ್ರಹಕ್ಕಾಗಿ ವ್ಯಾಪಾರ ಸ್ತರು ಯೋಗ್ಯ ಕಟ್ಟಡಗಳನ್ನು ದೊರಕಿಸಿಕೊಳ್ಳಬೇ ಕೆಂದು ನಿರ್ಬಂಧಿಸುವ ಕಾನೂನು ಇರಬೇಕು. ಯೋಗ್ಯ ಕಟ್ಟಡವಿಲ್ಲದಿದ್ದರೆ ವ್ಯಾಪಾರಸ್ತನಿಗೆ ಮೂರುವ ಅಧಿಕಾರವನ್ನಾಗಲಿ,

ಅಥವ ಆ ಅಧಿಕಾರದ ಮುಂದರಿಕೆಯನ್ನಾಗಲಿ ಕೊಡಬಾರದು. ನೆಲವನ್ನು ಗೋಡೆಗಳನ್ನು ಗಚ್ಚು ಗಿರಿ ಮಾಡುವದರಿಂದಲೂ ಗೋಡೆಗಳಿಗೆ ಸುಣ್ಣ ಹಚ್ಚಿ ಜಂತಿಗಳನ್ನು ಸ್ವಚ್ಛಮಾಡಿ ಶುದ್ಧಗೊಳಿಸಿ ಬಾಗಿಲು ಗಳನ್ನೂ ಇಲಿಗಳು ಬರದಂತೆ ಭದ್ರಮಾಡಿ, ಗೋಡೆ ಗುಂಟ ಸುಟ್ಟ ಇಟ್ಟಿಂಗಿಯ ತೆಳ್ಳನ್ನ ಕಟ್ಟಿ ಕಟ್ಟುವದ ರಿಂದಲೂ ಇದ್ದ ವಖಾರಗಳನ್ನು ಧಾನ್ಯ ಸಂಗ್ರಹಕ್ಕೆ ಯೋಗ್ಯವನ್ನಾಗಿ ಮಾಡಿದರೆ ಕೂಡಲೇ ನೂರಕ್ಕೆ ೫೦ ರಷ್ಟು ಹಾನಿಯನ್ನೆ ತಡೆಯಬಹುದು. ಸ್ಥಿರವಾಗಿ ವಖಾರಗಳನ್ನು ಕಟ್ಟಿಸುವ ವಿಷಯದಲ್ಲಿ ಸರಕಾರವೇ ಮುಂದಾಗಿ ಉದಾಹರಣೆ ಹಾಕಿಕೊಡಬೇಕು; ಒಳ್ಳೇ ವಖಾರಗಳಿಂದಾಗುವ ಲಾಭವನ್ನು ಜನರಿಗೆ ತೋರಿಸ ಬೇಕು

ಲಾಹೋರ ಮತ್ತು ಲಾಯಲಪೂರ ನಡುವೆ ಸಂಚ ರಿಸಿದಾಗ ಚೀಲ ಗೋದಿಯು ಮುಚ್ಚದೇ ಮೋಟಾರು ಗಳಲ್ಲಿಯೂ, ಗಾಡಿ ಚೀಲಗಳ ಮೇಲೆಯೂ ಮಳೆ ಜಡಿ ಯುತ್ತಿದ್ದಾಗ ಬಿದ್ದದ್ದು ನೋಡಿರುವದಾಗಿ ಲೇಖಕರು ಹೇಳುತ್ತಾರೆ ಆಗ ಧಾನ್ಯದ ರಕ್ಷಣೆಯ ಜವಾಬುದಾರಿ ಯುಳ್ಳ ಸ್ಥಾನಿಕ ಅಧಿಕಾರಿಗಳಲ್ಲಿ ಯಾರೂ ಕಾಳು ಹಾಳಾಗುವದನ್ನು ತಡೆಯಲು ಎಳ್ಳಷ್ಟೂ ಪ್ರಯತ್ನ ಮಾಡಲಿಲ್ಲ. ಅಂದಿನ ದಿವಸ ೪೦,೦೦೦ ಮಣ ಗೋದಿ ಹೀಗೆ ಮಳೆಯಲ್ಲಿ ತೊಯಬಿದ್ದಿತು. ಇದನ್ನು ಪತ್ರ ಬರೆದವರು ಪ್ರತ್ಯಕ್ಷ ಕಂಡಿದ್ದಾರೆ ಇಡೀ ದೇಶದತುಂಬ ಬೇರೆ ಬೇರೆ ಸ್ಥಳಗಳಲ್ಲಿಯೂ ಇದೇ ಸ್ಥಿತಿ ಇರುವದು. ಹೊಸ ಚೀಲದಲ್ಲಿ ಚಿಲವನ್ನು ಹಾಕಿ ಅದರಲ್ಲಿ ಧಾನ್ಯ ತುಂಬಿದರೆ ಉದುರಿ ಹಾಳಾಗುವ ಕಾಳನ್ನು ಉಳಿಸ ಬಹುದು.

(9 ನೇ ಪುಟ ನೋಡಿರಿ.)

ಒಕ್ಕುವ ಸ್ಥಳದಲ್ಲಿಯೇ ಧಾನ್ಯವನ್ನು ಹಸನ ಮಾಡಿಸುವದು ಉಚಿತವೆನಿಸುತ್ತಿದೆ. ಇದರಿಂದ ಕಾಳು ಬೆಳೆಯುವವನಿಗೆ ತಾನು ಬೆಳೆದ ಕಾಳಿನ ಪೂರ್ಣ ಬೆಲೆ ಸಿಗುವದು. ಉಳಿದ ಸಣ್ಣ ಕಾಳು ನುಚ್ಚು ಇವು ಗಳನ್ನು ದನಗಳಿಗೆ, ಕೋಳಿಗಳಿಗೆ ಅವನು ಉಪಯೋ ಗಿಸಬಹುದು. ಅಲ್ಲದೆ ಸಾರಿಗೆ ಬಗ್ಗೆ ಬರುವ ವೆಚ್ಚ ದಲ್ಲಿ ಎಷ್ಟೋ ಹಣ ಉಳಿಸಿಕೊಳ್ಳಬಹುದು.

ಸರಕಾರದವರು ಆಹಾರ ಖರೀದಿಯ ಬಗ್ಗೆ ೧೫೦ ಕೋಟಿ ರೂಪಾಯಿ ವೆಚ್ಚ ಮಾಡುತ್ತಿದ್ದಾರೆ. ಇಷ್ಟೇ ಬೆಲೆ ಬಾಳುವ ಆಹಾರ ಧಾನ್ಯವನ್ನು ದೇಶದಲ್ಲಿ ಹಾಳಾಗಗೊಡುತ್ತಿದಾರೆ.

ಈ ವಿಷಯದಲ್ಲಿ ಒಂದಕ್ಕಿಂತ ಹೆಚ್ಚು ಸಾರೆ ಈ ಮೊದಲೇ ಟೀಕೆ ಮಾಡಿದಂತೆ ನಮ್ಮ ಮನೆಗಳಲ್ಲಿ ಸ್ವೋದ್ಯೋಗವ್ಯತ್ತಿಯಿಂದ ಆಹಾರ ಹಾಳಾಗುವ ಬಗ್ಗೆಯೂ ಬೆಳೆ ಬೆಳೆಯಬಹುದಾದ ಪ್ರತಿಯೊಂದಂಗುಲ ಭೂಮಿ ಯಲ್ಲಿ ಹೆಚ್ಚು ಆಹಾರ ಬೆಳೆಯುವ ಬಗ್ಗೆಯೂ ಕೃಷಿಗೆ ಉಪಯುಕ್ತವಾದ ಅಡವಿಯನ್ನು ಕೂಡಲೇ ಸಾಗು ಮಾಡಲು ಎಷ್ಟು ದೊರೆಯಬಹುದೆಂಬ ಬಗ್ಗೆ ನಿರೀ ಕ್ಷಣೆ ಮಾಡುವ ಬಗ್ಗೆಯೂ ನೀರಿನ ಪೂರೈಕೆಯನ್ನು ಭಾವಿಯಿಂದಾಗಲೀ ಬೇರೆ ರೀತಿಯಿಂದಾಗಲೀ ಮಾಡುವ ಬಗ್ಗೆಯೂ ಲೇಖಕರು ಸೂಚನೆಗಳನ್ನು ಕೊಟ್ಟಿದ್ದಾರೆ. ಅಲ್ಲದೆ ಆಕಳ ಸೆಗಣಿಯನ್ನು ಉರುವಲು ದಂತೆ ನಗರಗಳಲ್ಲಿ ಉಪಯೋಗಿಸುವದನ್ನು ಕೂಡಲೇ ಪ್ರತಿಬಂಧಿಸುವ ಬಗ್ಗೆಯೂ ಎಲ್ಲ ತರಹ ಕಸದಿಂದ ಗೊಬ್ಬರ ತಯಾರಿಸುವ ಬಗ್ಗೆಯೂ ಈ ಸೂಚನೆ ಮಾಡಿದ್ದಾರೆ,

ಹೊಸದಿಲ್ಲಿ ೧೯—೯—೪೬ ಅ. ಕಾ.

ಲೇಖಕರ ಸೂಚನೆಗಳನ್ನು ಕೃತಿಯಲ್ಲಿ ತರಲು ಶಕ್ಯವಿದೆ. ಒಂದು ದೊಡ್ಡ ಗಂಡಾಂತರವನ್ನು ತಪ್ಪಿಸ ಬೇಕಾದರೆ ಅವುಗಳನ್ನು ಕೃತಿಯಲ್ಲಿ ತರಲೇ ಬೇಕು.

ಮೋ. ಕ. ಗಾಂಧಿ

ಆಹಾರ ಸೀದಾ (ರೇಷನ್)

(೭ ನೆ ಪುಟದಿಂದ ಮುಂದುವರಿದಿದೆ)

ಈ ವೆಚ್ಚಗಳನ್ನು ಸರಕಾರವೇ ವಹಿಸಿದರೆ ಅದ ರಿಂದ ಈ ಕೆಳಿಗಿನ ಪರಿಣಾಮಗಳಾಗುವುವು.

(೧) ಕಳ್ಳಪೇಟೆ ಹೇಳಹೆಸರಿಲ್ಲದಾಗುವದು.

(೨) "ಆಹಾರ ಹೆಚ್ಚು ಬೆಳೆಯುವ" ಪ್ರವೃತ್ತಿಗೆ ಉತ್ತೇಜನ ದೊರೆಯುವದು.

(೩) ತನ್ನಲ್ಲಿರುವದನ್ನು ಮಾರಲು ಉತ್ಪಾದಕನಿಗೆ ಮನಸಾಗುತ್ತದೆ; ಏಕೆಂದರೆ ಅದೇ ಬೆಲೆಯಲ್ಲಿ ತನಗೆ ಅದು ಬೇಕಾದಾಗ ಸಿಗುವದೆಂಬ ಭರವಸೆಯಿದೆ.

(೪) ತನ್ನ ಮುಂದಿನ ಜೀವನ ವೆಚ್ಚ ಇಂತಿಷ್ಟೇ ಎಂದು ಬಳಸುವವನಿಗೆ ಧೈರ್ಯವಾಗುತ್ತದೆ.

(೫) ಜೀವನದ ಮೂಲ ಅವಶ್ಯಕತೆಗಳು ಏಕ ಪ್ರಕಾರವಾದ ಅಗ್ಗ ಬೆಲೆಯಲ್ಲಿ ದೊರಕುವ ಭೋರಣೆಯುಂಟಾಗುತ್ತದೆ.

ಈ ಬಗೆಯಾದ ಆಹಾರ ನಿಯಂತ್ರಣಕ್ಕೆ ಬೀಳುವ ವೆಚ್ಚವನ್ನು ತುಂಬಿಕೊಳ್ಳಲು ಸೀದಾಕ್ಕೆ ಸೇರದ ಮತ್ತು ನಿಯಂತ್ರಣವಿಲ್ಲದ ವಸ್ತುಗಳ ಮೇಲೆ ಹೆಚ್ಚು ಹೆಚ್ಚಾದ ಮತ್ತು ವಿಲಾಸ ಸಾಮಗ್ರಿಗಳಿಗೆ ಅತ್ಯಧಿಕ ಮೊರಾಟಕರವನ್ನು ಹೊರಿಸಬಹುದು. ಹೀಗೆ ಆಹಾರದಂತೆ ಪ್ರಾಥಮಿಕ ಅವಶ್ಯಕತೆಯ ಸಾಮಗ್ರಿಗಳ ಬಗ್ಗೆ ಅನಿವಾರ್ಯವಲ್ಲದ ಮತ್ತು ವಿಲಾಸದ ವಸ್ತು ಗಳನ್ನು ಕೊಳ್ಳುವವರಿಂದ ಸಹಾಯ ಧನವನ್ನು ತೆಗೆದು ಕೊಂಡಂತಾಗುವದು.

ಈ ಉಪಾಯವನ್ನು ಜುಟುಕಿನಲ್ಲಿ ಹೀಗೆ ಹೇಳ ಬಹುದು. ಅವಶ್ಯಕವಾದ ವಸ್ತುಗಳು ಸಾಧ್ಯವಿದ್ದಷ್ಟು ಕಡಿಮೆ ಬೆಲೆಗೆ ದೊರಕುವಂತೆ ಅವುಗಳ ಸಂಗ್ರಹ, ಸಾರಿಕೆ, ಉಗ್ರಾಣ, ವಿತರಣಗಳ ವೆಚ್ಚವನ್ನು ಜೀವನ ಆರೋಗ್ಯಗಳಿಗೆ ಅವಶ್ಯಕವಲ್ಲದ ವಸ್ತುಗಳನ್ನು ಕೊಳ್ಳುವವನು ತೆರಬೇಕು.

(ಹರಿಜನ ಪತ್ರಿಕೆ.) ಮೊರಿಸ್ ಫ್ರಿಡ್ಮನ್

ಜನ ಹೆಚ್ಚೋ? ಕೃಷಿಕಡಿಮೆಯೊ?

(೪ ನೆಯ ಪುಟದಿಂದ ಮುಂದುವರಿದಿದೆ.)

೧೯೪೨ ರಲ್ಲಿ ದೇಶದ ಎಣ್ಣೆಕಾಳು ಮತ್ತು ಸಣಬಿನ ಒಟ್ಟು ಉತ್ಪಾದನೆಯಲ್ಲಿ ನೂರಕ್ಕೆ ೩೨ ರಷ್ಟು ನಿರ್ಯಾತಕ್ಕಾಗಿಯೆ ಇತ್ತು. ಅಗಸಿಯಲ್ಲಿ ನೂರಕ್ಕೆ ೭೧ ರಷ್ಟು ಮತ್ತು ಶೇಂಗದಲ್ಲಿ ನೂರಕ್ಕೆ ೧೫ ರಷ್ಟು ನಿರ್ಯಾತವಾಯಿತು ಬಿಡಿಸಿ ಹೇಳಬೇಕಾದರೆ. ಅಷ್ಟು ಅಂಶ ನೆಲದಸಾರವನ್ನು ಕೇವಲ ವ್ಯಾಪಾರಿ ಲಾಭಕ್ಯಾಗಿ ಮೂರಿದಂತಾಯಿತು. ಅಷ್ಟುಮಟ್ಟಿಗೆ ಭೂಮಿಯಿಂದ ತೆಗೆದು ಕೊಂಡಿದ್ದು ಭೂಮಿಗೆ ಯಾವುದೇ ರೂಪದಲ್ಲಿ ಮರಳುವ ಸಂಭವವೇ ಇರಲಿಲ್ಲ. ಫಲಸ್ವರೂಪ, ಭೂಮಿಯ ಸಾರ ಶಾಶ್ವತವಾಗಿ ನಾಶವಾಯಿತು. ಇದು ಪಕ್ಕಲತನವಲ್ಲ, ಮುಂದಿನ ಪೀಳಿಗೆಗಳ ಅನ್ನದ ಅಪಹಾರ. ಈ "ಹಣದ ಪೈರು" ಗಳ ದಾಳಿಯಿಂದ ನಮ್ಮ ಒಕ್ಕಲತನವನ್ನು ಪಾರು ಮಾಡುವದು ಸಾಧುವಾದರೆ ಮರ ಮರಳಿ ಬರುತಿರುವ ಆಹಾರ ಕೊರತೆಯನ್ನು ಎದುರಿಸಲು ಬಹಳ ಸಹಾಯವಾಗದಿರದು.

ಹೊಸದಿಲ್ಲಿ —ಪ್ಯಾರೇಲಾಲ

ಕರ್ನಾಟಕ ವಿಶ್ವವಿದ್ಯಾಲಯ

ಕರ್ನಾಟಕ ವಿಶ್ವವಿದ್ಯಾಲಯವು ಸಂಸ್ಥೆಗೆ ಶಾಸನಸಭ್ಯರಾದ ಶ್ರೀ. ಬಿ. ಭೀಮರಾಯರು, ಶ್ರೀಮತಿ ಅಲ್ಲಂ ಸುಮಂಗಳಮ್ಮನವರು ಮತ್ತು ವರ್ತಕರಾದ ಶ್ರೀ ಜಂತಕಲ್ ಜಂಬಣ್ಣನವರು ಆಜೀವ ಸದಸ್ಯರಾದರು. ೨೪ ಮಹನೀಯರು ಸಾಮಾನ್ಯ ಸದಸ್ಯರಾಗಿದ್ದಾರೆ.

೨೪ ನೆಯ ತಾರೀಖು ವಿಶ್ವ ವಿದ್ಯಾಲಯ ದಿನವೆಂದು ಆಚರಿಸಲಾಯಿತು. ಅದೇ ಸಾಯಂಕಾಲ ಶ್ರೀ. ಸ. ಸ. ಮಾಳವಾಡ, ಎಂ ಎ. ಯವರು, ಕರ್ನಾಟಕ ವಿಶ್ವ ವಿದ್ಯಾಲಯದ ವಿಷಯವನ್ನು ಕುರಿತು ಮಾತನಾಡಿದರು. ಆ ದಿನ ಈ ಕೆಳಗಿನ ಠರಾವುಗಳನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು. ಶ್ರೀ ಭೀಮರಾಯರು ಅಧ್ಯಕ್ಷತೆ ವಹಿಸಿದ್ದರು.

"ಮುಂಬಯಿ ಸರ್ಕಾರವು, ಗುಜರಾತು, ಮರಾಠ, ಮತ್ತು ಸಿಂಧ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಒಪ್ಪಿಕೊಂಡಿರುವಂತೆ, ಮದ್ರಾಸ್ ಸರ್ಕಾರವು ಆಂಧ್ರ ವಿಶ್ವವಿದ್ಯಾಲಯವನ್ನು ಸ್ಥಾಪಿಸಿರುವಂತೆ ಕನ್ನಡನಾಡು ಮತ್ತು ನುಡಿಯ ಸರ್ವತೋಭಿವೃದ್ಧಿಗೆ, ಅದರಲ್ಲೂ ಕನ್ನಡಿಗರ ಶಿಕ್ಷಣವು ಪರಿಣಾಮಕಾರಿಯಾಗಲು ಕನ್ನಡನಾಡಿನ ವಿವಿಧ ಭಾಗಗಳನ್ನು ಆಳುತ್ತಿರುವ ಮುಂಬಯಿ ಮತ್ತು ಮದ್ರಾಸು ಸರ್ಕಾರಗಳು ಒಮ್ಮತಕ್ಕೆ ಬಂದು ಕರ್ನಾಟಕ ವಿಶ್ವವಿದ್ಯಾಪೀಠವೊಂದನ್ನು ಆದಷ್ಟು ಬೇಗನೆ ಸ್ಥಾಪಿಸಬೇಕೆಂದು ಈ ಸಭೆಯು ಒತ್ತಾಯ ಪಡಿಸುತ್ತದೆ.

"ಮುಂಬಯಿ ಸರ್ಕಾರವು ಮರಾಠ ವಿಶ್ವ ವಿದ್ಯಾಲಯ ಸ್ಥಾಪನೆಯ ಸಾಧ್ಯಾಸಾಧ್ಯತೆಯನ್ನು, ತೂಗಿ, ತುಲನೆಮಾಡಿ ಒಂದು ವರದಿಯನ್ನು ಒಪ್ಪಿಸಲು ಒಂದು ಸಮಿತಿಯನ್ನು ಸ್ಥಾಪಿಸಿರುವಂತೆ ಕರ್ನಾಟಕ ವಿಶ್ವ ವಿದ್ಯಾಲಯದ ವಿಷಯವನ್ನು ಅಭ್ಯಾಸಿಸಲು ಪ್ರತ್ಯೇಕ ಸಮಿತಿಯೊಂದನ್ನು ಸ್ಥಾಪಿಸಬೇಕೆಂದು, ಈ ಸಭೆಯು ಮುಂಬಯಿ ಸರ್ಕಾರವನ್ನು ಸ್ಥಾಪಿಸಲು ಒತ್ತಾಯ ಪಡಿಸುತ್ತದೆ,

"ಮದ್ರಾಸು ವಿಶ್ವ ವಿದ್ಯಾಲಯದ Board of Studies ನಲ್ಲಿ ಇನ್ನು ಮೇಲೆ ಬಳ್ಳಾರಿ ಜಿಲ್ಲೆಯಿಂದಲೂ ಒಬ್ಬಿಬ್ಬ ಪ್ರತಿನಿಧಿಗಳನ್ನು ಆಯ್ಕೆಮಾಡಿಕೊಳ್ಳಬೇಕೆಂದು ಈ ಸಭೆಯು ಸರ್ವಾನುಮತದಿಂದ ತೀರ್ಮಾನಿಸುತ್ತದೆ.

ಕರ್ನಾಟಕ ವಿಶ್ವ ವಿದ್ಯಾಲಯ ಸಮಿತಿಗೆ 322 ರೂಪಾಯಿಗಳ ಹಣ್ಮಾಣಿಯನ್ನು ಬಳ್ಳಾರಿ ಜಿಲ್ಲಾ ಕರ್ನಾಟಕ ಸಂಘದವರು ಅರ್ಪಿಸಿದರು.

ಮದ್ರಾಸ್ ಸರ್ಕಾರದವರು ೧೯೪೨ ನೆಯ ಚಳವಳಿಯಲ್ಲಿ ವಸೂಲು ಮಾಡಿದ ಸಾಮೂಹಿಕದಂಡದ ಹಣವನ್ನು ಖರ್ಚುಕಳೆದು ಹಿಂದಕ್ಕೆ ಕೊಡಲು ಅಜ್ಞೆಯನ್ನು ವಿಧಿಸಿದ್ದಾರೆ.

ಹಬ್ಬೊಳ್ಳಿ ಫಿರ್ಕಾ ರೈತರ ಗೋಳು

1354 ನೆ ಫಸಲಿ ಬಾಬ್ತು, ಹತ್ತಿ ಬಿತ್ತಿದ ರೈತರಿಗೆ ಸದರಿ ಫಸಲಿ ನಷ್ಟವಾದ ಕಾರಣ ಎಕರೆಗೆ 1-9-6 ಪ್ರಕಾರ ಕೊಡಲು ಸರ್ಕಾರದವರು ಮುಂಜೂರುಮಾಡಿರುತ್ತಾರೆ. ಆದರೆ ಹಬ್ಬೊಳ್ಳಿ ಫಿರ್ಕಾದ ಬಹು ಭಾಗದ ಹಳ್ಳಿಗಳವರಿಗೆ, ಈ ಹಣವು ಬಂದಿಲ್ಲ. ಆಗ ಸನೂರು, ನಾಡಂಗ, ಅಲಬನೂರು, ಸೂಗೂರು, ನಾಗ್ರಹಾಳು, ವೆಂಕಟಾಪುರ, ಗ್ರಾಮಗಳ ರೈತರಿಗೆ ಎಷ್ಟುಹಣವು ಮುಟ್ಟಿದೆಯೆಂಬುದನ್ನು ತಕ್ಷಣ ಕಲೆಕ್ಟರವರು ವಿಚಾರಿಸಬೇಕು.

(ಹೆಸರಿಲ್ಲದೆ ಬರುವ ಪತ್ರಗಳಲ್ಲಿನ ವಿಷಯಗಳನ್ನು ನಾವು ವಿಚಾರಿಸಲು ಸಾಧ್ಯವೇ ಇಲ್ಲ. ಸತ್ಯವಾದ ಅಂಶವಿದೆಂದು ನಮ್ಮ ಮನಸ್ಸಿಗೆ ದೃಢಪಡಲು ಊರಿನ ಮುಖ್ಯರು ದಸ್ಕತ್ತು ಮಾಡಿ ಬರೆಯಬೇಕು. ನಮಗಾವ ತೊಂದರೆಯೂ ಬರುವುದಿಲ್ಲೆಂದು ಹೇಳ ಬಯಸುತ್ತೇವೆ. ನಮಗೇನಾದರೂ ಪರಿಹಾರವು ದೊರೆಯಬೇಕೆಂದಿದ್ದರೆ ಸಹಿಮಾಡಿ ಬರೆಯಿರಿ.)

ಹರಪನಹಳ್ಳಿ

(ನಮ್ಮ ಸುದ್ದಿಗಾರರಿಂದ)

ಶುಕ್ರವಾರದ ದಿನ ಕೂಡಿದ ವಾಚನಾಲಯದ ವಾರ್ಷಿಕ ಸಭೆಯಲ್ಲಿ, ಶ್ರೀ ಇಜಾರಿವಸುಪಾಲಪ್ಪನವರು ೧೦-೧೨ ವರ್ಷಗಳು ಅಧ್ಯಕ್ಷರಾಗಿ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿದುದಕ್ಕಾಗಿ, ಅಭಿನಂದನ ಪರ ೀರ್ಮಾನವಾಗಿ ಅವರನ್ನು ಆಜೀವ ಸದಸ್ಯರನ್ನಾಗಿ ಮಾಡಲಾಯಿತು. ದುರಸ್ತಿ ಮತ್ತು ಇತರ ಅವಶ್ಯ ಕಖರ್ಚುಗಳಿಗಾಗಿ ಕಾರ್ಯದರ್ಶಿಯವರು ವಿನಂತಿ ಮಾಡಿದರು. ಸಭೆಯಲ್ಲಿಯೇ ಶ್ರೀ ವಸುವಾಲಪ್ಪನವರು ೧೦೦/-ಗಳ ವಾಗ್ದಾನಮಾಡಿದರು,

ಕಳೆದ ಜೂನ್ ತಿಂಗಳಿಂದ ಅಧಿಕೃತವರದಿಗಳ ಮೂಲಕ, ಪ್ಲೇಗಿನಿಂದ ೫೬ ಜನರಿಗೆ ತಗಲಿ ೨೫ ಜನರು ಸತ್ತಿರುವರು. ಲೀವರ್ ಜ್ವಾಡ್ಯವು ಅಂಟು ರೋಗದ ರೂಪವನ್ನು ತೆಗೆದುಕೊಂಡಿದೆ, ಆರೋಗ್ಯಾಧಿಕಾರಿಗಳೂ ವೈದ್ಯರೂ ತಕ್ಷ ಚಿಕಿತ್ಸೆ ನಡೆಸುತ್ತಿರುವರು.

ರಾಜಿಯಾಗಬಹುದು.

ಕಾಂಗ್ರೆಸ್ ಲೀಗ್‌ಗಳಲ್ಲಿ ರಾಜಿಯಾಗುವ ಲಕ್ಷಣಗಳು ತೋರಿಬರುತ್ತಲಿವೆ. ವಿವಾದಾಸ್ಪದವಾದ ವಿಷಯವೆಂದರೆ ಕಾಂಗ್ರೆಸ್ ಜನರಲ್ಲಿ ಮುಸಲ್ಮಾನನಿರಬಾರದೆಂದು ಜಿನ್ನಾರ ಹಟ. ಕೊನೆಯಲ್ಲಿ ಇದಕ್ಕೆ ಅವರು ಒಪ್ಪಬಹುದು. ಮುಸ್ಲಿಂಲೀಗಿನವರು ಸರಕಾರೀ ವಿರೋಧ ಚಳವಳಿಗೆ ಸಿದ್ಧರಿಲ್ಲ.

ಬಳ್ಳಾರಿಯಲ್ಲಿ ಗಾಂಧಿ ಜಯಂತಿ.

—ಅಭೂತಪೂರ್ವ—ಮೆರವಣಿಗೆ—

ಇಲ್ಲಿಯ ಜಯಂತ್ಯುತ್ಸವಗಳು, ೨ ನೆಯ ತಾರೀ ಸಾಯಂಕಾಲ ಗಾಂಧೀಜೀಯ ವಯಸ್ಸಿಗನುಗುಣವಾದ ೭೭ ವೃಷಭಗಳಿಂದೆಳೆಯಲ್ಪಟ್ಟ ಅಲಂಕೃತ ರಥವು ಗಾಂಧಿ, ಸುಭಾಸ, ನೆಹರೂರಭಾವ ಚಿತ್ರಗಳೊಂದಿಗೆ ನಗರದ ಮುಖ್ಯ ಬೀದಿಗಳಲ್ಲಿ ವಾದ್ಯ ಡೊಳ್ಳುಗಳೊಂದಿಗೆ ಹಾದು ಸಾಂಬಮೂರ್ತಿ ಮೈದಾನದಲ್ಲಿನ ಪ್ರಚಂಡ ಸಭೆಯಿಂದ ಕೊನೆಗೊಂಡವು. ಬೀದಿಗಳು ರಾಷ್ಟ್ರ ಧ್ವಜಗಳಿಂದ ಮೆರೆಯುತ್ತಿದ್ದವು. ಜನರ ಉತ್ಸಾಹಕ್ಕೆ ಪಾರವಿಲ್ಲ. ಪ್ರಾರಂಭದಿಂದ ಕೊನೆಯ ವರೆವಿಗೆ ಸುಮಾರು ಹತ್ತುಸಾವಿರ ಜನರು ಮೆರವಣಿಗೆಯಲ್ಲಿ ಭಾಗವಹಿಸಿರಬಹುದು. ಬಳ್ಳಾರಿಯು ರಾಜಕೀಯ ಇತಿಹಾಸದಲ್ಲಿ ಇಂಥಾ ಐಕ್ಯದ ಪ್ರದರ್ಶನವು ಪ್ರಥಮವೆನ್ನಬಹುದು.

ಸಾಯಂಕಾಲ ಶ್ರೀ ವೀರಾಸ್ವಾಮಿಯವರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಮರುಳ ಸಿದ್ದಯ್ಯ ಇಜಾರಿ ವಿರಪಪ್ಪ, ಡಿ. ಯಾಚ್. ಪಂಕೋಬರಾವ್— ಸುತ್ತ [illegible]

The Rayalaseema Bank Limited, Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— (ಕಳೆದವಾರ ಒಳ್ಳಾರಿಜಿಲ್ಲಾ **ಕೊಡ್ಲಿಗೆ,** ಚಿತ್ತೂರುಜಿಲ್ಲಾ **ನಾಗರಿಯಲ್ಲಿ** ನಮ್ಮ ಶಾಖೆಗಳನ್ನು ಪ್ರಾರಂಭಿಸಿದೆವೆಂದು ತಿಳಿಸಲು ಹರ್ಷಿಸುತ್ತೇವೆ.

ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ.
ಅನಂತಪುರ:- ಅನಂತಪುರ, ಬೆಳಗುಪ್ಪ. ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚರ್ಲ, ಉರವಕೊಂಡ.
ಚಿತ್ತೂರು:- ಚಿತ್ತೂರು, ಮದನಪಲ್ಲಿ, ತಿರುಪತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ. **ಕಡಪ:-** ರಾಜಂಪೇಟ

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:- 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರೊವಿಡೆಂಟ್ ಫಂಡ ಡಿಪಾಜಿಟ್:- 3%.

ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.



ಕಾಶ್ಮೀರು ಅರುಕ್

(ಮನೆಯ ವೈದ್ಯ)

ಕೆಮ್ಮು, ಉಬ್ಬಸ, ಶೀತಜ್ವರ, ಅಜೀರ್ಣ ಮೊದಲಾದ ವ್ಯಾಧಿಗಳಿಗೆ ದಿವ್ಯಾಮೃತ ಎಲ್ಲಾ ನೋವುಗಳಿಗೆ ಹಾವು ಚೇಳು ಕಚ್ಚಿದುದಕ್ಕೆ ದಿವ್ಯೌಷಧ ಎಲ್ಲ ಷಾಪುಗಳಲ್ಲಿ ದೊರೆಯುತ್ತದೆ

ಹೆಚ್. ಯಸ್. ಅಂಡ್ ಸನ್ಸು,
ಬಳ್ಳಾರಿ.

ಹಿಂದೂಸ್ತಾನಿಯು ರಾಷ್ಟ್ರಭಾಷೆ

ಇದನ್ನು ತಪ್ಪದೆ ಕಲಿಯಿರಿ

ಪ್ರಾರಂಭಿಕ ಪರೀಕ್ಷೆಗಳಾದ ಪ್ರಾಥಮಿಕ- ಮಧ್ಯಮ ರಾಷ್ಟ್ರಭಾಷೆ, ಉನ್ನತ ಪರೀಕ್ಷೆಗಳಾದ ಪ್ರವೇಶ, ವಿಶಾರದ- ವ್ಯಾಕರಣ, ಮದ್ರಾಸ್ ವಿಶ್ವವಿದ್ಯಾಲಯದ ಹಿಂದೀ- ವಿದ್ವಾನ್ ಪರೀಕ್ಷೆಗಳ ಮಾಹಿತಿಯನ್ನು ಉಚಿತವಾಗಿ ಕೊಟ್ಟು- ಶಿಕ್ಷಣದ ವಿಷಯಕ್ಕೆ ಸಲಹೆಗಳನ್ನು ಕೊಡಲಾಗುವುದು- ಎಲ್ಲಾಪುಸ್ತಕಗಳು ದೊರೆಯುತ್ತವೆ. **ಬಹಳ ಸುಲಭ ಭಾಷೆ-ಅತ್ಯಲ್ಪಕಾಲ ದಲ್ಲಿಕಲಿಯಬಹುದು.** **ಟಿ. ಬಿ. ಕೇಶವರಾವ್**
ಹಿಂದೀಪ್ರಚಾರಕ, ಬಳ್ಳಾರಿ

NAVA BHARAT, BELLARY

Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು. Subscription Rates.

ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಅರುತಿಂಗ ಳಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will ot be accepted for less than 6 months.

To

SRI.....

.....

.....

Printed at Krishna Press Bellary QH No. B 17 FOR (Q.H. No. B-5)
Edited & Published by T. B. KESHAVA RAO.

ಹೈ.ಹಿಂದ Reg. No. M. 4746

ಸಮಾಚಾರ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೫ ಸಂಚಿಕೆ ೧೧ ಬಳ್ಳಾರಿ ಅಕ್ಟೋಬರು ೧೪ ಸೋಮವಾರ ೧೯೩೬ ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವು.

ಹರಿಜನರಿಗೆ ದೇವಾಲಯ, ಛತ್ರ ಮತ್ತು ಹೋಟಲು ವಗೈರೆ ಪ್ರವೇಶ.

"ಈಗಿನ ಕಾಲದಲ್ಲೂ ಹಿಂದೂಗಳಲ್ಲಿ ಅಸ್ಪೃಶ್ಯರೆಂದು ಕರೆಯಲ್ಪಡುವ ಹರಿಜನರಿಗೆ ದೇವಸ್ಥಾನಗಳು ಮುಚ್ಚಿರುವದೆಂದರೆ ಬಹಳ ವ್ಯಸನಪಡಬೇಕಾಗಿದೆ. ಪ್ರಾಂತಗಳಲ್ಲಿ ಸ್ಥಾಪಿತವಾದ ರಾಷ್ಟ್ರೀಯ ಸರ್ಕಾರಗಳು ಈಪ್ರಶ್ನೆಯನ್ನು ಕೂಡಲೇ ಬಗೆಹರಿಸಬೇಕು" ಎಂಬುದಾಗಿ ಮಹಾತ್ಮ ಗಾಂಧಿಯವರು ಸಲಹೆ ಇತ್ತು, ಗುರುವಾಯೂರು ದೇವಸ್ಥಾನವನ್ನು ಕೂಡಲೇ ತೆರೆಯಲು ಕೇಳಿರುವರು.

ದೇವಸ್ಥಾನಗಳ ಧರ್ಮಕರ್ತರೊಪ್ಪಿದರೆ ದೇವಸ್ಥಾನಗಳ ಪ್ರವೇಶಕ್ಕೆ ತಮ್ಮ ಅಕ್ಷೇಪಣೆ ಇಲ್ಲವೆಂದು ಮದ್ರಾಸ್ ಸರ್ಕಾರದವರು ಪ್ರಕಟಿಸಿದ್ದಾರೆ. ಪೂಜೆಗೈಯ್ಯುವ ಭಕ್ತರು ಬಹು ಸಂಖ್ಯಾಕವಾಗಿರುವದರಿಂದ ದೇವಸ್ಥಾನ ಪ್ರವೇಶಕ್ಕೆ ತಮ್ಮ ಸಮ್ಮತಿಯನ್ನಿತ್ತು ಧರ್ಮಕರ್ತರಿಗೆ ತಿಳಿಸುವುದಾದರೆ ಈ ಕಾರ್ಯವೂ ಸುಲಭವಾದೀತು.

ಇತರ ಎಲ್ಲಾ ಜಾತಿಯವರಿಗೂ ಪ್ರವೇಶಕ್ಕನುಕೂಲವಿರುವ ಛತ್ರ! ಹೋಟಲ್ ಮತ್ತು ಕ್ಷೌರದಂಗಡಿಗಳ ಪ್ರವೇಶಕ್ಕೆ ಸರ್ಕಾರದವರು ಈಗಿರುವ ಆಕ್ಟ್‌ನಲ್ಲಿ ಸವರಣೆ ತಂದು ಹರಿಜನರಿಗೆ ಅನುಕೂಲಮಾಡುವವರಿದ್ದಾರೆ. ಡಿಶಂಬರ್ 11 ರಿಂದ ಕೂಡುವ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಇದು ಪಾಸಾಗಲಿದೆ.

ಮದ್ರಾಸ್ ಪ್ರಾಂತಕ್ಕೆ ಆಹಾರ ಧಾನ್ಯಗಳ ಪೂರೈಕೆ.

ಸೆಪ್ಟಂಬರ್ 46ಕ್ಕೆ ಬರಬೇಕಾದ ಅಕ್ಕಿ ಮತ್ತು ಗೋಧಿಯ "ಕೋಟಾ" ಪೂರಾ ಬಂದಿದೆಯೆಂದು ತಿಳಿಸಲು ಸಂತೋಷಿಸುತ್ತೇವೆ. ಅಕ್ಟೋಬರ್ ತಿಂಗಳಲ್ಲಿ 50 ಸಾವಿರ ಟನ್ ಮೆಕ್ಕೇಜೋಳವು ಬರಲಿದ್ದು ಅದರಲ್ಲಿ 15 ಸಾವಿರ ಟನ್ ಕೊಚಿನ್‌ಗೆ ಕಳುಹಿಸಲಾಗುತ್ತೆ:

ಹಳ್ಳಿಗಳಿ ಡಿಪೋಗಳಲ್ಲಿ ಕಾಳಿನ ಪೂರೈಕೆ ಸರಿಯಾಗಿಲ್ಲವೆಂಬ ದೂರುಗಳು ಬರುತ್ತಲಿವೆ– ಇನ್ನು 3-4 ತಿಂಗಳುಗಳಲ್ಲಿ ಅಕ್ಕಿಯ ಪೂರೈಕೆಯೂ ತೃಪ್ತಿಕರವಾಗಿ, ಹಳ್ಳಿಗಳಿಗೆ ಹೆಚ್ಚು ಹೆಚ್ಚಾಗಿ ಸರ್ಕಾರದವರು ಒದಗಿಸುವರೆಂದು ತಿಳಿದು ಬಂದಿದೆ.

ಪ್ರಪಂಚದ ಎಲ್ಲಾ ಭಾಗಗಳಿಂದಲೂ ಜಯಂತಿ ಸಂದೇಶಗಳಿಗೆ ವೈಯ್ಯಕ್ತಿಕವಾಗಿ ಪ್ರತ್ಯುತ್ತರವನ್ನು ಕೊಡಲು ಸಾಧ್ಯವಿಲ್ಲ. ವೃತ್ತ ಪತ್ರಗಳ ಕೃಪೆಯ ಮೂಲಕ ನಿಮ್ಮನ್ನೆಲ್ಲಾ ವಂದಿಸುತ್ತೇನೆ ಎಂದು ಗಾಂಧೀಜಿಯವರು ಎಲ್ಲರಿಗೂ ತಿಳಿಸಿದ್ದಾರೆ.

ನವಜೀವನ ವ್ಯಾಯಾಮ ಶಾಲೆ.

೧೩ ನೆಯ ವಾರ್ಷಿಕೋತ್ಸವ.

ಬಳ್ಳಾರಿ ಬಿ.ಡಿ.ಎ. ಮೈದಾನದಲ್ಲಿ 7 ನೆಯ ತಾ॥ ಸೋಮವಾರ ಸಾಯಂಕಾಲ ಜಿಲ್ಲಾ ಜಡ್ಜ ಮ್ಯೂಕರವರ ಅಧ್ಯಕ್ಷತೆಯಲ್ಲಿ ನವಜೀವನ ವ್ಯಾಯಾಮ ಶಾಲೆಯ ೧೩ ನೆಯ ವಾರ್ಷಿಕೋತ್ಸವವು ನೆರವೇರಿ, ಶ್ರೀಮತಿ ಕೆ. ಎನ್. ಅನಂತರಾಮನ್‌ರವರು ಗೆದ್ದವರಿಗೆ ಬಹು ಮಾನಗಳನ್ನು ಹಂಚಿದರು. ಕಾರ್ಯದರ್ಶಿಗಳಾದ ಶ್ರೀ ಗುಡುದೂರು ಪದ್ಮನಾಭನ್‌ರವರು, ಮ್ಯೂಕರವರು ವ್ಯಾಯಾಮಶಾಲೆಗಾಗಿ ಸಲ್ಲಿಸುತ್ತಿರುವ ಸೇವೆಯನ್ನು ಹೊಗಳಿ ವ್ಯಾಯಾಮಶಾಲೆಗಾಗಿ ಅವರಿಗೆ ಮಾನ ಪತ್ರವನ್ನರ್ಪಿಸಿದರು. ಮ್ಯೂಕ್‌ರವರು ನವಜೀವನ ವ್ಯಾಯಾಮಶಾಲೆಯ ಕಟ್ಟಡಕ್ಕಾಗಿ ಶ್ರೀ ಭೀಮಪ್ಪ ಚೌಧರಿಯವರು ಕೆಲಸಾವಿರಗಳನ್ನಾದರೂ ದಾನ ಮಾಡಿ, ಸಂಗ್ರಹಿಸುವ ಕಾರ್ಯ ಮಾಡಲಿರುವರೆಂದರು. ತಮ್ಮ ಸ್ವೇಚ್ಛೆಯಿಂದಲ್ಲಿ ನವಜೀವನ ವ್ಯಾಯಾಮ ಶಾಲೆಯನ್ನು ಸ್ವಾಗತಿಸಲು ತಮಗೆ ಅತೀವ ಸಂತೋಷವಾಗುತ್ತದೆಯೆಂದು ಹೇಳಿದರು. ಶ್ರೀ ಭೀಮಪ್ಪ ಚೌಧರಿಯವರು, ದಾನಮಾಡಿದ ದಾತರ ಹೆಸರನ್ನು ಹೇಳಿ ವಂದನಾರ್ಪಣೆ ಮಾಡಿದರು.

ಹಂಪಿಯಲ್ಲಿ

ಆಂಧ್ರ ಇತಿಹಾಸ ಸಂಶೋಧಕರ ಸಭೆ.

ರಾಜಮಹೇಂದ್ರವರದ ಆಂಧ್ರ ಇತಿಹಾಸ ಪರಿಶೋಧಕ ಮಂಡಲಿಯವರು, 13-14-15 ನೆಯ ಅಕ್ಟೋಬರ್, ಹಂಪಿಯಲ್ಲಿ ವಿಜಯನಗರ ರಾಜ್ಯವರ್ಧಂತಿ ಉತ್ಸವಗಳನ್ನು ಆಚರಿಸುವರು. ಈ ಉತ್ಸವಗಳ ವಿವರಗಳನ್ನೊಳಗೊಂಡ ದೀರ್ಘಹಸ್ತ ಪತ್ರದಲ್ಲಿ ಬಳ್ಳಾರಿ ಜಿಲ್ಲಾ ಮುಖ್ಯಜನರ ಸ್ವಾಗತ ಸಮಿತಿಯ ಹೆಸರುಗಳು, ಮೇಲ್ವಾಣಿಸಿದ ಮಂಡಲದ ವ್ಯವಸ್ಥಾಪಕ ಸಮಿತಿಯವರ ಹೆಸರುಗಳೂ ಇವೆ. ಜಿಲ್ಲಾ ಬೋರ್ಡ ವಿದ್ಯಾಧಿಕಾರಿಗಳಾದ ಶ್ರೀ ಎ. ಕೆ. ಬಾಲಸುಂದರಂರವರು ಮುಖ್ಯಜಾಲಕರಿರುವಂತೆ ಗೊತ್ತಾಗಿದೆ. ಮದ್ರಾಸ್ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಸೊಂಠಿ ರಾಮಮೂರ್ತಿಯವರು ಸಭೆಯ ಉದ್ಘಾಟಕರು. ಇತಿಹಾಸಪ್ರದರ್ಶನ; ಸಾಹಿತ್ಯ ಸಂಗೀತ ಕಲೆ ವಗೈರೆ ವಿವಿಧ ವಿಷಯಗಳಮೇಲೆ ವಿದ್ವಾಂಸರ ಭಾಷಣಗಳೇರ್ಪಟ್ಟಿವೆ.

ಮದ್ಯನಿಷೇಧ—ಪ್ರಾಂತಾಧಿಕಾರಿ.

ಮದ್ರಾಸ್ ಪ್ರಾಂತ್ಯದ ಮದ್ಯನಿಷೇಧಾಧಿಕಾರಿಗಳಾದ ಶ್ರೀ ಡಿಕ್ಸನ್ ಸಾಹೇಬರು ಕಲೆಕ್ಟರವರ ಕಛೇರಿಯಲ್ಲಿ 5 ನೆಯ ತಾ॥ ಅಧಿಕಾರಿಗಳು ಮತ್ತು ಸಾರ್ವಜನಿಕರನ್ನು ಕುರಿತು ಈ ಶಾಸನವನ್ನು ಯಶಸ್ವಿಯಾಗಿ ಜಾರಿಗೆ ತರಲು ಸಹಕಾರ ಕೋರಿ ಜಿಲ್ಲಾದ ಆಡಳಿತ, ಪ್ರತಿಬಂಧಕ ಮತ್ತು ರಚನಾತ್ಮಕ ಕಾರ್ಯಗಳನ್ನು ಕುರಿತು ವಿವರಿಸಿದರು. ಕೇಳಲ್ಪಟ್ಟ ಪ್ರಶ್ನೆಗಳಿಗೆಲ್ಲಾ ಸಮರ್ಪಕ ಉತ್ತರಗಳು ದೊರೆತವು. ಕಲೆಕ್ಟರ್ ಅನಂತರಾಮನ್‌ರವರು ವಂದನಾರ್ಪಣೆ ಮಾಡಿದ ನಂತರ ಸಭೆಯು ಮುಗಿಯಿತು.

ಉಪ್ಪಿನ ಕಂದಾಯ;—

ಉಪ್ಪಿನ ಉದ್ಯೋಗವನ್ನು ಸರ್ಕಾರದ್ದಾಗಿ ಮಾಡಿ ಜನತೆಗೆ ಉಚಿತ ಸೌಲಭ್ಯಗಳನ್ನೊದಗಿಸಲು ಮಹಾತ್ಮ ಗಾಂಧಿಯವರೊಡನೆ ಕೇಂದ್ರ ರೆವಿನ್ಯೂಬೋರ್ಡ ಕಾರ್ಯದರ್ಶಿ ಮಿ॥ ಗ್ರೀನ್‌ಫಿಲ್ಡರವರು ಮಾತುಕತೆ ನಡೆಸಿದ್ದಾರೆ.

ಅ. ಕ. ವಿಕೇಂದ್ರೀಕರಣ ಕೆಲಸ

ರಾಯದುರ್ಗ, ಕಣೇಕಲ್ಲು, ಮೊಳ ಈ ಗ್ರಾಮಗಳಲ್ಲಿ ಶ್ರೀ ಶಿ. ವೇ. ದೇಸಾಯಿ ಇವರು ವಿಕೇಂದ್ರೀಕರಣ ಧ್ಯೇಯ ಹೇಳುತ್ತಾ ೫೯ ಮಂದಿ ಸದಸ್ಯರನ್ನಾಗಿ ಮಾಡಿದ್ದಾರೆ. ಈ ವಿಕೇಂದ್ರೀಕರಣ ಪ್ರಚಾರದಲ್ಲಿ ಮದ್ರಾಸು ಸರಕಾರದ ಮದ್ಯಪಾನ ನಿರೋಧ ಕಾರ್ಯ ಅದರಿಂದುಂಟಾಗುವ ಕೌಟುಂಬಿಕ ಸರಳ ಜೀವನ, ದೇಹಾರೋಗ್ಯ ಶೀಲಸರ ಜಗತ್ತಾಗುವುದೆಂದು ಸುಬೋಧವಾಗಿ ಮನ ಹಿಡಿಯುವಂತೆ ಹೇಳಿದರು..

9th Year of Publication.

14th OCTOBER 1946

ಬಟ್ಟೆ ಗಿರಣಿಗಳ ಸ್ಥಾಪನೆ
ಮದ್ರಾಸ್ ಪ್ರಧಾನರ ವಿರೋಧ.

ಕಾಂಗ್ರೆಸ್ ಪ್ರಧಾನರಾದ ಶ್ರೀ ಟಿ. ಪ್ರಕಾಶಂ ರವರು ಇನ್ನುಮುಂದೆ ಮದ್ರಾಸ್ ಪ್ರಾಂತ್ಯದಲ್ಲಿ ಮಿಲ್ಲುಗಳನ್ನು ಸ್ಥಾಪಿಸಲು ಅಪ್ಪಣೆಯನ್ನು ಕೊಡುವುದಿಲ್ಲೆಂತಲೂ, ಇರುವ ಮಿಲ್ಲುಗಳಲ್ಲಿ ಕದುರುಗಳನ್ನು ಹೆಚ್ಚಿಸಲು ಅವಕಾಶ ಕೊಡುವುದಿಲ್ಲೆಂತಲೂ, ಖಾದಿ ಯೋಜನೆಯ ಪ್ರಾರಂಭೋತ್ಸವವನ್ನು ನಡೆಸಬೇಕಾ ದರೆ ಹೇಳಿದರು. "ಹರಿಜನ" ಪತ್ರಿಕೆಯಲ್ಲಿ ಲೇಖನವನ್ನು ಬರೆಯುತ್ತಾ ಮಹಾತ್ಮ ಗಾಂಧಿಯ ವರು ಇದಕ್ಕೆ ಪುಷ್ಟಿಯನ್ನಿತ್ತಿರುವರು.

ಭಾರತದಲ್ಲಿ ಜನಸಂಖ್ಯೆಯು ಬಹಳಾದ ಹೊರತಾ ಗಿ ಳಿಂಕೋಟೆಗಳನ್ನು ಸಮೀಪಿಸುತ್ತಲಿದೆ. ದೇಶೀ ಉದ್ಯೋಗಗಳು ಹಾಳಾದನಂತರ ೧೯ನೆಯ ಶತಮಾ ನದ ಉತ್ತರಾರ್ಧ ಭಾಗದಿಂದ ನಮ್ಮ ದೇಶವು ತನ್ನ ಬಟ್ಟೆಗಳಿಗಾಗಿ ಪರದೇಶಗಳನ್ನವಲಂಬಿಸಿದೆ. ಯುದ್ಧ ಪೂರ್ವದಲ್ಲಿ ಜಪಾನು, ಅಮೆರಿಕಾ ಮತ್ತು ಯೂರೋ ಪದಲ್ಲಿಯ ದೇಶಗಳಿಂದ ವರ್ಷ ಒಂದಕ್ಕೆ ೬೦ ಕೋಟಿ ರೂ. ಗಳಿಗಿಂತಲೂ ಹೆಚ್ಚಾಗಿ ಬಟ್ಟೆಯು ಬರುತಿದ್ದಿತು. ಯುದ್ಧಾರಂಭವಾದ ನಂತರ ಬಟ್ಟೆಯು ಬರುವುದು ನಿಂತು ಹೋಯಿತು. ಸಂಗ್ರಹದ ಬಟ್ಟೆಯು ಖರ್ಚಾ ಗಿ ಕಳೆದ ೩ ವರ್ಷಗಳಿಂದ ಆಹಾರ ಧಾನ್ಯಗಳಿಗಿಂತ ಲೂ ಕಠಿಣವಾದ ಶೋಧಕ್ಕಾನುಕ್ಕೆ ಬಲಿಯಾಗುತ್ತಿ ದ್ದೇವೆ. ಹಳ್ಳಿಗರಿಗೆ ಬಟ್ಟೆಯು ದೊರೆಯುವಂತೆಯೇ ಇಲ್ಲ. ನಮ್ಮ ದೇಶದಲ್ಲಿರುವ ಬಟ್ಟೆ ಗಿರಣಿಗಳಿಂದ ಹೆಚ್ಚು ಹೆಚ್ಚೆಂದರೆ ಶೇಕಡ ೬೦ ಭಾಗದ ಜನರಿಗೆ ಮೈ ಮುಚ್ಚುವಷ್ಟು ಬಟ್ಟೆ ತಯಾರಾಗಬಲ್ಲದು. ದೇಶದ ಎಲ್ಲಾ ಜನರಿಗೆ ಬಟ್ಟೆಯು ಶೀಘ್ರವಾಗಿ ಪೂರ್ತಿಕೆಯಾ ಗಿ ಬಟ್ಟೆಯ ವಿಷಯದಲ್ಲಿ ದೇಶವು ಸ್ವಾವಲಂಬಿಯಾ ಗ ಬೇಕಾದರೆ ಇನ್ನೂಕೆಲ ಮಿಲ್ಲುಗಳ ಸ್ಥಾಪನೆಯು ಅವಶ್ಯಕ. ದಕ್ಷಿಣ ಹಿಂದೂಸ್ಥಾನದ ಜನಸಂಖ್ಯೆಯು ೮ ಕೋಟಿ ೩ ಲಕ್ಷಗಳೆಂದು ಅಂದಾಜು ಮಾಡಲ್ಪಟ್ಟು ಈ ಭಾಗದ ಬಟ್ಟೆಗಿರಣಿ ಮತ್ತು ಕೈ ಮಗ್ಗಗಳಿಂದ ೧೦೦ ಕೋಟಿ ಗಜಗಳ ಬಟ್ಟೆಯು ಮಾತ್ರ ತಯಾರಾ ಗುತ್ತಲಿದ್ದು ಈಗಿನ ತೀರಾ ಕನಿಷ್ಠದ ಸೀದಾ ಪದ್ಧತಿ ಯಂತೆ ಬಟ್ಟೆಯನ್ನೊದಗಿಸಬೇಕೆಂದರೂ, ಬೇರೆ ಕಡೆ ಯಿಂದ ಬಟ್ಟೆ ತರಿಸಬೇಕಾಗಿದೆ.

ಮಹಾತ್ಮ ಗಾಂಧಿಯವರ ಅವಿಶ್ರಾಂತ ಶ್ರಮ ದಿಂದ ಕಳೆದ ೨೬ ವರ್ಷಗಳಲ್ಲಿ ಖಾದಿಯ-ಮಹತ್ವದ ಪ್ರಗತಿಯಾಗಿದ್ದರೂ, ಅದನ್ನು ದೇಶಕ್ಕೆಲ್ಲಾ ಒದಗಿ ಸುವಷ್ಟು ಪ್ರಮಾಣದಲ್ಲಿ ತಯಾರಿಸುತ್ತಿರುವುದಿಲ್ಲ. ಒಂದು ಪಕ್ಷ ಅಧಿಕ ಪ್ರಮಾಣದಿಂದ ತಯಾರಿಸುವು ದಾದರೂ, ಬಡಜನರು ಕೊಳ್ಳುವಷ್ಟು ಸುಲಭ ಬೆಲೆಗೆ ಅದು ದೊರೆಯುವುದಿಲ್ಲ. ಅಧಿಕ ಸಂಖ್ಯಾಕ ಜನರ, ಖಾದಿಯುತ್ಪತ್ತಿಯ ಕಾರ್ಯದಲ್ಲಿ ತೊಡಗಬೇಕೆಂದರೆ ಅವರಿಗೆ ಹೆಚ್ಚಿನ ಕೂಲಿ(competitive wages) ಕೊಟ್ಟರೇನೆ ಉತ್ಪತ್ತಿಯು ಯಶಸ್ವಿಯಾಗಿ ನಡೆಯು ವುದು. ಖಾದಿ ಉತ್ಪತ್ತಿ ಮತ್ತು ಬಳಕೆಯಿಂದ ದೇ ದಾದ ಬಡಜನರಿಗೆ ಜೀವನ ಸೌಕರ್ಯ ದೊರೆಯುವ ದೆಂದು, ಏಳು ಲಕ್ಷ ಹಳ್ಳಿಗಳ ಹಿಂದೂಸ್ಥಾನದ ಜನ ರಿಗೆ ಉದ್ಯೋಗ ಕಲ್ಪಿಸಬಹುದಾದ ಇಂಥಾ ಮಾರ್ಗ ವನ್ನು ಬಿಟ್ಟರೆ ಸದ್ಯದ ಪರಿಸ್ಥಿತಿಯಲ್ಲಿ ಬೇರೊಂದಿಲ್ಲ ವೆಂದು ಗಾಂಧೀಜೀಯವರು ವಿಶ್ವಾಸ ವಿಟ್ಟಿರುವದನ್ನು ಅದರ ತಥ್ಯಾಂಶವನ್ನು ಯಾರೂ ಅಲ್ಲಗಳೆಯಲಾರರು.

ಆದರೆ ಹಿಂದೂಸ್ಥಾನದಲ್ಲಿ ಕನಿಷ್ಠಕ್ಕೆ ಒಂದು ಜಿಲ್ಲೆಯಾದರೂ ಖಾದಿ ತತ್ವದಿಂದ ಸ್ಥಾಪಿಸಲಾಗಿದ್ದರೆ. ಆಶಾದಾಯಕವಿದ್ದಿತು. ನಮ್ಮ ಅಂಬೋಣವೆಂದರೆ ಯಂತ್ರಯುಗದ ಭರಾಟದಲ್ಲಿ ಜನತೆಯ ಮನೋವೃತ್ತಿಯನ್ನು ಒಂದೇ ರಾತ್ರಿಗೆ ಬದಲಾಯಿಸಿ ಕೋಟಿಗಟ್ಟಲೇ ಗಜ ಉತ್ಪತ್ತಿ ಮಾಡುವ ಕೆಲಸವು ಅಷ್ಟುಸುಲಭವಾದುದಲ್ಲ. ಖಾದಿಯುತ್ಪತ್ತಿಗೆ ಕಾಲವು ಬೇಕು ಅನುಕೂಲ ಕ್ಷೇತ್ರ, ಅನುಕೂಲ ವಾತಾವರಣ. ಈ ಕಾರ್ಯವನ್ನು ಸ್ವಾಗತಿಸುವ ಜನರು ಬೇಕು ಅದಕ್ಕಾಗಿಯೇ, ಪ್ರತಿ ಜಿಲ್ಲೆಯಲ್ಲೂ ಖಾದಿಯೋಜನೆಯನ್ನು ಪ್ರಾರಂಭಿಸಬೇಕೆಂದಿದ್ದ ಶ್ರೀ ವೈಕಾಂಶರವರ ಪ್ರಥಮದ ಏಪ್ರಿಟನ್ನು ಮಹಾತ್ಮರು ರದ್ದುಗೊಳಿಸಿ ಪ್ರಾಂತದ ೮ ಫಿಕಾರ್ಗಳಲ್ಲಿ ಮಾತ್ರ ಅದನ್ನು ಯಶಶ್ವಿಗೊಳಿಸಿರಿ ಎಂದು ಸಲಹೆಯಿತ್ತರು. ಇನ್ನು ಈ ವಿಷಯಗಳಲ್ಲಿ ಸುರಿತ ಕಾರ್ಯಕರ್ತರ ಅಭಾವವೂ ಇದೆ.

ಖಾದಿಯೋಜನೆಯನ್ನು ಯಾವ ಖಾದಿ ಭಕ್ತನೂ ಕಾಂಗ್ರೆಸಿಗನೂ ವಿರೋಧಿಸಲಾರನು. ಒಟ್ಟಿಗೇ ಇಲ್ಲದ ಪರಿಸ್ಥಿತಿಯಲ್ಲಿ ಬಟ್ಟೆ ಗಿರಣಿಗಳೇ ಸ್ಥಾಪಿತವಾಗಬಾರದೆಂದು ಆಜ್ಞೆ ಮಾಡುವುದು ತಪ್ಪು ವಿವೇಕವಾದುದೂ, ಉಚಿತವಾದುದೂ ಎನ್ನಿಸುವುದಿಲ್ಲ. ಈ ದೃಷ್ಟಿಯಿಂದ ಮದ್ರಾಸ್ ಮಂತ್ರಿವರ್ಗದ ಈ ಆಜ್ಞೆಗೆ ಜನತೆಯ ಬೆಂಬಲವೂ ದೊರೆಯುವುದು ಕಷ್ಟ.

ಮದ್ರಾಸ ಮಂತ್ರಿವರ್ಗ ಬದಲಾವಣೆ ಬೇಕು.

ಮದ್ರಾಸಿನ ಕಾಂಗ್ರೆಸ್ ಮಂತ್ರಿವರ್ಗದಲ್ಲಿ ಬದಲಾವಣೆ ಮಾಡದಿದ್ದರೆ, ಕಾಂಗ್ರೆಸ್ ಪಾರ್ಟಿಯಲ್ಲಿ ಏಕ್ಯತೆ ಉಳಿಯಲಾರದೆಂದು ಬೆಜವಾಡದ ಶ್ರೀ ಕಾಳೇಶ್ವರರಾಯರು ಪ್ರಕಟಿಸಿದ್ದಾರೆ. ಅವರೂ, ತಮಿಳನಾಡಿನ ಕಾಂಗ್ರೆಸ್ ಅಧ್ಯಕ್ಷರಾದ ಕಾಮರಾಜನಾಡಾರರೂ ದೆಹಲಿಗೆ ಹೋಗಿ ಗಾಂಧೀಜಿ, ನೆಹರು, ಪಟೇಲ, ರಾಜಾಜಿಯವರನ್ನು ಕಂಡು ಮದ್ರಾಸಿನ 154 ಕಾಂಗ್ರೆಸ್ ಸದಸ್ಯರು ದಸ್ಕತ್ತು ಮಾಡಿದ ಒಂದು ಹೇಳಿಕೆಯನ್ನು ಕೊಟ್ಟು ಮದ್ರಾಸ್ ಮಂತ್ರಿ ಮಂಡಲದಲ್ಲಿ ಬದಲಾವಣೆಯಾಗಬೇಕಾದ ಅವಶ್ಯಕತೆಯನ್ನು ಕುರಿತು ಹೇಳಿದರಂತೆ.

ಘಟನೆಯನ್ವಯ ಹೇಗೆ ಮಂತ್ರಿ ವರ್ಗವು ನಿರ್ಮಾಣವಾಗಬೇಕು. ಅದನ್ನು ಹೇಗೆ ರದ್ದುಗೊಳಿಸಬೇಕು ಎಂಬುದೇ ನಮ್ಮ ಸ್ನೇಹಿತರಿಗೆ ಗೊತ್ತಿಲ್ಲ. ಎಂಬುದಾಗಿ ಪ್ರಧಾನರಾದ ಶ್ರೀ ಪ್ರಕಾಶರು ಈ ಸುದ್ದಿಗಳಿಗೆ ಪ್ರತ್ಯುತ್ತರ ಕೊಟ್ಟರು.

ಕಬ್ಬಿನ ರೈತರಿಗೆ ಸೌಲಭ್ಯ ಕೊಡಿರಿ.

ಕಬ್ಬು ಬೆಳೆಯುವ ರೈತರು ಬೆಲ್ಲವನ್ನು ಮಾಡದೆ ತಮ್ಮ ಕಬ್ಬನ್ನು ಫ್ಯಾಕ್ಟರಿಗಳಿಗೆ ಹೊಡೆಯಬೇಕೆಂದು ಮದ್ರಾಸ್ ಸರ್ಕಾರದವರು ಮಾಡಿರುವ ಆಜ್ಞೆಯು ಪ್ರಜೆಗಳಲ್ಲಿ ಅಸಂತೃಪ್ತಿಯನ್ನು ಮಾಡಿದೆ. ಇದನ್ನು ಕೂಡಲೇ ಹಿಂದೆಗೆದುಕೊಳ್ಳಬೇಕು.

ಅಲ್ಲದೆ ಜವಳಿ ಗಿರಣಿಗಳು ಸ್ಥಾಪಿತವಾಗಬಾರದು, ಗಿರಣಿಗಳಿಗೆ ಹೆಚ್ಚಿನ ಕದುರುಗಳನ್ನು ಪೂರೈಸಬಾರದು. ಎಂದು ಮದ್ರಾಸ್ ಮಂತ್ರಿವರ್ಗವು ವ್ಯಕ್ತಪಡಿಸಿದ ಅಭಿಪ್ರಾಯವು ಅಕಾಲೀಕ್ತ. ಇದರಿಂದ ಔದ್ಯೋಗಿಕ ಪ್ರಗತಿಯು ಕುಂಠಿತವಾಗುವುದೆಂದು ತಮಿಳನಾಡ ಪ್ರಾಂತೀಕ ಕಾಂಗ್ರೆಸ್ ಸಮಿತಿಯು ಮಂತ್ರಿವರ್ಗಕ್ಕೆ ಸೂಚನೆ ಕೊಟ್ಟಿದೆ.

ಅನಂತಪುರ ಜಿಲ್ಲೆಯಲ್ಲಿ ಜಾತೀಯ ಜಗಳ.

ಗುತ್ತಿ ಮತ್ತು ಪೆನುಗೊಂಡೆಗಳಲ್ಲಿ ಹಿಂದೂ ಮುಸಲ್ಮಾನರ ಬಡಿದಾಟವಾಗಿ ಎರಡು ಕಡೆಗಳಲ್ಲೂ ಘಾಯಗಳಾಗಿ ಚಿಕಿತ್ಸೆ ಹೊಂದುತ್ತಿರುವರು ಪೆನುಗೊಂಡೆಯಲ್ಲಿ ಹುಸಿಗುಂಡು ಹಾರಿಸಿ ಜನರನ್ನು ಚದರಿಸಿದರು.

ಮಂತ್ರವಾದಿಯ ಮೋಸ.

ಬಳ್ಳಾರಿ ಸರ್ಕಲ್ ಇನ್ಸಪೆಕ್ಟರ್ ಆಫ್‌ಪೋಲೀಸ್ ನಾರಾಯಣಸ್ವಾಮಿಯವರ ಸಮಯಸ್ಫೂರ್ತಿ ಮತ್ತು ಜಾಗೃತಿಯಿಂದ ಮಲಬಾರದ 'ಕಾಕ' ಎಂಬ ಮಂತ್ರವಾದಿ ಕಳ್ಳನು. ೧೨ ಸಾವಿರ ರೂ. ಗಳೊಂದಿಗೆ ಹಿಡಿಯಲ್ಪಟ್ಟನು. ಸ್ಪೇಷನರಿ ಸಬಮ್ಯಾಜಿಸ್ಟ್ರೇಟಕೋರ್ಟಿನಲ್ಲಿ ದಾಖಲಾದ ಆಪಾದನಾ ಪತ್ರದ ಮುಖ್ಯಾಂಶಗಳು ಹೀಗಿವೆ

ತಮ್ಮ ಊರಾದ ಯಾಪ್ಲಿ ಗ್ರಾಮದಲ್ಲಿ ತಮ್ಮ ಮನೆಯಲ್ಲಿ ಭೂಗರ್ಭನಿಧಿ ಇದೆಯೆಂಬ ವೃತ್ತಾಂತವನ್ನು ಕೇಳಿ ಪ್ರತೀತಿಯ ತಥ್ಯಾಂಶವನ್ನು ಕಂಡುಹಿಡಿಯಲು ಶ್ರೀಯಾಳ್ಪಿ ವಿರುಪಾಕ್ಷಪ್ಪನವರು ಕಾಕ ಎಂಬ ಮಲಬಾರದ ಮಂತ್ರವಾದಿಯನ್ನು ಕರೆಸಿ ಗ್ರಹಗಳ ಸಂಪ್ರೀತಿಗಾಗಿ, ನಿಧಿಯ ಆಕ್ರಮಣಕ್ಕಾಗಿ ಅನೇಕ ಮಂತ್ರ ಪೂರಿತ ಕರ್ಮಗಳನ್ನು ಮಂತ್ರವಾದಿಯ ಸಲಹೆಯಂತೆ ಪ್ರಾರಂಭಿಸಿದರು.

ಮಂತ್ರವಾದಿಯ ಕೆಲದಿನಗಳಲ್ಲಿ ಶ್ರೀ ವಿರುಪಾಕ್ಷಪ್ಪನವರ ಮನೆಯ ಎಲ್ಲಾ ಭಾಗಗಳನ್ನು ತಿಳಿದುಕೊಂಡು ಅವರ ಸ್ವಸಂಗ್ರಹದ ಹಣದ ವಿಷಯವನ್ನು ರಿತು ಐವರ ಸಹಾಯದಿಂದ ಮೂರುಮಣ್ಣಿನ ಪಾತ್ರೆಗಳಲ್ಲಿ ತುಂಬಿಟ್ಟಿದ್ದ ೨೦ ಸಾವಿರ ರಾಣಿರೂವಾಯಿಗಳನ್ನು (ಈಗಿನಬೆಲೆ ೩೦ ಸಾವಿರ ರೂ. ಕದ್ದೊಯ್ದನು. ೨೫ ವರ್ಷಗಳ ಹಿಂದೆ ಶ್ರೀ ವಿರುಪಾಕ್ಷಪ್ಪನವರು ಈ ಹಣವನ್ನು ಭೂಗರ್ಭನೂಡಿ ಹಾಕಿಟ್ಟಿದ್ದರಂತೆ. ಕದ್ದ ಹಣವನ್ನು ಸಂಗಡಿಗರಿಗೆ ಸ್ವಲ್ಪಕೊಟ್ಟು ಬಹುಭಾಗದ ಹಣವನ್ನು ಅಪಹರಿಸಿ ಮೋಟಾರು ಕಾರ್ ಬಾಡಿಗೆ ಮಾಡಿಕೊಂಡು ಹೊಸಪೇಟೆಕಡೆಗೆ ಹೋದನು. ಹೊಸಪೇಟೆಯಲ್ಲಿ ತನ್ನಿಂದನಡೆಯಲ್ಪಡುತ್ತಿದ್ದ ಹೊಟಲಿನಲ್ಲಿ ೧೨ ಸಾವಿರ ರೂ. ಹಳೆಯನಾಣ್ಯಗಳೊಂದಿಗೆ ಪೋಲೀಸರಿಂದ ಬಂಧಿಸಲ್ಪಟ್ಟನು. ಸುಮಾರು ೩ ಸಾವಿರ ರೂ. ಬಳ್ಳಾರಿ ಹೊಸಪೇಟೆಯ ವಿವಿಧ ಅಂಗಡಿಗಳಲ್ಲಿ ಬದಲಾಯಿಸಿದ ಲೆಕ್ಕಗಳು ದೊರಕಿವೆ. ಪೋಲೀಸರು ಕಾಕಾನನ್ನು ಅವನ ಸಂಗಡಿಗರನ್ನು ಬಂಧಿಸಿರುವರು.

ಕೂಲಿಕಾರರಿಗೆ ಹಿಂಸೆ

ಕಲೆಕ್ಟರವರು ಹಾರುಮೂಡಿದರು.

1-10-46 ನೆಯ ತಾ|| ಶ್ರೀ ರೆವಿನ್ಯೂಮಂತ್ರಿಗಳಾದ ಶ್ರೀ ಕಾರಂತರವರೊಡನೆ ಸಿರುಗುಪ್ಪೆಗೆ ಹೋಗುವ ಸಮಯದಲ್ಲಿ ಸೆಂಟ್ರಲ್ ಕೋ ಅಪರೇಟಿವ್ ಸ್ಟೋರ್ಸ ಎದುರಿನಲ್ಲಿ (ಟೌನ್‌ಹಾಲ್) ಸ್ತ್ರೀ ಪುರುಷರ ಚೀತ್ಕಾರ, ರೋದನೆಯ ಶಬ್ದಗಳು ಕೇಳಿಬಂದದ್ದನ್ನು ನೋಡಿ ಕಲೆಕ್ಟರವರು ತಮ್ಮ ಕಾರಿನಿಂದ ಇಳಿದು ನೋಡಲಾಗಿ ಇಬ್ಬರು ಸ್ತ್ರೀಯರನ್ನು ಮತ್ತು ಇಬ್ಬರು ಪುರುಷರನ್ನು ಸೌತ್ ಇಂಡಿಯಾ ಬಿಲ್ಡಿಂಗ್ ಕಂಪನಿಯ ಏಜಂಟರು ಮೋಟಾರ್‌ವಳಗೆ ತಳ್ಳುತಿದ್ದರು. ಆರ್ಕೋಣವಾಸಸ್ಥರಾದ ಅವರನ್ನು ತಪ್ಪಿಸಿಕೊಂಡು ಹೋಗದಂತೆ ಬಲೋರ್ಬಂಧದಿಂದ ತಮ್ಮ ಕೆಲಸಕ್ಕಾಗಿ ಒಯ್ಯಲು ಹವಣಿಸುತ್ತಿದ್ದರು. ಕಂಪನಿಯ ಎಂಜಿನಿಯರ್‌ರಾದ ಶ್ರೀ.ಕೆ. ಎಸ್. ಜೆಟ್ಟಿಯವರು ಹತ್ತರವೇ ಕಾರಿನಲ್ಲಿ ಕೂತಿದ್ದರು. ಕಲೆಕ್ಟರ ಶ್ರೀ ಅನಂತರಾಮನ್ ಮತ್ತು ಶೆಂಟ್ರಲ್ ಸ್ಟೋರ್ಸ ಅಧ್ಯಕ್ಷ ಶ್ರೀ ಹೆಚ್. ಲಿಂಗಾರಡ್ಡಿಯವರು ಕೂಲಿಕಾರರನ್ನು ಬಿಡಿಸಿ ಮೂವರು ತಪ್ಪಿತಸ್ಥರನ್ನು ಪೋಲೀಸರಿಗೊಪ್ಪಿಸಿದರು — ಪೋಲೀಸರು ಶ್ರೀ. ಕೆ. ಯಸ್. ಜೆಟ್ಟಿಯವರನ್ನೂ, ಮೂವರು ತಪ್ಪಿತಸ್ತರನ್ನು ಬಂಧಿಸಿ ಜೆಟ್ಟಿಯವರನ್ನು ಬಿಡುಗಡೆ ಮಾಡಿದರು, ಸ್ಪೆಷನರಿ ಸಬ್‌ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ 3 ನೆಯ ತಾ|| ತಪ್ಪಿತಸ್ತರು ತಪ್ಪನ್ನು ಒಪ್ಪಿಕೊಂಡಕಾರಣ ತಲಾ ೨೫ ರೂ, ಪ್ರಕಾರ ದಂಡವನ್ನು ವಿಧಿಸಲಾಯಿತು.

ಜರ್ಮನಿಯಲ್ಲಿ ಹಿಟ್ಲರ್ ಸರ್ವಾಧಿಕಾರಿಯ ಎಡಗೈ ಬಲಗೈಗಳಂತಿದ್ದ ಗೋರಿಂಗ ರಿಬನ್‌ಟ್ರಾಪ್ ಸ್ಟ್ರಿಚರ್ ಮಗೈನೆಗಿ ಮುಖಂಡರು ಗಲ್ಲಿಗೇರಿಸಲ್ಪಡಲು ಕೋರ್ಟಿನಲ್ಲಿ ಸ್ಥಿರಪಟ್ಟಿತು.

ಬಳ್ಳಾರಿ ಜಿಲ್ಲೆಯಲ್ಲಿ
ಮದ್ಯನಿಷೇಧ ದಿನಾಚರಣೆ ಗಾಂಧಿ ಜಯಂತಿ.

ಹರಪನಹಳ್ಳಿ

ಹರಪನಹಳ್ಳಿ :— ಅಧಿಕಾರಿಗಳು ಅನಧಿಕಾರಿಗಳೂ ಸಹಕರಿಸಿ ಮದ್ಯನಿಷೇಧ ದಿನಾಚರಣೆಯನ್ನು ಉತ್ಸಾಹದಿಂದ ಆಚರಿಸಿದರು. ಶ್ರಿ ಇಜಾರಿ ವಸುಪಾಲಪ್ಪನವರಧ್ಯಕ್ಷತೆಯಲ್ಲಿ ಸಮಾವೇಶವಾದ ಸಾರ್ವಜನಿಕ ಸಭೆಯಲ್ಲಿ ಶ್ರೀ ಪದ್ಮರಾಜ ವಗೈರೆಯವರು ಮದ್ಯಪಾನದ ಅನಾಹುತಗಳನ್ನು ತಿಳಿಸಿ ಎಲ್ಲರೂ ಈ ಶಾಸನವು ಯಶಶ್ವಿಯಾಗುವಂತೆ ಮಾಡಲು ಕೇಳಿದರು. ತಹಶೀಲ್ದಾರ್ ಶ್ರೀ ಮಲ್ಲಣ್ಣನವರ ವಂದನಾರ್ಪಣೆಯ ನಂತರ ಕುಡುಕರಿಗೆ ಬೆಲ್ಲದ ಪಾನಕದ ಹಂಚಿಕೆಯಾಗಿ ಕಾರ್ಯಕ್ರಮವು ಮುಗಿಯಿತು. ಇಲ್ಲಿ ಗಾಂಧಿಜಯಂತಿಯೂ ವೈಭವದಿಂದ ಆಚರಿಸಲಾಯಿತು.

ಹೊಸಪೇಟೆ.

ತಾ॥ 2 ನೆಯ ಬೆಳಿಗ್ಗೆ ವಿದ್ಯಾರ್ಥಿ ಕಾಂಗ್ರೆಸ್, ಸೇವಾದಳ ಸೈನಿಕರೊಂದಿಗೆ ಪ್ರಭಾತ ಫೇರಿ ಜರುಗಿ ಶ್ರೀ ಎಂ. ರಾಘವೇಂದ್ರರಾಯರ ಹಸ್ತದಿಂದ ಧ್ವಜಾರೋಹಣವಾಯಿತು. ಸಾಯಂಕಾಲ ಕಾಂಗ್ರೆಸ್ ಭವನದಿಂದ 78 ಜೊತೆ ಎತ್ತುಗಳಿಂದಲಂಕೃತವಾದ ರಥದಲ್ಲಿ ಗಾಂಧೀಜೀ ಯವರ ಭಾವಚಿತ್ರದ ಮೆರವಣಿಗೆ ಹೊರಡಿತು. ಆಜಾದ್ ಹಿಂದ್ ಫೌಜಿನ ೧೧ಲ ಸೈನಿಕರು ಸಮವಸ್ತ್ರ ದೊಂದಿಗೆ ಬಂದು ಭಾಗ ವಹಿಸಿದರು. ಮೆರವಣಿಗೆಯು ನಗರದ ಮುಖ್ಯ ಬೀದಿಗಳಲ್ಲಿ ಹಾದು ವಾಲ್ಮೀಕಿ ಆಶ್ರಮಕ್ಕೆ ತಲಪಿತು. ಅಲ್ಲಿ ಆಜಾದ್ ಹಿಂದ್ ಸೈನಿಕರು ಗಾಂಧೀಜಿಯವರಿಗೆ ವಂದನೆಯನ್ನರ್ಪಿಸಿದರು ಶ್ರೀ ಲಕ್ಷ್ಮಣ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಶ್ರೀ ಮ. ರಾಘವೇಂದ್ರರಾಯರು, ಬಾಣದ ಜಂಬಪ್ಪ, ದಳವಾಯಿ ಅಂಬಣ್ಣ ನವರು ಗಾಂಧಿಜಿಯವರ ಜೀವನ ಚರಿತ್ರೆ ಬಗ್ಗೆ ಭಾಷಣ ಮಾಡಿದರು. ಶ್ರೀ ದೇಶಾಯಿಯವರು ವಂದನಾರ್ಪಣೆ ಮಾಡಿದನಂತರ ವಂದೇ ಮಾತರಂ ಜೈ ಹಿಂದ್ ದೊಂದಿಗೆ ಸಭೆ ಮುಕ್ತಾಯವಾಯಿತು.

ಕಾಮಲಾಪುರ.

6 ನೆಯ ಸಾಯಂಕಾಲ 78 ಜೊತೆ ಎತ್ತುಗಳಿಂದ ಹೂಡಿದ ರಥದಲ್ಲಿ ಗಾಂಧೀಜಿಯವರ ಭಾವ ಚಿತ್ರದ ಮೆರವಣಿಗೆ ಊರಿನ ಮುಖ್ಯ ಬೀದಿಗಳಲ್ಲಿ ಸಂಚರಿಸಿತು. ಶ್ರೀ ಲಕ್ಷ್ಮಣಮೂರ್ತಿ ಯವರ ಅಧ್ಯಕ್ಷತೆಯಲ್ಲಿ ಶ್ರೀ ಕಟ್ಟಿ ಶ್ರೀನಿವಾಸಚಾರು ಖಾದಿ ಮತ್ತು ಚರಕಾ ಮಹತ್ವದ ಬಗ್ಗೆಯೂ ಶ್ರೀ ಸೊಂಡೂರು ಶೇಷಗಿರಿಚಾರ್ ಮದ್ಯಪಾನ ನಿರೋಧ ಮತ್ತು ಕಾಂಗ್ರೆಸ್ ಚಟುವಟಿಕೆಗಳ ಬಗ್ಗೆಯೂ, ಶ್ರೀ ಅಸುಂಡಿ ತಿರುಮಲರಾಯರು ಗಾಂಧೀಜಿಯವರ ಚರಿತ್ರೆ ಮತ್ತು ಅವರ ತತ್ವ, ಈಗಿನ ಪ್ರಾಂತೀಯ ಸರಕಾರಗಳ ಅಧಿಕಾರ ಮತ್ತು ಕಾರ್ಯಕ್ರಮಗಳ ಬಗ್ಗೆ ಮಾತನಾಡಿದರು ಆರ್. ವ್ಹಿ. ದೇಸಾಯಿಯವರು, ಗಾಂಧೀಜಿಯವರು ಕಾಂಗ್ರೆಸ್ ನಾಯಕತ್ವ ವಹಿಸಿದ ಮೇಲೆ ಆದ ಬದಲಾವಣೆ ಮತ್ತು ಅವರ ಸತ್ಯಾಗ್ರಹ ಚಳುವಳಿಯ ಮಹತ್ವವನ್ನು ಹೇಳಿದರು. ನಂತರ ಅಧ್ಯಕ್ಷರು ಗಾಂಧೀಜಿ ಜೀವನ ಚರಿತ್ರೆ ಮತ್ತು ಶ್ರೀ ಸ್ವಾಮಿ ರಾವ್ 'ವಿಶಾರದ' ರಾವ್ಯಭಾಷೆ ಮಹತ್ವದಮೇಲೆ ಮೇಲೆ ಮಾತಾಡಿದರು.

ಕೊನಾಯ್ಕನಹಳ್ಳಿ.

7ನೆಯ ತಾ॥ ಈಗ್ರಾಮದಲ್ಲಿ ಗಾಂಧೀಜಿಯವರ ಭಾವ ಚಿತ್ರದ 78 ಜೊತೆ ಎತ್ತುಗಳ ಮೆರವಣಿಗೆ ಮಾಡಲಾಯಿತು. ಶ್ರೀ ಶೆಟ್ಟಿ, ಶ್ರೀ ಆಚಾರ್ಯರು,

ಸೊಂಡೂರು ಶೇಷಗಿರಿ ಆಚಾರ್ಯರು ಗಾಂಧೀಜಿ ಯವರ ಜೀವನ ಚರಿತ್ರೆ ಮತ್ತು ಅವರ ವಿಧಾಯಕ ಕಾರ್ಯ ಕ್ರಮಗಳನ್ನು ತಿಳಿಸಿದರು.

ಮಲಪನಗುಡಿ.

4 ನೆಯ ತಾ|| ಶ್ರೀ ವಿದ್ಯಾರಣ್ಯವಾಚನಾಲಯ ಸಮಿತಿ ಆಶ್ರಯದಲ್ಲಿ ಇಲ್ಲಿಯ ಸಾರ್ವಜನಿಕರು ಮಹಾತ್ಮರ ೭೮ ನೇ ಜಯಂತಿಯನ್ನು ವೈಭವವಾಗಿ ಆಚರಿಸಿದರು. ಆಮಂತ್ರಿತರಾಗಿ ಕೊಂಡನಾಯಕನ ಹಳ್ಳಿ ಅನಂತಶಯನಗುಡಿ, ಇಂಗಳಿಗಿ ಗ್ರಾಮಸ್ಥರೂ, ಹೊಸಪೇಟೆಯಸರ್ಕಲ್ ಕಾಂಗ್ರೆಸ್ ಕಾರ್ಯಕರ್ತರು ವಕೀಲರು ಆಗಮಿಸಿದ್ದರು. ರಾಷ್ಟ್ರಧ್ವಜಾರೋಹಣವು ಶ್ರೀ ಗೌಡ ಶ್ರೀನಿವಾಸರಿಂದಾಯಿತು. ಸಾಯಂಕಾಲ ೭೮ ವೃಷಭಗಳಿಂದ ಮಹಾತ್ಮರ,ನೆಹರೂರ ಬೋಸರ ಭಾವಚಿತ್ರಗಳಿಂದ ಕೂಡಿದ ಅಲಂಕೃತರಥವು-ವಾದ್ಯ ವಿಶೇಷಗಳಿಂದ ಪ್ರಚಂಡ ಜನ ಸಮೂಹದೊಂದಿಗೆ ಪ್ರಾಣದೇವರಗುಡಿ- ಅನಂತಶಯನಗುಡಿ, ಏಳು ಹನುಮಪ್ಪನ ಗುಡಿಗಳನ್ನು ಹಾದು ಹೋಯಿತು. ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಹುಬ್ಬಳ್ಳಿ ಗೋವಿಂದಾಚಾರ್ಯರ ಅಧ್ಯಕ್ಷತೆಯಲ್ಲಿ ಗಾಂಧಿ—ಜೀವಿತದ ಅಮೋಘ ಪಾಠಗಳನ್ನು ಭಾಷಣಗಳ ಮೂಲಕ ವಿವರಿಸಲಾಯಿತು. ಮಂಗಳಾರತಿ-ಉಪಾಹಾರ ವಂದನಾರ್ಪಣೆಗಳಿಂದ ಸಭೆಯು ಮುಗಿಯಿತು

[ಹೊ. ರಾಮೂಚಾರ-ಕಾರ್ಯದರ್ಶಿ ಶ್ರೀ.ವಿ ಕ.ಸ.]

ತೂಲಹಳ್ಳಿ (ಕೂಡ್ಲಿಗಿ.)

ಮದ್ಯನಿಷೇಧ ದಿನಾಚರಣೆಯು ೧ ನೆಯ ತಾ|| ಪ್ರಾ|| ಪ್ರಭಾತಫೇರಿಯನಂತರ ಶ್ರೀಭರ್ಮನಗೌಡರ ಹಸ್ತದಿಂದಾದ ಧ್ವಜಾರೋಹಣದಿಂದ ಆರಂಭವಾಯಿತು. ಸಾಯಂಕಾಲ ಬಸವೇಶ್ವರ ಮೈದಾನದಲ್ಲಿ ಶ್ರೀ ಪಂಚಾಕ್ಷರ ಶರ್ಮರಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಮದ್ರಾಸ್ ಸರ್ಕಾರದ ಈಶಾಸನವನ್ನು ಮೈಸೂರಿಗೆ ಹೊಂದಿರುವ ಈಭಾಗದಲ್ಲಿ ಯಶಶ್ವಿ ಮೂಡಲು ಶ್ರೀಗಳಾದ ಶಿದ್ದಯ್ಯ, ಸಿದ್ದನಗೌಡ ಬಸಪ್ಪ ಬೊಮ್ಮಲಿಂಗಯ್ಯ ಮತ್ತು ನಾಗೇಂದ್ರಶೆಟ್ಟರು ಮೂತಾದಿದರು. ನಿರೋಧಕ ಸಮಿತಿಯಾಯಿತು.

ಗಾಂಧಿ ಜಯಂತಿ— ೨ ನೆಯ ಪ್ರಾ. ಶ್ರೀ ಭೀಮನಾಯ್ಕರಿಂದ ಧ್ವಜಾರೋಹಣವಾಯಿತು. ಧ್ವಜವಂದನೆಗೆ ಹಣ್ಣು ಮುದುಕರಾದ ಕ. ಅಜ್ಜನ ಗೌಡರು, ಉತ್ತಂಗಿ ಅಜ್ಜನಗೌಡರು, ಸೆ. ಚನ್ನ ಬಸಪ್ಪನವರು, ಆಗಮಿಸಿದ್ದರು. ಗಾಂಧಿ ಭಾವ ಚಿತ್ರವನ್ನೊಳಗೊಂಡ ಶೃಂಗರಿಸಿದ ರಥದ ಮೆರವಣಿಗೆಯು ೧೦ ಜೊತೆ ವೃಷಭಗಳಿಂದ ಮುಖ್ಯ ಬೀದಿಗಳಲ್ಲಿ ನಡೆಯಿತು. ಸಾಯಂಕಾಲದ ಗಾಂಧಿ ಮೈದಾನದಲ್ಲಿ ಶ್ರೀ ಬಸವನಗೌಡರಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಶ್ರೀಸಿದ್ದಯ್ಯ, ಸಿದ್ದನಗೌಡ, ಬಸಪ್ಪ, ಬೊಮ್ಮಲಿಂಗಯ್ಯ ಇವರು ಗಾಂಧಿ ಜೀವಿತ ಮತ್ತು ವ್ಯಕ್ತಿತ್ವದಮೇಲೆ ಮೂತಾದಿ ಅದರಿಂದ ಕಲಿಯಬೇಕಾದ ಪಾಠವನ್ನು ವಿವರಿಸಿದನಂತರ ವಂದೇ ಮೂತರಂ—ಗೀತೆಯಿಂದ ಮುಕ್ತಾಯವಾಯಿತು.

[ಟಿ. ಯಂ. ಚನ್ನಬಸಯ್ಯ, ಕಾ.ಕಾಂ.ಸೆ. ತೂಲಹಳ್ಳಿ.

ನವಲಿ:— ಹಡಗಲಿ ತಾಲೂಕು ನವಲಿ ಗ್ರಾಮದಲ್ಲಿ ೨ ನೆಯ ತಾ|| ಗಾಂಧೀಜಿ ಜನ್ಮದಿನೋತ್ಸವವು ವೈಭವದಿಂದ ಆಚರಿಸಲ್ಪಟ್ಟಿತು. ಮಹಾತ್ಮರ ಭಾವಚಿತ್ರವನ್ನು ಅಲಂಕೃತ ರಥದಲ್ಲಿ ೭೮ ಎತ್ತುಗಳಿಂದ ಮೆರೆಯಿಸಲಾಯಿತು. ನೆರೆದ ಬಹಿರಂಗಸಭೆಯಲ್ಲಿ ಶ್ರೀ ಹೆಚ್. ಮರುಳಸಿದ್ದನಗೌಡರು ಮಹಾತ್ಮರ ಜೀವಿತಚರಿತೆ, ಧ್ಯೇಯ ಸಾಧನೆಯ ಕೃಷಿ ವಗೈರೆ ವಿವರವಾಗಿ ತಿಳಿಸಿದರು.

ಪಂಡಿತ ಜವಹರಲಾಲ ನೆಹರೂರವರು ಸರಹದ ಪ್ರಾಂತದ ಸ್ವತಂತ್ರ ಭಾಗಗಳ ಜನರ ಭೇಟಿಗೆ ಅಕ್ಟೋಬರ್ 15 ರಿಂದ ಖಾನ ಅಬ್ದುಲ್ ಗಫರ್ ಖಾನರೊಡನೆ ಹೊರಡಲಿರುವರು.

ಬಳ್ಳಾರಿ ಜಿಲ್ಲೆಯಲ್ಲಿ
ಗಾ ಂ ಧಿ ಜ ಯ ಂ ತಿ.

(ಮುಂದುವರಿದುದು.)

ಉ ಜ್ಜಿ ನಿ.

ಸ್ಥ ಳೀ ಯ ಕಾ ಂ ಗ್ರೆ ಸ್ ಸ ಮಿ ತಿಯವರಿಂದ ಜಗದ್ವಂದ್ಯ ಮಹಾತ್ಮ ಗಾಂಧಿಯವರ ಜನ್ಮದಿನೋತ್ಸವವು ವಿಜೃಂಭಣೆಯಿಂದ ನೆರವೇರಿತು. ಒಂಭತ್ತು ಜೊತೆ ಎತ್ತುಗಳಿಂದಲಂಕೃತವಾದ ವಾಹನದಲ್ಲಿ ಗಾಂಧಿ ಭಾವಚಿತ್ರವನ್ನು ಮೆರವಣಿಗೆಯಲ್ಲಿ ಒಯ್ಯಲಾಯಿತು. ಶ್ರೀ ಟಿ. ಶಿದ್ದಲಿಂಗನಗೌಡರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಗುರುಬಸಪ್ಪ, ನರಸಪ್ಪ, ಬಸೆಟ್ಟಪ್ಪ, ಮರುಳನಗೌಡ ಮುಂತಾದವರ ಆವೇಶ ಭಾಷಣಗಳಾದವು. ವಂದೇಮಾತರಂ ಗೀತೆಯಿಂದ ಸಭೆಯು ವಿಸರ್ಜಿತವಾಯಿತು

ಹೆಬ್ಬಾಳ (ಗುಡಿಗೇರಿ.)

ಇಲ್ಲಿ ಗ್ರಾಮಸೇವಾ ಸಂಘದವರು ಗಾಂಧಿ ಜನ್ಮದಿನೋತ್ಸವವನ್ನು ಧ್ವಜವಂದನೆ, ಮತ್ತು ಗಾಂಧಿ ಭಾವಚಿತ್ರದ ಮೆರವಣಿಗೆಯನ್ನು ಪಾಲಕಿಯಲ್ಲಿಟ್ಟು ಊರಬೀದಿಗಳಲ್ಲಿ ಏರಿಸಿ ಸಾರ್ವಜನಿಕ ಸಭೆಯ ಮೂಲಕ ಆಚರಿಸಿದರು. ಶ್ರೀ ಸಿದ್ದಯ್ಯ ಹೆಬ್ಬಾಳಮಠ ಇವರ ಅಧ್ಯಕ್ಷತೆಯಲ್ಲಿ ಶ್ರೀಜಂಧಿ ಸಾಹೇಬರೂ, ಶ್ರೀ ಹಾಲಪ್ಪನವರೂ, ಹಿಂದೂ ಮುಸ್ಲಿಂ ಐಕ್ಯತೆ ಜಾತಿವೈಷಮ್ಯದ ನಿರ್ಮೂಲದ ಒಗ್ಗೆ ಮಾತಾಡಿದರು. ಅಧ್ಯಕ್ಷರು ಗಾಂಧಿ ಜೀವನ ಚರಿತೆ, ಹಳ್ಳಿಗರ ಕರ್ತವ್ಯವನ್ನು ಕುರಿತು ಹೇಳಿದರು.

ಕುರುಗೋಡು.

ಇಲ್ಲಿ ೨ ನೆಯ ತಾ॥ ಗಾಂಧಿ ಜಯಂತಿಯು ವೈಭವವಾಗಿ ಆಚರಿಸಲಾಯಿತು. ಸಾಯಂಕಾಲ ಗಾಂಧಿ ಭಾವಚಿತ್ರದ ಮೆರವಣಿಗೆಯನಂತರ ಬಹಿರಂಗ ಸಭೆಯಲ್ಲಿ ಶ್ರೀಗಳಾದ ಮರಿಬಸವನ ಗೌಡ, ರಾಮಚಂದ್ರಗುಪ್ತ' ಚಂದ್ರಶೇಖರಾಚಾರಿ ಯವರು ಗಾಂಧಿ ಜೀವನದಿಂದ ಕಲಿಯಬೇಕಾದ ಪಾಠಗಳನ್ನು ಹೇಳಿದರು.

ಮೂಗಳ [ಹಡಗಲಿ.]

ಮಧ್ಯನಿಷೇಧ ಶಾಸನದ ಪ್ರಾರಂಭೋತ್ಸವವು ೧ ನೆಯ ತಾ॥ ಧ್ವಜಾರೋಹಣದಿಂದಾರಂಭವಾಗಿ ಪ್ರಭಾತಫೇರಿ ಮತ್ತು ಸಾಯಂಕಾಲ ಸುರಾರಾಕ್ಷಸನ ಚಿತ್ರವು ಮೆರವಣಿಗೆಯನಂತರ ಕಾಮುದಹನವಾಯಿತು. ಶ್ರೀ.ಮ. ರಾಘವೇಂದ್ರರಾವ್, ಲಂಕೆಪ್ಪ, ಚಂದ್ರಗೌಡರು, ಮೂದಕವಸ್ತುಗಳ ಕೆಡಕುಗಳನ್ನು ಕುರಿತು ಮಾತಾಡಿ ಈ ಶಾಸನವನ್ನು ಯಶಶ್ವಿಮಾಡಲು ಬಿನ್ನೈಸಿದರು. ಪಾನನಿಷೇಧ ಸಮಿತಿಯ ಸಭೆಯಲ್ಲಿ ೪ ನೆಯ ತಾ॥ ಕರಿಯಪ್ಪ—ವೀರಪ್ಪ, ರಾಮಪ್ಪನವರು ಮಾತಾಡಿ ಪ್ರಚಾರ ಮಾಡಿದರು.

ಗಾಂಧಿ ಜಯಂತಿಯು, ಮಹಾತ್ಮರ ಭಾವ ಚಿತ್ರದ ಅಲಂಕೃತರಥವು ೧೦೧ ವೃಷಭಗಳಿಂದ ಮೆರವಣಿಯಲ್ಲಿ ಸಾಗಿ ಪ್ರಭಾತಫೇರಿ ಧ್ವಜವಂದನೆ ಸಾರ್ವಜನಿಕೆ ಸಭೆಯಿಂದ ಅಂತವಾಯಿತು. ಮಳೆ ಸುರಿಯುತ್ತಿದ್ದರೂ ಜನರು ಕದಲಲಿಲ್ಲ. ವೃಷಭದ ಮೇಲೆ ಹಾಕಿದ ಬೆಲೆಯ ಪೀರೆಗಳನ್ನು ತೆಗೆಯಲಿಲ್ಲ. ಶ್ರೀ ಬಸವರೆಡ್ಡಿ ಸಾಹುಕಾರರ ಅಧ್ಯಕ್ಷತೆಯಲ್ಲಿ ಕ್ರಿಷ್ಣಾರೆಡ್ಡಿ, ರಾಮಪ್ಪ, ವೆಂಕಾರೆಡ್ಡಿ, ಲಂಕೆಪ್ಪ, ಉಜ್ಜನಗೌಡ, ಚಂದ್ರಗೌಡ ಇವರು ಗಾಂಧಿ ಜೀವಿತ ತತ್ವಗಳ ಮೇಲೆ ಮಾತಾಡಿದನಂತರ ವಂದೇಮಾತರಂ, ಗೀತೆಯಾಗಿ ಜಯ ಜಯಕಾರದಿಂದ ಸಭೆಯು ಮುಗಿಯಿತು.

---

* ಕಲ್ಕತ್ತಾ ನಗರದ ೨೮ ವೃತ್ತ ಪತ್ರಗಳ ಪೈಕಿ ೨೧ ವೃತ್ತ ಪತ್ರಿಕೆಗಳು ಸುದ್ದಿಗಳ ಮೇಲೆ ನಿಯಂತ್ರಣ ಹಾಕಿದ ಕಾರಣ ಪ್ರಕಟನೆಯನ್ನು ನಿಲ್ಲಿಸಿದ್ದವು.

ಮುಸಲ್ಮಾನರಿಗೆ ಪುಂಡುಗಂದಾಯ.

ಆಲಿಘರದ ಮುಸಲ್ಮಾನ ಪ್ರಜೆಗಳ ಮೇಲೆ ಒಂದು ಲಕ್ಷ 75 ಸಾವಿರ ರೂ. ಪುಂಡುಗಂದಾಯ ಹಾಕಿದ್ದಾರೆ. ಮುಸ್ಲಿಂ ವಿಶ್ವವಿದ್ಯಾಲಯದ ಮುಸಲ್ಮಾನರು 50 ಸಾವಿರ ರೂ. ಕೊಡಬೇಕು. ಕಳೆದ ಮೂರ್ತಿಂಗಳಲ್ಲಿ ಮುಸಲ್ಮಾನರು ಹಿಂದೂಗಳ ಮೇಲೆ ದಾಳಿ ಮಾಡಿ ಅವರ ಅಂಗಡಿಗಳನ್ನು ಸುಟ್ಟು ಬಹಳ ನಷ್ಟಕ್ಕೆ ಗುರಿಪಡಿಸಿದ್ದಾರೆ.

ಜಾತೀಯ ದಂಗೆ.

ಕಲ್ಕತ್ತೆಯಲ್ಲಿ ಕತ್ತಿಯ ಇರಿತಗಳಿಂದ ಘಾಯಗಳೂ ಮರಣಗಳೂ ಸಂಭವಿಸುತ್ತಲೇ ಇವೆ. ಉತ್ತರ ಮಧ್ಯಭಾಗಗಳ ಚರಂಡಿಗಳಲ್ಲಿ ಒಬ್ಬ ಸ್ತ್ರೀಯ ಶವವು 3 ಇತರರ ಶವಗಳು ದೊರೆತವು. ಗೋಣಿಚೀಲದಲ್ಲಿ ಸುತ್ತಿಹಾಕಿದ್ದ ಮತ್ತೊಂದು ಶವವು ದೊರೆಯಿತು. 6 ನೆಯ ತಾರೀಖು ಹೊಡೆದಾಟಗಳಲ್ಲಿ 3 ಸತ್ತು 8 ಜನರಿಗೆ ಘಾಯಗಳಾಗಿವೆ.

ಬೊಂಬಾಯಿ—ಯಲ್ಲಿ 6 ನೆಯ ತಾರೀಖು ಸಾಯಂಕಾಲದೊಳಗೆ 3 ಸತ್ತು 7 ಜನರಿಗೆ ಇರಿತಗಳಾಗಿವೆ. ಶಾಂತಿ ಸಮಿತಿಯ 150 ಜನರಲ್ಲಿ ಸೌಹಾರ್ದವು ತೋರಿಬರುತ್ತಲಿದೆ. ವರಿಷ್ಠಿತಿಯು ಸುಧಾರಿಸುತ್ತಲಿದೆ.

ಅಲಹಾಬಾದ್ ಇಲ್ಲಿ ಕಳೆದವಾರ ನಡೆದ ದಂಗೆಯಲ್ಲಿ ಇಬ್ಬರು ಸತ್ತು 12 ಜನರು ಘಾಯಗೊಂಡಿರುವರು. ರಾಮಲೀಲಾ ಮೆರವಣಿಗೆಯನ್ನು ತೆಗೆದಾಗ ಈ ಗಲಾಟೆ ಸಂಭವಿಸಿದೆ.

ಹಿಂದೂಸ್ಥಾನದ ಸ್ವಾತಂತ್ರ್ಯ ವಿರುದ್ಧವಾಗಿ ಇಂಗ್ಲೆಂಡಿನ ಕನ್ಸರ್ವೇಟಿವ ಪಕ್ಷದ ಸಭೆಯಲ್ಲಿ ನಡೆದ ಭಾಷಣವನ್ನು ಖಂಡಿಸಿ ಭಾರತದ ಸ್ವಾತಂತ್ರ್ಯವಿರೋಧಿಗಳು ಇಲ್ಲಿ ಅನೈಕ್ಯವನ್ನುಂಟುಮಾಡಿ ತಮ್ಮ ಹಿಡಿತವನ್ನು ಬಲಪಡಿಸಿಕೊಳ್ಳುವ ಯತ್ನಗಳು ಯಶಸ್ವಿಯಾಗಲಾರವು ಎಂದು ನೆಹರೂ ಹೇಳಿದ್ದಾರೆ.

ಕಳ್ಳ ಸಾರಾಯಿ ಬಳ್ಳಾರಿಜಿಲ್ಲೆಯಲ್ಲಿ ಶಿಕ್ಷೆ.

ಆಲೂರು ತಾಲೂಕು ಕಮ್ಮರಚೇಡಿನಲ್ಲಿ ಕಳ್ಳ ಸಾರಾಯಿ ಸಂಗ್ರಹಿಸಿರುವರೆಂಬ ಸುದ್ದಿ ಕೇಳಿ ಕಾಂಗ್ರೆಸ್ ಸಮಿತಿ ಅಧ್ಯಕ್ಷ, ಕಾರ್ಯದರ್ಶಿಗಳಾದ ಶ್ರೀ ಲಕ್ಷ್ಮಣ್ ಮತ್ತು ಸತ್ಯನಾರಾಯಣರೊಡನೆ ಆದವಾನಿ ಡೆಪ್ಯೂಟಿ ಕಲೆಕ್ಟರವರು ಹೋಗಿ ಅನೇಕ ಮನೆಗಳನ್ನು ಪರಿಶೋಧಿಸಿ ಒಂದು ಸಾವಿರ ರೂ. ಬೆಲೆ ಬಾಳುವ ಸಾರಾಯಿಯನ್ನು ಜಪ್ತುಮಾಡಿದರು. ತಪ್ಪಿತಸ್ಥರೆಂದು ಸಂಶಯಕ್ಕೊಳಗಾದ ತಲಾರಿ ಮುಕ್ಕಣ್ಣ, ಬಸಪ್ಪ, ಶೇಷಣ್ಣ, ಎಂಬುವರನ್ನು ಬಂಧಿಸಿ ಆದವಾನಿಗೆ ಒಯ್ದರು.

ಪಂಡಿತ ನೆಹರೂರ ಸರಹದ ಸಂಚಾರ.

ಸರಹದ ಮತ್ತು ಅಫ್ಘಾನಿಸ್ಥಾನದ ಮಧ್ಯ ಭಾಗದಲ್ಲಿರುವ ಸ್ವತಂತ್ರ ವಜೀರಿಸ್ತಾನದಲ್ಲಿ ನೆಹರೂರವರು ಸಂಚರಿಸಿ ಅವರ ಸದಸ್ಯದ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಅಕ್ಟೋಬರ್ ೧೬ ಕ್ಕೆ ಪೆಶಾವರಕ್ಕೆ ಹೊರಡುವರಿದ್ದಾರೆ. ಸರಹದ್ ಗವರ್ನರರಾದ ಸರ್ ಓಲಾಫ್ ಕ್ಯಾರೋರವರು ೯ ನೆಯ ತಾರೀಖು ನೆಹರೂರವರನ್ನು ಕಂಡು ಏರ್ಪಾಟುಗಳ ಬಗ್ಗೆ ಚರ್ಚಿಸಿದರು.

ತುಂಗಭದ್ರಾ ಯೋಜನೆ.

ಮದ್ರಾಸ್ ಹೈದರಾಬಾದ್ ಸರ್ಕಾರಗಳಲ್ಲಿ ಅಣೆಕಟ್ಟನ್ನು ಕಟ್ಟುವ ವಿವರಗಳ ವಿಷಯಕ್ಕೆ ಒಮ್ಮತವಾಗಿ ಕಟ್ಟಡದ ಕಾರ್ಯವು ಶೀಘ್ರವಾಗಿ ಪ್ರಾರಂಭವಾಗಲಿದೆ. ಕೆರೆಯಮೇಲೆ ೧೨ ಅಡಿ ಅಗಲದ ರಸ್ತೆಯನ್ನು ಮಾಡುವರೆಂದೂ, ಕೆರೆಯ ಕಳಗೆ ತುಂಗಭದ್ರಾನದಿಗೆ ಸೇತುವೆಯನ್ನು ಕಟ್ಟುವರೆಂದೂ ಸರ್ಕಾರದವರು ಬಳ್ಳಾರಿ ಜಿಲ್ಲಾ ಬೋರ್ಡು ಅಧ್ಯಕ್ಷರಿಗೆ ತಿಳಿಸಿದ್ದಾರೆ.

ಬಳ್ಳಾರಿ ಜಿಲ್ಲಾ ಲೇಬರ್ ಶಾಲೋಪಾಧ್ಯಾಯರ ಸಭೆ.

ಈ ಸಭೆಯು 3 ನೆಯ ತಾ|| ಸಾಯಂಕಾಲ 3 ಘಂಟೆಯಿಂದ ರಾತ್ರಿ 8 ಘಂಟೆಯವರಿವಿಗೆ ಕಲೆತಿದ್ದಿತು. ಸಂಬಳವನ್ನು ಕೊಡುವರೆಂಬುದೊಂದು, ಸಂಘದ ಸಭೆಗಳಿಗೆ ಮೇಲಧಿಕಾರಿಗಳ ಆಕ್ಷೇಪಣೆ ಇಲ್ಲವೆಂಬ ಅರಿವು ಈ ಕಾರಣ ಬಹು ಸಂಖ್ಯಾಕರಾಗಿ 50 ಕ್ಕಿಂತಲೂ ಹೆಚ್ಚಿನ ಸಂಖೆಯ ಉಪಾಧ್ಯಾಯರು ಬಂದಿದ್ದರು. ಹಿಂದಿನ ಸಭೆಗಾಗಲಿ ಈ ಸಭೆಗಾಗಲಿ ಲೇಬರ್ ಶಾಲೆಗಳಲ್ಲಿ ಏಕಮಾತ್ರ ಹೈಯರ್ ಎಲಿಮೆಂಟರಿ ಶಾಲೆ ಬೇವಿನಹಳ್ಳಿ ತಾಂಡದ ಒಬ್ಬ ಉಪಾಧ್ಯಾಯರಾಗಲಿ ಬಂದಿರಲಿಲ್ಲ. ಅವರು ಸಂಘಕ್ಕೆ ಮನ್ನಣೆ ಕೊಡದಿದ್ದುದು ವಿಷಾದಕರ. ಅಧಿಕಾರಿಗಳು ಸಂಘಾಧ್ಯಕ್ಷರ ವಿನಂತಿಯನ್ನು ಮನ್ನಿಸಿ ಸೆಪ್ಟಂಬರ್ ತಿಂಗಳ ಸಂಬಳ ಬಳ್ಳಾರಿಯಲ್ಲೇ, ಕಲೆತ ಉಪಾಧ್ಯಾಯರಿಗೆ 3 ನೆಯ ತಾ|| ಮಧ್ಯಾನ್ಹದೊಳಗಾಗಿ ಕೊಟ್ಟಿದ್ದರು. ಅಲ್ಲದೆ ಶಾಲೋಪಕರಣಗಳನ್ನು ಸಹ ಅವಶ್ಯಕತೆಯಿದ್ದ ಶಾಲೆಗಳಿಗೆ ಪೂರಯಿಸಿದರು. ಪ್ರಥಮತಃ- ಉಪಾಧ್ಯಾಯರೂ, ಜಿಲ್ಲಾ ಲೇಬರ್ ಶಾಲೋಪಾಧ್ಯಾಯಸಂಘದ ಕಾರ್ಯದರ್ಶಿ ಇವರು ಬೇಡಿಕೆಗಳ ವಿಷಯ ಚರ್ಚಿಸಿಕೊಂಡರು. ನಂತರ ಸಂಘದ ಅಧ್ಯಕ್ಷರಾದ ಶ್ರೀಕೇಶವರಾಯರು ಹಿಂದಿನ ಸಭೆಯ ಕಾರ್ಯಕಲಾಪಗಳನ್ನು ತಿಳಿಸಿ ಲೇಬರ ಕಮಿಶನರವರೊಡನೆ ನಡೆದ ಪತ್ರವ್ಯವಹಾರವನ್ನು ಓದಿ ಹೇಳಿ ಮುಂದಿನ ಕಾರ್ಯಕ್ರಮದ ಸಂಕ್ಷಿಪ್ತ ವಿವರಣೆ ಮಾಡಿದರು ಬಳ್ಳಾರಿಜಿಲ್ಲಾ ಕಲೆಕ್ಟರ್ ಶ್ರೀ. ಕೆ. ಎನ್. ಅನಂತರಾಮ್ಮರವರು ಅಧ್ಯಕ್ಷರೊಡನೆ ಸಾಯಂಕಾಲ 6 ಘಂಟೆಗೆ ಬಂದರು-ಗ್ರೂಪ್ ಫೋಟೊ ಆದ ನಂತರ ಕಲೆಕ್ಟರವರು ಉಪಾಧ್ಯಾಯರ ಕುಂದು ಕೊರತೆಗಳನ್ನೆಲ್ಲಾ ವಿಚಾರಿಸಿಕೊಂಡು ಈ ಪ್ರಕಾರ ಹೇಳಿದರು.

"ನಿಮ್ಮ ನ್ಯಾಯವಾದ ಕುಂದು ಕೊರತೆಗಳನ್ನು ವಿಚಾರಿಸಿ ಪೂರೈಸುತ್ತೇವೆ. ಈಗಿನ ಪರಿಸ್ಥಿತಿಯಲ್ಲಿ ನನಗೆಲ್ಲಾ ಕಾರ್ಯಭಾರದ ಹೊರೆಯು ಹೆಚ್ಚುತ್ತಿರುವಾಗ ನೀವು ವೃಥಾ ಹೆಚ್ಚಿನ ಆತುರತೆ, ಆಂದೋಳನಗಳನ್ನು ವ್ಯಕ್ತಪಡಿಸಿದರೆ ಅದರಿಂದ ಪ್ರಯೋಜನವಾಗದು. ಬಟ್ಟೆ, ಆಹಾರ ಧಾನ್ಯಗಳ ಕೊರತೆಯು ಎಲ್ಲರಿಗೂ ಸಮಾನವಿದ್ದು ಉಪಾಧ್ಯಾಯರಿಗೆ ಹೆಚ್ಚಿನ ಸವಲತ್ತುಗಳನ್ನು ಹೇಗೆ ಕೊಡುವುದಾಗುತ್ತದೆ? ನೀವು ಊರಿನ ರಾಜಕೀಯದಲ್ಲಿ ಭಾಗತೆಗೆದುಕೊಳ್ಳದೆ ಕಕ್ಷಿಗಳಿಗೆ ಸೇರಿಕೊಳ್ಳದೆ, ನಿಮ್ಮ ನಿಮ್ಮ ಶಾಲೆಗಳ ಅಭಿವೃದ್ಧಿಗಾಗಿ ದುಡಿಯುವುದಾದರೆ ನಿಮ್ಮ ಕಲ್ಯಾಣ ದೂರವಿಲ್ಲ. ಪ್ರತಿತಿಂಗಳೂ ಸಂಬಳವನ್ನು 10 ನೆಯ ತಾ|| ವಳಗೆ ಕಳುಹಿಸುವುದು, ಸಾಧ್ಯವಾಗಬಹುದು. ಪೋಸ್ಟು ಇಲ್ಲದ ಊರುಗಳಿಗೆ ತಡವಾಗಿ ಮುಟ್ಟುವುದನ್ನು ತಪ್ಪಿಸಲು ಸಾಧ್ಯವಿಲ್ಲ" ಹೀಗೆ ಹೇಳಿ ಕಲೆಕ್ಟರ್ ರವರಿಗೆ ಬೇರೆ ಕೆಲಸವಿದ್ದುಕಾರಣ ಅವರು ಹೋದರು.

ಲೇಬರ್ ಆಫೀಸರ್ ಶ್ರೀ ಶಾಮುಯಲ್‌ರವರು ಲೇಬರ್ ಶಾಲೆಗಳಿಗೆ ಸಂಬಂಧಿಸಿದ ಅನೇಕ ವಿಷಯಗಳನ್ನುತಿಳಿಸಿ ಇನ್‌ಕ್ರಿವೆ-ಂಟ್, ಸ್ಕೇಲ್ ಆಫ್‌ಪೇ ಮಗೈರೆ ಆದಷ್ಟು ಶೀಘ್ರವಾಗಿ ಕೊಡಲು ಪ್ರಯತ್ನಿಸುವದಾಗಿಯೂ, ಒಳ್ಳೆಯ ಗುಮಾಸ್ತರ ಅಭಾವವು ತಮ್ಮನ್ನು ಇನ್ನು ಬಾಧಿಸುತ್ತಿರುವುದಾಗಿಯೂ ಹೇಳಿದರು.

ಕೆಲ ಉಪಾಧ್ಯಾಯರು ಬೇಡಿಕೆಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿದರು. ಅದಕ್ಕೆ ತಕ್ಕ ಪ್ರತ್ಯುತ್ತರವನ್ನು ಅವರು ಕೊಟ್ಟು ಪ್ರಾತಃಕಾಲದಿಂದ್ದಲೂ ತಾವು ಆಫೀಸಿನಲ್ಲಿದ್ದು ದುಡಿದ ಕಾರಣ ವಿಶ್ರಾಂತಿಯು ಅಗತ್ಯವೆಂದ್ದು ಸಾಯಂಕಾಲ 7 ಘಂಟೆಗೆ ಅವರನ್ನು ಬೀಳ್ಕೊಡಲಾಯಿತು

ನಂತರ ಒಂದು ಘಂಟೆಯವರಿವಿಗೆ ಚರ್ಚೆಯು ನಡೆದು ಸ್ತ್ರೀ ಪುರುಷ ಉಪಾಧ್ಯಾಯರೆಲ್ಲಾ ಅದರಲ್ಲಿ ಭಾಗವಹಿಸಿದರು. ಅಧ್ಯಕ್ಷರೊಡನೆ ಒಬ್ಬ ಉಪಾಧ್ಯಾ

ಯರನ್ನು ಕಳುಹಿಸುವ ಪ್ರಶ್ನೆಯು ಬಹಳ ಚರ್ಚೆಗೆ ಕಾರಣವಾಗಿ ಸಂಘದಲ್ಲಿ ಹಣವಿಲ್ಲದ ಕಾರಣ ಅಧ್ಯಕ್ಷ ರೊಬ್ಬರು ಹೋದರೆ ಸಾಕೆಂದರು. ಕಾರ್ಯದರ್ಶಿಗಳನ್ನು ಖರ್ಚುಕೊಟ್ಟು ಕಳಿಸಬೇಕೆಂದು ಶ್ರೀಮತಿ ಅನ್ನಮ್ಮನವರಿಟ್ಟ ಸೂಚನೆಗೆ 15 ಜನರು ಮಾತ್ರ ಕೈ ಎತ್ತಿದರು. ಗುಡಿಕಲ್ ಟೀಚರ್ ವೈ ಕ್ಲಿಫ್ ರವರು ಅರ್ಧಖರ್ಚನ್ನು ಕೇಳಿದರು. ಅದೂ ಸ್ವೀಕೃತವಾಗಲಿಲ್ಲ.

ಈ ಕೆಳ ತೀರ್ಮಾನಗಳು ಸರ್ವಾನುಮತದಿಂದ ಸ್ವೀಕೃತವಾದುವು.

(1) ಕೊಡಬೇಕಾದ ಸ್ಕೇಲ್ಸ್ ಆಫ್ ಪೇ, ಇನ್ ಕ್ರಿಮೆಂಟುಗಳನ್ನು ಶೀಘ್ರವಾಗಿ ಕೊಟ್ಟು ಹಿಂದಿನ ಅನ್ಯಾಯಗಳನ್ನು ಸರಿಪಡಿಸಿ ಸೀನಿಯರ್ ಉಪಾಧ್ಯಾಯರಿಗೆ ಮನ್ನಣೆ ಕೊಡಲು ಈಸಭೆಯು ಮತ್ತೊಮ್ಮೆ ಪ್ರಾರ್ಥಿಸುತ್ತದೆ.

(2) ಉಪಾಧ್ಯಾಯರ ಕೆಲಸವನ್ನು ಸ್ಥಿರಗೊಳಿಸಲು (Confirmation) ಲೇಬರ್ ಕವಿಶನರವರು ಫಿಬ್ರವರಿ 46 ರಲ್ಲಿ ಮಾಡಿದ ಆಜ್ಞೆಯನ್ನು ತಕ್ಷಣ ಜಾರಿಗೆ ತರಲು ಈಸಭೆಯು ಮತ್ತೊಮ್ಮೆ ಕೇಳುತ್ತದೆ.

(3) ಅನೇಕ ತಿಂಗಳು ಮತ್ತು ವರ್ಷಗಟ್ಟಲೆ ಕೊಡದೆ ಬಾಕಿಯಲ್ಲಿರುವ ಟಿ. ಎ. ಬಿಲ್ ಹಣವನ್ನು ಸಂಬಂಧಿಸಿದ ಉಪಾಧ್ಯಾಯರಿಗೆ ಕೊನೆಯ ಪಕ್ಷ ಈ ತಿಂಗಳ ಅಂತ್ಯದೊಳಗಾದರೂ ಕೊಡಬೇಕೆಂದು ಈ ಸಭೆಯ ಬೇಡಿಕೆ ಇದೆ.

(4) ಸಮಾನ ಯೋಗ್ಯರಾಗಿರುವ ಜೂನಿಯರ್ ಉಪಾಧ್ಯಾಯರನ್ನು ಹೆಡ್ಮಾಸ್ಟರಾಗಿ ಸೀನಿಯರ್ ರನ್ನು ಅಸಿಸ್ಟಂಟರಾಗಿ ನಿಯಮಿಸುವ ಅನಪೇಕ್ಷಿತ ಪದ್ಧತಿಯನ್ನು ನಿಲ್ಲಿಸಬೇಕು.

(5) ಪ್ರೊಬೇರ್ಷ ಮತ್ತು ಪ್ರಾಕ್ಟಿಕಲ್ ಟ್ರೈಯಿನಿಂಗ್ ಮುಗಿದಿರುವ ಉಪಾಧ್ಯಾಯರಿಗೆ ಪ್ರಾವಿಡೆಂಟ್ ಫಂಡ್ ಸೌಲಭ್ಯವನ್ನು ಕೊಡಬೇಕೆಂದು ಈಸಭೆಯು ಬೇಡುತ್ತದೆ.

(6) ಈಗಾಗಲೇ ಲೇಬರ್ ಶಾಖೆಯಲ್ಲಿ ಕೆಲಸ ಮಾಡಿ ವೇಕೆನ್ಸಿ ಇಲ್ಲದೆ ಮನೆಯಲ್ಲಿ ಕುಳಿತಿರುವ ಮತ್ತು ಅನುಭವ, ಯೋಗ್ಯತೆಗಳನ್ನು ಹೊಂದಿದ ಉಪಾಧ್ಯಾಯರಿಗೆ ಅನುಕೂಲ ಪಡಿಸುವ ಉದ್ದೇಶ್ಯ ಹೊಸ ಶಾಲೆಗಳಿಗೆ ಉಪಾಧ್ಯಾಯರನ್ನು ನಿಯಮಿಸ ಬೇಕಾದರೆ ಕಲೆಕ್ಟರವರು, ಸಂಘದ ಅಧ್ಯಕ್ಷರ ಸಲಹೆ ಕೇಳಬೇಕೆಂದು ಈ ಸಭೆಯು ಸೂಚಿಸುತ್ತದೆ.

(7) ಶಾಲೆಗಳಲ್ಲಿ ಕಜ್ಜಿ, ಹುರುಕು, ಮಲೇರಿಯಾ ಜಾಡ್ಯದ ಮಕ್ಕಳು ಇರುವ ಕಾರಣ ಅವರ ಚಿಕಿತ್ಸೆಗೆ ಮುಲಾಮು, ಜ್ವರದ-ಗುಳಿಗೆ ವಗೈರೆ ಉಚಿತವಾಗಿ ಒದಗಿಸಲು ಪ್ರಾರ್ಥನೆ.

(8) ಹಳ್ಳಿಗಳಲ್ಲಿ ಆಹಾರ ಧಾನ್ಯಗಳ ಅಭಾವದಿಂದ ಶಾಲೋಪಾಧ್ಯಾಯರಿಗೆ ಬಹಳ ಕಷ್ಟವಾಗಿದೆಯಾದ ಕಾರಣ ಕಲೆಕ್ಟರವರು ಸ್ಪೆಷಲ್ ಪರ್ಮಿಟಗಳನ್ನು ಕೊಟ್ಟು ಅವರಿಗೆ ಕಾಳು ಸರಿಯೂಗಿ ಪೂರೈಸಲು ಏರ್ಪಡಿಸಬೇಕೆಂದು ಬೇಡಿಕೆ.

(9) ಸಂಬಳವನ್ನು ಪ್ರತಿತಿಂಗಳೂ 10 ನೆಯ ತಾರೀಖಿನಳಗೇ ಸಲ್ಲಿಸಲು ಈ ಸಭೆಯು ಬೇಡುತ್ತದೆ. ಈ ತೀರ್ಮಾನಗಳನ್ನೊಳಗೊಂಡ ಪತ್ರವನ್ನು ಅಧ್ಯಕ್ಷರಾದ ಶ್ರೀ ಕೇಶವರಾಯರು, ಲೇಬರ್ ಕವಿಶನರವರಿಗೆ ಬರೆದು ಅದರ ನಕಲನ್ನು ಕಲೆಕ್ಟರ್ ಮತ್ತು D.L.O. ರವರಿಗೆ ಕಳುಹಿಸಿದ್ದಾರೆ.

ರಾಜಿ ಸಂಧಾನ.

ಪಂಡಿತ ಜವಹರಲಾಲ ಮತ್ತು ಮುಸ್ಲಿಂಲೀಗ್ ಅಧ್ಯಕ್ಷ ಜಿನ್ನಾರವರಲ್ಲಿ ಸಂಧಾನದ ಮಾತುಕತೆಗಳು ನಡೆಯುತ್ತಲಿದ್ದು ತಾತ್ಕಾಲಿಕ ರಾಷ್ಟ್ರೀಯ ಸರ್ಕಾರದಲ್ಲಿ ಲೀಗಿಗರನ್ನು ಸೇರಿಸಿಕೊಳ್ಳುವ ಪ್ರಯತ್ನಗಳು ನಡೆಯುತ್ತಲಿವೆ. ಭೋಪಾಲ ನವಾಬರು ಈ ಸಂಧಾನದ ಚಾಲಕರಿದ್ದು ಇನ್ನೂ ಆಶಾದಾಯಕ ವಾತಾವರಣವು ಕಂಡು ಬಂದಿಲ್ಲ. ಎಂದೆರಡು ದಿನಗಳಲ್ಲಿ ಫಲಿತಾಂಶವು ಹೊರಬೀಳಬಹುದು.

The Rayalaseema Bank Limited, Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— (ಬಳ್ಳಾರಿಜಿಲ್ಲಾ **ಹಡಗಲಿ, ಕೂಡ್ಲಿಗೆ,** ಚಿತ್ತೂರುಜಿಲ್ಲಾ **ನಾಗರಿಯಲ್ಲಿ** ನಮ್ಮ ಶಾಖೆಗಳನ್ನು ಪ್ರಾರಂಭಿಸಿದೆವೆಂದು ತಿಳಿಸಲು ಹರ್ಷಿಸುತ್ತೇವೆ.

ಬಳ್ಳಾರಿ ಜಿಲ್ಲಾ:– ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ.
ಅನಂತಪುರ:– ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, **ಪಾಮಿಡಿ,** ತಿಮ್ಮನಚೆರ್ಲ, ಉರವಕೊಂಡ.
ಚಿತ್ತೂರು:– ಚಿತ್ತೂರು, ಮದನಪಲ್ಲಿ, ತಿರುಪತಿ. **ಕರ್ನೂಲು:–** ಕರ್ನೂಲು ಪತ್ತಿಕೊಂಡ. **ಕಡಪ:–** ರಾಜಂಪೇಟೆ

ಫಿಕ್ಸ್‌ಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:– 3%.

ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.

ನೈಟ್ ಕ್ವೀನ್ ಹೇರಾಯಿಲ್

ಕೂದಲಿನ ಸೌಂದರ್ಯ, ಮೃದುತ್ವವನ್ನು ಕಾಪಾಡಿ ಮೆದುಳನ್ನು ತಂಪು ಮಾಡುವುದು. ನಿತ್ಯದ ಉಪಯೋಗದಿಂದ ಕೂದಲಿನ ಪಟುತ್ವ ಧೃಡತ್ವ ಹೆಚ್ಚುವುದು. ಕೇಶ ತೈಲಗಳಿಗೆಲ್ಲಾ ಇದು ರಾಣಿ ಇಂದೇ ಕೊಂಡು ಉಪಯೋಗಿಸಿದರೆ ಇದರ ಸದ್ಗುಣಗಳನ್ನು ಅರಿಯುವಿರಿ. ಎಲ್ಲಾ ಮುಖ್ಯ ಷಾಪು ದೊರೆಯುತ್ತದೆ

ಹಿಂದೂಸ್ತಾನಿಯು ರಾಷ್ಟ್ರಭಾಷೆ

ಇದನ್ನು ತಪ್ಪದೆ ಕಲಿಯಿರಿ

ಪ್ರಾರಂಭಿಕ ಪರೀಕ್ಷೆಗಳಾದ ಪ್ರಾಥಮಿಕ, ಮಧ್ಯಮ ರಾಷ್ಟ್ರಭಾಷೆ, ಉನ್ನತ ಪರೀಕ್ಷೆಗಳಾದ ಪ್ರವೇಶ, ವಿಶಾರದ- ಪ್ರಚಾರಕ, ಮದ್ರಾಸ್ ವಿಶ್ವವಿದ್ಯಾಲಯದ ಹಿಂದೀ- ವಿದ್ವಾನ್ ಪರೀಕ್ಷೆಗಳ ಮಾಹಿತಿಯನ್ನು ಉಚಿತವಾಗಿ ಕೊಟ್ಟು- ಶಿಕ್ಷಣದ ಏರ್ಪಾಟಿಗೆ ಸಲಹೆಗಳನ್ನು ಕೊಡಲಾಗುವುದು- ಎಲ್ಲಾಪುಸ್ತಕಗಳು ದೊರೆಯುತ್ತವೆ. **ಬಹಳ ಸುಲಭ ಭಾಷೆ-ಅತ್ಯಲ್ಪಕಾಲದಲ್ಲಿ ಕಲಿಯಬಹುದು.** **ಟಿ. ಬಿ. ಕೇಶವರಾವ್**
ಹಿಂದೀಪ್ರಚಾರಕ, ಬಳ್ಳಾರಿ

NAVA BHARAT, BELLARY Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.		Subscription Rates.	
ವರ್ಷಕ್ಕೆ	5-0-0	One Year	5—0—0
6 ತಿಂಗಳಿಗೆ	3-0-0	Six months	3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will ot be accepted for less than 6 months.	

To

SRI..... .....

.....

.....

Printed at Krishna Press Bellary QH No. B 17 FOR (Q.H. No. B-5)
Edited & Published by T. B. KESHAVA RAO.

ಜೈ.ಹಿಂದ Reg. No.M. 4746

ಸ್ವರಾಜ್ಯ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಛೇರಿ ಸಂಖ್ಯೆ ೬೧ ಬಳ್ಳಾರಿ ಅಕ್ಟೋಬರು ೨೧ ಸೋಮವಾರ ೧೯೪೩ ಸಂವಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವು.

ಹುಕುಮತ-ಎ-ಆಜಾದ ಹಿಂದ್.

ಹುಕುಮತೆ-ಆಜಾದ್ ಹಿಂದ್.

ಸ್ವತಂತ್ರ ಭಾರತದ ರಾಜ್ಯಭಾರ.

ಸ್ಥಾಪನೆಯ ಸ್ಮಾರಕ.

ಅಕ್ಟೋಬರ್ ೧೯ ರಿಂದ ೨೬ ರವರೆಗೆ ಸಪ್ತಾಹವನ್ನು ಆಚರಿಸಿರಿ.

ನೇತಾಜಿ ಸುಭಾಸಚಂದ್ರಬೋಸ್.

'ಜೀವಂತರಿಲ್ಲ' (ಪಂಡಿತ ನೆಹರೂ)

'ಜೀವಂತರಿರುವರು' (ಶೀಲಭದ್ರಯಾಜಿ)

ವಿವರಗಳಿಗಾಗಿ ಒಳಗೆ — ನೋಡಿರಿ.

ನೇತಾಜಿ ಸುಭಾಸಚಂದ್ರ ಬೋಸರು

ಜೀವಂತರಿಲ್ಲ

(ಪಂಡಿತ ಜವಹರಲಾಲನೆಹರು)

"ವೃತ್ತಪತ್ರಗಳಲ್ಲಿ ನೇತಾಜಿಯವರ ವಿಷಯಕ್ಕೆ ಒಂದಿಲ್ಲೊಂದು ಸುದ್ದಿ ಬರುತ್ತಿದೆ ಅವರು ಜೀವತಂರಿದ್ದು ಹಿಂದುಸ್ಥಾನಕ್ಕೆ ಬರುವರೆಂದೂ, ಇಂಥವರಿಗೆ ಸಂದೇಶ ಕಳುಹಿದ್ದಾರೆಂದೂ ಸುದ್ದಿ ಬರುತ್ತಿವೆ. ಒಮ್ಮೊಮ್ಮೆ ಅವರು ಬರುವ ತಾರೀಕನ್ನು ಕೂಡ ಹೇಳಲಾಗುತ್ತಿದೆ. ಇಂಥ ಸುದ್ದಿಗಳಿಂದ ಜನರಲ್ಲಿ ಅವರ ಇರುವಿಕೆಯ ಬಗ್ಗೆ ವಿಶ್ವಾಸವುಂಟಾದರೂ ಪರೀಕ್ಷಿಸಲಾಗಿ ಇವುಗಳಲ್ಲಿ ತಥ್ಯವಿಲ್ಲೆಂದು ನಾನು ಹೇಳಬಲ್ಲೆ.

ಅವರ ಮರಣದ ಸುದ್ದಿಯ ಬಗ್ಗೆ ಎಷ್ಟೋತಿಂಗಳದ ವರೆಗೆ ನನಗೆ ಸಂಶಯವಿದ್ದಿತು. ಅವರು ಕಣ್ಣಾರೆ ಕಂಡ ಅಪಘಾತವನ್ನು ನೇತಾಜಿಯವರ ಮರಣವನ್ನು ಕರ್ನಲ ಹಬಿಬುರ ರಹಮಾನರ ಮುಖದಿಂದ ಕೇಳಿದ ಬಳಿಕ ಅವರ ಮರಣದ ಸುದ್ದಿಯು ಸತ್ಯವೆಂದು ನನ್ನ ನಂಬಿಗೆಯಾಗಿದೆ. ಈ ನಂಬಿಗೆಯನ್ನು ತೆಗೆದುಹಾಕುವ ಬೇರೆ ವೃತ್ತಾಂತವು ನನಗೆ ಸಿಕ್ಕಿಲ್ಲ. ನೇತಾಜಿಯವರು ಸಜೀವರಿರಬೇಕೆಂದು ನಮ್ಮೆಲ್ಲರಿಗೆ ಅನಿಸುವದು ಸಹಜ; ಆದರೆ ತಥ್ಯವಿಲ್ಲದ ಹಾರಿಕೆಯ ಸುದ್ದಿಗಳಿಂದೇನು ಫಲ?

ಕರ್ನಲ ಹಬಿಬುರ ರಹಮಾನರು ಈಗ ಹರಡಿದ ಸುದ್ದಿಗಳಿಂದ ತಮಗೆ ದುಃಖವಾಗುತ್ತಿದೆ ಎಂದು ಪತ್ರ ಬರೆದಿದ್ದಾರೆ. ಅವರು ವಿಮಾನ ಅಪಘಾತವನ್ನು ಪ್ರತ್ಯಕ್ಷ ನೋಡಿದುದಷ್ಟೆಅಲ್ಲದೆ ಅದರಲ್ಲಿ ತಾವೂ ಸಿಕ್ಕಿದ್ದರೆಂತಲೂ ಪತ್ರದಲ್ಲಿದೆ. ನೇತಾಜಿಯವರ ತಲೆಗೆ ಬಲವಾದ ಪೆಟ್ಟು ತಾಕಿತೆಂದೂ ಅವರ ಶರೀರದ ಮೇಲ್ಭಾಗಕ್ಕೆ ಝಳದ ಅಪಾಯವಾದುದೆಂದೂ, ಅಪ್ಪತ್ರೆಯಲ್ಲಿ ತಾವು ನೇತಾಜಿಯವರ ಬಳಿಯಲ್ಲಿ ಇದ್ದರೆಂದೂ ಆಗಷ್ಟ ೧೪ ಕ್ಕೆ ಅವರ ಮರಣಸಮಯದಲ್ಲಿ ತಾವು ಹಾಜರಿದ್ದನ್ನು ಅವರು ಬರೆದಿದ್ದಾರೆ. ಟೋಕಿಯೊ ಅಥವಾ ಸಿಂಗಾಪೂರಕ್ಕೆ ಅವರ ದೇಹವನ್ನು ಒಯ್ಯಲು ಶಕ್ಯವಾಗಲಿಲ್ಲವಾದ್ದರಿಂದ ಅದನ್ನು ಕರ್ನಲ್ ಹಬೀಬೂರ ರಹೀಮಾನರ ಸಮಕ್ಷಮವಾಗಿ ದಹನ ಮಾಡಲಾಯಿತು. ಮತ್ತು ಬೂದಿಯನ್ನು ಕರ್ನಲ್‌ರು ತಂದರು.

ಈ ದುಃಖದ ಸಂಗತಿಯನ್ನು ಕಣ್ಣಾರೆ ಕಂಡ ಕರ್ನಲ್‌ರ ಸುದ್ದಿಯ ಹೊರತು ಇನ್ನಾವ ಸುದ್ದಿಯು ಸ್ಪಷ್ಟವಿಲ್ಲ. ಅವರ ಹೇಳಿಕೆಯು ಹೀಗಿರುವಾಗ ನೇತಾಜಿಯವರು ಜೀವಂತರಿದ್ದ ಬಗ್ಗೆ ಸುಳ್ಳು ಸುದ್ದಿಗಳನ್ನು ಹರಡುವದು ಶುದ್ಧ ತಪ್ಪು. ಇನ್ನು ಈ ಸುಳ್ಳು ಸುದ್ದಿಗಳನ್ನು ಹರಡಿ ವ್ಯರ್ಥವಾಗಿ ಯಾರೂ ಜನರ ಆಶಾಭಂಗವನ್ನು ಮಾಡಲಿಕ್ಕಿಲ್ಲವೆಂದ ಆಶಿಸುತ್ತೇನೆ.

ಜೀವಂತರಿದ್ದಾರೆ

(ಶ್ರೀಶೈಲ ಭದ್ರಯ್ಯಾಜಿ, ಉಪಾಧ್ಯಕ್ಷ, ಅಖಿಲ ಭಾರತ ಫಾರ್ವರ್ಡ್‌ಬ್ಲಾಕ್)

ನೇತಾಜಿ ಸುಭಾಸಚಂದ್ರ ಬೋಸರು ಸತ್ತಿರುವರೆಂದು ಪಂಡಿತನೆಹರೂರವರು ಸಮರ್ಥಿಸಿರುವ ಹೇಳಿಕೆಯಿಂದ ದೇಶಕ್ಕೆಲ್ಲಾ ಶಿಡಿಲು ಬಡಿದಂತಾಗಿರಬೇಕು. ಬಹಳ ಟೀಕೆ ಟಿಪ್ಪಣಿಗಳಿಗೊಳಗಾದ ಈವಿಷಯವನ್ನು ಕುರಿತು ರಾಷ್ಟ್ರೀಯ ಸರಕಾರದ ಪ್ರಧಾನರಾದ ಪಂಡಿತನೆಹರೂರವರು ಏನು ಹೇಳಿರುವರೆಂಬುದನ್ನು ಕುರಿತು ವ್ಯಾಪಾರಂಭದಿಂದ ಕೊನೆಯವರಿಗೆ ಓದಿದೆ. ಕರ್ನಲ ಹಬೀಬುರ್ರಹಮಾನರ ಹೇಳಿಕೆಯನ್ನಲ್ಲದೆ, ಅವರು ಹೊಸದೇನೂ ಹೇಳಿಲ್ಲವೆಂಬಂಶವನ್ನು ತಿಳಿದು ನನಗೆ ಸಂತೋಷವಾಗಿದೆ.

ಅಂತರಾಷ್ಟ್ರೀಯ ಗುಪ್ತಶಾಖೆಯವರಿಂದ ಸಂಗ್ರಹಿಸಲಾದ, ಮತ್ತು ಮಿಲಟರಿ ಶಿವಿಲ ಡಿವಾರ್ಟುಮೆಂಟುಗಳಲ್ಲಿ ಅತ್ಯಂತ ರಹಸ್ಯವಾಗಿಡಲ್ಪಟ್ಟ ಎಲ್ಲಾ

ಅಂಶಗಳನ್ನು ಪಂಡಿತರು ಸಾರ್ವಜನಿಕರ ಮುಂದಿಡುವರೆಂದು ನನ್ನ ವಿಶ್ವಾಸವಿತ್ತು. ಆದರೆ ಅವರು ಹಾಗೆ ಮಾಡಿಲ್ಲ.

ಸ್ವತಂತ್ರ ಹಿಂದುಸ್ತಾನಕ್ಕೆ ಅತಿ ಮುಖ್ಯವಾದ ಶ್ರೀ ಸುಭಾಸರ ಜೀವನದ ವಿಷಯಕ್ಕೆ ನಾನು ಯಾರೊಡನೆಯೂ, ಅದರಲ್ಲಿಯೂ ಪಂಡಿತ ನೆಹರೂ, ಕರ್ನಲ್ ರಹಮಾನರೊಡನೆ ವಿವಾದ ಮಾಡಲಿಚ್ಛಿಸುವದಿಲ್ಲ.

ಅಖಿಲ ಭಾರತ ಫಾರ್ವರ್ಡ್‌ಬ್ಲಾಕಿನ ಕಾರ್ಯಕಾರಿಣಿ ಸಮಿತಿಯಂಥ ಮಾನ್ಯಸಭೆಯು ನೇತಾಜಿ ಸುಭಾಸಬೋಸರು ಜೀವಂತರಿರುವರೆಂದೂ ಅವರು ಸಕಾಲಕ್ಕೆ ಹಿಂದೂಸ್ತಾನದಲ್ಲಿ ಕೆಂಡುಬರುವರೆಂದು ಒಂದು ತೀರ್ಮಾನ ಮಾಡಿರುವದನ್ನು ಜನತೆಯ ಮುಂದಿಡಲು ಬಯಸುತ್ತೇನೆ. ಈ ಅಧಿಕೃತ ಹೇಳಿಕೆಗೆ ನಂಬಲರ್ಹವಾದ ಆಧಾರಗಳಿವೆಯೆಂದು ಮಾತ್ರ ಹೇಳಬಲ್ಲೆ. ನೇತಾಜಿಯವರು ಪೂರ್ಣ ಜೀವಂತರಿರುವರೆಂದು ಜನತೆಗೆ ಭರವಸೆ ಕೊಡುತ್ತೇನೆ. ಇನ್ನು ಹೆಚ್ಚು ಅಂಶಗಳನ್ನು ಹೊರಗೆಡವಲಾರೆ.

ಹುಕುಮತೆ ಆಜಾದ್ ಹಿಂದ್, ಸ್ವತಂತ್ರ ಭಾರತದ ರಾಜ್ಯಭಾರ.

ಅಕ್ಟೋಬರ್ ೧೪ ರಿಂದ ಅಕ್ಟೋಬರ ೨೬ ರವರೆಗೆ "ಹುಕುಮತ ಈ ಆಜಾದ" ಸಪ್ತಾಹವನ್ನು ಆಚರಿಸಬೇಕೆಂದು ಅ. ಭಾ. ಪರೋಗಾಮಿ ಪಕ್ಷದ ಅಧ್ಯಕ್ಷರಾದ ಸರದಾರ ಶಾರ್ದೂಲಸಿಂಗ ಕವೀಶ್ವರರು ಪ್ರಕಟನೆ ಹೊರಡಿಸಿದ್ದಾರೆ.

ಈ ಸಪ್ತಾಹದಲ್ಲಿ ಸಾಧ್ಯವಿದ್ದಲ್ಲೆಲ್ಲ ಮೆರವಣಿಗೆ ಸಭೆ. ದೀಪೋತ್ಸವ ಮೊದಲಾದವುಗಳನ್ನು ಜರಗಿಸಬೇಕೆಂದೂ ನೇತಾಜಿ ನಿಧಿಗೆ ಧನಸಂಗ್ರಹಿಸಬೇಕೆಂದು ಅವರು ಅದರಲ್ಲಿ ಉಲ್ಲೇಖಿಸಿದ್ದಾರೆ.

ಇದರಂತೆ ಶ್ರೀ ಜಗನ್ನಾಥರಾವ ಭೋಸಲೆಯವರೂ ಒಂದು ವಿನಂತಿ ಮಾಡಿದ್ದು, ಸುಭಾಸಬಂಧುಗಳು ಅಕ್ಟೋಬರ ೨೧ ನೇ ತಾರೀಖಿನ ದಿವಸ ಸಿಂಗಾಪುರದಲ್ಲಿ ಆಜಾದ ಹಿಂದ ತಾತ್ಕಾಲಿಕ ಸರಕಾರವನ್ನು ಸ್ಥಾಪಿಸಿ ಜಗತ್ತಿಗೆಲ್ಲ ಹಿಂದುಸ್ತಾನದ ಸ್ವಾತಂತ್ರ್ಯವನ್ನು ಜಾಹೀರ ಮಾಡಿದ್ದರಿಂದ ಅಕ್ಟೋಬರ ೨೧ ನೇ ತಾರೀಕು ಮಹತ್ವದ್ದಿದ್ದು ಅದನ್ನು ಯೋಗ್ಯ ರೀತಿ ಆಚರಿಸಬೇಕೆಂದು ಕೇಳಿಕೊಂಡಿದ್ದಾರೆ.

ಬಿಳಿಯರಿಗೆಮಾತ್ರ ಮಾನವಹಕ್ಕುಗಳು ಇತರರಿಗೆ — ಬೇಡ.

ರಷ್ಯಾದ 'ಇಜ್ವೆಸ್ಟಿಯಾ' ಪತ್ರಿಕೆಯು ಹೀಗೆ ಬರೆಯುತ್ತದೆ.

"ಬ್ರಿಟಿಷ್ ಚಕ್ರಾಧಿಪತ್ಯದಲ್ಲಿನ ಮತ್ತು ಅಮೇರಿಕಾದಲ್ಲಿರುವ ಮುಖಂಡರೆಂದೆನ್ನಿಸಿಕೊಳ್ಳುವವರು ಯೂರೋಪ್ ದೇಶದಲ್ಲಿನ ಜನರಿಗೆ ಬಹಳ ಮಾನಭೂತಿಯನ್ನು ವ್ಯಕ್ತಪಡಿಸಿ ತಮ್ಮ ದೇಶದಲ್ಲಿರುವ ಅಲ್ಪ ಸಂಖ್ಯಾಕರನ್ನೇ ತುಚ್ಛವಾಗಿ ನೋಡುತ್ತಿದ್ದಾರೆ. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಮೇಲೆ ಅಮೇರಿಕಾದಲ್ಲಿ ನೀಗ್ರೋಜನರಮೇಲೆ ಭೀಕರ ಅತ್ಯಾಚಾರಗಳಾಗುತ್ತಲಿವೆ. 'ಕಪ್ಪುಜನರನ್ನು ದ್ವೇಷಿಸುವದು, ಬಿಳಿಯರಲ್ಲಿ ಒಂದು ಸದ್ಗುಣವೆಂದು ಭಾವಿಸಲಾಗುತ್ತಿದೆ.

ಹೆಬ್ಬಾಳ [ಗುಡಿಗೇರಿ]

ಇಲ್ಲಿ ಗಾಂಧೀ ಬಯಲಿನ ಶ್ರೀ ಶಿವರಾಮ ಪಂಥ ಜೋಶಿಯವರಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಶ್ರೀ ಲಕ್ಷ್ಮೀಶ್ವರಪಟ್ಟದ ದೇವರು ಹುತಾತ್ಮರಾದ ಶ್ರೀ ಮಹದೇವ ನೈಲಾರ ಇವರ ಸ್ಮಾರಕಾರ್ಥವಾಗಿ **"ಮಹದೇವ ವಾಚನಾಲಯ"** ವನ್ನು ಸ್ಥಾಪಿಸಿದರು. ಶಾಲಾ ಮಾಸ್ತರರಾದ ಶ್ರೀ ವಿರುಪಾಕ್ಷಪ್ಪ ಕನ್ನಳ್ಳಿಯವರು ವಾಚನಾಲಯದ ಮಹತ್ವವನ್ನು ಜನರಿಗೆ ತಿಳಿಯಪಡಿಸಿದರು. ನೆರೆದ ಮಹನೀಯರು ವಾಚನಾಲಯದ ಪೋಷಣೆಗಾಗಿ ವಾಗ್ದಾನಪಡಿಸಿದರು.

ಬಂಗಾಳದಲ್ಲಿ ಭೀಷಣ ಅತ್ಯಾಚಾರ

ಸುಮಾರು ೨೫೦ ಮೈಲು ಜೌರಸ ಮೈಲು ಪ್ರದೇಶದ ನೊವಾಖಾಲಿ ಜಿಲ್ಲೆಯಲ್ಲಿ ಹಿಂದೂಗಳ ಮೇಲೆ ಭಯಂಕರ ಅತ್ಯಾಚಾರವಾಗುತ್ತಲಿದೆಯೆಂದೂ ೧೦ ನೆಯ ತಾ. ನಿಂದ ಎಡೆ ತಡೆಯಿಲ್ಲದೆ ಇದುನಡೆಯುತ್ತಲಿರುವದೆಂದೂ ಭಗವಂತನೇ ದಾರಿ ತೋರಿಸಬೇಕೆಂದೂ ಮಹಾತ್ಮರು ಪಾರ್ಥನಾಸಭೆಯಲ್ಲಿ ಹೇಳಿದರು. ಸುದ್ದಿಗಳ ಪ್ರಕಾರಕ್ಕೆ ಸಾವಿರಾರು ಸ್ತ್ರೀಯರ ಅಪಹರಣವಾಗಿದೆ. ಸಾವಿರಾರು ಮನೆಗಳು ಸುಡಲಾಗಿವೆ. ಅತ್ಯಂತ ಕ್ರೂರವಾದ ರೀತಿಯಲ್ಲಿ ಸಾವಿರಾರು ಮನೆಗಳು ಸುಡಲಾಗಿವೆ. ಅತ್ಯಂತ ಕ್ರೂರವಾದ ರೀತಿಯಲ್ಲಿ ಸಾವಿರಾರು ಜನರ ಹತ್ಯವಾಗಿದೆ. ಇಷ್ಟೆಲ್ಲಾ ನಡೆಯಬೇಕಾದರೆ ತಿಂಗಳುಗಟ್ಟಲೆ ಸಿದ್ಧತೆ ನಡೆದಿರಬೇಕು. ಸರ್ಕಾರಕ್ಕೆ ಮುಂಜಾಗ್ರತೆಯು ಸೂಚನೆಗಳನ್ನು ಕೊಟ್ಟುಕೂಡ ಈ ಅತ್ಯಾಚಾರಗಳನ್ನು ನಿಲ್ಲಿಸುವ ಉಪಾಯಗಳಾಗಲಿಲ್ಲ. ಇದಕ್ಕೆಲ್ಲಾ ಮುಸ್ಲಿಂಲೀಗ್ ಸರಕಾರವೂ ಗವರ್ನರರೂ ಕಾರಣರೆಂದು ಪ್ರಕಟನೆಗಳು ಹೊರಟಿವೆ. ಹಿಂದೂಮಹಾಸಭೆ, ಕಾಂಗ್ರೆಸ್ ಪ್ರಮುಖರು ಗವರ್ನರರನ್ನು ನೋಡಿದ್ದಾರೆ ಯೂರೋಪಿಯನ್ ಜಿಲ್ಲಾ ಮ್ಯಾಜಿಸ್ಟ್ರೇಟರನ್ನು ಮಿಲಿಟರಿ ಪೋಲೀಸರನ್ನು ಕಳುಹಿಸಿರುವರೆಂದು ಸರ್ಕಾರದವರು ಪ್ರಕಟಿಸಿದ್ದಾರೆ

ಹರಿವಾಣ.

ಗಾಂಧಿ ಜನ್ಮದಿನೋತ್ಸವ ಸಪ್ತಾಹ.

ಗಾಂಧೀಜಿ ಜನ್ಮದಿನೋತ್ಸವ ಸಪ್ತಾಹವು ಅಕ್ಟೋಬರ್ 1 ರಿಂದ 7 ರ ವರಿಗೆ ವೈಭವವಾಗಿ ವಿಜೃಂಭಣೆಯಿಂದ, ಅಮಿತೋತ್ಸಾಹದಿಂದ ನೆರವೇರಿತು 1 ನೆಯ ತಾ|| ಮದ್ಯನಿಷೇಧ, 1 ನೆಯ ಗಾಂಧೀ ಜೀವನ ತತ್ವಗಳಸಾರ 3 ನೆಯ ತಾ|| ಮಧ್ಯಮಿಕ ಶಾಲೆಯಲ್ಲಿ ನಿರಕ್ಷರತಾನಿವಾರಣೆ, ವಿದ್ಯಾಭ್ಯಾಸ (ಶ್ರೀ ಹೆಚ್. ಯಸ್. ವೆಂಕೋಬರಾವು ವಗೈರೆಯವರ) 4 ನೆ ನಾ|| ಕರ್ನಾಟಕ ರಾಜ್ಯದ ಗತವೈಭವದ ನೆನಹುಗಳಬಗ್ಗೆ ವಿದ್ವಜ್ಜನರಿಂದ ಭಾಷಣಗಳಾದುವು. 5 ನೆಯ ತಾ|| ಗ್ರಾಮ ಚಾವಡಿಯಮುಂದೆ ಹೊಸಸ್ತಂಭದ ಸ್ಥಾಪನೆಯೂ ಬ್ರಹ್ಮಶ್ರೀ ಸೋಮಯಾಜುಲರ ವರಹಸ್ತದಿಂದ ರಾಷ್ಟ್ರ ಧ್ವಜಾರೋಹಣವಾಗಿ ಆ ಸಾಯಂಕಾಲ ಅಲಂಕೃತ ರಥದಲ್ಲಿ ಗಾಂಧೀಜಿ ಭಾವ ಚಿತ್ರವು ಪ್ರತಿಷ್ಠಾಪನೆಯಾಗಿ, 28 ವೃಷಭಗಳಿಂದೆಳೆಯಲ್ಪಡುತ್ತಾ ಸಾವಿರಾರು ಜನಸಮುದಾಯದ ಜಯಘೋಷದಿಂದ ಮೆರವಣಿಗೆಯು ಸಾಗಿ ಮಹಿಳೆಯರ ಕುಂಕುಮಾರತಿಯ ಸ್ವೀಕಾರದಿಂದ ಬೀದಿಬೀದಿಗಳಲ್ಲಿ ಸಾಗಿತು. 9 ನೆಯ ತಾ|| ಪಂಚಾಯ್ತಿ ಬೋರ್ಡಿನವರ ಕಟ್ಟಡದ ಮೇಲೆ ಶ್ರೀ ಸೋಮಯಾಜುಲುರವರು ರಾಷ್ಟ್ರಧ್ವಜಾರೋಹಣ ಮಾಡಿದರು ಭಾಷಣಗಳಾದವು 7 ನೆಯ ತಾ. ಹೀರೆಹರಿವಾಣದಲ್ಲಿ ಗಾಂಧಿಜಯಂತ್ಯುತ್ಸವವು ಆಚರಿಸಲ್ಪಟ್ಟಿತು. ಶ್ರೀ ಹೆಚ್. ರಂಗನಗೌಡರು 28 ಟೋಪಿಗಳನ್ನು ಶಾಲಾಬಡಮಕ್ಕಳಿಗೆ ಉಚಿತವಾಗಿ ಹಂಚಿದರು- ಶ್ರೀ ಮಂತ ಕೊಟ್ಟಿಗೆ ಹನುಮಂತಪ್ಪ ಮತ್ತು ಇತರ ಮಹನೀಯರು ಸಪ್ತಾಹದ ಭಾರವನ್ನು ವಹಿಸಿಯಶಶ್ವಿಯಾಗಿ ಕಾರ್ಯನಿರ್ವಹಿಸಿದರು [ರಾಮಕೃಷ್ಣ]

ಪಂಚಾಯ್ತಿ ಬೋರ್ಡಿನ ಸ್ತುತ್ಯ ತೀರ್ಮಾನ

ಶ್ರೀ ವೈ. ಸಿ. ಬಸವನಗೌಡರು ತಮ್ಮ ರಾಷ್ಟ್ರ ಭಕ್ತಿಯ ದ್ಯೋತಕವಾಗಿ ಕೊಟ್ಟ ರಾಷ್ಟ್ರಧ್ವಜವನ್ನು ಹರಿವಾಣದ ಪಂಚಾಯ್ತಿ ಬೋರ್ಡಿನವರು ಅಿದರದಿಂದ ಸ್ವೀಕರಿಸಿರಿ ತಮ್ಮ ಕಛೇರಿ ಕಟ್ಟಡದಮೇಲೆ ಅದನ್ನು ಹಾರಿಸಲು ವಿಶಿಷ್ಟವಾಗಿ ತೀರ್ಮಾನಿಸಿದರು. ಸರ್ಕಾರದ ಉತ್ತರದಂತೆ ಇದಕ್ಕಾಗಿ ಒಂದು ಪೈಸಹ ಖರ್ಚುಮಾಡಲಿಲ್ಲ. ಜಿಲ್ಲೆಯಲ್ಲಿರುವ ಇತರ ಪಂಚಾಯ್ತಿ ಬೋರ್ಡುಗಳಿಗೆ ಇದು ಮಾದರಿಯಾಗಿದೆ.

ಮಿಲ್ ಬಟ್ಟೆಗಳ ಪರಿಸ್ಥಿತಿ.

ಫಾಬರಿಗೆ ಕಾರಣವಿಲ್ಲ.ಟಿಕ್ಸ್‌ಟಾಯಿಲ್ ಕಮೀಷನರವರ ಹೇಳಿಕೆ.

—

ಮದ್ರಾಸ್ ಪ್ರಾಂತದ ಟೆ. ಕಮೀಶನರವರಾದ ಶ್ರೀ ವೆಂಕಟೇಶ್ವರನ್‌ರವರು ಈ ಕೆಳಗೆ ಕಾಣಿಸಿದ ಹೇಳಿಕೆಯನ್ನು ಕೊಟ್ಟಿರುತ್ತಾರೆ.

"ವೃತ್ತಪತ್ರದಲ್ಲಿ ಕಾಣಿಸಲಾದ ಮಿಲ್ ಬಟ್ಟೆ ಕೊರತೆಯ ಸುದ್ದಿಯು ನಿರಾಧಾರವಾಗಿದೆ. ಈವರ್ಷದ ದೀಪಾವಳಿ ಹೊತ್ತಿಗೆ ಕಳೆದ ವರ್ಷಕ್ಕಿಂತ ಒಳ್ಳೆಯಪರಿಸ್ಥಿತಿಯು ಏರ್ಪಡುವುದು. ಅಗಷ್ಟ 28 ರಿಂದ ಇಲ್ಲಿಯವರಿವಿಗೆ ಮಿಲ್ ಬಟ್ಟೆಯ ಬೇಲುಗಳು ಈಪ್ರಕಾರ ಬಂದು ಎಲ್ಲಾಕಡೆಗೂ ಹಂಚಲ್ಪಟ್ಟಿವೆ.

ಬೊಂಬಾಯಿ ಭಾಗ	11500	ಬೇಲುಗಳು
ಬಿನ್ನಮಿಲ್ ಮದ್ರಾಸ್	2000	,,
ಮೆಟ್ಟೂರು ಬಟ್ಟೆ	1575	,,
ದಕ್ಷಿಣದ ಇತರ ಭಾಗಗಳು	2900	,,
	17975	

ನಮಗೆ ಬೊಂಬಾಯಿ ಭಾಗದಿಂದ 8600 ಬೇಲು ಮಿಲ್ ಬಟ್ಟೆ ಬರಬೇಕಾದ್ದಿದೆ. ಇವುಗಳಲ್ಲಿ ಕನಿಷ್ಟಕ್ಕೆ 1000 ಬೇಲುಗಳಾದರೂ ದೀಪಾವಳಿ ಹೊತ್ತಿಗೆ ಬರಲಿವೆ. ಆ ಸಮಯಕ್ಕೆ ಬಿನ್ನ ಮಿಲ್ ಬಟ್ಟೆಯ 1000 ಬೇಲುಗಳು ಬರಲಿವೆ.

ಬೊಂಬಾಯಿ, ಅಹಮದಾಬಾದ್‌ಗಳಲ್ಲಿ ಜಾತೀಯ ಜಗಳದಿಂದ ಬಟ್ಟೆಗಳನ್ನು ಸಂಗ್ರಹಿಸಿ ಕಳುಹಿಸುವ ಕಾರ್ಯಕ್ಕೆ ಬಹಳ ಎಡೆ-ತಡೆಗಳುಂಟಾದುದು ನಿಜ. ಬೊಂಬಾಯಿ, ಅಹಮದಾಬಾದ ಕೇಂದ್ರಗಳಿಂದ ಜುಲೈ ಅಗಷ್ಟಕ್ಕೆ ಬರಬೇಕಾದ ಬಟ್ಟೆಯನ್ನು ಇನ್ನೂ ಕೊಳ್ಳುವುದಿದೆ. ಬೊಂಬಾಯಿ ಟೆಕ್ಸ್‌ಟಾಯಿಲ್ ಕಮಿಶನರ್‌ರವರು ನಮ್ಮ ಸೆಪ್ಟಂಬರ್ ಕೋಟಾವನ್ನು ಈ ಕೇಂದ್ರಗಳಿಂದ ಇನ್ನೂ ಬಿಡುಗಡೆ ಮಾಡಿಲ್ಲ. ನಾನು ಅವರೊಡನೆ ಮಾತಾಡಿ, ಆದಷ್ಟು ಜಾಗ್ರತೆ ನಮಗೆ ಬರಬೇಕಾಡ ಮಾಲನ್ನು ಕಳುಹಿಸಲು ಕೇಳಿದ್ದೇನೆ,

ಈ ಕಾರಣ ಮಿಲ್ ಬಟ್ಟೆಯಕ್ಷಾಮ ಒದಗುವದೆಂಬ ಫಾಬರಿಯನ್ನು ಯಾರೂ ಇಟ್ಟುಕೊಳ್ಳಬಾರದು. ಕೊಳ್ಳುವವರೆಲ್ಲಾ ಶ್ರೇಷ್ಠವಾದ ಮತ್ತು ನಯವಾದ ಧೋತ್ರ ಸೀರೆಗಳನ್ನೇ ಕೇಳುತ್ತಾರೆ ಇಂಥಾ ಶ್ರೇಷ್ಠತರಗತಿಯ ಬಟ್ಟೆಗಳು ಬೇಡಿಕೆಯ ಪ್ರಕಾರಕ್ಕೆ ತಯಾರಾಗುವಂತಿಲ್ಲ. ಅಂಗಡಿಗಳಲ್ಲಿ ಒರಟು ನೂಟಿ ನೂಟಿಗಳು ಮಾರದೆ ಉಳಿದಿವೆ.

ಭೂವಿ ತೆಗೆಯಲು ಸರ್ಕಾರದ ಸಹಾಯ.

ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಜಿಲ್ಲೆಗಳಲ್ಲಿ 429 ಹೊಸಭಾವಿಗಳನ್ನು ತೆಗೆಸಲು, 370 ಹಳೆಯವನ್ನು ರಿಪೇರಿಮಾಡಲು ಮದ್ರಾಸ್ ಸರ್ಕಾರದವರು ಅಗಷ್ಟು 31 ರ ವಳಗಾಗಿ ರೂ. 1,98,732 ಮತ್ತು 1,05,779 ರೂ. ಕ್ರಮವಾಗಿ ಸ್ಯಾಂಕ್ಷನ್ ಮಾಡಿರುತ್ತಾರೆ. ಈ ಜಿಲ್ಲೆಗಳಲ್ಲಿ ಸುಮಾರು 7500 ಅರ್ಜಿಗಳು ಬಂದಿದ್ದವು.

ಆಸಾಂ-ಬಂಗಾಲದ ಏಕ್ಯ.

ಆಸ್ಸಾಂ ಜನರ ವಿರುದ್ಧವಾಗಿ ಬಂಗಾಳದಲ್ಲಿ ಆಸಾಂ ಕಲೆಯಬೇಕೆಂಬುದನ್ನು ಯಾರೂ ಒಪ್ಪುವುದಿಲ್ಲ. ಅವರ ಇಷ್ಟ ವಿರೋಧವಾಗಿ ಒತ್ತಾಯವು ನಡೆಯಬಾರದು. ಆಸಾಂಭಾಗದ 'ನಾಗಾ' ಮತ್ತು ಇತರ ಗುಡ್ಡಗಾಡಿನ ಜನರಿಗಾಗಿ ಆಡಳಿತವೇ ಬೇರ್ಪಡಬೇಕಾಗುತ್ತದೆ. ಅವರು ಅಖಂಡ ಭಾರತದಲ್ಲಿ ಸಮಾವೇಶಬೇಕಾಗುವುದು ಎಂದು ಪ. ಜವಹರಲಾಲರು ಹೇಳಿದರು.

ಮಹಾತ್ಮಗಾಂಧಿಯವರ ಲೇಖನಗಳು.

ದನಗಳ ಸುಧಾರಣೆ.

ಸರದಾರ ದಾತಾರ ಸಿಂಗರು ಬರೆದ ಸುದೀರ್ಘ ಲೇಖನದ ಸಾರ ಕೆಳಗಿನಂತಿದೆ. ಹಿಂದುಸ್ಥಾನ ಮುಖ್ಯವಾಗಿ ಒಕ್ಕಲುತನದ ನಾಡಾಗಿದ್ದುದರಿಂದ ದನಗಳ ಸುಧಾರಣೆಯೆಂದರೆ ಒಕ್ಕಲತನದ ಅಭಿವೃದ್ಧಿಯೆಂದು ಹೇಳಬೇಕಾಗುವದು. ಜಗತ್ತಿನ ದನಗಳ ಸಂಖ್ಯೆಯಲ್ಲಿ ಹಿಂದುಸ್ಥಾನದಲ್ಲಿಯೆ ೧೦೦ ಕ್ಕೆ ೨೯ ರಷ್ಟು ಸಂಖ್ಯೆಯಿದೆ. ಆದರೂ ಇಲ್ಲಿ ಪ್ರತಿಯೊಂದು ದನದ ಹಾಲಿನ ಉತ್ಪಾದನ ಪ್ರಮಾಣ ಬಹಳ ಕಡಿಮೆಯಿದೆ. ಇಲ್ಲಿ ಪ್ರತಿಯೊಂದು ಗೋ-ಒಂದುದಿನಕ್ಕೆ ೭ ಔನ್ಸ್ ಹಾಲು ಕೊಡುತಿದ್ದರೆ ನ್ಯೂಝಿಲಂಡದಲ್ಲಿ ೫೬ ಔನ್ಸು ಮತ್ತು ಆಸ್ಟ್ರೇಲಿಯಾದಲ್ಲಿ ೪೫ ಔನ್ಸು ಹಾಲು ಹೊರಡುತ್ತದೆ. ಲೆಕ್ಕದಂತೆ ದಿನಾಲು ಕನಿಷ್ಠ ೨೦-೩೦ ಔನ್ಸು ಹಾಲು ಹೊರಡಬೇಕಾದುದು ಅವಶ್ಯ. ಅಂದರೆ ಉತ್ಪಾದನೆಯನ್ನು ಮುಮ್ಮಡಿ ಮಾಡಬೇಕಾಗುವದು. ಪ್ರತಿಯೊಂದು ಆಕಳಿನ ವಾರ್ಷಿಕ ಹಾಲಿನ ಉತ್ಪಾದನೆ ಸರಾಸರಿ ೭೫೦ ಪೌಂಡು ಇರುವದು. ದುರ್ದೈವದಿಂದ ಇದು ಪ್ರಮಾಣಕ್ಕಿಂತ ಬಹಳ ಕಡಿಮೆ ಇರುವದು. ಇಷ್ಟು ಕಡಿಮೆ ಉತ್ಪಾದನ ಬರಬೇಕಾದರೆ ದನಗಳಿಗೆ ಪೌಷ್ಟಿಕ ಆಹಾರ ಸಿಕ್ಕದಿರುವದೆ ಕಾರಣ. ಸಾಧಾರಣವಾಗಿ ವರ್ಷಕ್ಕೆ ೨೭೦೦ ಲಕ್ಷ ಟನ್ ಕಣಕಿ ಮತ್ತು ೫೦೦ ಟನ್ ಹಿಂಡಿ ಹತ್ತಿಕಾಳು ಮೊದಲಾದ ಪೌಷ್ಟಿಕ ಪದಾರ್ಥ ಬೇಕಾಗಿರುವಾಗ ಇಲ್ಲಿ ಕೇವಲ ಅನುಕ್ರಮವಾಗಿ ೧೬೫೦ ಲಕ್ಷ ಟನ್ ಮತ್ತು ೩೦—೫೫ ಲಕ್ಷ ಟನ್ ಸಿಕ್ಕುತಿರುವವು. ಇದರ ಹೊರತು ಸಂಗ್ರಹದಲ್ಲಿ ಕಣಕಿ ಹಿಂಡಿ, ಒಣಗಿಸುವಲ್ಲಿ, ರಾಶಿ ಮಾಡುವಾಗ ಆಹಾರ ಮತ್ತು ಕಣಕಿಯನ್ನು ಸಿದ್ಧಪಡಿಸುವಾಗ ಎಷ್ಟೋ ನೂಲು ಹಾಳಾಗುತ್ತದೆ.

೧ ಯೋಗ್ಯ ಬಗೆಯ ಆಹಾರದ ಬಗ್ಗೆ ಸರದಾರರು ಕೆಳಗಿನ ಸೂಚನೆಗಳನ್ನು ಮಾಡುತ್ತಾರೆ.

ಅ) ಕಣಿಕೆ ಬೆಳೆಗಳನ್ನು ಹೆಚ್ಚಾಗಿ ಬಿತ್ತುವಂತೆ ಒಕ್ಕಲಿಗರಿಗೆ ಯೋಗ್ಯ ಪ್ರೋತ್ಸಾಹನೆ ಕೊಡಬೇಕು. ಮತ್ತು ಹೆಚ್ಚು ಕ್ಷೇತ್ರವನ್ನು ಇದಕ್ಕಾಗಿ ಪ್ರತ್ಯೇಕವಾಗಿಡುವಂತೆ ಯೋಜಿಸಬೇಕು. ಅತಿ ಪೌಷ್ಟಿಕ ಮತ್ತು ಹೆಚ್ಚು ಬೆಳೆ ಬರುವ ಹುಲ್ಲು ಬೆಳೆಸಬೇಕು. ಮತ್ತು ನಿರಂತರ ದೊರೆಯುವ ಮೂರೋಳಿ ಹುಲ್ಲು, ಗಲಗು ಶೀರಖಬ್ಬು ಮೊದಲಾದವುಗಳನ್ನು ಬೆಳಸಬೇಕು. ಅಲ್ಲದೆ, ಅವರಿ, ಉದ್ದು ಮೊದಲಾದವುಗಳನ್ನು ಬೆಳೆಸಿ ಮಿಶ್ರಣವನ್ನು ಮಾಡಿ ದನಗಳಿಗೆ ಹಾಕಬೇಕು.

ಬ) ಕಣಿಕೆ ಬೆಳೆಗಳನ್ನು ಹೆಚ್ಚಿಸಬೇಕು. ಮತ್ತು ಜವಳು ಮೊದಲಾದ್ದರಿಂದುಂಟಾಗುವ ಹಾನಿಯನ್ನು ತಪ್ಪಿಸಬೇಕು. ಅಲ್ಲದೆ ಹುಲ್ಲನ್ನು ಒಣಗಿಸುವ ಸುಧಾರಿಸಿದ ಪದ್ಧತಿಯನ್ನು ಜಾರಿಯಲ್ಲಿ ತರಬೇಕು.

ಕ) ಉತ್ತಮ ಮತ್ತು ವಿಶಾಲ ಹುಲ್ಲುಗಾವಲ ವನ್ನೇರ್ಪಡಿಸಬೇಕು. ಹುಲ್ಲುಗಾವಲಿನ ಕ್ಷೇತ್ರ ಬಹಳ ಮಟ್ಟಿಗೆ ಕಡಿಮೆಯಾದ್ದರಿಂದ ಇದ್ದ ಕ್ಷೇತ್ರದಲ್ಲಿಯೆ ನಿಯಂತ್ರಿತ ರೀತಿಯಿಂದ ದನಗಳನ್ನು ಮೇಯಿಸುವ ಯಾವದೊಂದು ಪದ್ಧತಿಯನ್ನು ಕೈಕೊಳ್ಳಬೇಕು. ಕೆರೆ ದಂಡೆಯಲ್ಲಿಯ ಹುಲ್ಲುಗಾವಲುಗಳ ಲಾಭ ಪಡೆಯಬೇಕು ಈ ಸಂದರ್ಭದಲ್ಲಿ. ಅರಣ್ಯದಲ್ಲಿರುವ ಭೂಮಿಗಳ ಉಪಯೋಗ ಮಾಡಿಕೊಳ್ಳುವದೂ ಮುಖ್ಯವೆಂದೂ ಸರದಾರರು ಒತ್ತಿ ಹೇಳಿದ್ದಾರೆ. ಹಿಂದುಸ್ತಾನದಲ್ಲಿ ಸಾಗುವಳಿ ಆದ ಭೂಮಿ ೩೬೦ ಲಕ್ಷ ಎಕರೆ ಇದ್ದರೆ ೧೦೭೦ ಲಕ್ಷ ಎಕರೆ ಪ್ರದೇಶವು ಅರಣ್ಯವಾಗಿರುತ್ತದೆಂದು ಅಂದಾಜು ಮಾಡಲಾಗಿದೆ. ಈ ವಿಶಾಲ ವನಸಂಪತ್ತಿನ ಉಪಯೋಗ ಬಹಳ ಕಡಮೆ ಮಾಡಿಕೊಳ್ಳಲಾಗುತ್ತದೆ. ಉದಾಹರಣಾರ್ಥವಾಗಿ ಸಂಯುಕ್ತ ಪ್ರಾಂತದಲ್ಲಿ ಒಟ್ಟಾರೆ ಸುಮಾರು ೩೩೦ ಲಕ್ಷ ದನ

ಗಳಲ್ಲಿ ಕೇವಲ ೧೦ ಲಕ್ಷ ದನಗಳು ಈ ಹುಲ್ಲುಗಾವಲಿನ ಲಾಭ ಪಡೆಯುತಿವೆ. ಹಿಂದುಸ್ತಾನದಲ್ಲಿ ಒಟ್ಟಾರೆ ದನಗಳ ಸಂಖ್ಯೆ ೬೭೦ ಲಕ್ಷ ಇದೆ. ಇವುಗಳಲ್ಲಿ ಸುಮಾರು ೮೫ ಲಕ್ಷ ದನಗಳು ಅರಣ್ಯದಲ್ಲಿಯ ಹುಲ್ಲುಗಾವಲಿನ ಪ್ರಯೋಜನ ಪಡೆಯುತಿವೆ. ಬ್ರಿಟಿಶ್ ಹಿಂದುಸ್ತಾನದಲ್ಲಿ ಈ ಅರಣ್ಯ ಪ್ರದೇಶವನ್ನು ಇಮ್ಮಡಿಸಬೇಕೆಂಬ ಯೋಜನೆ ನಡೆದಿದೆ ಅರಣ್ಯ ಪ್ರದೇಶವನ್ನು ಹೆಚ್ಚಿಸಿದರೆ ಬೆಳೆ ಬೆಳೆಸಲಿಕ್ಕೆ ಘಾತಕ ಪರಿಣಾಮವನ್ನುಂಟು ಮಾಡುವದೆಂಬ ವಿಚಾರಸರಣಿಪೂರ್ಣ ತಪ್ಪಾದುದಿರುತ್ತದೆ. ಯೋಗ್ಯರೀತಿಯಿಂದ ದನಗಳನ್ನು ಹುಲ್ಲುಗಾವಲುಗಳಲ್ಲಿ ಮೇಯಿಸಿದರೆ ಅಪಾಯವಾಗುವದಿಲ್ಲ. ಇಷ್ಟೇ ಅಲ್ಲ ಮೊದಲಿಗಿಂತ ಹೆಚ್ಚು ಪ್ರಮಾಣದಲ್ಲಿ ಬೆಳೆ ಬರುತದೆಂದು ಪ್ರಯೋಗಗಳಿಂದ ಸಿದ್ಧವಾಗಿದೆ. ಅರಣ್ಯ ಪ್ರದೇಶವನ್ನು ಶಾಸ್ತ್ರೀಯ ಮತ್ತು ಆರ್ಥಿಕ ಪದ್ಧತಿಯ ಮೇಲೆ ಹುಲ್ಲುಗಾವಲು ಪ್ರದೇಶಗಳನ್ನಾಗಿ ಮಾರ್ಪಡಿಸುವದು ಅವಶ್ಯವೆನಿಸಿದೆ.

೨) ಒಳ್ಳೆ ಜಾತಿಯಿಂದ ದನಗಳ ಸೀಳಿಗೆ ಸುಧಾರಿಸುವದೂ ಮಹತ್ವದ ಪ್ರಶ್ನೆಯಾಗಿದೆ, ಇದರ ಬಗ್ಗೆ ಸರದಾರರ ಸೂಚನೆ ಹೀಗಿದೆ.

ಅ) ಆಯಾ ಸ್ಥಳಿಕ ಪರಿಸ್ಥಿತಿಗೆ ಅನುಗುಣವಾದ ಬೀಜದ ಹೋರಿಗಳನ್ನು ಪೂರಯಿಸಬೇಕು. ಸಾಯಂಕಾಲ ಸುತ್ತಲೂ ಬೇಲಿಯಿದ್ದ ಸ್ಥಳದಲ್ಲಿ ಈ ಹೋರಿಗಳನ್ನು ಹಾಕಿ ಅವುಗಳ ಜೋವಾಸನೆ ಮುಂತಾದ್ದನ್ನು ಮೂಡಲು ರಕ್ಷಕರನ್ನು ನಿಯಮಿಸಬೇಕು. ಅವರ ಊಟದ ಹೊಣೆಯನ್ನು ಆಯಾ ಹಳ್ಳಿಗರು ಹೊರಬೇಕು ದನಗಳ ಸೀಳಿಗೆ ರಕ್ಷಣೆಯಲ್ಲಿ ತರಬೇತಿ ಹೊಂದಿದವರನ್ನೆ ಈ ಕಾರ್ಯಕ್ಕೆ ನಿಯಮಿಸಬೇಕು. ಹೋರಿಗಳಿಗೆ ಪ್ರಥಮ ಚಿಕಿತ್ಸೆ ಮೊದಲಾದ್ದನ್ನು ಮಾಡಲು ಮತ್ತು ದನಗಳ ಬೇನೆ ಪ್ರಾರಂಭವಾದರೆ ಸಹಾಯ ಮಾಡಲು ಈ ಜನರು ತರಬೇತಿ ಹೊಂದಿದವರಿರಬೇಕು.

ಬ) ಅನಿಷ್ಟ ಹೋರಿಗಳ ತರಡು ಬಡೆದು ಬಿಡಬೇಕು.

ಕ) ಬೀಜದ ಹೋರಿಗಳ ಸಂಖ್ಯೆ ಹಿಂದುಸ್ತಾನದ ಅವಶ್ಯಕತೆಗಿಂತ ಬಹಳ ಕಡಿಮೆಯಿದೆ. ಕನಿಷ್ಟ ೧೦ ಲಕ್ಷ ಬೀಜದ ಹೋರಿಗಳಾದರೂ ಇರಲಿಕ್ಕೆ ಬೇಕು. ಪ್ರತಿ ನಾಲ್ಕು ವರುಷಗಳಿಗೊಮ್ಮೆ ಇವನ್ನು ಬದಲು ಮಾಡಬೇಕಾದ ಪ್ರತಿ ವರ್ಷ ೨½ ಲಕ್ಷ ದಷ್ಟು ಬೀಜದ ಹೋರಿಗಳು ಬೇಕಾಗುವವು. ಇದು ಸಾಧ್ಯವಾಗಬೇಕಾದರೆ ವಿಶಿಷ್ಟ ದನಗಳ ಕೇಂದ್ರಗಳಲ್ಲಿ ೬ ಲಕ್ಷಕ್ಕಿಂತ ಕಡಮೆಯಿಲ್ಲದಷ್ಟು ಅಕಳುಗಳನ್ನು ಮತ್ತು ೧೦ ಸಾವಿರ ಬೀಜದ ಹೋರಿಗಳನ್ನು ಇಡಬೇಕಾಗುವದು. ಅದರೆ ಹೀಗೆ ಮಾಡುವದು ಶಕ್ಯವಿಲ್ಲದ್ದರಿಂದ ಮತ್ತು ಆರ್ಥಿಕ ದೃಷ್ಟಿಯಿಂದ ಸರಿಯಲ್ಲದ್ದರಿಂದ ಈಗಿದ್ದ ಗೋಶಾಲೆಗಳ ಮತ್ತು ಪಾಂಜರ ಪೋಳಿಗಳಂತ ಸಂಘ ಸಂಸ್ಥೆಗಳ ಸಂಪೂರ್ಣ ಉಪಯೋಗ ಮಾಡಿಕೊಳ್ಳಬೇಕೆಂದು ಸರದಾರರ ಸೂಚನೆ. ಇವುಗಳನ್ನು ಯೋಗ್ಯರೀತಿಯಿಂದ ಪುನರ್ಘಟಿಸಿದ್ದಾದರೆ ಏನಿಲ್ಲೆಂದರೂ ೨½ ಸಾವಿರ ಬೀಜದ ಹೋರಿಗಳು ಪ್ರತಿವರ್ಷ ಸಿಕ್ಕಬಹುದು. ಅಲ್ಲದೆ ಅಷ್ಟೇ ಎತ್ತುಗಳು ಮತ್ತು ಸುಧಾರಿಸಿದ ೫೦ ಸಾವಿರ ಹೆಣ್ಣು ಕರುಗಳು ಈಸಂಸ್ಥೆಗಳಲ್ಲಿ ತರಬೇತಿ ಹೊಂದಬಹುದು.

೩) ಸಾಂಸರ್ಗಿಕ ರೋಗಗಳು ಹಬ್ಬದಂತೆ ನೋಡಿಕೊಳ್ಳುವದು ಅತ್ಯಂತ ಮಹತ್ವದ್ದಾಗಿದೆ. ೩ ಕೋಟಿಗಿಂತ ಹೆಚ್ಚು ದನಗಳು ಬೇರೆ ಬೇರೆ ಇಂಥ ಬೇನೆಗಳಿಂದ ಪ್ರತಿವರ್ಷ ಸಾಯುತ್ತವೆ. ಈ ಬೇನೆ ಪ್ರತಿಬಂಧಕ ಮತ್ತು ನಿವಾರಕ ಉಪಾಯಗಳ ಕಡಿಗೆ ಯೋಗ್ಯ ಲಕ್ಷ ಪೂರೈಸಬೇಕು. ದವಗಳ ಜೋವಾಸನೆಯ ಸಂಬಂಧದಲ್ಲಿ ಹಳ್ಳಿಗರನ್ನು ತರಬೇತಿ ಮಾಡುವದಲ್ಲದೆ ಅವರಿಗೆ ಅವಶ್ಯಕ ವೈದಕೀಯ ಸಹಾಯವೂ ಸಿಕ್ಕುವಂತೆ ಏರ್ಪಡಿಸಬೇಕು.

ಮುದ್ರಾಸಿಗೆ ಹೆಚ್ಚಿನ ಅಕ್ಕಿ.

ಒರಿಸ್ಸಾ ಪ್ರಾಂತದಿಂದ ಮುದ್ರಾಸಿಗೆ 6 ಸಾವಿರ ಟನ್ ಅಕ್ಕಿಯನ್ನು ಪೂರೈಸಲು ಭಾರತ ಸರ್ಕಾರದ [illegible]ದ್ದಾರೆ

ಸೇವೆ ಪೂಜೆಯಲ್ಲವೆ?

ಪ್ರಶ್ನೆ— ಪರಮಾತ್ಮನ ಪೂಜೆಯಲ್ಲಿ ಕಳೆವ ವೇಳೆಯನ್ನು ಮನುಷ್ಯನು ಬಡವರ ಸೇವೆಯಲ್ಲಿ ಕಳೆಯುವುದು ಹೆಚ್ಚು ಒಳ್ಳೆಯದಲ್ಲವೆ? ನಿಜವಾದ ಸೇವೆ ಮಾಡುವ ಮನುಷ್ಯನಿಗೆ ಭಕ್ತಿ ಪೂರ್ವಕ ಪೂಜೆ ಅನವ್ಯಕವಲ್ಲವೆ?

ಉತ್ತರ— ಈ ಪ್ರಶ್ನೆಗೆ ಯಾವ ಬಗೆಯ ಉತ್ತರ ಕೊಡಬೇಕೆಂಬುದು ನನಗೆ ತಿಳಿಯದಾಗಿದೆ. ಅತ್ಯುಚ್ಚ ಕರ್ಮಯೋಗಿಗಳು ಕೂಡ ಭಕ್ತಿ ಗೀತೆಗಳನ್ನು ಮತ್ತು ಸೇವೆಯನ್ನು ಎಂದೂ ಬಿಡುವದಿಲ್ಲ. ಎರಡನೆಯವರ ನಿಜಸೇವೆ ಮಾಡುವದೆ ಪೂಜೆಯೆಂದು ಧ್ಯೇಯವಾದಿ ಹೇಳಬಹುದು; ಮತ್ತು ಇಂಥ ಭಕ್ತರು ಭಜನೆ ಮುಂತಾದವುಗಳಲ್ಲಿ ವೇಳೆ ಕಳೆಯುವ ಅವಶ್ಯಕತೆಯೂ ಇಲ್ಲೆಂದು ಹೇಳಬಹುದುವಸ್ತುತಃ ಭಜನೆ ಮುಂತಾದವುಗಳ ನಿಜವಾದ ಸೇವೆಗೆ ಸಹಾಯಕವಾದವುಗಳು ಮತ್ತು ಭಕ್ತರ ಅಂತರಾತ್ಮದಲ್ಲಿ ಪರಮಾತ್ಮನ ಸ್ಮೃತಿ ಸದಾ ನವ್ಯವಾಗಿಯೆ ಉಳಿಯುವಂತೆ ಮಾಡಲು ಸಾಧನ.

ಅಸ್ಪೃಶ್ಯತೆಯನ್ನು ಹೋಗಲಾಡಿಸುವದೆಂತು.

ಪ್ರಶ್ನೆ– ಮಂದಿರ ಪ್ರವೇಶದ ಮೇಲಿನ ನಿರ್ಬಂಧ ತೆಗೆದು ಹಾಕುವದು ಸಾರ್ವಜನಿಕ ಭಾವಿಯಲ್ಲಿ ಹರಿಜನರಿಗೆ ಪ್ರವೇಶ ದೊರಕಿಸಿಕೊಡುವುದು ಅವರ ಶಿಕ್ಷಣಕ್ಕಾಗಿ ಶಿಕ್ಷಣವೇತನ ಮುಂತಾದವುಗಳನ್ನು ಕೊಡುವದು ಮುಂತಾದ್ದೆಲ್ಲ ಅಪ್ಪರಮಟ್ಟಿಗೆ ಉಪಯುಕ್ತವಿವೆ ಆದರೆ ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡಬೇಕಾದರೆ ಹರಿಜನ ಕೇರಿಗಳನ್ನು ಮತ್ತು ಅವರ ಪ್ರತ್ಯೇಕ ವಸತಿಗಳನ್ನು ರದ್ದುಪಡಿಸುವುದು ನಿಜವಾದ ಮಾರ್ಗವೆಂದು ಮದ್ರಾಸಿನ ಹರಿಜನ ಬಂಧುವೊಬ್ಬರು ಬರೆಯುತ್ತಾರೆ.

ಉತ್ತರ:— ಮನಸು ಬಂದಲ್ಲೆಲ್ಲ ಹರಿಜನರಿಗೆ ಇರಲು ಅವಕಾಶ ಕೊಟ್ಟರೆ ಅಸ್ಪೃಶ್ಯತೆ ಸಮೂಲ ನಾಶವಾಗುವುದೆಂದು ಹೇಳುವುದು ಸುಲಭವೆನಿಸುತ್ತದೆ ಹರಿಜನರು ಇಂಥಲ್ಲಿಯೇ ಇರಬೇಕೆಂದು ವಿಧಿಸುವ ಸಾಮಾನ್ಯ ಕಾಯದೆಯಾವುದೂ ಇರುವುದಿಲ್ಲೆಂದು ನನಗೆ ಗೊತ್ತಿದ್ದಮಟ್ಟಿಗೆ ಹೇಳಬಹುದಾಗಿದೆ ಅವರನ್ನು ಹಾಗೆ ಒತ್ತಾಯಗೊಳಿಸುತ್ತಿರುವದು ದುಷ್ಟ ರೂಢಿಯು. ಆ ರೂಢಿ ಇದೀಗ ಅಳಿಯುತಿದೆ ಆದಷ್ಟು ಬಹಳ ಸಾವಕಾಶವಾಗಿ ಅದನ್ನು ತೊಡೆದು ಹಾಕ್ಬವದು ಪ್ರತಿಯೊಬ್ಬರ ಕರ್ತವ್ಯ. ಜನರ ಹೃದಯಪರಿವರ್ತನ ಮಾಡುವ ಪ್ರಶ್ನೆಯಿದು. ಅತ್ಯಂತಿಕ ಸ್ವಾರ್ಥ ತ್ಯಾಗದಿಂದ ಇಷ್ಟೆ ಪರಿಣಾಮ ಪ್ರಾಪ್ತವಾಗುತ್ತದೆ. ತುಳಸೀದಾಸರು ಹೀಗೆ ಹೇಳಿಲ್ಲವೆ,

"ಯಜ್ಞದಿಂದಲೆ ಬ್ರಹ್ಮ ಸೃಷ್ಟಿಸಿದ
ಯಜ್ಞದಿಂದಲೆ ವಿಷ್ಣು ಪಾಲಿಸುವ
ಯಜ್ಞದಿಂದಲೆ ಪೃಥ್ವಿ ಬಾಳುತಿದೆ
ಆದುದರಿಂದ ಭವಾನಿಯೆ ಯಜ್ಞವನ್ನು ಮಾಡು"

ಅಂಥ ಅತ್ಯಂತಿಕ ತ್ಯಾಗಿಯ ಅವತಾರವಾದಾಗ ಆ ಕಲಂಕ ಮಾಯವಾಗುವದು. ಮತ್ತು ಧರ್ಮವು ಪರಿಶುದ್ಧವಾಗಿ ರಕ್ಷಿತವಾಗುವದು.

ಬಂಗಾಳದಲ್ಲಿ ಶಾಂತಿಯುಪಾಯ.

ಬಂಗಾಳದ ಮುಖ್ಯ ಮಂತ್ರಿಗಳಾದ ಸುರೆವರ್ದಿಯವರು ದೆಹಲಿಗೆ ಬಂದು ಮುಖಂಡರೊಡನೆ ಮಾತುಕತೆ ನಡೆಸಿರುವರು. ಬಂಗಾಳದಲ್ಲಿ ಶಾಂತಿಯಾಗಬೇಕೆಂದರೆ ಹಿಂದೂ ಮುಸಲ್ಮಾನ ಮುಖ್ಯಪ್ರತಿನಿಧಿಗಳನ್ನೊಳಗೊಂಡ ಮಂತ್ರಿಮಂಡಲದ ರಚನೆಯಾಗಬೇಕೆಂಬ ಅರಿವು ಮುಸ್ಲಿಂಲೀಗಿನ ಮಂತ್ರಿ ಮಂಡಲಕ್ಕಾಗಿದೆ. ಕಾಂಗ್ರೆಸ್ ಲೀಗ್‌ಗಳಲ್ಲಿ ರಾಜಿಯಾಗಿದೆ ಬಂಗಾಲದ ಮಂತ್ರಿಮಂಡಲದಲ್ಲಿ ಹೇಗೆ ಬದಲಾವಣೆಯಾದೀತೊ ಎಂಬುದು ಸಂಶಯಾಸ್ಪದವಾಗಿದೆ.

ಏಡೆಡ್ ಶಾಲೋಪಾಧ್ಯಾಯರಿಗಾದ ಅನ್ಯಾಯ.

— ಬಳ್ಳಾರಿಯಲ್ಲಿ ಸಭೆ —

ಕಳೆದ ಶುಕ್ರವಾರ ಗವರ್ನಮೆಂಟು ಟ್ರೈನಿಂಗ್ ಶಾಲೆಯಲ್ಲಿ ಶ್ರೀ ಬೆಲ್ಲೊಣ ಭೀಮರಾಯರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದಿತು. ಸುಮಾರು ೧೨೦ ಜನ ಉಪಾಧ್ಯಾಯರು ಹಾಜರಿದ್ದರು. ಸಭೆಯ ಚಾಲಕರೂ ಸಂಘದ ಕಾರ್ಯದರ್ಶಿಗಳೂ ಆದ ಶ್ರೀ ವಿ. ಆನಂದತೀರ್ಥಾಚಾರ್ಯರು ಸಭೆಯನ್ನು ಕರೆದ ಉದ್ದೇಶಗಳನ್ನು ಹೇಳಿದನಂತರ ಚರ್ಚೆಯಾದಮೇಲೆ ಈ ಕೆಳಗಿನ ಅರ್ಥದ ತೀರ್ಮಾನವಾಯಿತು.

ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್‌ರವರು ತಮ್ಮ R. O. C. No. 1496 B 7/46 ತಾ 2-10-46 ರ ಆಜ್ಞೆಯಪ್ರಕಾರಕ್ಕೆ ಪ್ರತಿವರ್ಷವೂ ಕೊಡಲಾಗುತ್ತಿದ್ದ ಗ್ರಾಂಟಿನಮೇಲಿನ ಶೇಕಡಾದಾ ಮಾಷದ ಅಂಕ್ರಿಮೆಂಟ್ ಕೊಡಬಾರದೆಂದು ನಿರ್ಣಯಿಸುವುದು ಅನ್ಯಾಯ ಒಂದು ಕೈಯಿಂದ ಕೊಟ್ಟು ಇನ್ನೊಂದು ಕೈಯಿಂದ ಅದನ್ನು ಮರಳಿ ತೆಗೆದು ಕೊಂಡಂತಾಗಿದೆ. ಸರ್ಕಾರದವರು ಉಪಾಧ್ಯಾಯರಿಗೆ ೨ ರೂ. ಹೆಚ್ಚಿಸಬೇಕೆನ್ನುವ ಈ ಚಿನ ಆರ್ಡರ ಉಪಯೋಗವಿಲ್ಲದಂತಾಗುವುದು. ಶೇಕಡ 80./- ಭಾಗದಶಾಲೆಗಳಲ್ಲಿ ಶೇಕಡ 20 ರಿಂದ 50 ರವರಿಗೆ ಮಾತ್ರ ಹೆಚ್ಚಿನಗ್ರಾಂಟು ದೊರೆಯುತ್ತದೆ. ಈ ಕಾರಣವರ್ಷವರ್ಷವೂ ಕೊಡುತ್ತಿದ್ದ ಹೆಚ್ಚಳವನ್ನು ನಿಲ್ಲಿಸದೆ. ಹಿಂದಿನ ಪದ್ಧತಿಯನ್ನೇ ಜಾರಿಯಲ್ಲಿತಂದು ಉಪಾಧ್ಯಾಯರಿಗೆ ಅನುಕೂಲವನ್ನು ಕಲ್ಪಿಸಬೇಕೆಂದು ಈ ಸಭೆಯು ಬೇಡುತ್ತದೆ.

ಮ್ಯಾನೇಜರ್ ಮತ್ತು ಟೀಚರ್ ಮ್ಯಾನೇಜರಸಭೆಯಲ್ಲೂ ಕೂಡ ಇದಕ್ಕೆ ಪುಷ್ಟಿಯನ್ನು ಕೊಟ್ಟೂ, ಉಪಾಧಾಯರ ಈಗಿನ ಸಂಕಟ ಪರಿಸ್ಥಿತಿಯು ಸುಧಾರಿಸಬೇಕೆಂದರೆ ಬೇಸಿಕ್ ಗ್ರಾಂಟ್‌ನ್ನು ಹೆಚ್ಚಿಸಬೇಕೆಂದೂಧೀ ಹಾಕಿರುವ, ಹಾಕದಿರುವ ಶಾಲೆಗಳಿಗೆ ಶೇಕಡ 15 ಗ್ರಾಂಟು ಕೊಡಬೇಕೆಂದೂ, ಇಂಕ್ರಿವಿಷಯಕ್ಕೆ ಸದ್ಯಕ್ಕೆ ಜಾರಿಯಲ್ಲಿರುವಪದ್ಧತಿಯಲ್ಲಿ ಬದಲಾವಣೆ ಮಾಡಬಾರದೆಂದೂ ತೀರ್ಮಾನಗಳನ್ನು ಮಾಡಿದರು.

ಇಟ್ಟಿಗಿ ವಿಜಯೇಂದ್ರ ಸನ್ಮಾನಸಭೆ.

12 ನೆಯ ತಾ|| ಕರ್ನಾಟಕುಲ ಪುರೋಹಿತ ಶ್ರೀ ಆಲೂರು ವೆಂಕಟರಾಯರ ಅಧ್ಯಕ್ಷತೆಯಲ್ಲಿ ಬಳ್ಳಾರಿ ಜಿಲ್ಲೆಯ ತರುಣಕವಿಗಳಲ್ಲೊಬ್ಬರಾದ ಶ್ರೀ ವಿಜಯೇಂದ್ರ ಶಾನುಭೋಗರ ಸನ್ಮಾನವಾಯಿ. ಸಮಾರಂಭದ ಉದ್ಘಾಟನೆಯನ್ನು ಹಂಪಿಕ್ಷೇತ್ರದ ಯೋಗಿ ಅಚ್ಚುತಕುಮಾರರು ನೆರವೇರಿಸಿ ತರುಣ ಕವಿಗಳಿಗೆ ಯಶಸ್ಸನ್ನು ಕೋರಿದರು. ಶ್ರೀ ಚನ್ನಬಸವನಗೌಡ್ರು ತಮ್ಮ ದೀರ್ಘ ಭಾಷಣದಲ್ಲಿ. ಶ್ರೀ ಆ. ವೆಂಕಟರಾಯರು ಕನ್ನಡನಾಡಿಗೆ ಇದುವರಿವಿಗೆ ಮಾಡಿದ ಸೇವೆಯ ವಿಷಯಗಳನ್ನು ತಿಳಿಯಪಡಿಸಿದರು. ಶ್ರೀ ಅನಂತಾಚಾರ್ಯರು ಯಶಸ್ಸನ್ನು ಕೋರಿದನಂತರ ಶ್ರೀ ಕೇಶವರಾಯರು ಸ್ವಾತಂತ್ರ್ಯೋದ್ಯಮವು ಒಳ್ಳೆಯ ಸಾಹಿತ್ಯದಿಂದ ಪ್ರಗತಿಯಾಗುವುದೆಂದು ನುಡಿದರು. ಜಯತೀರ್ಥರು ಸ್ವಾಗತಗೀತ ಹೇಳಿ ಎಲ್ಲರನ್ನು ಸ್ವಾಗತಿಸಿದರು. ಶ್ರೀ ವೆಂಕಟರಾಯರು ತಮ್ಮ ಭಾಷಣದಲ್ಲಿ ಕವಿಗಳಿಗಿರಬೇಕಾದ ಗುಣ ಪ್ರತಿಪಾದಿಸಿ ತಾವು ಹೊರಗೆಲ್ಲಿಯೂ ಬರುವಪದ್ಧತಿ ಇಟ್ಟಿಲ್ಲವೆಂತಲೂ ಈಗಿನ ಸಂದರ್ಭದಲ್ಲಿ ಮಾತ್ರ ಬರುವ ನಿಶ್ಚಯವಾಡಿದರೆಂತಲೂ ಹೇಳಿ ಕವಿಗಳನ್ನು ಆಶೀರ್ವದಿಸಿದರು. ಶ್ರೀ ವಿಜಯೇಂದ್ರರು ತಾವು ಬರೆದ 'ಕರುಳ ಕೊರಗು' ಕಲಭಾಗಗಳನ್ನು ಓದಿಹೇಳಿದರು.

ಶ್ರೀ ಜಯತೀರ್ಥ, ಚೀಳಂಗಿ ಕೃಷ್ಣಮೂರ್ತಿ, ಶಾಮಶಾಸ್ತ್ರಿ, ವೆಂಕೋಬ ಶೆಟ್ಟರು, ಗೋವಿಂದಾಚಾರ್ಯ, ಕೃಷ್ಣಾಚಾರ್ಯ, ಕೊಟ್ರಬಸಯ್ಯನವರು ಭಾಷಣಕೊಟ್ಟರು. ಮಂಗಳ ಗೀತೆಯಿಂದ ಸಭೆಯಾಯಿತು

ಹಂಪಿಯಲ್ಲಿ

ಆಂಧ್ರರ ಪ್ರದರ್ಶನ, ಕನ್ನಡಿಗರ ವಿರೋಧ

(ನಮ್ಮ ಸುದ್ದಿಗಾರರಿಂದ)

ಬಳ್ಳಾರಿ ಯಂಥ ಅಚ್ಚಗನ್ನಡ ಜಿಲ್ಲೆಯಲ್ಲಿ ಆಂಧ್ರರದೊಡ್ಡ ಪ್ರದರ್ಶನವೊಂದು ನಡೆಯುವುದೆಂಬ ತಪ್ಪು ತಿಳುವಳಿಕೆಯಿಂದ ಕನ್ನಡಯುವಕರು ಅತ್ಯಧಿಕಸಂಖ್ಯಾಕರಾಗಿ ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ಬರದೆ ಇದನ್ನು ಅಲಕ್ಷಿಸಿದ್ದರೆ, ಅಲ್ಲಿ ಸಭೆಯಾಗುವುದು ಕಠಿಣವಿದ್ದಿತು. ಕನ್ನಡಿಗರ ಸಂಖೆಯಿಂದಲೇ ಸಭೆಯ ಶೋಭೆಯಾಯಿತು. **ಆಂಧ್ರ ಇತಿಹಾಸ ಸಂಶೋಧಕ ಸಮಿತಿ**ಯೆಂಬ ದೊಡ್ಡ ಹೆಸರಿಟ್ಟು ಕೊಂಡು ಸಭೆಯನ್ನು ಸೇರಿಸಿದ ಇವರ ಸಾಹಸಕ್ಕೆ ಮೆಚ್ಚಬೇಕು ಇಡೀ ಆಂಧ್ರದೇಶದ ಜಿಲ್ಲೆಗಳಿಂದ ಮೂವರು ಮಾತ್ರ ಪ್ರತಿನಿಧಿಗಳು ಬಂದಿದ್ದರೆಂದರೆ, ಆಶ್ಚರ್ಯವಾಗದಿರದು. ಜಿಲ್ಲಾಕಲೆಕ್ಟರವರು ತಮ್ಮ ಬೆಂಬಲವನ್ನು ಕೊಡದಿದ್ದರೆ, ಅವರು ಬರದೆ ಇದ್ದರೆ, ಅಲ್ಲಿ ೨೫ ಜನರು ಕೂಡಾ ಇರುತ್ತಿರಲಿಲ್ಲ.

ಬೊಂಬಾಯಿ ಕಾಲೇಜದ ಪ್ರೋಫೆಸರೊಂದಿಗೆ ಕೆಲಸ್ತ್ರೀಪುರುಷ ವಿದ್ಯಾರ್ಥಿಗಳು ಹಂಪೆಯನ್ನು ನೋಡಲುಬಂದು ಈ ಸಭೆಗೆ ಮತ್ತಷ್ಟು ಕಳೆಯನ್ನು ಕೊಟ್ಟರು

ಪ್ರಕಟನೆಯ, ಜಾಹೀರಾತಿನ ಅಭಾವಗಳಿಂದಲೋ ಜನತೆಯಲ್ಲಿ ಈ ಬಗ್ಗೆ ಇರುವ ನಿರಸನ ಬುದ್ಧಿಯಿಂದಲೋ ಪ್ರತಿನಿಧಿಗಳಾರೂ ಬರಲಿಲ್ಲ ಆಹ್ವಾನ ಸಮಿತಿಯಲ್ಲಿ ಕಾಣಿಸಲಾದ ಬಳ್ಳಾರಿ ಮಹನೀಯರೂ ಒಳ್ಳೆಯ "ಚಕ್ರ" ಕೊಟ್ಟಿದ್ದರು. ಅವರ ಸ್ವಪ್ನದಲ್ಲಿ ಕನ್ನಡಯುವಕರ ಬಾಂಬು ಅವರಮೇಲೆ ಬಿದ್ದಿರಬೇಕು

ಇತಿಹಾಸ ಸಂಶೋಧಕರ ಸಭೆ ಇದು. ಇದಕ್ಕೆ ಭಾಷಾಭೇದ ಜಾತಿಭೇದಗಳಿಲ್ಲ, ದಯವಿಟ್ಟು ಸಹಕರಿಸಿರಿ ಎಂದು ಕಲೆಕ್ಟರ್ ಅನಂತಶಾಮನ್‌ರವರು ಹೇಳಿಕಳುಹಿಸಿ ವಿರೂಪಾಕ್ಷ ದೇವಸ್ಥಾನದ ಬೇರೊಂದೆಡೆಯಲ್ಲಿ ಸ್ವತಂತ್ರವಾಗಿ ಮೇಘಗರ್ಜನೆಯಂತೆ ಘೋಷಿಸುತ್ತಲಿದ್ದ ಭಾಷಣಕಾರರನ್ನು ಅವರ ಅನುಯಾಯಿಗಳನ್ನು ಫಸ್ಟಕ್ಲಾಸ್ ಮ್ಯಾಜಿಸ್ಟ್ರೇಟ ವೀರಾಸ್ವಾಮಿಯವರ ಮೂಲಕ ಕರೆಸಿದನಂತರ ಶಾಂತವಾತಾವರಣ ವಾಯಿತು. ಸಂಶೋಧಕರಿಗೆ Audience ಆಯಿತು. ಶ್ರೀ ಜೋಳದರಾಸಿ ದೊಡ್ಡನಗೌಡರ ಮಧುರವಾಣಿಯ ಪದಗಳು ಹಂಪಿಯ ನಿರ್ಜೀವ ಪ್ರತಿಮೆ ಶಿಲೆಗಳಿಂದ ಪ್ರತಿಧ್ವನಿತವಾಗಿ ಅಲ್ಲಿಕೂಡಿದ ಅಲ್ಪಸಂಖೆಯ ಪರಕೀಯರಿಗಾದರೂ ಕನ್ನಡರಾಜ್ಯ ರಮಾರಮಣನ ಮಹತ್ವವನ್ನು ಜ್ಞಾಪಕಕ್ಕೆ ತಂದು ಕೊಟ್ಟವು,

ಬಳ್ಳಾರಿಯ ಮಹಸೀಯರೊಬ್ಬರು ಇದರ ಭಾಧ್ಯತೆಯನ್ನು ವಹಿಸಿ ಕೆಲಮಟ್ಟಿಗೆ ಹಣ ಸಂಗ್ರಹ ಮಾಡಿದುದನ್ನು ಆಂಧ್ರ ಕಾರ್ಯದರ್ಶಿಗಳು "ಎಲ್ಲಾ ಹಣ ನನಗೆ ಕೊಟ್ಟುಬಿಡಿ ನಾನು ನೋಡಿಕೊಳ್ಳುತ್ತೇನೆ" ಎದು ಗುದ್ದಾಟಕ್ಕೆ ಪ್ರಾರಂಭಮಾಡಿದರು. ಆಂಧ್ರರು ಒಬ್ಬಿಬ್ಬರು ಇದ್ದರೂ ಇಂಥಾಸಾಹಸದ ಕೆಲಸಗಳಿಗೆ ಹೋಗುವುದು ಅವರ ನೈಜಗುಣವೆನ್ನಬೇಕೊ? ಇದು ಎಂಥಾ ದೌರ್ಜನ್ಯ! ಸಂಗ್ರಹದ ಹಣವನ್ನೆಲ್ಲಾ ಅವರ ಕೈಲಿಕೊಟ್ಟು ಬಳ್ಳಾರಿ ಕಡೆಯಿಂದ ಬಂದವರನ್ನೆಲ್ಲಾ ಉಪವಾಸ ಕೆಡವಬೇಕಾಗಿತ್ತೊ?

ನನ್ನನ್ನು ಕೇಳಿದರೆ ಈ ಸಭೆಯನ್ನು ಕನ್ನಡಿಗರು ಅಲಕ್ಷಿಸಿದ್ದರೆ ಚನ್ನಾಗಿತ್ತು. ಹಂಪೆಯಲ್ಲಿ ನಡೆದ ಭೆಯು ಕನ್ನಡನಾಡಿನ ವಿಜಯಭೇರಿಯನ್ನು ಬಾರಿಸುತ್ತ ಬಂದ ಕನ್ನಡಯುವಕರ ಉತ್ಸಾಹ ಪ್ರದರ್ಶನವೆಂದು ಹೇಳುವುದರಲ್ಲಿ ಏನೂ ಸಂಶಯವಿಲ್ಲ.

ಸರ್ದಾರ ವಲ್ಲಭಭಾಯಿ ಪಟೇಲರು ವೃತ್ತಪತ್ರಗಳ ಸಂಪಾದಕರಿಗೆ ಆಶ್ವಾಸನವಿತ್ತು ಅವರ ಸ್ವಾತಂತ್ರ್ಯವನ್ನು ಕಾಪಾಡುವುದಾಗಿಯೂ, ಅವರಿಗೆ ಎಲ್ಲಾ ವಿಧವಾದ ಸೌಲಭ್ಯಗಳನ್ನೊದಗಿಸುವುದಾಗಿಯೂ ಹೇಳಿದ್ದಾರೆ.

ಸಿರಿಗೆರೆ [ತಿರುಗುಪ್ಪ]

ಹರಿಜನರಸಭೆ:— ಇಲ್ಲಿ 15 ನೆಯ ಮಂಗಳವಾರ ಹರಿಜನರ ಕೇರಿಯಲ್ಲಿ ಕೂಡಿದ ಸಭೆಗೆ ಬಾದನಹಟ್ಟಿ, ಗೆಣಿಕೆಹಾಳು, ಮುದ್ದಟನೂರು, ಮಣೇಸೂಗೂರು, ವೀರಾಪುರ, ಆವಿನಹಾಳು, ಭೈರಾಪುರ, ಕೊಂಚಿಗೆರೆ, ನೆಡ್ನಿ ಈ ೯ ಗ್ರಾಮಗಳಿಂದ ಹರಿಜನರು ಬಂದು ತಮಗಿರುವ ಜಾಗಾಗಳ, ನೀರಿನ ಭೂಮಿಯ, ವಿದ್ಯಾಭ್ಯಾಸದ ಕೊರತೆಗಳನ್ನು ನಿವೇದಿಸಿದರು. ಹರಿಜನಸೇವಕ ಸಂಘದ ಕಾರ್ಯದರ್ಶಿ ಶ್ರೀ ಕೇಶವರಾಯರು ಹರಿಜನರಿಗಾಗಿ ಮದ್ರಾಸ್ ಸರ್ಕಾರವು ೧ ಕೋಟಿ ಖರ್ಚುಮಾಡಲಿರುವದೆಂದೂ, ಸರ್ಕಾರದವರೂ, ಸಾರ್ವಜನಿಕರೂ, ಹರಿಜನಾಭಿವೃದ್ಧಿಯ ವಿಷಯಕ್ಕೆ ಹೆಚ್ಚಿನ ಶ್ರದ್ಧೆ ವಹಿಸುತ್ತಿರುವ ಕಾರಣ ಅವರ ಕಷ್ಟಗಳೆಲ್ಲಾ ಶೀಘ್ರವಾಗಿ ದೂರವಾಗುವವೆಂದೂ, ಆದರೆ ಆತುರತೆಯಿಂದ ಉಪಯೋಗವಿಲ್ಲೆಂದೂ ಹೇಳಿದರು. ಬಾದನಹಟ್ಟಿಯ ಹನುಮಂತಪ್ಪ, ಹರಣಪ್ಪ ಹಾ ವೀರಾಪುರದ ಈರಪ್ಪ, ಮಣೂರುಸೂಗೂರಿನ ದುರ್ಗಪ್ಪ ದ್ಯಾವಪ್ಪ ಹರಿಜನಸೇವಕ ಸಂಘ ಸದಸ್ಯರಾದರು. ಭಜನೆ ಮಂಡಲಿ, ಸತ್ತದನದ ಮೂಂಸತನ್ನುವದರ ನಿಷೇಧ ವಿದ್ಯಾಭ್ಯಾಸಕ್ಕೇರ್ಪಾಟು, ಸಾಲದ ತೀರ್ಪು, ವಗೈರೆ ಮುಖ್ಯ ವಿಷಯಗಳನ್ನು ನಿಧಾನವಾಗಿ ಮಾಡಬೇಕೆಂದು ನಿರ್ಣಯಗಳಾದುವು.

ರಾತ್ರಿ 8 ರಿಂದ 10 ಘಂಟೆವರಿವಿಗೆ ಚಾವಡಿ ಮುಂದಿನ ಬಯಲಿನಲ್ಲಿ ದೊಡ್ಡ ಸಾರ್ವಜನಿಕ ಸಭೆಯು ನಡೆದು ಶ್ರೀ ಕೇಶವರಾಯರು, ಕಾಂಗ್ರೆಸ್‌ನ ಸಂಕ್ಷಿಪ್ತ ಇತಿಹಾಸವನ್ನು ತಿಳುಹಿಸಿ ರಚನಾತ್ಮಕ ಕಾರ್ಯಗಳನ್ನು ಕೈಗೊಂಡ ಕಾಂಗ್ರೆಸ್ ಸರ್ಕಾರಗಳಿಗೆ ಬೆಂಬಲ ಕೊಡಬೇಕೆಂದೂ ಜಾಗೃತರಾಗಬೇಕೆಂದೂ ಹೇಳಿದರು. ಈ ಸಭೆಗೆ ಹರಿಜನರೂ ಹಿಂದೂಗಳೂ ಬಹಳ ಜನ ಕಲೆತಿದ್ದರು. ಶ್ರೀ ರೇವಣಸಿದ್ದಪ್ಪನವರು ಎಲ್ಲರನ್ನು ವಂದಿಸಿ, 'ವಂದೇ ಮಾತರಂ' ಗೀತೆಯಿಂದ ಮುಗಿಸಿದರು.

ಬದಿನೆಹಾಳಲ್ಲಿ ನಾಡಹಬ್ಬ.

ಆಶ್ವೀಜ ಶು॥ ೧ ರಿಂದ ೯ ರವರೆಗೆ ಶಾಲೆಯ ಬಾಲ ಬಾಲಕಿಯರು ಪ್ರಭಾತಫೇರಿಯಿಂದ ಕನ್ನಡ ಜನಾಂಗವನ್ನು ಎಚ್ಚರಗೊಳಿಸಿದರು. ಕನ್ನಡಸಾಹಿತ್ಯ ಏಕೀಕರಣ ವಗೈರೆ ವಿಷಯಗಳನ್ನು ಕುರಿತು ಶ್ರೀಗಳಾದ ಬಿ. ರಂಗನಗೌಡ (ಅ.ವಿ.ಸ. ಕಾರ್ಯದರ್ಶಿ) ಚನ್ನಯ್ಯ ಶಾಸ್ತ್ರಿ, ವಿರುಪಾಕ್ಷ ಭಟ್ಟರ ಭಾಷಣಗಳಾದವು. 1946—47 ಕ್ಕೆ ಹೊಸ ಕಾರ್ಯಕಾರೀ ಸಮಿತಿಯು ನಿರ್ಮಿತವಾಯಿತ. **ಅಧ್ಯಕ್ಷೆ :—** ಶ್ರೀ ಬಿ. ರಂಗನಗೌಡ **ಉಪಾಧ್ಯಕ್ಷರು:—**ಶ್ರೀ ಚನ್ನಬನವನಗೌಡ, ಕೆ. ರಂಗರಾವ್, ಸೋಮನಗೌಡ **ಕೋಶಾಧ್ಯಕ್ಷ:—** ಜೋ. ಕೃಷ್ಣಮೂರ್ತಿ ಆಚಾರು **ಗೌರವಕಾರ್ಯದರ್ಶಿ :—** ಶ್ರೀ ವಿರುಪಾಕ್ಷಯ್ಯ **ಸಹಾಯಕಾರ್ಯದರ್ಶಿ:—** ಕೆ. ಹನುಮಂತಪ್ಪ ೧೭ ಸದಸ್ಯರು ಕಾರ್ಯಕಾರೀ ಸಮಿತಿಗೆ ಆರಿಸಲ್ಪಟ್ಟರು.

ಲೀಗ್ ಕಾಂಗ್ರೆಸ್ ರಾಜಿಯಿಲ್ಲ

ಆದರೆ ಲೀಗ್, ಸರ್ಕಾರದಲ್ಲಿ ಸಹಕರಿಸಿತು.

ಈಗ ಸುಮಾರು 15 ದಿನಗಳಿಂದ ಡೆಹಲಿಯಲ್ಲಿ ರಾಜಕೀಯ ಚಟುವಟಿಕೆನಡೆದು ಜಿನ್ನಾ, ಜವಹರಲಾಲರಲ್ಲಿ ಮಾತುಕತೆಗಳು ಸಾಗಿದ್ದವು. ಆದರೆ ಈಗ ಪತ್ರವ್ಯವಹಾರದ ಪ್ರಶಿದ್ಧವಾಗಿ ಲೀಗ್ ಕಾಂಗ್ರೆಸ್ ರಾಜಿಯಾಗಲಿಲ್ಲೆಂಬುದು ಪ್ರಕಟವಾಗಿದೆ. ಆದರೂ ಮುಸ್ಲಿಂ ಲೀಗಿನವರು ನಡುಗಾಲ ಸರಕಾರದಲ್ಲಿ ಸೇರಲು ನಿಶ್ಚಯಿಸಿ ಈ ಕೆಳಗಿನ 5 ಜನರ ಹೆಸರನ್ನು ಕಳುಹಿಸಿದ್ದಾರೆ, ಲಿಯಾಖತಖಾನ್, ಫಜಲಫರ್, ರಬ್ ನಿಶ್ತಾರ್, ಚುಂದ್ರಿಗಾರ ಮತ್ತು ಜೋಗೇಂದ್ರನುಂಡಳ್, ಕೊನೆಯವರಾದ ಜೋಗೇಂದ್ರರು ಬಂಗಾಳದ ಅಸ್ಪೃಶ್ಯರಿದ್ದು, ಅಸ್ಪೃಶ್ಯರು ಕಾಂಗ್ರೆಸ್‌ನೊಡನೆ ಸಹಕರಿಸದಂತೆ ಮಾಡುವುದೇ ಜಿನ್ನಾರ ಉದ್ದೇಶವಿದ್ದಂತೆ ಕಾಣುತ್ತದೆ. ಇವರು ಬರುವವಾರ ಅಧಿಕಾರಸೂತ್ರಗಳನ್ನು ವಹಿಸಲಿದ್ದಾರೆ.

The Rayalaseema Bank Limited, Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— (ಬಳ್ಳಾರಿಜಿಲ್ಲಾ **ಹಡಗಲಿ, ಕೂಡ್ಲಿಗೆ,** ಚಿತ್ತೂರುಜಿಲ್ಲಾ **ನಾಗರಿಯಲ್ಲಿ**
ನಮ್ಮ ಶಾಖೆಗಳನ್ನು ಪ್ರಾರಂಭಿಸಿದೆವೆಂದು ತಿಳಿಸಲು ಹರ್ಷಿಸುತ್ತೇವೆ.

ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ.
ಅನಂತಪುರ:- ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ.
ಚಿತ್ತೂರು:- ಚಿತ್ತೂರು, ಮದನಪಲ್ಲಿ, ತಿರುಪತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ. **ಕಡಪ:-** ರಾಜಂಪೇಟೆ

ಫಿಕ್ಸ್‌ಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:- 3%.

ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.

ನೈಟ್ ಕ್ವೀನ್ ಹೇರಾಯಿಲ್

ಕೂದಲಿನ ಸೌಂದರ್ಯ, ಮೃದುತ್ವವನ್ನು ಕಾಪಾಡಿ ಮೆದುಳನ್ನು ತಂಪು ಮಾಡುವುದು. ನಿತ್ಯದ ಉಪಯೋಗದಿಂದ ಕೂದಲಿನ ಪಟುತ್ವ ಧೃಡತ್ವ ಹೆಚ್ಚುವುದು. ಕೇಶ ತೈಲಗಳಿಗೆಲ್ಲಾ ಇದು ರಾಣಿ ಇಂದೇ ಕೊಂಡು ಉಪಯೋಗಿಸಿದರೆ ಇದರ ಸದ್ಗುಣಗಳನ್ನು ಅರಿಯುವಿರಿ. ಎಲ್ಲಾ ಷಾಪುಗಳಲ್ಲಿ ದೊರೆಯುತ್ತದೆ.

ಹಿಂದೂಸ್ತಾನಿಯು ರಾಷ್ಟ್ರಭಾಷೆ

ಇದನ್ನು ತಪ್ಪದೆ ಕಲಿಯಿರಿ.

ಪ್ರಾರಂಭಿಕ ಪರೀಕ್ಷೆಗಳಾದ ಪ್ರಾಥಮಿಕ. ಮಧ್ಯಮ ರಾಷ್ಟ್ರಭಾಷೆ, ಉನ್ನತ ಪರೀಕ್ಷೆಗಳಾದ ಪ್ರವೇಷಿಕ, ವಿಶಾರದ- ಪ್ರಚಾರಕ, ಮದ್ರಾಸ್ ವಿಶ್ವವಿದ್ಯಾಲಯದ ಹಿಂದೀ- ವಿದ್ವಾನ್ ಪರೀಕ್ಷೆಗಳ ಮಾಹಿತಿಯನ್ನು ಉಚಿತವಾಗಿ ಕೊಟ್ಟು- ಶಿಕ್ಷಣದ ಏರ್ಪಾಟಿಗೆ ಸಲಹೆಗಳನ್ನು ಕೊಡಲಾಗುವುದು- ಎಲ್ಲಾಪುಸ್ತಕಗಳು ದೊರೆಯುತ್ತವೆ. **ಬಹಳ ಸುಲಭ ಭಾಷೆ-ಅತ್ಯಲ್ಪಕಾಲದಲ್ಲಿ ಕಲಿಯಬಹುದು.** **ಟಿ. ಬಿ. ಕೇಶವರಾವ್**
ಹಿಂದೀಪ್ರಚಾರಕ, ಬಳ್ಳಾರಿ

NAVA BHARAT, BELLARY

Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

SRI.....

.....

.....

Printed at Krishna Press Bellary QH No. B 17 FOR (Q.H. No. B-5)
Edited & Published by T. B. KESHAVA RAO.

ಜೈಹಿಂದ್ Reg. No.M. 4746

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೫ ಸಂಚಿಕೆ ೧೩ ಬಳ್ಳಾರಿ ಅಕ್ಟೋಬರು ೨೮ ಸೋಮವಾರ ೧೯೪೬ ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

ಮದ್ರಾಸ್ ಸರ್ಕಾರದ ಪ್ರಕಟಣೆ
ವಿವಾಹ ಮಾಡುವವರಿಗೆ ಸೂಚನೆ

ರೇಷನ್ ಕಾರ್ಡು ತರಬೇಕು. ರೇಷನ್ ತರ ಬೇಕು ಎಂದು ಲಗ್ನಮಾಡುವ ವರ"ವಧೂ ಪಕ್ಷದವರು (Please bring your rations in advance, Send your ration card in advance) ಲಗ್ನ ಪತ್ರಿಕೆಗಳ ಕೊನೆಯಲ್ಲಿ ಬರೆಯುವವಾಡಿಕೆ ಇದೆ. ಆಹ್ವಾನಿತರು ತಮಗಾಗಿ ಆಹಾರವನ್ನು ತಂದು ಉಟಮಾಡಿಕೊಂಡು ಹೋಗಬೇಕೆಂದು ಅರ್ಥವಾಗಿದ್ದು ಹೀಗೆಂದೂ ನಡೆಯುವುದಿಲ್ಲ. ಇದು ಶುದ್ಧ ಸುಳ್ಳು, ಮದ್ರಾಸ್ ಸರ್ಕಾರದವರು ಈವರ್ಷ ಮಾರ್ಚ್ 23 ಮತ್ತು ಆಗಷ್ಟ್ 8 ಕ್ಕೆ ಹೊರಡಿಸಿರುವ ಪ್ರಕಟನೆಗಳ ಪ್ರಕಾರಕ್ಕೆ 1) ಮದುವೆಗಳಲ್ಲದ ಔತಣಗಳಲ್ಲಿ ಮೂವತ್ತು ಜನರಿಗಿಂತ ಹೆಚ್ಚಿಗೆ ಊಟಕ್ಕೆ ಏರ್ಪಟ್ಟಿರಬಾರದು. 2) ಮದುವೆಗಳಲ್ಲಿ ವರ, ಕನ್ಯ, ಬಂಧು, ಮಿತ್ರ, ಅತಿಥಿಗಳನ್ನೆಲ್ಲಾ ಒಳಗೊಂಡು ಊಟಕ್ಕೆ ಕೂಡುವವರ ಸಂಖೆ ಐವತ್ತಕ್ಕಿಂತ ಹೆಚ್ಚಿಗಿರಬಾರದು ಒಂದು ಪಕ್ಷ ಅತಿಥಿಗಳು ತಮ್ಮ ಆಹಾರವನ್ನು ತಂದಿದ್ದರೂ ಇಂಥಾ ಸಮಾರಂಭಗಳಲ್ಲಿ ಊಟಕ್ಕೆಬಂದವರಸಂಖೆಯು ಮೇಲ್ಕಾಣಿಸಿದುದಕ್ಕಿಂತ ಹೆಚ್ಚಿಗಿದ್ದರೆ, ಅದು ಅಪರಾಧವಾಗಿ ಶಿಕ್ಷಾರ್ಹವಾಗುತ್ತದೆ. ಈ ಕಾರಣ ಲಗ್ನ ಪತ್ರಿಕೆಗಳನ್ನೂ ಛಾಪಿಸುವವರು ಇನ್ನು ಮುಂದೆ ಹೀಗೆ ಛಾಪಿಸುವುದನ್ನು ನಿಲ್ಲಿಸಬೇಕು.

ಸಾರಿಗೆ

ಮದ್ರಾಸ್ ಪ್ರಾಂತದಲ್ಲಿ **ಸಾರಿಗೆಯ ವ್ಯವಸ್ಥೆಗಾಗಿ** ಒಂದು ಪ್ರತ್ಯೇಕಶಾಖೆಯೇ ನಿರ್ಮಿಸಲ್ಪಟ್ಟು, ಡಿಸ್ಟ್ರಿಕ್ಟ ಟ್ರಾಫಿಕ್ ಬೋರ್ಡುಗಳ ಪುನರುದ್ಧಾರವಾಗಲಿದೆ, ಜಿಲ್ಲಾಟ್ರಾಫಿಕ್ ಬೋರ್ಡುಗಳಲ್ಲಿ ಜಿಲ್ಲೆಯ ಶಾಸನಸಭ್ಯರು, ಜಿಲ್ಲಾಬೋರ್ಡು ಅಧ್ಯಕ್ಷರು ಮತ್ತೊಬ್ಬರು ಇದ್ದು ಕಲೆಕ್ಟರವರು ಅಧ್ಯಕ್ಷರಿರುತ್ತಾರೆ 4-5 ಜಿಲ್ಲೆಗಳಿಗೊಬ್ಬ ಅಧಿಕಾರಿಗಳು ಪ್ರಾಂತಕ್ಕೆ ಒಬ್ಬ ಅಧಿಕಾರಿ ಜಿಲ್ಲೆಗೊಬ್ಬ ಅಧಿಕಾರಿವಿರ್ಪಟ್ಟು ಟ್ರಾಫಿಕ್ ರೆಗ್ಯುಲೇಷನ್‌ಗಳಿಗಾಗಿ ಪೋಲೀಸರೇ ಮುಖ್ಯರು, ಇದಕ್ಕಾಗಿ ಸರ್ಕಾರಕ್ಕೆ 10 - 15 ಲಕ್ಷ ರೂ. ವರ್ಷಕ್ಕೆ ಖರ್ಚಾಗಲಿದೆ, ಬಸ್‌ಗಳಿಗೆ ದಿನಕ್ಕೊಂದು ರೂಪಾಯಿಯಂತೆ ಮತ್ತೆ ಲಾರೀಗಳಿಗೆ ಈಗ ಕೊಡುವ ಟ್ಯಾಕ್ಸ್‌ಮೇಲೇ 50/- ಹೆಚ್ಚಿಸುವುದರಿಂದ ವರ್ಷಕ್ಕೆ ೨೦ - ೨೫ ಲಕ್ಷ ರೂ. ಹೆಚ್ಚಿಗೆ ಬರಬಹುದೆಂದು ಊಹಿಸಲಾಗಿದೆ.

ಕೇಂದ್ರದಲ್ಲಿ
ಕಾಂಗ್ರೆಸ್-ಲೀಗ್ ಸರ್ಕಾರದ ಸ್ಥಾಪನೆ

ಸರ್ಕಾರದ ಪ್ರಕಟನೆಯ ಪ್ರಕಾರ ನಡುಗಾಲ್ ಸರ್ಕಾರದಲ್ಲಿ ಇತ್ತೀಚೆಗೆ ಸೇರಲು ಬಯಸಿದ ೫ ಮುಸ್ಲಿಂಲೀಗ್ ಪ್ರತಿನಿಧಿಗಳಿಗೆ ಕೆಳಗೆ ಕಾಣಿಸಿದ ಶಾಖೆಗಳು ಕೊಡಲಾಗಿವೆ.

1) **ಲಿಯಾಕತ ಅಲಿಖಾನ್** (ಹಣಕಾಸಿನ ಖಾತೆ)
2) **ಐ. ಐ. ಚುಂಡ್ರಿಗಾರ** (ವ್ಯಾಪಾರೀಶಾಖೆ)
3) **ಅಬ್ದುಲರಬ್ ನಿಸ್ತಾರ** (ಸಾರಿಗೆ ಪೋಷ್ಟವಗೈರೆ)
4) **ಗಜ್ನಫರ ಅಲಿಖಾನ್** (ಆರೋಗ್ಯಶಾಖೆ)
5) ಜೋಗೇಂದ್ರನಾಥ ಮಂಡಲ (ಶಾಸನಸಂಬಂಧ)

ಇತರ ಮಂತ್ರಿಗಳಲ್ಲಿ ಈಕೆಳಗೆ ಕಾಣಿಸಿದ ಬದಲಾವಣೆಗಳಾಗಿವೆ.

ಶ್ರೀ ಶಿ. ರಾಜಗೋಪಾಲಾಚಾರಿ (ವಿದ್ಯೆ-ಕಲಿ
ಡಾಕ್ಟರ್ ಜಾನ್‌ಮಾಥಾಯಿ (ಇಂಡಸ್ಟ್ರೀಸ್ ಸಪ್ಲೈ)
ಭಾಬ (ನರ್ಕಸ್, ಗಣಿಗಳು, ವಿದ್ಯುತ್ಶಕ್ತಿ:)

ಪಂಡಿತ ಜವಹರಲಾಲ, ಸರ್ದಾರ ಪಟೇಲ ರಾಜೇಂದ್ರ ಪ್ರಸಾದ, ಸರ್ದಾರ ಬಲದೇವಸಿಂಗ್ ಜಗಜೀವನರಾಂ ಇವರ ಶಾಖೆಗಳು ಹಿಂದಿನಂತೆಯೇ ಉಳಿದಿವೆ.

ಕಾಂಗ್ರೆಸ್ ಕಾರ್ಯ ಕಾರೀ ಸಮಿತಿ ತೀರ್ಮಾನ

ಸಾರಾಂಶ

ಮುಸ್ಲಿಂಲೀಗಿನವರು ಇಷ್ಟು ವರ್ಷ ಉಪದೇಶಿಸುತ್ತಾ ಬಂದ ದ್ವೇಷ, ಸಮಾಜ ಕಲಹದ ಪರಿಣಾಮವಾಗಿ ನೌಖಾಲಿ ದುರಂತವಾಯಿತು. ಇದಕ್ಕೆ ಬಂಗಾಳ ಪ್ರಾಂತದ ಲೀಗ್ ಮಂತ್ರಿಮಂಡಳ, ಗವರ್ನರ ಭಾಗವೂ ಇದೆ.. ವೈಸ್ರಾಯರೂ ತಮ್ಮ ಪ್ರತ್ಯೇಕ ವಾಧ್ಯತೆ ಯಿಂದ ಮುಕ್ತರಾಗುವಂತಿಲ್ಲ. ಜನರ ರಕ್ಷಣೆಗಾಗಿ ಮುಂದೆಬರಬೇಕು,

ಮನಿಲಾಲ ಗಾಂಧಿಯವರ ಬಂಧನ.

23 ನೆಯ ತಾ|| ರಾತ್ರೆ ಮಹಾತ್ಮ ಗಾಂಧಿಯವರ ಮಕ್ಕಳಾದ ಮನಿಲಾಲ ಗಾಂಧಿಯವರು 358 ಸತ್ಯಾಗ್ರಹಿಗಳೊಡನೆ ದಕ್ಷಿಣ ಆಫ್ರಿಕಾದಲ್ಲಿ ಬಂಧಿಸಲ್ಪಟ್ಟರು. ಭಾರತೀಯರ ಹಿತಕ್ಕೆ ವಿರೋಧವಾದ ಶಾಸನವನ್ನು ಪ್ರತಿಭಟಿಸಲು ಪ್ರಾರಂಭವಾದ ಸತ್ಯಾಗ್ರಹ ಆಂದೋಳನದಲ್ಲಿ ಇದು ದೊಡ್ಡ ತಂಡವಾಗಿದೆ. ಈ ತಂಡದಲ್ಲಿ ಮುದುಕಯರು ಇರುವರು ಕ್ರಿಶ್ಚಿಯನ್ ಸಾದ್ರಿಯು ಇರುವನು. ಈ ಪ್ರಶ್ನೆಯು ವಿಶ್ವಸಮ್ಮೇಳನದಲ್ಲಿ ಚರ್ಚೆಗೆ ಬರಲಿದೆ.

ಮರೆಯಿಂದ ನೋಡುವದಿಲ್ಲ.

ಮದ್ರಾಸ್ ಪ್ರಾಂತದ ಮುನಿಸಿಪಾಲಿಟಿ, ಜಿಲ್ಲಾ ಬೋರ್ಡ್ ಚುನಾವಣೆಗಳಲ್ಲಿ ಮತದಾರರು ತಮ್ಮ ಮತ (ವೋಟುಗಳು) ಗಳನ್ನು ಪೆಟ್ಟಿಗೆಯಲ್ಲಿ ಹಾಕಬೇಕಾದರೆ, ಅವರು ಹಾಕಿದರೋ ಇಲ್ಲವೋ ಎಂದು ಮರೆಯಿಂದ ನೋಡುವ, 'ವಾಚರ್' ಪದ್ಧತಿಯನ್ನು ತೆಗೆದು ಹಾಕಿರುವರೆಂದು ಒಂದು ಸರ್ಕಾರೀ ಪ್ರಕಟನೆಯು ತಿಳಿಸುತ್ತದೆ.

ಹರಿಜನ ತೋಟಿ, ಕಸಗುಡಿಸುವವರಿಗೆ ಹೆಚ್ಚಿನಸಂಬಳ

ಜಿಲ್ಲಾಬೋರ್ಡು, ಮುನಿಸಿಪಾಲಿಟಿ, ಪಂಚಾಯ್ತಿ ಬೋರ್ಡುಗಳಲ್ಲಿ ದುಡಿಯುತ್ತಲಿರುವ ಹರಿಜನತೋಟಿ ಕಸಗುಡಿಸುವವರಿಗೆ ಅಗಷ್ಟ್ ೧ ರಿಂದ ತಮ್ಮ ಸಂಬಳದಮೇಲೆ ಶೇಕಡ ೨೫ ರಷ್ಟು ಹೆಚ್ಚಿಗೆ ಕೊಟ್ಟೇ ತೀರಬೇಕೆಂದು ಮದ್ರಾಸ್ ಸರ್ಕಾರದವರು ಆಜ್ಞೆ ವಿಧಿಸಿದ್ದಾರೆ.

ಸಿಂಧ ಪ್ರಾಂತದ ಶಾಸನ ಸಭೆ ಚುನಾವಣೆಗಳಲ್ಲಿ ಅಧಿಕಾರಿಗಳು ಕೈಹಾಕುತ್ತಿರುವರೆಂಬ ಆಪಾದನೆಯನ್ನು ತಾವು ವಿಚಾರಿಸುವದಾಗಿ ಭಾರತಮಂತ್ರಿಗಳು ಆಶ್ವಾಸನನಿತ್ತಿರುವರು.

THE NAVA BHARAT
ನವಭಾರತ
ಸಂಪಾದಕ-ಟಿ.ಆರ್.ಕೇಶವರಾವ್

9th Year of Publication.

28th OCTOBER 1946

ಪೂರ್ವ ಬಂಗಾಲದ ಅತ್ಯಾಚಾರ

ಪೂರ್ವ ಬಂಗಾಲದ ನವಾಖಾಲಿ ತಿಪ್ಪೇರಾ ಜಿಲ್ಲೆಗಳಲ್ಲಿ ನಡೆದ ಅತ್ಯಾಚಾರಗಳನ್ನು ನಿಲ್ಲಿಸಲು ಬಂಗಾಳದ ಲೀಗ್ ಸರ್ಕಾರವಾಗಲಿ, ಗವರ್ನರರಾಗಲಿ ಸಮರ್ಥವಾಗಿಲ್ಲ. ಈ ದಂಗೆಗಳನ್ನು ಪ್ರೋತ್ಸಾಹಿಸುವ ಪಾರ್ಟಿಗೆ ಸೇರಿದವರು ಬಂಗಾಲಸರ್ಕಾರವನ್ನು ನಡೆಸುತ್ತಿರುವ ಕಾರಣ ಸರ್ಕಾರದವರು ಇಂಥಾ ಅತ್ಯಾಚಾರಗಳನ್ನು ನಡೆಸಲು ಬಾಧ್ಯರೆಂದು ಹೇಳಬಹುದಾಗಿದೆ. ಕಾಂಗ್ರೆಸ್ ಅಧ್ಯಕ್ಷರು ತಮ್ಮ ಪತ್ನಿಯೊಡನೆ ಪೀಡಿತಭಾಗಗಳಲ್ಲಿ ಸಂಚರಿಸುತ್ತಿರುವರು. ಮಹಾತ್ಮಗಾಂಧಿಯವರು ಕೂಡ ಬಂಗಾಳವನ್ನು, ತಲಪಿ ಈ ಭಾಗವನ್ನು ಸಂಚರಿಸಲಿರುವರು ಕೆಲಸ್ತ್ರೀಯರು ಮಾನಭಂಗವಾಗಬಹುದೆಂಬ ಭಯದಿಂದ ಅಗ್ನಿಪ್ರವೇಶಮಾಡಿದರೆಂದೂ, ಕೆಲವರು ವಿಷಕುಡಿದುಪ್ರಾಣಬಿಟ್ಟರೆಂದೂ ತಿಳಿದು ಬಂದಿದೆ. ಹಿಂದಿನ ಕಾಲದ ಎಂಥಾ ಕೆಟ್ಟ ಧೊರೆಯ ಕಾಲದಲ್ಲೂ ಇಂಥಾ ಕೃತ್ಯಗಳು ನಡೆದಿಲ್ಲ. ಕೇಂದ್ರ ಸರ್ಕಾರದವರು ಕೂಡಲೇ ತಕ್ಕ ಚರ್ಯೆಗಳನ್ನು ತೆಗೆದುಕೊಳ್ಳಬೇಕು.

ನೌಖಾಲಿ ದುರಂತದ ಖಂಡನೆ

ಪೂರ್ವ ಬಂಗಾಳದ ನೌಖಾಲಿ ಜಿಲ್ಲೆಯಲ್ಲಿ ಎಡೆ ತಡೆಯಿಲ್ಲದೆ ನಡೆದ ಕೊಲೆ ಸುಲಿಗೆ ಅತ್ಯಾಚಾರ ಸ್ತ್ರೀಯರ ಮಾನಭಂಗ, ಮತಾಂತರ ಇವುಗಳನ್ನು ಖಂಡಿಸುತ್ತಾ ಸರ್ಕಾರದವರೂ ಪ್ರಜೆಗಳೂ ಸಹಕರಿಸಿ ಶಾಂತಿ ಸೌಹಾರ್ದಗಳನ್ನು ಬೆಳೆಸಬೇಕೆಂದು ಬಳ್ಳಾರಿ ಸಾಂಬಮೂರ್ತಿ ಮೈದಾನದಲ್ಲಿ ಶ್ರೀಮುಂಡ್ಲೂರು ಗಂಗಪ್ಪನವರ ಅಧ್ಯಕ್ಷತೆಯಲ್ಲಿ 23 ನೆಯ ತಾ|| ಸಾಯಂಕಾಲ ಶ್ರೀಗಳಾದ ವಿಶ್ವನಾಥಪ್ಪ, ಡಿ. ವೇಣುಗೋಪಾಲಾಚಾರಿ, ಶಾಂತಿ ರುದ್ರಪ್ಪ, ರಾಜಗೋಪಾಲಶೆಟ್ಟಿ ವೀರಸ್ವಾಮಿ, ದಾವೋದರಶಿಂಗ್, ದೇವೇಂದ್ರಪ್ಪ ವಗ್ಗೆರೆ ಪ್ರಮುಖರು ಭಾಷಣಕೊಟ್ಟು ಸಾನುಭೂತಿಯನ್ನು ವ್ಯಕ್ತಪಡಿಸುವ, ಸರ್ಕಾರವನ್ನು ಖಂಡಿಸುವ ತೀರ್ಮಾನಗಳಾದವು.

ಹೆಚ್ಚು ಪೆಟ್ರೋಲ್, ಆಹಾರ.

ಅಕ್ಟೋಬರ್ 46 ರಿಂದ ಮದ್ರಾಸ್ ಪ್ರಾಂತ್ಯಕ್ಕೆ ಹೆಚ್ಚಿನ ಪೆಟ್ರೋಲ್ ದೊರೆಯುವ ಸಂಭವವಿದೆಯೆಂದೂ, ದಕ್ಷಿಣದೇಶದ ಆಹಾರ ಸಮಸ್ಯೆಯನ್ನು ಕೇಂದ್ರ ಆಹಾರ ಮಂತ್ರಿಗಳಾದ ಶ್ರೀ ಬಾಬುರಾಜೇಂದ್ರರು ಸಹಾನುಭೂತಿಪರವಾಗಿ ವಿಚಾರಿಸುತ್ತಿರುವರೆಂದೂ, ಡೆಲ್ಲಿಗೆ ಹೋಗಿದ್ದ ಲೇಬರ್ ಮಂತ್ರಿಗಳಾದ ಶ್ರೀ ವಿ. ವಿ. ಗಿರಿಯವರು ಹೇಳಿದರು.

ತುಂಗಭದ್ರಾ ಹಾಗು ರಾಮಪಾದಸಾಗರ ಆಣೆಕಟ್ಟುಗಳ ವಿಷಯಕ್ಕೆ ಹೈದ್ರಾಬಾದ್, ಮದ್ರಾಸ್ ಸರ್ಕಾರಗಳ ನಡುವೆ ಒಡಂಬಡಿಕೆಯಾಗಿದೆ.

ಬೊಂಬಾಯಿಯಲ್ಲಿ ದಂಗೆಯ ಪರಿಸ್ಥಿತಿ ಕಳೆದವಾರ ಕೆಟ್ಟು 18 ನೆಯ ತಾ|| 8 ಜನರು ಮರಣ ಹೊಂದಿದರು. ಈಗ ಚೂರಿಯ ಇರಿತದವರಿಗೆ ಸಶ್ರಮ ಶಿಕ್ಷೆ ಫಟಕೀ ಶಿಕ್ಷೆ ಕೊಡಲಾಗುತ್ತಿದೆ. ಕ್ಯೀನ್‌ರೋಡ್, ಮತ್ತು ವಾಯರ್‌ಧೋನಿಯ ಇಬ್ಬರು ತುಂಟರಿಗೆ ಒಂದೊಂದು ವರ್ಷ ಸಶ್ರಮ ಶಿಕ್ಷೆ 10 ಫಟಕೀಗಳ ಶಿಕ್ಷೆ ವಿಧಿಸಲಾಗಿದೆ.

ಚಿಕಿತ್ಸಾ ಕಲೆಯಲ್ಲಿ ಆಯುರ್ವೇದದ ಸ್ಥಾನ.

(ಲೇಖನ:— ಬಿ. ಕೆ. ಮೂರ್ತಿ ರಾಘವೇಂದ್ರ ಹೀಲಿಂಗ್ ಹೋಮ್, ಬಳ್ಳಾರಿ.

ನವಭಾರತ ಸಂಪಾದಕರು ತಮ್ಮ ಪತ್ರಿಕೆಗೆ ಚಿಕಿತ್ಸಾ ವಿಭಾಗದ ಬರಹಗಳನ್ನು ಕಳುಹಿಸಬೇಕೆಂದು ನನಗೆ ಸೂಚಿಸಿದರು. ನಾನು ಅಂತಹ ಬರಹಗಾರನಲ್ಲದಿದ್ದರೂ ಚಿಕಿತ್ಸಾ ರಂಗದಲ್ಲಿ ದುಡಿಯುತ್ತಿರುವುದರಿಂದ ನನ್ನ ಅನುಭವ ಮತ್ತು ವಿಚಾರಗಳನ್ನು ಮನನಕ್ಕಾಗಿ ಜನತೆಯ ಮುಂದಿಡುವುದರಿಂದ ಸಾಮಾನ್ಯ ಜನರಿಗೆ ಉಪಕಾರವಾಗಬಹುದೆಂದು ಭಾವಿಸಿ ಬರೆಯುವುದಕ್ಕೆ ಮನಸ್ಸು ಮಾಡಿದ್ದೇನೆ. ಈ ನನ್ನ ಅಭಿಪ್ರಾಯ ಸರಣಿಯು ಎರಡು ನಾಲ್ಕು ಸಂಚಿಕೆಗಳಲ್ಲಿ ಮುಗಿಯಲಾರವು. ಯಾಕೆಂದರೆ ಚಿಕಿತ್ಸಾ ಕಲೆಯು ಬಹಳ ವಿಸ್ತಾರವಾದುದು ಅದರ ಸ್ಥೂಲವಾದ ದಿಗ್ದರ್ಶನಕ್ಕಾದರೂ ವಿಶಾಲವಾದ ವಿಚಾರ ವಿನಿಮಯ ಅವಶ್ಯ.

ಮೊದಲಿಗೆ ಚಿಕಿತ್ಸೆಯ ಮುಖ್ಯ ಅಂಗವಾದ ನಿದಾನದ (Diagnosis) ಕುರಿತು ನಾನು ಬರೆಯುವವನಿದ್ದೇನೆ. ಆದರೆ ನನ್ನ ಈ ನಿದಾನ ಮಾರ್ಗವು ಆಯುರ್ವೇದದ ಪ್ರಸ್ತಾಪವನ್ನಷ್ಟೇ ಅವಲಂಬಿಸಿರುತ್ತದೆಂಬುದನ್ನು ಓದುಗಾರರು ನೆನಪಿನಲ್ಲಿಡಬೇಕು. ಅಷ್ಟೇಅಲ್ಲ, ಅಖಂಡ ಚಿಕಿತ್ಸಾ ವಿಷಯವೇ ನನ್ನ ಬರಹದಲ್ಲಿ ಆಯುರ್ವೇದದ ಪ್ರಸ್ತಾವನ್ನವಲಂಬಿಸಿದೆ. ನಾನು ಆಯುರ್ವೇದವನ್ನೇ ಯಾಕೆ ಚಿಕಿತ್ಸಾ ವಿಭಾಗದಲ್ಲಿ ಹಾಗೂ ಇದಕ್ಕೆ ಸಂಭಂದಪಟ್ಟ ನನ್ನ ಬರಹದಲ್ಲಿ ಪ್ರಸ್ತಾವನವಾಗಿಟ್ಟಿಕೊಂಡಿದ್ದೇನೆಂಬುದನ್ನು ಪ್ರಶ್ನಿಸುವುದು ಅಥವಾ ಉತ್ತರಿಸುವುದು ಒಂದು ಪ್ರತ್ಯೇಕ ವಿಷಯವೇ ಆಗುತ್ತದೆ. ಅದರ ವೈಶಿಷ್ಟ್ಯ ಮತ್ತು ಉದ್ದೇಶವನ್ನು ನನ್ನ ಇನ್ನೊಂದು ಲೇಖನದಲ್ಲಿ ಪ್ರಸ್ತಾಪಿಸುವೆನು

ಆಯುರ್ವೇದದ ನಿದಾನವು ತ್ರಿದೋಷ ಸಿದ್ಧಾಂತದ ಮೇಲೆ ಅವಲಂಬಿಸಿರುತ್ತದೆಂಬುದು ಬಲ್ಲವರಿಗೆ ಗೊತ್ತು. ಈ ವಾತ, ಪಿತ್ತ, ಕಫ, ಎಂಬ ತ್ರಿದೋಶಗಳು ಅವುಗಳ ವಸ್ತು ವಿಭಾಗವಾದ ಪಂಚ ಮಹಾಭೂತಗಳೂ ವಿಕಾರಗಳಾದ ಧಾತು ಮಲಗಳು ಇವುಗಳ ವಿವೇಚನೆಯು ಹಾಗೂ ಅವುಗಳ ಪ್ರತ್ಯಯವು ನಿದಾನದ ಮೊದಲನೆಯ ಮೆಟ್ಟಿಲು. ಅವುಗಳ ಶುದ್ಧವಾದ ಜ್ಞಾನವಿಲ್ಲದೆ ನಿದಾನವು ಸರ್ವಥಾ ಸಾಧುವಲ್ಲ. ಸೂಡಿಯಲ್ಲಿ ವಾತ, ಪಿತ್ತ, ಕಫ, ವೆಂಬುದು ಸಾಮಾನ್ಯ ಜನರಲ್ಲಿಯೂ ಕೂಡಾ ಬಳಕೆಯ ಮಾತು. ಹೊಟ್ಟೆ ಉಬ್ಬಿದರೆ ವಾಯು, ಕಹಿ ವಾಂತಿಯಾದರೆ ಪಿತ್ತ, ಕೆಮ್ಮಿದರೆ ಕಫ, (ವಿಕೃತಿ ಶ್ಲೇಷ್ಮ) ಉಗುಳಿದರೆ ಕಫ ವೆಂದು ಹೇಳುವುದು ಸಾಮಾನ್ಯರ ತಿಳಿವು. ಆದರೆ ಇದು ಶಾಸ್ತ್ರಾಧಾರದಿಂದಾಗಲೀ, ವಿವೇಕದಿಂದಾಗಲೀ ಶುದ್ಧವೆಂದು ಒಪ್ಪುವುದರ ವಿಷಯವಲ್ಲ. ಹೊಟ್ಟೆ ಉಬ್ಬುವುದು ಇತ್ಯಾದಿ ವಾತದ ಉಪದ್ರವಗಳು ಕೇವಲ ವಿಕೃತವಾಯುವಿನ ಲಕ್ಷಣಗಳ ದೆಸೆಯಿಂದ ಪ್ರಕೃತಿಯ ವಸ್ತು ಸ್ಥಿತಿಯನ್ನು ತಿಳಿಯುವುದೆಂದರೆ ಅದಷ್ಟು ಅಯುಕ್ತಿಕವೆಂಬುದನ್ನು ಹೇಳಬೇಕೆ? ಅರ್ಥತ್:— ವಿಕಾರದಿಂದ ವಾಸ್ತವ್ಯವು ತಿಳಿಯಲಾರದು. ವಸ್ತು ಸ್ಥಿತಿಯನ್ನು ತಿಳಿದರೆ ಅವರಲ್ಲಿ ಕಾಣುವ ವ್ಯತ್ಯಾಸವು ಇದು ಸಹಜ, ಇದು ವಿಕೃತ ಎಂದು ಲೆಖ್ಖ ಹಾಕುವುದಕ್ಕೆ ಬರುತ್ತದೆ ವಿಕಾರ (ರೋಗಲಕ್ಷಣ) ವನ್ನೇ ಲೆಖ್ಖ ಹಾಕುತ್ತ ಹೋದರೇ

ಆವಿ ಕಾರಗಳ ಅಂಕೆಗಳೇ ಬೆಳೆಯುತ್ತದಲ್ಲದೆ ಅದರ ಸಾಕಾರವೇನೆಂಬುದನ್ನು ಹೇಗೆ ತಿಳಿಯಬೇಕು? ಇದೇ ಕಾರಣದಿಂದ ಆಯುರ್ವೇದವು ಮೊದಲು ರೋಗಿ, ರೋಗ, ಮತ್ತು ವಾತಾವರಣ ಇವುಗಳ ಪ್ರಕೃತಿಯೇನು ಎಂಬುದನ್ನು ತಿಳಕೊಳ್ಳುವುದಕ್ಕೆ ಪ್ರಥಮ ಸ್ಥಾನವನ್ನು ಕೊಟ್ಟಿತು. ಆ ಮೇಲೆ ಅವುಗಳ ವಿಕೃತಿಯೇನೆಂಬುದನ್ನು ತಿಳಿಯುವುದಕ್ಕೆ ತೊಡ

ಗಿತು. ಇದು ನನ್ನ ಊಹೆಯಲ್ಲ. ಶಾಸ್ತ್ರದ ಯೋಜನೆಯೇ ಹಾಗಿದೆ. ಚರಕಾಚಾರ್ಯನು ವೈದ್ಯನ ಲಕ್ಷಣವೇನೆಂಬುದನ್ನು ಹೀಗೆ ಹೇಳುತ್ತಾನೆ.

ಪರಿಯವಧಾ ಶತೃತಂ ಪರಿದೃಷ್ಟಿ ಕರ್ಮಾಣಂ ಪ್ರಕೃತಿಜ್ಞಂ ಪ್ರತಿ ಪತ್ತಿಜ್ಞಂ ದಕ್ಷಂ ದಕ್ಷಿಣಾ ಸರ್ವೇಂದ್ರಿಯೋಪ್ರಸನ್ನಂ.

ಹೀಗೆಂದು ಪ್ರಕೃತಿಯ ಜ್ಞಾನದ ಅವಶ್ಯಕತೆಯನ್ನು ಮೊದಲಿಗೆ ವಿಲ್ಲೇಖಿಸಿ ಮತ್ತೆ ಪ್ರತಿ ಜ್ಞಾನದ ಅವಶ್ಯಕತೆಯನ್ನು ಹೇಳಿದ್ದಾನೆ. ಕಾರಣ ಪ್ರಕೃತಿಯ ಅರಿವಿಲ್ಲದೆ ವಿಕೃತಿಯನ್ನು ತಿಳಿಯುವುದು ತೀರಾ ಅಸಂಭವ.

ಪ್ರಾಣಿ ಕೋಟಿಯಲ್ಲಿ ಮಾನವನ ರೂಪದಲ್ಲಿ ಒಂದೇ ಹೋಲಿಕೆ ಉಳಿದವನಾದರೂ, ವ್ಯಕ್ತಿ ವ್ಯಕ್ತಿಯಲ್ಲಿ ಸೂಕ್ಷ್ಮ ತಾರತಮ್ಯ ಇದ್ದೇ ಇರುತ್ತದೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಒಬ್ಬನಂತೆ ಎಲ್ಲಾಬಗೆಗಳಲ್ಲಿಯೂ ಹೋಲಿಕೆಯುಳ್ಳ ಇನ್ನೊಬ್ಬ ವ್ಯಕ್ತಿಯನ್ನು ಅಖಂಡ ಪ್ರಪಂಚದಲ್ಲೇ ಹುಡುಕಿದರೂ ದೊರಕಿಸುವುದು ಅಸಾಧ್ಯವೆಂದರೆ ಸ್ಥೂಲಮಾನದಲ್ಲಿ ಮಾನವ ಮಾನವರಲ್ಲಿ ವ್ಯತ್ಯಾಸವು ಇದ್ದೇ ಇದೆ ಎಂಬುನ ಸಿದ್ಧಾಂತವು ಸ್ಪಷ್ಟ ಹೀಗಿರುವಾಗ ಮಾನ್ಯನ ಶುದ್ಧ ಮತ್ತು ಸಹಜ ಪ್ರಕೃತಿಯು ಇದು ಎಂಬುದನ್ನು ಯಾವಮಾನದಿಂದ ಅಳೆಯುತ್ತೀರಿ? ಯಾವದೇ ವಿಶಯದಲ್ಲಿ ತಕ್ಕೊಳ್ಳಲಿ ಸ್ವರದಲ್ಲಿ ಒಬ್ಬನಂತೆ ಒಬ್ಬನಿಲ್ಲ. ರೂಪವಿಲ್ಲ, ರುಚಿಯಿಲ್ಲ, ಕೇಳುವುದು, ವಾಸನೆ ಕೊಳ್ಳುವುದು, ಇತ್ಯಾದಿ ಪಂಚ ಜ್ಞಾನೇಂದ್ರಿಯರ ಪಟುತ್ವ ಹಾಗೂ ನಸ್ತುಶ್ವಗಳಲ್ಲಿಯೂ ಭೇದ ಇದ್ದೇ ಇದೆ. ಹೀಗಿರುವಾಗ ಒಬ್ಬನ ಕಣ್ಣಿಗೆ ಅಧವಾರಸನೆಗೆ ಸುಖಕರವಾಗಿ ಕಂಡದ್ದು ಇನ್ನೊಬ್ಬನಿಗೆ ಅಸಹಿಷ್ಣುವಾಗುವುದು. ಪ್ರಕೃತಿಯೇ ಹೀಗಿರುತ್ತದೆಂಬುದನ್ನು ಒಪ್ಪಲೇ ಬೇಕಲ್ಲವೆ? ಇಷ್ಟೇ ಹೇಳುತ್ತೇನೆ. ಪ್ರಕೃತಿಯಲ್ಲಿಯೂ ಸ್ಥೂಲವಾಗಿ ಸಾಮರಸ್ಯವಿದೆ ಎಂದು ಒಪ್ಪಿಕೊಳ್ಳಬಹುದಷ್ಟೇ ಅಲ್ಲದೆ ಸೂಕ್ಷ್ಮ ವಿವರ ಇದೆ ಎಂಬುದನ್ನು ಒಪ್ಪಲೇ ಬೇಕು.

[ಇನ್ನು ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು]

ರಾಶಾವಿ

[ಬಡವರಿಗೆ ಧಾನ್ಯದ ತೊಂದರೆ]

3-4 ವರ್ಷಗಳಿಕ್ಕಾನು ಪರಿಸ್ಥಿತಿಯಿಂದ ಉಂಟಾದ ಪರಿಸ್ಥಿತಿಯ ನಿವಾರಣೆಗಾಗಿ ಸರ್ಕಾರದವರು ಕಾಳಿನ ಡಿಪೋಗಳನ್ನು ಏರ್ಪಡಿಸಿ ಒಂದು ನಿಗದಿಯ ದರದಿಂದ ಕಾಳನ್ನು ಹಳ್ಳಿಗರಿಗೆ ಒದಗಿಸಲು ಏರ್ಪಡಿಸಿದರೆ, ಹಾಗೆ ಒದಗುವುದು ದುಸ್ಸಾಧ್ಯವಾಗಿದೆ ಇದನ್ನು ಸವರಣೆಮಾಡಲು ಫಿರ್ಕಾಸಪ್ಲೇ ಆಫೀಸರರಾಗಲಿ, ತಾಲೂಕು ಸಪ್ಲೇ ಆಫೀಸರರಾಗಲಿ ಸರಿಯಾದ ಚರ್ಯೆ ತೆಗೆದುಕೊಂಡಿಲ್ಲ. ತೆಗೆದುಕೊಳ್ಳುತ್ತಲಿರುವುದಿಲ್ಲ. ಬಡವರಿಗೆ ಈ ಕಾರಣ ತೊಂದರೆಯಾಗುತ್ತಲಿದೆ. ಕಾಳಿನ ಸಂಗ್ರಹ ಊರಿಗೆ ಎಷ್ಟು ಬಂತು? ಅವರು ಯಾವ ದರದಿಂದ ಹೇಗೆ ಮಾರುತ್ತಿರುವರು? ಇದನ್ನು ಕೂಡಲೆ ಚೆಕ್ ಮಾಡಬೇಕು ಅಧಿಕಾರಿಗಳು ತಮ್ಮ ಕರ್ತವ್ಯಗಳನ್ನು ನಿರವೇರಿಸದಿದ್ದರೆ, ಸರ್ಕಾರದವರ ಉದ್ದೇಶವು ಫಲಿಸುವುದಿಲ್ಲ. ಹಳ್ಳಿಗರಕಷ್ಟವೂ ನಿವಾರಣೆಯಾಗುವುದಿಲ್ಲ [ಜ- ಯಂ- ಕ]

ಶಿರುಗುಪ್ಪೆ--ಮೋಟಾರಸ್ಟಾಂಡಿನ ಹತ್ತಿರ ಬಸ್ಸಿಗ ಟಿಕೆಟ್ ಕೊಡಲು (ರಾವಜೀ ಬಸ್‌ಗೆ?) ಏರ್ಪಡಿಸಿರುವ ಏಜಂಟನಿಂದ ಪ್ರಯಾಣೀಕರಿಗೆ ತೊಂದರೆಯಾಗುತ್ತಲಿದೆಯೆಂದು, ಒಬ್ಬರು ಬರೆಯುತ್ತಾರೆ. ಇದರಲ್ಲಿ ನಿಜಾಂಶವೇನಾದರೂ ಇದ್ದರೆ, ಪೋಲೀಸರುತಕ್ಕ ಚರ್ಯೆಗಳನ್ನು ತೆಗೆದುಕೊಳ್ಳಬೇಕು [ಸಂಪಾದಕ-ನವಭಾರತ]

ಜರ್ಮನ ಧುರೀಣರು ಗಲ್ಲಿಗೆ

ಜರ್ಮನಿಯ ಮುಖ್ಯ ಧುರೀಣರನ್ನು ಹೋದವಾರ ಗಲ್ಲಿಗೇರಿಸಲಾಯಿತು. ಗೋರಿಂಗರು ಗಲ್ಲಿಗೆ ಹಾಕುವ ಮುಂಚೆಯೇ ವಿಷಕುಡಿದು ಪ್ರಾಣಬಿಟ್ಟರು. ಸಾಯುವಮುಂಚೆ ಎಲ್ಲರೂ "ಜರ್ಮನಿಯು ದೀರ್ಘಕಾಲಬಾಳಲಿ, ಜರ್ಮನಿಗೆ ಜಯವಾಗಲಿ" ಎಂದು ಜಯಘೋಷವನ್ನಿತ್ತರು.

ಮಹಾತ್ಮ ಗಾಂಧಿಯವರ ಲೇಖನಗಳು.

ನಿಜವಾದ ಹಿಂದುಸ್ತಾನ.

ಹಿಂದುಸ್ತಾನದಲ್ಲಿಯ ಹಳ್ಳಿಗಳನ್ನೆಲ್ಲ ನಾನು ಅಗಾಗ ಸಂಚರಿಸಿದ್ದೇನೆ. ಈ ಸಂಚಾರದಿಂದ ನನ್ನಲ್ಲಿ ತಪ್ಪು ತಿಳಿವಳಿಕೆಯಾಗಿಲ್ಲೆಂದು ಗ್ರಹಿಸಿದರೆ ಇಲ್ಲಿನ ೭ ಲಕ್ಷ ಹಳ್ಳಿಗಳಿಗೆ ಪೋಲೀಶ ಸಂರಕ್ಷಣೆ ಸಿಕ್ಕುವದಿಲ್ಲ. ಮತ್ತು ಅವರು ಅದನ್ನು ಆಪೇಕ್ಷಿಸುವುದಿಲ್ಲ ಎಂದು ನಿರ್ಧಾರದಿಂದ ಹೇಳಬಲ್ಲೆ. ಹಳ್ಳಿಯಲ್ಲಿರುವ ಒಬ್ಬನೆ ಒಬ್ಬ ಗೌಡನು ಆ ಹಳ್ಳಿಯನ್ನೆಲ್ಲ ಆಳುತಿದ್ದು ಒಳ್ಳೆ ಭಯಂಕರನಾಗಿರುವನು, "ಮೂಬಾಪರಿಗೆ" ಸಲ್ಲತಕ್ಕ ಕಂದಾಯ ವಸೂಲಿಯಲ್ಲಿ ಬಡ ವಸೂಲಿ ಮಾಡುವವನಿಗೆ ಸಹಾಯ ಮಾಡುವದು ಅವನ ಕೆಲಸ ಮನುಷ್ಯರಿಂದ ಮತ್ತು ಪಶುಗಳಿಂದ ಅವರ ಸರಕು ಇಲ್ಲವೆ ದನಗಳನ್ನುಳಿಸುವಲ್ಲಿ ಹಳ್ಳಿಗರಿಗೆ ಪೋಲೀಸರು ಸಂರಕ್ಷಣೆ ಕೊಟ್ಟಿದ್ದು ನನಗೇನು ಗೊತ್ತಿಲ್ಲ ಪೋಲೀಸ ಗೌಡನು ಅಂತು ಇದ್ದುದಕ್ಕೆ ಯಾರೂ ಅವನನ್ನು ದೂಷಿಸಲಾರರು. ಆ ಕೆಲಸಕ್ಕಾಗಿಯೇ ಅವನನ್ನು ಅರಿಸಿದ್ದು ಅದನ್ನು ಅವನು ಚೆನ್ನಾಗಿ ಮಾಡುವನು. ತಾನು ಜನಸೇವಕನೆಂದು ತಿಳಿದುಕೊಳ್ಳಬೇಕೆಂದು ಯಾರೂ ಅವನಿಗೆ ಕಲಿಸಿಲ್ಲ ಅವನು ತನ್ನ ಒಡೆಯ ಬಾಯಿಸರಾಯರ ಪ್ರತಿನಿಧಿ. ಕೇಂದ್ರದಲ್ಲಿ ಬದಲಾವಣೆಯಾದುದು, ಹಳ್ಳಿಗೆ ಹೋಗಿ ಇನ್ನೂ ಮುಟ್ಟಿಲ್ಲ. ಅದೆಂತು ಮುಟ್ಟಬಲ್ಲದು? ಅದು ತಳದಿಂದ ಪ್ರಾರಂಭವಾಗಿಲ್ಲ. ತನ್ನ ಮಂತ್ರಿಗಳನ್ನು ಕಿತ್ತೊಗೆಯುವ ಇಷ್ಟೇ ಅಲ್ಲ. ಅವರನ್ನು ತುರಂಗಕ್ಕಟ್ಟುವ ನ್ಯಾಯಬದ್ಧ ಮತ್ತು ಸೈನ್ಯಾಧಿಕಾರವನ್ನು ಬಾಯಿಸರಾಯರು ಇನ್ನೂ ತಮ್ಮ ಕೈಯ್ಯಲ್ಲಿಟ್ಟುಕೊಂಡಿರುವರು. ಬಾಯಿಸರಾಯರನ್ನು ತುರಂಗಕ್ಕಟ್ಟುವ ನ್ಯಾಯಬದ್ಧ ಇಲ್ಲವೆ ಉಳಿದ ಯಾವ ಅಧಿಕಾರವೂ ಮಂತ್ರಿಗಳಿಗಿರುವುದಿಲ್ಲ. ಸಿವಿಲ್ ಸರ್ವಂಟರು ಕೂಡ ಇನ್ನೂ ವಾಯಿಸರಾಯರ ನಿಯಂತ್ರಣದಲ್ಲಿಯೆ ಇರುವರು. ವಾಯಿಸರಾಯರು ತಮ್ಮ ಅಧಿಕಾರಗಳನ್ನೆಲ್ಲ ಬಿಟ್ಟುಗೊಡಬೇಕೆಂದು ನಾನು ಸೂಚಿಸುವುದಿಲ್ಲ. ಅಥವಾ ಅದಷ್ಟು ಬೇಗ ಬ್ರಿಟಿಶ್ ನಿಯಂತ್ರಣವನ್ನೆಲ್ಲ ಬಿಟ್ಟುಗೊಡಬೇಕೆಂದು ವಾಯಿಟಹಾಲದಿಂದ ಸೂಚನೆ ಬಂದಿದ್ದು ಅದರಂತೆ ನಡೆಯಲು ತಾವು ನಿರ್ಧರಿಸಿರುವರೆಂಬದನ್ನು ಅತಿ ದೂರಿನ ಹಳ್ಳಿಯು ಕೂಡ ತಿಳಿದುಕೊಳ್ಳಬೇಕೆಂಬ ಮನಸ್ಸಿನಿಂದ ಅವರದಿಲ್ಲೆಂದೂ ಅದರಿಂದ ಸೂಚಿತವಾಗುವದಿಲ್ಲ.

ಹಿಂದುಸ್ತಾನದಲ್ಲಿಯ ಪ್ರತಿಯೊಬ್ಬ ಸ್ತ್ರೀಪುರುಷ ಸ್ವತಃ ಪೋಲೀಸ ಯೆಂಬುದನ್ನು ಹಿಂದುಸ್ತಾನದ ಜೀವಾಳವಾದ ಹಳ್ಳಿಯ ಅನುಭವದಿಂದ ನಾವಿನ್ನೂ ಕಲಿತಿಲ್ಲೆಂಬುದನ್ನು ತೋರಿಸಿಕೊಡುವದೆ ಇದೆಲ್ಲ ಬರಹದ ಔಚಿತ್ಯವಾಗಿದೆ. ಯಾವದೆ ಧರ್ಮದವರಿರಲಿ ಅಥವಾ ಧರ್ಮವನ್ನೊಪ್ಪದವರಿರಲಿ ಪ್ರತಿಯೊಬ್ಬ ಸ್ತ್ರೀ ಪುರುಷರು, ಅಂಥ ತಮ್ಮ ನೆರೆಯವರಿಗೆ ಕೇಡು ಮಾಡಬೇಕೆಂಬ ಮನೋವೃತ್ತಿಯನ್ನು ತಳಿಯದಿದ್ದರೆ ಮಾತ್ರ ಹೀಗೆ ಮಾಡಬಲ್ಲರು. ಆದರೆ ದುರ್ದೈವದಿಂದ ರಾಜಕೀಯ ಮನೋವೃತ್ತಿಯವರು ಮೇಲೆ ಸೂಚಿಸಿದಂತೆ ಮಾಡಲು ಸಿದ್ಧರಿಲ್ಲದಿದ್ದರೆ ಅವರು ಕನಿಷ್ಟ ಎಲ್ಲ ಬಗೆಯ ಭೀತಿಯನ್ನು ಬಿಟ್ಟುಗೊಟ್ಟು ಪೋಲೀಸ ಇಲ್ಲವೆ ಸೈನಿಕರ ಎಲ್ಲ ಬಗೆಯ ಸಂರಕ್ಷಣೆಯನ್ನು ತ್ಯಜಿಸುವ ನಿರ್ಧಾರ ಮಾಡಬೇಕು. ಹಿಂದುಸ್ತಾನದಲ್ಲಿಯ ಪ್ರತಿಯೊಂದು ಮನೆ ಭದ್ರಕೋಟೆಯಾಗಬೇಕು., ಅಜ್ಞಾಯುಗವೆಂದು ಕರೆಯಲ್ಪಡುವ ಪ್ರಾಚೀನ ಯುಗದ ಅರ್ಥದಲ್ಲಿ ಅಲ್ಲ; ಆದರೆ ಎರಡನೆಯವರಿಗೆ ಕೇಡು ಬಗೆಯದೆ ಸ್ವತಃ ಸಾಯುವ ಕಲೆಯನ್ನು ಪ್ರತಿಯೊಬ್ಬ ಕಲಿಯುವ ಬಹಳ ಪ್ರಾಚೀನಕಾಲದ ನಿಜಾರ್ಥದಲ್ಲಿ

ಶ್ರೀ ವಿಠಲ ಶೇಷಪ್ಪ ಶ್ರೇಷ್ಠಿಯವರು,
ಜನ್ಮ 1—4—1869.

ಈಗ ೭೮ ನೆಯ ವಯಸ್ಸಿನಲ್ಲಿ ನಡೆಯುತ್ತಿರುವ ವಯೋವೃದ್ಧರಷ್ಟೇ ಅಲ್ಲದೆ, ಜ್ಞಾನವೃದ್ಧರೂ ಆದ ಶ್ರೀಮನ್ ವಿಠಲ ಶೇಷಪ್ಪ ಶೆಟ್ಟಿಯವರ ಜೀವನವು ಮೂದರಿಯದಾಗಿದೆ. ನಿರ್ಧನಿಗಳ ಕುಟುಂಬದಲ್ಲಿ ಜನಿಸಿ, ಸ್ವಯಂಶಕ್ತಿಯಿಂದ, ಸ್ವಯಂಕೃಷಿಯಿಂದ ಮತ್ತು ವ್ಯಾಪಾರಿ ಕುಶಲತೆಯಿಂದ ಧನಿಕರಾದರು. ಇಷ್ಟೇಅಲ್ಲ. ಧನವನಾರ್ಜಿಸಿ ಸುಮ್ಮನೇ ಕೂಡಲಿಲ್ಲ.

ಬ್ರಾಹ್ಮಣರೇನು! ಬ್ರಾಹ್ಮಣೇತರರೇನು! ಪತಿತರೆಂದೆನ್ನಿಸಿಕೊಂಡ ಹರಿಜನರೇನು! ಜಾತಿಮತ ಭೇದಗಳ ಪರಿವೆಇಲ್ಲದೆ ಆರ್ಹರಾದವರಿಗೆಲ್ಲಾ ವಿಪುಲವಾಗಿ ದಾನಮೂಡಿದರು. ದರಿದ್ರರು, ಕವಿವರ್ಯರು ಪಂಡಿತರು, ಸಾಮೂಜಿಕ ರಾಜಕೀಯ ಧಾರ್ಮಿಕಸಂಸ್ಥೆಗಳು ಇವರ ದಾನದಿಂದ ಸ್ಫೂರ್ತಿಗೊಂಡವು. ಪ್ರತಿವರ್ಷವೂ ಲಕ್ಷಬಿಲ್ವಾರ್ಚನೆ, ಪಾರಾಯಣ ಸಂತರ್ಪಣೆಗಳಿಗಾಗಿ ಪ್ರಪಂಚ ಶಾಂತಿಯ ಉದ್ದೇಶ 3–4 ಸಾವಿರ ರೂ. ಖರ್ಚುಮಾಡುತ್ತಲಿರುವರು. ಇದು ೨೦ ವರ್ಷಗಳಿಂದ ನಡೆಯುತ್ತಲಿದೆ. ಬಡವರಿಗೆ ಅನ್ನದಾನವು ಸಾವಿರಾರು ರೂ. ಖರ್ಚುಗಳಿಂದ ಅಗಾಗ್ಗೆ ನಡೆಯುತ್ತಲೇ ಇದೆ, ಇವರು ದಾನಕೊಟ್ಟ ಮುಖ್ಯ ಅಂಶಗಳನ್ನು ಬೇರೊಂದೆಡೆಯಲ್ಲಿ ಪ್ರಕಟಿಸಲಾಗಿದೆ.

ಇವರು ಎರಡುಸಲ (Two terms) ಸೆಂಟ್ರಲ್ ಜೈಲ್ ನಾನ ಅಫಿಸಿಯಲ್ ವಿಜಿಟರರಾಗಿ ಜೀಲಧಿಕಾರಿಗಳಿಗೆ ಉಪಯುಕ್ತ ಸಲಹೆ ಸೂಚನೆಕೊಟ್ಟರು. ತಮ್ಮ ಮನೆ ಗರ್ಲಸ್ ಹೈಸ್ಕೂಲ್ ಮದ್ಯದಲ್ಲಿನ ಭವ್ಯದ ವಿಶಾಲಸ್ಥಳವನ್ನು ೨೫ ಸಹಸ್ರ ರೂಪಾಯಿಗೆ ಕೊಂಡು ಅಲ್ಲಿ ಬಳ್ಳಾರಿ ನಗರಕ್ಕೆ ಶೋಭಾಯಮಾನವಾದ ಟೌನ್‌ಹಾಲ (ಪುರಭವನ) ಹಾಸ್ಟೆಲ್ ಕಟ್ಟಿಸುವವರಿದ್ದಾರೆ. ಭಗವಂತನು ಇವರ ಇಚ್ಛೆಯನ್ನು ಈಡೇರಿಸಬೇಕು.

ಶ್ರೀ ವಿಠಲ ಶೇಷಪ್ಪ ಶ್ರೇಷ್ಠಿಯವರು ಷಡ್ಭಾಷಾಗ್ರವೀಣರು. ಆರ್ಯ ವೈಶ್ಯಯುವಸಂಘ ಬಳ್ಳಾರಿ ಛೇಂಬರ್ ಆಫ್ ಕಾಮರ್ಸ್, ಮತ್ತು ಆರ್ಯವೈಶ್ಯಕವಿ ಪಂಡಿತ ಪರಿಷತ್ತುಗಳಲ್ಲಿ ಇವರಿಗೆ ಜಿ.ಓ. ಎಂ. ವಿದ್ಯಾವಿಲಾಸ ವಗೈರೆ ಬಿರುದುಗಳು ಬಂದದ್ದರಲ್ಲಿ ಏನಾಶ್ಚರ್ಯ? ಕವಿ ಪಂಡಿತ ಪರಿಷತ್ತಿನಲ್ಲಿ ಪ್ರೆಸಿಡೆನ್ಸಿಕಾಲೇಜ ತೆಲುಗು ಪಂಡಿತರಾಗಿದ್ದ ದೋಣೂ ವೆಂಕಟಸ್ವಾಮಿಗುಪ್ತರವರು ಮೂನ ಪತ್ರದಿಂದ ಸ್ವಕವಿತೆಯಿಂದ ಇವರನ್ನು ಸನ್ಮಾನಿಸಿದರು.

ಇವರ ದೈವಭಕ್ತಿ ಸೇವಾಪರಾಯಣತೆ ಸಮೂಜೋದ್ಧಾರ ಕಾರ್ಯ ಪ್ರಶಂಸನೀಯವಾದುದು.

(S. IV ನೆಯ ಪುಟವನ್ನು ನೋಡಿರಿ.)

ನೂತನ ವಧೂವರರು ದೀರ್ಘಾಯುರಾರೋಗ್ಯ ಸಂಪತ್ತಿನಿಂದ ಬಾಳಲಿ.

ಚಿ॥ ರಾಮಚಂದ್ರಪ್ಪ ಶ್ರೇಷ್ಠಿ ಮೋಕ್ಷಪುರಿ (ಮೋಕ)

ಚಿ॥ ಕುಂ॥ ಸೌ॥ ಲಕ್ಷ್ಮಿಕಾಂತಮ್ಮ

[11—10—1946 ನೆಯ ತಾ॥ ಶ್ರೀ ವಿಠಲಶೇಷಪ್ಪ ಶ್ರೇಷ್ಠಿಯವರ ಮರಿ ಮೊಮ್ಮಗಳಾದ ಚಿ॥ಕು॥ಸೌ॥ ಲಕ್ಷ್ಮಿಕಾಂತಮ್ಮನ ವಿವಾಹವು ಮೋಕ್ಷಪುರಿ (ಮೋಕ) ಸುಪ್ರಶಿದ್ಧ ಮನೆತನದ ಶ್ರೀ ಚಿ॥ ರಾಮಚಂದ್ರಪ್ಪ ಶ್ರೇಷ್ಠಿಯವರೊಡನೆ ಒಳ್ಳೇ ವೈಭವದಿಂದ ನಡೆಯಿತು. ಈ ವಿವಾಹ ಮಹೋತ್ಸವಕ್ಕೆ ಕಲೆಕ್ಟರ್ ಮತ್ತು ಸತೀಮಣಿ ನಗರದ ಅಧಿಕಾರೀ ಅನಧಿಕಾರೀ ವರ್ಗದವರೆಲ್ಲಾ ದಯಮಾಡಿ ವಧೂವರರನ್ನಾಶೀರ್ವದಿಸಿ, ಸ್ವಚ್ಛಂದನ ತಾಂಬೂಲಾದಿಗಳನ್ನು ಸ್ವೀಕರಿಸಿ ಹೋದರು.

ಈ ಶುಭ ಅವಸರದಲ್ಲೂ ಕೂಡ ಶ್ರೀ ವಧೂವರರ ಕಡೆಯಿಂದ ದಾನಧರ್ಮ ಕಾರ್ಯಗಳು ನೆರವೇರಿದವು.

ರಾವ್ ಸಾಹೇಬ್, ವಿದ್ಯಾವಿಲಾಸ, ಜಿ. ಒ. ಎಂ. ವಗೈರೆ ಬಿರುದಾಂಕಿತರಾದ

ಶ್ರೀ ವಿಠಲ ಶೇಷಪ್ಪ ಶ್ರೇಷ್ಠಿಯವರು

[ಮರ್ಚಂಟ್- ಬ್ಯಾಂಕರ್ -ಬಳ್ಳಾರಿ]

ಬಳ್ಳಾರಿ ಜನತೆಗೆ ಮಾಡಿದ ಮಹೋಪಕಾರ.

(1 ಮುನಿಸಿಪಲ ವಾಚನಾಲಯ, ಪುಸ್ತಕ ಭಂಡಾರಗಳನ್ನಿರಿಸಲು ತೋಟ ಕಾಂಪೌಂಡು ಗೋಡೆಗಳಿಂದ ಕೂಡಿದ ಸುಂದರ ಕಟ್ಟಡಕ್ಕಾಗಿ (ಇದಕ್ಕಾಗಿ ಪುರಸಭೆಯು ತನ್ನ ತೀರ್ಮಾನದಲ್ಲಿ ಇವರನ್ನು ವಂದಿಸಿದೆ)

ದಾನದ ಮೊತ್ತ
ರೂ. ೧೬೧೦೦ ೦ ೦

2) ನಾಗೇಶ್ವರ ಸ್ವಾಮಿ ದೇವಾಲಯದ ಕಲಶಸ್ಥಾಪನೆಗಾಗಿ ದಾನ ರೂ. ೫೦೦೦ -೦ -೦.
3) 'ವಿಜಯ ಮಂದಿರ' ಬಳ್ಳಾರಿ. ೫೦೦೦—೦—೦
4) ಕದಿರಿ ಹೈಸ್ಕೂಲಿನ ಲೈಬ್ರರಿ ಮತ್ತು ಸೈನ್ಸ ಹಾಲಿಗಾಗಿ ಅನಂತಪುರ ಜಿಲ್ಲಾ
ಬೋರ್ಡು ಅಧ್ಯಕ್ಷರ ಮೂಲಕ ರೂ. ೬೫೦೦—೦—೦
5) ಬಳ್ಳಾರಿ ಮುನಿಸಿಪಲ್ ಹೈಸ್ಕೂಲ್ ಕ್ರಿಕೆಟ್ ಆಡುವ ಮೈದಾನಕ್ಕೆ ರೂ. ೩೦೦೦—೦—೦
ಡಿ ಬಹುಮೂನದ ಶಾಶ್ವತ ನಿಧಿಗಾಗಿ ರೂ. ೫೦೦—೦—೦
6) ಅನಂತಪುರ ಕಾಲೇಜು ಹಾಸ್ಟೆಲ್ ವ್ಯಾರ್ಥನಾ ಮಂದಿರ
(ಹಿಂದೂಪುರದ ದೊಂತಿ ಭೀಮಯ್ಯಶೆಟ್ಟಿ ಮತ್ತು ಚಂಗಲರಾಯಶೆಟ್ಟರ ಮೂಲಕ) ರು. ೨೫೦೦—೦—೦
7) ನೀರಿನ ಸೌಕರ್ಯ (1) ಕ್ರಿಷ್ಣನೂಜಾರಿ ರೊಡೀನಲ್ಲಿ ಎರಡು
ನಳ- ಎರಡು ದನಗಳ ತೊಟ್ಟಿ ೩೦೦ ವೋಲ್ಟಿನ ಪ್ರಕಾಶದ ವಿದ್ಯುದ್ದೀಪದೊಡನೆ ರು ೧೦೦೦—೦—೦
(2)ನಾಗೇಶ್ವರಸ್ವಾಮಿ ದೇವಸ್ತಾನ ತೇರುಬಾಜಾರ ೨೫೦—೦—೦
8) ಶ್ರೀ ಪಿ. ರಾಮಾನುಜುಲುಯವರಿಂದ ಸ್ಥಾಪಿತವಾದ ಅನಂತಪುರದಲ್ಲಿನ
ವಿಜಯನಗರದ ವೂರ್ ಬಾಯ್ಸ ಅಂಡ್ ಆರ್ಫನ್ಸ್ ಹೋಂ ರೂ. ೧೦೦೦—೦—೦
9) ಬಳ್ಳಾರಿ ಬಿ. ಡಿ. ಎ ಗ್ರಾವುಂಡನ್ಕೆ (ಜಿಲ್ಲಾಜಡ್ಜಮ್ಯಾಕ್‌ರ ಮೂಲಕ) ರೂ. ೫೦೦—೦—೦
(10) ಹರಿಜನ ಹಾಸ್ಟೆಲ್ (ನರಸೆಪಲ್ಲಿ ಚನ್ನಪ್ಪ ಹಿಂದೂ ಬಾಯ್ಸ್‌ಹೋಂ) ರೂ ೪೦೦—೦—೦
(11) 4 ಹೈಸ್ಕೂಲುಗಳಲ್ಲಿರುವ ಬಡವಿದ್ಯಾರ್ಥಿಗಳ ಸಹಾಯಕ್ಕೆ ಪ್ರತಿವರ್ಷದ ಖರ್ಚು ೩೦೦—೦—೦
(12) ಹರಿಜನ ಬಾಯ್ಸಹಾಸ್ಟೆಲ್ ಬಳ್ಳಾರಿ (ಪಾತ್ರೆಗಳನ್ನು ಕೊಡಿಸಿದ ಖರ್ಚು)ರೂ. ೧೦೫—೦—೦
(13) ಗಾಂಧಿನಗರದಲ್ಲಿ ಸ್ಮಶಾನ ಸೌಕರ್ಯಕ್ಕೆ (ಮುಲ್ಲಂಗಿ ಗೂಳಪ್ಪನವರ ಮೂಲಕ) ೧೦೦—೦—೦
(14) ಬಳ್ಳಾರಿ ಮ್ಯುಜಿಕ್ ಅಕ್ಯಾಡೆಮಿ (ಶ್ರೀ ಥಾಯಪ್ಪನವರ ಮೂಲಕ) ೧೦೦—೦—೦
(15) ಮುನಿಸಿವಲ ಮೇಲ್ತರಗತಿ ನೌಕರರ ಭವನನಿಧಿಗೆ (ಕಮಿಶನರ ಮೂಲಕ) ರೂ. ೧೦೦—೦—೦
(16) ಟೀಚರ್ಸಗಿಲ್ಡ ಫಂಡ (ಬ್ರಾವುನ್ ಮತ್ತು D. E. O. ಮೂಲಕ) ರೂ. ೧೦೦—೦—೦
(17) S.G.F. ಚರ್ಚ ಬಿಲ್ಡಿಂಗ್ ಫಂಡ. (ಸಾಲೋಮನ್‌ರ ಮೂಲಕ) ರೂ ೧೦೦—೦—೦
(18) ಮುನಿಸಿವಲ್ ಶೀಲ್ಡ (ಬಜಾಲ್ಲಾ ಕಲೆಕ್ಟರ್) ೬೦೦—೦—೦
(19) ವಿಜಯವಿನ ಬಡವರಿಗೆ ಅನ್ನದಾನ ೫೦೦—೦—೦

ಸುಭಾಸ—ರಾಷ್ಟ್ರಗೀತೆ

ಇಲ್ಲಿಯವರೆವಿಗೆ ಪ್ರಚುರವಾದ ಸುಪ್ರಸಿದ್ಧ ರಾಷ್ಟ್ರೀಯ ಕವಿಗಳ ಗೀತೆಗಳ
I. N. A. ಗೀತೆಗಳು ಸಂಗ್ರಹಿಸಲ್ಪಟ್ಟು "ನವಭಾರತ" ದ ಪ್ರತ್ಯೇಕ ಸಂಚಿಕೆಯಂತೆ
ದಿಂದ ಶೀಘ್ರವಲ್ಲಿ ಯೇ ಪ್ರಕಟವಾಗಲಿವೆ. ನೇತಾಜಿ ಸುಭಾಸರ ಸುಂದರ I. N. A
ಚಿತ್ರವು ಪುಸ್ತಕದ ವೇಲೆ ಸುಶೋಭಿತವಾಗಿರುವುದು. ಬೇಕಾದವರು ಪ್ರತಿಗಳಿಗಾ
ಮೊದಲೇ ತಮ್ಮ ಬೇಡಿಕೆಗಳನ್ನು ಕಳುಹಿಸಬೇಕು. "ನವಭಾರತ ಬಳ್ಳಾರಿ"

ಶ್ರೀ ವಿಶಲ ಶೇಷಪ್ಪ ಶ್ರೇಷ್ಠಿಯವರು.

(s. 1 ನೆಯ ಪುಟದಿಂದ ಮುಂದುವರಿದಿದೆ.)

ಕನ್ಯಾ ಕುಮಾರಿಯಿಂದ ಮಜಃಂಕವಿದ ಜನ ಎ ಹೋಗ ಲಿಕ್ಕಶಕ್ಯವಾದ ಹಿಮಾಲಯ ಪರ್ವತದಲ್ಲಿನ ಮೌಂಟ ಕೈಲಾಸದವರೆಗೂ ಇವರು ಸಂಚರಿಸಿ ಉತ್ತರ ದಕ್ಷಿಣ ಭಾಗಗಳಲ್ಲಿ ಪಂಡಿತೋತ್ತಮರೊಡನೆ ಗಾಢವಾದ ವೇದಾಂತ ವಿಷಯಗಳನ್ನು ಚರ್ಚಿಸಿ ಅವರಿಂದ ಪ್ರಶಂಸಾ ಪತ್ರಗಳನ್ನು ಪಡೆದಿರುವರು. ಇವರು ಅನೇಕ ಸಂಸ್ಥೆಗಳಿಗೆ ರಾಜ ಪೋಷಕರಿರುತ್ತಾರೆ. ಇವರ ಮೊಮ್ಮಗ ಶ್ರೀ ಜೆ. ಕುಪ್ಪನ್ನ ಶೆಟ್ಟಿ ಬಿ.ಎ ಎಲ್.ಟಿ. ಯವರು ಅನಂತಪುರ ಜಿಲ್ಲಾ ಕದಿರಿ ಗ್ರಾಮದಲ್ಲಿ ದೊಡ್ಡ ವ್ಯಾಪಾರಿ ಸಂಸ್ಥೆಯನ್ನು ನಿರ್ವಹಿಸುತ್ತಲಿರುವರು. ಅಲ್ಲಿ ದಾನಧರ್ಮವು ನಡೆದಿದೆ.

ದಾತೃಗಳು ಬೆಂಗಳೂರುರಸ್ತೆಯಲ್ಲಿನ ಸರ್ಕಾರೀ ವೂಧ್ಯಮಿಕ ಬಾಲಿಕಾಶಾಲೆಗೆ ಹೊಂದಿಕೊಂಡಿರುವ ವಿಶಾಲ ಪ್ರದೇಶವನ್ನು ರೂ. ೫೫೦೦೦ ಕೊಂಡು ಬಳ್ಳಾರಿ ನಗರಕ್ಕೆ ಶೋಭಾಯಮಾನವಾದ ಪುರ ಭವನ, ವಿದ್ಯಾರ್ಥಿಗಳಿಗಾಗಿ ನಿಲಯವನ್ನೇರ್ಪಡಿಸುವ ಗಂಭೀರ ಯೋಚನೆಯಲ್ಲಿದ್ದು ದೈವಾನುಗ್ರಹದಿಂದ ಅದು ಸಾಧಿಸುವದರಲ್ಲಿ ಸಂಶಯವಿಲ್ಲ. ಇಂಥಾ ಮಹತ್ಕಾರ್ಯವೂ ಅವರ ಜೀವಿತಕಾಲದಲ್ಲಿ ಪೂರ್ಣವಾಗಲೆಂದು ನಮ್ಮ ಹರಕೆ.

ಬಳ್ಳಾರಿಜಿಲ್ಲಾ ಕಾಂಗ್ರೆಸ್ ಸಮಿತಿ.

ಜಿಲ್ಲಾ ಬೋರ್ಡು ಚುನಾವಣೆಗಳನ್ನು ಕಾಂಗ್ರೆಸ್ ಹೆಸರಿನಿಂದ ಸ್ಪರ್ಧಿಸಬಾರದೆಂಬ ಹೊಸಪೇಟೆಯ ತೀರ್ಮಾನವು ಮತ್ತೆ ರದ್ದುಪಡಿಸಲ್ಪಟ್ಟು ತಾಲೂಕಿಗೊಬ್ಬರಂತೆ ಪ್ರತಿನಿಧಿಗಳನ್ನು ಸಂಬಂಧಿಸಿದ ಕಾಂಗ್ರೆಸ್ ಸಮಿತಿಯವರಾರಿಸಿ ಜಿಲ್ಲಾ ಚುನಾವಣಾಮಂಡಲವನ್ನು ಏರ್ಪಡಿಸಬೇಕೆಂಬ ನಿರ್ಣಯವು ಶ್ರೀ ಟಿ. ಸುಬ್ರಹ್ಮಣ್ಯಂರ ಅಧ್ಯಕ್ಷತೆಯಲ್ಲಿ ಕೂಡಿದ ಸಾಮಾನ್ಯ ಸಭೆಯಲ್ಲಿ ಆಯಿತು.

ಸದಸ್ಯರಾಗಿ ನಿಲ್ಲ ಬಯಸುವವರು ಜಿಲ್ಲಾಕಾಂಗ್ರೆಸ್ ಕಾರ್ಯದರ್ಶಿ ಹೊಸಪೇಟೆ ಇವರಿಗೆ ೫೦ ರೂ. ಡಿಪಾಜಿಟ್‌ನೊಂದಿಗೆ ಅರ್ಜಿ ಕಳುಹಿಸಬೇಕು. ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೃಪಾಲನಿಯವರನ್ನಭಿನಂದಿಸುವ ನವಾಖಾಲಿ ಅತ್ಯಾಚಾರಗಳನ್ನು ಖಂಡಿಸುವ ತೀರ್ಮಾನಗಳು ಆದವು.

ಬಳ್ಳಾರಿ ಜಿಲ್ಲಾ ಬೋರ್ಡು

ಶ್ರೀನಾಗನಗೌಡರ ಅಧ್ಯಕ್ಷತೆಯಲ್ಲಿ 21 ನೆಯ ತಾ. ಸಾಯಂಕಾಲ ಜಿಲ್ಲಾಬೋರ್ಡು ಭವನದಲ್ಲಿ ಸಮಾವೇಶವಾಗಿದ್ದಿತು. ಮತದಾರಪಟ್ಟಿಗಳಲ್ಲಿ ಬಹಳದೋಷಗಳಿರುವ ಕಾರಣ, ಅವುಗಳನ್ನು ಸರಿಪಡಿಸುವವರೆಗೆ ಚುನಾವಣೆಗಳನ್ನು ನಡೆಸಬಾರದು ಎಂಬ ಅರ್ಥದ ತೀರ್ಮಾನವಾಯಿತು. ಶ್ರೀಕೃಪಾಲಿನಿಯವರು ಕಾಂಗ್ರೆಸ್ ಅಧ್ಯಕ್ಷರಾದ ಕಾರಣ ಅವರಿಗೆ ಅಭಿನಂದನೆಯು ವ್ಯಕ್ತವಾಯಿತು. ಕುರುಗೋಡಿನಲ್ಲಿ ೧೨ ಬೆಡ್‌ಗಳ ಭವ್ಯವಾದ ಆಸ್ಪತ್ರೆ ಭವನವನ್ನು, ಕಟ್ಟಿಸಲು, ರೂ. ೪೪೭೦೦/- ಗಳ ಪ್ಲಾನನ್ನು ಮದ್ರಾಸ್ ಸರ್ಜನ್ ಜನರಲ್‌ರವರು ಒಪ್ಪಿರುವ ಕಾರಣ ಅದರ ಮುಂದಿನ ಕೆಲಸವನ್ನು ಸಾಗಿಸಲು ಚರ್ಯೆಗಳನ್ನು ಕೈಗೆದುಕೊಳ್ಳಬೇಕೆಂದಾಯಿತು. ಡಾ. ನಾಗನಗೌಡರಿಗೆ ತಮ್ಮ ಇಪ್ಪತ್ತನರ್ಷಗಳ ಕಾರ್ಯಕ್ಕೆ ಅಭಿನಂದನೆಯುಸೂಚಿತವಾಗಿ, ಕಂಪ್ಲಿ ವ್ಯಾಥಮಿಕೋಪಾಧ್ಯಾಯರು, ಅಧ್ಯಕ್ಷ, ಉಪಾಧ್ಯಕ್ಷ ಶ್ರೀ ಮರಿಬಸವನಗೌಡರನು ಸತ್ಕರಿಸಿದರು.

ಆಂಧ್ರ ಪ್ರಾಂತದಪ್ರಶ್ನೆ ೨ ವರ್ಷಬೇಡ

ನಡುಗಾಲ ಸರ್ಕಾರದ ಸುದ್ದಿಖಾತೆ, ಆಕಾಶವಾಣಿ ಮಂತ್ರಿಗಳಾದ ಸರ್ದಾರ ವಲ್ಲಭ ಭಾಯಿಪಟೇಲರು ಆಂಧ್ರದೇಶದ ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರಿಗೆ ಕನಿಷ್ಟಕ್ಕೆ ಎರಡು ವರ್ಷಗಳವರೆಗೆ ಆಂಧ್ರ ಪ್ರಾಂತೀಕರಣದಬಗ್ಗೆ ಆಗ್ರಹಮಾಡತಕ್ಕದ್ದಲ್ಲವೆಂದು ಸಲಹೆಯಿತ್ತಿರುವರು.

ನಾನಲ್ಲದಿದ್ದರೂ ಎರಡನೆಯವರಾದರೂ ಕೊಲೆಗಡಕನ ಇತಿ ಶ್ರೀಮುಗಿಸಲಿ ಎಂಬ ಇಚ್ಛೆಯನ್ನು ಕೂಡ ಅವನು ತಾಳಬಾರದೆಂದು ಭಿನ್ನ ಶಬ್ದಗಳಲ್ಲಿ ಹೇಳ ಬಹುದಾಗಿದೆ. ಹೀಗಾಗುವ ವರೆಗೆ ಹಿಂದುಸ್ತಾನ ತನ್ನ ನ್ಯಾಯವಾದ ಸ್ಥಾನವನ್ನು ಸಂಪಾದಿಸಲಾರದು. ಪ್ರತಿಯೊಬ್ಬರಲ್ಲಿ ಈ ಪಾಠ ಮುದ್ರೆಯೊತ್ತಿದಂತಾದರೆ ಅದಷ್ಟು ಚೆನ್ನಾಗುವದು? ಇದರ ನಿದರ್ಶನ ಹುಡುಕುವ ತೊಂದರೆ ತೆಗೆದುಕೊಂಡರೆ ಈ ಪಾಠಕ್ಕೆ ಬೇಕಾದಷ್ಟು ನಿದರ್ಶನಗಳು ಸಿಕ್ಕುವವು.

ಹಿಂದೂ ನೀರು ಮತ್ತು ಮುಸ್ಲಿಮ ನೀರು

ಹಿಂದುಸ್ತಾನದ ರೈಲ್ವೆ ಗಾಡಿಗಳಲ್ಲಿ ಮೊದಲನೆ ಸಲ ಪ್ರವಾಸಮಾಡುವ ಪರಕೀಯನೊಬ್ಬ ಹಿಂದೂ ಇಲ್ಲವೆ ಮುಸ್ಲಿಂನೀರು ಚಹಾ ಮೊದಲಾದ ನಾಚಿಗೆ ಹುಟ್ಟಿಸುವಂಥ ಶಬ್ದಗಳನ್ನು ತನ್ನ ಜೀವನದಲ್ಲಿಯೆ ಮೊದಲನೆ ಸಲ ಕೇಳಿ ದುಃಖದಿಂದ ಬೆಚ್ಚಿ ಬೀಳ ಬಹುದು. ಇದೀಗ ಕೇಂದ್ರ ಸರಕಾರ ಸಂಪೂರ್ಣ ರಾಷ್ಟ್ರೀಯವಾಗಿದೆ. ಅಸಫ ಅಲ್ಲಿ ಸಾಹೇಬರಂಥ ಪ್ರಮುಖ ವ್ಯಕ್ತಿಗಳು ರೇಲ್ವೆ ಮತ್ತು ಸಾರಿಗೆ ಖಾತೆಯ ಮಂತ್ರಿಗಳಾಗಿರುವಾಗ ಇದನ್ನು ಕೇಳುವದು ಉದ್ವೇಗಕರವಾಗಿದೆ. ಹಿಂದುಸ್ತಾನಕ್ಕೆ ಅನ್ವಯಿಸುವ ಈ ವಿಚಿತ್ರ ನಾಚಿಕೆಗೇಡಾದ ಸಂಗತಿ ಬೇಗನೆ ಕೊನೆಗೊಳ್ಳುವದೆಂದು ಆಶಿಸಲಾಗಿದೆ. ರೇಲ್ವೆ ಖಾತೆ ಮುಸಲ್ಮಾನ ಮಂತ್ರಿಯು ಕೈಯ್ಯಲ್ಲಿರುವದರಿಂದ ಹಿಂದುಗಳಿಗೆ ನ್ಯಾಯ ದೊರೆಯಲಾರದೆಂದು ಯಾರೂ ಊಹಿಸಬಾರದು. ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳಲ್ಲಿ ಹಿಂದು ಮುಸಲ್ಮಾನ ಇಲ್ಲವೆ ಬೇರೆ ಯಾವದೇ ಜಾತಿಯ ಭೇದಭಾವಗಳಿರುವದಿಲ್ಲ; ಇರತಕ್ಕದ್ದಲ್ಲ ಎಲ್ಲರೂ ಹಿಂದಿಯರೇ, ಧರ್ಮಖಾಸಗಿ ವಿಷಯ. ಅಲ್ಲದೆ ಮಂತ್ರಿ ಮಂಡಳದ ಸದಸ್ಯರು ದಿನದ ಕೆಲಸ ಮುಗಿದ ಬಳಿಕ ಪ್ರತಿಯೊಬ್ಬ ಸದಸ್ಯ ಏನೇನು ಮಾಡಿದನೆಂಬುದರ ಅಧಾವೆ ತೆಗೆದುಕೊಳ್ಳುವ ಅನುಕರಣೀಯ ಉಪಕ್ರಮವನ್ನು ಹಾಕಿಕೊಂಡಿರುವರು. ಪ್ರತಿ ಮಂತ್ರಿಗಳ ಕೆಲಸದಲ್ಲಿ ಸಂಯುಕ್ತವಾಗಿ ಹಾಗು ಪ್ರತ್ಯೇಕವಾಗಿ ಮಂತ್ರಿಮಂಡಳವೆಲ್ಲ ಹೊಣೆಗಾರವಿದೆ, ಅದು ತನ್ನ ಖಾತೆಯಲ್ಲಿ ಬರುವದಿಲ್ಲೆಂದು ಹೇಳಿ ಯಾವ ಮಂತ್ರಿಗೂ ಇಂಥದೊಂದು ಕೆಲಸ ತನ್ನ ಅಧಿಕಾರಕ್ಷೇತ್ರದಲ್ಲಿಲ್ಲ ಎಂದು ಹೇಳಿಕೊಳ್ಳಲಿಕ್ಕೆ ಬರಲಾರದು. ಆದುದರಿಂದ ರೇಲ್ವೆ ಸ್ಟೇಶನುಗಳಲ್ಲಿ ಪ್ರತಿಯೊಂದು ಜಾತಿಗು ಎಲ್ಲವೂ ಪ್ರತ್ಯೇಕವಾಗಿರಬೇಕೆಂಬ ಅನುಚಿತ ರೂಢಿಯು ಹೋಗುವದೆಂದು ಭಾವಿಸಲು ನಮಗೆ ಅಧಿಕಾರವಿದೆ. ಎಲ್ಲವೂ ಸ್ವಚ್ಛವಿರಬೇಕಾದುದು. ಎಲ್ಲರೂ ಆಪೇಕ್ಷಿಸತಕ್ಕ ಮತು. ಎಲ್ಲ ಪೇಯ ಪದಾರ್ಥಗಳಿಗೆ ಸಲದ ದೋಟಿಯನ್ನುಪಯೋಗಿಸಿದರೆ ಎಂಥ ಸನಾತನಿಯೂ ಆಕ್ಷೇಪಿಸಲಾರನು. ಶಿಷ್ಟ ಜನರು ತಮ್ಮ ಸ್ವಂತ ತಂಬಿಗೆ, ಕಪ್ಪು ಮೊದಲಾದವುಗಳನ್ನಿಟ್ಟು ಕೊಳ್ಳಬಹುದು. ಮತ್ತು ಹಾಲು ಕಾಫಿ ನೀರು ಮೊದಲಾದವುಗಳನ್ನು ನಲ್ಲಿಯಿಂದ ತೆಗೆದುಕೊಳ್ಳಬಹುದು. ಇದರಲ್ಲಿ ಧರ್ಮದಲ್ಲಿ ಕೈ ಹಾಕಿದಂತೆ ಆಗುವದಿಲ್ಲ. ರೈಲ್ವೆ ಸ್ಟೇಶನಗಳಲ್ಲಿ ಏನಾದರೂ ಕೊಳ್ಳಲೇಬೇಕೆಂದು ಯಾರು ಒತ್ತಾಯಪಡಿಸುವದಿಲ್ಲ. ಪ್ರವಾಸದಲ್ಲಿ ಅನೇಕ ಜನರು ಅನ್ನ ನೀರು ತೆಗೆದುಕೊಳ್ಳದೆ ಉಪವಾಸಮಾಡುವದು ಉಂಟು. ಈಗಲು ನಾವೆಲ್ಲ ಅದೆ ಹವೆಯನ್ನು ಶ್ವಾಸಿಸುವೆವು. ಒಂದೇ ಭೂಮಿತಾಯಿಯ ಮೇಲೆ ನಡೆಯುವೆವು. ಇದೊಂದು ಬಗೆಯ ಸುದೈವವೆನ್ನಬೇಕು.

ರೇಲ್ವೆ ಸ್ಟೇಶನಗಳಲ್ಲಿಯಾದರೂ ಎಲ್ಲ ಬಗೆಯ ಜಾತಿಯ ಪೋಷಣೆಗಳು ಬೇಕಾಯದೇಶೀರವೆಂದು ಸಾರಲ್ಪಡಬೇಕು. ಹಿಂದುಸ್ತಾನದಲ್ಲಿಯ ಬೇರೆ ಬೇರೆ ಜಾತಿಗಳಲ್ಲಿ ಬಾಂಧವ್ಯ ಭಾವನೆ ಬೆಳೆಸಲು ಮತ್ತು ಕೋಟ್ಯವಧಿ ಪ್ರವಾಸಿಕರಿಗೆ ಅತ್ಯಂತ ಶುಚಿತ್ವದ್ದು ಆರೋಗ್ಯದ ಮತ್ತು ಸ್ವಚ್ಛತೆಯ ಶಿಕ್ಷಣ ಕೊಡಲು ಉಗಿಬಂಡಿಗಳು ಮತ್ತು ಹಡಗಗಳು ಅತ್ಯುತ್ತಮ ಸಾಧನಗಳಾಗಿವೆಂದು ನಾನು ಈ ಪತ್ರಿಕೆಯಲ್ಲಿ ಅನೇ

ಕ ಸಲಹೇಳಿರುವೆನು. ತಮ್ಮ ನಿರ್ಧಾರದಂತೆ ನಡೆಯು ವ ಧೈರ್ಯ ಮಂತ್ರಿ ಮಂಡಳದವರಲ್ಲಿ ಬರಲೆಂದೂ ಇದನ್ನು ಸಂಪೂರ್ಣ ಯಶಶ್ವಿಮಾಡಲು ರೇಲ್ವೆ ನೌಕರರ ಮತ್ತು ಸಾರ್ವಜನಿಕರ ಸಂಪೂರ್ಣ ಸಹಕಾರ ಸಿಕ್ಕುವುದೆಂದೂ ಆಶಿಸುವಾ.

ಅಂತಕ ಆಲಿಂಗನ

ಮುಂಬಯಿಯಲ್ಲಿ ಮೊನ್ನೆ ದಿನ ಹಿಂದೂವೊಬ್ಬನು ಮುಸಲ್ಮಾನ ಮಿತ್ರನಿಗೆ ಆಶ್ರಯ ಕೊಟ್ಟನು. ಇದರಿಂದ ರೊಚ್ಚಿಗೆದ್ದು ಹಿಂದೂ ಜನಸಮೂಹವು ಆ ಮುಸ್ಲಿಮ ಮಿತ್ರನ ತಲೆಯನ್ನು ಕೊಡೆಂದು ಕೇಳಹತ್ತಿತು. ಹಿಂದುವು ತನ್ನ ಮಿತ್ರನನ್ನೊಪ್ಪಿಸಲು ಒಪ್ಪಲಿಲ್ಲ. ಆದುದರಿಂದ ಇಬ್ಬರೂ ಅಂತಕ ಆಲಿಂಗನಗೊಂಡರು. ವಿಶ್ವಾಸಾರ್ಹ ಜನರು ನನಗೆ ಇದನ್ನೆಲ್ಲ ವರ್ಣಿಸಿ ಹೇಳಿದರು. ಉನ್ಮಾದಾವಸ್ಥೆಯಲ್ಲಿಯೂ ಶೌರ್ಯದ ಇದೊಂದೇ ಉದಾಹರಣೆಯಲ್ಲ. ಕಲಕತ್ತೆಯಲ್ಲಿ ಇತ್ತೀಚೆ ನಡೆದ ರಕ್ತದ ಮಡುವಿನಲ್ಲಿ ಮುಸ್ಲಿಮರು ತಮ್ಮ ಪ್ರಾಣಗಳನ್ನು ಗಂಡಾಂತರದಲ್ಲಿ ನೂಕಿಯೂ ತಮ್ಮ ಹಿಂದೂ ಮಿತ್ರನಿಗೆ ಆಶ್ರಯ ಕೊಟ್ಟದ್ದುಂಟು, ಹಿಂದೂಗಳು ತಮ್ಮ ಮುಸಲ್ಮಾನ ಮಿತ್ರರನ್ನು ಸಲಹಿದ್ದುಂಟು ಎಲ್ಲಿಯೂ ಯಾವ ಕಾಲಕ್ಕೂ ಮಾನವನಲ್ಲಿ ದೇವಾಂಶ ಪ್ರದರ್ಶಿಸಲ್ಪಡದಿದ್ದರೆ ಮಾನವ ಕುಲವೇ ನಾಶ ಹೊಂದಿ ಹೋಗಬಹುದು.

ಮುಂಬಯಿ ಮುಖ್ಯ ಮಂತ್ರಿ ಶ್ರೀ ಬಾಳಾಸಾಹೇಬ ಖೇರರು ಮುಸಲ್ಮಾನ ಜನಸಮೂಹದ ರೊಚ್ಚನ್ನು ಶಾಂತಗೊಳಿಸಲು ಮತ್ತು ಮರಣ ನಿಶ್ಚಿತವೆಂದು ತಿಳಿದಿದ್ದರೂ ಅದನ್ನೆದುರಿಸಲು ಧೈರ್ಯ ಮಾಡಿದ ಇಬ್ಬರು ಯುವಕರ ಕೃತ್ಯವನ್ನು ಗೌರವಪರ ಶಬ್ದಗಳಲ್ಲಿ ಬಣ್ಣಿಸಿರುವರು. ಅವರು ಮರಣದಲ್ಲಿಯೆ ತಮ್ಮ ನಿಜ ಮಿತ್ರನನ್ನು ಕಂಡುಕೊಂಡರು. ಇಂಥ ಸ್ವಾರ್ಥತ್ಯಾಗ, ಪವಿತ್ರಕೃತ್ಯದ ಅಮೂಲ್ಯ ಮಹತ್ವವನ್ನು ಎಂಥ ಪರಿಹಾಸಕನೂ ಅಲ್ಲಗಳೆಯಲಾರನು. ಇಂಥ ಪ್ರತಿಯೊಂದು ಸ್ವಾರ್ಥತ್ಯಾಗವು ಯಶಸ್ಸಿನಲ್ಲಿ -ಶೋಕೆಯ- ಕೊನೆಗೊಂಡರೆ ಅದು ಅಣಕ ಸ್ವಾರ್ಥತ್ಯಾಗವೆನಿಸುವದು. ಇಂಥ ಉದಾಹರಣೆಗಳು ಸಾಕಷ್ಟು ಹೆಚ್ಚಾದರೆ ಧರ್ಮದ ಹೆಸರಿನಲ್ಲಿ ನಡೆಯುವ ಈ ವಿಚಾರಹೀನ ಹತ್ಯಾಕಾಂಡವು ನಿಲ್ಲುವುದೆಂಬುದೆ, ಇದರಿಂದ ಹೊರಡುವ ನೀತಿ ಭೋಧೆ. ಅದರಿವಂಚನೆ, ವಿಡಂಬಕ ಶೌರ್ಯ ವಿರಬಾರದೆಂಬುದು ಅತ್ಯವಶ್ಯಕ ಶರ್ತಾಗಿದೆ. ಮೋ. ಕ. ಗಾಂಧಿ

ತಪ್ಪು

ಅನೇಕ ಸ್ಥಳಗಳ ಕಾಂಗ್ರೆಸ್ಸಿಗರು ಗಾಂಧಿಜಯಂತಿ ಉತ್ಸವಕ್ಕಾಗಿ ನಿಧಿ ಸಂಗ್ರಹಿಸಿದರೆಂದು ಮದ್ರಾಸದಿಂದ ಪತ್ರ ಲೇಖಕರೊಬ್ಬರು ಬರೆಯುತ್ತಾರೆ. ಜನರು ಮುಕ್ತಹಸ್ತದಿಂದ ಧನ ಸಹಾಯ ಮಾಡಿದರು. ಆದರೆ ಆ ಹಣವನ್ನು ಹೇಗೆ ವೆಚ್ಚ ಮಾಡಲಾಯಿತೆಂಬ ಲೆಕ್ಕ ಪತ್ರವನ್ನು ಪರಿಶೋಧಕರಿಂದ ತಪಾಸು ಮಾಡಿಸಿಲ್ಲ,ಮತ್ತೂ ಆ ಹಣವೆಂತು ವೆಚ್ಚಮಾಡಲ್ಪಟ್ಟಿತೆಂಬುದನ್ನೂ ಜನ ಅರಿಯರು.

ಇದು ನಿಜವಿದ್ದರೆ ಸಂಪೂರ್ಣ ತಪ್ಪು. ಕಾಣಿಕೆಯೆಂದು ಕೊಡಲಾದ ಹಣವೆಲ್ಲ ಸಾರ್ವಜನಿಕರದು ಇಂಥ ಹಣವೆಲ್ಲ ಸಾರ್ವಜನಿಕರ ವಿಶ್ವಸ್ತ ನಿಧಿಯೆಂದು ಗಾಂಧಿಜಿ ಮೇಲಿಂದ ಮೇಲೆ ಹೇಳುತ್ತ ಬಂದಿರುವರು. ಅದನ್ನು ಜೋಕೆಯಿಂದ ಇಟ್ಟುಕೊಂಡು ಸಾರ್ವಜನಿಕರ ಕಲ್ಯಾಣ ಕಾರ್ಯದಲ್ಲಿ ವ್ಯಯ ಮಾಡಬೇಕು. ಪ್ರತಿಯೊಂದು ಪೈಯ ಲೆಕ್ಕವನ್ನು ಕೂಡ ಇಡಬೇಕೆಂದು ಬೇರೆ ಹೇಳುವ ಅವಶ್ಯಕತೆ ಇಲ್ಲ.

ಶ್ರೀಜವಹರಲಾಲ್ ಪಾರಾಯಗೊಂಡರು

ಪಂಡಿತ ಜವಹರಲಾಲರು ಸರಹದ ಪ್ರಾಂತದ ಖಾನ ಸೋದರರೊಡನೆ ಸಂಚಾರಕ್ಕೆ ಹೊರಟಾಗ ಗುಡ್ಡಗಾಡಿನ ಜನರು ಕಲ್ಲುಬೀರಿ ಗುಂಡಿನಮಳೆ ಕರೆದ ಕಾರಣ ಪಾರಾಯಗೊಂಡರೆಂದು ತಿಳಿದು ಬಂದಿದೆ.

ಕರುಣಾಕೃತ್ಯ

ಅಜಾದ ಹಿಂದ ಸೈನಿಕನಾಗಿದ್ದ ಪಠಾಣನೊಬ್ಬನು ಈಗೊಂದು ಕಾರಖಾನೆಯಲ್ಲಿ ಕೆಲಸ ಮಾಡುತಿರುವನು. ೧೦ ವರುಷ ವಯಸ್ಸಿನ ಹುಡುಗನೊಬ್ಬನನ್ನು ಳಿಸಲು ಅವನು ಪ್ರಯತ್ನಿಸಿದನು. ಅವನ ಪ್ರಾರ್ಥನೆ ನಿರರ್ಥಕವಾಯಿತು. ದಾಳಿಗಾರರು ಆ ಹುಡುಗನನ್ನೂ ಪಠಾಣನನ್ನೂ ಕೂಡಿಯೆ ಇರಿದರು. ಹುಡುಗ ಸತ್ತನು. ಪಠಾಣನು ಬದುಕಿರುತ್ತಾನೆ ಮರಣ ಹೊಂದಿದ ಹುಡುಗನ ತಂದೆಯು ಪಠಾಣನಶೌರ್ಯಕ್ಕಾಗಿ ೪೦೦೦ ರೂಪಾಯಿಗಳ ಪಾರಿತೋಷಕ ಕೊಡ ಬಯಸಿದನು. ತನ್ನ ಕರ್ತವ್ಯ ಮಾಡಲು ಪ್ರಯತ್ನಿಸಿದೆನೆಂದು ಹೇಳಿ ಆ ಪಠಾಣನು ಆ ಪಾರಿತೋಷಕವನ್ನು ನಿರಾಕರಿಸಿದನು. ತೆಗೆದುಕೊಳ್ಳಲಿಲ್ಲ. ಇಂಥ ಉದಾಹರಣೆಗಳು ಹೆಚ್ಚುವವೋ?

ಹೊಸದಿಲ್ಲಿ ಮೋ. ಕ. ಗಾಂಧಿ

ಕೂಡ್ಲಿಗೆ
ತರುಣ ಸಂಘದ ಸ್ಥಾಪನೆ

ಕಳೆದವಾರ ಕೊಟ್ಟೂರಿನ ಶ್ರೀಮನ್ ಟಿ.ಯಸ್. ಗುರುಲಿಂಗಪ್ಪನವರು **ನೆಹರೂ ತರುಣಸಂಘದ** ಉದ್ಘಾಟನಾ ಸಮಾರಂಭವನ್ನು ಜರುಗಿಸಿದರು. ಶ್ರೀ ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಸಭೆಯು ನಡೆದು ಸಂಘದ ಉದ್ದೇಶಗಳು ವರದಿಯನ್ನು ಕುರಿತು ಕಾರ್ಯದರ್ಶಿಗಳು ವಿವರಿಸಿದರು. ಈ ಕೆಳಗಿನ ಅಧಿಕಾರೀವರ್ಗದವರು ಆರಿಸಲ್ಪಟ್ಟರು. ಅಧ್ಯಕ್ಷರು:- ಶ್ರೀ ಬಿ. ಯಚ್. ವಾಮದೇವಶರ್ಮ. **ಉಪಾಧ್ಯಕ್ಷ**. ಕೆ. ಸಿದ್ದರಾಮನಗೌಡ. **ಕಾರ್ಯದರ್ಶಿ**- ಎಂ. ಎಂ. ಕೊಟ್ರಯ್ಯ ಖಜಾಂಚಿ ಕೆ ಪ್ರತಾಪಸಿಂಗ್, ಸಂಘಕ್ಕೆ ಎಲ್ಲರೂ ಯಶಸ್ಸನ್ನು ಕೋರಿ, ಮಂಗಳಗೀತೆ ವಂದೇ ಮಾತರಂ ಗಳಿಂದ ಸಭೆಯು ಮುಗಿಯಿತು.

ಬಳ್ಳಾರಿ

ಮದ್ಯನಿಷೇಧ ಶಾಸನ ಖಾತೆಗೆ ಸಂಬಂಧಿಸಿದ ಅಧಿಕಾರಿಗಳು, ಸರ್ಕಲ್ ಕಾಂಗ್ರೆಸಮಿತಿ ಉಪಾಧ್ಯಕ್ಷರಾದ ಶ್ರೀ ಕಲ್ಲಣಿ ಶಿವರುದ್ರನ್ನ ನವರೊಂದಿಗೆ ಬಳ್ಳಾರಿ ತಾಲ್ಲೂಕು ವೇಣೀವೀರಾಪುರಕ್ಕೆ ಹೋಗಿ 5 ಗ್ಯಾಲನ್ .I. D ಸಾರಾಯಿಯನ್ನೂ ಮತ್ತು ತಯಾರಿಸುವ ಇತರ ಉಪಕರಣಗಳನ್ನೂ ವಶಪಡಿಸಿಕೊಂಡು ಬೋಯಿ ಅಕ್ಕನಾಗಮ್ಮನೆಂಬ ಹೆಸರುವಾಸಿ ತುಂಟಳನ್ನು ಸೆರೆಹಿಡಿದರು ಆಕೆಗೆ ೪ ತಿಂಗಳು ಸಾದಾ ಶಿಕ್ಷೆಯಾಯಿತು.

ತೂಲಹಳ್ಳಿ:- ಕಳೆದವಾರ ನಡೆದ ಮದ್ಯ ನಿರೋಧಕ ಸಭೆಯಲ್ಲಿ ಶ್ರೀ ಹೆಚ್. ಬಸಪ್ಪನವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮತ್ತು ಫಿರ್ಕಾ ಅಧಿಕಾರಿಗಳೂ ಜನತೆಯ ಪರವಾಗಿ ಶ್ರೀ ಸಿದ್ದಲಿಂಗನಗೌಡ, ರುದ್ರಪ್ಪ ಭೀಮಸೇನರಾವ್, ಪಂಚಾಕ್ಷರ ಶರ್ಮರು ಭಾಷಣವಿತ್ತು ಶಾಸನವನ್ನು ಯಶಶ್ವಿ ಮಾಡಲು ಕೇಳಿದರು. ನಿರೋಧ ಸಮಿತಿಗೆ ಸಲಹೆ ಸೂಚನೆಗಳನ್ನು ಕೊಡಲಾಯಿತು

ಹೆಬ್ಬಾಳ ತರುಣ ಸಂಘದವರು ಹೀಗೆ ಬರೆಯುತ್ತಾರೆ:

ಗುಡಗೇರಿ ತಾ|| ಹೆಬ್ಬಾಳಗ್ರಾಮದಲ್ಲಿ 15 ನೆಯ ದಿನಾಂಕ ಶ್ರೀ ಚನ್ನವೀರನಗೌಡ ಪಾಟೀಲರ ಅಧ್ಯಕ್ಷತೆಯಲ್ಲಿ ಸಭೆಯು ನಡೆದು ಬುಧಗಾಂವ ಸಂಸ್ಥಾನದ ಪ್ರಜಾ ಪರಿಷತ್ತಿನ ಧ್ಯೇಯ, ಕಾರ್ಯ ಪ್ರಣಾಲಿಯನ್ನು ತಿಳಿಸಿದರು. ಶ್ರೀ ಘೆನಸಿ, ಸಂಸ್ಥಾನೀ ರಾಜ್ಯ ಭಾರಗಳನ್ನು ಟೀಕಿಸಿ ಪ್ರಜಾಸತ್ತಾತ್ಮಕ ರಾಜ್ಯಭಾರವು ಕಾರ್ಯರೂಪಕ್ಕೆ ಬರಬೇಕೆಂದರು. ಅಧ್ಯಕ್ಷರ ಸಮಾರೋಪ ಭಾಷಣವಾಗಿ ವಂದೇ ಮಾತರಂದಿಂದ ಸಭೆಯು ಜಯವಾಯಿತು.

ಬೆಣ್ಣೆಕಲ್ಲು (ಕೂಡ್ಲಿಗಿ ತಾಲೂಕು)

ಗ್ರಾಮ ಸಮಿತಿಗಳ ಬೇಡಿಕೆ.

ಆಹಾರ ಬಟ್ಟೆ ಪರಿಸ್ಥಿತಿ ಸುಧಾರಿಸಲು ತೀರ್ಮಾನಗಳು

19 ನೆಯ ತಾ॥ ಶ್ರೀ ಬಸೆಟ್ಟಿ ಮುದುಕಪ್ಪನವರ ಧ್ಯಕ್ಷತೆಯಲ್ಲಿ ಕೂಡ್ಲಿಗಿ ಫಿರ್ಕಾ ಗ್ರಾಮಸಮಿತಿಸಭೆಯು ಸಮಾವೇಶವಾಗಿ ಕೆಲ ಮುಖ್ಯ ವಿಷಯಗಳ ಬಗ್ಗೆ ಏಕಗ್ರೀವ ತೀರ್ಮಾನಗಳನ್ನು ಮಾಡಿತು.

1) ಸರ್ಕಾರದವರಿಂದ ಗ್ರಾಮಸಮಿತಿಗಳ ಕಾರ್ಯಾಚರಣೆಯನ್ನು ಕುರಿತು ನಿಯಮ ನಿಬಂಧನೆಗಳು ಏರ್ಪಡದೆ ಅವುಗಳ ಸುರಕ್ಷಣೆಗೆ ಭಂಗ ಬಂದಿರುವ ಕಾರಣ ಶೀಘ್ರವಾಗಿ ಸರ್ಕಾರದವರು ಅವನ್ನು ಕಳುಹಿಸಬೇಕೆಂದು ಬೇಡುತ್ತದೆ.

2) 1356 ನೆಯ ಫಸಲಿಯ ಬಿಳಿಯ ಸಂಗ್ರಹವು ಅಯಾ ಗ್ರಾಮಸಮಿತಿಯವರಿಂದಲೇ ನಡೆದು ವಿನಿಯೋಗವಾಗತಕ್ಕದ್ದು.

3) ಈಗಕೊಟ್ಟಿರುವ 12 ಔನ್ಸು ರೈತರಿಗೆ ಸಾಲುವುದಿಲ್ಲ. ಪರಿವಾರ, ಅತಿಥಿಗಳಿಂದ ಕೂಡಿದ ಕಾರಣ ರೈತರಿಗೆಲ್ಲಾ ಕನಿಷ್ಟಕ್ಕೆ ದೊಡ್ಡವರಿಗೆ 1 ಸೇರು ಚಿಕ್ಕವರಿಗೆ ½ ಸೇರು ಕೊಡುವಂತಾಗಬೇಕು.

4) ಪ್ರತಿಗ್ರಾಮಸಮಿತಿಗೆ ಪ್ರತಿವಾರವೂ ಬೇಕಾದ ಕೋಟಾ ಅಕ್ಕಿ, ಜೀಮ್ಮಿಎಣ್ಣೆ, ಗೋಧಿ, ಸಕ್ಕರೆ, ಜೋಳ ನಗರಗಳಿಗೆ ಕೊಟ್ಟಂತೆ ಕೊಡಲು ಬೇಡುತ್ತದೆ.

5) ಸರ್ಕಾರದವರೇರ್ಪಡಿಸಿರುವ ಎ. ಬಿ. ಸಿ ತರಗತಿಯ ನಿಯಮಗಳಿಂದ ಬಡವ, ಬಲ್ಲಿದವ ಎಂಬ ಭೇದವು ಹೊರಸೂಸಿದಂತಾಗಿದೆ. ರೈತನ ಜೀವನ ಮಟ್ಟವನ್ನೇರಿಸಲು ಫಲವನ್ನು ಬೆಳೆಸಲು ಪ್ರೋತ್ಸಾಹ ಕೊಡಲು ಈವರ್ಗ ಭೇದವನ್ನು ಹೋಗಲಾಡಿಸಲು ಕೋರುತ್ತದೆ.

6) 1356 ನೇ ಬೆಳೆಕಟಾವಣೆಯನ್ನು ನ್ಯಾಯಶೀತಿಯಿಂದ ಇತ್ಯರ್ಥಪಡಿಸುವ ಕಾರ್ಯವು ಗ್ರಾಮಸಮಿತಿ ಪಂಚರ ಸಮಕ್ಷವಾಗಬೇಕು,

7) ಬಟ್ಟೆಯ ಕೊರತೆಯು ಹಳ್ಳಿಗಳಲ್ಲಿ ಭಯಂಕರ ವಿರುವಕಾರಣ ಆಯಾವೂರಿನ ಗ್ರಾಮಸಮಿತಿಗಳವರಿಗೆ ಜನಸಂಖೆಯ ದಾಮಾಷಾ ಪ್ರಕಾರ ಬಟ್ಟೆಯನ್ನು ಹಂಚುವ ಏರ್ಪಾಟಾಗಬೇಕೆಂದು ಈಸಭೆಯು ಅಭಿಪ್ರಾಯಪಡುತ್ತದೆ.

ಈತೀರ್ಮಾನಗಳನ್ನು ಎಲ್ಲಾ ಅಧಿಕಾರಿಗಳಿಗೂ ಕಳುಹಿಸಲಾಗಿದೆ.

ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಸಮಿತಿ (ಆಂಧ್ರ)

1946-47 ರ ಅಧಿಕಾರಿ ವರ್ಗದ ಚುನಾವಣೆ—

ಅಧ್ಯಕ್ಷೆ— ಶ್ರೀ ಟಿ. ಜಿ. ತಿಮ್ಮಯ್ಯ

ಉಪಾಧ್ಯಕ್ಷ—,, ಕೆ. ಬಾಲರಾಮಶಿಂಗ್.

ಕಾರ್ಯದರ್ಶಿಗಳು,

1) ಎನ್. ರಾಮಕೃಷ್ಣರೆಡ್ಡಿ 2) ಎಂ. ತಿಪ್ಪೇಸ್ವಾಮಿ.

ಕಾರ್ಯಕಾರೀ ಸಮಿತಿ,

ಶ್ರೀ ಕೆ. ಶ್ರೀನಿವಾಸ್‌ರಾವ್ ಲಕ್ಷ್ಮಿಕಾಂತರೆಡ್ಡಿ, ನೇಮಕಲ್ಲು ಶೀತಾರಾಮರೆಡ್ಡಿ ಎಂ. ವೆಂಕಟರಮಣಪ್ಪ ವೀರಪ್ಪರೆಡ್ಡಿ ಶಾಲೆ ಪರಮೇಶ್ವರಪ್ಪ, ನ್ಯೆ. ರಂಗರಾವು.

ಶ್ರೀ ಕೈಪಲಾನಿಯವರ ಉಪದೇಶ

ಕೇಂದ್ರ ಸರ್ಕಾರದವರಾಗಲಿ ಪ್ರಾಂತೀಕ ಸರ್ಕಾರದವರಾಗಲಿ ಸಹಾಯಮಾಡುವ ಕಡೆಗೆ ಲಕ್ಷ್ಯ ಕೊಡದೆ ನಿಮ್ಮ ಸ್ವಯಂಬಲದ ಮೇಲೆ ನಿಲ್ಲಿರಿ. ನೌಖಾಲಿ ತರುಣ ಜಮೀಂದಾರರಾದ ಶ್ರೀ ರಾಜೇಂದ್ರ ಲಾಲರಾಯರು ಹೋರಾಡಿ ಶೂರತನದಿಂದ ಸತ್ತಂತೆ ಸಾಯುವುದನ್ನು ಕಲಿತಾಗಲೇ ಈ ಹಿಂದೂ ಮುಸಲ್ಮಾನ ಜಂಗೆಗಳಿಂದ ವಾರಾಗಬಲ್ಲೆವು ಎಂದು ಕಾಂಗ್ರೆಸ್ ಅಧ್ಯಕ್ಷರು ಬಂಗಾಳಿಗಳಿಗೆ ಉಪದೇಶ ಕೊಟ್ಟಿದ್ದಾರೆ.

ನವಭಾರತಕ್ಕೆ ಚಂದಾದಾರರಾಗಿರಿ

Narasepalli Channappa Hindu Boys Home Bellary

ನರಸೇಪಲ್ಲಿ ಚನ್ನಪ್ಪ ಹಿಂದೂ ವಿದ್ಯಾರ್ಥಿ ನಿಲಯ ಬಳ್ಳಾರಿ.

ತೃತೀಯ ವಾರ್ಷಿಕೋತ್ಸವವು 19 ನೆಯ ತಾರೀ ಸಾಯಂಕಾಲ ಕಲೆಕ್ಟರ ಅನಂತರಾಮನ್‌ರವರು ಸಕಾಲಕ್ಕೆ ಬರದ ಕಾರಣ ಶ್ರೀ ಬಿ. ಭೀಮರಾವ್ ಎಂ. ಎಲ್. ಶಿ. ಯವರು ಅಧ್ಯಕ್ಷತೆಯನ್ನು ವಹಿಸಿ, ಬಾಲಕರಿಗೆ ಹೊದಿಕೆ ಹಾಸಿಗೆಗಳನ್ನು ಪ್ರದಾನ ಮಾಡಿದರು. ಹಾಸ್ಟೆಲ್‌ಗಳಲ್ಲಿರುವ ಹರಿಜನಬಾಲಕರಿಗಾಗಿ, ಒಂದು ಬ್ಲಾಂಕೆಟ್, ತಟ್ಟೆ, ಥಾಲಿ ಜಾಪೆ, ಕಲೆಕ್ಟರವರೂ, ಶ್ರೀ ನೂಜಾನಿ ಸೊಮಪ್ಪನವರು ಶರ್ಟ್, ಷಾರ್ಟ್ (ಎನ್ಯಿಗನೂರು ಸೋಸೈಟಿ ಮೂಲಕ ಕೊಟ್ಟಿದ್ದರು. ವಾರ್ಷಿಕ ವರದಿಯ ಮುಖ್ಯಾಂಶಗಳನ್ನು ಶ್ರೀ ಡಿ. ಯಲ್. ಗಂಗಾಧರ ಶೆಟ್ಟಿಯವರು ಓದಿದ ನಂತರ ಶ್ರೀ ಭೀಮರಾಯರು ಹರಿಜನೋದ್ಧಾರದಲ್ಲಿ ಎಲ್ಲರೂ ಆಸಕ್ತಿ ವಹಿಸಬೇಕೆಂದು ಹೇಳಿದರು. ಶ್ರೀ ಕೇಶವರಾಯರೂ, ಕಾರ್ಯದರ್ಶಿಗಳೂ ಎಲ್ಲರನ್ನು ವಂದಿಸಿದರು.

ವರದಿಯ ಮುಖ್ಯಾಂಶಗಳು— ಶ್ರೀ ಡಿ. ಯಲ್. ಗಂಗಾಧರಶೆಟ್ಟಿ ಮತ್ತು ಅವರ ಸಂಗಡಿಗರು ಹರಿಜನ ಬಾಲಕರಿಗೆ ಸಹಾಯ ಮಾಡುವ ಉದ್ದೇಶದಿಂದ 1941-42 ರಲ್ಲಿ 10 ಮಂದಿ ವಿದ್ಯಾರ್ಥಿಗಳಿಂದ ಜಿಲ್ಲಾ ಹರಿಜನ ಸೇವಕಸಂಘದಾಧಿಪತ್ಯದಲ್ಲಿ ಒಂದು ಹರಿಜನ ಹಾಸ್ಟೆಲ್ ಪ್ರಾರಂಭಿಸಿದರು. ಬರ ಬರುತ್ತಾ ಅದು ಬೆಳೆದು ಈಗ 30 ರ ಸಂಖ್ಯೆಗೆ ಬಂದಿದೆ. ಭೂತ ಪೂರ್ವ ಅಧ್ಯಕ್ಷರಾಗಿ ದಿವಂಗತರಾದ ರಾಘವಾಚಾರ್ಯರು ತಂದೆಯ ಶ್ರಾದ್ಧದದಿನ ಹರಿಜನ ಬಾಲಕರಿಗೆ ಅನ್ನ ಸಂತರ್ಪಣೆಮಾಡುತ್ತಿದ್ದರು. ಶ್ರೀ ರಾಮಂಜುಲು ಯುಡೂರವರೂ ಹಾಗೆ ಮಾಡುತ್ತಿದ್ದರು.

ಬಳ್ಳಾರಿ ಜಿಲ್ಲಾ ಹರಿಜನ ಸೇವಕ ಸಂಘಾಧ್ಯಕ್ಷರಾಗಿ ಈವರ್ಷ ಸರ್ವಾನುಮತದಿಂದ ಆರಿಸಲ್ಪಟ್ಟ **ಶ್ರೀ ಟಿ. ಜಿ. ಸತ್ಯನಾರಾಯಣ** ಇವರು ಸುಮಾರು ಎರಡು ಸಾವಿರ ರೂಪಾಯಿ ಬೆಲೆ ಬಾಳುವ ಒಂದು ಸ್ಥಳವನ್ನು ಹಾಸ್ಟೆಲ್ ಭವನ ನಿರ್ಮಾಣಕ್ಕಾಗಿ ಉಚಿತಾರ್ಥವಾಗಿ ಕೊಟ್ಟಿರುವುದಲ್ಲದೆ ನಿತ್ಯ ಖರ್ಚುಗಳಿಗಾಗಿ ರೂ, 600—0—0 ಸಾಲಕೊಟ್ಟಿರುತ್ತಾರೆ ಇವರಿಗೆ ಇನ್ನೂ ರೂ, 400—0—0 ಕೊಡಬೇಕು. ರಾವ್‌ಸಾಹೇಬ ಶ್ರೀ ವಿಠಲಶೇಷಪ್ಪ ಶ್ರೇಷ್ಟಿಯವರು ಹಾಸ್ಟೆಲ್‌ಗೆ 400 ರೂಪಾಯಿ ದಾನ ಪೂರ್ವಕ ಕೊಟ್ಟಿರುವರು ಭವನ ನಿರ್ಮಾಣಕ್ಕಾಗಿ ಎಷ್ಟೋ ಮಹನೀಯರು ವಾಗ್ದಾನ ಮಾಡಿರುವರು. ಬಾಲಕರು ಬುದ್ಧಿವಂತರಾಗಿ ಪ್ರತಿವರ್ಷವೂ ತರಗತಿಗಳಲ್ಲಿ ಪಾಸಾಗುತ್ತಿರುವರು. ಬಾಲಕರಿಗೆ ಉಚಿತ ಪ್ರಯಾಣ ಸೌಕರ್ಯವನ್ನೊದಗಿಸಿದ M. G, Bros., B.U. T.S. ಕಂಪನಿಯವರಿಗೂ ಉಚಿತವಾಗಿ ವೈದ್ಯಕೀಯ ಕೆಲಸಮಾಡುತ್ತಿರುವ ಡಾ. ಎಸ್. ಕೆ. ಹನುಮಂತರಾಯರಿಗೂ ವಂದನೆ. ಹಾಸ್ಟೆಲ್‌ಗೆ ಸಾಲವಾಗಿದೆ. ಎಲ್ಲರೂ ಸಹಾಯಮಾಡಬೇಕೆಂದು ಶ್ರೀ ಡಿ. ಯಲ್. ಗಂಗಾಧರಶೆಟ್ಟಿಯವರು ಕೋರುತ್ತಾರೆ.

ಜಾತೀಯ ಗಲಭೆ ಪರಿಸ್ಥಿತಿ.

ಬ್ರಿಟಿಷ್ ಶಿಷ್ಟಮಂಡಲ ಬರಲಿದೆ.

ಬ್ರಿಟಿಷ್ ಪಾರ್ಲಿಮೆಂಟ್ ಲಿಬರಲ್ ಪಾರ್ಟಿ ಮುಖಂಡರಾದ ಕ್ಲಿಮೆಂಟ ಡೇವಿಸ್‌ರ ನೇತೃತ್ವದಲ್ಲಿ ಪಾರ್ಲಿಮೆಂಟಿನ ಆರು ಸದಸ್ಯರನ್ನೊಳಗೊಂಡ ಒಂದು ಶಿಷ್ಟ ಮಂಡಲವು ಹಿಂದೂಸ್ಥಾನದಲ್ಲಿನ ಜಾತೀಯ ಗಲಭೆಗಳ ಸತ್ಯಾಂಶಗಳನ್ನರಿಯಲು ಈವಾರಬರಲಿದ್ದಾರೆ. ಬ್ರಿಟಿಷ್ ಜನತೆಯು ಜಾತೀಯಗಲಭೆ ಮತ್ತು ರಕ್ತ ಪ್ರವಾಹದಿಂದ ಬಹಳ ವಿಷಂಚನೆಗೊಳಗಾಗಿದೆಯೆಂದು ಶಿಷ್ಟಮಂಡಲದ ಕೆಂಡಾಲರವರು ಹೇಳಿದರು. ತಮ್ಮ ಸಂಚಾರದಲ್ಲಿ ಹಿಂದು ಮುಸಲ್ಮಾನರನು ಮುಖಂಡರನ್ನುಕಂಡು ಪರಿಸ್ಥಿತಿ ತಿಳಿಯಲಿದ್ದಾರೆ.

20

The Rayalaseema Bank Limited, Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— (ಬಳ್ಳಾರಿಜಿಲ್ಲಾ **ಹಡಗಲಿ, ಕೂಡ್ಲಿಗೆ,** ಚಿತ್ತೂರುಜಿಲ್ಲಾ **ನಾಗರಿಯಲ್ಲಿ**
ನಮ್ಮ ಶಾಖೆಗಳನ್ನು ವ್ಯಾರಂಭಿಸಿದೆವೆಂದು ತಿಳಿಸಲು ಹರ್ಷಿಸುತ್ತೇವೆ.

ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ.
ಅನಂತಪುರ:- ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾನಿಡಿ, ತಿಮ್ಮನಚೆರ್ಲ, ಉರವಕೊಂಡ.
ಚಿತ್ತೂರು:- ಚಿತ್ತೂರು, ಮದನಪಲ್ಲಿ, ತಿರುಪತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ. **ಕಡಪ:-** ರಾಜಂಪೇಟ

ಫಿಕ್ಸ್‌ಡ್ ಡಿಪಾಜಿಟ್‌ನ ಬಡ್ಡೀದರ:- 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:- 3%.

ಬಿ ವಿ. ಶೇಷಗಿರಿರಾವ್, **ಕಾರ್ಯದರ್ಶಿ.**

ನೈಟ್ ಕ್ವೀನ್ ಹೇರಾಯಿಲ್

ಕೂದಲಿನ ಸೌಂದರ್ಯ, ಮೃದುತ್ವವನ್ನು ಕಾಪಾಡಿ ಮೆದುಳನ್ನು ತಂಪು ಮಾಡುವುದು. ನಿತ್ಯದ ಉಪಯೋಗದಿಂದ ಕೂದಲಿನ ಪಟುತ್ವ ಧೃಡತ್ವ ಹೆಚ್ಚುವುದು. ಕೇಶ ತೈಲಗಳಿಗೆಲ್ಲಾ ಇದು ರಾಣಿ ಇಂದೇ ಕೊಂಡು ಉಪಯೋಗಿಸಿದರೆ ಇದರ ಸದ್ಗುಣಗಳನ್ನು ಅರಿಯುವಿರಿ. ಎಲ್ಲಾ ಷಾಪುಗಳಲ್ಲಿ ದೊರೆಯುತ್ತದೆ.

ಹಿಂದೂಸ್ತಾನಿಯು ರಾಷ್ಟ್ರಭಾಷೆ

ಇದನ್ನು ತಪ್ಪದೆ ಕಲಿಯಿರಿ.

ಪ್ರಾರಂಭಿಕ ಪರೀಕ್ಷೆಗಳಾದ ಪ್ರಾಥಮಿಕ- ಮಧ್ಯಮ ರಾಷ್ಟ್ರಭಾಷೆ, ಉನ್ನತ ಪರೀಕ್ಷೆಗಳಾದ ಪ್ರವೇಶಿಕ, ವಿಶಾರದ- ಪ್ರಚಾರಕ, ಮದ್ರಾಸ್ ವಿಶ್ವವಿದ್ಯಾಲಯದ ಹಿಂದೀ- ವಿದ್ವಾನ್ ಪರೀಕ್ಷೆಗಳ ಮಾಹಿತಿಯನ್ನು ಉಚಿತವಾಗಿ ಕೊಟ್ಟು- ಶಿಕ್ಷಣದ ಏರ್ಪಾಟಿಗೆ ಸಲಹೆಗಳನ್ನು ಕೊಡಲಾಗುವುದು- ಎಲ್ಲಾವುಸ್ತಕಗಳು ದೊರೆಯುತ್ತವೆ. **ಬಹಳ ಸುಲಭ ಭಾಷೆ-ಅತ್ಯಲ್ಪಕಾಲದಲ್ಲಿ ಕಲಿಯಬಹುದು.** ಟಿ ಬಿ. ಕೇಶವರಾವ್
ಹಿಂದೀಪ್ರಚಾರಕ, ಬಳ್ಳಾರಿ

NAVA BHARAT, BELLARY

Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು. Subscription Rates.

ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

SRI..... ....

....

....

Printed at Krishna Press Bellary QH NO. B 17 FOR (Q.H. No. B-5)
Edited & Published by T. B. KESHAVA RAO.

ಜೈಹಿಂದ್ Reg. No.M. 4746

ಸಮಾಚಾರ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೫ ಸಂಚಿಕೆಗಳ | ಬಳ್ಳಾರಿ ನವಂಬರು ೪ ಸೋಮವಾರ ೧೯೪೬ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವು.

ಬಳ್ಳಾರಿ ದೇವಸ್ಥಾನಗಳಲ್ಲಿ ಹರಿಜನ ಪ್ರವೇಶ.

ಬಳ್ಳಾರಿ ಕೌಲುಬಜಾರದ ಶ್ರೀ ಕೋದಂಡ ರಾಮಸ್ವಾಮಿ, ಗಣೇಶ ದೇವಾಲಯಗಳಲ್ಲಿ 28 ನೆಯ ತಾ॥ ಹರಿಜನರ ಪ್ರವೇಶಕ್ಕೆ ಹಿಂದೂಗಳು ಅವಕಾಶ ನೂಡಿಕೊಟ್ಟರು. ಬಳ್ಳಾರಿ ಜಿಲ್ಲೆಯಲ್ಲಿ ಪ್ರಥಮವಾಗಿ ಹರಿಜನರಿಗೆ ದೇವಸ್ತಾನ ಪ್ರವೇಶವು ಸೋಮವಾರ 28ನೆಯ ದಿನಾಂಕ ಮದ್ರಾಸ್ ನ್ಯಾಯಮಂತ್ರಿ ಶ್ರೀ ಕೆ. ಭಾಷ್ಯಂ, ಆರೋಗ್ಯಮಂತ್ರಿ ಶ್ರೀಮತಿ ರುಕ್ಮಿಣೀ ಲಕ್ಷ್ಮೀಪತಿಯವರಿಂದ ನೆರವೇರಿಸಲ್ಪಟ್ಟಿತು.

ಬಳ್ಳಾರಿಯ ಸುಮಾರು 500 ಹರಿಜನರು ಶುಭ್ರವಸ್ತ್ರಧಾರಿಗಳಾಗಿ ತಮ್ಮ ತಮ್ಮ ಕೇರಿಯ ಭಜನೆಗಳೊಂದಿಗೆ, ಕಾಗ್ರೆಸ್ ಧ್ವಜಗಳೊಡನೆ ಕೌಲುಬಜಾರದ ದೇವಸ್ತಾನದ ಮುಂಬೆ ಕೂಡಿದರು. ಸಾಯಂಕಾಲ 5 ಘಂಟೆಗೆ, ಮಂತ್ರಿಗಳಾದ ಶ್ರೀ ಕೆ. ಭಾಷ್ಯಂರವರೂ, ಶ್ರೀಮತಿ ರುಕ್ಮಿಣೀ ಲಕ್ಷ್ಮೀಪತಿಯವರು ಬಂದು ಹರಿಜನರನ್ನು ಕೈ ಹಿಡಿದು ಒಳಕ್ಕೆ ಕರೆದು ಕೊಂಡು ಹೋದರು.

ವ್ಯಾಧ್ಯನಾನಂತರ ಶ್ರೀಸುಂದರರಾಜು ನಾಯುಡು ಇವರು ಧರ್ಮ ಕರ್ತರ ಪರವಾಗಿ ಹೀಗೆ ಹೇಳಿದರು. "ನಾವು ನಿನ್ನೆ ಮಧ್ಯರಾತ್ರಿಯವರೆವಿಗೂ ಚರ್ಚಿಸಿ ಹಿಂದೂಸ್ತಾನದಲ್ಲಿ ಹಿಂದೂ ಸಮಾಜವು ಸಧ್ಯಕ್ಕೆ ಸಂಕಟ ಪರಿಸ್ಥಿತಿಗೆ ಸಿಲುಕಿದೆ. ನಮ್ಮ ಸಮಾಜದ ಧಾರ್ಮಿಕ ತತ್ವಗಳು ಉದಾತ್ತವಾಗಿದ್ದು, ಇಂಥಾ ಅನಿಷ್ಟ ಕಾರಕ ಭೇದಗಳಿಗೆ ಎಡೆಗೊಡಬಾರದು. ಇಷ್ಟು ದಿವಸ ಮಾಡಿದ ಪಾಪವೇಸಾಕು, ಇನ್ನುಮೇಲೆ ಎಲ್ಲಾ ವಿಷಯಗಳಲ್ಲೂ ಹರಿಜನರನ್ನು ಸೋದರರಂತೆ ನಡೆಸಕೊಳ್ಳಬೇಕಾದುದು. ನಮ್ಮ ಕರ್ತವ್ಯ" ವೆಂದು ಎಲ್ಲರೂ ನಿರ್ಣಯಕ್ಕೆ ಬಂದು ಹರಿಜನರ ಪ್ರವೇಶಕ್ಕೆ ಈ ದೇವಸ್ಥಾನದಲ್ಲಿ ಅವಕಾಶ ಕೊಡಬೇಕೆಂದು ತೀರ್ಮಾನಿಸಿದೆವು, ಮಂತ್ರಿಗಳಾದ ತಾವು ಈ ಶುಭ ಕಾರ್ಯವನ್ನು ನೆರವೇರಿಸಿದುದು, ಅತ್ಯಂತ ಅಭಿನಂದನೀಯ ಅಂಶವಾಗಿದೆ. ತಮಗೆ ಹೃತ್ಪೂರ್ವಕ ಅಭಿವಂದನೆ.

ನಂತರ ಶ್ರೀ ಭಾಷ್ಯಂರವರು ತಮ್ಮ ಮತ್ತು ಶ್ರೀಮತಿ ರುಕ್ಮಿಣೀ ಲಕ್ಷ್ಮಿಪತಿಯವರ ಪರವಾಗಿ ಮಾತಾಡುತ್ತಾ ಹೀಗೆ ಹೇಳಿದರು.

"ನನ್ನ ಜೀವನದಲ್ಲಿ ಇಂದು ಶುಭಪರ್ವವಾಗಿದೆ. ಯಾರನ್ನು ತುಚ್ಛರೆಂದು, ಅಸ್ಪೃಶ್ಯರೆಂದು ಗಣಿಸುತ್ತಿದ್ದೆವೋ. ಅಂಥಹವರು ಸಮಭಾವದಿಂದ ಸವರ್ಣೀಯರೊಡನೆ ಕಲೆತು ಇಂದು ಪುರಾತನ ದೇವಾಲಯವೊಂದರಲ್ಲಿ ಪ್ರವೇಶಮಾಡಿದರೆಂದರೆ, ಇದಕ್ಕಿಂತ ಉತ್ತಮ ಕಾರ್ಯವು ಬೇರೊಂದಿಲ್ಲ. ಗಾಂಧೀಜೀಯವರ ಮೂವತ್ತು ವರ್ಷಗಳ ಪರಿಶ್ರಮವು ಇಂದು ಫಲಿಸುತ್ತಿದೆ. ಮಾನವರನ್ನು ಮಾನವರಂತೆನೋಡಿಕೊಳ್ಳಬೇಕಾದುದು ನಮ್ಮಧರ್ಮ. ಹಿಂದೂಸಮಾಜದಲ್ಲಿ ಅಸ್ಪೃಶ್ಯತಾ ಕಳಂಕವು ಶೀಘ್ರವಾಗಿ ಹೋಗದಿದ್ದರೆ ಹಿಂದೂಸಮಾಜವೇ ನಾಶವಾಗುವುದು ನಿಮ್ಮ ಉದಾಹರಣೆಯು ಇತರರಿಗೆಲ್ಲಾ ಮಾರ್ಗ ದರ್ಶಕವಾಗಲಿ" ಎಂದು ಹೇಳಿದರು. ಶ್ರೀ ಟಿ. ಸುಬ್ರಹ್ಮಣ್ಯಂರವರು ಮಂತ್ರಿಗಳ ಭಾಷಣವನ್ನು ತರ್ಜುಮೆ ಮಾಡಿದರು. ಛಾಯಾಚಿತ್ರವು ತೆಗೆಯಲಾಯಿತು. ಮಂತ್ರಿಗಳು ಹೊರಟು ಹೋದರು.

ಇದೆಲ್ಲಾ ಆದನಂತರ ಶ್ರೀ ಕೇಶವರಾಯರು ಹರಿಜನರ ಪರವಾಗಿಯೂ, ಸಂಘದ ಪರವಾಗಿಯೂ ಎಲ್ಲರನ್ನು ವಂದಿಸಿ, ಹರಿಜನೋದ್ಧಾರ ಕಾರ್ಯದ ರೀತಿ ನೀತಿಗಳನ್ನು ವಿವರಿಸಿ ಎಲ್ಲರ ಸಹಕಾರ ಕೋರಿದರು. ದರ್ಮಕರ್ತರಾದ ಶ್ರೀ ಸುದರ್ಶನಂ ನಾಯುಡು, ಸುಮಿತ್ರಾನಾಯುಡು, ಹನುಮಂತರಾವ್ ನಾಯುಡು, ಮತ್ತು ಇತರ ಹಿಂದೂಯುವಕರು ಕೆಲವರು ಮಾತಾಡಿ ಹರಿಜನರು ಯಾವಾಗಲೂ ಹಿಂದೂ ಸಮಾಜದೊಡನೆ ಕಲೆತು ಇರಬೇಕೆಂದೂ, ಇದಕ್ಕೆ ಸಹಾಯ ನೂಡುವುದಾಗಿಯೂ ತಾವು ಭರವಸೆ ಇತ್ತರು. ಫಲಮಂತ್ರಾಕ್ಷತೆಗಳಾದನಂತರ ಈ ಸಮಾರಂಭವು ಮುಗಿಯಿತು. ಈ ಸಮಾರಂಭವು ಮುಗಿದು ಹರಿಜನರೆಲ್ಲಾ ತಮ್ಮ ತಮ್ಮ ಭಜನೆಗಳಿಂದ ಮನೆಗೆ ಹೋಗಲು ಹೊರಹೊರಟಾಗ **ಶ್ರೀ ಗಣೇಶ ದೇವಸ್ಥಾನದ** ಚಾಲಕರು ತಮ್ಮ ಬಾಗಿಲುಗಳನ್ನು ತೆರೆದರು. ಅದರಲ್ಲಿಯೂ ಪ್ರವೇಶವಾಯಿತು. ಹರಿಜನ ಸ್ತ್ರೀ ಪುರುಷರು ಸಂಭ್ರಮದಿಂದ ಇದನ್ನೆಲ್ಲಾ ಮುಗಿಸಿಕೊಂಡು ತಮ್ಮತಮ್ಮ ಮನೆಗಳಿಗೆ ತೆರಳಿದರು.

ಸಾರ್ವಜನಿಕ ಸಭೆ

ಶ್ರೀ ಭಾಷ್ಯಂರವರ ಭಾಷಣ

ಆರೋಗ್ಯ ಮಂತ್ರಿಗಳಾದ ಶ್ರೀ ಮತಿ ರುಕ್ಮಿಣೀಲಕ್ಷ್ಮೀಪತಿಯವರು ಲೇಡೀಸ್ ಕ್ಲಬ್‌ನಲ್ಲಿ ಸ್ತ್ರೀಯರು ಮುಂದೆ ಬಂದು ರಾಜಕೀಯಗಳಲ್ಲಿ ಭಾಗವಹಿಸತಕ್ಕದ್ದೆಂದೂ, ಸಮಾಜಸುಧಾರಣಾ ಕಾರ್ಯದಲ್ಲಿ ಸಹಾಯಮಾಡತಕ್ಕದ್ದೆಂದೂ ಹೇಳಿದರು,

ನ್ಯಾಯಮಂತ್ರಿಗಳಾದ ಶ್ರೀ ಕೆ. ಭಾಷ್ಯಂರವರು ಬಿ. ಡಿ. ಎ ಗ್ರಾವುಂಡದಲ್ಲಿ ಶ್ರೀ ಬಿ. ಭೀಮರಾಯರ ಅಧ್ಯಕ್ಷತೆಯಲ್ಲಿ ನೆರೆದ ಸಾವಿರಾರು ಜನಸಮೂಹಕ್ಕೆ ಮದ್ರಾಸ್ ಸರ್ಕಾರದ ಗ್ರಾಮೋದ್ಧಾರ ಕಾರ್ಯಗಳಿಗೆ ಸಹಾಯಮಾಡತಕ್ಕದ್ದೆಂತಲೂ ವಿವಿಧ ಪಂಗಡಗಳಲ್ಲಿ ಸ್ನೇಹ, ಸೌಹಾರ್ದಗಳನ್ನು ಬೆಳೆಸತಕ್ಕದ್ದೆಂತಲೂ, ಹೇಳಿದರು.

ಜವಳಿ ಧೋರಣೆಯ ಬಗ್ಗೆ ಅನೇಕ ಟೀಕೆಗಳು ಬಂದಿವೆ, ಅದು ಸರಿಯಾದುದಲ್ಲ. ಈಗಿನ ಪರಿಸ್ಥಿತಿಯಲ್ಲಿ ಇನ್ನು 3-4 ವರ್ಷ ಯಾವ ಯಂತ್ರಗಳೂ ಬರುವಂತಿಲ್ಲ. ನಾವು ಕೈಟ್ಟಿಕಕೊಂಡು ಸುಮ್ಮನೇ ಕುಳಿತಿರಬೇಕೇ? ನಾವು ಈ ವಿಷಯದಲ್ಲಿ ಅನುಸರಿಸಿರುವ ಧೋರಣೆಯಿಂದ ಹಳ್ಳಿಗರಿಗೆ ಸಹಾಯವಾಗುತ್ತದೆ. ಭಂಡವಲಗಾರರು ಎಷ್ಟೇ ಹಾರಾಡಲಿ, ಕೂಗಾಡಲಿ, ನಮಗೆ ಸಹಾಯಮಾಡಲು ಕೇಂದ್ರಮಂತ್ರಿಗಳಿದ್ದಾರೆ

ಸೂತ್ರಧಾರರು ಮಹಾತ್ಮಾ ಗಾಂಧಿಯವರಿದ್ದಾರೆ ಎಂದರು ಶ್ರೀ ಸುಬ್ರಹ್ಮಣ್ಯರವರು ವಂದನಾರ್ಪಣೆ ಮಾಡಿದನಂತರ ಸಭೆಯು ಮುಗಿಯಿತು ಮಂತ್ರಿಗಳು ೨೯ ನೆಯ ದಿನಾಂಕ ಮದ್ರಾಸಿಗೆ ಹೋದರು.



9th Year of Publication.

4th NOVEMBER 1946

ಸರಕಾರೀ ಅಧಿಕಾರಿಗಳು

ಮತ್ತು

ಸಾರ್ವಜನಿಕ ಸಭೆಯಲ್ಲಿನ ತೀರ್ಮಾನಗಳು.

ಸರ್ಕಾರೀ ಅಧಿಕಾರಿಗಳು ಇದುವರೆವಿಗೆ ಸಾಮಾನ್ಯವಾಗಿ ಜನತಾ ಅಭಿಪ್ರಾಯವನ್ನು ಗಮನಿಸಿ ಅದಕ್ಕೆ ತಕ್ಕಂತೆ ವರ್ತಿಸುವ ಪದ್ಧತಿಯನ್ನಿಟ್ಟುಕೊಂಡಿದ್ದಿಲ್ಲ. ನೂರೈವತ್ತು ವರ್ಷಗಳ ಬ್ರಿಟಿಶ್ ಆಳಿಕೆಯಲ್ಲಿ ಸರ್ಕಾರೀ ಅಧಿಕಾರಿಗಳು ತಾವು ಪ್ರಜೆಗಳ ಅಧಿಕಾರಿಗಳೆಂಬ ರೀತಿಯಲ್ಲಿ ವರ್ತಿಸಿದರು. ಅದು ಬ್ರಿಟಿಷ್ ಸರ್ಕಾರದ ರಚನೆ, ಅವರತತ್ವ ನೀತಿಗಳಿಗನುಗುಣವಾದುದು.

ಈ ೨೦ನೆಯ ಶತಮಾನವು ಪ್ರಜಾತಂತ್ರದ ಕಾಲ. ಪ್ರಜೆಗಳ ಇಷ್ಟ ಬೇಡಿಕೆಗಳನ್ನರಿತು ಆ ಪ್ರಕಾರ ವರ್ತಿಸಬೇಕೆಂಬುದಾಗಿ ಅಧಿಕಾರಿಗಳಿಗೆ ಸೂಚನೆಗಳು ಕೊಡಲ್ಪಟ್ಟಿವೆ. ಆದರೂ ಅಧಿಕಾರಿಗಳು ಅರೀತಿಯಾಗಿ ನಡೆಯುತ್ತಿಲ್ಲ. ಬ್ರಿಟಿಷ್ ಆಳಿಕೆಯು ಸಮೂಲವಾಗಿ ನಾಶವಾಗದ ಹೊರತ್ತು, ಐ. ಸಿ. ಯಸ್. ಉದ್ಯೋಗಸ್ಥರಾದ ಕಲೆಕ್ಟರಂಥವರನ್ನು ಡಿಸ್ಮಿಸ್ ಮಾಡುವ ಅಥವಾ ಶಿಕ್ಷಿಸುವ ಅಧಿಕಾರವು ನಮಗೆ ಬರದ ಹೊರತು, ಈ ದೋಷಗಳು ಹೆಚ್ಚುಕಡಿಮೆ ಇದ್ದೇ ಇರುತ್ತವೆ. ಮದ್ರಾಸಿನಲ್ಲಿ ಕಾಂಗ್ರೆಸ್ ಅಧಿಕಾರವು ಸ್ಥಾಪಿತವಾದ ನಂತರ, ಕೇಂದ್ರದಲ್ಲಿ ಪಂಡಿತ ಜವಹರ ಲಾಲರು ತಾತ್ಕಾಲಿಕ ರಾಷ್ಟ್ರೀಯ ಸರಕಾರವನ್ನು ರಚಿಸಿದ ನಂತರ ಅಧಿಕಾರಿಗಳ ಧೋರಣದಲ್ಲಿ ಬಹಳ ಬದಲಾವಣೆಯಾಗಿದೆ. ಆದರೂ ಅದು ಸಂಪೂರ್ಣತೆಯ ಮಟ್ಟವನ್ನು ಮುಟ್ಟಿ. ಕೆಲಸಗಳು ಶೀಘ್ರವಾಗಿ ನಡೆಯಬೇಕೆಂದರೆ, ಸಂಬಂಧಿಸಿದ ಪ್ರತಿಯೊಬ್ಬ ಅಧಿಕಾರಿಗೂ ನಾನು ಜನಸೇವಕನೆಂಬ ಭಾವನೆಯು ಬರದ ಹೊರತು ಸಾಧ್ಯವಾಗುವುದೇ ಇಲ್ಲ,

ಇನ್ನೊಂದು ಮುಖ್ಯವಿಷಯವೆಂದರೆ ಗೌಡಶಾನುಭೋಗರಿಂದ ಪ್ರಾರಂಭಮಾಡಿ ಕೊನೆಯವರಿವಿಗೂ ಅಧಿಕಾರಿಗಳಿಗೆ ಕೆಲಸ ಬಹಳ ಹೆಚ್ಚಿ ಹೋಗಿದೆ. ಇದು ಪ್ರಜಾಸರ್ಕಾರವೆಂದೂ, ತಮ್ಮ ತಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಇದು ವಳ್ಳೆಯ ಸಮಯವೆಂದೂ ಅರಿತು, ಎಲ್ಲಾ ಹಳ್ಳಿಗಳವರೂ, ಅರ್ಜಿಗಳನ್ನು ಕಳುಹಿಸುತ್ತಲಿರುವರು. ಸಾರ್ವಜನಿಕ ಸಭೆಯ ಸಂಸ್ಥೆಗಳ ತೀರ್ಮಾನಗಳಿಗೆ ಕೊನೆ ಮೊದಲಿಲ್ಲ. ಪೆಂಡೆಪೆಂಡೆ ಅರ್ಜಿಗಳು ಮೇಲಧಿಕಾರಿಗಳಿಂದ ಬಂದು, ಬೆಳಗಿನ ಜಾವವಾದರೂ ನನ್ನ ಕೆಲ್ಸ ಮುಗಿಯುವುದಿಲ್ಲವೆಂದು ಕಲೆಕ್ಟರವರೂ ಇತರ ಅಧಿಕಾರಿಗಳೂ ಹೇಳುತ್ತಿರುವರು ಇದೂ ಕೂಡ ನಿಜವೆ!!

ಆದರೆ ಮುಖ್ಯಾಂಶವೆಂದರೆ ಕೆಲ ಅಗತ್ಯದ ಕೆಲಸಗಳಿಗೆ ಪ್ರಥಮಸ್ಥಾನಕೊಟ್ಟು ಅವುಗಳನ್ನು ಪೂರೈಸಬೇಕು. (Priority) ಯಾವ ಹಳ್ಳಿಗಳಲ್ಲಿಯಾವ ಬೇಡಿಕೆಗಳನ್ನು ಮೊದಲು ಪೂರೈಸಬೇಕು ಎಂಬುದನ್ನು ತಡವಿಲ್ಲದೆ ನಿಶ್ಚಯಿಸಬೇಕಾದುದು ಅಧಿಕಾರಿಗಳ ಕರ್ತವ್ಯ. ಅವರು ಇನ್ನು ಮುಂದೆ ಹೀಗೆ ವರ್ತಿಸುವುದರಲ್ಲಿ ಸಂಶಯವಿಲ್ಲ.

ಜನತೆಯ ಕರ್ತವ್ಯವೂ ಒಂದಿದೆ, ಒಂದುಸಲ ಅರ್ಜಿಇಟ್ಟರೆ ನಮ್ಮಕೆಲಸ ಮುಗಿಯಿತು. ತೀರ್ಮಾನ ಮಾಡಿ ಕಳುಹಿಸಿದರಾಯಿತು, ಎಂದು ಸುಮ್ಮನೆ ಕೂತರೆ ಕೆಲಸಗಳಾಗುವುದಿಲ್ಲ. ಮೇಲಿಂದಮೇಲೆ ಸಂಬಂಧಿಸಿದವರಿಗೂ, ಅವರ ಮೇಲಧಿಕಾರಿಗಳಿಗೂ ಬರೆಯು

ತ್ತಲೇ ಇರಬೇಕು ರೆವಿನ್ಯೂಇಲಾಖೆಯನ್ನು ಉದಾಹರಣೆಗಾಗಿ ತೆಗೆದುಕೊಂಡರೆ ಮೊದಲು ತಹಶೀಲ್ದಾರರ ನಂತರ ರೆವಿನ್ಯೂಡಿವಿಜನಲ್ ಆಫೀಸರ್ ಅವರನಂತರ ಕಲೆಕ್ಟರ್ ಅವರ ಮೇಲೆ ಮದ್ರಾಸ್‌ರೆವಿನ್ಯೂ ಬೋರ್ಡ್ ಇವರಿಗೆಲ್ಲಾ ಬರೆಯಬೇಕಾಗುತ್ತದೆ, ಒಬ್ಬೊಬ್ಬರಿಗೆ ಎರಡೆರಡು, ಮೂರುಮೂರುಸಲ ಎಚ್ಚರಿಕೆ ಪತ್ರಗಳು (Reminders) ಹಿಂದಿ ನಂಬರ್‌ಸೂಚಿಸುತ್ತಾ ಕಳುಹಿಸಬೇಕು. ಕಾಗದಗಳಿಗೆ ಮಾತಾಡದಿದ್ದರೆ ತಾರು (Telegrams) ಗಳನ್ನು ಉಪಯೋಗಿಸಬೇಕು, ಇದರಲ್ಲಿ ಬೇಸರಪಟ್ಟುಕೊಂಡರೆ ಕೆಲಸ ನಡೆಯುವುದಿಲ್ಲ, ಕಲಿಯುಗವು ಸಂಘ ಶಕ್ತಿಯಕಾಲ. ಆಂದೋಳನದಿಂದ, ಚಳವಳಿದಿಂದ ಅಹಿಂಸಾತ್ಮಕ ಬೆದರಿಕೆಯಿಂದ ನ್ಯಾಯವಾದ ಕೆಲಸಗಳಾಗುತ್ತವೆ ಪ್ರತಿಯೊಂದು ಹಳ್ಳಿಗಳಲ್ಲೂ ಸಂಘಗಳನ್ನೇರ್ಪಡಿಸಿಕೊಂಡು ಆ ಮೂಲಕ ಸಾಮೂಹಿಕವಾಗಿ ಕೆಲಸಮಾಡಬೇಕು, ತಾವು ಮಾಡುವ ಕಾರ್ಯಗಳಿಗೆಲ್ಲಾ ಜನತೆಯ ಬೆಂಬಲ ಬೇಕು, ದಸ್ಕತ್ತು ಮಾಡಿ ಅರ್ಜಿಕಳುಹಿಸಬೇಕು, ಹೆಸರಿಲ್ಲದೆ ಮೂಕರ್ಜಿಗಳನ್ನು ಯಾರಿಗೂ ಬರೆಯಬಾರದು, ಅವುಗಳನ್ನು ಯಾರೂ ವಿಚಾರಿಸುವುದಿಲ್ಲ. ಜವಾಬ್ದಾರೀ ವ್ಯಕ್ತಿಗಳು ಧೈರ್ಯದಿಂದ ವರ್ತಿಸಬೇಕಲ್ಲದೆ ನ್ಯಾಯವಾದ ಅಂಶಗಳಿಗಾಗಿ ಎಲ್ಲರ ಪರವಾಗಿ ಹೋರಾಡಬೇಕು ಕೆಲವೇವ್ಯಕ್ತಿಗಳು ಸ್ವಾರ್ಥಸಾಧನೆಗಾಗಿ ಇಡೀ ಹಳ್ಳಿಗಳ ಹಿತವನ್ನೇ ಲಕ್ಷಿಸುವುದಿಲ್ಲ. ಇದಕ್ಕೆ ತಡೆಯಾಗಬೇಕಾದರೆ ಐಕಮತ್ಯದಿಂದ ಸಂಘಸ್ಥಾಪನೆಯಾಗದ ಹೊರತು ಪಟ್ಟುಹಿಡಿದು ಆಂದೋಳನ ನಡೆಸದ ಹೊರತು ಊರಿನಹಿತವಾಗುವುದಿಲ್ಲ. ಹಳ್ಳಿಗರು ನಮ್ಮ ಸೂಚನೆಗಳನ್ನು ಗಮನಿಸಿ ಅಪ್ರಕಾರ ವರ್ತಿಸುವರೆಂದು ನಂಬಿರುತ್ತೇವೆ

ಹಚ್ಚೊಳ್ಳಿ.

ವ್ಯವಸಾಯ ಸಂಘದ ವೀರ್ಮೋನಗಳು.

1)ವ್ಯವಸಾಯ ಸಂಘದವರು ಈ ಹಿಂದೆ ವೀರ್ಮೋನಗಳನ್ನು ಮೂರು ಅಧಿಕಾರಿಗಳಿಗೆ ಕಳುಹಿಸಿದರೂ ಯಾವ ಚರ್ಯೆಯನ್ನು ತೆಗೆದುಕೊಂಡಿಲ್ಲ. ಇದು ವಿಷಾದಕರವಾದ ಅಂಶವಾಗಿದೆ. ಇನ್ನಾದರೂ ಸಂಬಂಧಿಸಿದ ಶಾಖೆಯವರು ತಕ್ಕ ಲಕ್ಷ್ಯ ಕೊಟ್ಟು ತಾವು ಏನು ಚರ್ಯೆತೆಗೆದುಕೊಳ್ಳುವರೆಂಬುದನ್ನು ತಿಳಿಸಬೇಕು.

2) ವ್ಯವಸಾಯದ ಡಿಮಾನ್ಸ್ಟ್ರೇಟರವರು ಬಿತ್ತುವ ಬೀಜಗಳನ್ನು ಒದಗಿಸುತ್ತೇವೆಂದು ಬರೆದುಕೊಂಡು ಹೋಗಿ ಇದುವರೆವಿಗೂ ಸಪ್ಲೈಮಾಡದಿರುವುದು ವಿಷಾದಾಂಶವಾಗಿದೆ, ಇದಕ್ಕೆ ತಕ್ಕ ಗಮನ ಕೊಡಬೇಕು,

3) ಹಚ್ಚೊಳ್ಳಿ ಗ್ರಾಮದಲ್ಲಿ 10 ರೈತರಿಗೆ ಅರ್ಜೆಂಟಾಗಿ ಬಂಡಿಯ ಅಳಿಗಳು ಬೇಕೆಂದು ಡಿಮಾನ್ಸ್ಟ್ರೇಟರವರು ತಮ್ಮ 11—10 -46 ರ ಯಾದಿಯಲ್ಲಿ ನಿಶ್ಚಯಿಸಿದ ಪ್ರಕಾರಕ್ಕೆ ವ್ಯವಸಾಯ ಶಾಖೆಯವರು ಕೂಡಲೇ ಸದರಿ ಹತ್ತು ಬಂಡಿ ಅಳಿಗಳನ್ನು ತಡವಿಲ್ಲದೆ ಸಪ್ಲೈಮಾಡಬೇಕೆಂದು ಕೋರಲಾಗಿದೆ

ಹೊಸಮನೆ ಮರಿಬಸವನಗೌಡ, ಅಧ್ಯಕ್ಷ ಜೆ. ಹೆಚ್. ಆಚಾರ್ಯ— ಕಾರ್ಯದರ್ಶಿ ಹೆಚ್. ಯಸ್. ಪೊಂಪಣ್ಣ. ರೆಡ್ಡಿ ಪುರುಷೋತ್ತಮರೆಡ್ಡಿ. ಮೂಲೆಮನೆ ಬಸವರಗೌಡ. ಪಾದ್ರಿ ಬಸಪ್ಪ.

[The officials of the Dept of Agriculture at Siruguppa are requested to help the Ryots of Hacholli and meet at least, their minimum demands. We hope this will be done expeditiously.-Editor-Nava Bharat]

ಬಳ್ಳಾರಿ ಜಿಲ್ಲಾ

೩೬ ಲೇಬರ್ ಶಾಲೋಪಾಧ್ಯಾಯರಿಗೆ ಕಾಯಂ (Confirmation)

ಈ ಕೆಳಗೆ ಕಾಣಿಸಿದ 36 ಲೇಬರ್ ಶಾಲೋಪಾಧ್ಯಾಯರಿಗೆ 2—2—1946 ರಿಂದ ಕಾಯಂ ಕ್ಕೆ ಪರ್ಮಿಷ್ಟ ಮೂಡಲಾಗಿದೆಯೆಂದು, ಜಿಲ್ಲಾ ಲೇಬರ್ ಆಫೀಸರ್ ಶ್ರೀ ಪಿ. ಸ್ವಾಮುಯಲ್‌ರವರು 20-10-46 ತಮ್ಮ 1208—46—42 ಪ್ರಕಾರ ಆಜ್ಞೆಮೂಡಿರುತ್ತಾರೆ. ಈ ಉಪಾಧ್ಯಾಯರಲ್ಲಿ 19 ಜನರು ತೆಲುಗು ಹೈಯ್ಯರ್ 10 ಜನರು ಕನಡ ಹೈಯ್ಯರ್ 6 ಜನರು ತೆಲುಗು ಲೋಯರ್ 1 ಕನಡ ಲೋಯರ್ ಇರುತ್ತಾರೆ

ತೆಲುಗು ಹೈಯರ್

1) ಡಿ. ವೆಂಕಯ್ಯ ಮದಿರೆ (ಆದವಾನಿ)
2) ಶಿ. ಡಿ. ತಿಮ್ಮಪ್ಪ ಕಾವುವರ ,,
3) ಎಸ್. ನನ್ಸೆಸಾಬು ಕುಪ್ಪಗಲ್ ,,
4) ಶಿ. ಶೇಕನ್ನ ಕೋಸಿಗಿ ,,
5) ಡಿ. ನರಸಿಂಹಪ್ಪ ಇಸ್ವಿ ,,
6) ಫಾತೆ ಅಹಮ್ಮದ್ ಚಿನ್ನಹರಿವಾಣ ,,
7) ಡಿ. ಶಿ. ನರಸಿಂಹದಾಸ್ ನಾಗನಾಥನಹಳ್ಳಿ
8) ಕೆ. ಮೋಸನ್ ದೊಡ್ಡತುಂಬಳ ,,
9) M ಹನುಮಂತಪ್ಪ ಪುಲಕುರ್ತಿ (ರಾಯದುರ್ಗ
10) ವೈ. ದೇವಮಣಿ ಗರುಡಚೇಡು ,,
11) ಬಿ. ಎಬ್ರಾಹಿಮ್ ಮಾಲ್ಯ ,,
12) ಡಿ. ರುದ್ರಯ್ಯ ಜೋರಾಪುರ (ಆಲೂರು)
13) ಡಿ. ನಾಗಪ್ಪ ಹೋಳಗುಂದಿ ,,
14) ಹುಸೇನ್ಸಾಹೆಬ್ ಧಣಾಪುರ ,,
15) ಡಿ. ಕ್ರಿಷ್ಟಪ್ಪ ಪೆದ್ದಹೋತೂರು ,,
16) ಎಂ. ಇ. ಜೊನಾಥನ್ ನಗರೂರು ,,
17) ಡಿ. ರಾಮದಾಸ್ ಚಿಂತಕುಂಟ ,,
18) ಎಸ್. ದೇವದಾನಂ ಸಂಗನಕಲ್ಲು (ಬಳ್ಳಾರಿ)
19) ವಿ. ಬಾಲಸುಂದರಂ ಬಿಣ್ಣಿಕಲ್ಲು ,,

ಕನ್ನಡ ಹೈಯರ್

1) ಎಂ. ಓಬಪ್ಪ ಕುರುಗೋಡು
2) ಎಸ್. ಗುರುಶಾಂತಯ್ಯ ಚಿಕ್ಕಜೋಗಿಹಳ್ಳಿ
3) ಎಸ್. ಬೋರಯ್ಯನಾಯ್ಕ ಬಂಡ್ರಿ
4) ಹೆಚ್. ರಾಮಪ್ಪ ಬೇವಿನಹಳ್ಳಿ
5) ಬಿ. ಶೇಷಪ್ಪ ಕಗ್ಗಲುಕಟ್ಟೆತಾಂಡ
6) ಕೆ. ಮಲ್ಲಪ್ಪ ಕೌಡೂರು
7) ಎಸ್. ಅಪ್ಪಳ್ಳಿ, ಹಾಲ್ವಿ
8) ಎಸ್. ಪಿತಾಂಬರಪ್ಪ ಬೆಣ್ಣಿಹಳ್ಳಿತಾಂಡ
9) ಹೆಚ್. ದಾನಪ್ಪ ದೊಡ್ಡನಹಳ್ಳಿ
10) ಕೆ. ಮಹದೇವಪ್ಪ (25-8-46 ರಿಂದ ಸಂಬಳ ಸಿಲ್ಲನ ರಜಾದ ಮೇಲಿರುವ ಕಾರಣ ಆರ್ಡರ್ ಜಾರಿಮಾಡದೆ ಇಡಲಾಗಿದೆ.)

ತೆಲುಗು ಲೋಯರ್

1) ಎಂ. ಕೊಲ್ಲಾರಪ್ಪ ಸಂಗನಕಲ್ಲು
2) ಮಸ್ತಾನ ಸಾಹೇಬ್ ಪೆಸ್ಮಮೋತೂರು
3) ಅಳ್ಳಪ್ಪ ಧಣಾಪುರ
4) ಎಸ್. ಲಕ್ಷ್ಮಪ್ಪ ನಾಗನಾಥನಹಳ್ಳಿ
5) ಹಾಷಿಂಸಾಹೇಬ್ ಗರುಡಚೇಡು
6) ಎಂ. ವೀರಪ್ಪ ಮಾಲ್ಯ

ಕನ್ನಡ ಲೋಯರ್

1) ಶಿ. ಯಂ. ಲಿಂಗಪ್ಪ ಚಿಕ್ಕಜೋಗಿಹಳ್ಳಿ

ಪೂರ್ವ ಬಂಗಾಳದಲ್ಲಿ ಗಲಭೆ.

ಮುಸಲ್ಮಾನರ ಪೂರ್ವಸಿದ್ಧತೆ
ಕೃಪಾಲಿನಿಯವರ ಹೇಳಿಕೆ.

ಕಾಂಗ್ರೆಸ್‌ನ ನಿಯೋಜಿತ ಅಧ್ಯಕ್ಷರಾದ ಆಚಾಯಕೃಪಲಾನಿಯವರುಸುದ್ದಿಗಾರರ ಸಭೆಯಲ್ಲಿ ಹೇಳಿಕೆಯೊಂದನ್ನು ಕೊಟ್ಟು ತಾವು ಕೆಳಗೆ ಕಂಡ ನಿರ್ಣಯಗಳಿಗೆ ಬಂದಿರುವದಾಗಿ ಹೇಳಿದರು.

1)ನೌಖಾಲಿ, ತಿಪ್ಪೇರಾ ಜಿಲ್ಲೆಗಳಲ್ಲಿ ಮುಸ್ಲಿಂ ಲೀಗ್ ಪ್ರಚಾರದ ಪರಿಣಾಮವಾಗಿ ಹಿಂದೂಗಳಮೇಲೆ ದಾಳಿನಡೆಸಲು, ಮುಸಲ್ಮಾನರು ಪೂರ್ವಸಿದ್ಧತೆ ನಡೆಸಿದ್ದರು.

3) ಕೆಲ ಅಧಿಕಾರಿಗಳು ಕೂಡ ಹಿಂದೂಗಳಮೇಲೆ ಅತ್ಯಾಚಾರ ನಡೆಸಲು ಒಳಸಂಚು ನಡೆಸಿದ್ದರು. ಹಿಂದೂಗಳ ಮೇಲೆ ಎಷ್ಟೇ ಅತ್ಯಾಚಾರ ನಡೆಸಲಿ ಚರ್ಯೆಗಳನ್ನು ತಗೆದುಕೊಳ್ಳಲಾಗುವುದಿಲ್ಲವೆಂದು ಮುಸಲ್ಮಾನರಲ್ಲಿ ವಿಶ್ವಾಸವಿತ್ತು.

4) ಮುಸಲ್ಮಾನರು ನೂರು ನೂರು ತಂಡಗಳಲ್ಲಿ ಹಿಂದೂ ಮನೆಗಳ ಮೇಲೆ, ಹಿಂದೂ ಹಳ್ಳಿಗಳ ಮೇಲೆ ಏರಿ ಹೋಗಿ ಲೀಗಿಗೂ, ಕಲ್ಕತ್ತಾ ಮುಸ್ಲಿಂಲೀಗಿಗೂ ಧನಸಹಾಯ ಕೇಳಿ ಕೊಟ್ಟವರನ್ನೂ, ಕೊಡದವರನ್ನೂ ಸದೆ ಬಡಿಯುತ್ತಿದ್ದರು. ಇಸ್ಲಾಂಧರ್ಮದ ಸ್ವೀಕಾರ ಮಾಡಲು ಒತ್ತಾಯವು ನಡೆಯುತ್ತಿತ್ತು.

5) ಸತ್ತವರ ಸಂಖೆಯು ನನಗೆ ನಿಶ್ಚಿತವಾಗಿತಿಳಿದು ಬಂದಿಲ್ಲ. ದುತಿಯಾಪುರದ ಸಮೂಹದಲ್ಲಿ 300 ಜನರು ಒಂದೇ ಪ್ರದೇಶದಲ್ಲಿ ಕೊಲ್ಲಲ್ಪಟ್ಟಿರುವರು. ಕೆಲಕುಟುಂಬಗಳಲ್ಲಿ 20 ರಿಂದ 50 ರ ವರೆಗೂ ಜನರನ್ನು ಕೊಂದಿರುವರು,

6) ಕೊಲೆ, ಸುಲಿಗೆ ಅತ್ಯಾಚಾರ ನಡೆಸಿದವರು ಮಗ್ಗುಲ ಹಳ್ಳಿಗಳವರು. ಅನೇಕ ಅತ್ಯಾಚಾರಗಳನ್ನು ಪೀಡಿತರು ಈಗಲೂ ಗುರುತಿಸಬಲ್ಲರು.

7) ಕೊಲೆ- ಸುಲಿಗೆಗಳಾದ ಮೇಲೂ ಹಿಂದೂಗಳು ಇಸ್ಲಾಂಧರ್ಮವನ್ನು ಸ್ವೀಕರಿಸಬೇಕಿತ್ತು. ಇವರಿಗೆಲ್ಲಾ ಲೀಗ್ ಜಯಕಾರಗಳನ್ನುಳ್ಳ ಬಿಳೀ ತೊಪ್ಪಿಗೆಯನ್ನು ಕೊಡಲಾಗುತ್ತಿತ್ತು. ಹೆಂಗಸರ ಬಳೆ ಒಡೆದು ಕುಂಕುಮವನ್ನಳಿಸಿ, ಮನೆಯ ದೇವರಪೂಜೆಯ ವಿಗ್ರಹಗಳನ್ನೆಲ್ಲಾ ನಾಶಮಾಡುತ್ತಿದ್ದರು.

8) ಒತ್ತಾಯದ ಮದುವೆಯ ಉದಾಹರಣೆಗಳಿಷ್ಟೇ ಇವೆ. ಮದುವೆಯೂದ ಗುರುತಿಗಾಗಿ ಸಿಂಪಿನ ಬಳೆಗಳನ್ನೊಡೆದು ಕುಂಕುಮವನ್ನು ಪುಂಡರು ತಮ್ಮ ಕಾಲ್ಬೆರಳುಗಳಿಂದ ಅಳಿಸುತ್ತಿದ್ದರೆಂದು ಶ್ರೀಮತಿ ಸುಚೇತಾಕೃಪಾಲಿನಿಯವರಿಗೆ ಕೆಲವರು ಹೇಳಿಕೆ ಕೊಟ್ಟಿರುವರು.

9) ಗಲಭೆಗಳು ನಡೆದ ಪ್ರದೇಶವನ್ನು ಈವರಿವಿಗೂ ಪುಂಡರೇಕಾಯುತ್ತಾನಿಂತಿದ್ದಾರೆ. ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗಿಬರಲು ಮತಾಂತರ ಹೊಂದಿದವರಿಗೆ ಪರ್ಮಿಟ್‌ಗಳನ್ನು ಕೊಡಲಾಗುತ್ತಿದೆ. ಈಪರ್ಮಿಟ್‌ಗಳನ್ನು ನಾನು ಸ್ವತಃನೋಡಿದ್ದೇನೆ.

10) ಈ ಪ್ರದೇಶದ ಹಿಂದೂಗಳಿಗೆ ಮತಾಂತರ ಹೊಂದಿರಲಿ ಹೊಂದದಿರಲಿ ಗಂಡಾಂತರವಿದೆ. ಅನೇಕ ಕುಟುಂಬಗಳ ಸ್ತ್ರೀ ಪುರುಷರು ಕಾಣದಾಗಿದ್ದಾರೆ. ಅಂಚೆ-ಕಚೇರಿಗಳು ಮುಚ್ಚಿಬಿಟ್ಟಿವೆ.

11) ಅಕ್ಟೋಬರ್ 20 ರ ವರೆಗೆ ಹೋಳಿಯು ಅವ್ಯಾಹತವಾಗಿ ನಡೆಯುತ್ತಿತ್ತು. ಪೋಲೀಸರಿಗೆ ತಮ್ಮ ಆತ್ಮರಕ್ಷಣೆಗಾಗಿ ಗುಂಡುಹಾರಿಸಬೇಕೆಂದು ಆಜ್ಞೆಯಾಗಿದ್ದಿತಂತೆ. ಪೋಲೀಸರಮೇಲೆ ಪುಂಡರು ಏರಿ ಹೋಗುತ್ತಲೇ ಇರಲಿಲ್ಲ, ಪೋಲೀಸರು ಸುಮ್ಮನಿದ್ದರು

ನೌಖಾಲಿಯಲ್ಲಿ 50 ಜನರನ್ನು ಮಾತ್ರ ಬಂಧಿಸಿರುವರೆಂದು ಕೇಳಿದ್ದೇನೆ ಗಲಭೆ ಪ್ರದೇಶಗಳಲ್ಲಿ ಸಾಕಷ್ಟು ಪೋಲಿಸ್ ಮತ್ತು ಮಿಲಿಟರಿಪಡೆಗಳಿಲ್ಲ ಗಲಭೆಗಳಿಗೆ ಆರ್ಥಿಕ ಪರಿಸ್ಥಿತಿಯು ಕಾರಣವಲ್ಲ. ಒಬ್ಬ ಮುಸಲ್ಮಾನ ಶ್ರೀಮಂತನ ಮನೆಯೂ ಲೂಟಿಯಾಗಿಲ್ಲ.

ಕೊನೆಯಲ್ಲಿ ಬಂಗಾಳೀ ಹಿಂದೂಗಳು ಶಾಂತಿಬಿತ್ತರಾಗಿದ್ದು, ಪ್ರತೀಕಾರದ ಗೋಜಿಗೆ ಹೋಗಬಾರದೆಂದು ಶ್ರೀ ಕೃಪಾಲಿನಿಯವರು ವಿನ್ನವಿಸಿದ್ದಾರೆ.

ಸರ್ಕಾರಿ ಭೂಮಿಗಳವರಿಗೆ ಭಾವಿ ತೆಗೆಸಲು ಸರಕಾರದ ದ್ರವ್ಯಸಹಾಯ.

ಮದ್ರಾಸ್ ರೆವಿನ್ಯೂ ಮಂತ್ರಿಗಳಾದ ಶ್ರೀ ಕೆ. ಆರ್. ಕಾರಂತರೂ ಪಾರ್ಲಮೆಂಟರೀ ಕಾರ್ಯದರ್ಶಿಗಳಾದ ಶ್ರೀ ಬಿ. ಯಸ್. ಮೂರ್ತಿಯವರೂ ಬಂದಾಗ ಹರಿಜನರಿಗೂ ಕೂಡ ಭಾವಿತೆಗೆಸಲು, ಪಟ್ಟಾ ಭೂಮಿಯ ರೈತರಿಗೆ ಕೊಡುವ ಸೌಕರ್ಯವನ್ನು ಪದಗಿಸಿಕೊಡಬೇಕೆಂದು, ಕೇಳಿಕೊಳ್ಳಲಾಗಿತ್ತು. ಅಲ್ಲದೆ ಜಿಲ್ಲಾ ಹರಿಜನಸೇವಕ ಸಂಘದ ಕಾರ್ಯದರ್ಶಿಗಳಾದ ಶ್ರೀ ಕೇಶವರಾಯರು ಗೆಣಿಕೆಹಾಳಿನವರ ಅರ್ಜಿಗಳನ್ನು ಕೊಟ್ಟು ಈ ವಿಷಯವಾಗಿ ಕಲೆಕ್ಟರ್ ಮತ್ತು ಮಂತ್ರಿಗಳಿಗೆ ಹರಿಜನರಿಗೆಲ್ಲಾ ಸಹಾಯಮಾಡಲು ಬರೆದಿರುವುದಾಗಿ ಮಂತ್ರಿಗಳಿಗೂ, ಪಾರ್ಲಿಮೆಂಟರಿ ಕಾರ್ಯದರ್ಶಿಗಳಾದ ಶ್ರೀ ಮೂರ್ತಿಯವರಿಗೂ ತಿಳಿಸಿದ್ದರು.

ಈಗ ಅಂಥಾ ಸೌಕರ್ಯವನ್ನು ಒದಗಿಸಿರುವ ಸರ್ಕಾರೀ ಆರ್ಡರ್ ಬಂದಿರುವದನ್ನು ತಿಳಿಸಲು ಹರ್ಷಿಸುತ್ತೇನೆ. ಈಗಾಗಲೇ ಏಳು ಬೆಂಚಿ ಗೆಣಿಕೆಹಾಳು ಗ್ರಾಮಗಳ ಹರಿಜನರಿಗೆ ಭಾವಿತೆಗೆಸಲು ದ್ರವ್ಯಸಹಾಯ ಮಾಡಿರುವರು.

ಹರಿಜನರಿಗೆ ಕೆಲ ಸೂಚನೆಗಳು

ಗ್ರಾಮಾಂತರಗಳಲ್ಲಿರುವ ಹರಿಜನರು ಸಾಲತೆಗೆದುಕೊಳ್ಳಲು, ಸರ್ಕಾರದಿಂದ ದ್ರವ್ಯಸಹಾಯ ಪಡೆಯಲು, ಬಹಳ ಆತುರಪಡ್ತಿರುವರು. ಗುಂಪು ಗುಂಪುಕಟ್ಟಿಕೊಂಡು ಬಳ್ಳಾರಿಗೆ ಬರುತ್ತಲಿರುವರು. ಎಷ್ಟು ಹೇಳಿದರೂ ತಿಳಿಯಲೊಲ್ಲದು. ಕಾಗದ ಬರೆದರೆ ಎಲ್ಲಾ ಸಂಗತಿ ತಿಳಿಸಿ ಅವರ ಕೊರತೆಗಳು ನಿವಾರಣೆಯಾಗುವ ಸಲಹೆ ಕೊಡುತ್ತೇವೆ,

ಅನೇಕ ಊರುಗಳಲ್ಲಿ ೫೦೦ ರೂ ಗಳಲ್ಲಿ ಭಾವಿತೆಗೆಸುವುದು ಸಾಧ್ಯವೇ ಇಲ್ಲ.

ಸರ್ಕಾರದವರು ಕೊಡುವ ದ್ರವ್ಯಸಹಾಯದ ಜೊತೆಗೆ ಬೇರೆ ಸಾಲ ಮಾಡಬೇಕಾಗುತ್ತದೆ, ಈ ಕಾರಣ ಅಲೋಚಿಸಿ ಯೋಗ್ಯತೆಯುಳ್ಳ ಕೆಲ ಹರಿಜನ ರೈತರು ಮಾತ್ರವೇ ಅರ್ಜಿ ಇಟ್ಟು ಕೊಳ್ಳಬೇಕು,

ತಮ್ಮ ತಮ್ಮ ಊರುಗಳ ಬೇಡಿಕೆಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಅಲ್ಲೇ ಯಾರಿಂದಲಾದರೂ ಬರೆಸಿ ತಹಶೀಲ್ದಾರ ಇಲ್ಲವೇ ಜಿಲ್ಲಾ ಕಲೆಕ್ಟರವರಿಗೆ ಕಳುಹಿಸಬಹುದು. ಈ ಕೆಲಸಕ್ಕಾಗಿಯೇ ಬಳ್ಳಾರಿಗೆ ಖರ್ಚಿಟ್ಟುಕೊಂಡು ಬರಬಾರದು. ಅರ್ಜಿ ಕಾಪಿ ಕಳುಹಿಸಿದರೆ ಸಾಕು,

ಬಳ್ಳಾರಿಯಲ್ಲಿ ಆಹಾರದ ಮತ್ತು ಸ್ಥಳದ ತೊಂದರೆಯಿದೆ, ಅಲ್ಲದೆ ನಾನೇನಾದರೂ ಹಳ್ಳಿಗಳ ಕಡೆಗೆ ಸಂಚಾರ ಹೋಗಿದ್ದರೆ ಮತ್ತಿಷ್ಟು ನಿರಾಶರಾಗಬೇಕಾಗುತ್ತದೆ ಈ ಕಾರಣ ದಯವಿಟ್ಟು ಪತ್ರಗಳನ್ನು ಬರೆಯಿರಿ, ಜವಾಬ್ ಕೊಡುತ್ತೇನೆ.

ಟಿ. ಬಿ. ಕೇಶವರಾವು
ಕಾರ್ಯದರ್ಶಿ ಜಿಲ್ಲಾ ಹರಿಜನಸೇವಕ ಸಂಘ ಬಳ್ಳಾರಿ

ಬಳ್ಳಾರಿ ಜಿಲ್ಲಾ ಹರಿಜನ ಸೇವಕ ಸಂಘ

ಹೊಸ ಹರಿಜನ ಸದಸ್ಯರು

೧. ಕರಿಯಪ್ಪನ ಮಗ ಹರಣಪ್ಪ ಬಾದನಹಟ್ಟಿ,
೨. ಈ. ಹನುಮಂತಪ್ಪ ಬಾದನಹಟ್ಟಿ,
೩. ಮಲ್ಲಕ್ಕನೋರ ಈರಪ್ಪ H. ವೀರಾಪುರ,
೪. ದುರ್ಗಪ್ಪ ದ್ಯಾವಪ್ಪ ಮಣೂರಸೂಗೂರು,
೫. ಹಿರೇಮಲ್ಲಪ್ಪ ಸಿರಿಗೇರಿ,

ಜಾತೀಯ ದಂಗೆ

ಹಿಂದೂ-ಮುಸ್ಲಿಂ ವೈಷಮ್ಯವು ಹಬ್ಬುತ್ತಿದೆಯೆಂದು ತಿಳಿಸಲು ವಿಷಾದಿಸುತ್ತೇವೆ. ಕಲಕತ್ತಾದಲ್ಲಿ ಕಳೆದ ೧೨ ದಿನಗಳಿಂದ ತಿವಿತ, ಕೊಲೆ ಲೂಟಿ ಅವ್ಯಾಹತವಾಗಿನಡೆದಿದೆ ಬೊಂಬಾಯಿ, ಚಾಪ್ರಾ (ಬಿಹಾರ) ಅಹಮದ್‌ನಗರ ಪಂಜಾಬದ ಒಂದೆರಡು ಭಾಗಗಳಲ್ಲಿ ಇಬ್ಬಣಗಳಲ್ಲಿ ಚಕಮುಕಿಯು ನಡೆದು ಕೆಲವರು ಘಾಯಗೊಂಡರು ಕೆಲವರು ಸತ್ತರು.

ತಾರಾನಾಥ ಪುಣ್ಯತಿಥಿ.

ಬಳ್ಳಾರಿಯಲ್ಲಿ

ತುಂಗಭದ್ರಾ ಪ್ರೇಮ ವಿದ್ಯಾಲಯದ (Prema Medical Service) ಸಂಸ್ಥಾಪಕರಾದ ಪಂಡಿತ ತಾರಾನಾಥಜೀಯವರ ಪುಣ್ಯತಿಥಿಯು 'ತಾರಾನಾಥ ಹೀಲಿಂಗ್ ಹೋಂ, ಬಳ್ಳಾರಿ'' ಯವರಿಂದ ನಡೆಸಲ್ಪಟ್ಟಿತು. ಮಂಗಳೂರಿನ ಸುಪ್ರಶಿದ್ಧ ವೈದ್ಯರೂ, ಸಾರ್ವಜನಿಕ ಕಾರ್ಯಕರ್ತರೂಆದ ಡಾ. ಎಂ.ಆರ್. ಭಟ್ಟರು (ಇವರು ತಾರಾನಾಥರ ಪ್ರಥಮ ಪಟ್ಟ ಶಿಷ್ಯರು) ಪಂಡಿತರ ಗುಣಗಾನ ಮಾಡಿ, ಅವರ ಪಾಂಡಿತ್ಯದ ವೈವಿವಿಧ್ಯತೆಯನ್ನು, ಆಧ್ಯಾತ್ಮಿಕ ಜ್ಞಾನದ ವೈಶಾಲ್ಯವನ್ನು ಗೀತಾ ಶ್ಲೋಕಗಳಿಂದ ಸಹೇತುವಾಗಿ ಸಮರ್ಥಿಸಿದರು. ಪಂಡಿತಜೀಯವರ ವಿವಿಧ ಭಾಷೆಗಳ ಪೂರ್ಣಜ್ಞಾನ, ಸಂಗೀತ, ಕಲೆ, ಪೌರ್ವಾತ್ಯ, ಪಾಶ್ಚಿಮಾತ್ಯ ದೇಶಗಳ ವೈದ್ಯಶಾಸ್ತ್ರದ ನೈಪುಣ್ಯ, ಆರ್ತರ, ಪೀಡಿತರಸೇವೆ, ದೇಶಭಕ್ತಿ, ಹರಿಜನೋದ್ಧಾರದಲ್ಲಿ ಕೃತಿಯಿಂದ ಆಸಕ್ತಿ ಇವುಗಳ ಒಳ್ಳೇ ಮನರಂಜಿತ ವಿವರಗಳನ್ನು ಶ್ರೀಗಳಾದ ಎಂಜಿ. ವೆಂಕಟೇಶಯ್ಯ, ಜೋಳದರಾಶಿ ದೊಡ್ಡನಗೌಡ ರೇವಣಸಿದ್ದಯ್ಯ, ಸಂಜೀವರಾವು, ಕೇಶವರಾವು ಸಭಾಧ್ಯಕ್ಷತೆಯನ್ನು ವಹಿಸಿದ ಶ್ರೀ ವೇಣುಗೋಪಾಲಾಚಾರ್ಯರು, ಚಾಲಕರಾದ ಡಾ. ಬಿ. ಕೆ. ಮಾರ್ಲರೂ ವಿವರಿಸಿದರು. ವಂದನಾರ್ಪಣೆಯಿಂದ ಸಭೆಯು ಮುಗಿಯಿತು.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತ

ಅಮೆರಿಕಾಕ್ಕೆ ಹಿಂದೂಸ್ತಾನ ಸರಕಾರದ ಪರವಾಗಿ ಹೋದ ಪ್ರತಿನಿಧಿ ಮಂಡಲದ ಧುರೀಣರಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಸಾಮ್ರಾಜ್ಯವಾದಿಗಳ ಹೃದಯತಟ್ಟುವ ಭಾಷಣ ಮಾಡಿದ್ದಾರೆ. ಪ್ರಪಂಚದ ಮುಖ್ಯ ಪತ್ರಿಕೆಗಳೆಲ್ಲಾ ಇವರ ಭಾಷಣವನ್ನು ಪ್ರಶಂಸಿಸಿವೆ. "ಶ್ರೀಮತಿಯವರು ಸಾಮ್ರಾಜ್ಯ ಲಾಲಸೆಯನ್ನು ಟೀಕಿಸಿ ದಾಸರಾಷ್ಟ್ರಗಳ ವಿಮೋಚನೆಯ ವಿಚಾರವನ್ನು ಕೈ ಕೊಳ್ಳಬೇಕೆಂದು ಅಪ್ರತಿಮವಾಗಿ ಮಂಡಿಸಿದವಾದವು ಅದ್ವಿತೀಯವಾಗಿತ್ತು. ಇನ್ನಿತರ ರಾಷ್ಟ್ರಗಳ ಗುರಿಯಿಲ್ಲದ ಭಾಷಣಗಳಿಗೂ, ಇದಕ್ಕೂ ಅಜಗಜಾಂತರವಿದೆ." ಎಂದು ಮಾಸ್ಕೋದ ಪ್ರವಡಾ ಪತ್ರಿಕೆಯು ಬರೆದಿದೆ.

ಅಮೆರಿಕಾದ ನ್ಯೂಯಾರ್ಕ್ ನಗರದಲ್ಲಿ ಕೂಡಿದ ವಿಶ್ವದ ಯುಕ್ತರಾಷ್ಟ್ರಗಳ ಸಭೆಯಲ್ಲಿ ಹಿಂದೂಸ್ತಾನದ ಬೇಡಿಕೆಗಳನ್ನು ಕೂಡಲೆ ಮನ್ನಿಸಬೇಕೆಂದು ರಶಿಯಾದ ಪರರಾಷ್ಟ್ರ ಮಂತ್ರಿಗಳಾದ ಮೊಲಟೊವರು ಸೂಚಿಸಿದರು.

ಕೇಂದ್ರದಲ್ಲಿ ಸಂಯುಕ್ತ ಮಂತ್ರಿಮಂಡಳ

ಪಂಡಿತ ಜವಹರಲಾಲರ ಮನೆಯಲ್ಲಿ ಸಲಹೆಗಾಗಿ ಕೂಡಿದ ಮಂತ್ರಿಮಂಡಲದ ಸಭೆಗೆ ಮುಸ್ಲಿಂಲೀಗ್ ಸದಸ್ಯರು ಬರಲಿಲ್ಲ. ಇದೆಂಥಾ ಸಹಕಾರದ ಲಕ್ಷಣವೋ ಹೇಳಲು ಬರುವಂತಿಲ್ಲ. ಕಾಂಗ್ರೆಸ್ ಮತ್ತು ಲೀಗ್ ಸದಸ್ಯರು ಮುಂದೆ ಯಾವ ರೀತಿಯಲ್ಲಿ ಸಹಕರಿಸಿ ದೇಶೋಪಯುಕ್ತ ಕಾರ್ಯಗಳನ್ನು ಮಾಡುವರೆಂಬುದನ್ನು ನೋಡಬೇಕಾಗಿದೆ. ತಾವು ಸಹಕರಿಸಲಿರುವದಿಂದು ಲೀಗ ಮುಖ್ಯರಾದ ಲಿಯಾಕತ್ ಅಲಿಖಾನರು ವೃತ್ತ ಪತ್ರಿಕೋದ್ಯೋಗಿಗಳ ಸಭೆಯಲ್ಲೇನೋ ಹೇಳಿರುವರು.

ಬಳ್ಳಾರಿ ಮುನಿಸಿಪಾಲಿಟಿ ಚುನಾವಣೆ

ಪ್ರಕಟನೆಯ ತಾರೀಖು	4-11-46
ನಾಮಪತ್ರ (Nominations) ಕೊಡುವ ದಿನಗಳು	11,12, 13-11-46
ನಾಮಪತ್ರಗಳ ಪರಿಶೀಲನೆ	14-11-46
ಸರಿಯಾದ ನಾಮಪತ್ರಗಳ ಪ್ರಕಟನೆ	18-11-46
ಚುನಾವಣೆ	18-12-46
ಫಲಿತಾಂಶ ಪ್ರಕಟವಾಗುವದಿನ	20-12-46

ತುಂಗಭದ್ರಾ ಆಣೆಕಟ್ಟು

ಮದ್ರಾಸ್ ಹೈದರಾಬಾದ್ ಸರಕಾರಗಳು ಕೆಲ ವಿವರಗಳ ಬಗ್ಗೆ ಒಡಂಬಡಿಕೆಗೆ ಬಂದಿರುವರು, ಈಗಿನಿಂದ 8 ವರ್ಷಗಳೊಳಗಾಗಿ ಮುಗಿಯುವ ಈ ಆಣೆಕಟ್ಟಿನಹತ್ತರ ಪ್ರಥಮದಲ್ಲಿ ವಿದ್ಯುಚ್ಛಕ್ತಿ ಉತ್ಪನ್ನಕ್ಕಾಗಿ ನೀರು ಬಳಸಲ್ಪಡುವುದು. ನಂತರ 15 ಮೈಲುಗಳಾದಮೇಲೆ ಬುಕ್ಕಸಾಗರದಹತ್ತಿರ 110 ಅಡಿಗಳ ಕೆಳಗೆ ಬೀಳುವುದರಿಂದ, ಅಲ್ಲಿ ಯಂತ್ರಾಲಯವನ್ನಿಟ್ಟು ವಿದ್ಯುಚ್ಛಕ್ತಿಯ ಉತ್ಪನ್ನವು ಆಗುವುದು. ಕೆರೆಯ ಉದ್ದ 8200 ಅಡಿ ಎತ್ತರ 160 ಅಡಿ ಇದರಲ್ಲಿ 138 ಚದರ ಮೈಲಿನೀರುನಿಲ್ಲುವುದು. ಈಗಿನ ಒಪ್ಪಂದದಂತೆ ಕೆರೆಯಿಂದ ಈಎರಡು ಸರ್ಕಾರಗಳು 65 ಸಾವಿರ M. C. H. ನೀರು ತೆಗೆದುಕೊಳ್ಳಬೇಕು.

8½ ಅಡಿ ವ್ಯಾಸವುಳ್ಳ 4 ಪೈಪುಗಳನ್ನಿಟ್ಟು ಆ ಮೂಲಕ ಮದ್ರಾಸ ಭಾಗಕ್ಕೆ ಬೇಕಾದ ನೀರು ತೆಗೆದುಕೊಳ್ಳಲಾಗುವುದು. ಮದ್ರಾಸ್ ಪ್ರಾಂತದಲ್ಲಿ 2—94 ಲಕ್ಷ ಎಕರೆ ಭೂಮಿ ಸಾಗುವಳಿಯಾಗುವದು ಇದರಲ್ಲಿ 36000 ಎಕರೆ ನೀರಾವರಿ ಭೂಮಿ ಮತ್ತು ತೋಟದಸಾಗುವಳಿ ಇದೆ. ಉಳಿದುದೆಲ್ಲಾ ಒಣಭೂಮಿ ಆಣೆಕಟ್ಟನ್ನು ಕಟ್ಟುವ ಅರ್ಧಖರ್ಚು, ವಿದ್ಯುತ್ಕೇಂದ್ರ ಮತ್ತು ಕಾಲುವೆಗಳ ನೆಚ್ಚ ಮದ್ರಾಸ್ ಸರ್ಕಾರಕ್ಕೆ 10 ಕೋಟಿ ರೂಪಾಯಿಗಳಾಗುವದು.

ಮಹಾತ್ಮಗಾಂಧಿ

ಪೂರ್ವ ಬಂಗಾಲದ ಪೀಡಿತ ಪ್ರದೇಶಗಳಲ್ಲಿ ಸಂಚರಿಸಿ ಪೀಡಿತರಾಸಪರಿಗೆತಕ್ಕ ಶಾಂತಿ ಸಮಾಧಾನಗಳನ್ನು ಹೇಳಿ ಸಹಾಯವನ್ನೊದಗಿಸಲು ಗಾಂಧೀಜಿಯವರು ಮೂರು ವಾರಗಳವರೆಗೆ ಸಂಚರಿಸಲಿದ್ದಾರೆ. 30 ನೆಯ ದಿನಾಂಕ ಕಲ್ಕತ್ತೆಯಲ್ಲಿ ಗಾಂಧೀಜಿಯವರು ಗವರ್ನರ್ ಬರೋಸ್‌ರವರನ್ನು ಕಂಡರು. ಮುಖ್ಯ ಮಂತ್ರಿಗಳಾದ ಸುಹ್ರವರ್ದಿಯವರು ಗಾಂಧೀಜಿಯನ್ನು ಕಂಡು ಪರಿಸ್ಥಿತಿಯನ್ನು ನಿವೇದಿಸಿದರು.

ವೈಸ್ರಾಯರ ಆಶೆ

ಜಾತಿಯ ಗಲಭೆಗಳಿಂದ ಜನ ಜೀವನವೇಕೆಟ್ಟು ಭಾರತದ ಒಳ್ಳೆಯ ಹೆಸರಿಗೆ ಕಳಂಕ ತಟ್ಟುತ್ತಲಿದೆ ಇದನ್ನು ನಿಲ್ಲಿಸಲು ಎಲ್ಲರು ಪ್ರಯತ್ನಿಸಿರಿ, ನನ್ನ ಈ ವಿಜ್ಞಾಪನೆಗೆ ನೂತನ ಸರಕಾರದ ಬೆಂಬಲವುಂಟು-ಹಿಂದೂಸ್ತಾನದ ಸದ್ಯದ ಬಿಕ್ಕಟ್ಟಿನ ಸಮಸ್ಯೆಗಳನ್ನು ಬಿಡಿಸಿ, ಹೊಸರಾಜ್ಯ ಘಟನೆಯ ನಿರ್ಮಾಣಮಾಡಿ, ಬ್ರಿಟಿಷ್ ಸರ್ಕಾರದವರು ಹಿಂದೂಸ್ತಾನಕ್ಕೆ ಪೂರ್ಣವಾಗಿ ಅಧಿಕಾರಗಳನ್ನು ಬಿಟ್ಟುಕೊಡುವಂತಾಗಲು, **ತಾತ್ಕಾಲಿಕ ಸರ್ಕಾರದ ಎಲ್ಲಾ ಬಣದ ಸದಸ್ಯರೂ** ಒಕ್ಕಟ್ಟಿನಿಂದ ಕೆಲಸಮಾಡಲಿ ಎಂಬುದೇ ನನ್ನ ಆಶೆ.

ಶ್ರೀ ರಾಜೇಂದ್ರ ಪ್ರಸಾದ್.

ಕೇಂದ್ರ ಪ್ರಭುತ್ವದ ಆಹಾರ ಶಾಖೆಯ ಮಂತ್ರಿಗಳಾದ ಬಾಬುರಾಜೇಂದ್ರರು ಸಿಂಧ ಪ್ರಾಂತದಲ್ಲೂ ಸಂಚರಿಸಿ ದಕ್ಷಿಣಕ್ಕೆ ಆಹಾರ ಕಳುಹಿಸಲು ಯತ್ನಿಸುವವರಿದ್ದಾರೆ.

ಮದ್ರಾಸ್ ಗವರ್ನರರು ತಮ್ಮ ಮನೆ ಖಾಲಿ ಮಾಡಿದರು.

ಮದ್ರಾಸ್ ಮೌಂಟು ರೋಡಲ್ಲಿದ್ದ ವಿಶಾಲ ಭವನವನ್ನು ಗವರ್ನರರು ಖಾಲಿಮಾಡಿ ಸರ್ಕಾರದವರಿಗೆ ಕೊಟ್ಟು ಬಿಟ್ಟಿರುವರು. ಅವರು ಇನ್ನುಮೇಲೆ ಗಿಂಡಿಯಲ್ಲಿ ವಾಸಿಸುವರು. ಆರೋಗ್ಯಶಾಖೆಯವರಿಗೆ ಇದರ ಸ್ವಚ್ಛತೆಯ ಬಗ್ಗೆ ಏರ್ಪಡಿಸಲು ಕೇಳಿಕೊಳ್ಳಲಾಗಿದೆ.

ಈರೋಡ್ ದೇವಸ್ಥಾನಗಳಲ್ಲಿ ಹರಿಜನರ ಪ್ರವೇಶ ಸಮಾರಂಭವು ಅಕ್ಟೋಬರ್ 30ನೆಯ ದಿನಾಂಕ ಮಾನ್ಯಮಂತ್ರಿಗಳಾದ ಶ್ರೀ ಕೋಟಯ್ಯರೆಡ್ಡಿಯವರಿಂದಾಯಿತು. ಪೆರುಮಾಳ್ ಮತ್ತು ಈಶ್ವರದೇವಸ್ಥಾನಗಳಲ್ಲಿ ಸುಮಾರು ಒಂದುಸಾವಿರ ಹರಿಜನರು ಪ್ರವೇಶಿಸಿ ಪೂಜಾರ್ಚನೆಗಳನ್ನು ಮಾಡಿದರು.

ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿ

ಬಳ್ಳಾರಿ ಕ್ರಾಫ್ಟ್ಸನ್ ಕ್ಲಬ್‌ನಲ್ಲಿ ಸ್ತ್ರೀಯರ ಸಮಾವೇಶ.

28 ನೆಯ ತಾ: ಸೋಮವಾರ, ಮದ್ರಾಸ್ ಆರೋಗ್ಯ ಮಂತ್ರಿಗಳಾದ ಶ್ರೀಮತಿ ರುಕ್ಮಿಣೀ ಲಕ್ಷ್ಮೀಪತಿಯವರ ಸನ್ಮಾನಾರ್ಥವಾಗಿ ಬಳ್ಳಾರಿ ಕ್ರಾಫ್ಟ್ಸನ್ ಕ್ಲಬ್‌ನಲ್ಲಿ ಸ್ತ್ರೀಯರ ಸಮಾವೇಶವಾಗಿ ಕಲೆಕ್ಟರ್‌ರವರ ಪತ್ನಿಯವರಾದ ಶ್ರೀಮತಿ ಅನಂತ ರಾಮನ್‌ರವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮವು ನಡೆಯಿತು. ಕ್ಲಬ್ ಕಾರ್ಯದರ್ಶಿಗಳಾದ ಶ್ರೀಮತಿ ಸಾಲೊಮನ್‌ರವರು ಕ್ಲಬ್ ಪರವಾಗಿ ಅವರನ್ನು ಸ್ವಾಗತಿಸಿದನಂತರ ಅಖಿಲಭಾರತ ಮಹಿಳಾ ಸಂಘದ ಬಳ್ಳಾರಿ ಶಾಖೆಯ ಕಾರ್ಯದರ್ಶಿ ಶ್ರೀಮತಿ ಮುತ್ತಣ್ಣನವರು ಸದರಿ ಶಾಖೆಯು ಪ್ರಾರಂಭವಾದ 1937 ರಿಂದ, ಇಂದಿನವರೆವಿಗೆ ನಡೆದ ಕಾರ್ಯಕ್ರಮದ ಸಂಕ್ಷಿಪ್ತ ವರದಿಯನ್ನೋದಿ ಹೇಳಿದರು ಗೃಹ ಶಿಶ್ರೂಷೆ, ಪ್ರಾಥಮಿಕ ಚಿಕಿತ್ಸೆ, ವಗೈರೆ ಕಾರ್ಯಗಳು ಆರೋಗ್ಯ ಸಮಿತಿಯಿಂದ ನಡೆದಿರುವುದನ್ನು ವಿವರಿಸಿ, ವಯಸ್ಕರ ಶಿಕ್ಷಣಕ್ಕೆ ಸಂಘವು ಸಾಕಷ್ಟು ದುಡಿಯುತ್ತಲಿರುವುದೆಂದು ತಿಳಿಸಿದರು, ಘೋಷಾ ಆಸ್ಪತ್ರೆಯು ಊರಮಧ್ಯಭಾಗದಲ್ಲಿದ್ದು, ಸೌಕರ್ಯಗಳಿಲ್ಲದಿದೆ, ಊರಹೊರಗೆ ವಿಶಾಲವಾದ ಮತ್ತು ಆರೋಗ್ಯಕರವ್ಯ ದೇಶಕ್ಕೆ ಸಾಗಿಸಿ ಅದರ ಮೇಲ್ವಿಚಾರಣೆಗೆ ಹೆಚ್ಚು ಸಂದರ್ಶಕರನ್ನು (More Health Visitors) ನಿಯಮಿಸಲು A. I. W. C. ಕಾರ್ಯದರ್ಶಿಗಳಾದ ಶ್ರೀಮತಿ ಮುತ್ತಣ್ಣನವರು ಸೂಚಿಸಿದರು.

ಆರೋಗ್ಯ ಮಂತ್ರಿಗಳು ಪ್ರತ್ಯುತ್ತರವೀಯುತ್ತಾ ಪ್ರಜಾಪ್ರಭುತ್ವವು ಈ ಕುಂದು ಕೊರತೆಗಳನ್ನೆಲ್ಲಾ ನಿವಾರಿಸುವುದಾಗಿಯೂ, ಖಾಸಗಿ ದಾಯಿ ಜನರು ಸರ್ಕಾರೀ ಆಸ್ಪತ್ರೆಯಲ್ಲಿ ಕೆಲಸಮಾಡಲು ಅನುಕೂಲಿಸುವಂತೆ ಸರ್ಕಾರಿ ಅಜ್ಞೆಯ ಸವರಣೆಮಾಡಿ ಮಹಿಳಾಶಾಖೆಯವರು ದಾಯಿ ಶಿಕ್ಷಣಕ್ಕೆ ಏರ್ಪಡಿಸುವಂತೆ ಮಾಡುವೆನೆಂದು ವಾಗ್ದಾನಮಾಡಿದರು. ವಯಸ್ಕರ ಶಿಕ್ಷಣದ ಕಾರ್ಯವನ್ನು ಪ್ರಶಂಶಿಸಿದರು. ಸ್ತ್ರೀಯರು ಸಹ ಚುನಾವಣೆಗಳಲ್ಲಿ ಭಾಗವಹಿಸತಕ್ಕದ್ದೆಂದೂ ಸ್ತ್ರೀಯರಅಭಿವೃದ್ಧಿ ಹಕ್ಕುಗಳಿಗೆ ಸಂಬಂಧಿಸಿದ ಸರ್ಕಾರ ದಶಾಸನಗಳಿಗೆಲ್ಲಾ ಬೆಂಬಲಕೊಡಬೇಕೆಂದೂ, ದೇವದಾಸಿ ಪದ್ಧತಿ ವಿರೋಧವಾಗಿ ಪ್ರಚಾರ ಕೈಗೊಳ್ಳಬೇಕೆಂದೂ ಸೂಚಿಸಿದರು,

ಶ್ರೀಮತಿ ವೇದಗಿರಿಶೆಟ್ಟಿಯವರು ವಂದನಾರ್ಪಣೆ ಮಾಡಿದನಂತರ ಕವೀರವೀಂದ್ರರ 'ಜನಗಣಮನ' ಗೀತೆಯಿಂದ ಸಮಾವೇಶ ಸಮಾಪ್ತಿಯಾಯಿತು

ಎಮ್ಮಿಗನೂರು

ಬಳ್ಳಾರಿ ತಾಲೂಕು ಎಮ್ಮಿಗನೂರಲ್ಲಿ 31 ನೆಯ ದಿನಾಂಕ ಬಳ್ಳಾರಿ ವಿದ್ಯಾಧಿಕಾರಿಗಳಧ್ಯಕ್ಷತೆಯಲ್ಲಿ ಒಂದು ಕರ್ನಾಟಕ ಸಂಘವು ಸ್ಥಾಪಿಸಲ್ಪಟ್ಟಿತು, ಶ್ರೀ ಬೆಟಗೇರಿ ಚನ್ನಬಸಪ್ಪನವರು ವಿರುಪಾಕ್ಷಪ್ಪನವರು ವೆಂಕೋಬಯ್ಯನವರು ಕೌತಾಳದ ದೊಡ್ಡಬಸಪ್ಪನವರು ಅನುಕ್ರಮವಾಗಿ ಮೇಲ್ಕಂಡ ಸಂಘದ ಅಧ್ಯಕ್ಷ ಉಪಾಧ್ಯಕ್ಷ ಕಾರ್ಯದರ್ಶಿ, ಕೋಶಾಧ್ಯಕ್ಷರಾಗಿ ಆರಿಸಲ್ಪಟ್ಟರು.

ಕುರುಗೋಡು

ಶ್ರೀ ಎಸ್ ಮುರಿಬಸವನಗೌಡರಧ್ಯಕ್ಷತೆಯಲ್ಲಿ 30 ನೆಯ ತಾ ಕರ್ನಾಟಕ ಸಂಘವು ಸಾಪಿನಾಯಿತು ಶ್ರೀಗಳಾದ ಚಂದ್ರ. ಶೇಖರಪ್ಪ, ರಾಮಚಂದ್ರಗುಪ್ತ, ಮುರಿಬಸವನ ಗೌಡ, ಸದಸಿವ ಮೂರ್ತಿ ಮೊದಲಾದವರನ್ನೊಳಗೊಂಡ ಕಾರ್ಯಕಾರೀ ಸಮಿತಿಯು ನಿರ್ಮಿತವಾಯಿತು.

ಜಿಲ್ಲಾಬೋರ್ಡು, ಮುನಿಸಿಪಾಲಿಟಿಗಳಿಗೆ ನಿಲ್ಲುವ ಉಮೇದುವಾರರು ತಮ್ಮ ತಮ್ಮ ಪ್ರದೇಶಗಳಿಗೆ ಸಂಬಂಧಿಸಿದ ಕಾಂಗ್ರೆಸ್ ಸಂಸ್ಥೆಗಳಿಂದ ಸರ್ಟಿಫಿಕೇಟ್ ಪಡೆದರೆ ಅವರು ಬೇಡುವ ಬಣ್ಣದ ಪೆಟ್ಟಿಗೆಗಳಿಗೆ ಅವಕಾಶಮಾಡಿಕೊಡಲ್ಪಡುವುದೆಂದು ಮದ್ರಾಸ್ ಸರ್ಕಾರದವರು ಪ್ರಕಟಿಸಿರುತ್ತಾರೆ.

ಮದ್ರಾಸ್ ದಕ್ಷಿಣ ಭಾರತ ಹಿಂದೀ ಪ್ರಚಾರಸಭಾ ಪರೀಕ್ಷೆಗಳು.

ಪ್ರಾರಂಭಿಕ ಪರೀಕ್ಷೆಗಳಾದ ಪ್ರಾಥಮಿಕ ಮಧ್ಯಮೂ, ರಾಷ್ಟ್ರ ಭಾಷಾ ಪರೀಕ್ಷೆಗಳು ವರ್ಷಕ್ಕೆ ಮೂರುಸಲ ಫಿಬ್ರವರಿ, ಆಗಷ್ಟು ನವಂಬರ್ ತಿಂಗಳು ಗಳ ಎರಡನೆಯ ಶನಿ ಭಾನುವಾರಗಳಂದಿನ ನಡೆಯುತ್ತವೆ. ಒಂದು ತಿಂಗಳ ಮುಂಚೆ ಅವೇದನ ಪತ್ರವನ್ನು ತುಂಬಿ ಶುಲ್ಕವನ್ನು ಮನಿಯೂರ್ಡರ್ ಮೂಲಕ ಕಳುಹಿಸಬೇಕು. ಪರೀಕ್ಷೆಗಳು ನಿಶ್ಚಿತ ಕೇಂದ್ರಗಳಲ್ಲಿ ನಡೆಯುತ್ತವೆ- ಒಂದೂರಲ್ಲಿ ಹತ್ತು ಜನರಿಗಿಂತಲೂ ಹೆಚ್ಚಿಗೆ ಪರೀಕ್ಷೆಗಳಿಗೆ ಕೂಡುವವರಿದ್ದಾರೆ, ಎರಡು ತಿಂಗಳಮುಂಜೆಯೇ ಬೇಡಿಕೆ ಕಳುಹಿಸಿದಲ್ಲಿ ಅವೂರಿನ ಶಾಲಾ ಹೆಡ್ಮಾಷ್ಟರರಿಗಾಗಲಿ, ಮತ್ತೊಬ್ಬ ಜವಾಬ್ದಾರಿ ಮನುಷ್ಯನಿಗಾಗಲಿ ಪರೀಕ್ಷೆಯನ್ನು ನಡೆಸುವ ಅಧಿಕಾರವು ಕೊಡಲ್ಪಟ್ಟು' ಶೀಲಾದ ಪ್ರಶ್ನೆ ಪತ್ರಗಳು ಪರೀಕ್ಷೆಗೆ ಒಂದೆರಡು ದಿನವಮುಂಜೆ ಬರುತ್ತವೆ. ಪರೀಕ್ಷಾನಂತರ ಉತ್ತರ ಪುಸ್ತಕಗಳನ್ನು ಶೀಲುಮೂಡಿ ರಿಜಿಸ್ಟರ್‌ನಿಂದ ಮದ್ರಾಸಿಗೆ ಕಳುಹಿಸಬೇಕು.

ಉನ್ನತ ಪರೀಕ್ಷೆಗಳಾದ ಪ್ರವೇಶಿಕ, ವಿಶಾರದ ಪ್ರಚಾರಕ, ವಿಶೇಷ ಯೋಗ್ಯತಾ, (ಮದ್ರಾಸ್ ದ.ಹಿ ಸಭೆ) ವಿದ್ವಾನ್ ಮದ್ರಾಸ್ ಯೂನಿವರ್ಸಿಟಿ) ಭಾಷಾ ಪ್ರವೀಣ (ಆಂಧ್ರಯೂನಿವರ್ಸಿಟಿ) ಪರೀಕ್ಷೆಗಳಿಗೆ ನಿಶ್ಚಿತ ಕೇಂದ್ರಗಳಿರುತ್ತವೆ. ಈಪರೀಕ್ಷೆಗಳು ಹೆಚ್ಚು ಕಡಿಮೆ, ಬಿ. ಎ, ಎಂ ಎ. ಡಿಗ್ರೀ ಪರೀಕ್ಷೆಗಳಿಗೆ ಸರಿಸಮಾನವಿದ್ದು ಸಾಹಿತ್ಯ ವಿಷಯಗಳಿಗೆ ವಿಶೇಷ ಪ್ರಧಾನತೆಯಿವೆ ಈ ಪರೀಕ್ಷೆಗಳ ಪುಸ್ತಕ ಶಿಕ್ಷಣ ಪ್ರಣಾಲಿ ಸಹಾಯಕ ಗ್ರಂಥ ಅಭ್ಯಾಸಕ್ರಮ ಅವಧಿ ಪರೀಕ್ಷಾಶುಲ್ಕ ವಗೈರೆ, ಕೂಡುವ ವಿದ್ಯಾರ್ಥಿಗಳು ಪ್ರಚಾರಕರ ಹತ್ತಿರಬಂದು ಮುಖಕಃ ಎಲ್ಲಾ ಸಂಗತಿಗಳನ್ನು ಅರಿಯಬಹುದು.

ಪ್ರಾಥಮಿಕಕ್ಕೆ ೧೦೦ ಅಂಕಗಳ ಪ್ರಶ್ನ ಪತ್ರವೊಂದಿದ್ದು ೩೫ ಅಂಕೆಗಳನ್ನು ಸಂಪಾದಿಸಿದವರು ಉತ್ತೀರ್ಣರೆಂದು ಗಣಿಸಲ್ಪಡುವರು. ಮಧ್ಯಮಕ್ಕೂ, ರಾಷ್ಟ್ರಭಾಷೆಗೂ ೧೦೦ ಅಂಕೆಗಳ ಎರಡೆರಡು ಪ್ರಶ್ನೆ ಪತ್ರಗಳಿದ್ದು ಶೇಕಡ ೪೦ ಅಂಕ ಸಂಪಾದಿಸಿದವರು ಉತ್ತೀರ್ಣರಾಗುವರು. ಈ ಪರೀಕ್ಷೆಗಳಲ್ಲಿ ಶೇಕಡ ೬೦ ಅಂಕಗಳನ್ನು ಹೊಂದಿದವರು ಪ್ರಥಮವರ್ಗದಲ್ಲಿ ಉತ್ತೀರ್ಣರೆಂದು ಭಾವಿಸಲಾಗುವದು. ಪರೀಕ್ಷೆಯು ನಡೆದ ಎರಡುತಿಂಗಳೊಳಗಾಗಿ ಫಲಿತಾಂಶವು ಪ್ರಕಟವಾಗುವದು. ಮತ್ತೊಂದು ತಿಂಗಳೊಳಗಾಗಿ ಪ್ರಮಾಣಪತ್ರ (Certificate) ಕೊಡಲಾಗುವದು.

ಈ ಪರೀಕ್ಷೆಗಳು ಸುಲಭವಿದ್ದು ಸ್ವಯಂ ಅಭ್ಯಾಸದಿಂದ ಅನೇಕ ವಿದ್ಯಾರ್ಥಿಗಳು ಮೂರು ಪರೀಕ್ಷೆಗಳನ್ನು ಪಾಸುಮಾಡಿರುವ ಉದಾಹರಣೆಗಳಿವೆ. ಇವೆ. ಶಾಸ್ತ್ರೀಯವಾಗಿ ವಿದ್ಯಾಲಯದಲ್ಲಿ ಕಲಿಯಬೇಕೆಂಬುವವರಿಗೆ ಪದ್ಮಕ್ಕೆ ಮದ್ರಾಸ್ ಕಡಪಾಗಳಲ್ಲಿವಿದ್ಯಾಲಯದ ಸೌಕರ್ಯವನ್ನು ಏರ್ಪಡಿಸಲಾಗಿದೆ.

ಮದ್ರಾಸ್ ಕಾಂಗ್ರೆಸ್ ಸರ್ಕಾರದವರು ಈವರ್ಷ ೫೦೦ ಮಿಡಲ್ ಮತ್ತು ಹೈಸ್ಕೂಲ್‌ಗಳಲ್ಲಿ ಹಿಂದೀ ಶಿಕ್ಷಣಕ್ಕೆ ಏರ್ಪಡಿಸಿರುವರು, S.S.L.C. ಪ್ಯಾಸಾಗಬೇಕೆಂಬ ನಿಯಮವನ್ನು ತೆಗೆದುಹಾಕಿ, ಸಂಸ್ಕೃತ, ಉರ್ದೂ, ಕನ್ನಡ, ತೆಲುಗು ಪಂಡಿತರಿಗೆ ಕೊಟ್ಟಸ್ಥಾನವನ್ನು ಇವರಿಗೆ ಕೊಟ್ಟು ನವಕರಿಗಳನ್ನು ಕಾಯಂ ಮಾಡಿ ಪ್ರಾವಿಡೆಂಟ ಫಂಡ್ ಸೌಕರ್ಯವನ್ನು ಒದಗಿಸಿ ಕೊಟ್ಟಿರುವರು ವಿಶಾರದ ಅಥವಾ ಪ್ರಚಾರಕ ಅಥವಾವಿದ್ವಾನ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ 50-2-75 ರ ಸ್ಕೇಲಿನಂತೆ ಸಂಬಳಕೊಡಲಾಗುವುದು, ಪ್ರಥಮಕ್ಕೆ ಹಿಂದೂಸ್ತಾನೀ ಉಪಾಧ್ಯಾಯರಾಗಿ ಸೇರುವವರಿಗೆ ತುಟ್ಟೀಭತ್ಯ ೧೬ ರೂ. ದೊಂದಿಗೆ ಮಾಸಿಕ 66- ಸಿಕ್ಕುವದು. ಆದರೆ ಈಗ ಉಪಾಧ್ಯಾಯರಿಲ್ಲದೆ ತೊಂದರೆಯಾಗಿದೆ.

ಅಧ್ಯಾಪಕರಿಗೆ ಉರ್ದೂಲಿಪಿಯು ಅವಶ್ಯಕವಾಗಿ ಬರಬೇಕು. ಈಗ ಜಾರಿಯಲ್ಲಿ ತಂದಿರುವ ಹಿಂದೂಸ್ತಾನೀ ಭಾಷೆಗೂ, ಉರ್ದೂ ಭಾಷೆಗೂ ಹೆಚ್ಚುವ್ಯತ್ಯಾಸವಿಲ್ಲ. ವಿದ್ಯಾರ್ಥಿಗಳು ನಾಗರೀ ಬೇಕೆಂದರೆ ನಾಗರಿ, ಉರ್ದೂಲಿಸಬೇಕೆಂದರೆ ಅದರಲ್ಲಿ ಕಲಿಸುವ ಸಾಮರ್ಥ್ಯ ಉಪಾಧ್ಯಾಯರಲ್ಲಿರಬೇಕು.

ಈಕಾರಣ, ಹಿಂದೀ ಪ್ರೇಮಿಗಳೆಲ್ಲಾ ಭಾರತದಲ್ಲಿ ರಾಷ್ಟ್ರಭಾಷೆಯ ಪ್ರಚಾರವಾಗುವುದು. ಆವಶ್ಯಕವೆಂಬ ದೃಷ್ಟಿಯಿಂದ ಇದನ್ನು ಕಲಿಯಬೇಕೆಂದು ನಮ್ಮ ಸೂಚನೆ.

ಪ್ರಾರಂಭಿಕ ಪರೀಕ್ಷಾ ಪುಸ್ತಕಗಳು (೧೯೪೬ಕ್ಕೆ)

ಪ್ರಾಥಮಿಕ ಪರೀಕ್ಷೆ

ಬಚ್ಚೋಂಕೆ ಕಿತಾಬ್
ಪಹಲೀ ,,
ದೂಸರೀ ,,
ರಸೀಲೀ ಕಹಾನಿಯಾ,
ಹಿಂದೀರಚನಾ I ಭಾಗ
ಸರಳಹಿಂದೀವ್ಯಾಕರಣ I ಭಾಗ

ಪುಸ್ತಕಗಳ ಕ್ರಯ 3-8-0
ಪರೀಕ್ಷಾಶುಲ್ಕ 1—0—0

ಮಧ್ಯಮಾ ಪರೀಕ್ಷೆ,

ಒಂದನೆಯ ಪ್ರಶ್ನೆ ಪತ್ರಿಕೆ,
ತೀಸರೀ ಕಿತಾಬ
ಚಾರ ಏಕಾಂಕಿ,
೨ ನೆಯಪ್ರಶ್ನಪತ್ರ,
ಅರ್ಜಿನ,
ಐತಿಹಾಸಿಕ ಕಹಾನಿಯಾ,
ಹಿಂದೀರಚನಾ II ಭಾಗ
ಹಿಂದೀಪತ್ರಲೇಖನ
ಸರಳಹಿಂದೀ ವ್ಯಾಕರಣ

ಪುಸ್ತಕಗಳ ಕ್ರಯ, 5—8—0
ಪರೀಕ್ಷಾಶುಲ್ಕ 2—0—0

ರಾಷ್ಟ್ರ ಭಾಷೆ,

೧ ನೆಯ ಪಶ್ನಪತ್ರಿಕೆ,
ಹಿಂದೀಮೂಧುರೀ I
ಫೂಲೋಂಕಾ ಗುಚ್ಛ
ಆಲಾದೀನಕಾ ಚಿರಾಗ,
ಮೇವಾಡಪತನ,
೨ ನೆಯ ಪ್ರಶ್ನಪತ್ರ,
ನೌಕಹಾನಿಯಾಂ
ಹೈದರಲೀ
ಅನುವಾದ III ಭಾಗ
ಸರಳಹಿಂದಿ ವ್ಯಾಕರಣ III ಭಾಗ

ಪುಸ್ತಕಗಳ ಕ್ರಯ 7—8—0
ಪರೀಕ್ಷಾಶುಲ್ಕ 3—0—0

ಅವೇದನ ಪತ್ರ ಮತ್ತು ಇತರ ವಿವರಗಳಿಗಾಗಿ ರಿಪ್ಲೇಕಾರ್ಡ್ ಇಲ್ಲವೇ ಸ್ಟ್ಯಾಂಪಿಟ್ಟು ಬರೆದರೆ ಜವಾಬು ಕೊಡಲಾಗುತ್ತದೆ. **ಹಿಂದೀಮಂದಿರ ' ನವಭಾರತ ' — ಬಳ್ಳಾರಿ.**

ಜವಳಿ ಗಿರಣಿಗಳು

ಹಿಂದೂಸ್ತಾನಕ್ಕೆ ಹೊಸದಾದ ೧೨೫ ಕಾಟನ್ ಜವಳಿ ಗಿರಣಿಗಳಿಗಾಗಿ ಅಪ್ಪಣೆ ಕೊಡಲಾಗಿದೆಯೆಂದು ಶ್ರೀ ಶ. ರಾಜಗೋಪಾಲಾಚಾರಿ ಯವರು ಔದ್ಯೋಗಿಕ ಮಂತ್ರಿಗಳ ಪರವಾಗಿ ಹೇಳಿದರು ಬೊಂಬಾಯಿ ೨೪, (೩೫೨೦೦೦ ಕದುರು) ಮದ್ರಾಸ್ ೧೬ (೩೨೫೦೦೦ ಕದುರು) ಬೆಂಗಾಲ ೧೨ ಯು. ಪಿ. ೧೫, ಪಂಜಾಬ್, ಬೀಹಾರ್ ಶ. ಪಿ. ಅಂಡ್ ಬೀರಾರ ೪, ಒರಿಸ್ಸ 2 ಸಂಸ್ಥಾನಗಳು ೩೨- ಈಗ ಹಿಂದೂಸ್ತಾನದಲ್ಲಿ ೪೧೭ ಗಿರಣಿಗಳಿವೆ,

ಯುಕ್ತರಾಷ್ಟ್ರ ಸಭೆ

ದಕ್ಷಿಣ ಆಫ್ರಿಕಾ ಭಾರತೀಯರ ಪ್ರಶ್ನೆ

ದಕ್ಷಿಣ ಆಫ್ರಿಕಾದ ಭಾರತೀಯರನ್ನು ಕೆಟ್ಟರೀತಿಯಿಂದ ನಡೆಸಿಕೊಳ್ಳುವುದು ಸರಿಯಷ್ಟೆ ಅಲ್ಲಿಯ ಪ್ರಧಾನರಾದ ಜನರಲ ಸ್ಮಟ್ಸರವರು ಹಿಂದೂಸ್ತಾನದ ವಿಷಯವನ್ನು ವಿಷಯ ಪಟ್ಟಿಯಿಂದ ತೆಗೆದುಹಾಕಲು ಹೇಳಿದರು. ರಷ್ಯಾ ಮತ್ತು ಚೀನಾದ ಪ್ರತಿನಿಧಿಗಳು ಹಿಂದೂಸ್ತಾನದ ಪ್ರತಿನಿಧಿಗಳಿಗೆ ಬೆಂಬಲಕ್ಕೊಟ್ಟರು. ಶ್ರೀಮತಿ ವಿಜಯಲಕ್ಷ್ಮಿ ಪಂಡಿತರವರು ರಾಷ್ಟ್ರೀಯಸರ್ಕಾರದ ಪರವಾಗಿ ಪ್ರಥಮದಲ್ಲಿ ಮಾತಾಡುತ್ತಿರುವೆನೆಂದು ಹೇಳಿದಾಗ ಭವನದಲ್ಲೆಲ್ಲಾ ಜಯ ಜಯ ಕಾರವಾಯಿತು ನ್ಯೂಯಾರ್ಕನಗರದ ಈ ಸಭೆಗೆ ಅನೇಕರು ಹಿಂದೂ ವೇಷಾಕು ಮತ್ತು ಗಾಂಧಿ ಟೊಪ್ಪಿಗೆಗಳನ್ನು ಧರಿಸಿ ಬಂದಿದ್ದರು.

ಶ್ರೀ ಟಿ. ಪ್ರಕಾಶಂ

ಮದ್ರಾಸ್ ಪ್ರಧಾನರಾದ ಶ್ರೀ ಟಿ. ಪ್ರಕಾಶಂರವರು ಡಿಲ್ಲಿಯಲ್ಲಿ ಗಾಂಧೀಜಿಯವರನ್ನು ಕಂಡು ತಮ್ಮ ಜವಳೀ ಧೋರಣೆಯನ್ನು ಕುರಿತು ವಿಚಾರ ವಿನಿಮಯ ಮಾಡಿದರು.

ಇದು ನಿಜವೇ?

ಸಿರುಗುಪ್ಪೆಯ ಶ್ರೀ ಚ್ಯಾಗಿ ಯಂಕಣ್ಣಶೆಟ್ಟರವರ ಅಂಗಡಿಗೆ ಬಟ್ಟೆ ತೆಗೆದುಕೊಳ್ಳಲು ಬಂದಾಗ ಕೆ. ಸೂಗೂರಿನ 15-16 ಹರಿಜನರಿಗೆ 23/10/46 ಬುಧವಾರ ಮಧ್ಯಾಹ್ನ 11 ಘಂಟೆಯಿಂದ ಸಾಯಂಕಾಲ 5 ಘಂಟೆಯವರೆವಿಗೂ ಕಾಯಬೇಕಾಯ್ತೆಂದೂ, ಅವರನ್ನು ದುರ್ಭಾಷೆಯಿಂದ ಅವಮಾನಮಾಡಿ ಸಬ್ಬಿದರೆಂತಲೂ ಕೊನೆಯಲ್ಲಿ ಕೆಲಸಕ್ಕೆ ಬಾರದ ಸೈನು ಬಟ್ಟೆ ಕೊಟ್ಟರೆಂತಲೂ ಸುದ್ದಿ ಬಂದಿದೆ, (ಇದರಲ್ಲಿ ನಿಜಾಂಶವೇನಾದರೂ ಇದ್ದರೆ ಸಂಬಂಧಿಸಿದವರು ಸ್ಪೇಟಮೆಂಟ ಕೊಟ್ಟಲ್ಲಿ ಮುಂದಿನ ಚರ್ಯೆತೆಗೆದುಕೊಳ್ಳಲು ಬರುತ್ತದೆ. ಸಂಪಾದಕ ನವಭಾರತ)

ಸುಭಾಸ ಬೋಸ್

ಅಖಿಲಭಾರತ ಫಾರ್ವರ್ಡ ಬ್ಲಾಕಿನ ಅಧ್ಯಕ್ಷರಾದ ಸರ್ದಾರ ಶಾರ್ದೂಲಸಿಂಗ ಕವೀಶ್ವರ ಇವರು ಸುಭಾಸರು ಸತ್ತಿರುವುದು ನಿಜವೆಂಬ ಮೂಲ ಯಾ ಸರ್ಕಾರದ ಹೇಳಿಕೆಯನ್ನು ಅಲ್ಲಗಳೆಯುತ್ತಾ ಹೇಳಿಕೆ ಕೊಟ್ಟಿರುವರು.

"ನೇತಾಜಿಯವರು ಬದುಕಿರುವುದು ನಿಶ್ಚಯ ಹಿಂದೂಸ್ತಾನವನ್ನು ಬಿಟ್ಟು ಹೋಗಲೊಪ್ಪಿ ಬ್ರಿಟಿಷರು ಕಾಂಗ್ರೆಸ್ ನೊಡನೆ ರಾಜೀ ಮಾಡಿಕೊಂಡರೆಂದು ನಾವು ಅವರಿಗೆ ತಿಳಿಸಿದರೆ ಅವರು ಬರುವರು. ಇಲ್ಲವೇ ನಾವು ಹೋರಾಟ ಹೂಡುವ ಪ್ರಸಂಗ ಬಂದಾಗ್ಲ ಅವರು ಹಾಜರಾಗುವರು. ಮೂರು ತಿಂಗಳ ಕೆಳಗೆ ಪಾರ್ಟಿಯ ಕೆಲ ಸದಸ್ಯರಿಗೆ ನೇತಾಜಿಯವರಿಂದ ಗುಪ್ತ ಸಂದೇಶಗಳು ಬಂದಿವೆ. ಅವರನ್ನು ಘಟನೆ ನಡೆದ ನಂತರ ನೋಡಿದ 3 ವರ್ತಕರ ಹೇಳಿಕೆಗಳು ನಮ್ಮಲ್ಲಿವೆ.

ಕರ್ನಾಟಕ ಕಾಂಗ್ರೆಸ್ ಸಮಿತಿ

ಕಾರ್ಯಕಾರೀಮಂಡಳದ ವಿಶೇಷ ಸಭೆಯು ಈ ಕೆಳಗಿನ ತೀರ್ಮಾನಗಳನ್ನು ಅಂಗೀಕರಿಸಿದೆ,

1) ಕೆಲ ಕಾಂಗ್ರೆಸಿಗರು ಮರಾಠಿ ಪರವಾಗಿ ಕನ್ನಡದ ವಿರೋಧಪ್ರಚಾರ ಕೈಗೊಂಡಿರುವದನ್ನು ಖಂಡಿಸುತ್ತದೆ.

2) ಎಲ್ಲಾ ಜಿಲ್ಲ ಕಾಂಗ್ರೆಸ್ ಸಮಿತಿಗಳು ಪ್ರತಿವರ್ಷ ಪ್ರಾಂತಿಕಸಮಿತಿಗೆ ಮಾನ್ಯತೆಗಾಗಿ 100/- ಕೊಡಬೇಕು.

3) ಕೆಲ ಕಾಂಗ್ರೆಸ್ ಜನರು ಸ್ವತಂತ್ರವಾಗಿ ಕೃಷಿ ಸಂಘಗಳನ್ನು ಸ್ಥಾಪಿಸಿದ್ದಾರೆ. ಹೀಗೆಮಾಡದೆ ಕಾಂಗ್ರೆಸ್ ಆಶ್ರಯದಲ್ಲೇ ರೈತ ಸಂಘಗಳ ಸ್ಥಾಪನೆಯಾಗಬೇಕು.

The Rayalaseema Bank Limited, Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— (ಬಳ್ಳಾರಿಜಿಲ್ಲಾ **ಹಡಗಲಿ, ಕೂಡ್ಲಿಗೆ,** ಚಿತ್ತೂರುಜಿಲ್ಲಾ **ನಾಗರಿಯಲ್ಲಿ**
ನಮ್ಮ ಶಾಖೆಗಳನ್ನು ಪ್ರಾರಂಭಿಸಿದೆವೆಂದು ತಿಳಿಸಲು ಹರ್ಷಿಸುತ್ತೇವೆ.

ಬಳ್ಳಾರಿ ಜಿಲ್ಲಾ:— ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ.
ಅನಂತಪುರ:— ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ.
ಚಿತ್ತೂರು:— ಚಿತ್ತೂರು, ಮದನಪಲ್ಲಿ, ತಿರುಪತಿ. **ಕರ್ನೂಲು:**— ಕರ್ನೂಲು ಪತ್ತಿಕೊಂಡ. **ಕಡಪ:**— ರಾಜಂಪೇಟ

ಫಿಕ್ಸ್‌ಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:— 3%.

ಬಿ ವಿ. ಶೇಷಗಿರಿರಾವ್, ಕಾರ್ಯದರ್ಶಿ.

TO LET

ಹಿಂದೂಸ್ತಾನಿಯು ರಾಷ್ಟ್ರಭಾಷೆ

ಇದನ್ನು ತಪ್ಪದೆ ಕಲಿಯಿರಿ.

ಪ್ರಾರಂಭಿಕ ಪರೀಕ್ಷೆಗಳಾದ ಪ್ರಾಥಮಿಕ ಮಧ್ಯಮ ರಾಷ್ಟ್ರಭಾಷೆ, ಉನ್ನತ ಪರೀಕ್ಷೆಗಳಾದ ಪ್ರವೇಶಿಕ, ವಿಶಾರದ- ಪ್ರಚಾರಕ, ಮದ್ರಾಸ್ ವಿಶ್ವವಿದ್ಯಾಲಯದ ಹಿಂದೀ- ವಿದ್ವಾನ್ ಪರೀಕ್ಷೆಗಳ ಮಾಹಿತಿಯನ್ನು ಉಚಿತವಾಗಿ ಕೊಟ್ಟು- ಶಿಕ್ಷಣದ ಏರ್ಪಾಟಿಗೆ ಸಲಹೆಗಳನ್ನು ಕೊಡಲಾಗುವುದು- ಎಲ್ಲಾಪುಸ್ತಕಗಳು ದೊರೆಯುತ್ತವೆ. **ಬಹಳ ಸುಲಭ ಭಾಷೆ-ಅತ್ಯಲ್ಪಕಾಲದಲ್ಲಿ ಕಲಿಯಬಹುದು.** **ಟಿ. ಬಿ. ಕೇಶವರಾವ್**
ಹಿಂದೀಪ್ರಚಾರಕ, ಬಳ್ಳಾರಿ

NAVA BHARAT, BELLARY

Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.		Subscription Rates.	
ವರ್ಷಕ್ಕೆ	5-0-0	One Year	5—0—0
6 ತಿಂಗಳಿಗೆ	3-0-0	Six months	3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will not be accepted for less than 6 months.	

To

SRI.....

.....

.....

Printed at Krishna Press Bellary QH No. B 17 FOR (Q.H. No B-5)
Edited & Published by T B. KESHAVARAO.

135

ಜೈಹಿಂದ್ Reg. No.M. 4746

ನವಚೈತನ್ಯ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೫ ಸಂಚಿಕೆಗಳು

ಬಳ್ಳಾರಿ ನವಂಬರು ೧೧ ಸೋಮವಾರ ೧೯೪೬

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವು.

ಗಾಂಧೀಜೀಯ ಆಮರಣಾಂತ ಉಪವಾಸವೇ ?

" ಬೀಹಾರದಲ್ಲಿ ಜಾತೀಯ ದಂಗೆಯು ನಿಲ್ಲದಿದ್ದರೆ, ಶೀಘ್ರವಾಗಿ ಗಾಂಧೀಜೀಯವರು ಬೀಹಾರಕ್ಕೆ ಬಂದು ಆಮರಣಾಂತ ಉಪವಾಸ ಮಾಡುವರು,'

ಬೀಹಾರಿನಲ್ಲಿ
ಭಯಂಕರ ಪರಿಸ್ಥಿತಿ, ಮುಖಂಡರ ಉಪದೇಶ

ಪೂರ್ವಬಂಗಾಲದಲ್ಲಿ ನಡೆದ ಘಟನೆಗಳಿಂದ ತಪ್ತರಾಗಿ ಬೀಹಾರಿನ ಜನರು ಅಲ್ಲಿನ ಅಲ್ಪಸಂಖ್ಯಾಕರಮೇಲೆ ಏರಿಹೋಗಿ ಅವರನ್ನು ಅನೇಕ ರೀತಿಯಿಂದ ಕಷ್ಟನಷ್ಟಗಳಿಗೆ ಗುರಿಮಾಡಿರುವಂತೆ ಪ್ರಕಟವಾಗಿದೆ. ಕೊಲೆ, ಸುಲಿಗೆ ಅತ್ಯಾಚಾರ ಅವ್ಯಾಹತವಾಗಿ ನಡೆದಿದೆ. ಪರಿಸ್ಥಿತಿಯನ್ನು ಹಿಡಿತದಲ್ಲಿ ತರಲು ಮಿಲಿಟರಿಯನ್ನು ಉಪಯೋಗಿಸುತ್ತಿರುವರು. ನಡುಗಾಲ ಸರ್ಕಾರದ ಮಂತ್ರಿಗಳಾದ ಬಾಬುರಾಜೇಂದ್ರ ಪ್ರಸಾದ್ ಅಬ್ದುಲ್‌ರಬ್ ನಿಸ್ತಾರ, ಮತ್ತು ಉವಾಧ್ಯಕ್ಷರಾದ ಜವಹರಲಾಲ ನೆಹರೂರವರು ಬಿಹಾರಕ್ಕೆ ತೆರಳಿ ಅಲ್ಲಿ ಶಾಂತಿಯ ಸ್ಥಾಪನೆಗೆ ಯತ್ನಿಸುತ್ತಿರುವರು. ಕಾಂಗ್ರೆಸ್ ಅಧ್ಯಕ್ಷರಾದ ಕೃಪಾಲಿನಿಯವರೂ ಹೋಗಿರುವರು.

ಜವಹರಲಾಲ ನೆಹರು:—ಸೇಡು ತೀರಿಸಿಕೊಳ್ಳಲು ಹಿಂದೂಗಳು ಮುಸಲ್ಮಾನರನ್ನು ಕೊಲ್ಲುವುದು ಮುಸಲ್ಮಾನರು ಹಿಂದೂಗಳನ್ನು ಕೊಲ್ಲುವುದು ಅತ್ಯಂತ ಹೇಯವಾದ ಕೃತ್ಯ. ಅಲ್ಪಸಂಖ್ಯಾಕರಾದ ನೆರೆಹೊರೆಯವರನ್ನು ಸಂರಕ್ಷಿಸದೆ ಅವರನ್ನು ಸಂಹಾರಮಾಡುವದೆಂದರೆ ಇದೆಂಥಾ ಧರ್ಮ ನಿತ್ಯಂಪ್ರತಿ ಒಬ್ಬರ ಭಯದಲ್ಲಿ ಮತ್ತೊಬ್ಬರು ತಲ್ಲಣಿಸಿದ್ದಾರೆ. ನೀವು ತಕ್ಷಣವೇ ಇದನ್ನು ನಿಲ್ಲಿಸದಿದ್ದರೆ ಭೂಮಿ, ಆಕಾಶಗಳಿಂದ ಗುಂಡುಗಳನ್ನು ಹಾರಿಸಿ ನಿಮ್ಮನ್ನು ಚದರಿಸಬೇಕಾಗುತ್ತದೆ

ರಾಜೇಂದ್ರ ಪ್ರಸಾದ:— ಮಹಾತ್ಮ ಗಾಂಧಿಯವರು ಸತ್ಯಾಗ್ರಹ ದೀಪವನ್ನು ಇಲ್ಲಿಯೇ ಹಚ್ಚಿದರು. ಎಲ್ಲಾ ಸ್ವಾತಂತ್ರ್ಯ ಉದ್ಯಮಗಳಲ್ಲೂ ಬೀಹಾರವು ಹಿಂದೂಸ್ತಾನಕ್ಕೆ ಮಾದರಿಯದಾಗಿದೆ ಇದಕ್ಕೆ ಕಳಂಕವನ್ನು ತರಬೇಡಿರಿ. ಗಾಂಧೀಜಿಯವರು ಇಲ್ಲಿಬಂದು ಉಪವಾಸ ಮಾಡುವರು. ಅವರ ಮರಣಕ್ಕೆ ಕಾರಣರಾಗಿ ಇಡೀಹಿಂದೂಸ್ತಾನದ ನಿಂದೆಗೆ ಗುರಿಯಾಗಬೇಡಿರಿ. ತಕ್ಷಣ ಈ ಕೃತ್ಯಗಳನ್ನು ನಿಲ್ಲಿಸಿರಿ.

ಕೃಪಾಲನಿ:— ಪೂರ್ವ ಬಂಗಾಲದಲ್ಲಿನ ಅತ್ಯಾಚಾರಗಳನ್ನು ನಿಲ್ಲಿಸಲು ಬೀಹಾರಿಗಳು ಅಲ್ಲಿಗೆ ಹೋಗಿ ಪ್ರಾಣಾರ್ಪಣೆ ಮಾಡಿದ್ದರೆ ನಾನು ಸಂತೋಷಿಸುತ್ತಿದ್ದೆ ಹೀಗೆ ಮಾಡದೆ ನಿರಪರಾಧಿಗಳಾದ ನೆರೆಹೊರೆಯವರನ್ನು ಕೊಲ್ಲುವುದು ಬಹಳ ಅನ್ಯಾಯ, ಅಧರ್ಮ, ಹೀಗೆ ಮಾಡಬೇಡಿರಿ.

ಮಹಾತ್ಮ ಗಾಂಧಿಯವರ ಪತ್ರ:— **ಬೀಹಾರಿಗಳಿಗೆ,** ಎಂದು ಸಂಬೋಧಿಸಿ ಮಹಾತ್ಮ ಗಾಂಧಿಯವರು ಹೃದಯ ಕರಗುವಂಥ ಪತ್ರವನ್ನು ಬರೆದು ದುಷ್ಕೃತ್ಯಗಳನ್ನು ತಕ್ಷಣವೇ ನಿಲ್ಲಿಸಲು ಕೇಳಿಕೊಂಡಿರುವರು. ಕೊನೆಯಲ್ಲಿ ಅವರು "ನಾನು ಆರೋಗ್ಯಕಾರಣಗಳಿಗಾಗಿ ಅಲ್ಪಾಹಾರವನ್ನು ತೆಗೆದುಕೊಳ್ಳುತ್ತಿದ್ದೆ. ಆದರೆ ಇದನ್ನೆ ಕಾಯಂ ಮಾಡಿ ಪರಿಸ್ಥಿತಿಯು ಕೆಟ್ಟಲ್ಲಿ ಮರಣಾಂತ ಉಪವಾಸವನ್ನು ಮಾಡುವೆನು" ಎಂದು ಹೇಳಿರುವರು.

ನ್ಯೂಯರ್ಕ್‌ನಗರದಲ್ಲಿ ಕೂಡಿದ ವಿಶ್ವಸಮ್ಮೇಳನದಲ್ಲಿ ದಕ್ಷಿಣ ಆಫ್ರಿಕಾದ ಭಾರತೀಯರ ಬಗ್ಗೆ ಎಲ್ಲರಿಂದಲೂ ಸಾನುಭೂತಿಯು ವ್ಯಕ್ತವಾಗುತ್ತಲಿದೆ. ಸಹಾಯವಾಗ್ದಾನವು ಬೊರೆತಿದೆ ದ. ಅ. ಮುಖ್ಯ ಪ್ರಧಾನರಾದ ಜನರಲ್ ಸ್ಮಟ್ಸ್‌ರು ಭಾಷಣಮಾಡಿ ಭಾರತೀಯರು ಇತರರೊಂದಿಗೆ ಸರಿಸಮಾನರಾಗಿರುವರೆಂದು ಸುಳ್ಳು ಹೇಳಿದರು.

ಅಮೆರಿಕಾದ ಈಗಿನ ಅಧ್ಯಕ್ಷರಾದ ಟ್ರೂಮನರ ವಿರೋಧ ಪಕ್ಷವಾದ ರಿಪಬ್ಲಿಕನರು ಚುನಾವಣೆಗಳಲ್ಲಿ ಗೆದ್ದರು. ಟ್ರೂಮನರು ರಾಜೀನಾಮೆ ಕೊಡುವರೊ?

THE NAVA BHARAT
ನವಭಾರತ
ಸಂಪಾದಕ-ಟಿ.ಪಿ.ಕೇಶವರಾವ್

9th Year of Publication.

11 th NOVEMBER 1946

ಲಂಬಾಣಿ ಚೆಂಚು ವಗೈರೆ ಗುಡ್ಡಗಾಡು ಜನರ ಅಭಿವೃದ್ಧಿ

ಮದ್ರಾಸ್ ಸರ್ಕಾರದವರು, ಪ್ರಾಂತದಲ್ಲಿನ ಲಂಬಾಣಿ ಚೆಂಚು ವಗೈರೆ ಗುಡ್ಡಗಾಡು ಜನರ ಅಭಿವೃದ್ಧಿಯನ್ನು ಕುರಿತು ಸಲಹೆ ಸೂಚನೆಗಳನ್ನು ಕೊಡಲು ಒಂದು ಸಮಿತಿಯನ್ನು ನಿಯುಕ್ತಿಸಿರುತ್ತಾರೆ ಇವರ ಮೇಲೆ ಧಾರಾಳವಾಗಿ ಪ್ರಯೋಗಿಸುತ್ತಿರುವ ಶಾಸನದ (Criminal Tribes Act) ವಿಮರ್ಶೆಯನ್ನೂ ಮಾಡಬೇಕೆಂದೂ, ಈ ಜನರು ಊರಿಂದೂರಿಗೆ ಅಲೆದಾಡದಂತೆ ನಿಲ್ಲಿಸಲುಯಾವ ಉಪಾಯಗಳನ್ನು ಕೈಗೊಳ್ಳಬೇಕೆಂಬುದನ್ನೂ ಸೂಚಿಸಲು ಸಮಿತಿಗೆ ಒಪ್ಪಿಸಲಾಗಿದೆ, ಸಂಯುಕ್ತ ಮತ್ತು ಮಧ್ಯ ಪ್ರಾಂತಗಳಲ್ಲಿರುವಷ್ಟು ಗುಡ್ಡಗಾಡು ಜನರು ಮದ್ರಾಸಿನಲ್ಲಿಲ್ಲವಾದರೂ, ಶೆಡ್ಯೂಲ್ಡ್ ರಿಪೋರ್ಟ್ ಪ್ರಕಾರಕ್ಕೆ ಗುಡ್ಡಗಾಡಿನ ಜಾತಿಗಳು ಇಲ್ಲಿ ಕ್ಕಿಂತಲೂ ಹೆಚ್ಚಿಗಿರುವುದು ಗೊತ್ತಾಗಿದೆ ಈ ಜಾತಿಗಳಲ್ಲಾ ಕಳ್ಳರೂ ದೌರ್ಜನ್ಯದ ದರೋಡೆ ಕೋರರೂ ಎಂಬ ಹಿಂದಿನ ಸರ್ಕಾರದ ಅಭಿಪ್ರಾಯವನ್ನು ನಾವು ಖಂಡಿಸುತ್ತೇವೆ ಅಲ್ಲದೆ ಕಳ್ಳರೂ, ದರೋಡೆ ಕೋರರೂ ಗುಡ್ಡಗಾಡಿನ ಅಧಿವಾಸಿಗಳೇಎಂಬ ತಪ್ಪಭಿಪ್ರಾಯವನ್ನು ನಿರ್ಮೂಲಿಸಬೇಕು. ಈ ಜನರನ್ನು ನಾಗರೀಕರನ್ನಾಗಿ, ವಿದ್ಯಾವಂತರನ್ನಾಗಿ, ದುಡಿಯುವವರನ್ನಾಗಿ, ಮಾಡುವ ಸರ್ಕಾರದ ಅಲ್ಪಸ್ವಲ್ಪಯತ್ನಗಳು ವಿಫಲವಾಗಿವೆ. ಅವರ ದಾರಿದ್ರ್ಯ ಕೀಳುದೆಶೆ ಅಲೆದಾಟ ಮತ್ತು ದುಷ್ಕೃತ್ಯಗಳಿಗೆ ಸರ್ಕಾರವೇ ಕಾರಣವಾಗಿದೆ. ಪೋಲೀಸರನ್ನು ಈ ಜನರು ಹಿಂಸಿಸುವ ಮಾನವ ರಾಕ್ಷಸರೆಂದು ಭಾವಿಸುತ್ತಿರುವರು. ಅಂಥಾ ಹಿಂಸೆಗಳಿಗೆ ಈ ಜನರು ಆಗಾಗ್ಗೆ ತುತ್ತಾಗಿರುವರು. ಇವರಲ್ಲಿ ಒಬ್ಬಿಬ್ಬ ವಿದ್ಯಾವಂತರಿದ್ದರೂ, ಬಡವರಿದ್ದು ಇವರ ಮಾತನ್ನು ಅಧಿಕಾರಿಗಳೂ ಕೇಳುವಂತಿಲ್ಲ ತಮ್ಮ ಜನರೂ ಮಾನ್ಯಮಾಡುವಂತಿಲ್ಲ ಅನೇಕ ಸಂದರ್ಭಗಳಲ್ಲಿ ಬೇರೆಯವರ ತಪ್ಪಿತಕ್ಕಾಗಿ ಇವರು ಶಿಕ್ಷೆಯನ್ನನುಭವಿಸಬೇಕು. ಆಯಾ ಪ್ರದೇಶಗಳಲ್ಲಿ ನಡೆದ ಕಳ್ಳತನ, ಅಕೃತ್ಯಗಳಿಗಾಗಿ ರಿಜಸ್ಟರ್‌ನಲ್ಲಿ ದಾಖಲುಮಾಡಿರುವ ಇವರನ್ನೇ ಹಿಡಿಯುವ ಪದ್ಧತಿ ಇದೆ. ಭೂಮಿಯಲ್ಲಿ, ಇತರ ಆಸ್ತಿಗಳಿಲ್ಲ. ಉದ್ಯೋಗಗಳಿಲ್ಲ. ಬಿಟ್ಟೀಕೆಲಸ ಪೋಲೀಸರಬಾಧೆ ಇವುಗಳಿಗೆ ಸಿಲುಕಿ ದಾರಿದ್ರ್ಯ ರೋಗಗಳಿಗೆ ಗುರಿಯಾದ ಈ ಜನರ ಸರ್ವವಿಧ ಹಿತಚಿಂತನೆ ಮಾಡುವುದು ಈಗಿನ ಕಾಂಗ್ರೆಸ್ ಸರ್ಕಾರದ ಕರ್ತವ್ಯವಾಗಿದೆ,

ಮಿಸ್ಟರ್ ಸನ್ ರವರು ಹೇಳುವಂತೆ ಈ ಜನರ ಪ್ರಾಚೀನ ಪರಂಪರೆ ನರ್ತನ ಸಂಸ್ಕೃತಿ ಇವರ ಹಾವಭಾವ ಹಾಡುಗಳಿಗೆ ಬಾಧೆ ಬರದಂತೆ ಇವರನ್ನು ಉತ್ತಮ ಗೊಳಿಸುವುದು ವಿವೇಕ ಸರ್ಕಾರಕ್ಕೆ ತಕ್ಕದಾಗಿದೆ. ಸಮಿತಿಯ ಕಾರ್ಯದರ್ಶಿಗಳು ಒಳ್ಳೆಯ ಅನುಭವಿಗಳೆಂದು ಹೇಳುತ್ತಾರೆ. ಇದು ಹೇಗಾದರೂ ಇರಲಿ ಇವರಿಗಾಗಿ ಮಾಡಿದ ಶಾಸನವು (Criminal Tribes Act) ಘಾತಕವಿರುವದರಿಂದ ಇದನ್ನು ತಪ್ಪದೆ ಅಂತರ್ಗೊಳಿಸಬೇಕೆಂದು ನಮ್ಮ ಸೂಚನೆ ಇದರ ನಂತರ ಲಂಬಾಣಿ, ಚೆಂಚು ಮತ್ತು ಇತರ ಗುಡ್ಡಗಾಡಿನ ಜನರ ಆರ್ಥಿಕ ಅಭಿವೃದ್ಧಿಗಾಗಿ ಸರಿಯಾದ ಸೂಚನೆಗಳನ್ನು ಮಾಡಿ ಅವುಗಳನ್ನು ಕಾರ್ಯರೂಪಕ್ಕೆ ತರಲು ಗಟ್ಟಿಯಾದ ಪ್ರಯತ್ನಗಳಾಗಬೇಕು.

ಮದ್ರಾಸ್ ಸರ್ಕಾರದ ಕಾಯ್ದೆ ಸೂಚನೆಗಳು.

(೧) ಜಮೀಂದಾರಿ ಗುತ್ತಾಗಳ ನಿರ್ಣಯ

ಜಮೀಂದಾರಿ ಪ್ರದೇಶದಲ್ಲಿ ರೈತರಿಗೆ ಸಹಾಯ ಮಾಡಲೋಸುಗ ಕೊಡಬೇಕಾದ ಗುತ್ತಾಗಳನ್ನು ಪರ್ಮನೆಂಟ್ ಸೆಟಲ್ಮೆಂಟ್ ರೆಗುಲೇಶನ್ ಪೂರ್ವಕ್ಕಿದ್ದ ಭೂಕಂದಾಯದ ದರಗಳಿಗೆ ಸಮಾನವಾಗಿಡುತ್ತಾರೆಂದು ಗೊತ್ತಾಗಿದೆ. ಮಂತ್ರಿವರ್ಗದ ಸಭೆಯು ಈ ನಿಯಮವನ್ನು ನಿಶ್ಚಯಿಸಿತು. 'ಜಮೀಂದಾರಿ' ಪದ್ಧತಿಯನ್ನೇ ಪೂರ್ಣವಾಗಿ ತೊಲಗಿಸುವ ಇಚ್ಛೆಯು ಸರ್ಕಾರಕ್ಕಿದ್ದು, ಅಸಂಬಂಧ ಒಂದು ಶಾಸನವು ತರಲ್ಪಡುವುದು.

(೨) ರೈತಾಕಿ ಆದಾಯದ ಮೇಲೆ ಟ್ಯಾಕ್ಸ್

ವರ್ಷಕ್ಕೆ ೫೦೦೦/- ಇದು ಸಾವಿರ ರೂ. ಗಳಿಗಿಂತಲೂ ಹೆಚ್ಚಿಗೆ ಆದಾಯವಿರುವ ರೈತರು ಇನ್ನು ಮೇಲೆ ತಮ್ಮ ಉತ್ಪನ್ನದ ಮೇಲೆ "ವ್ಯವಸಾಯಕರ" (Agricultural Income Tax) ವನ್ನು ಕೊಡಬೇಕಾಗುತ್ತದೆ, ಇದಕ್ಕಾಗಿ ಒಬ್ಬ ಪ್ರತ್ಯೇಕಾಧಿಕಾರಿಗಳು ನಿಯಮಿಸಲ್ಪಟ್ಟು ಪರಗಳು ಇನ್ನು ಮೇಲೆ ಪ್ರಕಟವಾಗಬಹುದು.

(೩) ಪೆಟ್ರೋಲ ದರದ ಹೆಚ್ಚಳ

ಪೆಟ್ರೋಲಿನ ಒಂದು ಗ್ಯಾಲನ್ನಿಗೆ ಸೇಲ್ಸ ಟ್ಯಾಕ್ಸ ದರವು ೦-೧-೬ ಇದ್ದಿತು. ಇದನ್ನು ಇನ್ನುಮೇಲೆ ೦-೩-೦ ಗಳಿಗೆ ಹೆಚ್ಚಿಸುವರು.

(೪) ಹರಿಜನರಿಗೆ ಸೌಲಭ್ಯ

ಕಾಫಿಹೋಟಲು, ರಿಫ್ರಾಶ್‌ಮೆಂಟ್, ಫಲಹಾರಗೃಹ ರಸ್ತೆ ವಾಹನ ಸೌಕರ್ಯಗಳು ಕೆರೆ ಮತ್ತು ನದಿಗಳು, ಮೊದಲಾದ ಸಾರ್ವಜನಿಕ ಪ್ರದೇಶಗಳಿಗೆ ಇತರ ಜಾತಿಗಳಿಗಿರುವಂತೆ ಹರಿಜನರಿಗೆ ಪ್ರವೇಶ ಸೌಕರ್ಯವು ದೊರೆಯಬೇಕೆಂಬ ಉದ್ದೇಶದಿಂದ ಮದ್ರಾಸ್ ಸರ್ಕಾರದವರು ಬರುವ ಅಸೆಂಬ್ಲಿ ಅಧಿವೇಶನದಲ್ಲಿ 1938 ನೆಯ ಶಾಸನಕ್ಕೆ (Madras Civil Disabilities Removal Act 1938) ಸವರಣೆ ತರಲಿದ್ದಾರೆ.

೨೦ ಬಸ್‌ಗಳಿರಬೇಕೆಂಬ ಕಂಪನಿ ನಿಯಮ ಹೋಯಿತು.

ಮದ್ರಾಸ್ ಪ್ರಾಂತದಲ್ಲಿರುವ ರಸ್ತೆಗಳಮೇಲೆ ಪ್ರಯಾಣೀಕರ ಸೌಕರ್ಯಕ್ಕಾಗಿ ಏರ್ಪಡಿಸಿರುವ ಬಸ್‌ಗಳೆಲವರು ೨೦ ಮತ್ತು ಅದಕ್ಕಿಂತ ಹೆಚ್ಚಿನ ಬಸ್‌ಗಳನ್ನಿಟ್ಟು ಸಂಘ ರೂಪವಾಗಿ ನಡೆಸಬೇಕೆಂದು ಸರ್ಕಾರದ ಆಜ್ಞೆಯಾಗಿದ್ದಿತು. ಯುದ್ಧಕಾಲದ ವಿಶೇಷ ಪರಿಸ್ಥಿತಿಯನ್ನನುಲಕ್ಷಿಸಿ, ಇಂಥಾ G. O. ಜಾರಿಯಲ್ಲಿ ತರಲಾಗಿತ್ತು. ಇದರಿಂದ ಸಣ್ಣ ಪುಟ್ಟ ಸರ್ವಿಸ್‌ಗಳವರ ಪರ್ಮಿಟ್ ರದ್ದಾಗಿ ಹೋಗುವ ಭಯದಿಂದ ದೊಡ್ಡ ಕಂಪನಿಗಳಲ್ಲಿ ಸೇರಿಕೊಳ್ಳಬೇಕಾದ ಸಂದರ್ಭ ಒದಗಿತ್ತು. ಈ ಪದ್ಧತಿಯು ಅತೃಪ್ತಿಕರವೆಂದು ತೋರಿ ಬಂದಿದೆ. ಸಣ್ಣ ಪುಟ್ಟ ಜನರು ಮುಂದಕ್ಕೆ ಬರಲು ಸೂರ್ಗವಿಲ್ಲದಾಗಿದೆ. **ಈ ಕಾರಣ ಯುದ್ಧಕಾಲದ ಹಿಂದಿನ G. O. ರದ್ದು ಮಾಡಲಾಗಿದೆ. ಮೂರು ಅಥವಾ ಹೆಚ್ಚಿನ ಬಸ್‌ಗಳನ್ನಿಡಲು ಶಕ್ತಿಯುಳ್ಳ ಮತ್ತು ಸರಕಾರದ ನಿಯಮುಗಳನ್ನು ಪಾಲಿಸಬಲ್ಲ, ಯಾರಿಗೇ ಆಗಲಿ ಪರ್ಮಿಟ್‌ಗಳನ್ನು ಕೊಡಬೇಕೆಂದು ಸರ್ಕಾರದವರು ನಿರ್ಣಯಿಸಿರುತ್ತಾರೆ.**

ಏಡೆಡ್ ಉಪಾಧ್ಯಾಯರಿಗೆ ಎಚ್ಚರಿಕೆ.

ಏಡೆಡ ಶಾಲೆಗಳ ಮ್ಯಾನೇಜ್‌ಮೆಂಟಿನವರು ವಿದ್ಯಾವಿಷಯಗಳಿಗೆ ಸಂಬಂಧಿಸದ ವ್ಯಕ್ತಿಗತಕಾರಣಗಳಿಗಾಗಿ ತಮ್ಮ ಅಧೀನದಲ್ಲಿರುವ ಅನುಭವೀಸರ್ವಿಸ್ ಆದ ಉಪಾಧ್ಯಾಯರನ್ನು ತೆಗೆದು ಹಾಕುತ್ತಿರುವುದು ಗೊತ್ತಾಗಿದೆ. ಇದಕ್ಕೆ ಸರಿಯಾದ ನಿಯಮವನ್ನು ಮಾಡುವವರೆಗೆ, ಶಾಲಾವ್ಯವಸ್ಥಾಪಕರಿಗೆ ಸರ್ಕುಲರ್ ಕಳುಹಿಸಿ ಹೀಗೆ ಮಾಡಿದಲ್ಲಿ ಸರ್ಕಾರವು ಇದರಲ್ಲಿ ಕೈಹಾಕಿನಿಲ್ಲಿಸುವದೆಂದು ಪ್ರಕಟವಾಗಿದೆ.

ಕರ್ನಾಟಕ ವಿದ್ಯಾಪೀಠದ ಅವಶ್ಯಕತೆ

ಧಾರವಾಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಂಗವಾಗಿ ಕೂಡಿದ ವಿದ್ಯಾಪೀಠ ಗೋಷ್ಠಿಯ ಅಧ್ಯಕ್ಷರಾದ ಶ್ರೀ ದೀಕ್ಷಿತ ನರಸಿಂಗರಾಯರು ತಾ ೨೬ಕ್ಕೆ ಮಾಡಿದ ಭಾಷಣದ ಸಾರವನ್ನು ಇಲ್ಲಿ ಕೊಡಲಾಗಿದೆ.

ಕರ್ನಾಟಕಕ್ಕೆ ಬೇಕೊಂದು ಸ್ವತಂತ್ರ ವಿದ್ಯಾಪೀಠವು ಅವಶ್ಯವಿದೆ ಎಂಬ ಮಾತು ಈಗ ಬಹುತೇಕ ಎಲ್ಲರಿಗು ಒಪ್ಪಿಗೆಯಾಗಿದೆ. ಕರ್ನಾಟಕದ ವಿದ್ಯಾಪೀಠ ಸಮಿತಿಯವರು ಈ ವಿಷಯದಲ್ಲಿ ತುಂಬ ಕೆಲಸ ಮಾಡಿದ್ದಾರೆ, ಹಾಗೂ ಮಾಡುತ್ತಲಿದ್ದಾರೆ. ಅವರು ಹಾಕಿಸಿದ 'A Case for Karnatak University' ಎಂಬ ಚಿಕ್ಕ ಪುಸ್ತಕದಲ್ಲಿ ವಿಶ್ವವಿದ್ಯಾಲಯದ ಅವಶ್ಯಕತೆ, ಸುಲಭತೆಗಳ ಮಾತನ್ನು ಬಿನ್ನಾಗಿ ಎಲ್ಲರಿಗೂ ಮನಮುಟ್ಟುವಂತೆ ಬಿತ್ತಿ ತೋರಿಸಿರುತ್ತಾರೆ. ಅಲ್ಲದೆ ಈ ಸಲದ ನಾಡಹಬ್ಬದಲ್ಲಿ ಇದೇ ವಿಷಯವಾಗಿ ಎಷ್ಟೋ ಭಾಷಣಗಳಾಗಿವೆ.

ವಿದ್ಯಾಪೀಠದ ವಿಷಯದಲ್ಲಿ ಅನಕ್ತಿಯಿಂದ ಪ್ರತಿಯೊಂದು ವ್ಯಕ್ತಿಯೂ ವಿದ್ಯಾಪೀಠ ಸಮಿತಿಯವರಿಗೆ ತಮ್ಮಿಂದಾದ ಎಲ್ಲತರದ ಸಹಾಯವನ್ನೂ ಸಲಹೆಯನ್ನೂ ನೀಡಬೇಕು. ಅವರಮೂಲಕ ಸಮಿತಿಯು ಕಾರ್ಯಸಾಧಕ ಶಕ್ತಿಯನ್ನು ಹೆಚ್ಚಿಸಬೇಕು. ಕರ್ನಾಟಕದಲ್ಲಿಯ ಶಿಕ್ಷಣದ ಯಾವ ವಿಷಯವೇ ಮುಂದೆ ಬರಲಿ ಅದರ ಬಗ್ಗೆ ಸಮಿತಿ ಅಧಿಕಾರವಾಣಿಯಿಂದ ಮಾತಾಡಲಿಕ್ಕೆ ಬಾಯಿಸಂತಾಗಬೇಕು. ಅಲ್ಲದೆ ಸಮಿತಿಯ ಮಾತನ್ನು ಎಲ್ಲರೂ ಒಪ್ಪುವಂತಾಗಬೇಕು. ವಿದ್ಯಾಪೀಠ ಸಮಿತಿಯವರು ಮಾಡತಕ್ಕ ಕೆಲಸಗಳು ಅನೇಕ ಮುಖವಾಗಿವೆ.

ಇದಲ್ಲದೆ ಕಾರ್ಯಾರಂಭವಾದೊಡನೆ ಪ್ರಸಂಗಾನುಸಾರ ಹೊರಡಬಹುದಾದ ವಿಷಯಗಳು ಹಲವಾರು ಇರುತ್ತವೆ. ಅಂಥ ವಿಷಯಗಳನ್ನು ಸಹ ಮುನ್ನೋಟದಿಂದ ಕಂಡು, ಹೊಳೆದಷ್ಟು ಮೊದಲೇ ವಿಚಾರ ಮಾಡಿ ಇಡುವುದು ಒಳ್ಳೆಯದು, ಮೊದಲೇ ಹೊಳೆಯದ ಅಕಸ್ಮಾತ್ ಹೊರಡಬಹುದಾದ ವಿಷಯಗಳನ್ನು ಹೊರಟಕೂಡಲೆ ವಿಚಾರಮಾಡುವದು ಕೂಡ ಸಮಿತಿಯ ಕರ್ತವ್ಯವಾಗಿದೆ.

ಕರ್ನಾಟಕದ ವಿದ್ಯಾಪೀಠ ಸಮಿತಿಯ ವತಿಯಿಂದ ಸ್ವಲ್ಪ ದಿವಸಗಳ ಹಿಂದೆ ಶಿಷ್ಟಮಂಡಳದವರು ಮುಖ್ಯಮಂತ್ರಿ ನಾಮದಾರ ಖೇರರವರನ್ನುಕಂಡಾಗ ಅವರ ಸಂಸ್ಥೆಗಳಿಗೆ ಯೋಗ್ಯಕಂಡಲ್ಲಿ' ಕರ್ನಾಟಕದಲ್ಲಿಯ ಸಂಸ್ಥೆಗಳುಕೂಡ ಬೇರೆ (ಉದಾ:— ಮಹಾರಾಷ್ಟ್ರ) ವಿದ್ಯಾಪೀಠಗಳಿಗೆ ಹೊಂದಿಕೊಳ್ಳಲಿಕ್ಕೆ ಸೌಕರ್ಯ ಏರಬೇಕು, ಎಂದು ಹೇಳಿದಂತೆ ವರ್ತಮಾನ ಪತ್ರಗಳಲ್ಲಿಯ ವರದಿಯಿಂದ ಗೊತ್ತಾಗುತ್ತದೆ. ಈ ಮಾತು ಯೋಗ್ಯವೇ ಹೇಗೆ ಎಂಬುದನ್ನು ಪೂರ್ಣ ವಿಚಾರ ಮಾಡಿ ಅದು ಸರಿಯೂದುದಲ್ಲವೆಂದು ಸಮಿತಿಗೆ ಮನವರಿಕೆಯಾದರೆ, ಆ ಬಗ್ಗೆ ಮುಖ್ಯ ಮಂತ್ರಿಗಳಿಗೆ ಮನವರಿಕೆಯನ್ನು ಮಾಡಲಿಕ್ಕೆ ಶಕ್ಯವಿಪ್ಪ ಉಪಾಯಗಳನ್ನು ಕೂಡಲೇ ಕೈಕೊಳ್ಳವುದು ಅವಶ್ಯವಿದೆ. ಪರಪ್ರಾಂತದ ಜನರು ಯಾವ ಪ್ರಾಂತದ ಅನ್ನವನ್ನುಂಡು ಜೀವಿಸುತ್ತಾರೋ ಆ ಪ್ರಾಂತದ ಜನರ ಸಂಗಡ ಸಮರಸರಾಗುವುದು ದೇಶದೃಷ್ಟಿಯಿಂದ ಹಿತಕರವಿದ್ದು ಅಹಿತಗಳಿಗೆ ಇಂಥ ದೇಶಾಭಿಮಾನಕ ಸೌಕರ್ಯವು ಅಡ್ಡಿಮಾಡುತ್ತದೆಯೆಂಬುದರಲ್ಲಿ ಸಂದೇಹವಿಲ್ಲ. ಅಲ್ಲದೆ ವ್ಯವಹಾರದ ದೃಷ್ಟಿಯಿಂದಲೂ ಇದು ಒಳ್ಳೆಯದಲ್ಲ ಈ ಪ್ರಶ್ನೆಯು ಗಡಿನಾಡಿನಲ್ಲಿಯೇ ಬಹುತರವಾಗಿ ಉದ್ಭವಿಸಬಹುದಾಗಿದ್ದು, ಯಾರಿಗೆ ಆ ಪ್ರಾಂತದ ಭಾಷೆಯನ್ನು ಬಿಟ್ಟು ತಮ್ಮ ಭಾಷೆಯನ್ನೇ ಸ್ಥಿರವಾಗಿ ಇಟ್ಟುಕೊಳ್ಳುವ ಹಟವಿರುತ್ತದೋ ಅಂಥವರು ಎರಡನೆಯ ವಿದ್ಯಾಲಯಕ್ಕೆ ಜೋಡಿಸಲ್ಪಟ್ಟ ಸಂಸ್ಥೆಯಲ್ಲಿಯೇ ಹೋಗಿ ಕಲಿಯಬಹುದು. ಅದರಿಂದ ಪ್ರಾಂತಕ್ಕೂ ಪ್ರಾಂತೀಯರಿಗೂ ಬಹಳವಾಗಿ ಹಾನಿಯಾಗಲಾರದು.

ಮಹಾತ್ಮ ಗಾಂಧಿಯವರ ಲೇಖನಗಳು.

ಎದೆಗಾರಿಕೆ ಉತ್ತರ

ನಾತಾಳದಿಂದ ಬಂದ ಪತ್ರಿಕೆಗಳಲ್ಲಿ ಇತರ ಸುದ್ದಿಗಳೊಡನೆ ದರ್ಬಾನ ಮೇಯರರ ಕಾರ್ಯದರ್ಶಿಯು ನಾತಾಳ ಹಿಂದೀ ಕಾಂಗ್ರೆಸ್ಸಿನ ಕಾರ್ಯದರ್ಶಿಯೊಂದಿಗೆ ನಡಿಸಿದ ಪ್ರಸಿದ್ಧ ಪತ್ರವ್ಯವಹಾರವೊಂದು ಪ್ರಕಟವಾಗಿದೆ. ಬರುವ ವರ್ಷ ಮಾರ್ಚ ತಿಂಗಳಲ್ಲಿ ದರ್ಬಾನವನ್ನು ಸಂದರ್ಶಿಸಲಿರುವ ಬ್ರಿಟಿಶ ಅರಸರನ್ನು ಸ್ವಾಗತಿಸುವದಕ್ಕಾಗಿ ಸಿದ್ಧತೆ ನಡೆಸಲು ಒಂದು ಸಮಿತಿಯು ರಚಿತವಾಗಿದೆ. ದರ್ಬಾನದ ಆಂಗ್ಲೇತರ ಮತ್ತು ಬಿಳಿಯರಲ್ಲದ ಜನರನ್ನು ಇದರಲ್ಲಿ ನೇಮಿಸಿಕೊಳ್ಳಬಹುದೆ ಎಂಬುದನ್ನು ವಿಚಾರಿಸಲು ಮುಖ್ಯ ಸಮಿತಿಯು ಒಂದು ಉಪಸಮಿತಿಯನ್ನು ನೇಮಿಸಿದೆ. ಹಿಂದೀ ಸಮಾಜಕ್ಕೆ ಬ್ರಿಟಿಶ ಚಕ್ರವರ್ತಿಗಳ ಮತ್ತು ರಾಜಕುಮಾರಿಯ ಸಂದರ್ಶನದ ಲಾಭ ದೊರೆಯುವಂತೆ ಸಲಹೆ ಸಹಾಯ ನೀಡಲು ನಾತಾಳ ಹಿಂದೀ ಕಾಂಗ್ರೆಸು ಈ ಉಪಸಮಿತಿಗೆ ತನ್ನ ಇಬ್ಬರು ಪ್ರತಿನಿಧಿಗಳನ್ನು ಕಳಿಸಬೇಕೆಂದು ಆ ಸಮಿತಿಯು ಕೇಳಿಕೊಂಡಿತು.

ಈ ಆಮಂತ್ರಣಕ್ಕೆ ನಾತಾಳ ಹಿಂದೀ ಕಾಂಗ್ರೆಸಿನ ಗೌರವ ಸಹಕಾರ್ಯದರ್ಶಿಗಳಾದ ಶ್ರೀ ವೀರಸಾಹೇಬರು ಈ ಕೆಳಗಿನಂತೆ ಎದೆಗಾರಿಕೆಯ ಉತ್ತರವನ್ನು ಕಳಿದ ಸಪ್ಟೆಂಬರ ೧೦ ಕ್ಕೆ ಕಳಿಸಿದ್ದಾರೆ.

" ಇಲ್ಲಿಯ ಹಿಂದೀ ಸಮಾಜಕ್ಕೆ ಬ್ರಿಟಿಶ ಚಕ್ರವರ್ತಿಗಳು ಮತ್ತು ರಾಜಕುಮಾರಿಯರಬಗ್ಗೆ ಅತ್ಯಾದರವಿದ್ದರೂ ದಕ್ಷಿಣ ಅಫ್ರಿಕೆಯ ಹಿಂದೀಯರು ತಮ್ಮ ಇತಿಹಾಸದಲ್ಲಿಯೆ ಅತ್ಯಂತ ಸೂಕ್ಷ್ಮವಾದ ಪರಿಸ್ಥಿತಿಯಲ್ಲಿದ್ದಾರೆಂದು ತಿಳಿಸಬೇಕೆಂದು ನಮ್ಮ ಕಾರ್ಯಕಾರಿ ಮಂಡಳವು ಆಜ್ಞಾಪಿಸಿದೆ. ಮಾನವನ ಮೂಲಭೂತ ಹಕ್ಕುಗಳನ್ನು ನಮ್ಮಿಂದ ಕಸಿದುಕೊಳ್ಳುವದಕ್ಕಾಗಿಕಳೆದ ೫೦ ವರ್ಷಗಳಿಂದ ರಚಿತವಾಗುತ್ತ ಬಂದ ಕಟ್ಟಳೆಗಳು ಏಶಿಯನರ ಭೂಧಾರಣ ಕಾಯದೆ, ೧೯೪೬ ರ ಹಿಂದೀ ಪ್ರತಿನಿಧಿಗಳ ಕಾಯದೆಯಲ್ಲಿ ಮುಕ್ತಾಯ ಹೊಂದಿವೆ. ನಮ್ಮ ಸಮಾಜವು ಅತ್ಯುಗ್ರವಾಗಿ ಪ್ರತಿಭಟಿಸಿದರೂ ಈ ಕಾಯದೆಗಳು ಪಾಸಾದವು. ಯೂನಿಯನ ಸರಕಾರವು ತನ್ನ ಪ್ರಜರಲ್ಲಿ ಮತಾಧಿಕಾರವಿಲ್ಲದವರನ್ನು ಹೀಗೆ ದಬ್ಬಾಳಿಕೆಗೆ ಗುರಿಪಡಿಸಿರುವದರಿಂದ ಇಡೀ ಸಮಾಜವು ತೀರ ಅಸ್ವಸ್ಥವಾಗಿದೆ. ಬಿಳಿಯರಲ್ಲದವರ ಬಗ್ಗೆ ಇಲ್ಲಿ ರಚಿತವಾಗಿರುವ ಕಟ್ಟಳೆಗಳನ್ನು ನೋಡಿದರೆ ಈ ದೇಶದಲ್ಲಿ ಅವರಿಗಾಗಿ ಇನ್ನುಮುಂದೆ ಏನುಕಾದಿದೆ ಎಂಬುದಕ್ಕೆ ಯಾವ ಸಂದೇಹವೂ ಬೇಡ ಮನುಷ್ಯನ ತೊಗಲಿನ ಬಣ್ಣವೆ ಅವನ ಗುಣಾವಗುಣಗಳನ್ನು ನಿರ್ಣಯಿಸುವ ಸಾಧನವಾಗಿದೆ

" ತತ್ಪರಿಣಾಮವಾಗಿ ಈ ದೇಶದ ಕಾಯದೆಗಳಲ್ಲಿಯ ವರ್ಣದ್ವೇಷವನ್ನು ಪ್ರತಿಭಟಿಸುವದಕ್ಕಾಗಿ ಸತ್ಯಾಗ್ರಹವನ್ನು ಹೂಡಬೇಕೆಂದು ದಕ್ಷಿಣ ಅಫ್ರಿಕೆಯ ಹಿಂದೀ ಸಮಾಜವು ೧೯೪೬ ಜೂನ ೧೩ ಕ್ಕೆ ನಿರ್ಧರಿಸಿತು. ಈ ಸತ್ಯಾಗ್ರಹವನ್ನೂ ನಡೆದಿದೆ. ಡಾ. ಯುಸೂಫ ದಾದೂ ಮತ್ತು ಡಾ. ಜೆ. ಎಂ ನಾಯುಡುರಂಥ ೬೨೭ ಸತ್ಯಾಗ್ರಹಿಗಳು ಈಗ್ಗೆ ಸೆರೆಮನೆಯಲ್ಲಿದ್ದಾರೆ. ಅವರನ್ನು ಸಾಮಾನ್ಯ ಕೈದಿಗಳಂತೆ ನಡೆಸಿಕೊಳ್ಳಲಾಗುತ್ತಿದೆ. ಇವರಲ್ಲಿ ಕೆಲವರು ಸೆರೆಮನೆಯಲ್ಲಿ ಅಮಾನುಷ ಶಿಕ್ಷೆಗೆ ಗುರಿಯಾಗಿ ತಮ್ಮ ಕಾರಾವಾಸದ ಅವಧಿಯನ್ನು ಮುಗಿಸಿಕೊಂಡು ಹೊರಗೆ ಬಂದಿದ್ದಾರೆ. ಆದರೆ ಇನ್ನೂ ನೂರಾರು ಜನರು ಸೆರೆಮನೆಯಲ್ಲಿದ್ದಾರೆ ದಿನಾಲೂ ಸತ್ಯಾಗ್ರಹಿಗಳನ್ನು ಸೆರೆಮನೆಗೆ ಕಳಿಸಲಾಗುತ್ತಿದೆ

" ಬ್ರಿಟಿಶ ಚಕ್ರವರ್ತಿಗಳ ಸಾಮ್ರಾಜ್ಯದಲ್ಲಿ ಹಿಂದೀಯರಿಂತು ದುರ್ಮಾನದ ಪರಿಸ್ಥಿತಿಯಲ್ಲಿರುವಾಗ ಚಕ್ರವರ್ತಿಗಳ ಗೌರವಸಮಿತ್ತ ನಡೆಯಲಿರುವ ಆನಂದೋತ್ಸವಗಳಲ್ಲಿ ಅವರು ಭಾಗವಹಿಸಬೇಕೆಂದು ಅಪೇಕ್ಷಿಸುವದು ತೀರ ಅನುಚಿತವಾದದ್ದು. ಆದ್ದರಿಂದ

ದಕ್ಷಿಣ ಆಫ್ರಿಕೆಯ ರಾಜಪ್ರಜರಲ್ಲಿ ಬಿಳಿಯ-ಕರಿಯರಲ್ಲಿ, ಪ್ರಾತಿನಿಧ್ಯ ಪಡೆದ-ಪಡೆಯದ, ಸೌಕರ್ಯವಿದ್ದ ಇರದ ಜನರಲ್ಲಿ ಸೌಹಾರ್ದ ಸದಿಚ್ಛೆಗಳುಂಟಾಗಿ ದಕ್ಷಿಣಆಫ್ರಿಕೆಯ ಪರಿಶ್ರಮದಫಲಗಳನ್ನು ಎಲ್ಲರೂ ಸರಿಯಾಗಿ ಅನುಭವಿಸುವ ಕಾಲ ಬರುವವರೆಗೆ ಚಕ್ರವರ್ತಿಗಳು ತಮ್ಮ ಸಂದರ್ಶನವನ್ನು ಮುಂದೆ ಹಾಕಬೇಕೆಂದು ನೀವು ಅವರಿಗೆ ಕೇಳಿಕೊಳ್ಳಬೇಕೆಂದು ನಾವೀಗ ಸೂಚಿಸಬಲ್ಲೆವು."

ಇಂಥ ಉತ್ತರವನ್ನು ಕೊಟ್ಟಿದ್ದಕ್ಕಾಗಿ ನಾತಾಳ ಕಾಂಗ್ರೆಸ ಕಾರ್ಯ ಕಾರಿ ಮಂಡಳಿವು ಅಭಿನಂದನಕ್ಕೆ ಪಾತ್ರವಾಗಿದೆ. ದಕ್ಷಿಣಆಫ್ರಿಕೆಯ ಭವಿತವ್ಯವನ್ನು ರೂಪಿಸುವಲ್ಲಿ ಯಾವ ಅಧಿಕಾರವಿಲ್ಲದ ಜನರಿಗೆ ಮತ್ತು ಸ್ವಾಭಿಮಾನಕ್ಕಾಗಿ ಹೋರಾಡುತ್ತಿರುವವರಿಗೆ ಚಕ್ರವರ್ತಿಗಳ ಈ ಸಂದರ್ಶನದಿಂದ ಯಾವ ಸಂತೋಷವೂ ಆಗಲಾರದು. ವರ್ಣದ್ವೇಷವು ಮಾಯವಾಗಿ ಹೋಗುವ ಶುಭ ಸಮಯದ ವರೆಗೆ ಚಕ್ರವರ್ತಿಗಳು ತಮ್ಮ ಸಂದರ್ಶನವನ್ನು ಮುಂದೆ ಹಾಕಲಿ ಎಂದು ಆಶಿಸೋಣ.

" ಓ ನಮ್ಮ ದೇವನೆದ್ದೇಳು
ಅವನಕಿಗಳನು ನೀ ಸೀಳು,
ಕೆಡಿಸುವವರ ರಾಜಕಾರಣವ
ಮತ್ತೆಲ್ಲ ಕುಟಿಲನಾಟಕವ
ನಿನ್ನನೇ ನಾವು ನಂಬಿಹೆವು
ಕಾಪಾಡು ನಮ್ಮನೆಂದಿಹೆವು"

ಎಂದು ಬ್ರಿಟಿಶ ರಾಷ್ಟ್ರಗೀತೆಯಲ್ಲಿದ್ದ ಹಳೆಯ ನಿರರ್ಥಕ ಸಾಲುಗಳನ್ನು ಕಿತ್ತಿಹಾಕಿ

" ಈ ಜಗದನಂತ ಭಾಗದಲಿ
ದೇವನಾ ಕರುಣೆ ತುಂಬಿರಲಿ.
ನರರೆಲ್ಲ ಬಾಂಧವರು ಎಂಬ
ಜಗವೊಂದೆ ಮನೆಯು ತಾನೆಂಬ
ಭಾವನೆಯು ನಾಡುನಾಡಿನಲಿ
ಬೆಳೆವಂತೆ ದೇವ ಕರುಣಿಸಲಿ"

ಎಂಬ ಹೊಸ ಸಾಲುಗಳನ್ನು ಸಾರಿದ ಬ್ರಿಟಿಶ ಚಕ್ರವರ್ತಿಗಳು ದಕ್ಷಿಣ ಆಫ್ರಿಕೆಯ ಸಂದರ್ಶನವನ್ನು ಬಿಟ್ಟುಗೊಡುವ ತ್ಯಾಗವನ್ನು ತೋರಿದರೆ ಅದು ಅವರ ಸ್ವಭಾವಕ್ಕೆ ತಕ್ಕದ್ದೇ ಆದೀತು.

ವಿವೇಕ ಚೂಡಾಮಣಿ

ಗ್ರಂಥಕರ್ತರು:— ಶ್ರೀ ಎಂ.ಎಸ್. ಸುಬ್ಬಣ್ಣ
ನವರು, ಬಳ್ಳಾರಿ.

ದೊರೆಯುವ ಸ್ಥಳ:— ೧) ಕಾಲುವ ಸುಬ್ಬಣ್ಣ,
ಬಳ್ಳಾರಿ.
೨) ಎಸ್.ಎಸ್.ಎನ್. ಬುಕ್ ಡಿಪೋ,
ಬೆಂಗಳೂರು ನಗರು

ಕ್ರಯ. ೧—೪—೦

ವಿಮರ್ಶೆ.

ಕನ್ನಡದಲ್ಲಿ ಭಗವದ್ಗೀತೆಯ ಭಾವವನ್ನು ಉಪನಿಷತ್ತುಗಳ ಉಪದೇಶದ ಸವಿಯನ್ನು ವಿಧವಿಧವಾದ ಪದ್ಯಗಳಿಂದ ಓದುಗರಿಗೆ ಒದಗಿಸಿಕೊಟ್ಟು ಪಳಗಿದ ಲೇಖನಿಯಿಂದ ಶ್ರೀ ಎಂ. ಎಸ್. ಸುಬ್ಬಣ್ಣನವರು ಈ ಗ್ರಂಥರತ್ನವನ್ನು ವಿವಿಧ ಪಟ್ಟದಿಗಳಿಂದ ಕನ್ನಡಿಸಿ ವಾಚಕರ ಮುಂದಿಟ್ಟಿರುತ್ತಾರೆ. ಇಂಥ ವೇದಾಂತ ಪದ್ಯಗ್ರಂಥವನ್ನು ಸಂಸ್ಕೃತದಂಥ ಪ್ರಾಚೀನಾರ್ಯ ಭಾಷೆಯಿಂದ ಕನ್ನಡದಂಥ ದ್ರಾವಿಡ ಭಾಷೆಗೆ ಪದ್ಯದಲ್ಲಿಯೇ ಅನುವಾದ ಮಾಡಿ ಮೂಲದ ಭಾವಗಳು ಒಂದಿಷ್ಟೂ ಹೋಗದಂತೆ ಬಿಂಬ ಪ್ರತಿಬಿಂಬ ನ್ಯಾಯದಿಂದ ನೂರ್ಪಡಿಸುವುದು ಸುಲಭ ಸಾಧ್ಯವಲ್ಲ. ಮೂಲದ ಭಾವಗಳು ಬಹುಮಟ್ಟಿಗೆ ಇಲ್ಲಿರುವ ಪದ್ಯಗಳಲ್ಲಿ ಮೂರು ಹೊಳೆದಿರುವಂತೆ ನನ್ನ ಅಲ್ಪಮತಿಗೆ ಕಾಣುತ್ತದೆ. ಇಲ್ಲಿ ಉಪಯೋಗಿಸಿರುವ ಪದಗಳು ವಿಷಯವನ್ನು ತಿಳಿದುಕೊಳ್ಳುವದಕ್ಕೆ ಅಡ್ಡ ಬರುವಷ್ಟೇನೂ ಕಾಣುವುದಿಲ್ಲ. ವಿಷಯ ವಿಭಾಗಗಳನ್ನು ಸೂಚಿಸುವ ತಲೆಬರಹಗಳನ್ನು ಜೋಡಿಸುವುದು ಓದುಗರಿಗೆ ಸಹಾಯಕವಾಗಿರುತ್ತದೆ ಒಟ್ಟಿನಲ್ಲಿ ಗ್ರಂಥವು ಮನುಕ್ಷುಗಳಿಗೆ ಆದರಣೀಯವಾಗಿದೆ

ಈ ಗ್ರಂಥಕ್ಕೆ ಕನ್ನಡಿಗರ ಪ್ರೋತ್ಸಾಹವು ದೊರೆಯಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ವೈ ಸು ಬ್ಬ ರಾ ವ್,
ಸಂಪಾದಕ ಅಧ್ಯಾತ್ಮಪ್ರಕಾಶ.

ಅಕ್ಕನ ಬಳಗದ ಪ್ರಾರಂಭೋತ್ಸವ.

ಶ್ರೀಮತಿ ಅಲ್ಲಂ ಸುಮಂಗಳಮ್ಮನವರು, ಎಂ. ಎಲ್. ಎ ಇವರು ಹೀರೆದ ಸೂಗಮ್ಮನ ಶಾಲೆಯ ವಿದ್ಯಾರ್ಥಿನಿಯರ ಸಂಘದ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀಮತಿ ಬಿ. ಪಾರ್ವತಮ್ಮನವರು ಸ್ತ್ರೀಯರಿಗೆ ಎಂಥ ವಿದ್ಯೆಕಲಿಸುವುದು ಎಂಬ ವಿಷಯದ ಮೇಲೆ ನೀರ್ಲಹಳ್ಳಿ ವೀರಮಂಗಳಮ್ಮ ನೆಂಬ ವಿದ್ಯಾರ್ಥಿನಿಯು ಸ್ತ್ರೀಶಿಕ್ಷಣವಾಗಿ ಮಾತನಾಡಿದರು.

ಅಧ್ಯಕ್ಷರು ಸ್ತ್ರೀಯರ ಪ್ರಗತಿಯನ್ನು ಕುರಿತು ಮಾತನಾಡಿದರು. ಪುರಜನದ ವೀರಶೈವ ಸ್ತ್ರೀಯರು ಬಂದಿದ್ದರು.

ಮಂಗಳವಾದ ಬಳಿಕ ಸಭೆಯು ಮುಕ್ತಾಯವಾಯಿತು.

ತೌಡೂರು

ತೌಡೂರು ತರುಣ ಸಂಘದವರು ಗಾಂಧೀಜಿ ಜನ್ಮದಿನೋತ್ಸವವನ್ನು ಅಲಂಕೃತ ರಥದಲ್ಲಿ ಮಹಾತ್ಮರ ಭಾವಚಿತ್ರದೊಂದಿಗೆ ಳ ವೃಷಭಗಳಿಂದ ವಾದ್ಯ ವೈಭವಗಳಿಂದ ಮೆರವಣಿಗೆ ಮಾಡಿ ನೆರವೇರಿಸಿದರಗು ಸಾಯಂಕಾಲ ಬಸವನ ಬಯಲಲ್ಲಿ ಶಾನುಭೋಗ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಕ. ಜೀವಣ್ಣನವರು ಐ. ಯಂ ಕೊಟ್ರಯ್ಯ ನವರು ಗಾಂಧಿ ಜೀವಿತದ ಮೇಲೆ, ಅದರಿಂದ ಕಲಿಯಬೇಕಾದ ಪಾಠದ ಮೇಲೆ ಉಪನ್ಯಶಿಸಿ ವಂದೆ ಮಾತರಂ ಮತ್ತು ಜಯ ಜಯ ಕಾರದಿಂದ ಸಮಾವೇಶನನ್ನಂತಗೊಳಿಸಿದರು.

ಮದ್ರಾಸಿಗೆ ಹೆಚ್ಚಿನ ಧಾನ್ಯ

ಮೇ ತಿಂಗಳಿಂದ ಸೆಪ್ಟಂಬರ್ ಕೊನೆಯವರೆವಿಗೆ ಪರದೇಶಗಳಿಂದ ಬಂದ ಆಹಾರ ಧಾನ್ಯಗಳನ್ನು ಹೆಚ್ಚಾಗಿ ಮದ್ರಾಸ ಪ್ರಾಂತ್ಯಕ್ಕೆ ಅಂದರೆ ೩೧೬,೦೦೦ ಟನ್ನು ಪೂರೈಸಿರುವರು ಒಡಿಸ್ಸಾದಿಂದ ೧೦ ಸಾವಿರ ಟನ್ನು ಅಕ್ಕಿ ಬರಲಿದೆ.

ಕಾಂಗ್ರೆಸ್ಸಿನ ಮಿರತ ಅಧಿವೇಶನ

ಪ್ರೇಕ್ಷಕರಿಗೆ ಸೂಚನೆ

ಕಾಂಗ್ರೆಸ ಕಾರ್ಯಸಮಿತಿಯವರು ಮಿರತ ಅಧಿವೇಶನದ ತಾರೀಖುಗಳನ್ನು ಕೆಳಗಿನಂತೆ ಗೊತ್ತುಪಡಿಸಿರುವರು.

೧ ಕಾರ್ಯಸಮಿತಿ ಸಭೆ ದಿಲ್ಲಿಯಲ್ಲಿ ನವೆಂಬರ ತಾ. ೧೯ ಕ್ಕೆ ನಡೆಯುವುದು.

೨ ವಿಷಯ ನಿಯಾಮಕ ಸಮಿತಿಯ ಸಭೆ ಮಿರತಿನಲ್ಲಿ ತಾ. ೨೧ ಮತ್ತು ೨೩ಕ್ಕೆ ನಡೆಯುವುದು.

೩ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನವು ಮಿರತಿನಲ್ಲಿ ತಾ.೨೩ ೨೪ ಮತ್ತು ಅನಿವಾರ್ಯಕಂಡಲ್ಲಿ ೨೫ ಕ್ಕೆ ನಡೆಯುವದು.

ಟಿಕೇಟುಗಳ ವಿವರ

ಕಾಂಗ್ರೆಸ ಅಧಿವೇಶನದ ಟಿಕೇಟಿನ ದರಗಳು ಕೆಳಗಿನಂತಿವೆ.

೧ ಬಹಿರಂಗ ಅಧಿವೇಶನದ ಟಿಕೇಟಿನ ಧರಗಳು ಪ್ರೇಕ್ಷಕರಿಗೆ — ರೂ. ೧೦,೦೦೦, ೫,೦೦೦, ೧೦೦೦, ೫೦೦, ೧೦೦, ೨೫, ೧೦ ಪ್ರತಿ ಟಿಕೇಟಿಗೆ—

೨ ವಿಷಯ ನಿಯಾಮಕ ಸಮಿತಿ ಟಿಕಿಟು ರೂ, ೨೫ ಪ್ರತಿಯೊಂದಕ್ಕೆ.

೩ ವಿಷಯ ನಿಯಾಮಕ ಸಮಿತಿ ಟಿಕೇಟು ಪ್ರತಿನಿಧಿಗಳಿಗೆ ರೂ. ೧೦

೪ ಕಾರ್ಯಕರ್ತರ ಟಿಕೇಟು:— ಅಝಾದ ಹಿಂದ ಪಡೆಯ ಸೈನಿಕರು ಹಾಗು ಕಾಂಗ್ರೆಸ್ಸಿನ ಯಾವದೇ ಆಂದೋಲನದಲ್ಲಿ ಸೆರೆಮನೆಯನ್ನು ಸೋಸಿದವರು ಇಂಥವರಿಗೆ ರೂ, ೫ ಪ್ರತಿ ಟಿಕೇಟಿಗೆ.

ಮುಂಚಿತವಾಗಿ ಟಿಕೇಟು ತಕ್ಕೊಳ್ಳುವವರು ತಮ್ಮ ಹೆಸರು ಮತ್ತು ಸಂಪೂರ್ಣ ತರೆಗತಿಯ ಟಿಕೇಟುಬೇಕು ಎಂಬುದನ್ನು ಕೂಡಲೆ ತಮ್ಮ ತಮ್ಮ ಜಿಲ್ಲೆಯ ಕಾಂಗ್ರೆಸ ಕಮಿಟಿಗಳ ಮುಖಾಂತರ ತಿಳಿಸಿದರೆ ಟಿಕೇಟುಗಳನ್ನು ಮುಂಚಿತವಾಗಿ ದೊರಕಿಸಿಕೊಡಲಾಗುವದು. ಆದರೆ ಟಿಕೇಟಿನ ಹಣ ಪ್ರಾಂತಿಕ ಕಾಂಗ್ರೆಸ ಕಮೀಟಿ ಕಡೆಗೆ ಮುಂಚಿತವಾಗಿಯೇ ಕೊಡಬೇಕಾಗುವದು.

ಉಪಭಾರತ ಮಂತ್ರಿಗಳು ಪಾರ್ಲಿಮೆಂಟ್‌ನಲ್ಲಿ ಹಿಂದೂಸ್ತಾನದ ಗಲಭೆಗಳ ವಿಷಯಕ್ಕೆ ಉತ್ತರಿಸುತ್ತಾ, ಇಲ್ಲಿಯವರಿಗೆ ಹಿಂದುಸ್ತಾನದಲ್ಲಿ ಜಾತೀಯಗಲಭೆಗಳಿಂದ ೫೦೦೦ ಜನರು ಸತ್ತಿರುವರೆಂದು ೧೫೫೦ ಜನರಿಗೆ ಗಾಯಗಳಾಗಿರುವವೆಂದೂ ಹೇಳಿದರು.

ಬೊಂಬಾಯಿ ಪ್ರಾಂತದಲ್ಲಿ ಹರಿಜನರಿಗೆ ಕಾಯ್ದೆಯಿಂದ ಸೌಕರ್ಯ.

ಈಚೆಗೆ ಬೊಂಬಾಯಿ ತಾಸನ ಸಭೆಯಲ್ಲಿ ಸ್ವೀಕೃತವಾದ ಶಾಸನದ ಮುಖ್ಯಾಂಶಗಳನ್ನು ಕೆಳಗೆ ಕೊಡುತ್ತೇವೆ.

ಯಾವದೆ ಕಾಯದೆಯಲ್ಲಿ ರೂಢಿ ಸಂಪ್ರದಾಯಗಳು ಎಷ್ಟೇ ವಿರುದ್ಧವಿದ್ದರೂ ಹರಿಜನನೆಂದ ಮಾತ್ರಕ್ಕೆ ಅವನು ಅಪಾತ್ರನಾಗನು.

ಅ) ಕಾಯದೆಬದ್ಧವಾದ ಸರಕಾರದ ಕಚೇರಿಯಲ್ಲಿ ನವಕರಿಗೆ ಅಪಾತ್ರನಾಗನು.

ಬ ೧) ಬೇರೆ ಜಾತಿಯವರಿಗೆ ಮತ್ತು ಹಿಂದುಗಳಿಗೆ ಹೋಗಲು ಅವಕಾಶವಿದ್ದ ನದಿ, ಹಳ್ಳ, ಝರಿ, ಭಾವಿ, ಕೆರೆ, ಹೊಂಡ, ನಳ, ಇಲ್ಲವೆ ಉಳಿದ ಯಾವದೆ ಬಗೆಯ ಜಲಾಶಯ, ಸ್ನಾನ ಗೃಹ, ಸ್ಮಶಾನ, ಯಾವದೇ ಬಗೆಯ ಆರೋಗ್ಯ ಸೌಕರ್ಯ ಮಾರ್ಗ, ಇವುಗಳ ಉಪಯೋಗಕ್ಕೆ ಹರಿಜನರಿಗೆ ಪ್ರತಿಬಂಧ ವಿರಕೂಡದು.

೨) ಪ್ರಾಂತಿಕ ಸರಕಾರ ಅಥವಾ ಸ್ಥಾನಿಕ ಸಂಸ್ಥೆಗಳಿಂದ ಅವ್ವಣಿ ಪಡೆದ ಯಾವದೆ ಸಾರ್ವಜನಿಕ ವಾಹನಗಳನ್ನು ಬಾಡಿಗೆ ಹಿಡಿಯಲು ಅವರಿಗೆ ಯಾವದೇ ಬಗೆಯ ಪ್ರತಿಬಂಧ ವಿರಕೂಡದು.

೩) ಪ್ರಾಂತದ ಹಣದಿಂದ ಇಲ್ಲವೆ ಸ್ಥಾನಿಕ ಸಂಸ್ಥೆಗಳ ನಿಧಿಯಿಂದ ಪೂರ್ಣವಾಗಿ ಇಲ್ಲವೆ ಅರ್ಧಮರ್ಧ ಕಟ್ಟಿಬಿಟ್ಟ ಕಟ್ಟಡ ಬಾವಿ, ಹೊಂಡ ಇಲ್ಲವೆ ಸಾರ್ವಜನಿಕ ಸ್ಥಳಗಳಿಗೆ ಪ್ರತಿಬಂಧ ವಿರಕೂಡದು.

೪) ಸಾರ್ವಜನಿಕ ಮನರಂಜನೆಯ ಸ್ಥಳಕ್ಕೆ ಇಲ್ಲವೆ ನಾಟ್ಯ ಗೃಹಗಳಿಗೆ ಹೋಗಲು ಪ್ರತಿಬಂಧವಿರಕೂಡದು.

೫) ಹಿಂದುಗಳು ಮತ್ತು ಇತರರು ಯಾವ ಅಂಗಡಿಗಳಿಗೆ ಹೋಗಬಲ್ಲರೋ ಅಂಥ ಅಂಗಡಿಗಳಿಗೆ ಹೋಗಲು ಪ್ರತಿಬಂಧ ವಿರಕೂಡದು.

೬) ಇಂಥದೊಂದು ವಿಶಿಷ್ಟ ವರ್ಗಕ್ಕೆ ಇಲ್ಲವೆ ಜಾತಿಯ ಉಪಯೋಗಕ್ಕೆಲ್ಲಿಂದು ವಿಧಿಸಿ ಸಾರ್ವತ್ರಿಕವಾಗಿ ಹಿಂದುಗಳಿಗೆಲ್ಲ ಪ್ರವೇಶವಿರುವ ಸ್ಥಳಗಳಿಗೆ ಹೋಗಲು ಪ್ರತಿಬಂಧವಿರಕೂಡದು.

೭ ಸಾಮಾನ್ಯವಾಗಿ ಹಿಂದುಗಳ ಕಲ್ಯಾಣಕ್ಕಾಗಿಯೆಂದು ಇರುವ ಧರ್ಮಾರ್ಥ ಟ್ರಸ್ಟುಗಳ ಉಪಯೋಗ ಪಡೆಯಲು ಹರಿಜನರಿಗೆ ಯಾವದೇ ಪ್ರತಿಬಂಧವಿರತಕ್ಕದ್ದಲ್ಲ.

೪ ಅ) ಉಪಕಲಮು ೧, ೩, ೪, ೫, ಮತ್ತು, ೬ ರಲ್ಲಿ ಹೇಳಿದ ಯಾವ ಸ್ಥಳಗಳ ನಿಯಂತ್ರಕರು ಮತ್ತು ಮೂರನೇ ಬ ಕಲಮಿನ ೨ ನೇ ಉಪಕಲಮಿನಲ್ಲಿ ಉಲ್ಲೇಖಿಸಿಹ ಯಾವದೇ ವಾಹನದ ನಿಯಂತ್ರಕರು ಹರಿಜನರಿಗೆ ಯಾವದೇ ಬಗೆಯ ನಿರ್ಬಂಧ ಹೇಳತಕ್ಕದ್ದಲ್ಲ. ಅಥವಾ ಅವನ ವಿರುದ್ಧ ಭೇದಭಾವನವನ್ನು ಕಲ್ಪಿಸುವ ರೀತಿಯಲ್ಲಿ ವರ್ತಿಸಕೂಡದು.

೪ ಯಾವನೇ ನಿರ್ಣಯವನ್ನು ಕೈಕೊಳ್ಳುವಾಗ ಅಥವಾ ತುಕುಮನ್ನು ನಿಧಿಸುವಾಗ ನ್ಯಾಯಾಧೀಶರು ಇವನು ಹರಿಜನನೆಂದು ರೂಢಿ ಸಂಪ್ರದಾಯಗಳಿಗೆ ಶರಣು ಹೋಗಿ ಅವನ ಮೇಲೆ ನಾಗರಿಕ ಅಪಾತ್ರತೆಯನ್ನು ಹೇರ ಕೂಡದು.

೫ ತನಗೆ ಒಪ್ಪಿಸಿದ ಕಾರ್ಯಕರ್ತವ್ಯಗಳನ್ನು ನಿರವೇರಿಸುವಾಗ ಯಾವದೇ ಸ್ಥಾನಿಕ ಸಂಸ್ಥೆಳ ೩ ನೇ ಕಲಮಿನಲ್ಲಿ ಹೇಳಿದ ರೂಢಿ ಸಂಪ್ರದಾಯಗಳನ್ನು ಗಮನಿಸಕೂಡದು.

೬ ಅ) ಉಪಕಲಮು ೧, ೩, ೪, ೫ ಮತ್ತು ೬ ರಲ್ಲಿ ಉಲ್ಲೇಖಿಸಿದ ಯಾವ ಸ್ಥಳಗಳ ಪ್ರವೇಶಕ್ಕೆ ಇಲ್ಲವೆ ಉಪಯೋಗಕ್ಕೆ ಹರಿಜನನೆಂದು ಯಾರು ಪ್ರತಿಬಂಧಿಸುವರೋ ೩ ನೇ ಕಲಮಿನ ಉಪಕಲಮು ೨ ರಲ್ಲಿ ಉಲ್ಲೇಖಿಸಿದ ವಾಹನಗಳ ಉಪಯೋಗಕ್ಕೆ ಯಾರು ಪ್ರತಿಬಂಧ ಮಾಡುವರೋ ಅಥವಾ ಅದೇ ಬಿ ಕಲ್ಮಿನ ೭ ನೇ ಉಪಕಲ್ಮಿನ ಧಾರ್ಮಿಕ ಟ್ರಸ್ಟಿನ್ಯಾಯ ಮೊರಕುವ ಲಾಭಕ್ಕೆ ಯಾರು ಅಡ್ಡಿ ಮಾಡುವರೋ ಅಥವಾ ಅದಕ್ಕೆ ಉತ್ತೇಜನ ಕೊಡುವರೋ ಇವರಿಗೆ ಅಥವಾ

ಬ) ಯಾರು ಹರಿಜನರ ಮೇಲೆ ನಿರ್ಬಂಧಹೇರುವರೋ ಅಥವಾ ಅವರ ವಿರುದ್ಧ ಭೇದಭಾವ ಕಲ್ಪಿಸುವರೊ ಇಲ್ಲವೆ ಇಂಥ ನಿರ್ಬಂಧಗಳನ್ನು ಹೇರಲು ಭೇದಭಾವ ಕಲ್ಪಿಸಬೇಕೆಂದು ಎರಡನೆಯವರನ್ನು ಪ್ರೇರಿಸುವರೊ, ಅವರಿಗೆ ೩ ತಿಂಗಳವರೆಗೆ ತಿಕ್ಷೆ ಇಲ್ಲವೆ ೨೦೦ ರೂಪಾಯಿಗಳವರೆಗೆ ದಂಡ ಅಥವಾ ತಿಕ್ಷೆ ಮತ್ತು ದಂಡ ಎರಡೂ ವಿಧಿಸಲಾಗುವದು.

೭) ಈ ಕಾಯಿದೆಯನ್ವಯ ತಿಕ್ಷೆಗೆ ಪಾತ್ರವಾಗುವ ಅಪರಾಧ ಮಾಡಿದ ಯಾವನೇ ಮನುಷ್ಯನು ಮತ್ತೆ ಅದೆ ಅಪರಾಧ ಮಾಡಿದರೆ ಅವನಿಗೆ ೬ ತಿಂಗಳವರೆಗೆ ತಿಕ್ಷೆ ಇಲ್ಲವೆ ೫೦೦ ರೂಪಾಯಿಗಳವರೆಗೆ ದಂಡ ಅಥವಾ ತಿಕ್ಷೆ ಮತ್ತು ದಂಡ ಎರಡೂ ವಿಧಿಸಲ್ಪಡುವವು. ಮತ್ತೂ ಇಂಥ ಅಪರಾಧ ಅವನು ಮಾಡಿದ್ದಾದರೆ ಮೂರನೇ ಅಥವ ಮುಂದಿನ ಅಪರಾಧಗಳಿಗಾಗಿ ಒಂದು ವರ್ಷದವರೆಗಿನ ತಿಕ್ಷೆಗೆ ಮತ್ತು ೧೦೦೦ ರೂಪಾಯಿವರೆಗಿನ ದಂಡಕ್ಕೆ ಅವನು ಪಾತ್ರನಾಗುವನು"

ಈ ಮಸೂದೆಯನ್ನು ಮಂಡಿಸುವಾಗ ಶ್ರೀ ತಪಾಸೆಯವರು ಹೀಗೆ ಭಾಷಣ ಮಾಡಿದರು.

"ಈ ಅಸ್ಪೃಶ್ಯತೆಯೆಂದರೆ ಅವಿವೇಕತನವೆಸರಿ. ಹರಿಜನನು ಜನ್ಮವೆತ್ತಿದ ಕೂಡಲೆ ಅವನಿಗೆ ಅಸ್ಪೃಶ್ಯತೆ ತಗಲುತ್ತದೆ.....ಹರಿಜನನಾಗಿ ಅವನು ಹುಟ್ಟುವನು, ತನ್ನ ಜೀವನಾನದಲ್ಲೆಲ್ಲ ಅನು ಹರಿಜನನಾಗಿಯೆ . ಉಳಿಯುವನು ಮತ್ತು ಹರಿಜನರಂತೆ ಸಾಯುವನು. ಹಿಂದುಗಳೆಂದೆನಿಸಿಕೊಳ್ಳುವವರಿಗಿಂತ ಅವನೆಷ್ಟೇ ಶುಚಿರ್ಭೂತನಾಗಿದ್ದರೂ ಅವನೆಷ್ಟೇ ಜಾಣನಿದ್ದರೂ ಶ್ರೇಷ್ಠ ಮನುಷ್ಯನಾಗಲಾರನು. ಮರಣ ಹೊಂದಿದ ಬಳಿಕವೂ ಅವನಬೂದಿ ಮತ್ತು ಮಣ್ಣು ಉಳಿದವರ ಬೂದಿ ಮತ್ತು ಮಣ್ಣಿನಲ್ಲಿ ಮಿಶ್ರವಾಗಬಾರದೆಂಬುದು ಅತ್ಯಂತ ನಿಂದ್ಯವಾದ ಸಂಗತಿಯಾಗಿದೆ .. ಸವರ್ಣ ಹಿಂದುಗಳಷ್ಟೇ ಅವರನ್ನು ಅಸ್ಪೃಶ್ಯರೆಂದು ಭಾವಿಸುವದಿಲ್ಲ, ಕ್ರಿಶ್ಚಿಯನ್‌ರು ಮುಸಲ್ಮಾನರು ಮತ್ತು ಇತರರು ಕೂಡ ಅವರನ್ನು ಅಸ್ಪೃಶ್ಯರೆಂದು ನಡೆಸಿಕೊಳ್ಳುವದರಿಂದ ಅವರ ಸಂಕಷ್ಟಗಳು ಮತ್ತಷ್ಟು ಹೆಚ್ಚುತ್ತವೆ. ಕೆಲವೊಂದು ಸಾಮಾಜಿಕ, ನಾಗರಿಕ ಮೂಲಭೂತ ಹಕ್ಕುಗಳನ್ನು ಪಯೋಗಿಸಿಕೊಳ್ಳುವಲ್ಲಿ ಈಪುಸೂದೆ ಹರಿಜನರಿಗೆ ಒಂದು ಬಗೆಯ ಸನದು, ತಾಮ್ರಪಟ ಆಗಿದೆಂದು ನನಗೆನಿಸುತ್ತದೆ.

ಹಿಂದುಗಳ ವಿಶೇಷ ವಿರೋಧವಿಲ್ಲದೆ ಈ ಮಸೂದೆ ಸ್ವೀಕೃತವಾದುದು ಮಹತ್ವದ ಸಂಗತಿಯಾಗಿದೆ ಈ ಕಾಯಿದೆಯು ಯಶಶ್ವಿಯಾಗುವುದೆಂಬುದಕ್ಕೆ ಶುಭ ಸೂಚನೆಯಿದೆ. ಆದರೂ ಅದರ ಬಗ್ಗೆ ಹೆಚ್ಚು ಆಶಾಪೂರ್ಣರಾಗಿರಲಿಕ್ಕಾಗದು. ಪುರ್ವೆವದಿಂದ ನಾವು ಚಪ್ಪಾಳೆಯಿಕ್ಕಿ ಗೊತ್ತುವಳಿಗಳನ್ನು ಪಾಸು ಮಾಡುವೆವ್ರೆ. ಆದರೆ ಅವು ಕಾಗದದಲ್ಲಿಯೇ ಉಳಿಯುವಂತೆ ಮಾಡುವೆವೆಂಬುದು ನಮಗೆ ಗೊತ್ತಿದೆ. ಈ ಕಾಯಿದೆ ನಿಷ್ಠುರತೆಯಿಂದ ಕಾರ್ಯ ರೂಪದಲ್ಲಿ ಬರುವಂತೆ ಸರಕಾರದವರು ಮತ್ತು ಸುಧಾರಕರು ಅತ್ಯಂತ ದಕ್ಷರಾಗಿರಬೇಕ್ಕಾದುದು ಅವಶ್ಯವಾಗಿದೆ.

ಈ ಮಸೂದೆಯನ್ನು ಮಂಡಿಸಿದವರು ತಮ್ಮ ಭಾಷಣದಲ್ಲಿ ಹೇಳಿದಂತೆ ಅವಿವೇಕತನ ಹಿಂದುಸ್ತಾನದಲ್ಲಿ ಇನ್ನು ಹೆಚ್ಚಾಗಿದೆಂಬುದನ್ನು ಬಚ್ಚಿಡುವಲ್ಲಿ ಅರ್ಥವಿಲ್ಲ. ಇದು ಕೇವಲ ಅಸ್ಪೃಶ್ಯತೆಗೆ ಮಾತ್ರ ಅನ್ವಯಿಸುತ್ತದೆಯೆಂದಲ್ಲ ಉಳಿದ ಅನೇಕ ಸಂಗತಿಗಳಿಗೂ ಅನ್ವಯಿಸುತ್ತದೆ. ಆದುದರಿಂದ ಸುಧಾರಕರು ಈ ರಕ್ಕಸನ ಕಡೆಗೆ ಹೆಚ್ಚು ಗಮನ ಕೊಟ್ಟು ಇದಕ್ಕೆ ಬಲಿಯಾದವರಗೂಡ ದಕ್ಷತೆಯಿಂದ ಜಾಣತನದಿಂದ ಮತ್ತು ವಿನಮ್ರತೆಯೀದ ವ್ಯವಹರಿಸಬೇಕು.

ಜಿಲ್ಲಾ ಬೋರ್ಡು ಮುನಿಸಿಪಾಲಿಟಿ ಚುನಾವಣೆ

—೧೯೪೭ ರಲ್ಲಿ ನಡೆಯುವವು—

ಮದ್ರಾಸ್ ಸರ್ಕಾರದ ಪ್ರಕಟನೆ:— ಜಿಲ್ಲಾ ಬೋರ್ಡು ಮತ್ತು ಮುನಿಸಿಪಾಲಿಟಿಗಳಿಗೆ ಈಗಿರುವದಕ್ಕಿಂತ ಹೆಚ್ಚಿನ ಅಧಿಕಾರಗಳನ್ನು ಕೊಡಬೇಕೆಂದು ಸರ್ಕಾರದವರು ಶಾಸನ ಮಾಡುವವರಿದ್ದಾರೆ. ಅಲ್ಪ ಸಂಖ್ಯಾಕರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡಲು ಕೂಡ ಸರ್ಕಾರದವರು ಆಲೋಚಿಸುತ್ತಿರುವರು. ಮುನಿಸಿಪಾಲಿಟೀ ಮತ್ತು ಜಿಲ್ಲಾ ಬೋರ್ಡುಗಳ ಮತ ಪಟ್ಟಿಗಳು ಅಪೂರ್ಣವಿದ್ದು ದೋಷಯುಕ್ತವಾಗಿರುವವೆಂದು ಅನೇಕ ಆಪಾದನೆಗಳು ಬಂದಿವೆ. ನಾವು ಚುನಾವಣೆ ದಿನಗಳನ್ನು ಪ್ರಕಟಿಸಿದಾಗ ಚುನಾವಣೆಯ ಸಮಯಕ್ಕೆ ಶಾಂತವಾತಾವರಣವೇರ್ಪಡುವದೆಂದು ಭಾವಿಸಲಾಗಿತ್ತು ಆದರೆ ಅಂಥಾ ವಾತಾವರಣವಿಲ್ಲ ಚುನಾವಣೆಯಿಂದ ಮತ್ತಷ್ಟು ಪರಿಸ್ಥಿತಿಯು ಕೆಡುವ ಲಕ್ಷಣಗಳಿವೆ.

ಈಕಾರಣ ಮುನಿಸಿಪಾಲಿಟಿ ಮತ್ತು ಜಿಲ್ಲಾ ಬೋರ್ಡು ಚುನಾವಣೆಗಳನ್ನು ಅನಿಯಮಿತ ಅವಧಿವರಿಗೆ ಮುಂದೆ ಹಾಕಲಾಗಿದೆ.

ಪೂರ್ವ ಬಂಗಾಳಕ್ಕೆ

ಗಾಂಧೀಜಿ—ಪ್ರಯಾಣ.

ಮಹಾತ್ಮ ಗಾಂಧಿಯವರು ಪೂರ್ವ ಬಂಗಾಲದ ಪರಿಸ್ಥಿತಿಯನ್ನು ಕಣ್ಣಾರೆ ನೋಡಲು ಈ ವಾರ ತಮ್ಮ ಸಿಬ್ಬಂದಿಯೊಂದಿಗೆ ತೆರಳಿದ್ದಾರೆ

ಕೂಡ್ಲಿಗೆ
ನೆಹರೂ ಜಯಂತಿ.

ನೆಹರೂ ತರುಣಸಂಘದಾಶ್ರಯದಲ್ಲಿ ನವಂಬರ್ ೫ ನೆಯ ದಿನಾಂಕ ಪ್ರಮುಖರು ಅಧಿಕಾರಿ ವರ್ಗದವರು ಶ್ರೀ ಭೀಮಸೇನಾಚಾರ್ಯರಧ್ಯಕ್ಷತೆಯಲ್ಲಿ ಸಮೂವೇಶವಾಗಿ ೧೪ ನೆಯ ತಾರೀಖು ನೆಹರೂ ಜಯಂತಿಯನ್ನು ಆಚರಿಸಲು ನಿಶ್ಚಯಿಸಿದರು. ಅಧ್ಯಕ್ಷರಾದ ಶ್ರೀ ವಾಸುದೇವಶರ್ಮರ ಸೂಚನೆಯಂತೆ ಕಾರ್ಯಕ್ರಮವು ನಿಶ್ಚಯಿಸಲ್ಪಟ್ಟು ಸಭೆಯಲ್ಲೇ ರೂ. ೫೫ ಗಳ ಸಂಗ್ರಹವಾಯಿತು. ದೇಶಹಿತೈಷಿಗಳು ಇದನ್ನೇ ಆಹ್ವಾನವೆಂದು ಭಾವಿಸಿ ಅಗಮಿಸಬೇಕೆಂದು ಚಾಲಕರು ಕೋರುತ್ತಾರೆ.

ಎಲಿಮೆಂಟರಿ ಶಾಲೋಪಾಧ್ಯಾಯರ ಸಂಬಳ ಹೆಚ್ಚಿಸಿರಿ.

ಪ್ರತ್ಯಕ್ಷಕ್ಕೋಸ್ಕರ ಪೂರಾವನ ನೋಡಲು—

ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟುಬಿಟ್ಟರು ಈ ಸಂಬಂಧವಾಗಿ ತಕ್ಕ ಚರ್ಯೆಗಳನ್ನು ತೆಗೆದುಕೊಳ್ಳುವಂತಾಗಬೇಕೆಂಬ ತೀರ್ಮಾನವು ಬ್ರಿಟೀಷ್ ಜಿಲ್ಲೆಯ ಪ್ರಾಥಮಿಕ ಶಾಲೋಪಾಧ್ಯಾಯರ ಸಮ್ಮೇಳನದಲ್ಲಾಯಿತು.

ಪ್ರಾಥಮಿಕ ಶಾಲೋಪಾಧ್ಯಾಯರಿಗೆ ಕನಿಷ್ಟ 40 ರಿಂದ ಅಧಿಕ 70 ರೂ. ಮೂಸಿಕವೇತನವೂ ಇದರೊಂದಿಗೆ ತುಟ್ಟಿಭತ್ಯವೂ ಕೊಡಲ್ಪಡಬೇಕು. ಭವಿಷ್ಯ ಜಗತ್ತನ್ನು ರಚಿಸಲಿಕ್ಕೆ, ಮಾನಸಿಕ ಮತ್ತು ದೈಹಿಕವಾಗಿ ದಷ್ಟಪುಷ್ಟವಾದ ಜನಾಂಗವು ಬೇಕು. ಇಂಥಾ ಬಹುಮುಖ್ಯಕಾರ್ಯವನ್ನು ಕೈಗೊಂಡ ಉಪಾಧ್ಯಾಯರನ್ನು ಎಲ್ಲರೂ ಪುರಸ್ಕರಿಸಬೇಕಾಗಿದೆ. ಇತರ ಎಲ್ಲಾ ಇಲಾಖೆಗಳ ನೌಕರರಿಗೆ ಸಂಬಳ ಹೆಚ್ಚಿಸಿ ನಮ್ಮನ್ನು ಮೂಲೆಗೊತ್ತಿರುವರು ಕೊನೆಗೆ ನಮ್ಮ ಮಕ್ಕಳಿಗಾದರೂ ಉಚಿತ ಶಿಕ್ಷಣವಿಲ್ಲ ಇದಕ್ಕೆ ಏರ್ಪಾಟಾಗಬೇಕು. ಇನ್ನೂ ಕೆಲ ಮುಖ್ಯ ತೀರ್ಮಾನಗಳಾದವು.

ಬಳ್ಳಾರಿ ಜಿಲ್ಲಾ ಎಲಿಮೆಂಟರೀಶಾಲೋಪಾಧ್ಯಾಯರೂ ಸಹ ಸಂಘಟಿತರಾಗಬೇಕೆಂದು ಒಬ್ಬರು ಸೂಚಿಸುತ್ತಾರೆ.

ಲೇಬರ್ ಶಾಲೋಪಾಧ್ಯಾಯರ ಕಾಯಂ (Confirmation)

ಮದ್ರಾಸ್ ಲೇಬರ್ ಕಮೀಶನರ್‌ರವರ ಆಜ್ಞಾನುಸಾರವಾಗಿ ಹತ್ತು ವರ್ಷಗಳಿಗಿಂತಲೂ ಹೆಚ್ಚಿನ ಸರ್ವೀಸಾದ ಉಪಾಧ್ಯಾಯರುಗಳಲ್ಲಿ ಶೇಕಡ 50% ಉಪಾಧ್ಯಾಯರನ್ನು ಕಾಯಂ ಮಾಡಲಾಗಿದೆಯೆಂದು ಲೇಬರ್ ಆಫೀಸರವರು ತಿಳಿಸುತ್ತಾರೆ. ಎಲ್ಲರನ್ನೂ ಕಾಯಂಮಾಡಬೇಕೆಂದು ನಾವು ಈಗಾಗಲೇ ತೀರ್ಮಾನಿಸಿರುತ್ತೇವೆ. ಅಲ್ಲದೆ ಪ್ರಾಂತೀಯ ಲೇಬರ್ ಉಪಾಧ್ಯಾಯರ ಸಮ್ಮೇಳನದಲ್ಲಿ ಈ ಪ್ರಶ್ನೆಯನ್ನು ನಾವು ತಪ್ಪದೆ ವಿಚಾರಿಸಬೇಕಾಗಿದೆ. ಮದ್ರಾಸಿನಲ್ಲಿ ಲೇಬರ್ ಶಾಲೆಗಳನ್ನೆಲ್ಲಾ ಮುಚ್ಚಿದರೂ, ಯೋಗ್ಯತೆ ಮತ್ತು ಅನುಭವವುಳ್ಳ ಈ ಉಪಾಧ್ಯಾಯರು ಬೇರೆಕಡೆಗಾದರೂ ಉಪಯೋಗಕ್ಕೆ ಬೀಳುವರು. ಈಕಾರಣ ಲೇಬರ್ ಶಾಖೆಯು ಸ್ಥಿರವಾದುದಲ್ಲವೆಂಬ (Temporary) ವಾದದಲ್ಲಿ ಹುರುಳಿಲ್ಲ. ಈ ಉಪಾಧ್ಯಾಯರ ಜೀವನವು ಈಗಾಗಲೇ ಅನಿಶ್ಚಿತವಿದೆ. ಪ್ರಜಾ ಸರಕಾರವು ನಮ್ಮ ನ್ಯಾಯವಾದ ಬೇಡಿಕೆಗಳನ್ನು ಮನ್ನಿಸದಿರಲಾರದೆಂದು ನಂಬಿದ್ದೇವೆ

ಅಧ್ಯಕ್ಷ

ಬಳ್ಳಾರಿಜಿಲ್ಲಾ ಲೇಬರ್ ಶಾಲೋಪಾಧ್ಯಾಯರ ಸಂಘ.

ಬಳ್ಳಾರಿಯ ಕಬ್, ಸ್ಕಾವುಟ ಮಾಸ್ತರರು, ವಿದ್ಯಾರ್ಥಿಗಳು ಸಂಡೂರು ಸಂಸ್ಥಾನಕ್ಕೆಹೋಗಿ ಅಲ್ಲಿ ಸಂಸ್ಥಾನದವರ ಅತಿಥ್ಯ ಸ್ವೀಕರಿಸಿ ರಮಣೀಯ ದೃಶ್ಯಗಳನ್ನು ಸಂದರ್ಶಿಸಿ ಹಿಂತಿರುಗಿದರು. ಜನಾಬ ರಂಜಾನ್ ಸಾಹೇಬರು ಹಿರೇಹಾಳಿಗೆ ಸ್ಕಾವುಟರನ್ನು ಆಹ್ವಾನಿಸಿದ್ದಾರೆ.

--- M. Sivanandaiah Dt. Registrar!

146

The Rayalaseema Bank Limited, Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— (ಬಳ್ಳಾರಿಜಿಲ್ಲಾ **ಹಡಗಲಿ, ಕೂಡ್ಲಿಗೆ,** ಚಿತ್ತೂರುಜಿಲ್ಲಾ **ನಾಗರಿಯಲ್ಲಿ** ನಮ್ಮ ಶಾಖೆಗಳನ್ನು ಪ್ರಾರಂಭಿಸಿದೆವೆಂದು ತಿಳಿಸಲು ಹರ್ಷಿಸುತ್ತೇವೆ.

ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ.

ಅನಂತಪುರ:- ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾವಿಡಿ, ತಿಮ್ಮನಚರ್ಲ, ಉರವಕೊಂಡ.

ಚಿತ್ತೂರು:- ಚಿತ್ತೂರು, ಮದನಪಲ್ಲಿ, ತಿರುಪತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ. **ಕಡಪ:-** ರಾಜಂಪೇಟೆ

ಫಿಕ್ಸ್‌ಡ್ ಡಿಪಾಜಿಟ್‌ನ ಬಡ್ಡಿದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2ವರ್ಷಗಳಿಗೆ 3½%.

ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.

ಮಾಸಿಕ ಪ್ರಾವಿಡೆಂಟ್ ಫಂಡ ಡಿಪಾಜಿಟ್:- 3%.

ಬಿ. ವಿ. ಕೇಷಗಿರಿರಾವ್, ಕಾರ್ಯದರ್ಶಿ.

—ರಾಷ್ಟ್ರೀಯ ಪುಸ್ತಕಗಳು.—

—: ಕಾಂಗ್ರೆಸ್ ಸ್ವರೂಪ ದರ್ಶನ:—

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ-ನಿವಾರಣೆ	0-12—0
ಪ್ರಾಂತಭಾಷೆ- ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್‌ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ(ಇತಿಹಾಸ-ತಂತ್ರ)	3-8 -0

ವಿ.ಪಿ. ಖರ್ಚುಬೇರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ.—

ನವಭಾರತ, — ಕಾರ್ಯಾಲಯ ಬಳ್ಳಾರಿ.

ಹಿಂದೂಸ್ತಾನಿಯು ರಾಷ್ಟ್ರಭಾಷೆ

ಇದನ್ನು ತಪ್ಪದೆ ಕಲಿಯಿರಿ.

ಪ್ರಾರಂಭಿಕ ಪರೀಕ್ಷೆಗಳಾದ ಪ್ರಾಥಮಿಕ- ಮಧ್ಯಮ ರಾಷ್ಟ್ರಭಾಷೆ, ಉನ್ನತ ಪರೀಕ್ಷೆಗಳಾದ ಪ್ರವೇಶಿಕ, ವಿಶಾರದ- ಪ್ರಚಾರಕ, ಮದ್ರಾಸ್ ವಿಶ್ವವಿದ್ಯಾಲಯದ ಹಿಂದೀ- ವಿದ್ವಾನ್ ಪರೀಕ್ಷೆಗಳ ಮಾಹಿತಿಯನ್ನು ಉಚಿತವಾಗಿ ಕೊಟ್ಟು- ಶಿಕ್ಷಣದ ವ್ಯವಸ್ಥೆಗೆ ಸಲಹೆಗಳನ್ನು ಕೊಡಲಾಗುವುದು- ಎಲ್ಲಾಪುಸ್ತಕಗಳು ದೊರೆಯುತ್ತವೆ. **ಬಹಳ ಸುಲಭ ಭಾಷೆ-ಅತ್ಯಲ್ಪಕಾಲದಲ್ಲಿ ಕಲಿಯಬಹುದು.** **ಟಿ. ಬಿ. ಕೇಶವರಾವ್**

ಹಿಂದೀಪ್ರಚಾರಕ, ಬಳ್ಳಾರಿ

NAVA BHARAT, BELLARY Reg. No. M. 4746

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.		Subscription Rates.	
ವರ್ಷಕ್ಕೆ	5-0-0	One Year	5—0—0
6 ತಿಂಗಳಿಗೆ	3-0-0	Six months	3—0—0

ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ

Subscription will not be accepted for less than 6 months.

To

SRI..... ....

....

....

Printed at Krishna Press Bellary QH No. B 17 FOR (Q.H. NO. B-5)

Edited & Published by T B. KESHAVARAO.

ಜೈಹಿಂದ್ Reg. No M 4746

ನವಚೈತನ್ಯ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೫ ಸಂಚಿಕೆ ೧೬ ಬಳ್ಳಾರಿ ನವಂಬರು ೧೮ ಸೋಮವಾರ ೧೯೪೬ ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವು.

ಗಲಭೆಗಳನ್ನು ನಿಲ್ಲಿಸಲು ಸಹಾಯ ನೀಡಿರಿ,

—ವೃತ್ತಪತ್ರಿಕೆಗಳಿಗೆ ಸರ್ದಾರರ ಬಿನ್ನಹ—

ಗೃಹಮಂತ್ರಿಗಳಾದ ಸರ್ದಾರ ವಲ್ಲಭಬಾಯಿ ಪಟೇಲರು ಪತ್ರಿಕೋದ್ಯೋಗಿಗಳನ್ನು ಕರೆಸಿ ಹೀಗೆ ಹೇಳಿದರು. "ಜಾತೀಯ ಗಲಭೆ ಸುದ್ದಿಗಳನ್ನು ಪ್ರಕಟಿಸುವಲ್ಲಿ ಕೆಲ ನಿರ್ಬಂಧಗಳನ್ನು ಹಾಕಬೇಕೆಂಬುದಕ್ಕೆ ವೃತ್ತಪತ್ರಿಕೆಗಳು ಒಪ್ಪಬೇಕು. ಕೆಲ ಜನರ ಹೇಳಿಕೆಗಳು ಅವರ ಧ್ವನಿಯಿಂದ ಸಾವಿರಾರು ಜನಕ್ಕೆ ಮುಟ್ಟಬಹುದು. ಆದರೆ ಪತ್ರಿಕೆಗಳ ಮೂಲಕವಾಗಿ ಲಕ್ಷಾಂತರ ಜನರು ಅದನ್ನು ಕೇಳುವಕಾರಣ ಅವುಗಳ ಜವಾಬ್ದಾರಿ ಅಧಿಕವಿದೆ. ಸ್ತ್ರೀಯರ ಮತ್ತು ಮಕ್ಕಳ ಸಂಹಾರ ನಡೆದಿರುವಾಗ ಇನ್ನು ನಾವು ಸುಮ್ಮನೆ ಕುಳಿತುಕೊಳ್ಳಲು ಸಾಧ್ಯವಿಲ್ಲ ಹಿಂಸೆಯಿಂದ ಯಾವ ಉದ್ದೇಶವೂ ಸಾಧಿಸಲಾರೆಂಬುದನ್ನು ಎಲ್ಲರೂ ಮನಗಂಡಿದ್ದಾರೆ ಇದರ ಪೂರ್ಣ ಹೊಣೆಯನ್ನು ಬ್ರಿಟಿಶರಮೇಲೆಯೇ ಹೊರಿಸುವುದು ಸಾಧ್ಯವಿಲ್ಲ. ನಮ್ಮ ರಾಷ್ಟ್ರಕ್ಕೆ ಅಗೌರವ ತರುವ ಈ ಮದಾಂಧತೆಯನ್ನು ಮೆಟ್ಟಲು ನಾವೆಲ್ಲರೂ ಹೆಗಲಿಗೆಹೆಗಲು ಹಚ್ಚಿಲ್ಲನಿಬೇಕು. ವೃತ್ತಪತ್ರಿಕಾಕರ್ತರು ತಮ್ಮ ಕರ್ತವ್ಯವನ್ನು ಸರಿಯಾಗಿ ನೆರವೇರಿಸದಿದ್ದರೆ, ನಾವು ನಿಯಮುಗಳನ್ನು ಮಾಡಿ ನಿಷ್ಕುರವಾಗಿ ಆಳಬೇಕಾಗುವದು."

ಮಾಂತ್ರಿಕನ ಬೆತ್ತ.

ಬೀಹಾರಿನಲ್ಲಿ ಗಲಭೆಗಳು ನಿಲ್ಲದಿದ್ದರೆ ಮಹಾತ್ಮರು ಉಪವಾಸಮಾಡುವರೆಂಬ ಸುದ್ದಿಯನ್ನು ಡಾ॥ ರಾಜೇಂದ್ರಪ್ರಸಾದರು ಪ್ರಕಟಿಸಿದ್ದರಿಂದ ಬೀಹಾರದಲ್ಲಿ ಅದು ಮಂತ್ರವಾದಿಯ ಬೆತ್ತದಂತೆ ಕೆಲಸ ಮಾಡಿತೆಂದು ಅಲ್ಲಿನ ಆಂಗ್ಲಸೈನಿಕನು ನುಡಿದನು.

ಮೋಟಾರ್ ಸಾರಿಗೆ, ಮದ್ರಾಸ್ ಸರ್ಕಾರವು ವಹಿಸುವುದು.

"ಕ್ರಮೇಣವಾಗಿ ಪ್ರಯಾಣೀಕರ ಸೌಕರ್ಯಕ್ಕಾಗಿ ಏರ್ಪಟ್ಟ ಮೋಟಾರ ಸಾರಿಗೆ ವ್ಯವಸ್ಥೆಯನ್ನು ಸರಕಾರವೇ ವಹಿಸುವುದು. ಆಗ ಮೋಟಾರ ಕೆಲಸಗಾರರ ಪರಿಸ್ಥಿತಿಯು ತನ್ನಷ್ಟಕ್ಕೆ ತಾನೆ ಸುಧಾರಿಸುವುದು, ಭವಿಷ್ಯದ ಯೋಜನೆಯನ್ನರಿತು ಮೋಟಾರ ಮಾಲೀಕರು ತಮ್ಮ ಕೆಲಸಗಾರರನ್ನು ಪ್ರೇಮದಿಂದ ನಡೆಸಿಕೊಂಡು ಅವರಿಗೆ ಸರಿಯಾದ ಸಂಬಳ ಕೊಡಬೇಕು" ಎಂದು ಮದ್ರಾಸ್‌ದಲ್ಲಿ ಕೂಡಿದ ಪ್ರಾಂತೀಯ ಮೋಟಾರ್ ಕೆಲಸಗಾರರಸಂಘಗಳ ಸಭೆಯಲ್ಲಿ ಸಾರಿಗೆ ಮಂತ್ರಿಗಳಾದ ಶ್ರೀ ರಾಘವ ಮೆನನರವರೂ, ಶ್ರೀ ವಿ. ಎಂ. ಗಿರಿಯವರೂ ಹೇಳಿದರು.

ಬಳ್ಳಾರಿ ಪುರಸಭಾಧ್ಯಕ್ಷರಾದ

ಜ. ಅಬ್ದುಲ ರಾವುಫ್ ಸಾಹೇಬರ ನಿಧನ

ಬಳ್ಳಾರಿ ಪುರಸಭಾಧ್ಯಕ್ಷರೂ. ಮದ್ರಾಸ್ ಅಸೆಂಬ್ಲಿಯ ಸದಸ್ಯರೂ, ಬಳ್ಳಾರಿಜಿಲ್ಲಾ ಮುಸ್ಲಿಂ ಲೀಗ್ ಅಧ್ಯಕ್ಷರೂ ಆದ ಜನಾಬ ಅಬ್ದುಲ ರಾವುಫ್ ಸಾಹೇಬರು ೧೪ ನೆಯ ದಿನಾಂಕ ಪ್ರಾತಃಕಾಲ ಹೃದಯವಿಕಾರದಿಂದ ಆಕಸ್ಮಿಕವಾಗಿ ಮರಣ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ–

1937ರ 1946ನೆಯ ಚುನಾವಣೆಗಳಲ್ಲಿ ಇವರು ಮುಸ್ಲಿಂಲೀಗಿನ ಪರವಾಗಿ ಮದ್ರಾಸ್ ಶಾಸನ ಸಭೆಯ ಸದಸ್ಯರಾಗಿ ಆರಿಸಿ ಬಂದಿದ್ದರು– ಬಳ್ಳಾರಿಯಲ್ಲಿ ಅಡ್ವೊಕೇಟ ವೃತ್ತಿಯನ್ನವಲಂಬಿಸಿದ್ದರು. ಮುಸಲ್ಮಾನರ ಹಿತಕಾಂಕ್ಷೆಗಳಿಗಾಗಿ ಬಹಳ ದುಡಿಯುತ್ತಿದ್ದರು. ಅ ಖಿಲ ಭಾರತ ಮುಸ್ಲಿಂಲೀಗ್ ಕೌನ್ಸಿಲದ ಸದಸ್ಯರಾಗಿದ್ದರು, ಕಳೆದ ೯ ವರ್ಷಗಳಿಂದ ಪುರ ಸಭಾಧ್ಯಕ್ಷರಾಗಿದ್ದರು– ಶಾಸನಸಭೆಯ ಲೀಗ್ ಪಾರ್ಟಿ ಕಾರ್ಯದರ್ಶಿಗಳಾಗಿದ್ದರು– ಸರಕಾರದಿಂದ ದೊರೆತ ಖಾನಸಾಹೇಬ ಪದವಿಯನ್ನು ಲೀಗ್ ಆಜ್ಞೆಯಪ್ರಕಾರಕ್ಕೆ ಹಿಂದಕ್ಕೆ ಕೊಟ್ಟಿದ್ದರು.

ದುಃಖ ಸೂಚಕವಾಗಿ ನಗರದಲ್ಲಿನ ಹಿಂದೂ, ಮುಸಲ್ಮಾನರಂಗಡಿಗಳೂ, ಮುನಿಸಿಪಲ್ ಶಾಲೆ, ಸಂಸ್ಥೆಗಳೂ, ಮುಚ್ಚಲಾಗಿದ್ದವು. ಆಕಸ್ಮಿಕವಾಗಿ ಮರಣಿಸಿದ್ದರಿಂದ ದೊಡ್ಡ ಆಸ್ಪತ್ರೆಯಲ್ಲಿನ "ಐರನ್ ಲಂಗ್" ಯಂತ್ರದಿಂದ ಉಸಿರಾಡಿಸಲು ಪ್ರಯತ್ನ ಮಾಡಲಾಯಿತು ಆಲ್ಲದೆ ಅವರ ಸೋದರರ ೧೦ ಔನ್ಸ ಶುದ್ಧರಕ್ತವನ್ನು ಕುಂಬಲಾಯಿತು – ಎಲ್ಲವೂ ವಿಫಲವಾಯಿತು. 15ನೆಯ ತಾ. ನಡೆದ ಸ್ಮಶಾನಯಾತ್ರೆಗೆ ಸಾವಿರಾರು ಹಿಂದೂ, ಮುಸಲ್ಮಾನರು ಹೋಗಿದ್ದರು. ಇವರಿಗೆ ಒಬ್ಬ ಪುತ್ರನೂ, ಒಬ್ಬ ಪುತ್ರಿಯೂ, ಅನೇಕ ಬಂಧು ಮಿತ್ರರೂ, ಇರುವರು. ಇವರ ಮರಣದಿಂದ ಹಿಂದೂ– ಮುಸಲ್ಮಾನರಿಗೂ, ನಗರಕ್ಕೂ, ನಷ್ಟವಾಗಿದೆ– ಏತಕ್ಕೆಂದರೆ ಇವರು ಉಗ್ರಗಾಮಿಗಳನ್ನು ತಡೆಯುವದರಲ್ಲಿ ಶಕ್ತರಾಗಿದ್ದರು.

ಮದ್ರಾಸ್ ಉಪಮಂತ್ರಿ ಶ್ರೀ ಶಂಕರರೆಡ್ಡಿ.

ಮದ್ರಾಸ್ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾದ ಶ್ರೀ ಎನ್. ಶಂಕರರೆಡ್ಡಿಯವರು- ನಾರಾಯಣ ದೇವರಕೆರೆ- ಹೊಸಪೇಟೆ, ಬಳ್ಳಾರಿ, ಕುರುಗೋಡು ಬಾದನಹಟ್ಟಿಗಳನ್ನು ಸಂದರ್ಶಿಸಿ ಆಲೂರಿನ ಗ್ರಾಮೋದ್ಯೋಗ ಸಭೆಯಲ್ಲಿ ಮದ್ರಾಸ್ ಸರ್ಕಾರದ ನೀತಿಯನ್ನು ವಿವರಿಸಿ ಆದವಾನಿ– ಎಮ್ಮಿಗನೂರುಗಳ ಮಾರ್ಗವಾಗಿ ಕರ್ನೂಲು ಜಿಲ್ಲೆಯನ್ನು ಪ್ರವೇಶಿಸಿದರು

ಮಲಪನಗುಡಿಯಲ್ಲಿ

ಮದ್ರಾಸ್ ಪ್ರಭುತ್ವದ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾದ ಶ್ರೀ ಎನ್. ಶಂಕರರೆಡ್ಡಿಯವರು ಅಧಿಕಾರೀ ಮತ್ತು ಇತರ ವಕೀಲ ಮಂಡಳಿದೊಂದಿಗೆ ಇಲ್ಲಿಗೆ ಕಳೆದವಾರ ದಯಮಾಡಿಸಿದ್ದರು. ಶ್ರೀ ಬಿ. ಅನಂತಾಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀ ಮಲ್ಲಿಕಾರ್ಜುನ ದೇವಾಲಯದ ಸಿಂಹದ್ವಾರದ ಬಳಿ ಸಮಾವೇಶವಾದ ಸಭೆಯಲ್ಲಿ ಮದ್ಯನಿಷೇಧ' ಖಾದಿ, ಧಾನ್ಯ ಸಂಗ್ರಹದ ಅಂಶಗಳಿಗೆ ಮದ್ರಾಸ್ ಸರ್ಕಾರದ ನೀತಿಯನ್ನು ಸ್ಪಷ್ಟವಾಗಿ ವಿವರಿಸಿದರು. ಅನಂತಾಚಾರ್ಯರು ಭಾಷಣವನ್ನು ಕನ್ನಡಿಸಿದರು. ಮಲ್ಲಿಕಾರ್ಜುನಸ್ವಾಮಿ ಮಂಗಳದಿಂದ ಸಭೆಯು ಮುಗಿಯಿತು

ಹಿಂದೂಸ್ತಾನ ರಷ್ಯಾಗಳ ರಾಯಭಾರಿ ಸಂಭಂಧಕ್ಕೆ ರಷ್ಯಾವು ಅನುಕೂಲವಿರುವದೆಂದು ಕೇಂದ್ರ ಅಸೆಂಬ್ಲಿಯಲ್ಲಿ ಪಂಡಿತ ಜವಹರಲಾಲರು ಹರ್ಷೋದ್ಗಾರಗಳ ಮಧ್ಯೆ ಸಾರಿದರು.

ಉತ್ತರ ಹಿಂದೂಸ್ತಾನದ ರೈಲ್ವೆನಿಲ್ದಾಣಗಳಲ್ಲಿ ಹಿಂದೂಪಾಣಿ ಮತ್ತು ಮುಸ್ಲಿಂಪಾಣಿ ಎಂಬುದಾಗಿ ಜಾತೀಯ ಪದ್ಧತಿಯ ಮೇಲೆ ಫಲಹಾರ ಗೃಹಗಳನ್ನು ನಡೆಸಲಾಗುವದಿಲ್ಲೆಂದು ರೈಲ್ವೆ ಮೆಂಬರ್ ಅಸಫಾಲಿಯವರು ಹೇಳಿದರು.

ಪೋಲೀಸ್ ಮತ್ತು ಐ. ಪಿ. ಯಸ್ ಅಧಿಕಾರಿಗಳು.

ಕೆಲಸದಿಂದ ತೆಗೆದು ಹಾಕಲು ಪ್ರಾಂತಸರಕಾರಕ್ಕೆ —ಅಧಿಕಾರ—

ಲಖನೌ— ಯುಕ್ತಪ್ರಾಂತ ಪೋಲೀಸ ಇನ್ಸಪೆಕ್ಟರ ಜನರಲ್ಲರಾದ ಸರ್ ಫಿಲಿಪ ಮೆಜಸನ ಇವರನ್ನು ಕೆಲಸದಿಂದ ತೆಗೆದುಹಾಕಲು ಪ್ರಾಂತೀಯ ಕಾಂಗ್ರೆಸ ಸರಕಾರಕ್ಕೆ ಅಧಿಕಾರವಿದೆಂದು ಭಾರತ ಮಂತ್ರಿಗಳು ತೀರ್ಪು ಕೊಟ್ಟಿರುವರು ಸರಕಾರ ಒಂದು ಕಡೆ ಮತ್ತು ಗವ್ಹರ್ನರ ಹಾಗು ಪೋಲೀಸ ಇನ್ಸಪೆಕ್ಟರ ಜನರಲ್ ಇನ್ನೊಂದು ಕಡೆ ಇವರೊಳಗೆ ಕಳೆದ ಏಳುತಿಂಗಳಿಂದ ನಡೆದ ತಿಕ್ಕಾಟವು ಇದರಿಂದ ಕೊನೆಗಂಡಂತಾಗಿದೆ.

ಭಾರತ ಮಂತ್ರಿಗಳ ಈ ತೀರ್ಪು ಇತರ ಸರಕಾರಗಳಿಗೆ ಹೊಸ ಪರಿಪಾಠವನ್ನು ಹಾಕಿಕೊಟ್ಟಂತಾಗಿದೆ ಏಕೆಂದರೆ ಹಿಂದೂಸ್ತಾನ ಸರಕಾರ ಕಾಯಿದೆಯ ಪ್ರಕಾರ ಇಂಡಿಯನ ಪೋಲೀಸ ಮತ್ತು ಐ. ಸಿ. ಎಸ್ ಅಧಿಕಾರಿಗಳನ್ನು ಗವ್ಹರ್ನರರ ಒಪ್ಪಿಗೆ ಪಡೆಯದೆ ಕೆಲಸದಿಂದ ತೆಗೆದುಹಾಕಲು ಇಲ್ಲವೆ ಒತ್ತಾಯದಿಂದ ರಾಜೀನಾಮೆ ಕೊಡಿಸಲು ಅಥವಾ ರಜೆಯ ಮೇಲೆ ಕಳಿಸಲು ಪ್ರಾಂತಿಯ ಮಂತ್ರಿಮಂಡಳಗಳಿಗೆ ಅಧಿಕಾರವಿದ್ದಿಲ್ಲ. ಇನ್ಸಪೆಕ್ಟರ ಜನರಲ್ಲರ ಕೆಲಸವನ್ನು ಳಿಸಲು ಯುಕ್ತಪ್ರಾಂತ ಗವರ್ನರರು ತಮ್ಮ ವಿಶೇಷಾಧಿಕಾರವನ್ನುಪಯೋಗಿಸುವದಾಗಿ ಹಿಂದೊಮ್ಮೆ ಬೆದರಿಕೆ ಹಾಕಿದ್ದರು.

ಈ ಪ್ರಾಂತದಲ್ಲಿ ಕಾಂಗ್ರೆಸು ಅಧಿಕಾರ ಸ್ವೀಕರಿಸಿದಂದಿನಿಂದ ಕೆಲ ಇಂಡಿಯನ ಪೋಲೀಸ ಹಾಗು ಐ. ಸಿ. ಎಸ್. ಅಧಿಕಾರಿಗಳು ಸರಕಾರದ ಆಜ್ಞೆಗ [illegible] ಕಡೆಗಣಿಸಲ್ಪಟ್ಟಿದ್ದಾರೆಂದು ಪ್ರಾಂತ [illegible] ಇನ್ಸಪೆಕ್ಟರ ಜನರಲ್ಲನು ಗೃಹಮಂತ್ರಿಗಳಾದ ಶ್ರೀ ಮಫಿ ಅಹಮ್ಮದ ಕಿಡವಾಯರನ್ನು ತಾನು ಬಂಧಿಸುವದಾಗಿ ಬೊಗಳಿದ್ದನು.

ಮದ್ರಾಸ್ ಸರ್ಕಾರದ ಜವಳಿಧೋರಣ

—ನಮಗೆ ನಿಮ್ಮ ಕುದುರುಗಳು ಬೇಡ—

ಪ್ರಾಂತದಲ್ಲಿ ಖಾದಿಗೆ ಸಾರ್ವತ್ರಿಕವಾಗಿ ಪ್ರೋತ್ಸಾಹ ಕೊಡಬೇಕೆಂದು, ಮದ್ರಾಸ್ ಸರ್ಕಾರದವರು ಈ ಪ್ರಾಂತದಲ್ಲಿಯ ಗಿರಣಿಗಳನ್ನು ವಿಸ್ತರಿಸಲು, ಹೊಸ ಗಿರಣಿಗಳನ್ನು ಸ್ಥಾಪಿಸಲು ಇಂಡಿಯಾ ಸರಕಾರದವರಿಂದ ಮೀಸಲಾಗಿ ಡಲ್ಪಟ್ಟ ಕುದುರೆಗಳು ಬೇಡವೆಂದು ತಿರಸ್ಕರಿಸಿದ್ದರು. ಈ ಮೊದಲೇ ಮದ್ರಾಸ್ ಸರ್ಕಾರದವರ ಸಲಹೆ ಪ್ರಕಾರಕ್ಕೆ ತೆಗೆದಿಟ್ಟ ಕದುರುಗಳನ್ನು ಕೊಡಬಾರದೆಂದು ಹೇಳಿದರೆ- ನಾವು ಕೇಳುವುದಿಲ್ಲವೆಂಬರ್ಥದ ಉತ್ತರಗಳನ್ನು ಡೆಲ್ಲಿ ಕ್ಯಾಸಿಲ್ ಆಫ್ ಸ್ಟೇಟದಲ್ಲಿ-ಪೂರೈಕೆ ಖಾತೆಯ ಕಾರ್ಯದರ್ಶಿಗಳು ಕೊಟ್ಟರು—

ಕೇಂದ್ರ ಸರಕಾರದವರು ಇದರಲ್ಲಿ ಕೈ ಹಾಕುವುದು ಯುಕ್ತವಾದುದಲ್ಲ. ಅವರಿಗೆ ಇಂಥ ಅಧಿಕಾರವಿಲ್ಲ, ಅವರ ನೀತಿಯು ಏನೇ ಇರಲಿ. ನಾವು ಖಾದಿಗೆ 'ಪ್ರೋತ್ಸಾಹಕೊಡುವ ನಮ್ಮ ಧೋರಣೆಯನ್ನು ಬಿಡುವುದಿಲ್ಲೆಂದು- ಮದ್ರಾಸ್ ಪ್ರಧಾನರಾದ ಶ್ರೀ. ಟಿ. ಪ್ರಕಾಶಂರು ಹೇಳಿದರು.

ಮದ್ರಾಸ್ ಪ್ರಾಂತಕ್ಕೆ ಹೆಚ್ಚಿನ ಅಕ್ಕಿ

ಅಕ್ಕಿಯ ಪರಿಸ್ಥಿತಿ ಸುಧಾರಿಸಿ ಪರಪ್ರಾಂತಗಳಿಂದ ಹೆಚ್ಚಿನ ಅಕ್ಕಿಯು ಬರುವ ಭರವಸೆ ಇರುವ ಕಾರಣ- ಅಕ್ಕಿಯ ಸೀದಾ ಹೆಚ್ಚಿಗೆ ಮಾಡುವದೆಂದು [illegible] ಪ್ರಾಂತರ [illegible]

THE NAVA BHARAT
ನವ ಭಾರತ
ಸಂಪಾದಕ-ಟಿ.ಬಿ.ಕೇಶವರಾವ್

9th Year of Publication.

18th NOVEMBER 1946

ಶಾಂತಿ ಸ್ಥಾಪನೆ,

ಐ. ಎನ್. ಎ. ಉಪಯೋಗಿಸಿರಿ.

ಎಂ. ಎನ್. ಎ. ಎಂದರೆ ಸಾಧಾರಣವಾಗಿ (Indian national Army) ವೃತ್ತ ಪತ್ರಿಕೆಗಳನ್ನೋದುವವರಿಗೆಲ್ಲಾ ಗೊತ್ತಿದೆ. ಭಾರತ ಸ್ವಾತಂತ್ರ್ಯಕ್ಕಾಗಿ ಶ್ರೀಸುಭಾಸ ಚಂದ್ರಬೋಸರ ನೇತೃತ್ವದಲ್ಲಿ ಹೋರಾಡಿದ ಭಾರತ ರಾಷ್ಟ್ರೀಯ ಸೈನ್ಯವೇ ಅದು. ಬೋಸರ ಸೈನ್ಯದಲ್ಲಿ ಎಲ್ಲಾ ಜಾತಿಯವರೂ ಸೋದರರಂತೆಕಲೆತು ಉದಾತ್ತ ಧ್ಯೇಯದಿಂದ ಸ್ವಾತಂತ್ರ್ಯಕ್ಕಾಗಿ ಪ್ರಾಣಾರ್ಪಣೆ ಮಾಡಲು ತಯಾರಾದರು. ಅವರ ಸೈನ್ಯದಲ್ಲಿ ಪಾಕಿಸ್ತಾನ, ಸಿಕ್ಕಿಸ್ತಾನಗಳಿಗೆ ಸ್ಥಾನವೇ ಇಲ್ಲ, ಇಡೀ ಭಾರತದೇಶದ ಹಿತವೇ ಅವರ ಗುರಿಯಾಗಿದ್ದಿತು. ಅವರ ಬಿಡುಗಡೆ ಮತ್ತು ಸ್ಥಾನಮಾನಗಳಿಗಾಗಿ ದಿವಂಗತ ಭೂಲಾಭಾಯಿ ದೇಶಾಯಿ ಪಂಡಿತ ಜವಹರಲಾಲರು ಎಷ್ಟು ದುಡಿದರೆಂಬುದನ್ನು ಎಲ್ಲರೂ ಬಲ್ಲರು. ವಕೀಲಿ ಉದ್ಯೋಗವನ್ನು ತೊರೆದು ೨೫ ವರ್ಷಗಳಾಗಿದ್ದರೂ, ಜನಹರಲಾಲರು ವಕೀಲರ ಉಡುಪನ್ನು ತೊಟ್ಟು- ಭೂಲಾಭಾಯಿಯವರೊಡನೆ ಈ ಶೂರರ ಮುಕ್ತಿಗಾಗಿ ಶ್ರಮಿಸಿದರು.

ಜಾತ್ಯಾಂಧತೆ, ಧರ್ಮಾಂತೆಗಳಿಂದ ದೂರಾಗಿ- ರಾಷ್ಟ್ರದ ಹಿತವೇ ತಮ್ಮ ಧರ್ಮ ತಮ್ಮ ಜೀವಿತ ಧ್ಯೇಯಗಳೆಂದು ಹೃತ್ಪೂರ್ವಕವಾಗಿ ನಂಬಿ ಆರೀತಿ ಆಚರಿಸಿದ ಮತ್ತು ಆಚರಿಸುತ್ತಿರುವ ಈ ವೀರರ ಸೇವೆಯು ದೇಶದ ಈ ಸಂಕಟ ಪರಿಸ್ಥಿತಿಯಲ್ಲಿ ಬೇಕಾಗಿದೆ.

ಐ. ಎನ್. ಎ. ದ ಪ್ರಮುಖ ಧುರೀಣರಾದ ಮೇಜರ್ ಶಾನವಾಜಖಾನರವರು ಡೆಲ್ಲಿಯಿಂದ ಒಂದು ಹೇಳಿಕೆಕೊಟ್ಟು ನಮ್ಮ ಹೇಳಿಕೆಯನ್ನು ಸಮರ್ಥಿಸಿರುವರು. ಗಲಾಟೆ- ದಂಗೆಗಳನ್ನು ಮಾಡುವವರು ಹಿಂದೂಗಳಿರಲಿ, ಮುಸಲ್ಮಾನರಿರಲಿ, ಅವರನ್ನು ನಿಷ್ಕಾರುಣ್ಯದಿಂದ ನಿಷ್ಪಕ್ಷಪಾತವಾಗಿ- ಶಾಸನಕ್ಕೆ ಗುರಿಮಾಡಲಾಗುವದೆಂದು ಅವರು ಹೇಳುವದು ಸತ್ಯವಾಗಿದೆ- ಈಗಿನ ಪರಿಸ್ಥಿತಿಯಲ್ಲಿ ಐ. ಎನ್. ಎ ಶೂರರೇ ದೇಶದ ನಿಜವಾದ ಶಾಂತಿಸ್ಥಾಪಕರಾಗಲಿಕ್ಕೆ ಹರ್ಕರು ಬೋಸರ ಆಧಿಪತ್ಯದಲ್ಲಿ ಅವರಿಗೆ ದೊರೆತ ಶಿಕ್ಷಣ, ಅನುಭವ ಬಹಳ ಅಮೂಲ್ಯವಾಡವು.

ಈ ಕಾರಣ ಸರ್ಕಾರದವರು ನಮ್ಮ ಸೂಚನೆಯನ್ನು ಕೂಡಲೇ ಮಾನ್ಯಮಾಡಿ ಪ್ರಾಂತದ ಮುಖ್ಯ ಮುಖ್ಯ ಪಟ್ಟಣಗಳಲ್ಲೆಲ್ಲಾ- ಐ ಎನ್. ಎ ಯೋಧರ ಪಡೆಯೊಂದನ್ನು ನಿರ್ಪಡಿಸಿ ಕಳುಹಿಸುವರೆಂದು ಆಶಿಸುತ್ತೇವೆ.

ರಜಾ

ಪಂಡಿತ ಮೂಳವೀಯರ ನಿಧನದ ನಿಮಿತ್ಯ 'ನವಭಾರತ' ವು 25 ನೆಯ ತಾ॥ ಹೊರಡುವುದಿಲ್ಲ. 2—12—46 ಹೊರಡುವುದು

ವ್ಯವಸ್ಥಾಪಕ, ನವಭಾರತ

ಮದ್ರಾಸ್ ಪ್ರಾಂತದ ಬಟ್ಟೆ ಬೇಡಿಕೆ

ಪ್ರಾಂತಿಕ ಜವಳಿ ಕಮೀಶನರರಾದ ಶ್ರೀ ಎಸ್. ವೆಂಕಟೇಶ್ವರನ್‌ರವರು ಮದ್ರಾಸ ಖಾದಿ ಯೋಜನೆಯ ವಿಷಯದಲ್ಲಿ ಚರ್ಚಿಸಲೆಂದೇ ದಿಲ್ಲಿಗೆ ಬಂದಿದ್ದರು. ಮದ್ರಾಸದಲ್ಲಿ ಜವಳಿ ಗಿರಣಿಗಳಿಲ್ಲವಾದರೆ ಪ್ರಾಂತದ ಜನತೆಗೆ ಖಾದಿಯನ್ನೆಂತು ಪೂರೈಸುವದೆಂಬುದನ್ನು ಅವರು ಹೀಗೆ ತಿಳಿಸಿದರು.

ಇಲ್ಲಿ ಅವರು ಕೊಟ್ಟ ಅಂಕೆ ಸಂಖ್ಯೆಗಳಿವೆ. ಮದ್ರಾಸ ಪ್ರಾಂತದ ಜನಸಂಖ್ಯೆ ೫೩೦ ಲಕ್ಷ ಪ್ರಾಂತದಲ್ಲಿರುವ ಕುಟುಂಬಗಳ ಸಂಖ್ಯೆ (೪ ಜನರಿಗೆ ಒಂದು ಕುಟುಂಬ) ೧೩೨೫ ಲಕ್ಷ ದಿನಕೊಂದು ತಾಸಿನಂತೆ ನೂಲು ತೆಗೆದರೆ ಪ್ರತಿಯೊಬ್ಬನು ತೆಗೆಯಬಹುದಾದ ಕೈ ನೂಲು. ೪ ಲಡಿ.

ತಿಂಗಳಿಗೆ ೩೦ ದಿವಸ ಕೆಲಸಮಾಡಿ ಒಂದು ಕುಂಟುಬವು ಒಟ್ಟು ತೆಗೆಯುವ ನೂಲು. (ಪ್ರತಿಯೊಂದು ಕುಟುಂಬದಲ್ಲಿ ಒಬ್ಬರೇ ನೂಲುವರೆಂದು ತಿಳಿದರೆ) ೪ × ೩೦ = ೧೧೨೦ ಲಡಿ.

ಪ್ರತಿಯೊಂದು ಕುಟುಂಬದಿಂದ ಒಂದು ವರ್ಷಕ್ಕೆ ತಯಾರಾಗುವ ಕೈನೂಲು ೧೨೦ × ೧೧ = ೧೩೫೦ ಲಡಿ

ಸರಾಸರಿ ನೂಲಿನ ನಂಬರು ೧೪ ಎಂದು ತಿಳಿದರೆ ಒಟ್ಟು ನೂಲಿನ ಕಂತೆ. ೯. ೬೪ ಪೌಂಡ.

ಅಥವಾ ಸರಾಸರಿ ೪೫ ಇಂಚು ಅಗಲಿನ ೩೦ ಗಜ ಬಟ್ಟೆಯಾಗುವದು.

ಪ್ರಾತದಲ್ಲಿ ಬಟ್ಟೆ ಖಾದಿ ಉತ್ಪತ್ತಿ ೩೦ × ೧೩೨೫ ಲಕ್ಷ = ೩೯೭೫ ಲಕ್ಷ

ಇಡಿ ಜನಸಂಖ್ಯೆಗೆ ಬೇಕಾಗುವ ಬಟ್ಟೆ.

ಮಕ್ಕಳಿಗೆ ೧೦ ಗಜದಂತೆ	೧೬೦ × ೧೦ = ೧೬೦೦
ದೊಡ್ಡವರಿಗೆ ೨೦ ಗಜದಂತೆ	೩೨೦ × ೨೦ = ೬೪೦೦
	೮೦೦೦ ಲಕ್ಷ ಗಜ.

ಬಟ್ಟೆಯ ಬೇಡಿಕೆಯಲ್ಲಿ ನೂರಕ್ಕೆ ಎಷ್ಟು ಪ್ರಮಾಣದಲ್ಲಿ ಖಾದಿ ಉತ್ಪತ್ತಿ ಆಗಬಹುದು ಳಳ.೧./-

ಇದರಿಂದ ಇಡೀ ಪ್ರಾಂತಕ್ಕೆ ಬೇಕಾಗುವ ಬಟ್ಟೆಯ ಉತ್ಪತ್ತಿಗೆ ಸಾಕಷ್ಟು ಸಿಗಬೇಕಾದರೆ ಪ್ರತಿಯೊಂದು ಕುಟುಂಬದಿಂದ ಒಬ್ಬನ ಸರಾಸರಿ ನೂಲುವ ಕೆಲಸ ದಿನಕ್ಕೆ ೫॥ ತಾಸು ಗಳಿದ್ದಾಗ ಬೇಕು, ಇಲ್ಲವೆ ಎರಡು ಕುಟುಂಬಗಳಲ್ಲಿ ಕೂಡಿ ೫ ಜನರಾದರೂ ದಿನಾಲು ಸರಾಸರಿ ೧೦ ತಾಸು ನೂಲುವ ಕೆಲಸ ಮಾಡುವವರು ಸಿಗಬೇಕು. ಸಾಧ್ಯವಿಲ್ಲದೆ ಹೋದರೆ ಜನರಿಗೆ ಸಾಕಷ್ಟು ಬಟ್ಟೆ ದೊರೆಯಲಾರದೆಂದೆನಿಸಬಹುದು

ಎಷ್ಟು ಕೈಮಗ್ಗಗಳು ಬೇಕಾಗಬಹುದು:— ಒಬ್ಬ ನೇಕಾರನು ಸರಾಸರಿ ದಿನಕ್ಕೆ ೫ ಗಜಕಿಂತ ಹೆಚ್ಚಿಗೆ ನೇಯಲಾರನೆಂದು ತಿಳಿದು ಲೆಕ್ಕ ಹಾಕಿದರೆ, ತಿಂಗಳಿಗೆ ಹಬ್ಬ, ಹುಣ್ಣಿವೆ, ವಿಶ್ರಾಂತಿಗಳಿಗಾಗಿ ೫ ದಿವಸ ಕೆಲಸಕ್ಕೆ ರಜೆ ಎಂದು ತಿಳಿದರೂ, ೧೫೫ ಗಜಗಳಷ್ಟು ಬಟ್ಟೆ ಉತ್ಪತ್ತಿ ಒಬ್ಬ ನೇಕಾರನಿಂದ ಆಗಬಹುದು. ೬೦೦೦ ಲಕ್ಷ ಗಜ ಬಟ್ಟೆನೇಯಲು ೬ ಲಕ್ಷ ಮಗ್ಗಗಳು ಬೇಕು. ಸದ್ಯಕ್ಕೆ ಒಟ್ಟೆಯನ್ನು ನೇಯುವ ಕೈಮಗ್ಗಗಳ ಸಂಖ್ಯೆ ಮದ್ರಾಸ ಪ್ರಾಂತದಲ್ಲಿ ೫ ಲಕ್ಷ ಮತ್ತು ಮೇಲೆ ಕೆಲವು ಸಾವಿರ ಇರುವದು. ಆದುದರಿಂದ ಬಟ್ಟೆಯ ವಿಷಯದಲ್ಲಿ ಅದೂ ಖಾದೀ ಮೂಲಕವೇ—ಕನಿಷ್ಟ ೬೫ ಸಾವಿರ ಕೈಮಗ್ಗಗಳನ್ನಾದರೂ ಹೆಚ್ಚಿಸಬೇಕಾಗುವದು.' ತಮ್ಮ ರಾಷ್ಟ್ರಮಾತೆಯ ಪ್ರೇಮದಿಂದ, ೮ ಜನರಲ್ಲಿ ೫ ಜನರು ದಿನಾಲು ಒಂದು ತಾಸು ನೂಲುವಂಥವರು ಸಿಗುತ್ತಾರೆಂದು ಅಪೇಕ್ಷಿಸುವದು ಹೆಚ್ಚಾದೀತೆ?

ಬಂಗಾಲದಲ್ಲಿ ಕಾಂಗ್ರೆಸ್ ಲೀಗ್‌ಗಳಿಂದ ಕೂಡಿದ ಸಮ್ಮಿಶ್ರ ಮಂತ್ರಿಮಂಡಲವನ್ನು ಸ್ಥಾಪಿಸಬೇಕೆಂದು ಬಂಗಾಲದ ಯುರೋಪಿಯನ್ ಪಕ್ಷದವರು ಹೇಳಿಕೆ ಕೊಟ್ಟಿರುವರು.

ಒಕ್ಕಲತನದಲ್ಲಿ ಕೃತ್ರಿಮ ಪದ್ಧತಿ.

ಆರೋಗ್ಯರಕ್ಷಣೆಗಾಗಿ ಆರೋಗ್ಯಕರ ರೀತಿಯಲ್ಲಿ ಬೆಳೆದ ಆಹಾರ ಪದಾರ್ಥಗಳು ಅವಶ್ಯ. ಕೇವಲ ಅಂದ ಕಾಣುವ ಆಹಾರ ಪದಾರ್ಥಗಳಿಂದ ಆರೋಗ್ಯ ರಕ್ಷಣೆಯಾಗದೆಂದು ಇಧೀಗ ಎಲ್ಲರೂ ಒಪ್ಪುತಿರುವ ಸಿದ್ಧಾಂತ. ಆರೋಗ್ಯಕರ ಭೂಮಿಯನ್ನವಲಂಬಿಸುತ್ತೇವೆ. ಮನುಷ್ಯನ ಕೊಬ್ಬಿದ ದೇಹವು ಅರೋಗ್ಯದ ಲಕ್ಷಣವೆಂದು ಹೇಗೆ ಹೇಳಲಿಕ್ಕೆ ಬರುವುದಿಲ್ಲವೋ ಅದೇರೀತಿ ಯಾವುದೊಂದು ಕಾಳಿನ ಆಕಾರ ಮತ್ತು ಹುಲಸು ಆರೋಗ್ಯ ರಕ್ಷಣೆಗೆ ನಿದರ್ಶಕವಲ್ಲ. ಕೃತ್ರಿಮ ಗೊಬ್ಬರವನ್ನು ಹಾಕಿ ಆಕಾರ ಮತ್ತು ಹುಲಸಿನ ದೃಷ್ಟಿಯಿಂದ ಬಹುಮೂನ ಸಿಕ್ಕುವಂತೆ ಬೆಳೆಸಲ್ಪಟ್ಟ ಕಾಳುಗಳಲ್ಲಿ ಕೆಲವೊಂದು ಮಹತ್ವದ ಅಂಶಗಳ ಅಭಾವವಿರುವದಲ್ಲದೆ ಈಪದಾರ್ಥಗಳಿಂದ ಪೋಷಿತವಾದ ಪ್ರಾಣಿಗಳು ರೋಗದ ಮತ್ತು ಕುಪೋಷಣದ ಲಕ್ಷಣಗಳನ್ನು ತೋರಿಸುತ್ತವೆ. ಕೃತ್ರಿಮ ಮತ್ತು ನೈಸರ್ಗಿಕ ಗೊಬ್ಬರದ ಸಂಭಂಧದಲ್ಲಿ ಇರುವ ವಿವಾದದಲ್ಲಿ ವಿಲ್ಟ ಶಾಯರದ ಒಳ್ಳೆಯಶಶ್ವಿಯಾದ ಒಕ್ಕಲಿಗ ಸಾಯಿಕ್ಸನು 'ಹುಮಸ್ ಆ್ಯಂಡ ಫಾರ್ಮರ' (ಫೆಬರ) ಎಂಬ ಪುಸ್ತಕ ಬರೆದು ಮಹತ್ವದ ಕಾಣಿಕೆ ಸಲ್ಲಿಸಿದ್ದಾನೆ.

ಎರಡು ವರುಷಗಳ ಹಿಂದೆ ಒಕ್ಕಲಿಗ ಸಾಯಿಕ್ಸ ಆಕಳು, ಹಂದಿ ಶರತ್ತಿನ ಕುದುರೆಗಳನ್ನು ಸಾಕಿ ರಾಷ್ಟ್ರ ವಿಖ್ಯಾತ ಕೀರ್ತಿಯನ್ನು ಸಂಪಾದಿಸಿದ್ದನು. ಆದರೆ ಬಹಳ ದಿನಗಳ ಈ ಸಂಪಾದನೆ ದುರಂತದಲ್ಲಿ ಕೊನೆಗಂಡಿತು.

ನ್ಯೂಜರಿವ್ಯೂ ಪತ್ರಿಕೆ ಹೀಗೆ ಬರೆಯುತ್ತದೆ. ,ಗೋಪಾಲಕರಿಗೆ ದಾರಿ ತೋರುವುದಕ್ಕಾಗಿ; ಅವರ ಸುವಿಖ್ಯಾತ ಕಪ್ಪು ಮತ್ತು ಬಿಳಿಫ್ರೀಜಿಯನ್ ದನಗಳನ್ನು ನೂತನ ಕ್ಷಯರೋಗ ಪರೀಕ್ಷಾಲಯಕ್ಕೆ ಕಳಿಸಲಾಯಿತು. ಆ ದನಗಳ ಹಾಲಿನ ಪ್ರಮಾಣ ಪ್ರಚಂಡ ರೀತಿಯಲ್ಲಿ ಹೆಚ್ಚಿದ್ದರೂ ಅವುಗಳಲ್ಲಿ ಎರಡು ಮೂರಾಂಶದಷ್ಟು ದನಗಳು ರೋಗಪೀಡಿತವಾದವೆಂದು ಸಿದ್ಧವಾಯಿತು. ಕೃತ್ರಿಮ ಗೊಬ್ಬರದಿಂದ ಬೆಳೆಸಲ್ಪಟ್ಟ ಆಹಾರ ಪದಾರ್ಥಗಳನ್ನು ತಿಂದದ್ದರಿಂದ ಮತ್ತು ಅವರು ಹೊರಗೆ ಮಾರಿದ ನೈಸರ್ಗಿಕ ಪದಾರ್ಥಗಳನ್ನು ತಿನ್ನದೆ ಹಿಂಡಿ ಮೊದಲಾದವುಗಳನ್ನು ತಿಂದದ್ದರಿಂದ ಈ ರೀತಿ ಅವು ರೋಗಗ್ರಸ್ತವಾದುವೆಂಬುದು ಮನವರಿಕೆಯಾಯಿತು.

ಸ್ಯಾಲಿಸ್‌ಬರಿ ತೊಪ್ಪಲದ ಪೂರ್ವದಂಡೆಯಲ್ಲಿ ಸಾಯಿಕ್ಸ ಸರ್ವ ಶ್ರೇಷ್ಠ, ಫಾರ್ಮನ್ನು ಕೊಂಡು ೧೯೩೬ ರಲ್ಲಿ ನೂತನ 'ನೈಸರ್ಗಿಕ' ಪದ್ಧತಿಯ ಮೇಲೆ ಮತ್ತೆ ಕಾರ್ಯ ಪ್ರಾರಂಭಿಸಿದ. ಅವನ ಬಡ ಮೊಲಗಳ ಹಾವಳಿಗೆ ತುತ್ತಾದ ಭೂಮಿಯನ್ನು ನೋಡಿ ಗೆಳೆಯನೊಬ್ಬ "ಇದೇನು" ಫಾರ್ಮ ಭೂಮಿಯಲ್ಲಿ ಮನೆಯ ಹೊರಗಿರುವ ಅಂಗಳವಮಾತ್ರ' ಎಂದು ಉದ್ಗಾರ ತೆಗೆದನು. ಆದರೆ ಹತ್ತು ವರ್ಷಗಳಿಗಿಂತ ಕಡಿಮೆ ಅವಧಿಯಲ್ಲಿ ಆ ಇಳಕಲು ಕಪ್ಪು ಭೂಮಿ ಪ್ರಚಂಡ ಬೆಳೆಯಿತು. ವಿಕ್ರಮ ಪ್ರಾಣಿಗಳನ್ನು ಉತ್ಪಾದಿಸಿತು.

ಫ್ಯಾಕ್ಟರಿಗಳಲ್ಲಿಯ ದನಗಳ ಆಹಾರ ಪದಾರ್ಥಗಳಿಗೆ ಮತ್ತು ಕೃತ್ರಿಮ ಗೊಬ್ಬರಕ್ಕೆ ಅವನು ಬಹಿಷ್ಕಾರ ಹಾಕಿಬಿಟ್ಟ. ಭೂಮಿಯನ್ನು ಗಳೆಹೊಡೆದದ್ದರಿಂದ ಮೊದಲಿನ ರೋಗವೆಲ್ಲ ಮಾಯವಾಯಿತು. ವಳ್ಳೆ ಫಲವತ್ತಾದ ಸಾರ ಭೂಮಿಗೆ ಬಂತು, ದೂರ ಬೇರುಇಳಿದ ಗಿಡಗಳಿಂದ ಮೇಲೆ ಬಂದ ಖನಿಜ ಪದಾರ್ಥಗಳು ಎರಡಡಿ ಗಳೆ ಹೊಡೆಯುವುದರಿಂದ ಕೆಳಗಿಳಿದವು. ಕಣಿಕೆಯನ್ನು ಮತ್ತು ಸುಗ್ಗಿಯನ್ನು ಮಾಡುವ ಹೊಸಪದ್ಧತಿಯಿಂದ ಕಣಿಕೆಯ ಸುಧಾರಣೆಯಾಗಿ ದನಗಳ ಮೇಲೆ ಒಳ್ಳೆ ಆಶ್ಚರ್ಯಕರ ಪರಿಣಾಮಗಳಾದವು.

ಪೂರ್ವ ಬಂಗಾಳದಲ್ಲಿ ಗಾಂಧೀಜಿ
—ಶಾಂತಿ ಇಲ್ಲ.—

ಪೂರ್ವ ಬಂಗಾಳದಲ್ಲಿ ಇನ್ನೂ ಶಾಂತಿ ಯೇರ್ಪಟ್ಟಿಲ್ಲ. ಗಾಂಧೀಜೀಯ ಪ್ರಾರ್ಥನಾಸಭೆಗೆ ಬಂದ ಮೂವರಲ್ಲಿ ಇಬ್ಬರನ್ನು ತಮ್ಮ ಹಳ್ಳಿಗೆ ಹಿಂದಿರುಗುತ್ತಿರ ಬೇಕಾದರೆ ಹತ್ಯ ಮಾಡಿರುವರು. ಲೀಗ ಮಂತ್ರಿವರ್ಗ ದಿಂದ ಸಾಕಷ್ಟು ಮತ್ತು ಸರಿಯಾದ ಆಶ್ವಾಸನ ದೊರೆಯುವವರೆಗೂ ಹಳ್ಳಿಗಳಿಗೆ ಹಿಂದಿರುಗಬೇಡಿರೆಂದು ಗಾಂಧೀಜೀಯವರು ನಿರಾಶ್ರಿತ ಕೇಂದ್ರಗಳ ಜನರಿಗೆ ತಿಳಿಸಿರುವರು. ಕಾಂಗ್ರೆಸ್ ಅಧ್ಯಕ್ಷರಾದ ಕೃಪಾಲಿನಿ ಯವರು ಗಾಂಧೀಜೀಯವರನ್ನು ಕಂಡು ಅನೇಕ ವಿಷಯಗಳ ಬಗ್ಗೆ ವಿಚಾರ ವಿಮರ್ಶೆ ಮಾಡಿದರು. ಶ್ರೀಮತಿ ಸುಚೇತಾ ಕೃಪಾಲಿನಿ ಮತ್ತು ಅ ಮ್ತು ಸ್ ಸೆಲಾಮರು ನವಾಖಾಲಿ ಜಿಲ್ಲೆಯಲ್ಲೆಲ್ಲಾ ಸಂಚರಿಸಿ ಪುಂಡರು ಸುಖವಾಗಿ ತೊಂದರೆಇಲ್ಲದೆ ರಾಜ್ಯನಡೆಸಿರು ವರೆಂದು ಹೇಳಿದ್ದಾರೆ. ಈ ಕಾರಣ ಮತಾಂತರ ಹೊಂದಿದ ಮತ್ತು ಕದಿಯಲ್ಪಟ್ಟ ಸ್ತ್ರೀಯರನ್ನು ಬಿಡು ಗಡೆ ಮಾಡುವುದು ಕಷ್ಟವಾಗಿದೆಯೆಂದು ಅಭಿಪ್ರಾಯ ಪಟ್ಟಿರುವರು.

ಸಂಕಟ ಪರಿಹಾರ ನಿಧಿ.

ಪೂರ್ವ ಬಂಗಾಲದ ಸಂಕಟ ಪರಿಹಾರ ನಿಧಿಗಾಗಿ ಬಳ್ಳಾರಿಯ ವರ್ತಕರೂ ಪುರಜನರೂ ಸುಮಾರು ೧೦೦೦/- ಒಂದು ಸಾವಿರ ರೂಪಾಯಿಗಳನ್ನು ಸಂಗ್ರಹಿಸಿರುವರು.

ಕಲ್ಕತ್ತಾದಲ್ಲಿ ದಂಗೆಯ ಪ್ರತಿಬಂಧ ಕೋಪಾಯಗಳು

ಕಲ್ಕತ್ತಾನಗರದ ದಂಗೆಯಾದ 56 ಪ್ರದೇಶಗಳಲ್ಲಿ ಜನತೆಯ ಮೇಲೆ ದಂಡವು ಹೇರಲಾಗಿದೆ. 73 ಭಾಗಗಳಲ್ಲಿ ಹಿಂದೂಗಳಮೇಲೆ 72 ಸಾವಿರ ರೂ. 31 ಭಾಗಗಳ ಮುಸಲ್ಮಾನರಮೇಲೆ 60 ಸಾವಿರ ರೂ ಒಟ್ಟಿನ ದಂಡದ ಮೊತ್ತವು ಇಲ್ಲಿಯವರಿಗೆ 4, 23, 000—ಅನೇಕ ಭಾಗಗಳಲ್ಲಿ ಲೂಟಿಯಾದ ಆಸ್ತಿಗಳನ್ನು ಕಂಡುಹಿಡಿಯಲಾಗಿದೆ.

ಅಖಿಲಭಾರತ ಕಾಂಗ್ರೆಸ್ ಅಧಿವೇಶನ ಎಲ್ಲರೂ ಹೋಗಬೇಡಿರಿ.

ಮೀರತ್ ನಲ್ಲಿ ನವಂಬರ್ 3 ನೆಯ ವಾರದಲ್ಲಿ ಕೂಡುವ ಅಖಿಲ ಭಾರತಕಾಂಗ್ರೆಸ್ ಅಧಿವೇಶನಕ್ಕೆ ಪ್ರತಿನಿಧಿಗಳಿಗೆ ಮಾತ್ರ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಪ್ರೇಕ್ಷಕರು ಟಿಕೇಟುಗಳನ್ನು ಕೊಂಡಿದ್ದರೆ, ಅವರ ಹಣವನ್ನು ಅಧಿವೇಶನದ ನಂತರ ಹಿಂದಿರುಗಿ ಕೊಡಲಾಗುವುದು. ಮೀರತ್‌ಗೆ ಬರುವ ಎಲ್ಲಾ ಸ್ಪೆಶಲ್ ರೈಲ್ವೆಗಳನ್ನೂ ರದ್ದು ಪಡಿಸಲಾಗಿದೆ, ಈವರ್ಷ ಕಾಂಗ್ರೆಸ್ ಅಧ್ಯಕ್ಷರ ಮೆರವಣಿಗೆಯು ಕೂಡ ಇಲ್ಲ. ಪ್ರತಿನಿಧಿಗಳು ತಮ್ಮ ವ್ಯಾಂತೀಯ ಕಾಂಗ್ರೆಸ್ ಸಮಿಶಗಳ ಮುಖಾಂತರ ಬರುವ ದಿನಗಳನ್ನು ತಿಳಿಸಿದರೆ ತಕ್ಕ ಸೌಕರ್ಯಗಳನ್ನು ಕಲ್ಪಿಸಲಾಗುವುದು ಎಂದು ಕಾಂಗ್ರೆಸ್ ಪ್ರಕಟನೆಯೊಂದು ತಿಳಿಸುತ್ತದೆ.

ಪಾಕಿಸ್ಥಾನವಿಲ್ಲದೆ ಶಾಂತಿ ಇಲ್ಲ.

ಹಿಂದೂಸ್ತಾನದ ಸದ್ಭದ ತೊಂದರೆಗಳಿಗೆ, ಅಶಾಂತಿಗೆ, ಪಾಕಿಸ್ತಾನವೊಂದೇ ಉಪಾಯ. ಹಿಂದೂಸ್ತಾನವನ್ನು ಇಭ್ಭಾಗಿಸುವವರೆಗೆ ಈ ಅಶಾಂತಿ ಇದ್ದೇ ಇರುವುದು. ಎಂದು ಜಿನ್ನಾರವರು ಪರದೇಶದ ವೃತ್ತ ಪತ್ರಿಕಾ ಸುದ್ದಿಗಾರರಿಗೆ ಕೊಟ್ಟ ಭಾಷಣದಲ್ಲಿ ತಿಳಿಸಿದ್ದಾರೆ.

ಇಂಡಿಯಾ ಅಮೆರಿಕಾ ವಿಮಾನಸಾರಿಗೆ:—

ಇಂಡಿಯಾದ ಪರವಾಗಿ ಪಂ. ಜವಹರಲಾಲ, ಅಬ್ದಲರಬ್ ನಿಸ್ತಾರರೂ, ಅಮೆರಿಕೆಯ ಪರವಾಗಿ ಜಾರ್ಜಮರೆಲ, ಜಾರ್ಜ್ ಬ್ರಾವುನೆಲರು ಒಪ್ಪಂದ ಮಾಡಿಕೊಂಡು ಹಿಂದೂಸ್ತಾನ ಅಮೆರಿಕಾ ವಿಮಾನ ಪ್ರಯಾಣದ ವಿಧಾನವನ್ನು ವಿವರಿಸಿರುವರು.

ಹಳ್ಳಿಗರಿಗೆ ಸಹಾಯಮಾಡಿರಿ

ಕೊಡ್ಲಿಗೆ ಫಿರ್ಕಾ ಗ್ರಾಮ ಸಮಿತಿಯ ಬೇಡಿಕೆ

ಶಿವಪುರ ಗ್ರಾಮದ ಪಂಚಾಯ್ತಿ ಬೋರ್ಡು ಅಧ್ಯಕ್ಷರಾದ ಶ್ರೀ ಶೆಟ್ರ ವೀರಪ್ಪನವರ ಅಧ್ಯಕ್ಷತೆಯಲ್ಲಿ ಈತೀರ್ಮಾನಗಳು ಸರ್ವಾನುಮತದಿಂದ ಸ್ವೀಕೃತವಾದವು.

1) 16—10—46 ರ ದಿನ ಬೆಣಕಲ್ಲಿನಲ್ಲಾದ ತೀರ್ಮಾನಗಳನ್ನು ಕಾರ್ಯರೂಪಕ್ಕೆ ತರಬೇಕು

2) ಫಿರ್ಕಾ ಧಾನ್ಯದ ಪೂರೈಕೆಯ ಅಧಿಕಾರಿಗಳು 15 ದಿನಗಳಿಗೊಂದುಸಲ ಕೊಡಬೇಕಾದ ಅಕ್ಕಿ ಮತ್ತು ಇತರ ಧಾನ್ಯಗಳ ಹಂಚಿಕೆಯ ಏರ್ಪಾಟಿನಿಂದ ಎ. ಬಿ. ಸಿ. ಕ್ರಮಗಳಿಂದ ರೈತರು ಮತ್ತು ಗ್ರಾಮಸ್ಥರ ಮಧ್ಯೆ ವೈಷಮ್ಯವೇರ್ಪಡುವುದು. ನೆಲ್ಲುಬೆಳೆಯುವ ರೈತರಿಗೆ ನಿರುತ್ಸಾಹವಾಗುವುದು. ಇದನ್ನು ಹಿಂದೆಗೆದುಕೊಂಡು ತೃಪ್ತಿಕರವಾದ ಕ್ರಮವನ್ನೇರ್ಪಡಿಸಬೇಕು.

3) ಗ್ರಾಮಸಮಿತಿಗಳ ಅಧಿಕಾರ, ಕರ್ತವ್ಯಗಳ ನಿರೂಪಣೆಯಾಗಿಲ್ಲ: ಕೂಡಲೇ ಸೂಚನೆಗಳನ್ನು ಕೊಡದಿದ್ದಲ್ಲಿ ಸಮಿತಿಗಳು ಕೆಲಸ ಮಾಡಲಾರವು.

2) ಕುಪ್ಪಿನಕೇರಿ ಗ್ರಾಮಸಮಿತಿಯ ಸೂಚನೆಗಳು

1) ಸರ್ಕಾರವು ಗ್ರಾಮಸ್ಥರಿಂದ ಧಾನ್ಯಗಳನ್ನು ಕಡಮೆ ಧಾರಣೆಗೆ ಸಂಗ್ರಹಿಸುತ್ತಿರುವರು. ಜೀವನದ ಮಟ್ಟವು ಎಲ್ಲಾ ಭಾಗಗಳಲ್ಲೂ ಅಧಿಕವಿರುವ ಕಾರಣ ಸರ್ಕಾರವು ಕೊಳ್ಳುವ ಧಾನ್ಯದ ಬೆಲೆಯನ್ನು ಹೆಚ್ಚಿಸಬೇಕು.

2) ರೈತನಿಗೆ ಬೇಕಾಗುವ ಸಾಮಗ್ರಿಗಳಿಗಾಗಿ, ಮಡಿವಾಳ– ಬಡಗಿ– ಕಮ್ಮಾರ– ಕ್ಷೌರಿಕ– ಹರಿಜನ– ವಾದ್ಯದವ– ಕುಂಬಾರ– ಪೂಜಾರಿ ಇವರಿಗೆ ವಾರ್ಷಿಕ ಧಾನ್ಯದ ಆಯಪಲ್ಲದೆ, ಕೂಲಿಯವರಿಗೆ ನಿತ್ಯಂಪ್ರತಿ ಧಾನ್ಯವು ಬೇಕು, ಇದನ್ನೆಲ್ಲಾ ಕಳೆದು ಧಾನ್ಯವನ್ನು ಸರ್ಕಾರವು ಕೊಳ್ಳಬಹುದು.

3) ಮಾಳಿಗೆ ಮನೆಯವನಿಗೆ ಮುಕ್ಕಾಲುಸೀಸ, ಹುಲ್ಲುಮನೆಯವನಿಗೆ ಕಾಲುಸೀಸ ಈ ಪ್ರಕಾರ ತಿಂಗಳೊಂದಕ್ಕೆ ಕೊಡುವ ಚಿಮ್ಮಿ ಎಣ್ಣೆಯ ಕ್ರಮವು ಬಹಳ ಅನ್ಯಾಯವಾಗಿದೆ. ಪಟ್ಟಣದ ಕ್ರಮವನ್ನು ಜಾರಿಯಲ್ಲಿತರಬೇಕು.

4) ಗ್ರಾಮಾಧಿಕಾರಿಗಳಿಂದ ಪ್ರಮಾಣ ಪತ್ರ ಪಡೆದ ಹಳ್ಳಿಗನಿಗೆ ದೊಡ್ಡವರಿಗೆ ಎರಡುಗಜ ಸಣ್ಣವರಿಗೆ ಒಂದುಗಜ ಬಟ್ಟೆ ದೊರೆಯುವ ಬಟ್ಟೆ ಹೇಗೆಸಾಲಬೇಕು? ವರ್ಷಕ್ಕೆ ಕನಿಷ್ಟಕ್ಕೆ ಎರಡುಜತೆ ಪಂಜೆ, 4 ಅಂಗಿ ಹೊದೆಯುವ ಬಟ್ಟೆ ತಲೆಗೆ ರುಮಾಲಿಗಾಗಿ 35 ಗಜ ಬೇಕು. ಸರ್ಕಾರವು ಇದನ್ನೆಲ್ಲಾ ಆಲೋಚಿಸಿ– ಹಳ್ಳಿಯವರಿಗೆ ಹೆಚ್ಚು ಬಟ್ಟೆಯನ್ನು ಒದಗಿಸಬೇಕು.

ವೀರಶೈವ ಕಾಲೇಜು ಬಳ್ಳಾರಿ.

ಯೂನಿವರ್ಸಿಟಿ ಕಮೀಶನ್.

ಮದ್ರಾಸ್ ವಿಶ್ವವಿದ್ಯಾಲಯದ ವೈಸ್‌ಛಾನ್ಸಲರ್‌ರವರಾದ ಡಾಕ್ಟರ್ ಲಕ್ಷ್ಮಣಸ್ವಾಮಿ ಮೊದಲ್ಯಾರ್‌ರವರು ತಮ್ಮ ಸಹೋದ್ಯೋಗಿಗಳೊಂದಿಗೆ ಬಳ್ಳಾರಿಗೆ 14ನೆಯ ತಾ. ದಯಮಾಡಿಸಿ ವೀರಶೈವ ಕಾಲೇಜಿನ ಚಾಲಕರೊಡನೆ ಸರ್ಕಾರದ ಸಹಾಯ, ಸರ್ಕಾರದವರು ನಿಯಮಿಸಿದ ಶರ್ತುಗಳ ಸಂಪೂರ್ತಿ, ವೀರಶೈವ ವಿದ್ಯಾವರ್ಧಕ ಸಂಘದವರ ಹೊಣೆಯನ್ನು ಕುರಿತು ವಿಮರ್ಶಿಸಿ ಆ ಸಾಯಂಕಾಲವೇ ಮದ್ರಾಸಿಗೆ ತೆರಳಿದರು.

ಗಾಂಧಿನಗರದ ಹೈಯ್ಯರ್ ಎಲಿಮೆಂಟರಿ ಶಾಲೆ ಮತ್ತು ಎಸ್. ಜಿ. ಹೈಸ್ಕೂಲ್ ಮುನಿಸಿಪಲ್ ಹೈಸ್ಕೂಲು ವಾರ್ಡಲಾಗಳಲ್ಲಿ 13-14 ನೆಯ ತಾ|| ಭಾರತ ಭೂಷಣ ಪಂಡಿತ ಮಾಲವೀಯರ ಮತ್ತು ಪುರಸಭಾಧ್ಯಕ್ಷರಾದ ಖಾನಸಾಹೆಬ್ ಅಬ್ಬುಲರಾವುಫ್‌ರ ನಿಧನಕ್ಕಾಗಿ ದುಃಖ ಸೂಚಿಸಲ್ಪಟ್ಟು– ಆ ತ್ಮ ಶಾಂತಿ ಕೋರಲಾಯಿತು.

ಹಿಂದೂಸ್ತಾನದ ಸೈನ್ಯವನ್ನು ರಾಷ್ಟ್ರೀಯದ್ದಾಗಿ ಮಾಡಲು ಒಂದು ಸಮಿತಿಯನ್ನೇರ್ಪಡಿಸಿ ಇನ್ನು ಆರು ತಿಂಗಳೊಳಗೆ ವರದಿಯನ್ನೊಪ್ಪಿಸಲು ತಿಳಿಸಿರುವರು.

ಎಲ್ಲಕ್ಕೂ ಮಹತ್ವದ್ದೆಂದರೆ ಗೆಳೆಯ ಸಾಯಿಕ್ಸ್ ತನ್ನ ಭೂಮಿಗೆ ಹುಮಸ ಉಪಯೋಗಿಸಿದ. ಹೂಮಸ್ ಶಾಸ್ತ್ರೀಯ ಪದ್ಧತಿಯಿಂದ ಕಳೆತ ದನಗಳ ಮತ್ತು ವನಸ್ಪತಿಗಳ ಗೊಬ್ಬರ, ಭೂಮಿ ರಸಾಯನಿಕ ದ್ರವ್ಯಗಳಿಂದ ವಿಷಮಿಶ್ರಿತವಾಗದೆ, ಈ ಗೊಬ್ಬರದಿಂದ ಸಾರವುಳ್ಳದಾಯಿತು.

ಪ್ರಾಣಿಶಾಸ್ತ್ರ ದೃಷ್ಟಿಯಿಂದ ಭೂಮಿಯನ್ನು ನೋಡದೆ ರಸಾಯನಿಕದೃಷ್ಟಿಯಿಂದ ನೋಡುವದೊಂದು ಶಿಷ್ಟ ಸಮ್ಮತ ರೂಢಿ. ಇದನ್ನು ಸಾಯಿಕ್ಸ ಆಕ್ಷೇಪಿಸುತ್ತಾನೆ. ಔದ್ಯೋಗಿಕ ಹಿತಸಂಬಂಧವುಳ್ಳವರು ನೂರು ವರ್ಷ ಮಾಡಿದ ಪ್ರಚಾರದ ಪರಿಣಾಮವಾಗಿ 'ಈ ಕೃತ್ತಿಮ ಪ್ರವೃತ್ತಿ' ಮುಂದೆ ಎಂದಿದೆ. ಕೃತ್ರಿಮ ಗೊಬ್ಬರದಿಂದ ಉತ್ಪಾದಿತವಾದ ಆಹಾರದಿಂದ ಜೀವನ ಸತ್ತ್ವವೆಲ್ಲ ಹಾಳಾಗಿ ಹೋಗುವದು. ಬೇನೆಗಳನ್ನೆದುರಿಸುವ ಶಕ್ತಿಯೆ ಇಲ್ಲದಂತಾಗುವದು ಎಂದು ಸಾಯಿಕ್ಸರ ಅಭಿಪ್ರಾಯ.

ನಾಗರಿಕತೆ ಹಿಂದೆಂದೂ ಕಾಣದಂಥ ಭೀಷಣ ಪ್ರಸಂಗವಿದೀಗ ಬರಲಿದೆ. ಜಗತ್ತಿನ ಪ್ರತಿಯೊಂದು ದೇಶದಲ್ಲಿ ಭೂಮಿಯ ಸಾರವೆಲ್ಲ ಹಾಳಾಗಿ ಅವುಗಳ ಹುಲಸು ಹಳೆಯ ಮಾತಾಗಿ ಹೋಗುವ ಕಾಲ ಮಾನವರನ್ನೆದುರಿಸುತಿದೆಂದು ಅವನ ಅಭಿಪ್ರಾಯ. ಭಾವಿ ದುರಂತದ ಭೀಕರ ಚಿತ್ರದ ಬಗ್ಗೆ ಸಾಯಿಕ್ಸ ಹೇಳುವ ಕೃತ್ರಿಮ ಪದ್ಧತಿಗಳಿವು.

ಕೃತ್ರಿಮ ಪದ್ಧತಿಯಿಂದ ಬೀಜಬಿತ್ತುವದು ಒಕ್ಕಲತನದ ಶಾಸ್ತ್ರೀಯ ಪದ್ಧತಿಯೆಂದು ಕರೆಯಲ್ಪಡುವ ಪದ್ಧತಿಗಳಲ್ಲಿ ಅತ್ಯಂತ ಅಪಾಯಕಾರಕ ಪದ್ಧತಿ.

ಸಮುದ್ರಕ್ಕೆ ಬಳಿದು ಹೋಗುತಿರುವ ನಗರಗಳ ಗೊಬ್ಬರದಿಂದ ಬಹಳ ಹಾಳು, ಈ ಎಲ್ಲ ಗೊಬ್ಬರದ ಉಪಯೋಗ ಭೂಮಿಗೆ ಆಗತಕ್ಕದ್ದು. ಕೃತ್ರಿಮ ರೀತಿಯಿಂದ ಒಣಗಿಸಲ್ಪಟ್ಟ ಧಾನ್ಯಗಳಿಂದ ಅನೇಕ ಸಲ ರೊಟ್ಟಿ ಮಾಡಲಿಕ್ಕೆ ಬರುವದಿಲ್ಲ. ಬಿಳಿ ಬ್ರೆಡ್‌ನ್ನು ಪ್ರಚಾರದಲ್ಲಿ ತರುವದೊಂದು ಹೆಣ್ಣುಮಗಳಲ್ಲಿಯ ಬಂಜೆತನವಿದ್ದಂತೆ. ಪೂರ್ಣಗೋಧಿ ಬ್ರೆಡ್‌ನ್ನು ತಿನ್ನುವ ಸುದಿನ ಬೇಗನೆ ಬರುವದಕ್ಕಿಂತ ಮಹತ್ವದ ಸಂಗತಿ ಮನುಷ್ಯನಿಗೆ ಮತ್ತೊಂದಿಲ್ಲ.

ಹುಲ್ಲನ್ನು ಮತ್ತೆ ಭೂಮಿಯಲ್ಲಿ ಹರುವುದನ್ನು ಬಿಟ್ಟು ಅದನ್ನು ಸುಡುವದು ಒಕ್ಕಲಿಗ ಮಾಡುವ ಹೀನ ಅಪರಾಧಗಳಲ್ಲಿ ಅತ್ಯಂತ ಮಹತ್ವದ್ದು.

ಅನೇಕ ಒಕ್ಕಲಿಗರು ತಮ್ಮ ಆಕಳುಗಳನ್ನು ವರ್ಷದಲ್ಲಿ ೫ ತಿಂಗಳು ಗೋದಲಿಯಲ್ಲಿ ಬಿಗಿದಿಡುತ್ತಾರೆ. ಮತ್ತು ಹಿಂಡಿಯಂಥ ಪುಷ್ಪ ಹಾರವನ್ನು ಕೊಡುತ್ತಾರೆ. ಇದರಿಂದ ಆಕಳುಗಳ ಜೀರ್ಣ ಶಕ್ತಿಯನ್ನು ಕೂಡ ಲಕ್ಷಿಸುವುದಿಲ್ಲ. ಇಂಥ ದನಗಳು ನಿರೋಗಿ ಉಳಿಯಬೇಕೆಂದು ಅವರು ಅಪೇಕ್ಷಿಸುವುದಾದರೂ ಎಂತು? ಪ್ಯಾರೇಲಾಲ

ತಂಬಾಕು ಬೆಳೆಯಬಾರದು,

ಸರಕಾರದ ಶಾಸನ, ರೈತರಿಗೆ ಸೂಚನೆ

ಆಹಾರವನ್ನು ಹೆಚ್ಚು ಬೆಳೆಸಲೋಸುಗ ಮದ್ರಾಸ್ ಸರ್ಕಾರದವರು ಇಂಡಿಯಾ ರಕ್ಷಣೆ ಕಾಯ್ದೆಯನ್ನುಪಯೋಗಮಾಡಿಕೊಂಡು ಒಂದು ಶಾಸನ ಮಾಡಿದ್ದಾರೆ.

1) ಗೆಜೆಟ್‌ನಲ್ಲಿ ಪ್ರಕಟವಾದ ದಿನದಿಂದ ಯಾವ ರೈತನು 1946 ರ ಹಿಂದೆ ಮೂರುವರ್ಷಗಳಲ್ಲಿ ತಂಬಾಕು ಬೆಳೆದಿಲ್ಲವೋ, ಅಂತಹ ರೈತನು ತಂಬಾಕು ಬೆಳೆಸಬಾರದು.

2) ರೆವಿನ್ಯೂ ಇಲಾಖೆಯಲ್ಲಿ ರೆವಿನ್ಯೂ ಇನ್‌ಸ್ಪೆಕ್ಟರ್ ಮತ್ತು ಅವರ ಮೇಲಿರುವ ಯಾವ ನೌಕರರಾಗಲಿ, ವ್ಯವಸಾಯ ಇಲಾಖೆಯ ಯಾವ ಅಧಿಕಾರಿಯೇ ಆಗಲಿ, ಈ ಬೆಳೆಯನ್ನು ಸ್ವಾಧೀನಪಡಿಸಿಕೊಳ್ಳಬಹುದು.

ಪೂರ್ವ ಬಂಗಾಳದ ನೌಖಾಲಿ ಅತ್ಯಾಚಾರಗಳಿಗೆ ಮುಸ್ಲಿಂಲೀಗಿನವರೇ ಕಾರಣರೆಂದು ಭಾರತ ಸೇವಾ ಸಂಘದ ಕುಂಜರೂರವರು ಹೇಳಿಕೆ ಕೊಟ್ಟಿರುತ್ತಾರೆ.

ಅಪಹೃತ ಕನ್ಯೆಯರು

ಪ್ರಶ್ನೆ:— ಒತ್ತಾಯದಿಂದ ಅಪಹರಿಸಲ್ಪಟ್ಟ ಕನ್ಯೆಯರುಯಾವದೇ ಬಗೆಯ ಅಪರಾಧ ಮಾಡಿದಂತಾಗಲಿಲ್ಲಾದ್ದರಿಂದ ಸಮಾಜವು ಅವರನ್ನು ದಂಡಿಸಕೂಡದೆಂದು ನೀವು ಜನತೆಯ ಲಕ್ಷವನ್ನು ಎಳೆದಿರುವಿರಿ. ಇದನ್ನೆ ಸ್ವಲ್ಪಮುಂದರಿಸಿ ಒತ್ತಾಯದಿಂದ ಮನಸಿಲ್ಲದೆ ಮದುವೆಯ ಸಂಸ್ಕಾರಕ್ಕೆ ಗುರಿಯಾದ ಕನ್ಯೆಯರಿಗೆ ಅದು ಬಂಧನಕಾರಕವಾಗುವದೊ ಹೇಗೆಂಬುದನ್ನು ದಯವಿಟ್ಟು ವಿವರಿಸುವಿರಾ? ಇಂಥ ಕನ್ಯೆಯರನ್ನು ಮರಳಿ ತೆಗೆದುಕೊಳ್ಳುವಷ್ಟು ಉದಾರ ಮನಸ್ಸನ್ನು ಸಮಾಜ ಮತ್ತು ಕುಟುಂಬ ತಳೆಯುವದು ನ್ಯಾಯವಾಗಿಲ್ಲವೆ? ಅಪಹೃತ ಇಲ್ಲವೆ ಒತ್ತಾಯದಿಂದ ಲಗ್ನ ಸಂಸ್ಕಾರಮಾಡಲ್ಪಟ್ಟ ಅವಿವಾಹಿತ ಕನ್ಯೆಯರೆನ್ನು ಮರಳಿಸಮಾಜದಲ್ಲಿ ತೆಗೆದುಕೊಳ್ಳುವುದಕ್ಕಷ್ಟೇ ಅಲ್ಲ, ಆದರೆ ಅವರ ಮದುವೆಯನ್ನು ಮೂಡಿ ಪೂರ್ಣವಾಗಿ ಅವರನ್ನು ಆ ಸಮಾಜದಲ್ಲಿ ತೆಗೆದುಕೊಳ್ಳುವದಕ್ಕಾಗಿ ವಿಶೇಷ ಪ್ರಯತ್ನ ಮಾಡುವದು ಸಮಾಜದ ಕರ್ತವ್ಯವಾಗಿಲ್ಲವೆ?

ಉತ್ತರಃ— ನೀವು ಹೇಳುವುದು ಯೋಗ್ಯವಾಗಿದೆ. ನೀವು ಉಲ್ಲೇಖಿಸಿದ ನನ್ನ ಅಭಿಪ್ರಾಯ ನೀವು ಉಲ್ಲೇಖಿಸಿದ ನನ್ನ ಅಭಿಪ್ರಾಯ. ನೀವು ಹೇಳುವದನ್ನೆಲ್ಲಾ ಅಳವಳಿಸಿಕೊಳ್ಳುತ್ತದೆ. ಒತ್ತಾಯದಿಂದ ಅಪಹರಿಸಲ್ಪಟ್ಟ ಕನ್ಯೆಯರು ಯಾವದೇ ಬಗೆಯ ಅಪರಾಧ ಮಾಡಿಲ್ಲ. ಅಪ್ರೀತಿಗೆ ಗುರಿಯಾಗಿರುವದಿಲ್ಲ. ಸಮಂಜಸಮನುಷ್ಯರೆಲ್ಲರ ಕೃಪೆ ಮತ್ತು ಸಹಾಯಕ್ಕೆ ಅವರು ಪಾತ್ರರಾಗಿರುವರು. ಇಂಥ ಹುಡಿಗೆಯರನ್ನು ಅವರ ಮನೆಯವರು ಸಂತೋಷದಿಂದ ಪ್ರೀತಿಯಿಂದ ಬರಮಾಡಿಕೊಳ್ಳಬೇಕು. ಇವರಿಗೆ ಯೋಗ್ಯ ವರನಗೂಡ ಲಗ್ನ ಮಾಡುವಲ್ಲಿಯೂ ಯಾವದೇ ಬಗೆಯ ಅಡಚಣೆ ಬರಲಾರದು.

ಹೊಸದಿಲ್ಲಿ ಮೋ. ಕ. ಗಾಂಧಿ

ಜಾತೀಯ ಗಲಭೆ

ಪೂರ್ವಬಂಗಾಲ:– ಮಹಾತ್ಮಗಾಂಧಿಯವರು ನೌಖಾಲಿ ಜಿಲ್ಲೆಯಲ್ಲಿ ಪೀಡಿತ ಪ್ರದೇಶದ ಪ್ರತಿಯೊಂದು ಹಳ್ಳಿಯನ್ನೂ ಸಂಚರಿಸಲು ನಿಶ್ಚಯಿಸಿದ್ದಾರೆ. ಅಲ್ಲಿನ ಪರಿಸ್ಥಿತಿ ಹಿಡಿತದಲ್ಲಿದೆ. ಕಲ್ಕತ್ತಾದ ಮಾರವಾಡಿ ಪರಿಹಾರ ಸಂಘದವರು– ಪರಿಹಾರ ಕಾರ್ಯವನ್ನು ಕೈಗೊಂಡಿದ್ದಾರೆ.

ಢಾಕಾ— ಇಲ್ಲಿ ಇರಿತಗಳು ಸಾಗಿ ಸ್ತ್ರೀಯ ಒಂದು ಹೆಣ ಸಿಕ್ಕಕಾರಣ ಸಾಮೂಹಿಕ ದಂಡವನ್ನು ಹೇರಲಾಗಿದೆ. ನಾರಾಯಣಗಂಜದ ಮೇಲೂ ಕೂಡ ದಂಡವನ್ನು ಹೇರಲಾಗಿದೆ.

ಬೀಹಾರ— ಇಲ್ಲಿ ಈಗ ಪರಿಸ್ಥಿತಿಯು ಶಾಂತವಿದೆ ಮುಸ್ಲಿಂಲೀಗ್ ಶಿಷ್ಯಮಂಡಳವು ಇಲ್ಲಿ ಸಂಚರಿಸಿ, ಬೀಹಾರ ಮಂತ್ರಿವರ್ಗವನ್ನು ಇಲ್ಲಿನಡೆದ ಸಂಹಾರಕ್ಕಾಗಿ ದೂಷಿಸಿ ಪಂಡಿತ ಜವಹರಲಾಲರು ಒಂದು ಶಾಂತಿ ಸ್ಥಾಪಿಸಿದುದಕ್ಕಾಗಿ ಅವರನ್ನು ವಂದಿಸಿ ಕೃತಜ್ಞತೆಯನ್ನು ವ್ಯಕ್ತಿಪಡಿಸಿದರು. ಬಂಗಾಲದಿಂದ ಮುಸಲ್ಮಾನರ ಪರಿಹಾರದಲಗಳು ಇಲ್ಲಿಗೆ ಬಂದಿವೆ.

ಬನಾರಸ್ — ಇಲ್ಲಿಯವರಿಗೆ ಇಲ್ಲಿ ೨೪೯ಜನರನ್ನು ಕೈದು ಮಾಡಲಾಗಿದೆ.

ಸಂಯುಕ್ತ ಪ್ರಾಂತದಲ್ಲಿ ಅಲಹಾಬಾದ್ ಬರೇಲಿ ಲಖನೋಗಳಲ್ಲಿ ಅಶಾಂತ ಪರಿಸ್ಥಿತಿ ಇದೆ.

ಬೊಂಬಾಯಿ ಮಾದಕ ಪೇಯ ಪದಾರ್ಥಗಳ ಮಾರಾಟವನ್ನು ಒಂದು ವಾರದವರೆಗೆ ಪ್ರತಿ ಬಂಧಿಸಲಾಗಿದೆ.

ಮೀರತ ಕಾಂಗ್ರೆಸ ಅಧಿವೇಶನ

ಈ ಅಧಿವೇಶನವು ಪ್ರಕಟವಾದ ದಿನಾಂಕಗಳಲ್ಲಿ ಕೂಡಲಿದೆ. ಪ್ರತಿನಿಧಿಗಳಿಗಷ್ಟೇ ಅವಕಾಶವಿದೆ. ಖಾದಿ ಗ್ರಾಮೋದ್ಯೋಗ ಪ್ರದರ್ಶನ ಕೂಡಿಸುವ ವಿಚಾರವನ್ನು ಬಿಡಲಾಗಿದೆ.

ಕೂಡ್ಲಿಗೆಯಲ್ಲಿ ಕನ್ನಡ ಸಭೆ.

ಉಚ್ಚಶಾಲೆಯ ಬಾಲಕರ ಸಂಘದ ಸಭೆಯು ಕಳೆದ ಸೋಮವಾರ ಶ್ರೀನೀಲಕಂಠರಾಯರ ಅಧ್ಯಕ್ಷತೆಯಲ್ಲಿ ಕೂಡಿದಾಗ ಶ್ರೀ ಗೋವಿಂದಾಚಾರ್ಯರು ಕನ್ನಡ ನಾಡಿನ ಪ್ರಾಚೀನ ಸಂಸ್ಕೃತಿಯನ್ನು ನಾವು ಮರೆತಿದ್ದೇವೆ. ಇಂಗ್ಲೀಕರಣದಿಂದ ನಮಗೆ ಬಹಳ ಹಾನಿಯಾಗಿದೆ. ಕಾವೇರಿಯಿಂದ, ಗೋದಾವರಿಯ ವರೆಗೆ ಪಸರಿಸಿದ ಕನ್ನಡನಾಡು ಹರಿದು ಹಂಚಿ, ಸರ್ವಹೆಸರುಗಳ ಅವಭ್ರಂಶವಾಗಿ ಬಿಟ್ಟಿದೆ ಎಂದರು

ನವೀನ ಕವಿತೆಯಲ್ಲಿ ಮಾಧುರ್ಯವಾಗಲಿ, ಛಂದಸ್ಸಾಗಲಿ ಇಲ್ಲವೆಂದು ಹೇಳಿದಾಗ ಅಲ್ಲಿ ನೆರೆದ ತರುಣಂಗೆ ವಿಷಾದವಾಯಿತು. ಅಧ್ಯಕ್ಷರು ಕನ್ನಡ ನಾಡು ಮೈಸೂರು, ಹೈದರಾಬಾದ, ಮದ್ರಾಸು ಬೊಂಬಾಯಿ, ಮತ್ತು ಅನೇಕ ಸಣ್ಣಪುಟ್ಟ ಅಶ್ರಿತ ಸಂಸ್ಥಾನಗಳಲ್ಲಿ ಹಂಚಿ ಕನಿಕರಾವಸ್ಥೆಗೆ ಗುರಿಯಾಗಿರುವುದನ್ನು ವಿವರಿಸಿ ಏಕೀಕರಣಕ್ಕೆ ಎಲ್ಲರೂ ಸಹಾಯ ಮಾಡಬೇಕೆಂದು ಭಾಷಣಸ್ಪರ್ದೆಗೆ ೫|—ಐದು ರೂ. ದಯವಾಲಿಸಿದರು ಸಭೆಯು ಉದಯವಾಗಲಿ, ಎಂಬ ನಾಡವದದಿಂದ ಮುಕ್ತಾಯವಾಯಿತು.

ನಾವೆಲ್ಲಾ ಸೋದರರಂತಿದ್ದೇವೆ.

ಜೆನ್ನಾರವರು ಮಧ್ಯವ್ರಾಂತಗಳ ಕೆಲವೆಡೆಗಳಲ್ಲಿ ಹಿಂದುಗಳು ಮುಸಲ್ಮಾನರ ಮೇಲೆ ಅತ್ಯಾಚಾರ ನಡೆಸಿರುವರೆಂದು ಹೇಳಿಕೆ ಕೊಟ್ಟಿದ್ದರು. ಅದನ್ನು ಅಲ್ಲಗಳೆದು ಜಬ್ಬಲಪುರ ಜಿಲ್ಲಾ ಮುಸ್ಲಿಂಲೀಗ್ ಅಧ್ಯಕ್ಷರಾದ ಮೌಲಾನಾ ಬುರಾನುಲ್ಲಾ ಎಂ. ಎಲ್. ಎ ರವರು ಒಂದು ಹೇಳಿಕೆ ಕೊಟ್ಟಿದ್ದಾರೆ— "ಇಲ್ಲಿನಾವು ಸೋದರರಂತೆ ಬಹಳ ಸೌಹಾರ್ದವಾಗಿದ್ದೇವೆ ಈ ಆದರ್ಶವನ್ನು ಹಿಂದೂಸ್ತಾನದ ಎಲ್ಲಾಕಡೆಗಳಲ್ಲೂ ಅನುಕರಣಮಾಡಬೇಕು. ನಾವು ಜಿನ್ನಾರವರಿಗೆ ಸುಳ್ಳುವರದಿಕಳುಹಿಸಿಲ್ಲ. ತಾವು ಕೊಟ್ಟ ಹೇಳಿಕೆಯಲ್ಲಿ ತಥ್ಯಾಂಶವಿಲ್ಲೆಂಬುದನ್ನು ಸಾರಲು ನಾನು ಜಿನ್ನಾರವರಿಗೆ ಬರೆಯುತ್ತೇನೆ"

ನೆಹರೂ ಜಯಂತಿ.

ಈ ಉತ್ಸವವು ಬಳ್ಳಾರಿ ಜಿಲ್ಲೆಯಲ್ಲಿ ಯುವಕರಿಂದ ಆಚರಿಸಲ್ಪಟ್ಟ ವಾರ್ತೆಗಳು ಬಂದಿವೆ. ಬಳ್ಳಾರಿಯಲ್ಲಿ ನಗರಸಭಾಧ್ಯಕ್ಷರ ಮರಣದಿಂದ ನಿಂತರೂ, s. g. ಹೈಸ್ಕೂಲ ಮತ್ತು ಇತರ ಕಡೆಗಳಲ್ಲಿ ಆಚರಿಸಲಾಯಿತು.

ನಾರಾಯಣದೇವರಕೆರೆಯಲ್ಲಿ.

ನಗರ ಸಂಕೀರ್ತನೆ, ಧ್ವಜವಂದನೆಗಳಿಂದಾರಂಭವಾಗಿ ಅ. ಲ. ಆಚಾರ್ಯ, ವಾಸುದೇವಾಚಾರ್ಯ— ಬಾ. ಯಲ್ಲಪ್ಪ ಮರಿಸ್ವಾಮಯ್ಯ ಮಠದ ಇವರು ನೆಹರೂ ಜೀವನ ಚರಿತ್ರೆಯ ಸ್ಮರಣೆಯಿಸಿ ದಿವಂಗತ ಪ. ಮಾಳವೀಯರ ಬಗೆದುಃಖಸೂಚಕ ನಿರ್ಣಯವನ್ನಾವಿ ಧ್ವಜವನ್ನರ್ಧಕ್ಕೆಳಿಸಿದರು.

ಕೊಟ್ಟೂರಿನಲ್ಲಿ

ವಿದ್ಯಾರ್ಥಿ ಕಾಂಗ್ರೆಸ್ ನವರು ಶ್ರೀ ಶರಣಪ್ಪ ಗೌರಿಯವರ ಧ್ಯಕ್ಷತೆಯಲ್ಲಿ ಸಭೆಸೂಡಿ ಶ್ರೀ ಶಾಮರಾವು, ಸುಬ್ಬರಾವು, ರಾಘವೇಂದ್ರರಾವ್. ನ. ಭಟ್ಟರಿಂದ ಭಾಷಣಗಳ ಏರ್ಪಾಡು ಮಾಡಿ ಸಂಕೀರ್ತನೆ, ಧ್ವಜವಂದನೆ ಮತ್ತು ಜಲಜೋಡೆತ್ತಿನ ಮೆರವಣಿಗೆಯಿಂದ ವೈಭವವಾಗಿ, ಯಶಶ್ವಿಯಾಗಿ ನೆರವೇರಿಸಿದರು—

ಕೂಡ್ಲಿಗಿಯೆಲ್ಲೂ ಜಿಜ್ಯಂಭಣೆಯಿಂದ ನಡೆದ ಸುದ್ದಿ ಬಂದಿದೆ—

ಬಳ್ಳಾರಿ ಕಲೆಕ್ಟರ ಶ್ರೀ ಅನಂತರಾಮನ್ ರವರ ಅಧ್ಯಕ್ಷತೆಯಲ್ಲಿ ಶ್ರೀಮತಿ ಪಿ. ಪಾರಿಜಾತಂನಾಯಿಡುರವರು ಮಹಿಳೆಯರ ಕರ್ತವ್ಯ ಪುರುಷರ ಹೊಣೆಯನ್ನು ಕುರಿತು ಉಪನ್ಯಶಿಸಿದರು. ಶ್ರೀ ಭೀಮರಾವ್ ಧಾಯ್ಪನವರು ವಂದನಾರ್ಪಣೆ ಮಾಡಿ, ಸಹಾಯ ಮಾಡುವದಾಗಿ ಹೇಳಿದರು.

ದತ್ತಜಯಂತಿ.

೧—೧೨—೪೬ ರವಿವಾರದಿಂದ ೮ ನೆಯತಾ ವರೆಗೆ ಕಪ್ಪಗಲ್ಲು ರೇಲ್ವೆ ಸ್ಟೇಷನ್ನಿಗೆ ೫ ಮೈಲುವಳಗಿರುವ ಬದನೆಹಾಳು ಅವ್ವೆತಾ ನಂದಾಶ್ರಮದಲ್ಲಿ ವೇದಾತ ಪ್ರವಚನ ದತ್ತಗೀತೆ, ಹರಿಕಥೆ, ಸಂಗೀತ ವಗೈರೆ ಕಾರ್ಯಕ್ರಮಗಳಿಂದ ನಡೆಯಲಿವೆ ಸರ್ವರೂ ಆಗಮಿಸಲು ರಾಜಯೋಗಿ ತಮ್ಮಿರೆಡ್ಡಿಯವರುಕೋರುತ್ತಾರೆ.

ತಿರುಚೆಂದೂರಿನ ಸುಬ್ರಮಣ್ಯ ಸ್ವಾಮಿಯ ದೇವಸ್ಥಾನ ಮತ್ತು ತಾಲೂರಿನ ಶಿವಾಲಯ ಹರಿಜನರ ಪ್ರವೇಶಕ್ಕೆ ತೆರೆಯಲ್ಪಟ್ಟವು.

ಪಂಡಿತ ಮೂಳವೀಯರ ನಿಧನ

ಹಿಂದೂ ಸಮಾಜದಲ್ಲಿ ಪರಮ ಪೂಜ್ಯರಾದ ಪಂಡಿತ ಮದನಮೋಹನ ಮೂಳವೀಯರು ಕಾಶಿ ಕ್ಷೇತ್ರದಲ್ಲಿ ೧೨ ನೆಯ ದಿನಾಂಕ ಸಂಜೆ ೪-೧೦ ಕ್ಕೆ ಸ್ವರ್ಗವಾಸಿಗಳಾದರು. ಪೂರ್ವ ಬಂಗಾಲದಲ್ಲಿ ಹಿಂದುಗಳಮೇಲೆ ನಡೆದ ಅಮಾನುಷ ಅತ್ಯಾಚಾರಗಳಿಂದ ಅತಿವ್ಯಥಿತಗೊಂಡು ಹಾಸಿಗೆ ಹಿಡಿದವರು ಏಳಲೇ ಇಲ್ಲ. ಮೂರುದಿನಗಳಿಂದಲೂ ಅವರು ಪ್ರಜ್ಞೆತಪ್ಪಿ ಬಿದ್ದು ಕೊನೆಯಲ್ಲಿ ಶಾಂತರೀತಿಯಿಂದ ಇಹಲೋಕ ಯಾತ್ರೆಯನ್ನು ಮುಗಿಸಿದರು.

ಇವರ ಜನ್ಮವು ೧೮೬೧ ರಲ್ಲಿ ಅಲಹಾಬಾದಿನ ಸುಪ್ರಸಿದ್ಧ ಮನೆತನದಲ್ಲಾಯಿತು. ಪಂಡಿತ ಬ್ರಜನಾಥರು ಇವರ ತಂದೆಯವರು. ದೊಡ್ಡ ಸಂಸ್ಕೃತ ಪಂಡಿತರು ೧೮೮೪ ರಲ್ಲಿ ಬಿ. ಎ. ಪರೀಕ್ಷೆಯಾಗಿ ಎಂ.ಎ.ಗೆ ಓದುತ್ತಿರುವಾಗ ಅಭ್ಯಾಸ ಮುಗಿಸಿ ಶಿಕ್ಷಕರಾದರು. ೧೮೮೬ ರಲ್ಲಿ ಕಲ್ಕತ್ತೆಯಲ್ಲಿ ಕೂಡಿದ ೨ ನೆಯ ಕಾಂಗ್ರೆಸ್‌ಗೆ ಹೋಗಿ ಪಾಂಡಿತ್ಯಪೂರ್ಣಭಾಷಣಮಾಡಿ ರಾಷ್ಟ್ರೀಯ ಕಾರ್ಯಗಳಲ್ಲಿ ಕೈಹಾಕಹತ್ತಿದರು ೧೮೮೭ ರಿಂದ ಸ್ನೇಹಿತರ ಪ್ರೇರಣೆಯಂತೆ ವಕಾಲತ್ತು ಮಾಡಲಾರಂಭಿಸಿದರು. ಪ್ರತಿವರ್ಷವೂ ಕಾಂಗ್ರೆಸ್ ಸಭೆಗಳಿಗೆ ಹಾಜರಾಗುತ್ತಿದ್ದರು. ವಂಗಭಂಗ ಚಳವಳಿಯ ಕಾಲಕ್ಕೆ ವಕಾಲತ್ತು ಬಿಟ್ಟು ಕಾಶಿ ವಿದ್ಯಾಪೀಠ ಸ್ಥಾಪನೆಯ ಕಾರ್ಯವನ್ನು ಕೈಗೊಂಡರು. ೧೯೦೯ ರಲ್ಲಿ ಲೋಕಾಂಗ್ರೆಸ್ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ೧೯೦೯ ರಿಂದ ೧೯ ರವರಿಗೆ ಪ್ರಾಂತೀಕ ಕೌನ್ಸಿಲ್ ೧೯೧೯ ರಿಂದ ೧೯ ರವರಿಗೆ ವರಿಷ್ಠಕೌನ್ಸಿಲಿನ ಸದಸ್ಯರಾಗಿ ರೌಲೆಟ್ ಕಾಯ್ದೆಯ ನಿಷೇಧಾರ್ಥವಾಗಿದ್ದು ರಾಜೀನಾಮೆಕೊಟ್ಟರು.

೧೯೧೮ ರಲ್ಲಿ ಎರಡನೆಯ ಸಲ ದಿಲ್ಲಿಯಲ್ಲಿ ನಡೆದ ಕಾಂಗ್ರೆಸ್‌ಗೆ ಅಧ್ಯಕ್ಷರಾದರು ೧೯೧೯ ರಲ್ಲಿ ಒಂದ

೧೯೨೬ ರಲ್ಲಿ ರಾಷ್ಟ್ರೀಯಪಕ್ಷದ ಹೆಸರಿನಿಂದ ಚುನಾವಣೆಗಳಲ್ಲಿ ಹೋರಾಡಿದರು.

ಸಾಯಮನ್ ಸಪ್ತಕದ ಆಗಮನ ಕಾಲಕ್ಕೆ ಬಹಿಷ್ಕಾರದ ಧ್ವಜವೆತ್ತಿ ಎಲ್ಲಕ್ಕೂ ಮುಂದೆ ಬಂದುನಿಂತರು. ಮತ್ತು ರಾಷ್ಟ್ರವು ಸಂಪೂರ್ಣ ಸ್ವಾತಂತ್ರ್ಯದ ಘೋಷಣೆ ಮಾಡಿ ಸವಿನಯ ಕಾಯದೆಭಂಗ ಹೂಡಿದಾಗ ಸತ್ಯಾಗ್ರಹಿಗಳಾಗಿ ಸೇರಿ ಎರಡು ಸಲ ಕಾರಾಗೃಹ ಕಂಡರು

೧೯೩೦ ರಲ್ಲಿ ಇವರು ಎರಡನೇ ದುಂಡುಮೇಜಿನ ಪರಿಷತ್ತಿಗೆ ರಾಷ್ಟ್ರ ಧರ್ಮಕ್ಕಾಗಿ ಸಮುದ್ರಯಾನದ ಬಂಧನ ಕಿತ್ತೊಗೆದು ಪ್ರತಿನಿಧಿಗಳಾಗಿ ಹೋಗಿದ್ದರು. ಮತ್ತು ೧೯೩೨ ರಲ್ಲಿ ಅಕ್ರಮ ದಿಲ್ಲಿ ಕಾಂಗ್ರೆಸ ಹಾಗು ೧೯೩೩ ರ ಕಲಕತ್ತಾ ಕಾಂಗ್ರೆಸ್ಸಿಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಜಾತೀಯ ನಿರ್ಣಯ ಸಂಬಂಧದಲ್ಲಿ ಮಹಾತ್ಮರು ಯರವಡಾದಲ್ಲಿ ಉಪವಾಸ ಕೈಕೊಂಡಾಗ ಇವರು ಧಾವಿಸಿ ಬಂದು ಪುಣೆ ಒಪ್ಪಂದದಲ್ಲಿ ಸಹಕಾರಿಗಳಾದರು. ಮತ್ತು ೧೯೩೫ ರಲ್ಲಿ ಜಾತೀಯ ನಿರ್ಣಯ ಸಂಬಂಧದಲ್ಲಿ ಕಾಂಗ್ರೆಸ್ಸು ಅನುಸರಿಸಿದ ಧೋರಣ ಸರಿಬರದ್ದರಿಂದ ಕಾಂಗ್ರೆಸ ಪಾರ್ಲಮೆಂಟರಿಬೋರ್ಡಿಗೆ ರಾಜೀನಾಮೆ ಕೊಟ್ಟರು. ೧೯೩೬ ರಲ್ಲಿ ಮೂರನೇ ಸಲ ಹಿಂದು ಮಹಾಸಭೆಯ ಅಧ್ಯಕ್ಷಸ್ಥಾನವಹಿಸಿ ಹಿಂದುಗಳ ಸಂಘಟನೆಯಲ್ಲಿ ತೊಡಗಿದರು. ಮತ್ತು ಮುಂದೆ ವೈದ್ಯಾಧ್ಯ ಮೂಲಕ ಪ್ರತ್ಯಕ್ಷ ರಾಜಕಾರಣದಿಂದ ನಿವೃತ್ತರಾದರು.

ಬನಾರಸ ಹಿಂದು ವಿಶ್ವವಿದ್ಯಾಲಯವು ಮೂಲವೀಯರ ಕೀರ್ತಿಸ್ತಂಭವಾಗಿದ್ದು ೧೯೧೯ ರಿಂದ ೩೮ರವರೆಗೆ ಅವರು ಅದರ ವ್ಹಾಯಿಸ ಚಾನ್ಸಲರರೂ ೧೯೩೮ ರಿಂದ ಈ ವರೆಗೆ ಅದರ ರೆಕ್ಟರರೂ ಆಗಿದ್ದರು ಸಮಾಜ ಸುಧಾರಕರಲ್ಲದಿದ್ದರೂ ಮೂಲವೀಯರು ಸಾಮಾಜಿಕ ಅನ್ಯಾಯಗಳನ್ನು ಕಂಡು ಅವುಗಳಿಗೆ

ಲನಗಳಲ್ಲಿ ಅಸ್ಪೃಶ್ಯತಾ ನಿವಾರಣಾ ಗೊತ್ತುವಳಿ ತಂದು ಅವುಗಳನ್ನು ಪಾಸು ಮಾಡಿಕೊಂಡರು. ಇದಲ್ಲದೆ ಹರಿಜನ ಸೇವಕ ಸಂಘ ಸ್ಥಾಪಿಸುವಲ್ಲಿ ಸಹಕಾರಿಗಳಾಗಿ ಹರಿಜನೋದ್ಧಾರ ಕೈಕೊಂಡರು.

ಪ್ರಾಚೀನ ಸಂಸ್ಕೃತಿ ಹಾಗು ಅರ್ವಾಚೀನ ಪ್ರಗತಿ ಇವುಗಳ ಸುಂದರ ಸಮನ್ವಯಕ್ಕಾಗಿ ಪ್ರಯತ್ನಿಸಿ ಹಿಂದೂಸ್ತಾನದಲ್ಲಿ ಸಾಮಾಜಿಕ, ಧಾರ್ಮಿಕ ರಾಜಕೀಯ ಮೊದಲಾದ ಕ್ಷೇತ್ರಗಳಲ್ಲಿ ಅಧ್ಭುತ ಕ್ರಾಂತಿ ಮಾಡಿದ ಲೋಕೋತ್ತರ ಪುರುಷರಾದ ಧರ್ಮಾತ್ಮಾ ಪಂ. ಮೂಲಬೀಯರು ರಾಷ್ಟ್ರದ ಈ ಸಂಧಿ ಕಾಲದಲ್ಲಿ ನಮ್ಮನ್ನಗಲಿ ಹೋದುದು ಅಪಾರವಾದ ಹಾನಿಯಾಗಿದೆ. ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿಯೀಯಲಿ.

ದಿವಂಗತ ಪಂಡಿತ ಮೂಳವೀಯ

ಶದಸಂಸ್ಕಾರವು ೧೭ ನೆಯ ದಿನಾಂಕ ಗಂಗಾನದಿಯದಂಡೆಯಲ್ಲಿನ ಮಣಿಕರ್ಣಿಕಾ ಘಾಟಿದಲ್ಲಿ ಆಯಿತು ಇಡೀಕಾಶೀನಗರವೇ ಅಲ್ಲಿ ಹಾಜರಿದ್ದಿತೆಂದು ಹೇಳಬಹುದು. ಹಿಂದೂಸ್ತಾನದ ಎಲ್ಲಾ ಭಾಗಗಳಿಂದಲೂ ದುಃಖಸೂಚಕ ಸಭೆಗಳ ಸುದ್ದಿ ಧುರೀಣರ ದುಃಖೋದ್ಗಾರಗಳು ಪ್ರಕಟವಾಗಿವೆ.

ಬಳ್ಳಾರಿಯಲ್ಲಿ:— ಶ್ರೀ ಬಾದನಹಟ್ಟಿ ವೆಂಕೋಬರಾಯರಧ್ಯಕ್ಷತೆಯಲ್ಲಿ ಶ್ರೀಗಳಾದ ವೀರಸ್ವಾಮಿ, ಗೂಡೂರು ತಿಮ್ಮಪ್ಪ, ಟಿ. ಸುಬ್ರಹ್ಮಣ್ಯಂರ ಭಾಷಣಾನಂತರ ದುಃಖಸೂಚಕ ತೀರ್ಮಾನವಾಯಿತು ನಗರದಲ್ಲಿ ಹರತಾಳವಾಗಿ ಮುನಿಸಿಪಲ ಶಾಲೆಯ ಬಾಲಕರು ಹರತಾಳ ಮಾಡಿದ್ದರು

ಜಿನ್ನಾರವರ ಬಿನ್ನಹ.

ಮುಸಲ್ಮಾನರು ಬೀಹಾರದ ಘಟನೆಗಳಿಂದ ರೊಚ್ಚಿಗೇಳದೆ— ಅಲ್ಪಸಂಖ್ಯಾಕರ ವಿಶ್ವಾಸಕ್ಕೆ ಪಾತ್ರರಾಗಬೇಕೆಂದೂ— ಅವರ ಪ್ರಾಣ- ಆಸ್ತಿಗಳನ್ನು ಮುಸ್ಲಿಂ ಅಧಿಕ ಸಂಖ್ಯಾಕ ಪ್ರಾಂತಗಳಲ್ಲಿ ಕಾಪಾಡಬೇಕೆಂದೂ ಕೋರಿದ್ದಾರೆ.

ನಾರಾಯಣದೇವರಕೆರೆ

ಇಲ್ಲಿಯ ಸರ್ಕಲ್ ಮತ್ತು ಗ್ರೂಪ್ ಕಾಂಗ್ರೆಸ ಸಮಿತಿ, ತುಂಗಭದ್ರಾಯೋಜನೆಯ ಪರಿಹಾರಸಮಿತಿ, ರೈತಸಮಿತಿ ಮತ್ತು ವರ್ತಕರು— ಕಳೆದವಾರ ಇಲ್ಲಿ ಪ್ರಚಾರಾರ್ಥವಾಗಿ ಬಂದ ಮಾನ್ಯ ಉಪಮಂತ್ರಿಗಳಾದ ಶ್ರೀ ಶಂಕರರೆಡ್ಡಿಯವರನ್ನು ಶ್ರೀ ಬಿ. ಅನಂತಾಚಾರ್ಯರಧ್ಯಕ್ಷತೆಯಲ್ಲಿ ಬೋರ್ಡು ಶಾಲಾಭವನದಲ್ಲಿ ಸತ್ಕರಿಸಿದರು. ಮದ್ಯಪಾನ' ಪ್ರೊಕ್ಯೂರ್ಮೆಂಟ್, ಕಬ್ಬಿನಗಾಣ, ಕೊಪ್ಪರಿಗೆಗಳ ವಿಷಯವಾಗಿ ಸಕ್ರಮವಾಗಿ ಶ್ರೀಗಳಾದ ಯಲ್ಲಪ್ಪ, ವೆಂಕೋಬಶೆಟ್ಟಿ, ಸಣ್ಣ ಬಾಬೂಸಾಹೇಬರು ಮಾತಾಡಿದ ನಂತರ ಹೆ. ಮಾ. ಭೀಮಸೇನರಾಯರು— ಪ್ರೌಢಶಿಕ್ಷಣ, ರಾಟರಿಪೇರಿ, ನೆಯ್ಗೆ ಶಿಕ್ಷಕರ ನಿಯಾಮಕವಗತ್ಯವೆಂದು ಸೂಚಿಸಿದರು— ಈ ಎಲ್ಲಾ ಸೂಚನೆಗಳಿಗೂ ಸಮರ್ಪಕ ಉತ್ತರವಿತ್ತು ಶಕ್ತ್ಯಾನುಸಾರ ಅನುಕೂಲತೆಗಳನ್ನು ಮಾಡಿಸುವದಾಗಿ ಹೇಳಿದರು. ಕೆರೆಯಲ್ಲಿ ಸಾಕಷ್ಟು ನೀರು ಇಲ್ಲದಿದ್ದರೂ, ನೀರು ಇತ್ತೆಂದು ವರದಿಮಾಡಿದ ಅಧಿಕಾರಿಗಳ ಅನ್ಯಾಯವೆಂದು ಖಂಡಿಸಿ ವೃಥಾ ಹಾನಿ ಮಾಡಿಕೊಳ್ಳುವದು ರೈತರ ಸ್ವಭಾವವಲ್ಲವೆಂದು ರೈತ ಸಂಘದಧ್ಯಕ್ಷರೂ ಇತರರೂ ವಾದಿಸಿದರು. ಮಂತ್ರಿಗಳಿಗೆ ನಿಜಸಂಗತಿಯ ಮನವರಿಕೆಯಾಯಿತು. ಶ್ರೀಮದರಿಸ್ವಾಮಯ್ಯ ಮಠದ ವಾಟೇಲ ಇವರು— ಆಹಾರ—ಬಟ್ಟೆ— ಧಾನ್ಯಸಂಗ್ರಹದಲ್ಲಿ ಹಳ್ಳಿಗರಿಗಾಗುತ್ತಿರುವ ತೊಂದರೆಗಳನ್ನು ನಿವೇದಿಸಿ ಎ. ಬಿ. ಸಿ. ಡಿ ವರ್ಗಗಳ ನಿರುಪಕ್ತತೆಯನ್ನು ಸ್ಪಷ್ಟಪಡಿಸಿ ಎಲ್ಲರ ಆಭಾರವನ್ನು ಣಿಮಾಡಿದ ನಂತರ ಸಭೆಯು ಮುಗಿಯಿತು.

ಅಶಾಂತಿ.

ಸಂಯುಕ್ತ ಪ್ರಾಂತದ ಮಿರತ್, ಬೊಂಬಾಯಿಯ ಕೊಲಾಬಾ ಪ್ರದೇಶಗಳಲ್ಲಿ ಜಾತೀಯ ಗಲಭೆಯಿಂದ ಅಶಾಂತಿಯಾಗಿರುವುದರಿಂದ ಸರಕಾರದವರು ತಕ್ಕ ಚರ್ಯೆಗಳನ್ನು ತೆಗೆದುಕೊಳ್ಳುತ್ತಿರುವರು.

160

The Rayalaseema Bank Limited, Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— (ಬಳ್ಳಾರಿಜಿಲ್ಲಾ **ಹಡಗಲಿ, ಕೂಡ್ಲಿಗೆ,** ಚಿತ್ತೂರುಜಿಲ್ಲಾ **ನಾಗರಿಯಲ್ಲಿ**
ನಮ್ಮ ಶಾಖೆಗಳನ್ನು ಪ್ರಾರಂಭಿಸಿದೆವೆಂದು ತಿಳಿಸಲು ಹರ್ಷಿಸುತ್ತೇವೆ.

ಬಳ್ಳಾರಿ ಜಿಲ್ಲಾ:– ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ.
ಅನಂತಪುರ:– ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ.
ಚಿತ್ತೂರು:– ಚಿತ್ತೂರು, ಮದನಪಲ್ಲಿ, ತಿರುಪತಿ. **ಕರ್ನೂಲು:**– ಕರ್ನೂಲು ಪತ್ತಿಕೊಂಡ. **ಕಡಪ:**–ರಾಜಂಪೇಟೆ

ಫಿಕ್ಸಡ್ ಡಿಪಾಜಿಟ್‌ನ ಬಡ್ಡೀದರ:— 6ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:– 3%.

ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.

—ರಾಷ್ಟ್ರೀಯ ಪುಸ್ತಕಗಳು.—

—: **ಕಾಂಗ್ರೆಸ್ ಸ್ವರೂಪ ದರ್ಶನ:**—

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ-ನಿವಾರಣೆ	0-12—0
ಪ್ರಾಂತಭಾಷೆ- ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ಸಿಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ(ಇತಿಹಾಸ-ತಂತ್ರ)	3-8 -0

ವಿ.ಪಿ. ಖರ್ಚುಬೇರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ.—

ನವಭಾರತ, — ಕಾರ್ಯಾಲಯ ಬಳ್ಳಾರಿ.

ಹಿಂದೂಸ್ತಾನಿಯು ರಾಷ್ಟ್ರಭಾಷೆ

ಇದನ್ನು ತಪ್ಪದೆ ಕಲಿಯಿರಿ.

ಪ್ರಾರಂಭಿಕ ಪರೀಕ್ಷೆಗಳಾದ ಪ್ರಾಥಮಿಕ- ಮಧ್ಯಮ ರಾಷ್ಟ್ರಭಾಷೆ, ಉನ್ನತ ಪರೀಕ್ಷೆಗಳಾದ ಪ್ರವೇಶಿಕ, ವಿಶಾರದ- ಪ್ರಚಾರಕ, ಮದ್ರಾಸ್ ವಿಶ್ವವಿದ್ಯಾಲಯದ ಹಿಂದೀ- ವಿದ್ವಾನ್ ಪರೀಕ್ಷೆಗಳ ಮಾಹಿತಿಯನ್ನು ಉಚಿತವಾಗಿ ಕೊಟ್ಟು- ಶಿಕ್ಷಣದ ಏರ್ಪಾಟಿಗೆ ಸಲಹೆಗಳನ್ನು ಕೊಡಲಾಗುವುದು- ಎಲ್ಲಾಪುಸ್ತಕಗಳು ದೊರೆಯುತ್ತವೆ. **ಬಹಳ ಸುಲಭ ಭಾಷೆ-ಅತ್ಯಲ್ಪಕಾಲದಲ್ಲಿ ಕಲಿಯಬಹುದು.** **ಟಿ. ಬಿ. ಕೇಶವರಾವ್**
ಹಿಂದೀಪ್ರಚಾರಕ, ಬಳ್ಳಾರಿ

NAVA BHARAT, BELLARY Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು. Subscription Rates.

ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

SRI.....

.....

.....

Printed at Krishna Press Bellary QH NO. B 17 FOR (Q.H. NO. B-5)
Edited & Published by T. B. KESHAVARAO.

ಜೈಹಿಂದ್ Reg. No.M. 4746

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೫ ಸಂಚಿಕೆ ೧೭ | ಬಳ್ಳಾರಿ ಡಿಸಂಬರು ೨ ಸೋಮವಾರ ೧೯೪೬ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವು.

ಪಂಡಿತ ಜವಹರಲಾಲರು
ಬ್ರಿಟಿಷ್ ಸರ್ಕಾರದೊಡನೆ
ವಿಚಾರ ವಿಮರ್ಶೆಗಾಗಿ
ಲಂಡನ್ನಿಗೆ ಹೊರಟರು.

★★★★

ಲಂಡನ ಯಾತ್ರೆ

ಮುಸ್ಲಿಂಲೀಗು ಘಟನಾಸಮಿತಿಯಲ್ಲಿ ಸೇರುವು ದಿಲ್ಲೆಂದು ಹೇಳಿದಾಗಿನಿಂದ ಬ್ರಿಟಿಷ್ ಸರ್ಕಾರಕ್ಕೆ ಚಿಂತೆಯಾಗಿ ಈ ತೊಡಕನ್ನು ಬಿಡಿಸಲು ಕಾಂಗ್ರೆಸ್‌ನ ಪರವಾಗಿ ಪಂಡಿತ ಜವಹರಲಾಲ, ಸರ್ದಾರವಲ್ಲಭ ಭಾಯಿ ಪಟೇಲ, ಲೀಗಿನ ಮಿll ಜಿನ್ನಾ, ಲಿಯಾಖತ ಅಲಿಖಾನ್ ಮತ್ತು ಸೀಖರ ಪರವಾಗಿ ಸರ್ದಾರ ಬಲದೇವಸಿಂಗರನ್ನು ವೈಸ್ರಾಯರ ಮೂಲಕ ಆಮಂ ತ್ರಿಸಿದ್ದರು. ಕಾಂಗ್ರೆಸ್‌ನವರು ಹೋಗಬಾರದೆಂದು ನಿಶ್ಚಯಿಸಿದ್ದರು. ಅದರೆ ಬ್ರಿಟಿಷ್ ಮುಖ್ಯಮಂತ್ರಿಗ ಳಾದ ಮೇಜರ ಅಟ್ಲೆಯವರು ನೀವು ಬಂದೇತೀರಬೇ ಕೆಂದು ನೆಹರೂರ ಮನವೊಲಿಸಿದ ಕಾರಣ, ನೆಹರೂರ ವರು, ಸರ್ದಾರ ಬಲದೇವಸಿಂಗ ಮತ್ತು ಕಾರ್ಯದ ರ್ಶಿಗಳೊಡನೆ ಲಂಡನ್ನಿಗೆ ತೆರಳಿದರು, ಮಂಗಳವಾರ ದಿಂದ ಮಾತು ಕತೆಗಳು ನಡೆಯಲಿವೆಯೆಂದು ಗೊತ್ತಾ ಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ನೆಹರೂ ಜಯಂತಿ,

[ಕಳೆದ ಸಂಚಿಕೆಯಿಂದ ಮುಂದುವರಿದುದು]

ಕೊಡ್ಲಿಗಿ:— ೧೪ ನೆಯ ದಿನಾಂಕ ಪ್ರಾತಃಕಾಲ 'ಬಿಂದೂ'ರ ನೇತೃತ್ವದಲ್ಲಿ ಪ್ರಭಾತ ಫೇರಿಯಾದನಂತರ, ಸನುವಸ್ತ್ರ ವಿದ್ಯಾರ್ಥಿಗಳ, ಮತ್ತಿತರ ನಾಗರೀಕರ ಸಮಾವೇಶದ ಮಧ್ಯೆ ಶ್ರೀ ಲ. ವಿ. ಜೋಷಿಯವರು ತ್ರಿವರ್ಣಧ್ವಜಾರೋಹಣಮಾಡಿ ಅದರ ಮಹತ್ವದ ಕುರಿತು ಚಿಕ್ಕಭಾಷಣ ಮಾಡಿದರು. ಕೂಡ್ಲಿಗೆಗ್ರಾಮಕ್ಕೆ ಅಭೂತ ಪೂರ್ವವಾದ ಮೆರವಣಿಗೆಯಲ್ಲಿ ೫೭ ಜೊತೆ ಎತ್ತುಗಳಿಂದ ನೆಹರೂರ ಭಾವಚಿತ್ರವು ವಾದ್ಯವಿಶೇಷಗಳಿಂದೆಳೆಯಲ್ಪಟ್ಟು ಅಧಿಕಾರೀ ಅನಾಧಿಕಾರಿಗಳಿಂದ ಕೂಡಿದ ಸುಮಾರು ೨ ಸಾವಿರ ಜನಸಂದಣಿಯ ಜಯಜಯಕಾರದಲ್ಲಿ ಸಾಯಂಕಾಲ ೭ ಕ್ಕೆ ಗಮ್ಯಸ್ಥಾನವನ್ನು ಸೇರಿತು. ಅಸ್ವಸ್ಥತೆಯಿಂದ ಶ್ರೀ ಶಿರಸಪ್ಪನವರು ಬರಲಾಗದಿದ್ದರೂ, ಶ್ರೀ ಅನಂತಾಚಾರ್ಯರು (ಎಂ. ಎಲ್. ಎ) ಸಕಾಲಕ್ಕೆ ಆಗಮಿಸಿ ಅಧ್ಯಕ್ಷಸ್ಥಾನವನ್ನು ವಹಿಸಿ ಸಭೆಯ ಕಾರ್ಯಕ್ರಮಗಳನ್ನು ಮುಂದುವರಿಸಿದರು. ಜಂಬುನಾಥಶರ್ಮರ ಪ್ರಾರ್ಥನೆ. ವರದಿಯೋದೋಣದನಂತರ ಶ್ರೀಗಳಾದ ಗೋವಿಂದಾಚಾರ್ಯ, ಗುರುಲಿಂಗಪ್ಪ, ಚಂದ್ರಶೇಖರಯ್ಯನವರು ನೆಹರೂರ ಧ್ಯೇಯಗಳನ್ನು ಕಾರ್ಯರೂಪಕ್ಕೆ ತರಲು ಮನವಿಮಾಡಿದರು. 'ಬಿಂದೂ' ರು ನೆಹರೂರ ಜೀವನಚರಿತ್ರೆಯನ್ನು ಹೃದಯಂಗಮವಾಗಿ ಹೇಳಿದನಂತರ ಮಧ್ಯನಿಷೇಧಾಧಿಕಾರಿಗಳಾದ ಜನಾಬು ಸ್ತಾನಲ್ಲಿಯವರು ಜಯಂತಿ ಜ್ಞಾಪಕಾರ್ಥವಾಗಿ ಶಾಸನವನ್ನು ಯಶಶ್ವಿಮಾಡಲು ಕೋರಿದರು. ಅಧ್ಯಕ್ಷರು ನೆಹರೂರವರ ಬಾಲ್ಯ, ವಿದ್ಯಾಭ್ಯಾಸ ರಾಜಕೀಯ, ತ್ಯಾಗ ಇವುಗಳನ್ನು ತಿಳಿಸಿದನಂತರ ಸ್ವರೂಪಸಿಂಗರು ಆಭಾರ ಮನ್ನಣೆಮಾಡಿ ಸಭೆಯನ್ನು ಮುಗಿಸಿದರು. ಆರಾತ್ರಿ ಜಯಂತಿಯ ಸಂತೋಷ ಕೂಟಕ್ಕೆಂದು ಹಾವೇರಿಯ ಶ್ರೀ ಚಂದ್ರಶೇಖರ ಗವಾಯಿಗಳ ಸಂಗೀತ ಶ್ರವಣವಾಗಿ ಬಸವಣ್ಣನವರ ವಚನಗಳಸಾರವು ಎಲ್ಲರಲ್ಲೂ ಮಂದಟ್ಟಾಯಿತು.

ತೂಲಹಳ್ಳಿ:— ೧೪ ನೆಯ ದಿನಾಂಕ ಪ್ರಾ॥ ಪ್ರಭಾತ ಫೇರಿಯಾಗಿ ಶ್ರೀ ಸಿದ್ದನಗೌಡರಿಂದ ಧ್ವಜಾರೋಹಣನಾಗಿ ಶೃಂಗರಿಸಿದರಥದಲ್ಲಿ ನೆಹರೂರ ಭಾವಚಿತ್ರದ ಮೆರವಣಿಗೆಯಾಯಿತು. ಶ್ರೀ ಹೆಚ್. ಬಸಪ್ಪ ಮೊದಲಾದವರು ಶ್ರೀಚನ್ನಬಸಯ್ಯನವರಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಭಾಷಣಮಾಡಿದರು. ವಂದೇಮೂತರಂ ಜಯಕಾರಗಳಿಂದ ಸಭೆ ಸಮಾಪ್ತಿಯಾಯಿತು.

ಸುಂಕದಕಲ್ಲು [ಕೂಡ್ಲಿಗಿ] ೯ ಜೊತೆ ಎತ್ತುಗಳಿಂದ ನೆಹರೂ ಭಾವಚಿತ್ರದ ಅಲಂಕೃತರಥವು ಬೀದಿಗಳಲ್ಲಿ ಸಾಗಿ ಶ್ರೀ ಚನ್ನಯ್ಯನವರಧ್ಯಕ್ಷತೆಯಲ್ಲಿ ಕೂಡಿದ ಬಹಿರಂಗಸಭೆಯಲ್ಲಿ ಬೊಮ್ಮಲಿಂಗಯ್ಯ, ಬಸಪ್ಪಯ್ಯ- ಉಜ್ಜಿನಿ ಕಾಂಗ್ರೆಸ್‌ನ ಮರುಳನಗೌಡ ರುದ್ರಪ್ಪ,- ಶಿದ್ದಲಿಂಗನಗೌಡರು ಭಾಷಣಮಾಡಿದರು

ಅಖಿಲ ಭಾರತ ಮಹಿಳಾಸಭೆ

ದಶವಾರ್ಷಿಕೋತ್ಸವವು ವಾರ್ಡಲಾಭವನದಲ್ಲಿ 16 ನೆಯ ತಾ॥ ಶ್ರೀಮತಿ ಪಾರಿಜಾತಂ ನಾಯಿಡೂ ರವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಸಂಗೀತದ ಕಾರ್ಯಕ್ರಮವಿದ್ದಿತು. ಕಸ್ತೂರಿ ಬಾ ಸ್ಮಾರಕನಿಧಿಯ ಆಹಾರದ ಆರೋಗ್ಯ, ಪ್ರಾಥವಿದ್ಯಾಭ್ಯಾಸದ ಉಪಸಮಿತಿಗಳು ನೆರವೇರಿಸಿದ ಕೆಲಸಗಳ ವಿವೇಚನೆಯನ್ನು ಕಾರ್ಯದರ್ಶಿಗಳೋದಿದನಂತರ ಅಧ್ಯಕ್ಷರು ಸೂಕ್ತವಾದ ಉಪದೇಶಮಾಡಿದರು. ಸ್ತ್ರೀಯರ ಏಳಿಗೆಯನ್ನು ಕುರಿತು ತೀರ್ಮಾನಗಳಾದವು.

ಬಳ್ಳಾರಿ ಗಾಂಧಿನಗರದ ಹೈಯ್ಯರ್ ಎಲಿಮೆಂಟರಿ ಶಾಲೆಯಲ್ಲಿ ೨೯ ನೆಯ ದಿನಾಂಕ ಶ್ರೀಸೂರ್ಯನಾರಾಯಣರಧ್ಯಕ್ಷತೆಯಲ್ಲಿ ಶ್ರೀನಿವಾಸರಾವ್ ಮತ್ತು ರಂಗನಾಯುಡುರವರು ವಿದ್ಯಾರ್ಥಿನಿಧಿಮತ್ತು ವಾರ್ತಾಪತ್ರಿಕೆಗಳಮೇಲೆ ಭಾಷಣವಿತ್ತರು.

THE NAVA BHARAT
ನವ ಭಾರತ
ಸಂಪಾದಕ-ಟಿ.ಪಿ.ಕೇತವರಾವ್
9th Year of Publication.
2nd DECEMBER 1946

ಹರಿಜನರಿಗೊಂದು ಸೂಚನೆ

ಮದ್ರಾಸ್ ಕಾಂಗ್ರೆಸ್ ಸರಕಾರವು ಪ್ರಾಂತದಲ್ಲಿ ಹರಿಜನರ ಸರ್ವವಿಧ ಏಳಿಗೆಗಾಗಿ ಒಂದು ಕೋಟಿ ರೂಪಾಯಿ ಖರ್ಚುಮಾಡಲಿರುವದೆಂದು ಪ್ರಕಟಿಸಿದಾಗಿನಿಂದ ಹರಿಜನರಲ್ಲಿ ಆಶಾಂಕುರವಾಗಿದೆ. ದೂರ ದೂರ ಭಾಗದ ಹಳ್ಳಿಗಳಿಂದ ಗುಂಪುಗುಂಪುಗಳಾಗಿ ಬಂದು ಜಿಲ್ಲಾ ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳನ್ನು ಪೀಡಿಸುತ್ತಲಿರುವರು.

"ಸಾಗುಮಾಡಲು ಭೂಮಿಇಲ್ಲ, ಭೂಮಿಕೊಡಿಸಿರಿ, ಭೂಮಿಯಲ್ಲಿ ಛಾವಿತೆಗಿಸಲು ಹಣ ಕೊಡಿಸಿರಿ, ಮನೆಕಟ್ಟಿಕೊಳ್ಳಲು ಜಾಗನಿಲ್ಲ ಜಾಗಕೊಡಿಸಿರಿ, ಮನೆ ಕಟ್ಟಿಕೊಳ್ಳಲು ದೀರ್ಘಕಾಲದ ಕಂತಿನ ಸಾಲಕೊಡಿರಿ. ಊರ ಸಾಹುಕಾರರು ಈಗ ಎಂದು ದಂಬಡಿ ಸಾಲಕೊಡುವಂತಿಲ್ಲ. ನಮ್ಮ ನಿತ್ಯಂ ಪ್ರತಿ ಬೇಡಿಕೆಗಳಿಗೆ ಹಣಬೇಕು. ಇಲ್ಲವೇ ಊರ ಸಾಹುಕಾರನ ಸಾಲದಿಂದ ನಮ್ಮನ್ನು ಮುಕ್ತಮಾಡಲು ಸಾಲಕೊಡಿಸಿರಿ ವಗ್ಗೆರೆ ಬೇಡಿಕೆಗಳೆ ಪ್ರಧಾನವಾದವು"

ಇನ್ನೂ ಹರಿಜನರಿಗೆ ಅನೇಕ ಕುಂದುಕೊರತೆಗಳುಂಟು. ಭೂಮಿಯನ್ನು ತಪಿಸಿ ಬೇರೆಯವರು ಮಾಡುತ್ತಿರುವುದು- ದೌರ್ಜನ್ಯದಿಂದ ಹೆಚ್ಚುಕೆಲಸ ಮತ್ತು ಬಿಟ್ಟೀಕೆಲಸ ಮಾಡಿಸುವುದು, ಸ್ವಲ್ಪಹಣ ಕೊಟ್ಟು ಹೆಚ್ಚಿಗೆ ಬರೆಸಿಕೊಳ್ಳುವುದು, ಜಮೂ ಕೊಟ್ಟಿದ್ದಕ್ಕೆಲ್ಲಾ ಚಲ್ಲು ಬರೆಯದಿರುವುದು, ಆಹಾರಧಾನ್ಯದ ಡಿಪೋಗಳಲ್ಲಿ ವೃಥಾ ಕಾಯಿಸುವುದು, ಬಟ್ಟೀಡಿಪೋಗಳಲ್ಲಿ ಬೇಕಾದಬಟ್ಟೆ ಕೊಡದಿರುವುದು ವಗೈರೆ-ಇವೆ. ಹರಿಜನರಲ್ಲಿ ಸಾಕಷ್ಟು ಧೈರ್ಯ ಜಾಗ್ರತಿ ವಿದ್ಯಾಭ್ಯಾಸಗಳಿಲ್ಲದೆ ಇವು ಪರಿಹಾರವಾಗುವಂತೆಯೇ ಇಲ್ಲ. ಸರ್ಕಾರದವರು ಕೋಟಿ ರೂಪಾಯಿ ವೆಚ್ಚಮಾಡುವ ಇಚ್ಛೆಯನ್ನು ಪ್ರಕಟಿಸಿರುವರಾಗಲಿ, ಯೋಜನೆಯ ವಿವರಗಳನ್ನು ಇಲ್ಲಿಯವರಿವಿಗೂ ಪ್ರಕಟಿಸಿಲ್ಲ. ಮಂತ್ರಿಗಳನ್ನು ಪಾರ್ಲಿಮೆಂಟರಿ ಕಾರ್ಯದರ್ಶಿಗಳನ್ನು ಕೇಳಿದರೂ ಅವರು ಈ ವಿಷಯದ ಬಗ್ಗೆ ಪ್ರಕಾಶವನ್ನು ಬೀರಲಿಲ್ಲ. ಹರಿಜನರು ಆತುರರಿದ್ದಾರೆ, ಆತುರದಿಂದ ರಬೇಕಾದುದು ನ್ಯಾಯವೂ ಸಹಜವೂ ಆಗಿದೆ. ನೂರಾರು ಅರ್ಜಗಳ ಪೀಡೆಯೂ ಒಂದೇಸಲ ಹೋಗುವುದೆಂಬ ಹೆಬ್ಬಯಕೆ ಇದೆ.

ಆದರೆ ನಾವು ಹೇಳುವುದೆಂದರೆ- ಅಂಥಾಯೋಜನೆಯು ಪ್ರಕಟವಾದರೆ, ಕಾರ್ಯರೂಪಕ್ಕೆ ಬಂದರೆ ನಾವು ಎಲ್ಲರಿಗೂ ತಿಳಿಸುತ್ತೇವೆ. ಆಗ ಬಂದರೂ ಸಾರ್ಥಕವಾಗುತ್ತದೆ. ಅಲ್ಲಿಯವರಿವಿಗೂ, ಶಾಂತರಾಗಿ ತಾಳ್ಮೆಯಿಂದಿರಬೇಕೆಂದು ಕೋರುತ್ತೇವೆ.

ಗಾಂಧೀಜಿ ಜನ್ಮಸ್ಥಳ ಸ್ಮಾರಕ

ಮಹಾತ್ಮ ಗಾಂಧಿಯವರ ಜನ್ಮಸ್ಥಳವಾದ ಪೋರಬಂದರದಲ್ಲಿ ಮಹಾತ್ಮ ಗಾಂಧಿಯವರು ಹುಟ್ಟಿದ ಮನೆಯನ್ನು ಶಾಶ್ವತವಾಗಿಡಲು ಯತ್ನಗಳಾಗುತ್ತಲಿವೆ. ಅಲ್ಲಿ ಗಾಂಧೀಜಿಯ ತತ್ವಗಳನ್ನು ಕೊರೆದಿಡುವರು, ಶ್ರೀ ನಾಂಜಿಭಾಯಿ ಕಾಳಿದಾಸರವರು ಇದಕ್ಕಾಗಿ ರೂ.1,50,000 ಕೊಟ್ಟಿರುವರು.

ಹರಿಜನರಿಗೆ ಪ್ರತ್ಯೇಕ ಬಟ್ಟಿ ಅಂಗಡಿಗಳು

ಸೀದಾ ಬಟ್ಟಿ ಅಂಗಡಿಗಳಲ್ಲಿ ಹರಿಜನರಿಗೆ ಬಟ್ಟಿಗಳು ದೊರೆಯುವುದಿಲ್ಲೆಂಬ ದೂರುಗಳು ಹೋದಕಾರಣ ಮದ್ರಾಸ್ ಸರ್ಕಾರದವರು ಹರಿಜನರಿಗೆ ಪ್ರತ್ಯೇಕ ಅಂಗಡಿಗಳನ್ನು ಇಡಲು ಸೌಕರ್ಯಕಲ್ಪಿಸಬೇಕೆಂದು ನಿಶ್ಚಯಿಸಿರುವರು. ಹರಿಜನ ಸೇವಕ ಸಂಘದ ಸಿಫಾರ್ಸಪಡೆದು ಫಿರ್ಕಾಕ್ಷೇತ್ರಗಳಲ್ಲಿನ ವಿದ್ಯಾವಂತರೂ, ಸಾಕಷ್ಟು ಹಣದ ಅನುಕೂಲವಿರುವ ಹರಿಜನರು ಥಾವಿಸಿದ ಅರ್ಜಿಯಲ್ಲಿ ಅಂಶಗಳನ್ನು ತುಂಬಿ ಅರ್ಜಿ ಇಡಬೇಕು. ಬಟ್ಟಿಯ ಲೈಸನ್ಸಿಗಾಗಿ ತಾವಿರುವ ತಾಲೂಕ್ ಟ್ರೆಜರಿಯಲ್ಲಿ 7-8-0 ಕಟ್ಟಿ ಸದರಿ ಚಲನ್ ಅರ್ಜಿಯೊಡನೆ ಕಳುಹಿಸಬೇಕು. ಇದರಲ್ಲಿ ಬೇರೆಯವರ ಕೈವಾಡವಿಲ್ಲೆಂದೂ, ಸದರಿ ಹರಿಜನ ಅರ್ಜೀದಾರನು, ಹರಿಜನರ ಉಪಯೋಗಕ್ಕಾಗಿಯೇ ಕೆಲಸ ಮಾಡಲಿರುವನೆಂದೂ ನಮಗೆ ಭರವಸೆಯಾದರೆ ಅಂಥವನ ಹೆಸರು ಸಿಫಾರ್ಸು ಮಾಡುತ್ತೇವೆ. ತಾವು ಕೆಲಸ ಮಾಡಬೇಕಾದ ಫಿರ್ಕಾದಲ್ಲಿ ಎಷ್ಟುಹಳ್ಳಿಗಳಿವೆ. ಆಹಳ್ಳಿಗಳಲ್ಲಿ ದೊಡ್ಡವರ, ಮತ್ತು ಚಿಕ್ಕವರ ಹರಿಜನ ಸಂಖೆಯನ್ನು ಸಂಗ್ರಹಿಸಿದಲ್ಲಿ, ಸರ್ಕಾರದ ಕೋಟಾ ಪ್ರಕಾರಕ್ಕೆ ಮಿಲ್ಲು ಬಟ್ಟಿ ದೊರೆಯುತ್ತದೆ.

ಬಳ್ಳಾರಿ. } ಟಿ. ಬಿ. ಕೇಶವರಾವ್,
ಪ್ರಧಾನ ಕಾರ್ಯದರ್ಶಿ
ಜಿಲ್ಲಾ ಹರಿಜನ ಸೇವಕ ಸಂಘ.

ಉಜ್ಜಿನಿ.

18 ನೆಯ ಮೈಸೂರು ಪ್ರಾಂತದಿಂದ ಸಾರಾಯಿ ತರುತ್ತಲಿದ್ದ ಮುಕ್ಕಣ್ಣನೆಂಬಾತನಿಂದ ಬಾಟಲ್ ವಶಪಡಿಸಿಕೊಂಡು ಶ್ರೀಚನವೀರಪ್ಪ, ರುದ್ರಪ್ಪ, ಮರುಳನಗೌಡರು ಪೋಲೀಸರಿಗೆ ಕೊಟ್ಟು ಪಂಚನಾಮೆ ಮಾಡಿಸಿದರು.

ಸಿಂಧದಲ್ಲಿ ಚುನಾವಣೆಯ ಭರಾಟೆ.

ಸಿಂಧ ಪ್ರಾಂತದ ಶಾಸನ ಸಭೆಯು ರದ್ದಾಗಿ ಚುನಾವಣೆಯು ಭರಾಟದಿಂದ ನಡೆದಿದೆ. ಮುಸ್ಲಿಂಲೀಗಿಗೆ ವಿರೋಧವಾಗಿ ನಿಂತವರ ಪಾರ್ಟಿ ಪೈಕಿ ಕೆಲವರು ಕೊಲೆಮಾಡಲ್ಪಟ್ಟಿರುವರು. ಜಿನ್ನಾರವರು ಪ್ರಚಾರ ಕಾರ್ಯಕ್ಕಾಗಿ ಹೋಗಿದ್ದರು. ಆದರೆ ಅವರು ಈಗ ಇಂಗ್ಲೆಂಡಿಗೆ ಹೊರಟಿದ್ದು, ಲೀಗ್ ಹುರಿಯಾಳಿಗೆ ಬೆಂಬಲಕೊಡಲು ಕೇಳಿದ್ದಾರೆ. ಪ್ರಧಾನ ಮಂತ್ರಿ ಗುಲಾಮ ಹುಸೇನರಿಗೆ ಪೋಟಿಯಾಗಿ ರಾಷ್ಟ್ರೀಯ ಪಕ್ಷದ ಮೌಲಾಬಕ್ಷರು ನಿಂತಿರುವರು.

ವಿಾರತ್ ಕಾಂಗ್ರೆಸ್

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಆರು ವರ್ಷಗಳ ನಂತರ ಸಂಯುಕ್ತ ಪ್ರಾಂತದ ವಿಾರತ ನಗರದಲ್ಲಿ ಆಚಾರ್ಯ ಕೃಪಾಲಿನಿಯವರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ದೇಶದಲ್ಲಿ ಲೀಗ್ ನ ನೀತಿಯಿಂದ ಉದ್ಭವಿಸಿದ ವಿಷಮ ಪರಿಸ್ಥಿತಿಯನ್ನು ಧೈರ್ಯವಾಗಿ ಎದುರಿಸಲು ಇನ್ನುಮೇಲೆ ಲೀಗಿನ ಸಮಾಧಾನ ಮಾಡಲು ಹೋಗದಿರಲು ತಮ್ಮ ಭಾಷಣದಲ್ಲಿ ಅಧ್ಯಕ್ಷರು ಸೂಚಿಸಿ ಕಾಂಗ್ರೆಸ್ ಕೈಗೊಂಡ ಸರ್ವ ಕಾರ್ಯಗಳಿಗೂ ಜನತಾ ಬೆಂಬಲವನ್ನು ಕೋರಿದರು. ಪಂಡಿತ ನೆಹರೂ, ಸರ್ದಾರ ಪಟೇಲರು ತಾತ್ಕಾಲಿಕ ಸರ್ಕಾರದಲ್ಲಿ ಲೀಗ್ ಸರ್ಕಾರದೊಡನೆ ಸೇರಿಕೊಂಡು ಪ್ರತಿಯೊಂದು ಕಾರ್ಯಕ್ಕೂ ತೊಂದರೆ ಕೊಡುತ್ತಿರುವಂಶವನ್ನು ಸೂಚಿಸಿ ಇದಕ್ಕೆ ತಾವು ಬೆದರುವದಿಲ್ಲೆಂಬುದನ್ನು ಸ್ಪಷ್ಟಗೊಳಿಸಿದರು. ದೇಶ ಹಿತಕ್ಕೆ ಸಂಬಂಧಿಸಿದ ಅನೇಕ ನಿರ್ಣಯಗಳಾದವು. ಈ ಅಧಿವೇಶನಕ್ಕೆ ಸುಮಾರು ಹತ್ತು ಸಾವಿರ ಜನರು ಬಂದಿದ್ದರು.

ನವಭಾರತಕ್ಕೆ ಚಂದಾದಾರರಾಗಿರಿ

ಕಾಣಿಕೆ.

ಮೂಡುತಿದೆನಾ. ಒಡಮೂಡುತಿದೆ ಹಾಡು, ಜತೆ
ಗೂಡುತಿದೆ ಎಚ್ಚತ್ತ ಭಾವಬಯಕೆ,
ಹೊಸತನದ ಹರವಿನಲಿ ಹಿಗ್ಗಿ ಹಿರಿ ಹಿಗ್ಗಿಡುತ
ಸಾಗುವೆವು ಗೆಲುವಿನಲಿ ಗೆಲುವಿನಡಿಗೆ-
ನೆತ್ತರಿನ ಹನಿಗಳಲಿ ಒಸರಿಡುವ ಹುಮ್ಮಸಕೆ
ಯುಗಯುಗಾಂತರದ ಹಿನ್ನೆಲೆಯ ಘನತೆ;
ಉಚ್ಚ ಸಂಸ್ಕೃತಿಯಿತ್ತು ಒಡಲಕೆಚ್ಚನುಮಿರಿಸಿ
ನಡೆದ ಉಜ್ವಲವಾದ ನಮ್ಮ ಜನತೆ!
ವಿಜಯನಗರದ ಬಾಹ್ಯಸಂಪದವದಳಿದೇಂ
ಆ ಕಡುವು ನಮ್ಮದಾಗಿಯೆ ನಿಂತಿದೆ
ಅರಾಜ್ಯ, ಅವೀರ್ಯ, ಸಾಹಸದ ಸೌಭಾಗ್ಯ
ಬೆಂಗಾವಲಲಿ ಬೆಳಗಿತೊಳಗುತಿದೆ.
ಅಳಿದ ಬಾಹ್ಯಕಳೆಯು ಕರುಳ ಕೊರಗಿಸುತಲಿನೆ
ನಾಡಜನತೆಯ ನಡೆದು ಎಚ್ಚರಿಸುತಿದೆ:
ಬನ್ನಿರೈಗೆಳೆಯರಿ! ಕಟ್ಟುವೆವು ಕಟ್ಟುವೆವು
ವಿಜಯನಗರವ ನೊಮ್ಮೆ ನಮ್ಮಮೇಲೆ,
ಕರೆಯುವೆವು ನಾಡಿಗರ ಬರೆಯುವೆವು, ಬರೆಯುವೆವು
ನಿಲಿಸುವೆವು ಸ್ವಾತಂತ್ರ್ಯ ಸನ್ನಿಧಿಯಲಿ,
ಕಬ್ಬಿಗರ ಗೈಮೆಯದು ವಿಜಯಿಂದ್ರಕವಿವಾಣಿ
ಸವಿಸುವುದ್ದು ಸಲಿಸುವುದು ಶೀವೆಯಲ್ಲಿ!
ಹಾಡುನಮ್ಮೆಲ್ಲರನು ಗುಮ್ಮಿಗಿಸುವ ತೆರದಿ
ಕವಿಗೆಳೆಯ, ವಿಜಯಿಂದ್ರ ಇನ್ನಿನಿತು ಇನಿದಾಗಿ.
ನಾಡಕಟ್ಟುವ ಮಹಾಕಾರ್ಯ ಭಾರಕೆಸಲಿಸು
ಅಳಿಲುಭಕ್ತಿಯ ನೀನು ಇನ್ನಿನಿತು ಹೆಚ್ಚಾಗಿ:
ನಾಡ್ಗೀವಿಯು ಕೃವಾಚಾಮರವ ಬೀಸುವುದು,
ಸ್ಫೂರ್ತಿ-ಅದಬೇಡುವೆವು, ಕೋರುತಿಹೆವು!
ಹಿರಿದಾಗಿ ಬಾ, ಮಿನುಗಿ, ಸಾಹ್ಯಿತ ಸಂಸ್ಕೃತಿಯ
ಜನದ ಸಿರಿಯುತನಾಗು, ಅದುವೆ ಹಾರೈಕೆ.

[ಮಂಜುನಾಥ]



ಸಹೋದರರೇ

ನನ್ನನ್ನು ಬಳ್ಳಾರಿ ಜಿಲ್ಲಾ ಸಹಾಯ ಕಮೀಷನರನಾಗಿ ಜಿಲ್ಲಾ ಹಿಂದುಸ್ಥಾನ ಸ್ಕೌಟುಸಮಿತಿಯವರು ನಿಯಮಿಸಿರುವುದು ನಿಮಗೆ ತಿಳಿದಿದೆ- ಈ ಉದ್ಯೋಗವು ನನಗೆ ಹೊಸದು; ಆದರೂ ನನ್ನಿಂದಾದಷ್ಟು ಸೇವೆ ಮಾಡಲಿಚ್ಛಿಸುತ್ತೇನೆ.

ನಮ್ಮ ನಾಡಿನ ಮಕ್ಕಳೆಲ್ಲರೂ ಪ್ರಸನ್ನ ಹೃದಯರೂ ಆರೋಗ್ಯವಂತರೂ, ಪರೋಪಕಾರಿಗಳೂ, ಆಗಿ ಭಾರತಮಾತೆಯ ಅನುಕರಣೀಯ ನಾಗರೀಕರಾಗುವಂತೆ ಹೆಣಗುವುದೇ ನನ್ನ ಗುರಿ. ಇದನ್ನು ಸಾಧಿಸುವುದರಲ್ಲಿ ಜಾತಿ, ಮತ, ಪಂಥ ಲಿಂಗ ಮುಂತಾದ ಭೇದ ಭಾವನೆಗಳು ಎಂದೂ ಅಡ್ಡಬರುವುದಿಲ್ಲ. ಇದಕ್ಕಾಗಿ ಎಲ್ಲಾ ಬಾಲಕರೂ ತಮ್ಮ ತಮ್ಮ ಧರ್ಮದ ಕಟ್ಟಳೆಗಳನ್ನು ಗೌರವಿಸಿ ದೇವರ ಸೇವೆಯನ್ನು ಮಾಡುವುದಕ್ಕೆ ಮತ್ತು ತಾಯ್ನಾಡನ್ನು ಪ್ರೇಮಮಯವಾಗಿ ಕಂಡು ಅವಳ ಸೇವೆಗೆ ಯಾವಾಗಲೂ ಸಿದ್ಧರಾಗಿರುವಂತೆ ಅವರಿಗೆ ಶಿಕ್ಷಣ ಕೊಡಲಾಗುತ್ತದೆ.

ಪ್ರಯುಕ್ತ ಪ್ರತಿಯೊಂದು ಶಾಲೆಯಲ್ಲಿಯೂ ಸ್ಕೌಟು ಸಂಘಗಳನ್ನೇರ್ಪಡಿಸಬೇಕೆಂದು ನನ್ನ ವಿನಮ್ರ ವಿನಂತಿ.

ಪಿ. ರಂಜಾನ್‌ಸಾಹೇಬ್
ಜಿಲ್ಲಾಸಹಾಯ ಕಮೀಷನರ್

166

ಶುದ್ಧಿಗೆ ಆಹ್ವಾನ
(ಮಹಾತ್ಮಗಾಂಧಿ)

ಅಮೇರಿಕೆಯ ಅಸೋಸಿಯೇಟೆಡ್ ಪ್ರೆಸ್ಸಿನ ಪ್ರತಿನಿಧಿ ಕೇಳಿದ ಕೆಳಗಿನ ಪ್ರಶ್ನೆಗಳಿಗೆ ಗಾಂಧೀಜಿಯವರು ಈ ರೀತಿ ಉತ್ತರ ಕೊಟ್ಟರು.

ಪ್ರಶ್ನೆ- ಗಳಿಂದ ಲ್ಲಿಯ ಅಶಾಂತಿ, ಹಿಂದರಾಷ್ಟ್ರ ಸೇನೆಯ ಚಳವಳಿ ಮತ್ತು ಅಶಾಂತಿ ನಾವಿಕರ ಬಂಡಾಯ, ಕಲಕತ್ತೆ, ಮುಂಬಯಿಗಳಲ್ಲಿಯ ದೊಂಬಿ ಕಾಶ್ಮೀರದಂಥ ಹಿಂದೀ ಸಂಸ್ಥಾನಗಳಲ್ಲಿಯ ಚಳವಳಿಗಳು ಮತ್ತು ಇತ್ತೀಚೆಗಿನ ಜಾತೀಯ ದೊಂಬಿಗಳು ಹಿಂದುಸ್ತಾನದಲ್ಲಿ ಸದ್ಯದಲ್ಲಿ ನಡೆದ ಇವೆಲ್ಲ ಘಟನೆಗಳನ್ನು ನೋಡಿದರೆ ನಿಮ್ಮ ಅಹಿಂಸಾಧ್ಯೇಯ ಅಯಶಶ್ವಿಯಾಯಿತೆಂದು ಹೇಳಬೇಕೋ, ಏಕೆಂದರೆ ಹಿಂದೀಯರಲ್ಲಿ ಅಹಿಂಸೆ ಆಳವಾಗಿ ಬೇರೂರಿಲ್ಲೆಂಬುದು ಇವೆಲ್ಲವುಗಳಿಂದ ಸಿದ್ಧವಾಗುತ್ತದೆ.

ಉತ್ತರ- ಇದೊಳ್ಳೆ ಘಾತಕ ಸಾಮಾನ್ಯ ನಿರೂಪಣೆ—ನೀವು ಉಲ್ಲೇಖಿಸಿದ್ದೆಲ್ಲ ಹಿಂಸೆಯೆಂದು ನಿಜವಾಗಿ ಹೇಳಬಹುದಾದರೂ ಅದರಿಂದ ಅಹಿಂಸಾಧ್ಯೇಯ ಅಯಶಸ್ವಿಯಾಯಿತೆಂದು ಅರ್ಥವಾಗಲಾರದು. ಬಹಳವಾದರೆ ಜನಸಾಮಾನ್ಯರ ಮನಸ್ಸನ್ನು ಪರಿವರ್ತಿಸಲು ಅವಶ್ಯವಾದ ತಂತ್ರವು ನನಗಿನ್ನೂ ಗೊತ್ತಾಗಿಲ್ಲೆಂದು ಹೇಳಬಹುದು ಆದರೆ ಹಿಂದುಸ್ತಾನದಲ್ಲಿಯ ಏಳುಲಕ್ಷ ಹಳ್ಳಿಗಳಲ್ಲಿಯ ಕೊಟ್ಯವಧಿ ಜನರು ನೀವು ಉಲ್ಲೇಖಿಸಿದ ಹಿಂಸಾಕೃತ್ಯಗಳಲ್ಲಿ ಭಾಗವಹಿಸಿಲ್ಲೆಂದು ನಾನು ಹೇಳಬಯಸುತ್ತೇನೆ. ಅಹಿಂಸೆಯು ಹಿಂದೀಯರ ಮನಸ್ಸಿನಲ್ಲಿ ಆಳವಾಗಿ ಬೇರೂರಿದೆಯೊ ಹೇಗೆಂಬ ಪ್ರಶ್ನೆಗೆ ನನ್ನ ಮರಣದ ನಂತರವೆ ಉತ್ತರ ದೊರೆಯಬಲ್ಲದು.

ಪ್ರಶ್ನೆ— ೨. ಶೂರರ ಅಹಿಂಸೆಯನ್ನು ಪಡೆಯುವದಕ್ಕೆ ಪ್ರತಿಯೊಬ್ಬ ತನ್ನ ದೈನಿಕ ಜೀವನದಲ್ಲಿ ಮಾಡಬೇಕಾದ ಕನಿಷ್ಠ ಕಾರ್ಯಕ್ರಮವೇನು?

ಉತ್ತರ— ಶೂರರ ಅಹಿಂಸೆಯನ್ನು ಸಂಪಾದಿಸಬಯಸುವವನು ಮೊದಲು ತನ್ನ ಮನಸ್ಸಿನಲ್ಲಿರುವ ಹೇಡಿತನವನ್ನು ಹೊಡೆದು ಹಾಕಬೇಕು. ಮತ್ತು ಅದರ ದಿವ್ಯ ಜ್ಯೋತಿಯಲ್ಲಿ ತನ್ನ ಸಣ್ಣದೊಡ್ಡ ಪ್ರತಿಯೊಂದು ಕಾರ್ಯಕಲಾಪವನ್ನು ಸಾಗಿಸಬೇಕು. ಈ ರೀತಿಯಾಗಿ ಅವನು ರೊಚ್ಚಿಗೇಳದೆ ತನ್ನ ಮೇಲಿನವರನ್ನು ಕಂಡು ಭಯಭೀತನಾಗಲು ನಿರಾಕರಿಸಬೇಕು. ಅದೇ ಕಾಲಕ್ಕೆ ಅವನು ತನ್ನ ಸ್ಥಳಕ್ಕೆ ಶರಣು ಹೊಡೆಯಲು ಸಿದ್ಧನಿರಲಿಕ್ಕೆ ಬೇಕು. ಎಷ್ಟೇ ಲಾಭಕರ ಉದ್ಯೋಗವಾಗಿದ್ದರೂ ಅದನ್ನು ಲಕ್ಷಿಸಬಾರದು. ಈರೀತಿಯಾಗಿ ತನ್ನ ಸರ್ವಸ್ವವನ್ನು ತ್ಯಾಗಮಾಡುವ ಮನುಷ್ಯನು ತನ್ನ ವಿಷಯನಿರುದ್ಧ, ಕಿಂಚಿತ್ತಾದರೂ ಕೋಪಭಾವನೆಯನ್ನು ತಳೆಯಬಾರದು. ಇಂಥವರಲ್ಲಿ ಶೂರರ ಅಹಿಂಸೆ ಬೇರೂರಿದೆಂದು ಹೇಳಬಹುದು. ಪ್ರವಾಸಿಕನೊಬ್ಬನು ನನ್ನ ಮಗನ ಮೇಲೆ ಅಭಿಯೋಗನೂಡುವ ಬೆದರಿಕೆ ಹಾಕುವನೆಂದು ತಿಳಿಯಿರಿ. ಆ ಭಾವೀ ಕೊಲೆಗೊವಕನೊಡನೆ ನಾನು ವಾದಿಸಿದೆನೆಂದೂ ತಿಳಿಯಿರಿ. ಆಗ ಸ್ವಭಾವಿಕವಾಗಿ ಅವನು ನನ್ನನ್ನೇ ಏರಿ ಬರುವನು. ಅವನ ಬಗ್ಗೆ ಯಾವದೇ ಬಗೆಯ ವೈರಭಾವನೆಯನ್ನು ತಾಳದೆ ನಾನು ಅವನ ಹೊಡೆತವನ್ನು ಗೌರವ ಮತ್ತು ದೊಡ್ಡಸ್ತಿಕೆಯಿಂದ ಸಹಿಸಿದ್ದಾದರೆ ಅಹಿಂಸೆಯನ್ನು ನಾನು ಪ್ರದರ್ಶಿಸಿದಂತಾಗುವದು. ಇಂಥ ಉದಾಹರಣೆಗಳು ಪ್ರತಿದಿನ ಸಂಭವಿಸುವವು. ಮತ್ತು ಸಹಜವಾಗಿ ಹೆಚ್ಚುತ್ತ ಹೋಗುವವು. ಪ್ರತಿಸಲ ನಾನು ನನ್ನ ಕಿಚ್ಚನ್ನು ಶಮನಗೊಳಿಸುತ್ತ ಹೋದಂತೆ ತಿರುಗಿ ಹೊಡೆತ ಕೊಡುವ ಶಕ್ತಿ ನನ್ನಲ್ಲಿವ್ವರೂ ನಾನು ಹಾಗೆ ಮಾಡದಿದ್ದಂತೆ ನನ್ನಲ್ಲಿ ಶೂರರ ಅಹಿಂಸೆ ಅಭಿವೃದ್ಧಿಗೊಳ್ಳುವುದು. ಆ ಅಹಿಂಸೆ ನನ್ನನ್ನು ಎಂದೂ ಪರಾಜಯಗೊಳಿಸದು. ನನ್ನ ಕಡೆ ಹಗೆಯು ಕೂಡ ಅದಕ್ಕೆ ತಲೆಬಾಗಲಿಕ್ಕೆ ಬೇಕಾಗುವುದು.

ಮದ್ರಾಸ್ ಸರ್ಕಾರ ಮತ್ತು ಔದ್ಯೋಗೀಕರಣ.

ಕರ್ನೂಲ ಜಿಲ್ಲೆಯಲ್ಲಿ ಒಂದು ಸಿಮೆಂಟ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಸರ್ಕಾರದ ಅಪ್ಪಣೆ ಕೇಳಿದ್ದರು. ಮದ್ರಾಸ್ ಸರ್ಕಾರದವರೇ ಉದ್ಯೋಗಗಳನ್ನೆಲ್ಲಾ ನಡೆಸಬೇಕೆಂಬುವ ಯೋಜನೆ ಇರುವ ಕಾರಣ ಈ ಆಲೋಚನೆಯನ್ನು ಬಿಟ್ಟುಬಿಡಲು ಸೂಚಿಸಿದ್ದಾರೆ.

ಮದ್ರಾಸ್ ಅಸೆಂಬ್ಲಿಸಭೆ ಮುಂದೆ ಹೋಯಿತು.

ದಿಲ್ಲಿಯಲ್ಲಿ ಡಿಶಂಬರ್ 9 ನೆಯುತಾ. ನಿಂದ ಘಟನಾಸಮಿತಿಯ ಸಭೆಯು ಸೇರಲಿರುವ ಕಾರಣ. ಮದ್ರಾಸ ಅಸೆಂಬ್ಲಿ ಅಧಿವೇಶನವು ಜನವರಿ 3 ನೆಯ ವಾರದಲ್ಲಿ ಕೂಡಬೇಕೆಂದು ನಿಶ್ಚಿತವಾಗಿದೆ.

ಬಟ್ಟೆಯ ಹಂಚಿಕೆ

ದೊಡ್ಡವರಿಗೆ ವರ್ಷಕ್ಕೆ 5 ಗಜ, ಚಿಕ್ಕವರಿಗೆ ವರ್ಷಕ್ಕೆರಡುಗಜ ಮಿಲ್ಲು ಬಟ್ಟೆಯನ್ನು ಪ್ರಾಂತದಲ್ಲೆಲ್ಲಾ ಸಾರ್ವತ್ರಿಕವಾಗಿ ಯಾವ ಭೇದವೂ ಇಲ್ಲದೆ ಕೊಡತಕ್ಕದೆಂದು ಮದ್ರಾಸ್ ಸರ್ಕಾರದವರು ಪ್ರಕಟಿಸಿದ್ದಾರೆ. ಒರಟುಬಟ್ಟೆ, ಶ್ರೇಷ್ಠಬಟ್ಟೆ ಇವುಗಳನ್ನು ಯಾರು ಬೇಕಾದರೂ ಕೊಳ್ಳಬಹುದೆಂದು ತಿಳಿಸಿದ್ದಾರೆ

ಬೇಸಿಕ್ — ಎಡುಕೇಶನ್, ವಾರ್ಧಾಶಿಕ್ಷಣ

ಗುಂಟೂರು ಜಿಲ್ಲೆಯ ವಿನಯಾಶ್ರಮದಲ್ಲಿ ಮದ್ರಾಸ್ ಪ್ರಾಂತದ 72 ಉಪಾಧ್ಯಾಯರ ಸಲುವಾಗಿ ವಾರ್ಧಾಶಿಕ್ಷಣದ ಏರ್ಪಾಟನ್ನು ಡಿಶಂಬರ್ 8 ರಿಂದ ಮಾಡಿರುವರು. ಶ್ರೀ ಜಿ. ತೀತಾರಾಮಶಾಸ್ತ್ರಿಗಳು ಇವರ ಮೇಲ್ವಿಚಾರಕರಿರುವರು.

ರೈತರಿಗೆ ಸಹಾಯವಂತೆ

— ಮತ್ತೆ ೫೦೦ ಜನರಿಗೆ ಉದ್ಯೋಗ —

ಪ್ರಾಂತದ ವಿವಿಧ ಫಿರ್ಕಾಗಳಲ್ಲಿ ಒಳ್ಳೆಯಬೀಜ ನೆಲ್ಲಿನ ಪೈರಿನ ಸುಧಾರಣೆ, ಶ್ರೇಷ್ಠಗೊಬ್ಬರ- ಸಾಗುವಳಿಯ ಪದ್ಧತಿಗಳಲ್ಲಿ ರೈತರಿಗೆ ಸಲಹೆ- ಸೂಚನೆಗಳನ್ನು ಕೊಡಲು ಮದ್ರಾಸ್ ಸರ್ಕಾರದವರು ತಮ್ಮ ವ್ಯವಸಾಯ ಇಲಾಖೆಯ ಅಧೀನದಲ್ಲಿ ೫೦೦ ಜನರಿಗೆ ಉದ್ಯೋಗಗಳನ್ನು ಕೊಡಲಿರುವರು. ಇದಕ್ಕೆ ಮೂರು ಲಕ್ಷ ರೂ. ಖರ್ಚಾಗಲಿದೆ. ಎರಡೆರಡು ಫಿರ್ಕಾಗಳಿಗೊಬ್ಬರಂತೆ ಈ ನವಕರರು ನಿಯಮಿತರಾಗುವರು. ಈಗ ಅವರಿಗೆಲ್ಲಾ ಶಿಕ್ಷಣ ಕೊಡಲಾಗುತ್ತಿದ್ದು ಮುಗಿದ ಕೂಡಲೇ ಅವರು ಕೆಲಸದಮೇಲೆ ಹೋಗುವರು.

ಮೂಗಳ

ಪಂಡಿತ ಮಾಳವೀಯರ ನಿಧನದ ವಾರ್ತೆಯು ತಿಳಿದ ಕೂಡಲೇ ಕಾಂಗ್ರೆಸ್ ಕಾರ್ಯಕರ್ತರಾದ ಲಂಕೆಪ್ಪ ವೀರಪ್ಪ, ಸಿದ್ದಪ್ಪ ಇವರು ಗ್ರಾಮದಲ್ಲಿ ಸರ್ವವಿಧ ಹರತಾಳಕ್ಕೇರ್ಪಡಿಸಿ ಸಾಯಂಕಾಲ ದೇಶಾಯಿ ಚಿಂತಾಮಣಿಯವರ ಅಧ್ಯಕ್ಷತೆಯಲ್ಲಿ ದಿವಂಗತರ ಜೀವಿತ ಧ್ಯೇಯ ಸಾಧನೆ ಕುರಿತು ಅನುಕರಣೀಯಾಂಶಗಳನ್ನು ಹೇಳಿದನಂತರ ದುಃಖ ಸೂಚಕ ನಿರ್ಣಯವಾಗಿ ಸಭಾ ವಿಸರ್ಜನೆಯಾಯಿತು.

ಹರಿಜನೋದ್ಧಾರ ಹರಿಜನ ಸೇವಕ ಸಂಘದ ಕಾರ್ಯ ಪ್ರಣಾಲಿ ಕಾಂಗ್ರೆಸ್ ನೀತಿಯಲ್ಲಿ ಅವರ ಸ್ಥಾನಮಾನ ಕುರಿತು ಶ್ರೀ ವೀರಪ್ಪನವರ ಅಧ್ಯಕ್ಷತೆಯಲ್ಲಿ ಕೃಷ್ಣಪ್ಪ- ಲಂಕೆಪ್ಪ- ಹೆ. ಹಾಲಪ್ಪ- ಸಿದ್ದಪ್ಪ ವಗೈರೆ ಧುರೀಣರು ಹರಿಜನರ ಕೇರಿಯಲ್ಲಿ ೨೭ ನೆಯ ದಿನಾಂಕ ಭಾಷಣವಿತ್ತರು.

ಪೂರ್ವಬಂಗಾಲದ ನವಾಖಾಲಿ ಜಿಲ್ಲೆಯ ಶ್ರೀರಾಂಪುರದಲ್ಲಿ ನೆಲೆಸಿರುವ ಮಹಾತ್ಮ ಗಾಂಧಿಯವರು- ನಿರ್ಮಲ ಬೋಸರ ಸಹಾಯದಿಂದ ಬಂಗಾಳಿ ಭಾಷೆಯನ್ನು ಕಲಿಯತ್ತಲಿರುವರು.

ಬಳ್ಳಾರಿ ಸುದ್ದಿ.

ಬಳ್ಳಾರಿ ನಗರವಾಸಿಗಳಾಗಿ ಯುದ್ಧ ಕಾರ್ಯಾ ಸಕ್ತರಾಗಿದ್ದ ಕ್ಯಾಪ್ಟನ್ ಶ್ರೀ ಕೆ ಮರಿಸ್ವಾಮಪ್ಪ ಐ. ಎಂ. ಎಸ್. ಇವರು ಯುದ್ಧ ಕಾರ್ಯಗಳಲ್ಲಿ ತೋರಿದ ಶೌರ್ಯಕ್ಕಾಗಿ ಮಿಲಟರಿ ಕ್ರಾಸ್ ದೊರೆತಿದ್ದಿತು. ಇವರಿಗೆ ಸರ್ಕಾರದವರು ರೂ. ೫೦೦೦ ದ್ರವ್ಯ ಮೂಲಕ ಬಹುಮಾನವಿತ್ತಿರುವರು. ಹಾಗೆಯೇ ಕಾಟ್ಸಾಡಿಯ ಹವಾಲ್ದಾರ್ ವರದನ್‌ರವರಿಗೆ ೩೫೦೦-೦-೦ ಕೊಟ್ಟಿರುವರು.

ಬಳ್ಳಾರಿ ಆಲಿಪುರಂ ಜೈಲಿನಲ್ಲಿ ೧೯೪೫ ನೆಯ ಸೆಪ್ಟಂಬರ್ ತಿಂಗಳಲ್ಲಿ ರಾಜಕೀಯ ಸ್ಥಾನ ಬದ್ಧರ ಮೇಲೆ ನಡೆದ ಲಾಠಿ ಛಾರ್ಜಿನ ಅತ್ಯಾಚಾರವನ್ನು ಕುರಿತು ವಿಚಾರಿಸಲು ದಿವಾನ ಬಹದೂರ್ ಶ್ರೀ ವಿ ಭಾಷ್ಯಂ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸರ್ಕಾರದವರು ನಿರ್ಮಿಸುವವರಿದ್ದಾರೆ

ಬಳ್ಳಾರಿ ವೀರಶೈವ ಕಾಲೇಜಿನಲ್ಲಿ ಶ್ರೀ ವಿಜಯೇಂದ್ರ ಶಾನುಭೋಗರ ಅಧ್ಯಕ್ಷತೆಯ ಕೆಳಗೆ ಶ್ರೀಗಳಾದ ವೃಷಭೇಂದ್ರಸ್ವಾಮಿ, ನಾಗಯ್ಯ, ಪುಟ್ಟಲಿಂಗಪ್ಪ, ಸಿದ್ದನಗೌಡ ಇವರು ದಿನವಗತರ ಗುಣ ಗಾನ ಮಾಡಿದನಂತರ 'ಬೀಚಿ' ಯವರು ಕೈಲಾಸಂರವರ 'ಟೊಳ್ಳುಗಟ್ಟಿ' ಯಿಂದ ಕೆಲ ಭಾಗಗಳನ್ನು ಓದಿದರು ದುಃಖಸೂಚಕ ನಿರ್ಣಯವಾಗಿ ಅತ್ಯಶಾಂತಿಯನ್ನು ಕೋರಲಾಯಿತು.

ಚಿತ್ತವಾಡಿಗಿ ಕಲ್ಮಠೇಶ್ವರ ರಥೋತ್ಸವ.

ಚಿತ್ತವಾಡಿಗಿ ತಾ ೨೨— ಶ್ರೀ ಕಲ್ಮಠೇಶ್ವರ ಸ್ವಾಮಿ ಮಹಾರಥೋತ್ಸವ ಕಾರ್ಯಕ್ರಮಗಳು ತಾ ೨೪ ರಿಂದಗ ನಾರ ನಡೆದವು ತಾ ೨೮ ಕ್ಕೆ ಮಹಾರಥೋತ್ಸವ ವಾಯಿತು. ಪ್ರತಿನಿತ್ಯ ನವಲಗುಂದಿ ಗವಿಮಠ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಂಗೀತ, ಪ್ರವಚನ, ಭಾಷಣ ಮೊದಲಾದವುಗಳನ್ನು ಏರ್ಪಡಿಸಲಾಗಿತ್ತು. ಶ್ರೀ ಯುತರಾದ ಪ್ರೊ. ಯಲಬುರ್ಗಿ, ಕೆ. ಎಲ್ ನಂಜಪ್ಪ, ಗುರುರಾವ ವಾಳವೇಕರ, ವೈ. ನಾಗೇಶಶಾಸ್ತ್ರಿ, ಟಿ. ಎಚ್. ಎಂ. ಸದಾಶಿವಯ್ಯ ಪ್ರೊ. ಸವಣೂರ ಮೊದಲಾದವರ ಭಾಷಣಗಳಾದವು.

ಆದವಾನಿಯಲ್ಲಿ ಹರಿಜನರ ದೇವಾಲಯ ಪ್ರವೇಶ ಸಮಾರಂಭ.

ಆದವಾನಿ ತಾ. ೨೨— ನಿನ್ನಿನ ದಿನವು ಇಲ್ಲಿಯ ಊರ ಮಧ್ಯದಲ್ಲಿರುವ ಹನುಮಂತ ದೇವರ ಗುಡಿಯನ್ನು ಹರಿಜನರಿಗೆ ಮುಕ್ತ ಮಾಡುವ ಸಮಾರಂಭವು ವಿಜೃಂಭಣೆಯಿಂದ ನಡೆಯಿತು. ಇಡೀ ಓಣಿಯೆಲ್ಲ ತಳಿರು ತೋರಣಗಳಿಂದ ಶೃಂಗರಿಸಲ್ಪಟ್ಟಿತ್ತು. ಮುಜಾನೆ ೮ ಗಂಟೆಗೆ ಪ್ರಮುಖ ಹಿಂದುಗಳು ಗುಡಿಯಿಂದ ವಾದ್ಯವೈಭವದೊಡನೆ ಮೆರವಣಿಗೆಯಿಂದ ಹರಿಜನ ವಾಡೆಗಳಿಗೆ ಹೋಗಿ ಅಲ್ಲಿ ಪೂಜಾ ಸಾಮಗ್ರಿಗಳಿಂದ ಸಿದ್ಧವಾಗಿದ್ದ ಹರಿಜನರನ್ನು ಕೂಡಿಕೊಂಡು ಮೆರವಣಿಗೆಯಿಂದ ಮುಖ್ಯ ಬೀದಿಗಳಲ್ಲೆಲ್ಲಾ ಹಾಯ್ದು ಗುಡಿಗೆ ಬಂದರು. ಅನಂತರ ಇನಕಲಾಬ ಜಿಂದಾಬಾದದ ಪ್ರಚಂಡ ಜಯ ಜಯಕಾರದೊಂದಿಗೆ ಹರಿಜನರು ಗುಡಿಯಲ್ಲಿ ಪ್ರವೇಶಿಸಿ ಪೂಜೆಯನ್ನು ನೆರವೇರಿಸಿ ಪ್ರಸಾದ ಹಂಚಿದರು. ಆ ಮೇಲೆ ಜಿಲ್ಲಾ ಕಾಂಗ್ರೆಸ ಕಮೀಟಿ ಉಪಾಧ್ಯಕ್ಷರಾದ ಶ್ರೀ ಕೆ. ಬಲರಾಮ ಸಿಂಗರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀ ಎಚ್. ಸತ್ಯನಾರಾಯಣರ ಭಾಷಣವಾಯಿತು. ಎಲ್ಲ ಗುಡಿಗಳನ್ನೂ ಹರಿಜನರಿಗೆ ತೆರೆದಿಟ್ಟು ಹಿಂದುತ್ವದ ಮೇಲಿನ ಕಳಂಕವನ್ನು ತೊಳೆದುಕೊಳ್ಳಬೇಕೆಂದು ಅವರು ಸರ್ವರಿಗೆ ಬಿನ್ನವಿಸಿದರು. ರಾತ್ರಿಯಲ್ಲಿ ಹರಿಜನರೊಂದಿಗೆ ಭಜನೆ ನಡೆದು ಸಮಾರಂಭ ಮುಗಿಯಿತು. ನಗರೇಶ್ವರ ದೇವಾಲಯವೂ ಶೀಘ್ರದಲ್ಲಿ ಹರಿಜನರಿಗೆ ತೆರೆದಿಡಲ್ಪಡಲಿರುವದಾಗಿ ತಿಳಿಯುತ್ತದೆ. (ಸ್ವ. ಸು.)

ಬ್ರಿಟಿಷ್ ಸರ್ಕಾರದ ಆಹ್ವಾನ
ಕಾಂಗ್ರೆಸ್ ತಿರಸ್ಕಾರ-ಲೀಗ ಸ್ವೀಕಾರ.

ದಿಲ್ಲಿಯಲ್ಲಿ ದಿಶಂಬರ್ 9ನೆಯ ತಾರೀಕಿನಿಂದ ಕೂಡಲಿರುವ ಘಟನಾ ಸಮಿತಿಗೆ ಲೀಗ್ ನವರು ಹೋಗದೆ ದೇಶದಲ್ಲಿ ವಿಷಮ ಪರಿಸ್ಥಿತಿಯುದ್ಭವವಾಗಿರುವ ಕಾರಣ ಕಾಂಗ್ರೆಸ್- ಲೀಗ್‌ನವರ ತಂಟೆ ಬಗೆ ಹರಿಸಬೇಕೆಂದು ಬ್ರಿಟಿಷ್ ಮಂತ್ರಿವರ್ಗವು ಕಾಂಗ್ರೆಸ್, ಲೀಗ್ ಮತ್ತು ಶಿಕ್ ಪ್ರತಿನಿಧಿಗಳೈವರನ್ನು ವಿಚಾರ ವಿಮರ್ಶೆಗಾಗಿ ವೈಸ್ರಾಯರ ಮೂಲಕ ಆಹ್ವಾನಿಸಿತು. ಇದು ಬ್ರಿಟಿಷ್ ಮತ್ತು ಲೀಗ್‌ನವರ ಕುತಂತ್ರವಿದ್ದು ಇವರಲ್ಲಿ ಮೋಸವಿರಬೇಕೆಂದೂ, ಹಿಂದೂಸ್ತಾನದ ಭವಿತವ್ಯದ ನಿರ್ಣಯವನ್ನು ಮುಂದೂಡುವ ಹಂಚಿಕೆಇದೆಂದೂ ಆಲೋಚಿಸಿ ಕಾಂಗ್ರೆಸ್‌ನವರು ಇದನ್ನು ತಿರಸ್ಕರಿಸಿದರು. ಆದರೆ ಲೀಗಿನವರು ಯಾವಾಗಲೂ ಬ್ರಿಟಿಷರ ಸಹಾಯದಿಂದ ತಮ್ಮ ಕೆಲಸ ಸಾಗಿಸುವ ಇಚ್ಛೆಯನ್ನು ಪ್ರದರ್ಶಿಸುತ್ತಿರುವದರಿಂದ ಜಿನ್ನಾ ಮತ್ತು ಲಿಯಾಖತ ಅಲಿಖಾನರು ಇಂಗ್ಲೆಂಡಿಗೆ ತೆರಳಲಿರುವರು.

ಹೆಬ್ಬಾಳ (ಗುಡಗೇರಿ ತಾಲೂಕು)

ಬಾಳಿ ಹೊಸೂರು, ನಾಗರ ನುಡುವ, ಕೋಗನೂರು, ಗೋನನಕೊಪ್ಪದ ರೈತರು ಪ್ರತಿ ಮಂಗಳವಾರ ಹೆಬ್ಬಾಳದ ಸರ್ಕಾರಿ ಡಿಪೋದಿಂದ, ಜೋಳವನ್ನು ವಯ್ಯುತ್ತಿದ್ದರು. ೧೯ನೆಯದಿನಾಂಕ ನೂರಾರು ರೈತರು ಬಂದು ಜೋಳ ಮೂರುವ ನೂಲೀಕರಿಲ್ಲದೆ ನಿರಾಶರಾಗಿ ಹಿಂದಿರುಗಿದರು. ಹಳ್ಳಿಗಳ ಗೋಳನ್ನು ಎಷ್ಟು ವರ್ಣಿಸಿದರೂ ಕಡಿಮೆ ಇದೆ. ಈರೀತಿ ಬಡ ರೈತರಮೇಲೆ ಆದ ಅನ್ಯಾಯದ ಪರಿವೆಯು ತಾಲೂಕು ಸಪ್ಲೇ ಆಫೀಸರಿಗಾಗಿ ಮುಂದೆ ಹೀಗಾಗದಂತೆ ನೋಡಿಕೊಳ್ಳಬೇಕೆಂದು ಹೆಬ್ಬಾಳ ತರುಣ ಸಂಘದವರು ಸೂಚಿಸುತ್ತಾರೆ.

ಪತ್ರ ವ್ಯವಹಾರ.

ಸಂಪಾದಕರ ಸೂಚನೆ:—

ಸಿರುಗಪ್ಪೆ ತಾಲೂಕು ಚಳ್ಳಿಕೂಡ್ಲೂರು ಗ್ರಾಮದ ಕೆಲರೈತರು ಅಲ್ಲಿಯ.....ರು. ಅಲ್ಲಿಂದ ಮೊಗಲಾಯಿಗೆ ಹೋಗುವ, ನೊಗಲಾಯಿದಿಂದ ಬರುವ ವಿವಿಧ ಸಾಮಗ್ರಿಗಳ ವಾಹನಗಳ ಮೇಲೆ ಅಪರಿಮಿತವಾಗಿ ಸಂಗ್ರಹಿಸುವ ದೌರ್ಜನ್ಯಮೂಡುವ ಕೃತ್ಯವನ್ನವಲಂಬಿಸಿರುವರೆಂದೂ, 5-10-46 ಬಳ್ಳಾರಿಯಿಂದ ಬಂದಧಿಕಾರಿಗಳಿಗೆ ಪೆಟ್ಟುಬಿತ್ತೆಂದೂ ಬರೆದಿದ್ದಾರೆ. ಸರಿಯಾದ ವ್ಯಕ್ತಿಪರಿಚಯವಿಲ್ಲದ, ಅನುಮಾನಕ್ಕೆ ಕಾರಣರಾದವರು ದಸ್ಕತ್ತು ಮಾಡಿದ್ದಾರೆ. ಈಷಯ ಬಳ್ಳಾರಿಗೆ ಬಂದು ಕಂಪ್ಲೇಂಟುಕೊಡಲು ನಮ್ಮ ಸೂಚನೆ— ನಾವು ಅವರಿಗೆ ತಕ್ಕ ಸಹಾಯ ಒದಗಿಸುತ್ತೇವೆ.

ನಮ್ಮ ಓದುಗರಿಗೆ ಮತ್ತೊಂದು ಸೂಚನೆಯೆಂದರೆ, ನಮ್ಮ ಚಂದಾದಾರರ ಮೂಲಕ ಅವರಿಂದ ಸಹಿಯಾಗಿ ಅದರ ಸತ್ಯಾಂಶದ ಬಗ್ಗೆ ಅವರು ಬರೆದರೆ ನಾವು ಪ್ರಕಟಿಸಲು ಅನುಕೂಲವಾಗುತ್ತದೆ. ಬರೆಯುವ ವಿಷಯದಲ್ಲಿ ಸತ್ಯತೆ ಇರಬೇಕು. ಉತ್ಪ್ರೇಕ್ಷೆ ಇರಬಾರದು.

ಕರ್ನಾಟಕ ಏಕೀಕರಣ.

ಶ್ರೀ ಶಿ. ವೆ. ದೇಸಾಯೀಯವರು ಗುತ್ತೀ ತಾಲೂಕಿನ ೨೪ ಹಳ್ಳಿಗಳನ್ನು ಸಂಚರಿಸಿ ೨೪೦ ಸದಸ್ಯರನ್ನು ಮಾಡಿದರು.

ಸ್ಮಾರಕ.

ಶ್ರೀ ಹಾ. ಶೇತಾರಾಮ ರೆಡ್ಡಿಯವರಧ್ಯಕ್ಷತೆಯಲ್ಲಿ ಪುರಸಭಾಭವನದಲ್ಲಿ ಜನಾಬ ಅಬ್ದುಲ ರಾವುಫರ ಕೈಲ ಭಾವ ಚಿತ್ರವನ್ನು ಹಾಕತಕ್ಕದ್ದೆಂದು ನಿರ್ಣಯವಾಗಿ ಸಭೆಯಲ್ಲೇ ರೂ.೫೬೦/- ಸಂಗ್ರಹವಾಯಿತು

ಪೈರುಮನೆಗೆ ಬರುವುದು ಕಷ್ಟ ಸಾಧ್ಯ.

ರೈತರು ತಾವು ಬೆಳೆದ ಪೈರನ್ನು ಸೀದಾಜಾರಿಯಿಲ್ಲದ ಪ್ರದೇಶಗಳಿಂದ ಸೀದಾಜಾರಿಯಿರುವ ನಗರಪ್ರದೇಶಗಳಿಗೆ ತರುವುದೇ ದುಸ್ಸಾಧ್ಯವಾಗಿ ಬಿಟ್ಟಿದೆ. ಈ ವಿಷಯದಲ್ಲಿ ವ್ಯವಸಾಯಗಾರರೂ, ಕಾಂಗ್ರೆಸ್ ಸಮಿತಿಯವರೂ ಎಷ್ಟೋಸಲ ಸರ್ಕಾರವನ್ನು ಕೇಳಿಯಾಯಿತು. ಇದುವರೆವಿಗೂ ರೇಷನಿಂಗ ರೂಲ್ಸುಗಳಲ್ಲಿ ಬದಲಾವಣೆಯಾಗಿಲ್ಲ. ಗ್ರಾಮದ ಶಾನುಭೋಗ— ರೇಷನ್ ಕಛೇರಿ— ತಾಲೂಕು ಕಛೇರಿಗಳಿಗೆ ಅಡ್ಡಾಡಿ-ದೇವತೆಗಳಿಂದ ಆಪ್ಪಣೆ ಪಡೆಯಬೇಕೆಂದರೆ ಸಾಕುಸಾಕಾಗಿ ಹೋಗುತ್ತದೆ— ರಾಸಿಹಾಕಿದ ಧಾನ್ಯವು ಪ್ರಕೃತಿಯ ಕೋಪಕ್ಕೂ, ಕಳ್ಳನ ತಂತ್ರಕ್ಕೂ ಎಡೆಯಾಗಿ ಅನೇಕಸಲ ರೈತನಿಗೆ ನಷ್ಟವು ಸಂಭವಿಸುತ್ತದೆ. ಇದರಮೇಲೆ ಸರ್ಕಾರಕ್ಕೆ ರೈತನು ಒಪ್ಪಿಗೆಯಿಂದ ಕೊಡಬೇಕಾದ ಧಾನ್ಯವು ಬೇರೆಇದೆ. ಈಗಿನ ಆಹಾರಪರಿಸ್ಥಿತಿಯ ಕಷ್ಟಕಾಲದಲ್ಲಿ ಈನಿಯಮಗಳ ಬದಲಾವಣೆಯಾಗುವುದವಶ್ಯ— ಹೊಸಪೇಟೆ ಸರ್ಕಲ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಶ್ರೀ ಲಕ್ಷ್ಮಣ ಮೂರ್ತಿಯವರಿಗೆ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾದ ಶ್ರೀ ಶಂಕರ ರೆಡ್ಡಿಯವರು ಬರೆದಿರುವ ಪ್ರಕಾರಕ್ಕೆ ನಿಯಮಗಳನ್ನು ಸರಳಮಾಡಿ— ರೈತರಿಗೆ ಕಷ್ಟವಿಲ್ಲದಂತೆ ಮಾಡುವರೆಂದು ಆಶಿಸುತ್ತೇನೆ.

ಆರ್. ವಿ. ದೇಶಾಯಿ
ಹೊಸಪೇಟೆ

ಹೊಸಪೇಟೆ.

ಸ್ಥಾನಿಕ ವಿದ್ಯಾರ್ಥಿ ಕಾಂಗ್ರೆಸದವರು ೨೦ನೆಯ ದಿನಾಂಕ ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸದ ಸ್ಥಾಪನೆಯ ದಿನಾಚರಣೆಯನ್ನು ಆಚರಿಸಿದರು. ನಗರ ಬೀದಿಗಳಲ್ಲಿ ವಿದ್ಯಾರ್ಥಿಗಳ ಮೆರವಣಿಗೆಯಾದನಂತರ ಶ್ರೀ ಪಿ. ಕೆ. ರಾಮಚಂದ್ರಾಚಾರ್ಯರಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಹುಬಳಿ ಗಜೆಟಿದ ಸಂಪಾದಕರಾದ ರಾ. ವೆ. ಕರಗುದರಿಯವರು ಕಾಂಗ್ರೆಸನ ಇತಿಹಾಸ ೧೯೪೨ ರ ಚಳವಳಿಯ ವಿವರಗಳನ್ನು ಹೇಳಿ ವಿದ್ಯಾರ್ಥಿಗಳು ರಾಜಕಾರಣದಲ್ಲಿ ಭಾಗವಹಿಸುವ, ಬಿಡುವ ಚಿತ್ರಗಳನ್ನು ಸದ್ಯದ ಪರಿಸ್ಥಿತಿಯೇ ವದಗಿಸಿದೆಯೆಂದು ಸ್ಪಷ್ಟೀಕರಣ ಮಾಡಿದರು. ಜೈ ಹಿಂದ್, ವಂದೇಮಾತರಂದಿಂದ ಸಭೆಯು ಮುಕ್ತಾಯವಾಯಿತು.

ಬದನೇಹಾಳು.

೧೯-೧೨-೪೬ ನೇ ದಿನಾಂಕದಿಂದ ೭-೧೨-೪೬ ನೇ ದಿನಾಂಕದವರೆಗೂ ಶ್ರೀ ಶಿವ, ದತ್ತ ಸಪ್ತಾಹ ಭಜನೆ, ಪಂಡಿತ ಸಮ್ಮೇಳನ ಜರುಗುವುದು ಆದಿನಗಳಲ್ಲಿ ಕನ್ನಡ ಸಾಹಿತ್ಯ ಮತ್ತು ಕರ್ನಾಟಕ ಏಕೀಕರಣ ಸಪ್ತಾಹ ಜರಿಗಿಸಲು ಗ್ರಾಮ ಕರ್ನಾಟಕ ಏಕೀಕರಣ ಸಂಘದವರು ನಿಶ್ಚಯಿಸಿರುತ್ತಾರೆ, ಅಭಿಮಾನಿಗಳು ಆಗಮಿಸಬೇಕಾಗಿ ವಿನಂತಿ.

ಬಿ. ರಂಗನಗೌಡ

ಕಂಪ್ಲಿ

ಬೋರ್ಡ ಹೈಸ್ಕೂಲು ಸಾಹಿತ್ಯ ಸಂಘದಲ್ಲಿ ಶ್ರೀ ಹ. ರಾಮಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ನಡೆದು ಭಾರತ ಮಾತೆಯ ಶ್ರೇಷ್ಠ ರತ್ನಗಳಲ್ಲೊಂದಾದ ರಂತಿದ್ದ ಪಂಡಿತ ಮದನಮೋಹನ ಮಾಳವೀಯರ ನಿಧನಕ್ಕಾಗಿ ಅತೀವ ದುಃಖ ಸೂಚಿಸುವ, ಕುಟುಂಬಕ್ಕೆ ಸಹಾನುಭೂತಿಯರ್ಪಿಸುವ, ಆತ್ಮ ಶಾಂತಿಕೋರುವ ನಿರ್ಣಯವಾಯಿತು.

ಮತ್ತೊಂದು ನಿರ್ಣಯದಿಂದ ಬಳ್ಳಾರಿ ಪುರಸಭಾಧ್ಯಕ್ಷರಾದ ಜನಾಬ ಅಬ್ದುಲ ರಾವುಫರ ನಿಧನಕ್ಕೆ ದುಃಖಸೂಚಕ ತೀರ್ಮಾನವಾಯಿತು.

[ಬಿ. ಶರಭಣ್ಣಶೆಟ್ಟಿ— ಕಾರ್ಯದರ್ಶಿ]

ಶ್ರೀಧರಘಟ್ಟ ಪರಿಸ್ಥಿತಿ.

ನಿಶಾಣಿಯವರ ಪತ್ರ.

ಇಲ್ಲಿಯ ಹರಿಜನರು ಅಮೇರಿಕಾದ ನೀಗ್ರೋ ಜನರಂತೆ ತೀರಕನಿಷ್ಟ ದರ್ಜೆಯ ಮೃಗಗಳಿಗೆ ಸಲ್ಲದ ಅವಸ್ಥೆಯಲ್ಲಿದ್ದಾರೆ. ಇಲ್ಲಿ ಬ್ರಿಟಿಶ ಕಾಯ್ದೆಯೂ ಇದ್ದಂತೆಕಾಣೆ, ಕಾಂಗ್ರೆಸ್ ಪ್ರಜಾರವೂ ಇಲ್ಲ ಸರ್ಕಾರದ ಒಂದು ಕೋಟಿ ರೂಪಾಯಿಯ ಅಭಿವೃದ್ಧಿ ಯೋಜನೆಗಳು ಯಾವಾಗ ಬರುತ್ತವೆಯೋ ಗೊತ್ತಿಲ್ಲ. ಇಲ್ಲಿಯ ಕೆರೆಯು ತುಂಬಿದರೆ 400 ಎಕ್ರೆ ಸಾಗಾಗುತ್ತದೆ. 50 ವರ್ಷಗಳ ಕೆಳಗೆ ಸುಖವಾಗಿದ್ದ ಈ ಊರು, ಈಗ ಅನೇಕ ಬಂಡವಲುಗಾರರ ಹಿಡಿತದಲ್ಲಿ ನರಳುತ್ತಲಿದೆ. ಇವರೆಲ್ಲಾ ಬಡವರ ರಕ್ತ ಹೀರಿ ಹಿಂದಿ ಸಾಹುಕಾರ ಜನ್ಮೀಂದಾರರಾದರು. ಉದಾಹರಣಾರ್ಥ ಅಗಸರಿಗಿದ್ದ 70 ಎಕ್ರೆ ಖುಷ್ಕಿ 3 ಎಕರೆ ತರಿ ಭೂಮಿ, ಉಪ್ಪಾರರಿಗಿದ್ದ 500ಎಕ್ರೆ, ತಲಾರಿಗಳಿಗಿದ್ದ 200 ಎಕರೆಭೂಮಿ ಮೋಸಕೃತ್ಯದಿಂದ ಬತ್ತಿಗೆ ಚಕ್ರ ಬಡ್ಡಿ ಏರಿಸಿ ಬಂಡವಲದಾರರಿಗೆ ಸೇರಿತು ಹರಿಜನರ ಮನೆಗಳು 40 ವುಂಟು. ಬೆಳಗಿನಝಾವ 3ಕ್ಕೆದ್ದು, ರಾತ್ರಿಯವರಿಗೂ ದುಡಿಯಬೇಕು. ಇಲ್ಲವಾದರೆ ವಿಚಿತ್ರಹಿಂಸೆ. ಚಳ್ಳಾರಿ ಚೌಡಿಗನ ಮಕ್ಕಳು ಅಂಜನಿ ಮತ್ತು ಹನುಮಂತ ಊರುಬಿಟ್ಟು ಹೋದರು ಹಿಂಸೆ ತಾಳಲಾರದೆ. ವಂದಕ್ಕೆ ಹತ್ತರಷ್ಟು ಕೊಟ್ಟರೂ, ಸಾಲ ಬಗೆಹರಿಯುವಂತಿಲ್ಲ ಇಪ್ಪತ್ತನೆಯ ಶತಮಾನದಲ್ಲೂ ಅದರಲ್ಲೂ ಕಾಂಗ್ರೆಸ್ ಪ್ರಭುತ್ವದ ಈ ಕಾಲದಲ್ಲೂ ಹೀಗೆ ನಡೆಯುವದೆಂದರೆ ನಾಚಿಕೆಗೇಡು.

ಜಿಲ್ಲೆಯ ಕಾಂಗ್ರೆಸ್ ಶಾಸನ ಸಭ್ಯರು ಜಾಗೃತರಾಗಿ ಈ ಹರಿಜನರಿಗೆ ಪರಿಹಾರ ಕೊಡಿಸಬೇಕು.

ಹಿಂದೂಸ್ತಾನದಲ್ಲಿ ಕಣ್ಣಿನ ಚಿಕಿತ್ಸೆಗಾಗಿ ೧೦೦ ಕೇಂದ್ರಗಳನ್ನು ತೆರೆಯಲು ಡಾಲಮಿಯಾ ಸಂಸ್ಥೆಯವರು ತಿಂಗಳಿಗೆ ೨ ಸಾವಿರ ರೂ. ದ್ರವ್ಯ ಕೊಡಲೊಪ್ಪಿದ್ದಾರೆ.

ಮೊಹರಂದಲ್ಲಿ ಶಾಂತಿ ಇರಲಿ.

ಮದ್ರಾಸ್ ಪ್ರಾಂತದ ಮುಸ್ಲಿಂಲೀಗ್ ಅಧ್ಯಕ್ಷರಾದ ಜನಾಬ ಮಹಮ್ಮದ್ ಇಸ್ಮಾಯಿಲ್ ಸಾಹೇಬರು ಮೊಹರಂ ಹಬ್ಬವನ್ನು ಶಾಂತವಾಗಿ ಆಚರಿಸಬೇಕೆಂದು ಪ್ರಾಂತದ ಮುಸಲ್ಮಾನರನ್ನೆಲ್ಲಾ ಕೇಳಿಕೊಂಡಿರುವರು.

★★★★

ಹಿರೇಹಾಳು.

ಪ್ರಾಂತೀಯ ಹಿಂದೂಸ್ತಾನ ಸ್ವಾವುಟ ಕವಿಯೋಶನರಾದ ಶ್ರೀ ಡಿ. ವೇಣುಗೋಪಾಲಾಚಾರಿಯವರು ತಲೆಯ ದಿನಾಂಕ ಇಲ್ಲಿಗೆ ಬಂದು ಸ್ಥಾನಿಕ ಸ್ವಾವುಟ ಸಂಸ್ಥೆಗಾಗಿ ಶ್ರೀ ಶೆಟ್ರು ದೊಡ್ಡಪ್ಪನವರನ್ನು ಅಧ್ಯಕ್ಷರನ್ನಾಗಿಯೂ, ಗುರುಶಂಕರಭಟ್ಟ ಮ್ಯಾ. ಹನುಮಂತಪ್ಪನವರನ್ನು ಕಾರ್ಯದರ್ಶಿಗಳನ್ನಾಗಿಯೂ, ಸಿ. ಬಸಪ್ಪನವರನ್ನು ಕೋಶಾಧ್ಯಕ್ಷರನ್ನಾಗಿಯೂ ಮಾಡಿದರು.

ಗೌರೀಶಂಕರ ಕಾಫಿ ಮತ್ತು ಭೋಜನಾಲಯದ ಪ್ರಾರಂಭೋತ್ಸವವನ್ನು ಶ್ರೀ ಲಿಂಗಾರೆಡ್ಡಿಯವರು ನೆರವೇರಿಸಿ ಹಿಂದೂಮುಸಲ್ಮಾನರಲ್ಲಿ ಸೌಹಾರ್ದವನ್ನು ಮೂಡುವ ಈ ಕಾರ್ಯವನ್ನು ಪ್ರಶಂಶಿಸಿದರು.

ಶ್ರೀಧರಘಟ್ಟದಲ್ಲಿ ದತ್ತಜಯಂತಿ.

ರಾಯದುರ್ಗ ತಾಲೂಕು ಶ್ರೀಧರಘಟ್ಟದ ದತ್ತಾತ್ರೇಯ ಆಶ್ರಮದಲ್ಲಿ ೨ನೆಯ ತಾರೀ ಸೋಮವಾರದಿಂದ ೮ನೆಯ ತಾರೀ ಭಾನುವಾರದವರೆಗೆ ಕುಂಭಾಭಿಷೇಕ ಮಹಾಪೂಜೆ ವೇದಾಂತ ಶ್ರವಣ, ಕಾಜಕೀಯ, ಸಾಮಾಜಿಕ ಸುಧಾರಣೆಗೆ ಸಂಬಂಧಿಸಿದ ಧುರೀಣರ ಉಪನ್ಯಾಸಗಳು ನಡೆಯಲಿವೆ. ಬಳ್ಳಾರಿಯಿಂದ ಕಲೆಕ್ಟರವರು ಮತ್ತು ಇತರ ಮಹನೀಯರು ಆಗಮಿಸಲಿರುವರು ಭಕ್ತಶಿರೋಮಣಿಗಳೂ, ದೇಶ ಹಿತೈಷಿಗಳೂ, ಈ ಮಹೋತ್ಸವಕ್ಕೆ ಬರಲು ಶ್ರೀಸ್ವಾಮಿ ವೈರಾಗ್ಯನಂದಜಿಯವರು ಕೋರುತ್ತಾರೆ.

The Rayalaseema Bank Limited, Bellayr.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— (ಬಳ್ಳಾರಿಜಿಲ್ಲಾ **ಹಡಗಲಿ, ಕೂಡ್ಲಿಗೆ,** ಚಿತ್ತೂರುಜಿಲ್ಲಾ **ನಾಗರಿಯಲ್ಲಿ**
ನಮ್ಮ ಶಾಖೆಗಳನ್ನು ಪ್ರಾರಂಭಿಸಿದೆವೆಂದು ತಿಳಿಸಲು ಹರ್ಷಿಸುತ್ತೇವೆ.

ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಆಂಪ್ಲಿ, ಬಳ್ಳಾರಿ.
ಅನಂತಪುರ:- ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ.
ಚಿತ್ತೂರು:- ಚಿತ್ತೂರು, ಮದನಪಲ್ಲಿ, ತಿರುಪತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ. **ಕಡಪ:-** ರಾಜಂಪೇಟ

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:- 3%.

ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.

—ರಾಷ್ಟ್ರೀಯ ಪುಸ್ತಕಗಳು.—
—: ಕಾಂಗ್ರೆಸ್ ಸ್ವರೂಪ ದರ್ಶನ:—

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ-ನಿವಾರಣೆ	0-12—0
ಪ್ರಾಂತಭಾಷೆ- ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್‌ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ(ಇತಿಹಾಸ-ತಂತ್ರ)	3-8 -0

ವಿ. ಪಿ. ಖರ್ಚುಬೇರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ.—

ನವಭಾರತ, — ಕಾರ್ಯಾಲಯ ಬಳ್ಳಾರಿ.

ಹಿಂದೂಸ್ತಾನಿಯು ರಾಷ್ಟ್ರಭಾಷೆ
ಇದನ್ನು ತಪ್ಪದೆ ಕಲಿಯಿರಿ.

ಪ್ರಾರಂಭಿಕ ಪರೀಕ್ಷೆಗಳಾದ ಪ್ರಾಥಮಿಕ- ಮಧ್ಯಮ ರಾಷ್ಟ್ರಭಾಷೆ, ಉನ್ನತ ಪರೀಕ್ಷೆಗಳಾದ ಪ್ರವೇಶಿಕ, ವಿಶಾರದ- ಪ್ರಚಾರಕ, ಮದ್ರಾಸ್ ವಿಶ್ವವಿದ್ಯಾಲಯದ ಹಿಂದೀ- ವಿದ್ವಾನ್ ಪರೀಕ್ಷೆಗಳ ಮಾಹಿತಿಯನ್ನು ಉಚಿತವಾಗಿ ಕೊಟ್ಟು- ಶಿಕ್ಷಣದ ಏರ್ಪಾಟಿಗೆ ಸಲಹೆಗಳನ್ನು ಕೊಡಲಾಗುವುದು- ಎಲ್ಲಾಪುಸ್ತಕಗಳು ದೊರೆಯುತ್ತವೆ. **ಬಹಳ ಸುಲಭ ಭಾಷೆ-ಅತ್ಯಲ್ಪಕಾಲದಲ್ಲಿ ಕಲಿಯಬಹುದು. ಟಿ. ಬಿ. ಕೇಶವರಾವ್**

ಹಿಂದೀಪ್ರಚಾರಕ, ಬಳ್ಳಾರಿ

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To
SRI..... .....

Printed at Krishna Press Bellary QH NO. B 17 FOR (Q.H. NO. B-5)
Edited & Published by T. B. KESHA VARAO.

ಜೈಹಿಂದ್ Reg. No.M. 4746

ಸಂಚಾರಿ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೫ ಸಂಚಿಕೆ ೧೯ | ಬಳ್ಳಾರಿ ಡಿಶಂಬರು ೧೬ ಸೋಮವಾರ ೧೯೪೬ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವು.

ಇಂಗ್ಲೆಂಡಿನಲ್ಲಿ ಭಾರತದ ಚರ್ಚೆ.

ಲಂಡನ್ ಪಾರ್ಲಿಮೆಂಟದಲ್ಲಿ ಸ್ಟಾಫರ್ಡ ಕ್ರಿಪ್ಸ್ ರು ಭಾರತವನ್ನು ಕುರಿತು ಹೇಳಿಕೆ ಕೊಡುತ್ತ, ಹಿಂದು ಮುಸಲ್ಮಾನರಲ್ಲಿ ಒಪ್ಪಂದವಾಗಲೆಂದೂ, ಇಬ್ಬರಿಂದಲೂ ಘಟನೆಯು ತಯಾರಾಗಿ ಸರ್ವಮಾನ್ಯವಾಗಬೇಕೆಂದೂ ಬಯಸಿದರು—

ಕಾಂಗ್ರೆಸಿನವರಿಗೊಬ್ಬರಿಗೇ ಅಧಿಕಾರಸೂತ್ರಗಳನ್ನು ವಹಿಸಿದ ಕಾರಣ ಇಂಡಿಯಾದಲ್ಲಿ ಭಯಂಕರ ಗಡ್ಡಪಾತನಾಯ್ತೆಂದೂ, ಇದರ ಹೊಣೆಯು ಬ್ರಿಟಿಷ್ ಸರಕಾರದ ಮೇಲಿರುವುದೆಂದೂ ಕನ್ಸರ್ವೇಟಿವ ಪಕ್ಷದ ಮುಖಂಡರಾದ ಚರ್ಚಿಲರವರು ನುಡಿದರು—

ಮುಸ್ಲಿಂಲೀಗದ ಪ್ರತ್ಯಕ್ಷ ಹೋರಾಟದ ಪರಿಣಾಮದಿಂದ ಹಿಂದೂಸ್ತಾನದಲ್ಲಿ ಜಾತೀಯ ಜಗಳವಾಯಿತೆಂದು ಕ್ರಿಪ್ಸರು ಅಭಿಪ್ರಾಯಪಟ್ಟರು—

ನವ ಕರ್ನಾಟಕದ ದಿನ

ಘಟನಾ ಸಮಿತಿಯು ಪ್ರಾರಂಭವಾದ ೯ ತಾ॥ ಸದರಿ ಸಮಿತಿಗೆ ಯಶಸ್ಸುಕೋರುವ ಮತ್ತು ಗಡಿ ನಿರ್ಣಯ ಸಮಿತಿಯನ್ನು ಕೂಡಲೆ ಸ್ಥಾಪಿಸಬೇಕೆಂಬ ನಿರ್ಣಯಗಳು ಶ್ರೀ ಎನ್. ಎಲ್. ಗ್ಲಂಗಾವತಿಯವರ ಅಧ್ಯಕ್ಷತೆಯಲ್ಲಿ ತೀರ್ಮಾನಿಸಲಾದವು.

ಮುಂಡ್ಲೂರು ನರಸಿಂಹಪ್ಪನವರ ಸ್ಮಾರಕದ ವಿದ್ಯಾರ್ಥಿನಿಲಯ ಬಳ್ಳಾರಿ

ಇದರ ಶಂಕುಸ್ಥಾಪನೆಗೆ ಮದ್ರಾಸ್ ವಿದ್ಯಾಖಾತೆಯ ಮಂತ್ರಿಗಳಾದ ಶ್ರೀ ಟಿ. ಯಸ್ ಅವಿನಾಶಿಲಿಂಗಂರವರು ಬರಲಾಗದ ಕಾರಣ, ಬಳ್ಳಾರಿ ಜಿಲ್ಲಾ ಕಲೆಕ್ಟರ್‌ರವರಾದ ಶ್ರೀ ಕೆ. ಎನ್. ಅನಂತರಾಮನ್ ರವರು 14 ನೆಯ ತಾ॥ ಮುನಿಸಿಪಲ್ ಹೈಸ್ಕೂಲ್ ಗ್ರೌಂಡ್ಸ್‌ದಲ್ಲಿ ಈ ಸಮಾರಂಭವನ್ನು ನೆರವೇರಿಸಿದರು ಜಿಲ್ಲಾ ಜಡ್ಜರೂ, ಊರಿನ ಪ್ರಮುಖರನೇಕರು ಶ್ರೀ ಮುಂಡ್ಲೂರು ಗಂಗಪ್ಪನವರ ಔದಾರ್ಯವನ್ನು ಕೊಂಡಾಡಿ ಲಕ್ಷರೂಪಾಯಿಗಳ ಇಂಥಾ ಔದಾರ್ಯದ ಧಾರ್ಮಿಕ ಕಾರ್ಯದಿಂದ ಜಿಲ್ಲೆಯಲ್ಲಿನ ಇತರ ಶ್ರೀಮಂತರಿಗೆ ಮಾರ್ಗದರ್ಶಿಯಾಗಲೆಂದರು. ಅಲ್ಪೋಪಹಾರ, ವಂದನಾರ್ಪಣದಿಂದ ಸಮಾರಂಭವು ಮುಗಿಯಿತು.

ರೂಪಾಯಿಯ ಬೆಲೆಯು ೧ ಶಿಂಲಿಗ್ ೬ಪೆನ್ಸಿಗಳೇ ಇರಬೇಕೆಂದು ಹಿಂದೂಸ್ತಾನ ಸರಕಾರದವರು ನಿಶ್ಚಯಿಸಿರುತ್ತಾರೆ.

ಡಿಶಂಬರ್‌ನಲ್ಲಿ

ಪ್ರಕಟವಾಗಲಿದೆ.

ಸುಭಾಸ್

ರಾಷ್ಟ್ರ ಗೀತೆ

ಈ ಚಿಕ್ಕ ಪುಸ್ತಕದಲ್ಲಿ ಆಜಾದ್-ಹಿಂದ್ ಭಾರತ ರಾಷ್ಟ್ರೀಯ ಸೈನ್ಯದ (Indian National Army) ಕೂಚಿನ ಪದ, ರಣ ಗಾಯನಗಳಿವೆ.- 1930, 1932, 1942 ಸತ್ಯಾಗ್ರಹ ಪಳುವಳಿಗಳಲ್ಲಿ ಹಾಡಲ್ಪಟ್ಟ- ಪ್ರಭಾತ ಫೇರಿಗಳಲ್ಲಿ ಹಾಡಲು ಯೋಗ್ಯವಾದ ರಾಷ್ಟ್ರೀಯ ಗಾಯನಗಳ ಇಂಥಾ ವಿಪುಲ ಸಂಗ್ರಹವು ಇದುವರಿವಿಗೆ ಕರ್ನಾಟಕದಲ್ಲಿ ಎಲ್ಲಿಯೂ ಪ್ರಕಟವಾಗಿಲ್ಲ.

ಕಾಗದದ ಅಭಾವದಿಂದ ಸ್ವಲ್ಪೇ ಪ್ರತಿಗಳನ್ನು ಪ್ರಕಟಿಸುತ್ತಲಿದ್ದೇವೆ. ೧೨ ಪುಸ್ತಕಗಳಿಗೆ ಕಡಮೆ ಇಲ್ಲದೆ ತರಿಸಿಕೊಳ್ಳುವವರಿಗೆ ಟಪಾಲು ಖರ್ಚು ಮೂಫಿ-- ತ್ವರೆ ಮಾಡಿರಿ.

ಕ್ರೌನ್ ಸೈಜು— ಸುಂದರ ಮುದ್ರಣ— ಕ್ರಯ ೦—೮—೦

ನವಭಾರತ, ಕಾರ್ಯಾಲಯ, ಬಳ್ಳಾರಿ.

ಬ್ರಿಟಿಷ ಸರ್ಕಾರದ ಪ್ರಕಟನೆಯ ಸಾರಾಂಶ

ಹಿಂದೂಸ್ತಾನದ ರಾಜ್ಯಘಟಿಸುವಲ್ಲಿ ಎ ಬಿ. ಸಿ ಎಂದು ಮೂರು ಭಾಗಗಳನ್ನು ಮಾಡಿರುವುದು ಸರಿಯಷ್ಟೆ— ಈಗುಂಪುಗಳಲ್ಲಿನ ಘಟನಾ ಸಮಿತಿ ಸದಸ್ಯರ ಒಟ್ಟಿನ ಸಾಮಾನ್ಯ ಹೆಚ್ಚಿನ ಮತದಿಂದ ಗುಂಪುಗಳಿಗೆ ಸಂಬಂಧಿಸಿದ ರಾಜ್ಯ ಘಟನೆಯನ್ನು ನಿರ್ಣಯಿಸಬಹುದು. ಚುನಾವಣೆಯ ನಂತರ ಗುಂಪುಗಳೊಳಗಿನ ಪ್ರಾಂತಗಳು ಬೇಕಾದರೆ ಸದರಿ ಗುಂಪಿನಿಂದ ಪ್ರತ್ಯೇಕವಾಗಬಹುದು. ಯಾವ ಒಂದು ಪಕ್ಷವಾಗಲಿ ಬೇಕಿಲ್ಲದವರ ಮೇಲೆ ರಾಜ್ಯ ಘಟನೆಯನ್ನು ಹೇರಲು ಬರುವುದಿಲ್ಲ. ಮುಸ್ಲಿಂಲೀಗಿನ ಜಿನ್ನಾರು ಬಯಸಿದ್ದನ್ನೆ ಬ್ರಿಟಿಷ್ ಮಂತ್ರಿಮಂಡಲವು ಕೊಟ್ಟಿತು. ರಾಜ್ಯಘಟನೆಯ ಸಂಬಂಧದಲ್ಲಿ ಬ್ರಿಟಿಷ್ ಪ್ರಕಟನೆಯನ್ನು ಆಸಾಮುಜನರೂ ಸೀಖರೂ ತೀವ್ರವಾಗಿ ವಿರೋಧಿಸಿರುತ್ತಾರೆ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿ ತೀರ್ಮಾನವಾಗಿಲ್ಲ. ಮಹಾತ್ಮ ಗಾಂಧೀಯವರೊಡನೆ ವಿಚಾರ ವಿಮರ್ಶೆಮಾಡಬೇಕೆಂಬ ಇಚ್ಛೆ ಇದ್ದಂತೆ ವ್ಯಕ್ತ ಪಟ್ಟಿದೆ.

ಡಾ. ರಾಜೇಂದ್ರ ಪ್ರಸಾದ

ಘಟನಾಸಮಿತಿಯ ಅಧ್ಯಕ್ಷರಾದ ಡಾಕ್ಟರ್ ರಾಜೇಂದ್ರಪ್ರಸಾದರು ಪ್ರಾಸ್ತಾವಿಕ ಭಾಷಣಮಾಡುತ್ತ ಹೀಗೆ ಹೇಳಿದರು.

"ಕೆಲವುನಿರ್ಬಂಧಗಳಿಂದ ತಾವು ಕಾರ್ಯಭಾಗವನ್ನು ಸಾಗಿಸಬೇಕಾಗಿದೆ. ಆದರೂ ಇದಕ್ಕೆ ಸ್ವಯಂರಾಜ್ಯಾಧಿಕಾರ, ಈ ಸಮಿತಿಗಿದ್ದು ಪರರಕೈವಾಡವನ್ನು ಸಹಿಸಲಾರದು. ಈ ಸಭೆಯ ನಿರ್ಣಯಗಳನ್ನು ರದ್ದುಗೊಳಿಸಲು, ತಿದ್ದುಪಡಿಮಾಡಲು ಅಥವಾ ಸ್ಥಗಿತಮಾಡಲು ಹೊರಗಿನವರಿಗೆ ಅಧಿಕಾರವಿಲ್ಲವೆಂಬಂಶವನ್ನು ನಾನುಬಲ್ಲೆ. ಈ ಸಮಿತಿಗೆ ಹೇರಲಾದ ನಿರ್ಬಂಧಗಳನ್ನು ಕಿತ್ತೊಗೆದು ಸ್ವತಂತ್ರಭಾರತದ ರಾಜ್ಯಘಟನೆಯನ್ನು ರಚಿಸಬಲ್ಲ ಶಕ್ತಿಯು ನಿಮ್ಮೆಲ್ಲರಲ್ಲಿದೆ. ಮುಸ್ಲಿಂಲೀಗ್ ಸದಸ್ಯರು ಬರದಿರುವುದು ತೀರ ವಿಷಾದಕರವಾದುದು. ಅವರು ಶೀಘ್ರದಲ್ಲೇ ಬಂದು, ಈ ಮಹತ್ಕಾರ್ಯದಲ್ಲಿ ನೆರವಾಗುವರೆಂಬ ನಂಬಿಕೆ ಇದೆ. ನಾವು ಇಂಥಾ ಸ್ವಾತಂತ್ರ್ಯ ಪ್ರಾಪ್ತಿಮಾಡಿಗೌರವದಿಂದ ಬಾಳುವಂತಾಗಲಿ.

ಮಹಾತ್ಮ ಗಾಂಧಿ.

ಇನ್ನೂ ಒಂದುವಾರದೊಳಗಾಗಿ ಮಹಾತ್ಮ ಗಾಂಧಿಯವರು ಅನೇಕ ಕಷ್ಟಗಳನ್ನು ಸಹಿಸಿ, ತಮ್ಮ ಸಾಮಾನು ತಾವು ಹೊತ್ತುಕೊಂಡು ಊರಿಂದೂರಿಗೆ ಶಾಂತಿದೂತರಾಗಿ ಕಾಲ್ನಡಿಗೆಯಿಂದ ಪ್ರಯಾಣಮಾಡುವರು. ಸಾಯಂಕಾಲವೆಲ್ಲಾಗುವುದೋ ಅಲ್ಲಿಯೇ ಉಳಿದು ಪಾರ್ಥನೆಯನ್ನು ನೆರವೇರಿಸುವರು. ಚರಕಾವಲ್ಲದೆ, ಜೊತೆಯಲ್ಲಿ ಕೊರಾನು, ಬೈಬಲ್ ತೆಗೆದುಕೊಂಡು ಹೋಗುವರು–

ಭಾರತಕ್ಕೆ ಅಕ್ಕಿ.

ಸಯಾಮದಿಂದ ಭಾರತಕ್ಕೆ ಜೂನ್ ಮತ್ತು ಅಕ್ಟೋಬರ್ ತಿಂಗಳಲ್ಲಿ 8500 ಟನ್ನುಗಳ ಪ್ರಕಾರಕ್ಕೆ ಅಕ್ಕಿಯುಬಂದಿದೆ ಈ ತಿಂಗಳು ಮತ್ತೆ 8500 ಟನ್ ಅಕ್ಕಿ ಬರಲಿದೆ—

ಓರಿಸ್ಸಾ ಪ್ರಾಂತದವರು ನಿರ್ಯಾತಕ್ಕಾಗಿ ಕೊಟ್ಟ 7500 ಟನ್ ಅಕ್ಕಿಯಲ್ಲಿ 3000 ಟನ್ ಅಕ್ಕಿಯನ್ನು ಮದ್ರಾಸಿಗೆ ಕೊಟ್ಟಿರುವರು.

ಕೇಂದ್ರದಲ್ಲಿ ಸ್ಥಾಪಿತವಾಗಿರುವ ತಾತ್ಕಾಲಿಕ ಸರ್ಕಾರದ ಆರೋಗ್ಯ ಮಂತ್ರಿಗಳಾದ ರಾಜಾಗಜ್ನಫರ ಅಲಿಯವರು– ಸದಸ್ಯರಲ್ಲಿ ಭೇದಗಳಿಲ್ಲವೆಂದೂ, ಮಂತ್ರಿವರ್ಗವು ವಕ್ಕಟ್ಟಿನಿಂದ ಕೆಲಸಮಾಡುತ್ತಿರುವ್ಯದಂತಲೂ ಹೇಳಿದರು.

ಸಿಂಧಶಾಸನಸಭಾ ಚುನಾವಣೆಯಲ್ಲಿ ಲೀಗ್ ವಿರೋಧವಾಗಿ ನಿಂತಿದ್ದ ಜಿ. ಯಂ. ಸೈಯದ್‌ರು ಸೋತರು. ಲೀಗಿಗೆ ಬಹುಮತ ದೊರೆಯುವಂತಿದೆ.

ಬಳ್ಳಾರಿ ಜಿಲ್ಲಾ ಲಂಬಾಣಿ (ಸುಕಾಲಿ) ಜನರ ಸಭೆ.

ಬಳ್ಳಾರಿ ಜಿಲ್ಲಾ ಬಣಜಾರಸಂಘದ ಅಧ್ಯಕ್ಷರೂ ಕೊಟ್ಟೂರು ಗ್ರಾಮದ ನಲಾಳಿಗಳೂ ಆದ ಶ್ರೀ ಶಂಕರನಾಯ್ಕರ ಪ್ರೋತ್ಸಾಹದಿಂದ ಹಡಗಲಿ ತಾಲೂಕು ಕೋಡಿಹಳ್ಳಿಯಲ್ಲಿ 6-12-46 ರಲ್ಲಿ ಶ್ರೀ ನೀಲಕಂಠನ ಗೌಡ್ರ ತೋಟನಗೌಡರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದಿತು. ಬಟ್ಟೆಯ ಕೊರತೆಯಿಂದ ಲಂಬಾಣಿ ಸ್ತ್ರೀಯರಿಗೆ ಬಟ್ಟೆಯು ದೊರೆಯದೆ, ಹರಕು ಮತ್ತು ಚಿಂದೀಬಟ್ಟೆಗಳಲ್ಲಿ ಕಾಲಕಳೆಯುತ್ತಿರುವ ಅಂಶವೂ, ಸದ್ಯದಪರಿಸ್ಥಿತಿಯೂ, ಅಧ್ಯಕ್ಷರ ಬೋಧನೆಯೂ ಪರಿಣಾಮಕರವಾಗಿ ಸಭೆಯಲ್ಲೇ ಸುಮಾರು ೪೦ ಹೆಣ್ಣುಮಕ್ಕಳು- ಸೀರೆ- ಕುಪ್ಪಸ ಧಾರಣೆನುಮಾಡಿ ಹಿಂದೂ ನಾಗರಿಕ ಸ್ತ್ರೀಯರಲ್ಲಿ ಗಣ್ಯರಾದರು.

ಅರಣ್ಯವಾಸಿ ಲಂಬಾಣಿ, ಚಂಚೂ, ಕೋಯಾ, ಮುಂತಾದ ಜನರ ಸರ್ವವಿಧ ಏಳಿಗೆಗಾಗಿ ಒಂದು ಉಪಸಮಿತಿಯನ್ನು ಶ್ರೀ ವಿ. ರಾಘವಯ್ಯನವರ ಅಧ್ಯಕ್ಷತೆಯಲ್ಲಿ ನಿರ್ಮಿಸಿದುದಕ್ಕಾಗಿ ಮದ್ರಾಸ್ ಕಾಂಗ್ರೆಸ್ ಮಂತ್ರಿಮಂಡವನ್ನು ಅಭಿನಂದಿಸಲಾಯಿತು.

ಮದ್ರಾಸ್ ಪ್ರಾಂತ್ಯದಲ್ಲಿ ಅಡವಿವಾಸಿಗಳಾಗಿ ಹರಿಜನರಿಗಿಂತಲೂ ಹಿಂದುಳಿದಿರುವ ಸುಮಾರು ಅರ್ಧ ಕೋಟಿ (ಐದುಮಿಲಿಯ) ಲಂಬಾಣಿಗಳ ಉದ್ಧಾರದೃಷ್ಟಿಯಿಂದ ಸರ್ಕಾರಕ್ಕೂ ಸಮಿತಿಗೂ ಕೆಲ ಸಲಹೆಗಳನ್ನು ಕೊಡಬೇಕೆಂದಾಯಿತು- ಪಟ್ಟಣ, ಹಳ್ಳಿ ಪ್ರದೇಶಗಳಲ್ಲಿ ನಿವೇಶನ, ಮನೆಕಟ್ಟಿಸಿಕೊಳ್ಳಲು ಕಟ್ಟಿಗೆ, ಮರವದಗಿಸಿ, ಸಾಗುಮಾಡಲು ಸರ್ಕಾರದ ಭೂಮಿಯನ್ನು ಉಚಿತವಾಗಿ ಕೊಡಿಸಬೇಕು- ಪ್ರಾಥಮಿಕ ವಿದ್ಯಾಭ್ಯಾಸ, ಔದ್ಯೋಗಿಕ ಶಿಕ್ಷಣಕ್ಕೆ ಎಲ್ಲಾಯೋಗ್ಯ ಸ್ಥಳಗಳಲ್ಲಿ ಏರ್ಪಡಿಸಿ, ನಿರ್ಬಂಧ ವಿದ್ಯಾವಿಧಾನವನ್ನು ಜಾರಿಯಲ್ಲಿ ತಂದು, ಶಿಕ್ಷಣವನ್ನು ನಿಶ್ಶುಲ್ಕವನ್ನಾಗಿ ಮಾಡಿ ಬಡಹುಡುಗರಿಗೆ ಆಹಾರ, ಉಡುಪು, ಪುಸ್ತಕಗಳನ್ನೊಳಗೊಂಡ ವಸತಿ ಸೌಕರ್ಯವನ್ನು ಕಲ್ಪಿಸಬೇಕು- ಶುದ್ಧನೀರು ದೊರೆಯುವಂತೆ ಮಾಡಿ ಅಲ್ಲಲ್ಲಿ ಔಷಧ ಶಾಲೆಗಳನ್ನು ತೆಗೆಯಬೇಕು- ಈ ಜನರಲ್ಲಿ ರಾಜಕೀಯದ ಜಾಗೃತಿಮಾಡಲು- ಸ್ಥಾನಿಕ ಸಂಸ್ಥೆ ಮತ್ತು ಇತರ ಉಪಸಮಿತಿಗಳಲ್ಲಿ ಸ್ಥಳಗಳನ್ನು ಕಾದಿಟ್ಟು ಯೋಗ್ಯಜನರು ಆರಿಸಿಬರುವಂತೆ ಮಾಡಬೇಕು.

ಮದ್ರಾಸ್— ಬೊಂಬಾಯಿ, ಮೇಲಿಗೆ ತಡೆ.

ರೇಣಿಗುಂಟ ನಂದಲೂರು ಮಧ್ಯದಲ್ಲಿ ವಿಶೇಷ ಮಳೆಯಿಂದ ಮೂರ್ಗವು ಅನೇಕ ಕಡೆಗಳಲ್ಲಿ ಕೆಟ್ಟು ಮದ್ರಾಸ್- ಬೊಂಬಾಯಿ. ರೈಲುಗಾಡಿ ಓಡಾಟಕ್ಕೆ ತಡೆಯಾಗಿದೆ. ಮದ್ರಾಸಿಗೆ ಹೋಗುವ ಪ್ರಯಾಣೀಕರು ಬೆಂಗಳೂರಮೇಲೆ ಹೋಗಬೇಕಾಗಿದೆ. ಬಳ್ಳಾರಿ ಕಡೆ ಬರುವ ಟಪಾಲು ಕೂಡ ಒಂದು ದಿನ ತಡಮಾಡಿ ಬರುತ್ತಲಿದೆ. ರಿಪೇರಿಯಾಗಲು ೨-೩ ವಾರಗಳು ಹಿಡಿಯಬಹುದೆಂದು ರೈಲ್ವೆ ಅಧಿಕಾರಿಗಳು ಪ್ರಕಟಿಸಿದ್ದಾರೆ.

ಪಂಡಿತ ಮಾಳವೀಯರ ಸ್ಮಾರಕ

ಕಾಶಿ ನಾಗರಿ ಪ್ರಚಾರಿಣಿ ಸಭೆಯಲ್ಲಿ ದಿವಂಗತ ಮಾಲವೀಯರ ತಿಂಗಳ ಶ್ರಾದ್ಧದ ದಿನ ಸಾರ್ವಜನಿಕ ಸಭೆಸೇರಿ ಬನರಾಸ ದಂಡಿನ ಪ್ರದೇಶಕ್ಕೆ ಮಾಲವೀಯನಗರವೆಂದು ಹೆಸರಿಡಲು ಸೂಚಿಸಬೇಕೆಂದೂ, ದಶಾಶ್ವಮೇಧಘಾಟಿನಲ್ಲಿ ಅವರ ಪೂರ್ಣ ಪುತ್ಥಳಿ ನಿಲ್ಲಿಸಬೇಕೆಂದೂ ಅವರ ಭಾಷಣಗಳನ್ನು, ೨೦ ಗ್ರಂಥಗಳಲ್ಲಿ ಪ್ರಕಟಿಸಬೇಕೆಂದೂ ನಿಶ್ಚಯಿಸಲಾಯಿತು. ಈ ನಿಧಿಗಾಗಿ ೫೦ ಲಕ್ಷ ರೂ. ನಿಧಿ ಕೂಡಿಸಲು ಶ್ರೀ ಎ. ಎ. ಸಂದರಂರವರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ಅ. ಕ. ಏಕೀಕರಣದ ಬಗ್ಗೆ ಜರುಗಿದ ಕಾರ್ಯಕಲಾಪ

೧೧ ೧೨ ಳಟ ಭಾನುವಾರ

(ಅಧ್ಯಕ್ಷರು ಸಭಾ ಅವಧೂತರು)

ಭಾಷಣಕಾರರು ನ. ವಿರುಪಾಕ್ಷಯ್ಯ, ಜಿ. ಚಂದ್ರ - ಶೇಖರಪ್ಪ, ರಾಜಶೇಖರಯ್ಯ, ಮು. ವಿರುಪಾಕ್ಷಯ್ಯ

೨ ೧೨ ಳಟ ಅಧ್ಯಕ್ಷರು, ಶ್ರೀ ಗದುಗು ಶ್ರೀಪಿಪ್ಪ ಹನುಮೂವದೂತರು.

ಭಾಷಣಕಾರರು ವಿದ್ವಾನ್, ವೀರಭದ್ರಯ್ಯ— ಓಬಳ ಶಾಸ್ತ್ರಿಮುಂತಾದವರು

ರಾತ್ರಿ— ಮೈಸೂರು ಆಸ್ಥಾನ ವಿದ್ವಾನ್, ಶ್ರೀಯುಂಬ ಕ ಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಶ್ರೀ ಮಲ್ಲಬಾವಿ ವೀರಭದಪ್ಪನವರು, ಶ್ರೀ ಶಾಂತೇಶ ಪಟೇಲರು [ಶ್ರೀ ಪಂಪಾಚಲ ಚಿತ್ರಪಟ ಸಭೆಯ ಮುಖ್ಯಸ್ಥರು] ನೆನಸಿ ನಲ್ಲಿಡತಕ್ಕ ನಡೆಯಲ್ಲಿ ತರತಕ್ಕ ಮುಖ್ಯ ಗುರಿಯ ಭಾಷಣಗಳಾದುವು.

ದಿ. ೩ ೧೨ ಳಟ, ರಾಚಣ್ಣನವರು (C. ಕ. ಏಸಂ, ಕಾ. ಕಾ, ಮಂ, ಸದಸ್ಯರು) ಅಧ್ಯಕ್ಷತೆಯಲ್ಲಿ ಶ್ರೀ ವಿದ್ವಾನ್, ಚನ್ನಯ್ಯನವರು. ದಿ. ೪ ೧೨ ಳಟ ಶ್ರೀ ಬಿ. ಓಬಳ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಶಂಕರಗೌಡರ ಭಾಷಣ ಜರುಗಿತು.

ದಿ. ೫ ೧೨ ಳಟ, ಅಧ್ಯಕ್ಷರು, ಏ. ಕೆ. ಬಾಲಸುಂದರಂ.

ಭಾಷಣಕಾರರು, ಶಾಸ್ತ್ರಿಮಲ್ಲನಗೌಡರು, ಜೆ, ವೀರಣ್ಣ

ದಿ. ೬ ೧೨ ಳಟ ಅಧ್ಯಕ್ಷರು ಶ್ರೀ ಚಾ. ಸುಬ್ಬಣ್ಣನವರು.

ಭಾಷಣಕಾರರು, ಶಿ.ವೆ ದೇಶಾಯಿಗಳವರು,

ರಾತ್ರಿ ಅಧ್ಯಕ್ಷರು, ಪೂಜ್ಯ ಶ್ರೀ ಶಂಕರಭಟ್ಟರು.

ಗಮಕ ಮತ್ತು ವಾಚನ, ಶಿಡಿಗಿಸಮೂಳೆ ಚಂದ್ರಶೇಖರಯ್ಯನವರಿಂದ,

೭ ೧೨ ಳಟ ಅಧ್ಯಕ್ಷರು, ಶ್ರೀ ಪೂ, ಶಿವಪುತ್ರಸ್ವಾಮಿಗಳು,

ಭಾಷಣಕಾರರು, ಶ್ರೀ ಬ. ರಂಗನಗೌಡರು. ಶಿ. ವೆ. ದೇಶಾಯಿಯವರು, ನಂತರ ಓಬಳಿ ಶಾಸ್ತ್ರಿ. ಚಂದ್ರಶೇಖರಯ್ಯನವರಿಂದ ಗತ ವೈಭವದವರ್ಣನೆ ನಂತರ ಸ, ವಿರುಪಾಕ್ಷಯ್ಯನವರಿಂದ ಆಭಾರ ಮನ್ನಣೆ ನಡೆದು ಇಡೀ ಒಂದುವಾರ ಪ್ರಜಾರಕಾರ್ಯ ನಡೆಯಲಾಯಿತು. (ಬದಿನೆಹಾಳು ಕರ್ನಾಟಕ ಏ.ಸಂಘ)

ರಾಯದುರ್ಗ, ಆದವಾನಿ, ಆಲೂರು ತಾಲೂಕು.

—ಪ್ರದೇಶಗಳಲ್ಲಿ ಕನ್ನಡದ ವ್ಯವಹಾರ—

ಬದನೇಹಾಳು ಗ್ರಾಮ ಕರ್ನಾಟಕ ಏಕೀಕರಣ ಸಂಘದವರ ವಿನಂತಿಯ ಮೇರೆಗೆ ಕಲೆಕ್ಟರವರು ಈ ವಿಷಯವನ್ನು 27-9-46 ರದಿನ ಜಿಲ್ಲಾ ಪೀರಿಯಾಡಿಕಲ್ ಮೀಟಿಂಗ್‌ನಲ್ಲಿಟ್ಟು ಆಯಾತಾಲೂಕು ತಹಶೀಲ್ದಾರರ ಇಷ್ಟಕ್ಕೆ ಬಿಡಬೇಕೆಂದು ತೀರ್ಮಾನಿಸಿರುವರು. ಈ ನಿರ್ಣಯದ ನಕಲನ್ನು ಸದರೀ ಸಂಘದವರಿಗೆ ಕಳುಹಿಸಿರುತ್ತಾರೆ.

ಕುಂಚೂರು (ಹರಪನಹಳ್ಳಿ.)

ಕಾಂಗ್ರೆಸ್ ಕೆಲಸಗಾರರಾದ ಶ್ರೀ ಎನ್. ಸಿದ್ದಪ್ಪನವರು ಹೀಗೆ ಬರೆಯುತ್ತಾರೆ.

"ಕಳೆದ ೨೦ ದಿನಗಳಿಂದ ಡಿಪೋಮುಚ್ಚಿದಂತಿದೆ. ಅಕ್ಕಿ, ಜೀನಸಿ ಎಣ್ಣೆ ಕೋಟಾ ಬಂದಾಗ, ಕೊಡಬೇಕಾದ ಅರ್ಹರಿಗೆ ಕೊಡುತ್ತೇವೆನ್ನುತ್ತಾರೆ. ಜೋಳವನ್ನು ಊರಿಂದಲೇ ಸಂಗ್ರಹಿಸಿ ಮಾರಬೇಕಂತೆ. ಯಾರೂ ಜೋಳ ಕೊಡುವುದಿಲ್ಲ. ಹೀಗಾಗಿ ಬಡವರಿಗೂ, ಕೂಲಿಕಾರರಿಗೂ, ಮುಖ್ಯ ಆಹಾರ ಧಾನ್ಯವಾದ ಜೋಳವು ಸಿಗದೆ ಅತ್ಯಂತ ಸಂಕಷ್ಟ ಒದಗಿದೆ. ಪ್ರಜಾಹಿತವನ್ನೇ ಮುಖ್ಯ ಧ್ಯೇಯವಾಗಿಟ್ಟು ಕೊಂಡಿರುವ ಪ್ರಜಾ ಸರ್ಕಾರದ ಈ ಕಾಲದಲ್ಲೂ ಹೀಗಾಗಬೇಕೆ?

[We draw the attention of the Taluk Supply Officer Harpanahalli to this grievance and request him to redress the same expeditiously.

Editor Nava Bharat.

ಹಳ್ಳಿಗಳಲ್ಲಿ ಮಹಾತ್ಮರು.

ಸ್ನೇಹಿತ ಸೇವಾ ಸಂಘದ ಇಬ್ಬರು ಅಮೇರಿಕನ ಸದಸ್ಯರು ಳ ಕ್ಕೆ ಸಾಯಂಪ್ರಾರ್ಥನೆಯ ಪೂರ್ವದಲ್ಲಿ ಮಹಾತ್ಮರನ್ನು ಭೆಟ್ಟಿಯಾಗಿ ಪ್ರಾರ್ಥನೆಗೂ ಉಳಿದಿದ್ದರು. ಅವರಲ್ಲೊಬ್ಬರಾದ ಪ್ರೊಸ್ಪುವರ್ಟ ನೆಲ್ಸನರು ಐಜಾಕವಾಟನರ, "ನಮ್ಮ ದೇವ ಯುಗಯುಗಗಳ ರಕ್ಷಕ" ಎಂಬ ಆಂಗ್ಲ ಗೀತೆಯನ್ನು ಹಾಡಿದರು.

ಮಹಾತ್ಮರು ಜನರನ್ನುದ್ದೇಶಿಸಿ ಹೀಗೆಂದರು— ಪ್ರೊ. ನಲ್ಸನರು ವ್ಯಾರ್ಥನೆಯಲ್ಲಿ ಭಾಗವಹಿಸಿದ್ದರಿಂದ ನನಗೆ ಸಂತೋಷವಾಗಿದೆ. ಅಗಾಖಾನ ಅರಮನೆಯಲ್ಲಿ ನಾವು ಸ್ಥಾನಬದ್ದರಾಗಿದ್ದಾಗ ವೀರಾಬೇನರು ಈ ಆಂಗ್ಲ ಗೀತವನ್ನು ಇಂಪಾಗಿ ಹಾಡಿ ತೋರಿಸುತ್ತಿದ್ದರು. ಗಜೇಂದ್ರ ಮೋಕ್ಷ ಮತ್ತು ಈ ಗೀತದಲ್ಲಿ ಹೋಲಿಕೆ ಬಹಳವಾಗಿದೆ. ಲೌಕಿಕದ ನೆರವಿನ ಆಸೆ ತೀರಿದಮೇಲೆ ದೇವರನ್ನು ನಂಬುವ ಭಾವ ಈ ಎರಡೂ ಭಜನೆಗಳಲ್ಲಿದೆ. ಮಾನವಬಲವೆಲ್ಲ ಕ್ಷಣಿಕ. ದೇವರಲ್ಲಿ ಶ್ರದ್ಧೆಯಿಟ್ಟರೆ ನಿಜವಾದ ಸುರಕ್ಷಿತತೆ ಇದೆ.

'ನಿನ್ನ ಬೆಳ್ಗೊಡೆಯಾಸರದಿ ಬಾ
ಳಿದರು ಸಂತರು ಸೌಖ್ಯದಿ
ನಿನ್ನ ಭುಜಬಲದಾಶ್ರಯವಲೆಮ
ಗಿಹುದು ರಕ್ಷಣೆ ನಿತ್ಯದಿ.'

ನೌಖಾಲಿಯಲ್ಲಿಯ ಪ್ರತಿಯೊಬ್ಬರು ಈ ಪಾಠವನ್ನು ಕಲಿಯುವದಗತ್ಯವಾಗಿದೆಂದರು ಮಹಾತ್ಮರು

ಮಹಾತ್ಮರು ಹಳ್ಳಿಗಳಿಗೆ ಪಾದಚಾರಿಯಾಗಿ ಹೋಗುವ ತಮ್ಮ ಕಾರ್ಯಕ್ರಮವನ್ನು ಬೇಗನೆ ಪ್ರಾರಂಭಿಸುವವರಿದ್ದಾರೆ. ಈ ಸಂಚಾರದಲ್ಲಿ ಅವರು ತಮ್ಮೊಡನೆ ಅದಸ್ಪು ಕದಿಮೆ ವಸ್ತುಗಳನ್ನು ಕೊಂಡೊಯ್ಯತಕ್ಕವರಿದ್ದಾರೆ.

ಮಹಾತ್ಮರ ಶಿಬಿರದ ಕಾವಲಿಗಿದ್ದ ಪೋಲೀಸರ ಸಂಖ್ಯೆ ಹೆಚ್ಚಿದೆ. ಮಹಾತ್ಮರು ಕಲಕತ್ತೆಯಿಂದ ಬರುವಾಗ ನಾಲ್ವರು ಸಶಸ್ತ್ರ ಪೋಲೀಸರೂ ಒಬ್ಬ ಫೌಜದಾರರೂ ಅವರೊಡನೆ ಬಂದಿದ್ದರು. ಆದರೆ ಇಂದು ನೌಖಾಲಿಯಿಂದ ಮತ್ತೆ ೧೬ ಜನ ಸಶಸ್ತ್ರ ಪೋಲೀಸರು ಅಗಮಿಸಿದ್ದಾರೆ. ಪೋಲೀಸರು ಮಹಾತ್ಮರ ಮನೆಯ ಸಮೀಪದ ಮನೆಯಲ್ಲಿದ್ದಾರೆ.

ಮೂಗಳ ಮುಖ್ಯ ಬೇಡಿಕೆಗಳು.

ಈ ಗ್ರಾಮವು ೨೫೦೦ ಪ್ರಜಾಸಂಖೆಯುಳ್ಳದಾಗಿದ್ದು ಒಬ್ಬನೇ ಲೈಸನ್ಸದಾರನಿದ್ದು ಸಾಕಷ್ಟು ಬಟ್ಟೆ ಪೂರೈಕೆಯಾಗುವುದಿಲ್ಲ. ಸರಿಯಾದ ವ್ಯವಸ್ಥೆಯನ್ನು ಟೆಕ್ಸಟೈಲ್ ಡಿಪಾರ್ಟಮೆಂಟ್ ನವರು ಮಾಡಬೇಕು— ಬಾಲಕಿಯರ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವು ಸರಿಯಾಗಿ ನಡೆಯುವುದಿಲ್ಲ ಜಿಲ್ಲಾ ಬೋರ್ಡಿನವರು ತಕ್ಕ ಬದಲಾವಣೆ ಮಾಡಬೇಕು— ಎ ಬಿ. ಕ್ಲಾಸ್ ಆಹಾರ ಹಂಚುವಿಕೆಯ ಕ್ರಮವು ಪರಸ್ಪರ ವರ್ಗಗಳಲ್ಲಿ ಅಸೂಯೆಗೆ ಕಾರಣವಾಗಿದೆ. ಸರ್ವಸಮತ್ವದ ಈ ಕಾಲದಲ್ಲಿ ಹೀಗೆ ಮಾಡುವುದು ತಪ್ಪು ಈ ತೀರ್ಮಾನಗಳು ಶ್ರೀ ಚಿಂತಾಮಣಿ ದೇಶಾಯಿಯವರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಸ್ವೀಕೃತವಾದವು.

[ಸಭೆಗಳಲ್ಲಿ ತೀರ್ಮಾನಗಳನ್ನು ಮಾಡಿದರೆ ಕೆಲಸಮುಗಿಯಲಿಲ್ಲ. ಸಂಬಂಧಿಸಿದ ಇಲಾಖೆಗಳ ಮುಖ್ಯರಿಗೆ ತೀರ್ಮಾನಗಳ ನಕಲನ್ನು ಚಾಲಕರು ಕಳುಹಿಸಿ, ಅವರ ಉತ್ತರಗಳನ್ನು ನಿರೀಕ್ಷಿಸಬೇಕು. ಅವರು ಜವಾಬುಕೊಡದಿದ್ದರೆ ಮತ್ತೆ ಎಚ್ಚರಿಸಬೇಕು— ಸಂಪಾದಕ ನವಭಾರತ.]

ಅ. ಕ. ಏಕೀಕರಣ ಪ್ರಚಾರ ಕಾರ್ಯ

ನವಂಬರ್ ತಿಂಗಳಲ್ಲಿ ಅನಂತಪುರ ಜಿಲ್ಲಾ ಗುತ್ತಿ, ತಾಲೂಕಿನಲ್ಲಿ ೬ ಗ್ರಾಮ, ಕಲ್ಯಾಣದುರ್ಗ ತಾಲೂಕಿನಲ್ಲಿ ೮ ಗ್ರಾಮ, ಬಳ್ಳಾರಿ ತಾ॥ ನಲ್ಲಿ ೨ ಗ್ರಾಮ ರಾಯದುರ್ಗ ತಾ॥ ನಲ್ಲಿ ೫ ಗ್ರಾಮಗಳನ್ನೂ ಒಟ್ಟಿಗೆ ೨೧ ಗ್ರಾಮಗಳನ್ನು ಸಂದರ್ಶಿಸಿ ಪ್ರಚಾರ ಕಾರ್ಯ ಮಾಡಿ ೧೪ ಸದಸ್ಯರನ್ನು ಮಾಡಿದ್ದೇನೆ.

[ಶಿ. ವೆ. ದೇಶಾಯಿ.]

ಬ್ರಿಟಿಶ್ ಧೋರಣ.

ಪತ್ರಲೇಖಕನೊಬ್ಬನು ಕೆಳಗಿನ ಬರೆಹವನ್ನು ಕಳಿಸುತ್ತಾನೆ–

'ಸದ್ಯದ ಕೊನೆಯಿಲ್ಲದ ದೊಂಬಿಯ ಕಾರಣಗಳನ್ನು ತಿಳಿದುಕೊಳ್ಳುವುದಕ್ಕಾಗಿ, ಕಳೆದ ವಾರ ನಿಮ್ಮನ್ನು ಹೊಸದಿಲ್ಲಿಯಲ್ಲಿ ಕಂಡ ಪ್ರಮುಖ ಬ್ರಿಟಿಶ ದಿನಪತ್ರಿಕೆಯ ಸಂಚಾಲಕರು ಕೆಳಗೆ ಬರೆದುದನ್ನು ಅವಲೋಕಿಸುವದು ಉಚಿತವಾಗುವದು.

ವಾಯಿಸರಾಯ ದೊರೆಗಳು ತಮ್ಮ ಗುರು ಅಲೆಸ್ಬಿಯವರ ಮಾರ್ಗವನ್ನು ಶ್ರದ್ಧಾಪೂರ್ವಕ ಮತ್ತು ದೃಢವಾಗಿ ಅನುಸರಿಸುತಿರುವರು. ಅವಲೋಕನೆಗಾಗಿ ಅದನ್ನು ಕೆಳಗೆ ಉದ್ಧರಿಸುತ್ತೇನೆ.

" ಇಜಿಪ್ತದ ಜನರಿಗೆ ಸ್ವರಾಜ್ಯ ಕೊಡುವ ನಮ್ಮ ನಿಶ್ಚಿತ ಧೋರಣೆಯು ಸತ್ಯಪೂರ್ಣವಾಗಿದ್ದರೆ ಮತ್ತು ಅರ್ಥಪೂರ್ಣವಾಗಿದ್ದರೆ ಅದರಲ್ಲಿ ಕೈಹಾಕುವದು ಮತ್ತು ಏನಾದರೂ ಅಡಚಣೆ ಬಂದ ಕೂಡಲೆ ಎಲ್ಲವನ್ನೂ ಒಬ್ಬನೇ ತನ್ನ ಕೈಯಲ್ಲಿ ತೆಗೆದುಕೊಳ್ಳುವದು ನಿರರ್ಥಕ. ಮಂತ್ರಿಗಳಿಗೆ ಮತ್ತು ಅಧಿಕಾರಿಗಳಿಗೆ ಆಡಳಿತೆ ಸಾಗಿಸುವ ಅನುಭವ ಬರಬೇಕಾಗಿದ್ದರೆ, ಶಾಂತಿ ಸುವವಸ್ಥೆಯನ್ನು ಯೋಗ್ಯರೀತಿಯಿಂದ ಕಾಯ್ದುಕೊಳ್ಳಲು ಪೋಲೀಸರು ತರಬೇತಿಹೊಂದಬೇಕಿದ್ದರೆ, ಅವಶ್ಯಕ ಪ್ರಸಂಗದಲ್ಲಿ ತಮ್ಮ ಸರಕಾರಕ್ಕೆ ಇಜಿಪ್ತ ಸೈನ್ಯದ ಸಹಾಯ ಬೇಕಾಗಿದ್ದರೆ, ಅವರೆಲ್ಲ ತಮ್ಮ ಅಡಚಣೆಗಳನ್ನು ತಿಳಿದುಕೊಳ್ಳಬೇಕಲ್ಲದೆ ಎಲ್ಲವನ್ನೆದುರಿಸಲಿಕ್ಕೆಬೇಕು; ಗಂಡಾಂತರಗಳನ್ನು ಅವರೇ ನಿವಾರಿಸಿಕೊಳ್ಳಬೇಕು; ತದ್ವಿರುದ್ಧವಾಗಿ ಏನಾದರೂ ಗಂಡಾಂತರದ ಇಲ್ಲವೆ ಅಶಾಂತತೆಯ ಪರಿಸ್ಥಿತಿಯುಂಟಾದ ಕೂಡಲೆ ಬ್ರಿಟಿಶ್‌ರನ್ನು ಅವರು ಅವಲಂಬಿಸಕೂಡದು" (ವೇವೆಲ್ಲರು ಬರೆದ ಅಲೆನ್ಬಿ ಚರಿತ್ರೆ ಪುಟ ೪೯—೫೦)

ಇದರಲ್ಲಿ ಇಜಿಪ್ತದ ಜನರೆಂದಿದ್ದಲ್ಲಿ ಭಾರತೀಯರುಎಂದು ಓದತಕ್ಕದ್ದು. ಅನಂತರ ಮೇಲೆ ಬರೆದ ಧೋರಣಕ್ಕೆ ನಾವು ಮಹತ್ವಕೊಡಲಿಕ್ಕೆ ಬೇಕು. ಹೀಗಿದ್ದರೂ ಕಳೆದ ಎರಡುವಾರ ಅಧಿಕಾರಿಗಳು ಪರಿಸ್ಥಿತಿಯಲ್ಲಿ ಕೈಹಾಕಬೇಕೆಂಬ ಬಗ್ಗೆ ಎಷ್ಟೊಂದು ದಯಾಪೂರಿತ ಬಿನ್ನಹ ಮಾಡಿಕೊಳ್ಳಲ್ಪಟ್ಟಿತೆಂಬುದನ್ನು ನಾವು ನೋಡಿರುವೆವು. ಇದು ನಿಮ್ಮ ಮತವನ್ನು ಸಿದ್ಧಪಡಿಸುತ್ತದೆ. ಆದರೆ ಇದನ್ನು ಪರಿಪೂರ್ಣಗೊಳಿಸಬೇಕಾದರೆ ಮತ್ತು ವಿವಾದಗಳನ್ನೆಲ್ಲ ಒಮ್ಮೆ ನಿರುತ್ತರಗೊಳಿಸಿ ಬಿಡಬೇಕಾದರೆ, ಕೆಳಗಿನದನ್ನು ಅವಲೋಕಿಸುವದು ಪ್ರಯೋಜನಕರವಾಗಿದೆ.

" ೧೯೨೧ ನೆಯ ಇಸ್ವಿಯ ಮೇ ೨೦ ಕ್ಕೆ ತಮ್ಮ ತಾಯಿಗೆ ಬರೆದ ಪತ್ರದಲ್ಲಿ (ಕೆಲ ದೊಂಬಿಗಳು ಸಂಭವಿಸಿದ ನಂತರ) ಅಲನ್ಬಿಯವರು ಹೀಗೆ ಬರೆದರು" ಇಜಿಪ್ತ ಜನರು ತಮ್ಮ ರಾಜಕಾರಣವನ್ನು ತಾವೇ ಬಗೆಹರಿಸಿಕೊಳ್ಳಬೇಕೆಂದು ನನ್ನ ಮನೀಷೆ. ಇದ್ದುದರಿಂದ ನಾನು ಸಮಯ ಕಾಯುತಿರುವೆನು. ಯುರೋಪಿಯನ್ನರ ನಿತ್ತಜೀವಿತಗಳು, ಹಿತಸಂಬಂಧಗಳು ಗಂಡಾಂತರದಲ್ಲಿ ಬೀಳುವವರೆಗೆ ನನ್ನ ಸೈನಿಕರ ಕೈವಾಡ ನಡೆಸುವ ಇಚ್ಛೆ ನನಗೆ ಇಲ್ಲ. "

ಇದು ಸುಸ್ಪಷ್ಟವಿದೆ ಮತ್ತು ಎಲ್ಲರ ಮನವರಿಕ್ಕೆಯಾಗುವಂತಿದೆ. ನೀವು ಹಿಂದೊಮ್ಮೆ ಹೇಳಿದಂತೆ ಹಿಂದುಸ್ತಾನವನ್ನು 'ಪರಮಾತ್ಮನ ಕೈಯಲ್ಲಿ ಇಲ್ಲವೆ ಅವ್ಯವಸ್ಥಿತಿಯಲ್ಲಿ ಬಿಟ್ಟುಗೊಟ್ಟು ಹೊರಡಿರಿಂದು ತನ್ನ ಬಂಧುಬಳಗದವರಿಗೆ ಮತ್ತು ಪ್ರಭುತ್ವದವರಿಗೆ ಅರುಹಬೇಕೆಂದು ಈ ಪತ್ರಿಕಾಲೇಖಕಮಿತ್ರನಿಗೆ ಸಲಹೆ ಕೊಡಬೇಕೆಂದು ನಾನು ಆಸಿಸುತ್ತೇನೆ. ಇದೊಂದೇ ಬಿಕ್ಕಟ್ಟು ಬಿಡಿಸುವ ಮಾರ್ಗ. ಆದರೆ ದುರ್ದೈವದಿಂದ ಅವನ್ನು ಜಾರಿಯಲ್ಲಿ ತರುವದನ್ನು ಯಾವಾಗಲೂ ವಿಲಂಬಿಸಲಾಗುತಿದೆ. ಬ್ರಿಟಿಶ್ ಸೈನಿಕರು ಇನ್ನೂ ಇಜಿಪ್ತ ಬಿಟ್ಟುಹೊರಟಿರುವದಿಲ್ಲ. "

ಮಹಾತ್ಮ ಗಾಂಧಿ ಪ್ರಯಾಣ

"ಮಾಡಿರಿ ಇಲ್ಲವೆ ಮಡಿಯಿರಿ" ಸಂದೇಶ

ಸತ್ಯಾಗ್ರಹ ಮೂರ್ಗದಲ್ಲಿ ವಿರಾಮವೇ ಇಲ್ಲ. ಮಧ್ಯದಲ್ಲಿ ವಿಶ್ರಾಂತಿ ಸ್ಥಳವೇ ಇಲ್ಲ. ಯಾವಾಗಲೂ ಮುಂದೆ ಮುಂದೆ ಸಾಗತಕ್ಕದ್ದು; ಇಲ್ಲವೆ ಹಿಂದೆ ಸರಿಯತಕ್ಕದ್ದು. ನಾನು ಕಳೆದ ಹರಿಜನ ಸಂಚಿಕೆಯಲ್ಲಿ "ಶ್ರದ್ಧೆಯ ಸಾಹಸ" ವೆಂದು ವರ್ಣಿಸಿದ ನಿರ್ಧಾರವನ್ನು ಗಾಂಧೀಜಿಯವರು ದತ್ತಪಾರಾದಲ್ಲಿ ತೆಗೆದುಕೊಂಡರು. ಕೆಲ ಅತ್ಯಗತ್ಯದ ಕೆಲಸಕ್ಕೆಂದು ಒಂದು ದಿನ ಉಳಿದು ದತ್ತಪಾರಾದಿಂದ ನಾನು ಹೊರಟಿರುವಾಗ ಗಾಂಧೀಜಿ ಕಜಿರಖಿಲ್‌ಕ್ಕೆ ಸ್ಥಳಾಂತರಿಸಿದರು. ಅವರು ಆಗ ಮತ್ತೊಂದು ಹೆಜ್ಜೆ ಮುಂದಿಟ್ಟರೆಂದು ನನಗೆ ಕಂಡು ಬಂದಿತು. ಬಂಗಾಲ ಮಂತ್ರಿಮಂಡಳದವರಿಗೆ ಮೊನ್ನೆಯಿರುವ ಒಬ್ಬ ಸಭ್ಯ ಮುಸ್ಲಿಂಲೀಗಿನವನೊಬ್ಬ ತನ್ನ ಮನೆಯ ಪರಿವಾರದವನೆಂದು ನನ್ನನ್ನು ಕಾಣಬಯಸಿದರೆ ಮುಸಲ್ಮಾನನ ಮನೆಯಲ್ಲಿಯೇ ಇರಬೇಕೆಂದು ಅವರು ನಿರ್ಧರಿಸಿದರು. ೧೬ನೇ ದಿನಾಂಕ ನಾಗರಿಕ ಪೂರಯಿಕೆ ಶಾಖೆಯ ಮಂತ್ರಿಗಳಾದ ಗೋಫ್ರಾನ ಸಾಹೇಬರು ಅವರನ್ನು ಕಂಡಾಗ ಗಾಂಧೀಜಿ ಅವರೊಡನೆ ಈ ಬಗ್ಗೆ ಚರ್ಚೆಮಾಡಿದರು. ಯಾರಾದರೂ ಅಂಥ ಸಭ್ಯ ಮನುಷ್ಯರ ಪರಿಚಯ ಮಾಡಿಕೊಡುವಿರಾ ಎಂದು ಕೇಳಿದರು. ತಮ್ಮ ಪರಿವಾರದವರನ್ನೆಲ್ಲ ಬಿಟ್ಟುಗೊಟ್ಟು ಅವರ ಪರಿಚರ್ಯೆಯನ್ನು ಹೇಗೆ ಮಾಡಬೇಕೆಂಬುದನ್ನರಿಯದ ಜನರ ಮಧ್ಯದಲ್ಲಿ ಗಾಂಧೀಜಿ ಇವರನ್ನು ಕಂಡು ಸಾಹೇಬರಿಗೆ ಅತ್ಯಾಶ್ಚರ್ಯವೆನಿಸಿತು. "ನನ್ನ ಪರಿಚರ್ಯೆಯನ್ನು ನಾನೇ ನೋಡಿಕೊಳ್ಳುವೆ. ಎರಡನೆಯವರ ಸಹಾಯ ನನಗೇನು ಬೇಡ" ಎಂದು ಗಾಂಧೀಜಿ ವಾದಿಸಿದರು. ಮುಸಲ್ಮಾನರಾರೂ ನಿಮ್ಮನ್ನು ಸ್ವಾಗತಿಸಲು ಸಿದ್ಧರಾಗಲಾರರೆಂದು ನನಗೆ ಅಂಜಿಕೆಯಿದೆಂದು ನಾನು ಹೇಳಲೇಬೇಕಾಗಿದೆಂದು ಗೋಫ್ರಾನ ಸಾಹೇಬರು ನಗುತ್ತ ಉತ್ತರಿಸಿದರು. ಆದರೆ ಗಾಂಧೀಜಿಯವರನ್ನು ಇಷ್ಟು ಸುಲಭವಾಗಿ ಮನವೊಲಿಸುವುದು ಶಕ್ಯವಿಲ್ಲ. ಸಾಯಂಪ್ರಾರ್ಥನೆಯ ನಂತರ ಗಾಂಧೀಜಿ ಅದನ್ನು ವಿವರಿಸಿ ಹೇಳಿದರು. ನವಖಾಲಿಯಲ್ಲಿ ಮುಸ್ಲಿಮರ ಮಧ್ಯದಲ್ಲಿ ಅವರಿದ್ದರು. ಅವರಂದುದು. ಹಿಂದುಗಳ ಮಧ್ಯದಲ್ಲಿ ಇರುವ ವಿಚಾರ ನನಗೆ ರುಚಿಸದು. ಮುಸ್ಲಿಂಲೀಗಿನ ಮುಸಲ್ಮಾನನ ಸಂಗಡ ಇರಬೇಕೆಂದು ನನ್ನ ಇಚ್ಛೆ. ನನಗೆ ಬೇಕಾದ ವಸ್ತುಗಳು ಬಹಳ ಸ್ವಲ್ಪ. ನನಗೆ ಬೇಕಾದುದು ಸ್ವಚ್ಛತೆ, ಸ್ವಚ್ಛನೀರು, ಉಚಿತ ಆಹಾರ. ನನಗೆ ಸರಿಕಂಡ ರೀತಿಯಲ್ಲಿ ಪರಮಾತ್ಮನನ್ನು ಪ್ರಾರ್ಥಿಸುವ ಸ್ವಾತಂತ್ರ್ಯ" ಇಷ್ಟಾದರೆಸಾಕು. ಮುಸ್ಲಿಂಲೀಗಿನವರ ಮನೆಯಲ್ಲಿ ನಾನಿರುವೆನೆಂಬುದು ಹಿಂದುಗಳಿಗೆ ಗೊತ್ತಾದರೆ ಅವರ ಕಳೆದುಕೊಂಡ ವಿಶ್ವಾಸವನ್ನು ಮರಳಿ ಪಡೆದು ತಮ್ಮ ತಮ್ಮ ಮನೆಗಳಿಗೆ ಮರಳಿ ಬರಲು ಹೆಚ್ಚುಸಿದ್ಧರಾಗುವರೆಂದು ಗಾಂಧೀಜಿಯವರ ಆಸೆ. ಮುಸ್ಲಿಂಮಿತ್ರರು ನನ್ನನ್ನು ಹೆಚ್ಚು ಸಮೀಪದಿಂದ ಪರೀಕ್ಷಿಸಿ ತಿಳಿದುಕೊಳ್ಳುವ ಸಂಧಿ ದೊರೆಯುವದು. ನಾನು ಮಿತ್ರನೋ ಶತ್ರುವೋ ಎಂಬದನ್ನು ಕಂಡುಕೊಳ್ಳಲೂ ಅವರಿಗೆ ಅವಕಾಶ ದೊರೆಯುವದು.

ಮುಸಲ್ಮಾನ ಮಿತ್ರನೊಬ್ಬನು ತಮ್ಮನ್ನು ಸ್ವಾಗತಿಸಲು ಸಿದ್ಧನಾಗುವನರೆಗೆ ತಮ್ಮ ಹೊಸ "ಶ್ರದ್ಧೆಯ ಸಾಹಸ"ದ ಯೋಜನೆಯನ್ನು ಮುಂದಕ್ಕೆ ಹಾಕ್ದವದೂ ಅವರಿಗೆ ಬೇಕಾಗಿರಲಿಲ್ಲ. "ಆಗಾಖಾನ ಅರ

ಮನೆಯಲ್ಲಿ ನಾನು ಸ್ಥಾನಬದ್ಧತೆಯಲ್ಲಿದ್ದಾಗ, ಅಹಿಂಸೆಯನ್ನು ಪುರಸ್ಕರಿಸುತಿರುವ ಹಿಂದುಸ್ಥಾನದ ಬಗ್ಗೆ ಒಂದು ಪ್ರಬಂಧ ಬರೆಯಲು ಕುಳಿತೆ, ಎಂದು ಒಂದು ದಿನ ಗಾಂಧೀಜಿ ನುಡಿದರು. ಮುಂದುವರಿಯುತ್ತ "ಆದರೆ ನಾನು ಬರೆಯುತ್ತ ನಡೆದಂತೆ ಲೆಕ್ಕಣಿಕೆಯ ಮುಂದೆ ಸಾಗದಂತಾಯಿತು. ನಿಲ್ಲಬೇಕಾಯಿತು. ಹಿಂದು ಧರ್ಮದಲ್ಲಿ ಎರಡು ದರ್ಶನಗಳು ಇವೆ. ಅಸ್ಪೃಶ್ಯತೆಯನ್ನೊಳಗೊಂಡ ಐತಿಹಾಸಿಕ ಹಿಂದು ಧರ್ಮವೊಂದಿದೆ. ಅದರಲ್ಲಿ ಕಲ್ಲುಗುಂಡುಗಳ ಮೂಢ ಪೂಜೆ, ಪ್ರಾಣಿಬಲಿ ಮೊದಲಾದವುಗಳೆಲ್ಲ ಇವೆ. ಇದೊಂದು ಬಗೆ. ಎರಡನೆಯದಾಗಿ ಗೀತೆ, ಉಪನಿಷತ್ತು, ಪಾತಂಜಲಿ ಯೋಗ ಸೂತ್ರದಲ್ಲಿ ವಿವರಿಸಲ್ಪಟ್ಟ ಹಿಂದೂ ಧರ್ಮವಿದೆ. ಇದರಲ್ಲಿ ಅತ್ಯಂತಿಕ ಅಹಿಂಸೆ, ಪ್ರಾಣಿಮಾತ್ರರ ಐಕ್ಯನಿರಾಕಾರ ನಿರ್ಗುಣ, ಅವಿನಾಶಿಯಾದ ಪರಮಾತ್ಮನ ವಿಶುದ್ಧಪೂಜೆ, ಪ್ರತಿಪಾದಿತವಾಗಿವೆ. ಹಿಂದು ಧರ್ಮದ ಪರಮಶ್ರೇಷ್ಠ ಅಹಿಂಸೆಯು ಸನ್ಯಾಸಿಗಳಿಗೆ ಮಾತ್ರ ಸಂಬಂಧಿಸಿದ್ದೆಂದು ಹೇಳಿಬಿಡುವ ಜನರು ನಮ್ಮಲ್ಲಿರುವರು. ಆದರೆ ನನ್ನ ಅಭಿಪ್ರಾಯ ಹಾಗಿರುವದಿಲ್ಲ. ಅಹಿಂಸೆ ನಮ್ಮ ಜೀವನಪಂಥ. ಹಿಂದುಸ್ಥಾನ ಇದೀ ಜಗತ್ತಿಗೆ ದಾರಿ ತೋರಿಸಿಕೊಡಬೇಕಾಗಿದೆಂದು ನನ್ನ ಅಭಿಪ್ರಾಯ. ಆದರೆ ನನ್ನೀ ಅಹಿಂಸಾಶ್ರದ್ಧೆಯನ್ನು ನಾನು ಪ್ರತಿನಿಧಿಸುವೆನೋ? ಅದನ್ನು ವರೆಗೆ ಹಚ್ಚಿರುವೆನೋ? ನಾನು ಅದನ್ನು ವರೆಗೆ ಹಚ್ಚಿದರೆ ವಾತಾವರಣವನ್ನು ಕೆಡಿಸುತಿರುವ ಮೋಸ ಮತ್ತು ದ್ವೇಷಬೀಜವು ನಾಶವಾಗತಕ್ಕದ್ದು. ಈ ವರೆಗೆ ಯಾರ ಸಹಾಯವನ್ನು ನಾನು ಆಶ್ರಯಿಸಿದ್ದೆನೊ ಅಂಥ ನನ್ನ ಪರಿವಾರದವರನ್ನೆಲ್ಲ ಬಿಟ್ಟುಗೊಟ್ಟು ನಾನೊಬ್ಬನೆ ಹೋಗತಕ್ಕದ್ದು. ಏಕಾಕಿಯಾಗಿದ್ದುಕೊಂಡು ಪರಮಾತ್ಮನಲ್ಲಿದ್ದ ನನ್ನ ಅತ್ಯಂತಿಕ ಶ್ರದ್ಧೆಯನ್ನು ವರೆಗೆ ಹಚ್ಚಿತಕ್ಕದ್ದು. ಇದೊಂದೇ ಮಾರ್ಗವಿದೆ. ಸೇವಾಗ್ರಾಮ ಆಶ್ರಮದ ಜನರಿಗೆ ಅವರು ಬರೆದರು.

"ಆಶ್ರಮಕ್ಕೆ ನಾನು ಬೇಗ ಬರುವೆನೆಂಬ ಆಶೆಯನ್ನು ನೀವು ಬಿಡಲಿಕ್ಕೆ ಬೇಕಾಗುವದೆಂದು ನನಗೆ ಭೀತಿ. ಅಥವಾ ಬರಲಿಕ್ಕೆ ಇಲ್ಲೆಂದು ನೀವು ಭಾವಿಸಬೇಕು. ನನ್ನ ಸಂಗಡಿಗರಿಗೂ ಇದೇ ಅನ್ವಯಿಸುವದು ಭಗೀರಥ ಪ್ರಯತ್ನವು ನನ್ನನ್ನಿದುರಿಸುತಿದೆ. ನನ್ನ ಪರೀಕ್ಷಾಕಾಲವಿದು. ನಾನು ಪ್ರತಿಪಾದಿಸುತಿರುವ ಅಹಿಂಸೆ ಅಶಕ್ತರ ಅಸ್ತ್ರವೊ ಅಥವಾ ನಿಜವಾಗಿ ಸಶಕ್ತರ ಅಸ್ತ್ರವೋ? ಅದು ಸಶಕ್ತರ ಅಸ್ತ್ರವಾಗಿದೆಂಬುದನ್ನು ನಾನು ಕಂಡುಕೊಳ್ಳತಕ್ಕದ್ದು. ಇಲ್ಲವೆ ಅದನ್ನು ಸಂಪಾದಿಸುವಲ್ಲಿ ನಾನು ಜೀವನವನ್ನೇ ಮುಡುಪಾಗಿಡತಕ್ಕದ್ದು. ಇಲ್ಲವೆ ಅದನ್ನು ಸಂಪಾದಿಸುವಲ್ಲಿ ನಾನು ಜೀವನವನ್ನೇ ಮುಡುಪಾಗಿಡತಕ್ಕದ್ದು. ಇದೇ ನನ್ನ ಮಾರ್ಗ. ಅದರ ಶೋಧನೆಗಾಗಿ ಈ ವಿಧ್ವಸ್ತ ಹಳ್ಳಿಯಲ್ಲಿ ನನ್ನ ಸಮಾಧಿ ಕಟ್ಟಿಕೊಳ್ಳಲು ನಾನು ಬಂದಿರುವೆ. ಪರಮಾತ್ಮನ ಸಂಕಲ್ಪದಂತೆ ಆಗುವದು.

"೨೦ ನೇ ದಿನಾಂಕ ಗಾಂಧೀಜಿಯವರು ತಮ್ಮ ಲಘುಲೇಖಕ ಶ್ರೀ ಪರುಶರಾಮ ಮತ್ತು ಬಂಗಾಲಿ ದ್ವಿಭಾಷಿಗಳಾದ ಪ್ರೊ. ನಿರ್ಮಲಕುಮಾರಬೋಸ ಇವರೊಂದಿಗೆ ಕೋಲಂಬಸನಂತೆ ಅಂಧಕಾರಮಯವಾದ ಅಜ್ಞಾತವನ್ನೆದುರಿಸಲು ತಮ್ಮ ಸಾಜಿರಖಿಲ್ ಶಿಬಿರವನ್ನು ಬಿಟ್ಟು ಹೊರಟರು. ತಮ್ಮ ಸುತ್ತಲೂ ನೆರೆದ ಅಲ್ಪ ಜನಸಂದಣಿಯನ್ನು ಬೀಳ್ಕೊಡುವ ಮೊದಲು ಅವರ ಸಣ್ಣ ಪ್ರಾರ್ಥನೆ ಸಭೆ ನೆರೆಸಿದರು. ಆಗ ಅವರ ಪ್ರೀತಿಯ 'ವೈಷ್ಣವಜನತೋ' ತೇನೆ ಕಹಿಯೆ ಪದವನ್ನು ಹೇಳಲಾಯಿತು. ಅವರನ್ನು ಕರೆದುಕೊಂಡು ಶ್ರೀರಾಮಪುರದತ್ತ ಸಣ್ಣ ನಾವೆಯೊಂದು ಹೊರಟ ಕೂಡಲೆ ನೆರೆದವರ ಕಣ್ಣುಗಳಿಂದ ನೀರುದುರಹತ್ತಿದವು ಗದ್ಗದ ಕಂಠರಾಗಿ ಅವರ ಬಾಯಿಂದ ಹೆಚ್ಚಿನ ಮಾತುಗಳು ಹೊರಡದಂತಾದವು.

ಮಹಾತ್ಮರು ಹೊರಟ ಕೂಡಲೆ ಅವರ ಅನುಯಾಯಿಗಳು ಮೊದಲೆ ಗೊತ್ತುಪಡಿಸಿದ ಸ್ಥಳಗಳಿಗೆ ಒಬ್ಬೊಬ್ಬರಾಗಿ ಹೊರಟರು. ಮಹಾತ್ಮರು ಮತ್ತು

ಅವರ ಪರಿವಾರದವರು ಯಾವ ಯಾವ ಸ್ಥಳಗಳನ್ನು ಸಂದರ್ಶಿಸಿದರು. ಎಲ್ಲೆಲ್ಲಿರುವರು ಎಂಬ ಬಗ್ಗೆ ನಕ್ಷೆಯೊಂದನ್ನು ತೆಗೆಯಲಾಗಿದೆ.

ಶ್ರೀರಾಮಪುರದಲ್ಲಿ ಗಾಂಧೀಜಿ ವಾಸಿಸುವ ಗುಡಿಸಲು ಸುತ್ತಲೂ ವೈಭವಶಾಲಿ ಅಡಿಕೆ ಮತ್ತು ತೆಂಗಿನ ಮರಗಳಿಂದ ಯುಕ್ತವಾದ ಸ್ಥಳದಲ್ಲಿದೆ. ಸೂರ್ಯ ಪ್ರಕಾಶ ಅವುಗಳ ಮಧ್ಯದಿಂದ ಬೀಳುತ್ತದೆ, ಆ ಗುಡಿಸಲಿನ ಸುತ್ತಲೆಲ್ಲ ಕೊಳ್ಳಿಯಿಂದ ಸುಡಲ್ಪಟ್ಟ ಮತ್ತು ವಿಧ್ವಂಸಮಾಡಲ್ಪಟ್ಟ ಪ್ರದೇಶ ಅಸಹ್ಯ ದೃಶ್ಯ. ಅವರು ಬಿಸಿನೀರಿನ 'ಟಬ್' ಸ್ನಾನವನ್ನು ಬಿಟ್ಟಿರುವರು ಮತ್ತು ಮೊದಲಿನ ಎರಡುದಿನ ತಮ್ಮ ಮೈಯನ್ನು ತಾವೆ ಉಜ್ಜಿಕೊಳ್ಳುತ್ತಿದ್ದರು. ಅವರು ಬಂದಂದಿನಿಂದ ಶಮಸುದ್ದೀನ ಸಾಹೇಬ ಮತ್ತು ಉಳಿದವರೊಡನೆ ಮೂರು ಕತ್ತೆ ನಡೆದಿವೆ. ರಾಮಗಂಜದಲ್ಲಿ ರಾಮಗಂಜದ ಹಿಂದು ಮುಸಲ್ಮಾನ ಸುಮಾರು ೪೦ ಜನ ಪ್ರತಿನಿಧಿಗಳೊಡನೆಯೆ ಚರ್ಚೆ ನಡೆಸಿದರು. ತತ್ಪರಿಣಾಮವಾಗಿ ಅವರು ಶಾಂತಿ ಮತ್ತು ಜಾತೀಯ ಸೌಹಾರ್ದ ಸ್ಥಾಪನೆಗಾಗಿ ಒಂದು ಯೋಜನೆಯನ್ನು ಮಾಡಿರುವರು. ಅದನ್ನು ಕಾರ್ಯಕಾರೀ ಮಾಡಲು ಮಂತ್ರಿಗಳ ವಚನ ತೆಗೆದುಕೊಂಡರು. ನವಂಬರ್ ೨೩ ಕ್ಕೆ ಜಾಂದಪುರದಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಸಾರ್ವಜನಿಕರ ಮುಂದೆ ಆ ಯೋಜನೆಯನ್ನಿಡಲಾಯಿತು. ಈ ಸಭೆಯ ಅಧಿಕೃತ ವರದಿಯನ್ನು ಬೇರೆ ಕಡೆ ಪ್ರಸಿದ್ಧಿಸಿದೆ.

ಗಾಂಧೀಜಿ ಸಭೆಯ ಕೊನೆಯಲ್ಲಿ ಒಳ್ಳೆ ಅರ್ಥಪೂರ್ಣ ಭಾಷಣ ಮಾಡಿದರು. 'ಪ್ರಾಂತದ ಅಡಳಿತವನ್ನು ಸಾಗಿಸುತ್ತಿರುವ ಸರಕಾರದ ಆರಿಸಲ್ಪಟ್ಟ ಮುಸಲ್ಮಾನ ಪ್ರತಿನಿಧಿಗಳು ಇಲ್ಲಿರುಶರು. ಅವರು ನಿಮಗೆ ವಚನವನ್ನು ಕೊಟ್ಟಿರುವರು. ನಾಚಿಕೆಗೇಡಾದ ಕೃತ್ಯಗಳ ಪುನರಾವರ್ತಿಯಾಗುವದನ್ನು ಅವರು ಮೌನದಿಂದ ನೋಡುತ್ತ ಕೂಡಲಾರರು. ಅವರ ಮಾತನ್ನು ನಂಬಿ ಅದನ್ನು ವರೆಗೆ ಹಚ್ಚಬೇಕೆಂದು ನಾನು ಹಿಂದುಗಳಿಗೆ ಬಿನ್ನವಿಸಿಕೊಳ್ಳುತ್ತೇನೆ. ಪೂರ್ವ ಬಂಗಾಲದಲ್ಲಿ ಒಬ್ಬನಾದರೂ ಕೆಟ್ಟ ಮುಸಲ್ಮಾನನಿರಲಿಕ್ಕಿಲ್ಲೆಂದು ಇದರ ಅರ್ಥವಲ್ಲ. ಎಲ್ಲ ಜಾತಿಗಳಲ್ಲಿಯೂ ಸಭ್ಯ ಮತ್ತು ಅಸಭ್ಯ ಜನರಿರುವರು. ಅಯೋಗ್ಯ ರೀತಿಯಿಂದ ಅಡಳಿತ ಸಾಗಿಸಿದರೆ ಎಂಥ ಮಂತ್ರಿ ಮಂಡಳ ಇಲ್ಲವೆ ಸಂಸ್ಥೆ ಕೊನೆಯಲ್ಲಿ ವಿನಾಶಗೊಳ್ಳುವದು.

"ನಿಮಗೆ ನಿಜವಾದ ಶಾಂತಿ ಬೇಕಾಗಿದ್ದರೆ ಪರಸ್ಪರರಲ್ಲಿ ವಿಶ್ವಾಸ ಮತ್ತು ಪ್ರೇಮದ ಹೊರತು ಅನ್ಯ ಮಾರ್ಗವಿಲ್ಲ. ನೌಖಾಲಿಯ ಸೇಡು ಬಿಹಾರ ತೀರಿಸಿಕೊಂಡಿತೆಂದು ಹೇಳುತ್ತಿರುವರು. ಪೂರ್ವ ಬಂಗಾಲದ ಮುಸಲ್ಮಾನರು ಅಥವಾ ಇಡೀ ಹಿಂದುಸ್ತಾನದಲ್ಲಿಯ ಮುಸಲ್ಮಾನರು ಬಿಹಾರದ ಸೇಡು ತೀರಿಸಿಕೊಳ್ಳಲು ಉದ್ಯುಕ್ತರಾದರೆ ಹಿಂದುಸ್ತಾನದ ಪರಿಸ್ಥಿತಿ ಏನಾಗಬಲ್ಲದು? ತೀರ ಕೆಟ್ಟಕೃತ್ಯ ಸಂಭವಿಸಿತೆಂದು ತಿಳಿದರೂ ಆಗುವುದೇನು? ನೀವು ನಿಮ್ಮ ಪ್ರಾಣಕ್ಕೆರವಾಗಬೇಕಾಗುವದು. ಆದರೆ ಶೂರರಂತೆ ನೀವು ಮರಣವನ್ನು ಅಪ್ಪಿಕೊಳ್ಳಬೇಕು."

"ಶಮಸುದ್ದೀನ ಸಾಹೇಬರು ಮತ್ತು ಅವರ ಸಂಗಡಿಗರು ತಾವಾಡಿದಂತೆ ನಡೆಯಲು ಸಿದ್ದರಾಗದಿದ್ದರೆ ನಿಮಗೆ ಅದು ಗೊತ್ತಾಗುವದು. ಆದರೆ ಇಂಥ ದುರಂತವನ್ನು ನೋಡುವ ಮೊದಲು ನನ್ನ ಕಣ್ಣುಗಳು ಮುಚ್ಚಲೆಂದು ಬಯಸುತ್ತೇನೆ."

ಶ್ರೀ ರಾಮಪುರ ಪ್ಯಾರೆಲಾಲ

ಅವರ ಕೀರ್ತಿ ಆಚಂದ್ರಾರ್ಕ

ಆಗಸ್ಟ್ ೧೭, ೧೯೪೬ ನೇ ದಿನ ಮುಂಜಾನೆ ಅಲಿಪುರದ ಹಿಂದೂ ಜಿಲ್ಲಾ ಜಜ್ಜನು ಚಹಾ ತೆಗೆದುಕೊಳ್ಳುವ ಮೊದಲು ದೈನಿಕ ಪತ್ರಿಕೆಯನ್ನೋದಲು ಬಯಸಿ ಕಾಯುತಿದ್ದಂತೆ ಚಹಾದ ಕರೆ ಬಂತು.

"ಪತ್ರಿಕೆ ಮಾರುವ ಹುಡುಗ ಇನ್ನೂ ಏಕೆಬಂದಿಲ್ಲವೋ ಅನ್ನುತೇನೆ" ಎಂದು ಕೇಳಿದನವನು.

"ಇಂದು ಪತ್ರಿಕೆಗಳು ಹೊರಡುವದಿಲ್ಲ ಅಧಿಕಾರದಲ್ಲಿರುವ ಮುಸ್ಲಿಂ ಲೀಗ್ ಮಂತ್ರಿಮಂಡಲ ನಿನ್ನೆ ಸಾರ್ವಜನಿಕ ರಜಾದಿನವೆಂದು ಸಾರಿದೆ. ಮುಸ್ಲಿಂಲೀಗು ಹರತಾಳ ಮಾಡಿರೆಂದು ಆಜ್ಞಾಪಿಸಿತ್ತು."

ತಮ್ಮಿಸುತ್ತ ಏಳಲಿರುವ ಉತ್ಪಾತದ ಗಂಧವನ್ನೆ ಅರಿಯದ ಆ ನ್ಯಾಯಧೀಶನು ಭೋಜನ ಶಾಲೆಗೆ ಹೋಗಿ ಚಹಾ ತಗೆದುಕೊಳ್ಳುತಿದ್ದಂತೆ ಹತ್ತಿರದಲ್ಲೆ ವಾಸಿಸುತಿದ್ದ ಅವರ ಅಡಿಗೆಯ ಮನೆಯ ಬಳಿ ಪ್ರಚಂಡ ತುಮುಲ ಗರ್ಜನೆಗಳ ಧ್ವನಿಕೇಳಿಸಿತು.

ಚಹಾವನ್ನು ಹಾಗೆಯೆ ಬಿಟ್ಟು ಅತಿ ಅವಸರದಿಂದ ನ್ಯಾಯಾಧೀಶನು ಗದ್ದಲದ ಸ್ಥಳವನ್ನು ಸೇರಿದನು. ಅಲ್ಲಿ ಅವನ ಅಡಿಗೆಯವನ ನೆರೆಮನೆಯಲ್ಲಿರುತ್ತಿದ್ದ ಒಬ್ಬ ಮುಸ್ಲಿಂ ಅಗಸನ ಮನೆಯ ಮೆಲೇರಿಬಂದು ಹಿಂದೂ ಜನಜಂಗುಳಿಯೊಂದು ಹೆಚ್ಚುಕಡಿಮೆ ಅವನ ಇಡಿ ಕುಟುಂಬವನ್ನೇ ಹೆಸರಿಳಿಸಿಬಿಟ್ಟಿತು. ಆದರೆ ಐದು ವರ್ಷದ ಚಿಕ್ಕ ಹುಡುಗನೊಬ್ಬ ಹೇಗೋ ಕಣ್ಣು ತಪ್ಪಿಸಿಕೊಂಡು "ತ್ರಾಹಿ ತ್ರಾಹಿ' ಎಂದು ಅರಚುತ್ತ ಓಡುತ್ತಿದ್ದ.

ತನ್ನ ಮುಂದೆ ಆ ನ್ಯಾಯಾಧೀಶ ನಿಂತಿದ್ದನ್ನು ನೋಡಿ ಆ ಹುಡುಗ ಎರಡೂ ಕೈಗಳನ್ನು ತೆರೆದು ಭಯದಿಂದ ತಾಯಿಯ ಸೆರಗಿನಿಂದೆಂಬಂತೆ ತನ್ನ ಧೋತರದ ನೆಗಿಗಳಿಂದ ಮುಖವನ್ನು ಮುಚ್ಚಿಕೊಂಡು ಅವನ ಕಡೆ ಧಾವಿಸಿ ಬಂದನು. ನ್ಯಾಯಾಧೀಶನು ಅವನನ್ನು ತೆರೆ ಕೈಯಿಂದ ಬರಮಾಡಿಕೊಂಡು, ಸಮಾಧಾನಗೊಳಿಸಲೆತ್ನಿಸುತ್ತ' "ಬಾ ಮಗು, ನಿನ್ನೆ ಮೇಲೆ ಕೈಯೆತ್ತುವ ಧೈರ್ಯ ಯಾರಿಗೂ ಬಾರದು" ಎಂದನು.

ಹುಡುಗನು ಕಾತರತೆಯಿಂದ ಅಳುತ್ತಿದ್ದನು. ನ್ಯಾಯಾಧೀಶನ ಕಣ್ಣುಗಳೂ ನೀರು ತುಂಬಿದವು ಅದನ್ನವನು ಇನ್ನೂ ಒರಸಿಕೊಳ್ಳುತ್ತಿದ್ದನಷ್ಟೇ ಅಷ್ಟರಲ್ಲಿ ಅತ್ಯಘಾತಕ ಉನ್ಮಾದದಿಂದ ಮತ್ತವಾಗಿದ್ದ ಆ ರಕ್ತ ಪಿಪಾಸು ಜನಜಂಗುಳಿ ಬಂದು ಅವನನ್ನು ಸುತ್ತುವರಿಯಿತು. "ದಯವಿಟ್ಟು ಆ ಹುಡುಗನನ್ನು ಬಿಟ್ಟುಕೊಡಿರಿ. ಅವನು ಮುಸಲ್ಮಾನ. ಅವನನ್ನು ಕೊಂದಲ್ಲದೆ ನನಗೆ ಸಮಾಧಾನವಿಲ್ಲ," ಎಂದು ನುಡಿದರು ಆ ಕೊಲೆಗಡಕರು.

"ಅಗದು. ನಾ ಬದುಕಿರುವಷ್ಟು ಹೊತ್ತು ಇವನನ್ನು ಬಿಟ್ಟುಕೊಡಲಾರೆ. ಈ ನಿರಪರಾಧಿ ಹುಡುಗನನ್ನು ಕೊಲ್ಲುವದರಿಂದ ನಿಮಗೇನು ಲಾಭ?"

"ಆದರೆ ಅವನು ಮುಸ್ಲಿಂಮನೆಂದು ನಿಮಗೆ ಗೊತ್ತೆ?"

"ಹೌದು, ಅದರಿಂದೇನು? ಅವನು ಯಾವಹಿಂದುವನ್ನೂ ಕೊಂದಿಲ್ಲವಷ್ಟೇ!"

"ನಿಮ್ಮ ವಾದವನ್ನು ಕೇಳಲು ನಮಗೆ ಸಮಯವಿಲ್ಲ. ಅವನನ್ನು ಇತ್ತ ಕೊಡಿರಿ."

"ಕೊಡಲಾರೆ. ಅವನು ನನ್ನ ಸಾಕುಮಗ."

"ಅವನನ್ನೊಪ್ಪಿಸಿರಿ. ಇಲ್ಲದಿದ್ದರೆ ನೀವೂ ವ್ಯರ್ಥವಾಗಿ ಪ್ರಾಣ ಕಳೆದುಕೊಳ್ಳುವಿರಿ."

"ಬೇಕಾದ್ದಾಗಲಿ. ಬೇಕಾದರೆ ನನ್ನನ್ನು ಕೊಲ್ಲಿರಿ, ಆದರೆ ನನ್ನ ದೇಹದಲ್ಲಿ ಉಸಿರು ಇರುವವರೆಗೆ ನೀವು ಅವನ ಮೇಲೆ ಕೈಯಿತ್ತಲಾರಿರಿ."

ಹಾಗೆಯೆ ಆಗಲಿ. ನಾವು ನಿಮ್ಮಿಬ್ಬರನ್ನೂ ಕೊಲ್ಲಬೇಕಾಗುವದು."

ಆ ಜನಜಂಗುಳಿ ಮೊದಲು ತಂದೆಯನ್ನು ಕೊಂದು ಬಳಿಕ ಮಗನನ್ನು ಕೊಂದಿತು. ಆ ಮೇಲೆ ಹೊಸ ಕೊಳ್ಳೆಯನ್ನರಸುತ್ತ ವೈಶಾಚಿಕ ಕ್ರೋಧದೊಡನೆ ಹೊರಟು ಹೋಯಿತು.

ಆರ್ತರಿಗೆ ತನ್ನೊಡಲೊಳಾಶ್ರಯವನೀವವನೆ
ನಿಜ ಮಾನವ.
ಅವನಲ್ಲಿ ಸಮುದಾರ ಸಾನ್ನಿಧ್ಯವಿರಿಸುವನು
ಪ್ರಭು ರಾಘವ

[ಹರಿಜನ ಪತ್ರಿಕೆಯಿಂದ]

ಹಿರೆಹೆಗಡಾಳು (ಕೂಡ್ಲಿಗೆ.)

ರೈತ ಸಭೆಯ ನಿರ್ಣಯಗಳು:

ಶ್ರೀ ಯಂ. ಚನ್ನಬಸಯ್ಯನವರ ಅಧ್ಯಕ್ಷತೆಯಲ್ಲಿ ೧೯ನೆಯ ಭಾನುವಾರ ಗ್ರಾಮಸಮಿತಿ ಸಭೆಯು ಸೇರಿ ಕೆಲಮುಖ್ಯ ತೀರ್ಮಾನಗಳಾದವು.

ಪಂಡಿತ ಮಾಳವೀಯ, ಶ್ರೀ ಟಿ ಪಿ. ಕೈಲಾಸಂರವರ ನಿಧನಕ್ಕಾಗಿ ದುಃಖ ಸೂಚಕ ನಿರ್ಣಯಗಳಾದವು. ಬಂಗಾಳ ಬೀಹಾರ ದುರಂತವು ಖಂಡಿಸಲ್ಪಟ್ಟಿತು. ಮದ್ರಾಸ್ ಸರ್ಕಾರದ ಬಟ್ಟೆಯು ಸೀದಾ ಅತೃಪ್ತಿಕರವಿದ್ದು ಶಿವಪುರದಲ್ಲಿ 10ನೆಯ ತಾ. ತೀರ್ಮಾನಿಸಿದಂತೆ ಕೊಡತಕ್ಕದ್ದು ನ್ಯಾಯವೆಂದು ಸೂಚಿತವಾಯಿತು. ಚಿವ್ವಿ ಒಣ್ಣೆ. ಅಕ್ಕಿ, ಸಕ್ಕರೆ, ಪಟ್ಟಣಗಳಂತೆ ಎಲ್ಲಾ ಹಳ್ಳಿಗಳಲ್ಲೂ ಕೊಡಬೇಕೆಂದು ಕೇಳಿಕೊಳ್ಳಲಾಯಿತು. ಗ್ರಾಮಸಮಿತಿಯವರಿಗೆ ಕಾಳಿನ ಸಂಗ್ರಹ ಹಂಚುವಿಕೆಯ ಭಾಧ್ಯತೆ ಇರಬೇಕು. ಬಳ್ಳಾರಿ ಸೆಂಟ್ರಲ್ ಸ್ಟೋರ್ಸದವರು ಕೂಡ್ಲಿಗಿಯಲ್ಲಿ ತಮ್ಮ ಶಾಖೆಯನ್ನು ಪ್ರಾರಂಭಿಸಿ ಕೂಡ್ಲಿಗೆಯಲ್ಲಿನ ಅನ್ಯವಸ್ತೆಯನ್ನು ತಪ್ಪಿಸಬೇಕು. ಪ್ರತಿಗ್ರಾಮದಲ್ಲಿ ಸೀದಾ ಜಾರಿಯಲ್ಲಿ ತರಬೇಕು. ರೈತರಿಗೆ ಬೇಕಾದ ವ್ಯವಸಾಯ ಉಪಕರಣಗಳ 'ಕೋಟಾ' ಹೆಚ್ಚಿಸಬೇಕು ಜಿಲ್ಲಾ ಬೋರ್ಡಿನವರು ಗ್ರಾಮ ಸಮಿತಿಯ ಮೇಲೆ ಹೇರಿದ ಉದ್ಯೋಗವನ್ನು ರದ್ದುಮಾಡಬೇಕು ರೈತರಿಗೆ ಕೊಡುವ ಕಾಳಿನ ಪ್ರಮಾಣ ಸಾಲುವುದಿಲ್ಲ' ಹೆಚ್ಚಿಸಬೇಕು. ಗ್ರಾಮಸಮಿತಿಗಳ ಟಪ್ಪಾಲು ಆಯಾತ ನಿರ್ಯಾತಕ್ಕೆ ಸರಿಯಾದ ಏರ್ಪಾಟಾಗಬೇಕು.

ಕುಡುತಿನಿ

ರೆವಿನ್ಯೂ ಡಿವಿಜೆನಲ್ ಆಫೀಸರ್ ಶ್ರೀ ವೆ. ಪಿಚ್ಚಿರೆಡ್ಡಿಯವರ ಅಧ್ಯಕ್ಷತೆಯಲ್ಲಿ ೯ನೆಯ ತಾ॥ ಒಂದು ಸಭೆಯು ನಡೆದು ಅಧ್ಯಕ್ಷರು ಅಲ್ಪಹಣ ಸಂಗ್ರಹದ ಯೋಜನೆಯನ್ನು ವಿವರಿಸಿದರು. ಅಸಿಸ್ಟೆಂಟ ಡೆವಲಪ್‌ಮೆಂಟ ಆಫೀಸರ್ ಶ್ರೀ ವಿ. ಶ್ರೀನಿವಾಸನ್ ರವರು ೨೦ ಹುಂಡಿ ಪೆಟ್ಟಿಗೆಗಳನ್ನು ಹಂಚಿ ಮಿತಬಳಕೆಯ ಉಪಯೋಗಗಳನ್ನು ಹೇಳಿದರು. ಶಾಲಾಮು ಖ್ಯೋಪಾಧ್ಯಾಯರು, ಕೊಟ್ರಯ್ಯನವರು ಮಾತಾಡಿದರು. ರೆವಿನ್ಯೂ ಇನ್‌ಸ್ಪೆಕ್ಟರ್ ಶಿವರಾಮಯ್ಯನವರು ವಂದನಾರ್ಪಣೆ ಮಾಡಿದರು.

ನಾರಾಯಣದೇವರಕೆರೆ.

ತುಂಗಭದ್ರ ಯೋಜನಾ ಪರಿಹಾರಸಮಿತಿ.

ಸದ್ಯಕ್ಕೆ ಸರ್ಕಾರದ ನಿರ್ಣಯ ಕೊಡುವುದನ್ನು ತಡೆಮಾಡಿ ಆಜ್ಞೆತಂದಿರುವಕಾರಣ, ಹೆಚ್ಚಿನ ಪರಿಹಾರ ದೊರೆಯುವ ಸಂಭವವುಂಟು, ಈ ತಿಂಗಳೋ ಬರುವ ತಿಂಗಳೋ ಮಾನ್ಯಮಂತ್ರಿಗಳಾದ ಕಾರಂತ, ಭಕ್ತವತ್ಸಲಂರವರು ಬಂದಾಗ ಆಧಾರಭೂತವಾದ ಅಂಕೆ-ಸಂಖೆಗಳಿಂದ ಅವರಮನ ಒಲಿಸಬೇಕಾಗುತ್ತದೆ. 1941 ರಿಂದ ಜಮೀನು ಉತ್ಪನ್ನ ಸಾಗುವಳಿಖರ್ಚು, ಜಮೀನು ಬೆಲೆಯ ಏರಿಳಿತ, ಬೆಯಕದ ವಿಧಾನಗಳ ದೃಷ್ಟಿಯಿಂದ ನಾವು ಲೆಕ್ಕತೋರಿಸಬೇಕಾಗಿದ್ದು, ನಮಗೆ ಕಾರ್ಯಾಲಯದ ಅವಶ್ಯಕತೆ ಇದೆ. ಹಣಸಂಗ್ರಹಕ್ಕಾಗಿ ಮುಳುಗುವ ಹಳ್ಳಿಗಳಲ್ಲಿ 10 ನೆಯ ದಿನಾಂಕದಿಂದ ಕಾರ್ಯಕ್ರಮವಾರಂಭವಾಗಿದೆ. ಡಾಕ್ಟರ್ ಕೃಷ್ಣಮೂರ್ತಿಯವರಧ್ಯಕ್ಷತೆಯಲ್ಲಿ ಶ್ರೀ ಭೀಮಸೇನರಾಯರು, ರಾಷ್ಟ್ರೀಯಹಣ ಉಳಿತಾಯದ ವಿಧಾನಗಳನ್ನು ಹೇಳಿದರು ಮದ್ಯಪಾನ ನಿರೋಧದ ವಿಷಯಕ್ಕೆ ಶ್ರೀ ಮರಿಸ್ವಾಮಿಯ್ಯ ಮಠದ ಇವರು ಮಾತಾಡಿ-ಕರ್ನಾಟಕಪ್ರಾಂತದಲ್ಲಿ ತೆಲುಗು ಕರಪತ್ರಗಳು ಬರುತ್ತಿರುವುದು ಶೋಚನೀಯವೆಂದರು. ಪ್ರಾಜೆಕ್ಟ ಡಿಪ್ಯುಟಿ ತಹಶೀಲ್ದಾರರೂ ಮಾತಾಡಿದರು.

ಪಂಡಿತಜವಹರಲಾಲರು ಶ್ರೀರಾಪುರಕ್ಕೆತೆರಳಿ ಗಾಂಧೀಜಿಯವರನ್ನು ಕಂಡು ತಮ್ಮ ಲಂಡನ್ ಪ್ರಯಾಣದ, ಮತ್ತು ಬ್ರಿಟಿಶ್ ಸಂಧಾನದ ರಹಸ್ಯವನ್ನು ತಿಳಿಸುವರು.

ಘಟನಾ ಸಮಿತಿ ಪ್ರಾರಂಭೋತ್ಸವ

ಭಾರತದ ಪ್ರಥಮ ಘಟನಾಸಮಿತಿಯ ಸಭೆಗೆ ೯ ಸ್ತ್ರೀಯರನ್ನೊಳಗೊಂಡ ೨೦೫ ಸದಸ್ಯರು ಆಗಮಿಸಿದ್ದರು. ಎಲ್ಲರೂ ಅರ್ಧ ವರ್ತುಲಾಕಾರದ ಸಾಲುಗಳಲ್ಲಿ ಕುಳಿತಿದ್ದರು. ಮುಸ್ಲಿಂಲೀಗ್ ಸದಸ್ಯರು ಹಾಜರಿರಲಿಲ್ಲ. ಕಾಂಗ್ರೆಸ್ ಅಧ್ಯಕ್ಷರಾದ ಆಚಾರ್ಯ ಕೃಪಲಾನಿಯವರು ತಾತ್ಕಾಲಿಕ ಅಧ್ಯಕ್ಷಸ್ಥಾನಕ್ಕೆ ವಯೋವೃದ್ಧರೂ, ಜ್ಞಾನವೃದ್ಧರೂ ಆದ ಡಾಕ್ಟರ್ ಸಚ್ಚಿದಾನಂದ ಸಿಂಹರ ಹೆಸರನ್ನು ಸೂಚಿಸಿ ಅವರನ್ನು ಅಧ್ಯಕ್ಷಪೀಠಕ್ಕೆ ಕರೆದೊಯ್ದರು. ನಂತರ, ಅಮೇರಿಕಾ, ಚೀನ, ಆಸ್ಟ್ರೇಲಿಯಾಗಳಿಂದ ಬಂದ ಶುಭಸಂದೇಶಗಳನ್ನೋದಲಾಯಿತು.

ಘಟನಾ ಸಮಿತಿಯ ತಾತ್ಕಾಲಿಕ ಅಧ್ಯಕ್ಷರಾದ ಡಾ. ಸಚ್ಚಿದಾನಂದ ಸಿಂಹರು ಈ ಹೊತ್ತು ಘಟನಾ ಸಮಿತಿಯಲ್ಲಿ ಪ್ರಾಸ್ತಾವಿಕ ಭಾಷಣ ಮಾಡುತ್ತ ಅಮರವಾದ ಘಟನೆಯನ್ನು ಸಿದ್ಧಪಡಿಸುವದನ್ನೆ ಸಮಿತಿಯು ತನ್ನ ಧ್ಯೇಯವನ್ನಾಗಿಟ್ಟುಕೊಳ್ಳಬೇಕೆಂದು ಹೇಳಿ ಈ ಧ್ಯೇಯವನ್ನು ಒಳಗೊಂಡಿದ್ದೆಂದು ಹೇಳಲಾಗುವ ಅಮೇರಿಕನ್ ಘಟನೆಯ ಕಡೆಗೆ ಸಭಾಸದರ ಲಕ್ಷ ಎಳೆದು, ಅದನ್ನು ಕೂಲಂಕಷ ಪರಿಶೀಲಿಸಿ ಹಿಂದುಸ್ಥಾನದ ಅವಶ್ಯಕತೆಗನುಸರಿಸಿ ಅದರಿಂದ ಲಾಭ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಅನಂತರ ಅವರು ಹಿಂದುಸ್ತಾನದಲ್ಲಿ ಘಟನಾ ಸಮಿತಿಯ ಮೊದಲನೆ ಉಲ್ಲೇಖವು ೧೯೨೨ ರಲ್ಲಿ ಮಹಾತ್ಮರ ಪ್ರಕಟನೆಯಲ್ಲಿ ಕಂಡು ಬರುವದೆಂದೂ ಮುಂದೆ ಎರಡೂ ಪ್ರಮುಖ ರಾಜಕೀಯ ಪಕ್ಷಗಳು ಹಿಂದುಸ್ತಾನದ ಘಟನೆ ರಚಿಸಲು ಅದೊಂದೇ ಮಾರ್ಗವೆಂದು ಮನ್ನ ಮಾಡಿದವೆಂದೂ ಹೇಳಿ, ಮುಸ್ಲಿಂಲೀಗ ಹಾಗು ಕಾಂಗ್ರೆಸ್ಸಿನ ಬೇಡಿಕೆಗಳಲ್ಲಿ ವ್ಯತ್ಯಾಸವೆಂದರೆ ಲೀಗು ಎರಡು ಪ್ರತ್ಯೇಕ ರಾಷ್ಟ್ರಗಳಿಗೆ ಎರಡು ಘಟನಾ ಸಮಿತಿಗಳನ್ನು ಕಾಂಗ್ರೆಸ್ ಇಡೀ ಹಿಂದುಸ್ತಾನಕ್ಕೆ ಒಂದೇ ಘಟನಾ ಸಮಿತಿಯನ್ನು ಬೇಡಿದ್ದನ್ನು ತಿಳಿಸಿದರು. ಕೊನೆಯಲ್ಲಿ ಅವರು ಹಿಂದುಸ್ತಾನವು ಮೊದಲಿನ ವೈಭವ ಹೊಂದಿ ಜಗತ್ತಿನ ಪ್ರಮುಖ ರಾಷ್ಟ್ರಗಳಲ್ಲಿ ಸಮಾನವಾಗಿ ಮೆರೆಯುವಂತೆ ದೂರ ದೃಷ್ಟಿಯಿಂದ ಸಮಿತಿಯ ಕಾರ್ಯಕಲಾಪಗಳು ಸಾಗಲೆಂದು ಹಾರೈಸಿದರು.

ಮಾರನೆಯದಿನ ಡಾಕ್ಟರ್ ರಾಜೇಂದ್ರಪ್ರಸಾದರು ಘಟನಾಸಮಿತಿಯ ಶಾಶ್ವತ ಅಧ್ಯಕ್ಷರಾಗಿ ಆರಿಸಲ್ಪಟ್ಟರು ಸಮಿತಿಯ ಕಾರ್ಯಕಲಾಪಗಳನ್ನು ನಡೆಸಲು ೧೫ ಜನರ ಸಮಿತಿಯು ನಿಯಮಿತವಾಯಿತು. ಘಟನಾಸಮಿತಿಯೊಂದೇ ಅಲ್ಲದೆ ಅದರ ಅಂಗಗಳಾದ ಗುಂಪುಗಳ ಮತ್ತಿತರ ಉಪಸಮಿತಿಗಳ ಬಗ್ಗೆಯೂ ನಿಯಮಾವಳಿಯನ್ನು ತಯಾರಿಸಲು ಈ ಹೊಸಸಮಿತಿಗೆ ಅಧಿಕಾರವಿರಬೇಕೆಂಬ ತಿದ್ದುಪಡಿಯೊಡನೆ ಅದು ಸ್ವೀಕೃತವಾಯಿತು. ಡಾ॥ಅಂಬೇಡ್ಕರರು ವಿರೋಧಮತ ಕೊಟ್ಟರು.

ಶ್ರೀ ವಿಜಯಲಕ್ಷ್ಮಿಯವರ ವಿಜಯ.

ಅಮೆರಿಕಾದ ಲೇಕ್ ಸಕ್ಸೆಸ್ ಎಂಬಲ್ಲಿ ಕೂಡಿದ ಯುಕ್ತ ರಾಷ್ಟ್ರಸಂಸ್ಥೆಯಲ್ಲಿ ದಕ್ಷಿಣ ಆಫ್ರಿಕದ ಭಾರತೀಯರ ಪ್ರಶ್ನೆಯ ಬಗ್ಗೆ ಹಿಂದುಸ್ತಾನ ಮತ್ತು ದಕ್ಷಿಣಆಫ್ರಿಕದ ಸರಕಾರಗಳು ಯುಕ್ತರಾಷ್ಟ್ರದ ಮುಂದಿನ ಅಧಿವೇಶನಕ್ಕೆ ವರದಿ ಒಪ್ಪಿಸಬೆಂಕೆಂಬ ಫ್ರೆಂಚ್ ಮೆಕ್ಸಿಕನ್ ಗೊತ್ತುವಳಿಯು ಸಾಮಾನ್ಯಸಭೆಯಲ್ಲಿ ಅನುಕೂಲ ೩೨ ವಿರೋಧ ೧೫ ಮತಗಳಿಂದ ಸ್ವೀಕೃತವಾಯಿತು. ಮತದಾನದ ಪರಿಣಾಮವು ಹೊರಬಿದ್ದಕೂಡಲೇ ಅನೇಕರಾಷ್ಟ್ರಗಳು ಭಾರತಪ್ರತಿನಿಧಿ ಮಂಡಲದ ಧುರೀಣರಾದ ಶ್ರೀ ಮತಿ ವಿಜಯಲಕ್ಷ್ಮಿ ಪಂಡಿತರನ್ನು ಅಭಿನಂದಿಸಿದವು. ತಮಗೆ ಬೆಂಬಲ ನೀಡಿದ ರಾಷ್ಟ್ರಗಳನ್ನು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ವಂದಿಸಿ ಯುಕ್ತರಾಷ್ಟ್ರ ಸಂಸ್ಥೆಯಲ್ಲಿ ಭಾರತ ನಂಬಿಗೆ ದೃಢವಾಯಿತು, ಎಂದು ನುಡಿದರು.

THE NAVA BHARAT
ನವಭಾರತ
ಸಂಪಾದಕ-ಟಿ.ಆರ್.ಕೇತನರಾವ್

9th Year of Publication.

16th DECEMBER 1946

ಬ್ರಿಟಿಷ್ ಕುತಂತ್ರ
ಲಂಡನ ಪರಿಷತ್ತಿನ ರಹಸ್ಯ

ಬ್ರಿಟಿಷ ಕನ್ಸರ್ವೇಟಿವ್ ಪಕ್ಷದ ಧುರೀಣರಾದ ಮಿ|| ಚರ್ಚಿಲ್‌ರವರಿಂದ ಹಿಂದುಸ್ತಾನದ ಭದ್ರತೆಗಾಗಿ ಆರಿಸಲ್ಪಟ್ಟ ವೈಸ್ರಾಯರಾದ ಲಾರ್ಡ ವೇವಲರು ಒಳ್ಳೇ ಕುಶಲರಿದ್ದಾರೆ. ರಾಜಕೀಯದಲ್ಲಿ ಒಳ್ಳೇ ಪಳಗಿದವರಿದ್ದಾರೆ. ಹಿಂದುಸ್ತಾನದಲ್ಲಿನ ತೊಂದರೆಯ ಪರಿಸ್ಥಿತಿಯನ್ನು ನೋಡಿ, ಪ್ರಮುಖ ಪಕ್ಷವಾದ ಕಾಂಗ್ರೆಸ್‌ನವರ ಮನ ಒಲಿಸಲು ತಮ್ಮ ಶಕ್ತಿಯನ್ನೆಲ್ಲಾ ಉಪಯೋಗಿಸಿ ಅವರನ್ನು ತಾತ್ಕಾಲಿಕ ಸರ್ಕಾರದಲ್ಲಿ ಭಾಗ ವಹಿಸುವಂತೆ ಮಾಡಿದರು. ಕೇಂದ್ರದಲ್ಲಿ ಈ ಸರ್ಕಾರವು ಸ್ವತಂತ್ರವಾಗಿ ವೈಸ್ರಾಯರನ್ನು ಕೇಳದೆ ಕಾರ್ಯ ಪ್ರವೃತ್ತವಾಗಿರುವುದು ಇವರಿಗೆ ಸಹ್ಯವಾಗದೆ., ಇವರ ನಾಲ್ಕು ಬಿಳೀ ಬಣ್ಣದ ಕಾರ್ಯದರ್ಶಿಗಳ ಸಲಹೆಯಿಂದ ಲೀಗದವರಿಗೆ ಗುಪ್ತವಾಗ್ದಾನಗಳನ್ನು ಕೊಟ್ಟು ಅವರನ್ನು ಒಳತಂದು ನಿತ್ಯ ವ್ಯವಹಾರಗಳಲ್ಲಿ ವಿರೋಧವನ್ನುಂಟುಮಾಡಿದರು. ಬ್ರಿಟಿಶ ಮಂತ್ರಿವರ್ಗದವರು ತಯಾರಿಸಿದ ದೀರ್ಘಕಾಲದ ಯೋಜನೆಯನ್ನೊಪ್ಪದೆ, ತಾತ್ಕಾಲಿಕ ಸರಕಾರದಲ್ಲಿ ಭಾಗ ತೆಗೆದುಕೊಳ್ಳಲು ಬರುವಂತಿಲ್ಲವಾದ್ದರಿಂದ ಹಾಗೆ ಜಿನ್ನಾರವರೊಪ್ಪಿ ತಮಗೆ ವಾಗ್ದಾನಮಾಡಿರವರೆಂದು ವೈಸ್ರಾಯರು ಪಂಡಿತ ನೆಹರೂರವರಿಗೆ ಪತ್ರ ಬರೆದರು. ಆದರೆ ಈಗ ಜಿನ್ನಾರವರು ಅಂಥಾ ವಾಗ್ದಾನ ಕೊಟ್ಟಿಲ್ಲವೆಂದು ಸಾರಿದ್ದಾರೆ.

ಭಾರತದ ವಿವಿಧ ಜನಾಂಗಗಳಲ್ಲಿ ಭೇದಗಳನ್ನು ಎತ್ತಿ ಹಿಡಿದು ತಮ್ಮ ಆಳಿಕೆಯನ್ನು ಸ್ಥಿರಪಡಿಸಿಕೊಳ್ಳುವುದು ಬ್ರಿಟಿಷ ರಾಜ್ಯಭಾರದ ನೀತಿ. ಅತ್ಯಧಿಕ ಸಂಖ್ಯಾಕರಾದ ಹಿಂದೂಗಳನ್ನೊಳಗೊಂಡ ಕಾಂಗ್ರೆಸ್ ಬ್ರಿಟಿಷರ, ಬ್ರಿಟಿಷ್ ರಾಜ್ಯಭಾರದ ದ್ವೇಷಿಕ ಸಂಸ್ಥೆಯೆಂದೂ, ಅದನ್ನು ನಾಮಾವಶೇಷವಮಾಡಲು 1921, 1930, 1932, 1942, ರಲ್ಲಿ ಬಲವಾದ ಪ್ರಯತ್ನಗಳನ್ನು ಮಾಡಿದರು. ಅದು ಸಾಧ್ಯವಾಗಲಿಲ್ಲ. 1942 ರಲ್ಲಿ ಬ್ರಿಟಿಷ ಸರ್ಕಾರದ ಹಸ್ತಕರು ಅನೇಕ ರಾಕ್ಷಸೀ ಕೃತ್ಯಗಳಲ್ಲಿ ತೊಡಗಿದರು. ತಮ್ಮ ದೇಶಬಾಂಧವರನ್ನೇ ಮೃಗವರ್ಗದ ರೀತಿಯಲ್ಲಿ ನಡೆಸಿಕೊಂಡು. ಅತ್ಯಾಚಾರಗಳನ್ನು ಮಾಡಿದರು.

ಯುದ್ಧಾನಂತರ ಪರಿಸ್ಥಿತಿಯಲ್ಲಿ ಎಲ್ಲಾ ದೇಶಗಳಲ್ಲೂ ಶಾಂತಿಯೇರ್ಪಡಬೇಕಾದುದು ಅವಶ್ಯವೆಂದು ದೊಡ್ಡ ರಾಷ್ಟ್ರಗಳಾಗಿ ಉಳಿದ ಅಮೇರಿಕಾ, ರಷ್ಯಾ, ಇಂಗ್ಲೆಂಡ್ ಬಾಹ್ಯದಲ್ಲಿ ಕೋರುತಿದ್ದರೂ, ಆಂತರ್ಯವಾಗಿ ತಮ್ಮ ಅಧೀನವಾಗಿದ್ದ ರಾಷ್ಟ್ರಗಳಲ್ಲಿ, ತಮ್ಮ ಅಧಿಕಾರವನ್ನು ಸಮರ್ಥಿಸುವ ಹಸ್ತಕರನ್ನೇ ಪ್ರೋತ್ಸಾಹಿಸುವುದು ಕಂಡು ಬರುತ್ತಲಿದೆ. ಈ ಉದ್ದೇಶ ಸಾಧನೆಗಾಗಿಯೇ ಬ್ರಿಟಿಶ ವೈಸ್ರಾಯ ವ್ಯಾವೆಲ್ ಮುಸ್ಲಿಂಲೀಗಿನವರನ್ನು ಎತ್ತಿಹಿಡಿಯಲು, ಕಾಂಗ್ರೆಸ್ ವಿರೋಧಕ್ಕಾಗಿ ಸಂಘಟಿಸಲು, ಬಹಳ ಚಾತುರ್ಯದಿಂದ ಲಂಡನ್ನಿಗೆ ಲೀಗ್ ಮತ್ತು ಕಾಂಗ್ರೆಸ್ ಮುಖಂಡರನ್ನು ಕರೆದೊಯ್ದರು. ಕಾಂಗ್ರೆಸಿನವರು ಬರುವುದಿಲ್ಲೆಂದು ನಿರಾಕರಿಸಿದಾಗ, ರಾಜ್ಯಘಟನೆಯಲ್ಲಿ ಬದಲಾವಣೆ ಮಾಡುವುದಿಲ್ಲೆಂದು ಬ್ರಿಟಿಷ್ ಪ್ರಧಾನಿಯು ನೆಹರೂರವರಿಗೆ ಪತ್ರ ಬರೆದು ಕರೆಸಿಕೊಂಡು, ತಮ್ಮ ಹಿಂದಿನ ಹೇಳಿಕೆಯಲ್ಲಿ ಮುಖ್ಯ ಬದಲಾವಣೆಮಾಡಿ

ಮುಸ್ಲಿಂಲೀಗಿನ ಜಿನ್ನಾರವರಿಗೆ ಅನುಕೂಲಕರವಾದ ರೀತಿಯಲ್ಲಿ ತಿದ್ದುಪಡೆ ಮಾಡಿದರು.

ಲಂಡನ್ನಿನಲ್ಲಿ ಮಂತ್ರಿವರ್ಗವು ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್ ನಾಯ್ಕರ ಹೇಳಿಕೆಗಳನ್ನು ಕೇಳಿಕೊಂಡಂತೆ ನಟಿಸಿ, ಐಕ್ಯಸಂಧಾನದ ಪ್ರದರ್ಶನ ಮಾಡಿ ಹಿಂದೂ- ಮುಸಲ್ಮಾನರು ಒಂದಾಗುವುದಿಲ್ಲೆಂಬ ಬಂಶವನ್ನು ಜಗಕ್ಕೆಸಾರಿ, ತಾವು ಮೊದಲೇ ತಯಾರಿಸಿಟ್ಟಿದ್ದ ಕರಡನ್ನು ಪಾಠಶಾಲಾ ಹುಡುಗರಿಗೆ ಓದಿ ತಿಳಿಸುವಂತೆ ಹೇಳಿದರು-

'ಬಿ' ವರ್ಗದಲ್ಲಿ, ಬ್ರಿಟಿಶರ ಈಚಿನಹೇಳಿಕೆಯಿಂದ, ಪಂಜಾಬಿನ ಬಹುಮತದಿಂದ ಸಿಂಧೀಯರೂ ಸರಹದ್ ಪ್ರಾಂತದವರೂ ಗಣನೆಯಿಲ್ಲದವರಾಗುತ್ತಾರೆ. 'ಶ' ವರ್ಗದಲ್ಲಿ ಬಂಗಾಳದ ಬಹುಮತದಿಂದ- ಹಿಂದೂಪ್ರಾಂತವಾದ ಆಸಾಂ ನಿಸ್ಸಹಾಯವಾಗುತ್ತದೆ ಪ್ರಾಂತೀಯ ಸ್ವಾಯುತ್ತತೆಯು ಈ ಕಾಲದಲ್ಲಿ, ನಿರ್ಬಂಧವಾಗಿ ಎರಡು ಕಾಂಗ್ರೆಸ್ ಪ್ರಾಂತಗಳನ್ನು ಲೀಗ್ ನವರ ಪಾಕಿಸ್ತಾನ ತತ್ವಕ್ಕೊಪ್ಪಿಸುವುದು ಬ್ರಿಟಿಷ್ ಸರ್ಕಾರನ ಸದ್ಯದ ನೀತಿಯಾಗಿದೆ ರಾಜ್ಯಘಟನೆಯನ್ನು ತಯಾರಿಸಿ, ಜಾರಿಯಲ್ಲಿ ಬಂದ ನಂತರ, ಪ್ರಾಂತಗಳು ಬೇಕಾಪಡೆ ಗುಂಪಿನಿಂದ ಶಿಡಿದು ಬೀಳಬಹುದಂತೆ- ರಾಜ್ಯಘಟನೆಯು ಪ್ರತಿಗಾಮಿಯಾಗಿ ಒಂದೇ ಜನಾಂಗಕ್ಕನುಕೂಲವಾಗುವಂತೆ ಮಾಡಿದರೆ, ಯಾರಿಗೆ ಅಪೀಲು ಮಾಡಬೇಕು? ಒಟ್ಟಿನಲ್ಲಿ ಬ್ರಿಟಿಷರು ಹಿಂದೂಸ್ತಾನವನ್ನು ಶೀಘ್ರವಾಗಿ, ಶಾಂತವಾಗಿ ಖಾಲಿ ಮಾಡಲಿಚ್ಛೆಯಿಲ್ಲದವರಾಗಿರುತ್ತಾರೆ.

ಕಬ್ಬಿಣ ಉಕ್ಕು.

ರೈತರಿಗೆ ಮತ್ತಷ್ಟು ಕಷ್ಟ.

ಕಬ್ಬಿಣ, ಉಕ್ಕಿನ ಸಾಮಾನುಗಳನ್ನು ತರಸಬೇಕಾದರೆ ಮದ್ರಾಸಿನಲ್ಲಿರುವ ಪ್ರಾಂತೀಯ ಉದ್ಯೋಗಾಧಿಕಾರಿಗಳಾದ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್‌ದವರಿಂದ ಪರ್ಮಿಟ್ ಇಲ್ಲದೆ ಯಾವ ಅಂಗಡಿಯವರಿಗೂ ಸಾಮಾನು ದೊರೆಯುವಂತಿಲ್ಲ. ೧೦೦ ಕ್ಕೇಂ ಅಂಗಡಿಗಳವರು ಅಷ್ಟು ವಿದ್ಯಾವಂತರಲ್ಲ. ಅವರು ಈ ಪರ್ಮಿಟುಗಳ ವಿಧಾನವನ್ನೆಲ್ಲಾ ಅರಿತು, ಇದನ್ನು ಪಡೆಯುವುದು ಸಾಧ್ಯವೇ ಇಲ್ಲವಾಗಿದೆ. ಅಲ್ಲದೆ ಮದ್ರಾಸಿನ ತೊಂದರೆ, [ಬೇಕು — ಬೇಡ] ನೀತಿಯಿಂದಲೂ ತೊಂದರೆಯಾಗುತ್ತಲಿದೆ. ಅಂಗಡಿಗಳವರು ಬ್ಲಾಕ್ ಮಾರ್ಕೆಟಿನಲ್ಲಿ ಮಾರುತ್ತಿರುವರೆಂಬ ಅಪಾದನೆ ದೂರಾಗಿಲ್ಲ ಹೀಗಿರುವಲ್ಲಿ ಅಂಗಡಿಗಳಿಗೇ ಮಾಲುದೊರೆಯುವುದು ಕಠಿಣವಾದರೆ, ರೈತರಿಗೆ ಹೇಗೆ ದೊರೆಯಬೇಕು?

ಸರ್ಕಾರದ ನಿರ್ಬಂಧಗಳಿಂದ ಅನೇಕ ಸಂದರ್ಭಗಳಲ್ಲಿ ಸರ್ಕಾರದ ಅಧಿಕಾರಿಗಳಿಗೇ ಅನುಕೂಲಗಳನ್ನೊದಗಿಸಿದಂತಾಗುತ್ತದೆ. ಬ್ಲಾಕ್ ಮಾರ್ಕೆಟ ಮತ್ತು ಲಂಚಗಳನ್ನು ತಪ್ಪಿಸಲು ಸಾಧ್ಯವೇ ಇಲ್ಲವಾಗಿದೆ.

ಬಲ್ಲವನೊಬ್ಬ

ಖಾದಿಯಿಂದಲೇ ಉದ್ಧಾರ

ಬಳ್ಳಾರಿ ರಾಯಲಸೀಮ ಮಹಾ ಸಭೆಯವರು ೯ನೆಯ ತಾರೀಖು ಏರ್ಪಡಿಸಿದ ಸಭೆಯಲ್ಲಿ ಶ್ರೀ ಮೃತ್ಯುಂಜಯ ಶಾಸ್ತ್ರಿ ನರಸಿಂಹ ಶಾಸ್ತ್ರಿಯವರು ಮದ್ರಾಸ್ ಸರ್ಕಾರದ ಜವಳಿ ಧೋರಣವನ್ನು ಟೀಕಿಸಿದರು. ಕಾಂಗ್ರೆಸ್ ಪರವಾಗಿ ಶ್ರೀ ಡಿ. ಯಜ್. ವೆಂಕೋಬ ರಾವ್ ಮತ್ತು ಬಿ. ಯಂ. ಮರುಳಸಿದ್ದಯ್ಯ ನವರು- ಮಿಲ್‌ಗಳ ಸ್ಥಾಪನೆಯಿಂದ ಕೆಲವರಿಗೆ ಮಾತ್ರ ಲಾಭವಾಗುವುದೆಂದೂ, ಹಳ್ಳಿಗರ ಉದ್ಧಾರವಾಗಬೇಕಾದರೆ ಖಾದಿಯೊಂದೇ ರಾಮಬಾಣವೆಂದೂ, ಶ್ರೀ ಪ್ರಕಾಶಂ ರವರು ಎಲ್ಲಾ ಕೂಲಂಕಷ ವಿಚಾರಿಸಿ- ಮಹಾತ್ಮರ ಆಶೀರ್ವಾದದಿಂದ ಈ ನಿರ್ಣಯಕ್ಕೆ ಬಂದಿರುವರೆಂದೂ ಉತ್ತರ ಕೊಟ್ಟರು.

The Rayalaseema Bank Limited, Bellayr.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— (ಬಳ್ಳಾರಿಜಿಲ್ಲಾ **ಹಡಗಲಿ, ಕೂಡ್ಲಿಗಿ,** ಚಿತ್ತೂರುಜಿಲ್ಲಾ **ನಾಗರಿಯಲ್ಲಿ**

ನಮ್ಮ ಶಾಖೆಗಳನ್ನು ಪ್ರಾರಂಭಿಸಿವೆಂದು ತಿಳಿಸಲು ಹರ್ಷಿಸುತ್ತೇವೆ.

ಬಳ್ಳಾರಿ ಜಿಲ್ಲಾ:– ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ.

ಅನಂತಪುರ:– ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ.

ಚಿತ್ತೂರು:– ಚಿತ್ತೂರು, ಮದನಪಲ್ಲಿ, ತಿರುಪತಿ. **ಕರ್ನೂಲು:**– ಕರ್ನೂಲು ಪತ್ತಿಕೊಂಡ. **ಕಡಪ:**–ರಾಜಂಪೇಟ

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:– 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2ವರ್ಷಗಳಿಗೆ 3½%.

ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.

ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:– 3%.

ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.

—ರಾಷ್ಟ್ರೀಯ ಪುಸ್ತಕಗಳು.—

—: **ಕಾಂಗ್ರೆಸ್ ಸ್ವರೂಪ ದರ್ಶನ:**—

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ-ನಿವಾರಣೆ	0–12—0
ಪ್ರಾಂತಭಾಷೆ- ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ(ಇತಿಹಾಸ-ತಂತ್ರ)	3–8 -0

ವಿ. ಪಿ. ಖರ್ಚುಬೇರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ.—

ನವಭಾರತ, — ಕಾರ್ಯಾಲಯ ಬಳ್ಳಾರಿ

ಹಿಂದೂಸ್ತಾನಿಯು ರಾಷ್ಟ್ರಭಾಷೆ

ಇದನ್ನು ತಪ್ಪದೆ ಕಲಿಯಿರಿ.

ಪ್ರಾರಂಭಿಕ ಪರೀಕ್ಷೆಗಳಾದ ಪ್ರಾಥಮಿಕ- ಮಧ್ಯಮ ರಾಷ್ಟ್ರಭಾಷೆ, ಉನ್ನತ ಪರೀಕ್ಷೆಗಳಾದ ಪ್ರವೇಶಿಕ, ವಿಶಾರದ- ಪ್ರಚಾರಕ, ಮದ್ರಾಸ್ ವಿಶ್ವವಿದ್ಯಾಲಯದ ಹಿಂದೀ- ವಿದ್ವಾನ್ ಪರೀಕ್ಷೆಗಳ ಮಾಹಿತಿಯನ್ನು ಉಚಿತವಾಗಿ ಕೊಟ್ಟು- ಶಿಕ್ಷಣದ ಏರ್ಪಾಟಿಗೆ ಸಲಹೆಗಳನ್ನು ಕೊಡಲಾಗುವುದು- ಎಲ್ಲಾಪುಸ್ತಕಗಳು ದೊರೆಯುತ್ತವೆ. **ಬಹಳ ಸುಲಭ ಭಾಷೆ-ಅತ್ಯಲ್ಪಕಾಲದಲ್ಲಿ ಕಲಿಯಬಹುದು.** **ಟಿ. ಬಿ. ಕೇಶವರಾವ್**

ಹಿಂದೀಪ್ರಚಾರಕ, ಬಳ್ಳಾರಿ

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು. Subscription Rates.

ವರ್ಷಕ್ಕೆ	5–0–0	One Year	5—0—0
6 ತಿಂಗಳಿಗೆ	3–0–0	Six months	3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will not be accepted for less than 6 months.	

To

SRI.....

.....

.....

Printed at Krishna Press Bellary QH No. B 17 FOR (Q.H. No. B-5)

Edited & Published by T. B. KESHAVARAO.

ಜೈಹಿಂದ್ Reg. No.M. 4746

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೫ ಸಂಖ್ಯೆ ೨೦ | ಬಳ್ಳಾರಿ ಡಿಸಂಬರು ೨೩ ಸೋಮವಾರ ೧೯೪೬ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವು.

ನೆಹರೂ ತೀರ್ಮಾನಕ್ಕೆ ಮಹಾತ್ಮ ಗಾಂಧಿ ಬೆಂಬಲ

ಶ್ರೀರಾಂಪ್ರದಲ್ಲಿ ಕಳೆದ ವಾರ ಪ್ರಾರ್ಥನಾನಂತರ ಗಾಂಧೀಜಿಯವರು ನೆಹರೂರವರ ಲಂಡನ್ ಯಾತ್ರೆ, ಘಟನಾ ಸಮಿತಿಯಲ್ಲಿ ಅವರು ಮಂಡಿಸಿದ ಗೊತ್ತುವಳಿಯ ಕಡೆ ತೊರಳಿ ಎಲ್ಲಾ ವಿಷಯಗಳನ್ನೂ ಕೂಲಂಕಷವಾಗಿ ಪಿಮರ್ಶಿಸಿ ಎಲ್ಲರಿಗೂ ನ್ಯಾಯ ಪ್ರದವಾದ ತೀರ್ಮಾನವಿದು ಪರಿಣಾಮವೇನೇ ಆಗಲಿ ನೆಹರೂರವರು ತಮ್ಮ ತೀರ್ಮಾನಕ್ಕಂಟಿಕೊಳ್ಳಬೇಕೆಂದು ಹೇಳಿದರು.

ಇದರಿಂದ ಕಲಿಯಬೇಕಾದ ಪಾಠವೆಂದರೆ ಎಲ್ಲಾ ಸಮಸ್ಯೆಗಳನ್ನೂ ಅಭ್ಯಾಸಮಾಡಿ ಸತ್ಯ ಮತ್ತು ನ್ಯಾಯದ ದೃಷ್ಟಿಯಿಂದ ಒಂದು ತೀರ್ಮಾನಕ್ಕೆ ಬಂದ ನಂತರ ಪರಿಣಾಮವೇನೇ ಆಗಲಿ, ಅದನ್ನು ಬಿಡದಿರುವುದು ಮುಖ್ಯ ಕರ್ತವ್ಯವೆಂದರು.

ಗಾಂಧೀಜಿಯವರು ನೆಹರೂ- ಪಟೇಲರಿಗೆ ಒಂದು ಪತ್ರ ಮುಖಾಂತರ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಗಾಂಧೀಜಿಯವರು ದೂರವಿದ್ದರೂ ನಿತ್ಯದ ರಾಜಕೀಯಗಳನ್ನೆಲ್ಲಾ ತಿಳಿದುಕೊಳ್ಳುತ್ತಲಿರುವರು. ಶ್ರೀರಾಂಪುರದಿಂದ ಕೋಮಿಲಾಕ್ಕೆ ಒಂದು ಮುಖ್ಯ ಸಂದೇಶವನ್ನು ಕಳುಹಿಸಲು ೧೫೦ ಖರ್ಚಾಯಿತು. ಮತ್ತೆ ಅದರ ತಿದ್ದುಪಡಿಗಾಗಿ ಮತ್ತೆ ೬೦ ರೂ ಖರ್ಚಾಯಿತು..

ಜಿನ್ನಾ.

ಕಳೆದ ವಾರ ಜಿನ್ನಾರವರು ಭಾರತಕ್ಕೆ ಬರುವ ಮುಂಚೆ ಆ.ಜಿಪ್ತ ರಾಜಧಾನಿ ಕೈರೋದಲ್ಲಿ ಮೂರುದಿನ ಗಳಿದ್ದು ಅಲ್ಲಿನ ಸಮಸ್ಯೆಗಳನ್ನು ತಿಳಿದುಕೊಂಡು, ಪಾಕಿಸ್ತಾನದಿಂದ ಈಜಿಪ್ಟರಿಗೆ ಲಾಭವಾಗುವಹಾಗೆ ತಿಳಿಸಿದರಂತೆ.

ಮದ್ರಾಸ್ ಸರ್ಕಾರದ ನಿರ್ಲಕ್ಷ್ಯ– ಬಳ್ಳಾರಿಜಿಲ್ಲೆ ಆಂಧ್ರಕ್ಕೆ ಸೇರಬೇಕೆ ?

ಮದ್ರಾಸ್ ಸ್ಥಾನಿಕ ಸಂಸ್ಥೆಗಳ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಚುನಾವಣೆಯ ಕಾಲದಲ್ಲಿ ಬಣ್ಣದ ಪೆಟ್ಟಿಗೆಗಳನ್ನು ಕೊಡಬೇಕೆಂಬುದಕ್ಕೆ ಆಂಧ್ರ ತಮಿಳ ಕೇರಳ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಕಾಂಗ್ರೆಸ್ ಸಮಿತಿಗಳ ಸಲಹೆಯಿಂದ ಇತ್ಯರ್ಥವಾಗಬೇಕೆಂಬ ಮದ್ರಾಸ್ ಸರ್ಕಾರದ ಆಜ್ಞೆಯು ಮದ್ರಾಸಿನ ಆಂಗ್ಲ ಪತ್ರಿಕೆಗಳಲ್ಲೆಲ್ಲಾ ಪ್ರಕಟವಾಗಿದೆ. ಬಳ್ಳಾರಿ ಜಿಲ್ಲೆಯು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಆಡಳಿತಕ್ಕೆ ಒಳಪಟ್ಟು, ಅದನ್ನು ಆಂಧ್ರ ಪ್ರಾಂತದಸಮಿತಿಗೆ ಸೇರಿಸಿರುವುದು ಉದ್ದೇಶ ಪೂರ್ವಕವಾದುದೂ, ತುಂಟತನದ್ದೂ ಆಗಿದೆ ಮದ್ರಾಸ್ ಸರ್ಕಾರದ ಈ ಆಜ್ಞೆಯ ಪ್ರಕಾರಕ್ಕೆ ತಮಗೆ ಬೇಕಾದ ಬಣ್ಣದಪೆಟ್ಟಿಗೆಗಾಗಿ– ಬಳ್ಳಾರಿಜಿಲ್ಲಾ ಅಭ್ಯರ್ಥಿಗಳು ಆಂಧ್ರ ಪ್ರಾಂತ ಕಾಂಗ್ರೆಸ್ ಸಮಿತಿಗೆ ಅರ್ಜಿಯನ್ನಿಟ್ಟುಕೊಳ್ಳಬೇಕಾಗಿದೆ. ಬಳ್ಳಾರಿ ಕಾಂಗ್ರೆಸ್ ಸಮಿತಿಯವರು ಮತ್ತು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರು. ಇದನ್ನು ಸರಿಪಡಿಸಲು ಕೂಡಲೇತಕ್ಕ ಚರ್ಯೆಯನ್ನು ತೆಗೆದುಕೊಳ್ಳಬೇಕೆಂದು ಮುಂದೆ ಹೀಗಾಗದಂತೆ ನೋಡಿಕೊಂಡು ಹಕ್ಕು ಸಂರಕ್ಷಣೆ ಮಾಡಿಕೊಳ್ಳಬೇಕೆಂದೂ ಆಶಿಸುವ.

ಕನ್ನಡಿಗ

ಬ ಳ್ಳಾ ರಿ

ರನ್ನ ಜಯಂತಿ :—

ಅನಂತಪುರದ ಕಳಾಶಾಲೆಯು ಕನ್ನಡ ಸಂಜಿತರಾದ ಸಾಹಿತ್ಯ ರತ್ನ ಶ್ರೀ ಪಿ. ಸುಂದರಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ೧೪ ನೆಯ ದಿನಾಂಕ ಸಾಯಂಕಾಲ ವೀರಶೈವ ಕಳಾಶಾಲೆಯಲ್ಲಿ ರನ್ನ ಜಯಂತ್ಯುತ್ಸವವು ನೆರವೇರಿತು. ಶ್ರೀ ಲ. ನ. ಶರ್ಮರ ಪ್ರಾರ್ಥನೆಯ ನಂತರ, ಶ್ರೀ ಎಂ. ಜಿ. ವೆಂಕಟೇಶಯ್ಯನವರು 'ರನ್ನನ ಗದಾಯುದ್ಧ' ದ ಮೇಲೂ, ಶ್ರೀ ಚನ್ನಬಸಪ್ಪನವರು ಅದರ ಧ್ವನಿ ನಿರೂಪಣೆಯ ಮೇಲೂ ಭಾಷಣ ಕೊಟ್ಟರು. ಅಧ್ಯಕ್ಷರು ರನ್ನನ ಪ್ರಾಶಸ್ತ್ಯವನ್ನು ಉಚಿತೋಕ್ತಿಗಳಲ್ಲಿ ಹೇಳಿದ ನಂತರ ವಂದನಾರ್ಪಣೆಯಿಂದ ಸಭೆಯು ಮುಗಿಯಿತು.

ಪ್ರಾಥಮಿಕ ಶಾಲೆಗಳ ಆಟಪಾಟ:—

ಶ್ರೀ ಕೆ. ಎಸ್. ಅನಂತರಾಮನರ ಅಧ್ಯಕ್ಷತೆಯಲ್ಲಿ 15 ನೆಯ ತಾ. ಸಾಂಗವಾಗಿ ಅವರ ಶ್ರೀಮತಿಯವರು ಬಹುಮಾನಗಳನ್ನು ಹಂಚಿದರು. ಗಾಂಧೀ ನಗರದ ಪ್ರಥಮ ವರ್ಗದ ಪ್ರಾಥಮಿಕ ಪಾಠಶಾಲೆಗೆ ಬಾಲಕರ ಶಾಲೆಯಲ್ಲಿ ಬಾಲಿಕೆಯರ ಸಂಖ್ಯೆ ಹೆಚ್ಚಿದೆಯೆಂದು ಪ್ರಥಮ ಬಹುಮಾನವು ಬಂದದ್ದು **'ಆನಂದ'** ದ ವಿಷಯ.

ಅಗ್ಗದರದ ಮನೆಗಳು:—ಪಟ್ಟಣ ಮತ್ತು ಹಳ್ಳಿ ಪ್ರದೇಶಗಳಲ್ಲಿ ಅಗ್ಗದರದ ಮನೆಗಳನ್ನು ಆರೋಗ್ಯಕರವಾದ ಸ್ಥಳಗಳಲ್ಲಿ ಕಟ್ಟಿಸಲು ಚೀಫ್ ಎಂಜಿನಿಯರು (ಬಿಲ್ಡಿಂಗ್ಸ್)ರವರ ಅಧ್ಯಕ್ಷತೆಯಲ್ಲಿ ಒಂದು ಉಪಸಮಿತಿಯನ್ನು ನಿರ್ಮಿಸಿ ತಕ್ಕ ಸಲಹೆಗಳನ್ನು ಕೊಡಲು ಸೂಚಿಸಿದ್ದಾರೆ.— ಈ ಮನೆಗಳು ಹೇಗಿರಬೇಕೆಂಬ ಬಗ್ಗೆ ಈಗಾಗಲೇ ಆರೋಗ್ಯ ಶಾಖೆಯವರು ಸೂಚನೆಗಳನ್ನು ಕೊಟ್ಟಿದ್ದಾರೆ.

ಹಿಂದೂ ಮಹಾ ಸಭೆ:— ಸಂಯುಕ್ತ ಪ್ರಾಂತದ ಗೋರಖಪುರದಲ್ಲಿ ಅಖಿಲ ಭಾರತ ಹಿಂದೂ ಮಹಾಸಭೆಯ ೨೭ ನೆಯ ಅಧಿವೇಶನವು ಮಹಾನಾಷ್ಟ್ರದ ಶ್ರೀ ಎಲ್. ಬಿ. ಭೋಪಟ್ಕರವರ ಅಧ್ಯಕ್ಷತೆಯಲ್ಲಿ ಡಿಶಂಬರ್ ೨೭, ೨೮, ೨೯. ನೆಯ ದಿನಾಂಕ ನಡೆಯಲಿದೆ. ಡಾಕ್ಟರ್ ಶ್ಯಾಮ ಪ್ರಸಾದ ಮುಖರ್ಜಿಯವರು ಉದ್ಘಾಟನೆಯ ಸಮಾರಂಭವನ್ನು ನೆರವೇರಿಸುವರು.

ಕೇಂದ್ರದ ತಾತ್ಕಾಲಿಕ ಸರ್ಕಾರದಲ್ಲಿ ಸಾರಿಗೆಯ ಮಂತ್ರಿಗಳಾಗಿದ್ದ ಶ್ರೀ ಅಸಫಲ್ಲಿಯವರು ಅಮೇರಿಕಾದಲ್ಲಿ ಭಾರತದ ರಾಯಭಾರಿಗಳಾಗಿ ನಿಯಮಿಸಲ್ಪಟ್ಟಿದ್ದಾರೆ. ಅವರ ಸ್ಥಳದಲ್ಲಿ ಮೌಲನಾ ಅಬುಲಕಲಾಂ ಆಜಾದರವರು ಮಂತ್ರಿಗಳಾಗುವ ಸಂಭವವಿದೆ.

ಟ್ರಾಕ್ಟರ ಮತ್ತು ರಸಾಯನಿಕ ಗೊಬ್ಬರ

೧೯೪೬ ನೆಯ ನವಂಬರ ತಿಂಗಳಿನ 'ರೂರಲ್ ಇಂಡಿಯಾ' ಪತ್ರಿಕೆಯಲ್ಲಿ ಜನಾಬ ಜಾಬಿರ ಎ. ಅಲ್ಲಿಯವರು ಬರೆದ ಬರೆಹವು ವಾಚನೀಯವಿದ್ದುದರಿಂದ ಅದರ ಅಂಶವನ್ನು ಉದ್ಧರಿಸಲಾಗಿದೆ.

ಹಿಂದುಸ್ತಾನದಲ್ಲಿ ರೆಂಟಿ ಮತ್ತು ದನಗಳ ಗೊಬ್ಬರದ ಉಪಯೋಗವನ್ನು ಒಕ್ಕಲತನದಲ್ಲಿ ಹಿಂದಿನಿಂದಲೂ ಮಾಡುವ ರೂಢಿಯುಂಟು.... ನೂರಾರು ವರುಷಗಳಿಂದ ಇವು ಪರಿಣಾಮಕಾರಿ ಮತ್ತು ಉಪಯುಕ್ತವೆಂದು ಸಿದ್ಧವಾಗಿವೆ. ಇದೀಗ ಶಾಸ್ತ್ರಜ್ಞರು ಮತ್ತು ಕಾರ್ಖಾನೆಗಾರರು ಮುಂದೆ ಬಂದಿರುವರು. ಕಬ್ಬಿಣ ರೆಂಟಿ ಮತ್ತು ರಸಾಯನಿಕ ಗೊಬ್ಬರದಿಂದ ಇವರು ನಮ್ಮ ಕಣ್ಣು ಕುಕ್ಕಿಸುತಿರುವರು. ಕೊನೆಗೆ ಬರುವುದು ಸರ್ವಶಕ್ತ ಟ್ರಾಕ್ಟರು.... ಕಬ್ಬಿಣ ರೆಂಟಿ ಭೂಮಿಯೊಳಗೆ ೭–೮ ಇಂಚು ಹೋಗಿ ಒಳಗಿನ ಮಣ್ಣನ್ನು ಮೇಲೆ ಇದ್ದ ಈ ಸಾರವತ್ತಾದ ಮಣ್ಣು ಕೆಳಗಿನ ಸತ್ತ ಮಣ್ಣಿನಿಂದ ಕೂಡಿ ಹೋಗುವದರಿಂದ ಕಡಮೆ ಫಲವತ್ತಾಗುತ್ತದೆ. ಈ ಫಲವತ್ತತೆಯನ್ನು ಹೆಚ್ಚಿಸುವದಕ್ಕಾಗಿ ಕೃತ್ರಿಮ ಗೊಬ್ಬರದ ಉಪಯೋಗ ನೂಡಲಾಗುತ್ತದೆ. ಆದರೆ ಭೂಮಿಯಲ್ಲಿಯ ಈ ನಿಸ್ಸಾರತೆಯನ್ನು ಹೋಗಲಾಡಿಸುವದಕ್ಕಾಗಿ ಸಾರವತ್ತಾದ ಮಿಶ್ರಿತ ಗೊಬ್ಬರವನ್ನೆ ಹಾಕುವದವಶ್ಯವಾಗಿದೆ. ಇದೀಗ ದನಗಳ ಗೊಬ್ಬರ ಮೊದಲಿಗಿಂತ ಹೆಚ್ಚು ದುರ್ಲಭವಾದ್ದರಿಂದ ಮಣ್ಣು ನಿಃಸಾರವಾಗುತ್ತದೆ. ಮತ್ತು ಲಾಭದಾಯಕ ಒಕ್ಕಲತನಕ್ಕೆ ಅಯೋಗ್ಯವಾಗುತ್ತದೆ. ಅಮೇರಿಕೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಹೀಗೆಯೆ ಆಯಿತು. ೧೫–೧೪ ಇಂಚು ಆಳ ಭೂಮಿಯನ್ನು ಟ್ರಾಕ್ಟರು ಉಳುವದರಿಂದ ಒಕ್ಕಲತನಕ್ಕೆ ಉತ್ತೇಜನ ದೊರೆತಂತಾಗುತ್ತದೆ. ಮತ್ತು ಕೆಲಸವು ಬೇಗನಾಗುತ್ತದೆ. ಇದರಿಂದ ದಡ್ಡಿಗಳಲ್ಲಿ ದನಗಳೇ ಇಲ್ಲದಂತಾಗಿದೆ ದನಗಳ ಗೊಬ್ಬರದ ಅಭಾವವೆನಿಸಹತ್ತಿದೆ. ಈ ಗೊಬ್ಬರಕ್ಕೆ ಸರಿಹೋಗುವ ಬೇರೆ ಯಾವ ಗೊಬ್ಬರವೂ ಇರುವದಿಲ್ಲ.... ಹಿಂದುಸ್ತಾನದಲ್ಲಿ ಟ್ರಾಕ್ಟರ ಮತ್ತು ರಸಾಯನಿಕ ಗೊಬ್ಬರ ಅದೊಂದು ಬಗೆಯ ದೊಡ್ಡಸ್ತನದ ಲಕ್ಷಣವಾಗಹತ್ತಿದೆ. ಅದು ಆತ್ಯಾಧುನಿಕ ಒಕ್ಕಲತನದ ಪ್ರತೀಕವೆಂದು ತಿಳಿಯಲಾಗುತ್ತದೆ. ಇದು ಘಾತಕವಾದದ್ದು ಟ್ರಾಕ್ಟರದಿಂದ ಬಲು ಬೇಗ ಆಗುವ ಕೆಲಸ ಮತ್ತು ರಸಾಯನಿಕ ಗೊಬ್ಬರದ ತಾತ್ಕಾಲಿಕ ಪರಿಣಾಮ ಅತ್ಯಂತ ಮೋಹಕವಾಗಿವೆ. ಆದುದರಿಂದ ಆಳವಾಗಿ ವಿಚಾರ ಮಾಡಲು ಮತ್ತು ಇದೊಂದು ಬಗೆಯ ಮೋಹವೋ ಎಂಬ ಬಗ್ಗೆ ಮನವರಿಕೆ ಮಾಡಿಕೊಳ್ಳಲು ಕೂಡ ಯಾರೂ ಮನಸು ಮಾಡುವದಿಲ್ಲ.

ನಾವು ಟ್ರಾಕ್ಟರಗಳನ್ನುಪಯೋಗಿಸಲಿ, ಉಪಯೋಗಿಸದಿರಲಿ ಒಂದು ಮಾತ್ರ ಸುಸ್ಪಷ್ಟವಿದೆ. ಭೂಮಿಯ ಫಲವತ್ತತೆಯನ್ನು ಕಾಯ್ದುಕೊಳ್ಳುವುದಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಮಿಶ್ರಿತ ಗೊಬ್ಬರದ ಉಪಯೋಗ ಮಾಡುವದು ಒಕ್ಕಲತನದಲ್ಲಿ ಅಪರಿಹಾರ್ಯವಾಗಿದೆ. ಮಿಶ್ರಿತ ಗೊಬ್ಬರ ಮಾಡುವದೇನೂ ರೂಢಿಯಲ್ಲಿದೆ ಆದರೆ ಅದನ್ನು ಸಾಕಷ್ಟು ಚೆನ್ನಾಗಿ ತಿಳಿದುಕೊಂಡಿಲ್ಲ. ಇಲ್ಲವೆ ದೊಡ್ಡ ಪ್ರಮಾಣದಲ್ಲಿಯೂ ಅದು ರೂಢಿಯಲ್ಲಿ ಬಂದಿರುವದಿಲ್ಲ. ರಾಷ್ಟ್ರೀಯ ಸರಕಾರದವರು ಪ್ರಚಾರ ಮೂಲಕ, ಮಿಶ್ರಿತ ಗೊಬ್ಬರವನ್ನು ಪೂರಯಿಸಿ ಒಕ್ಕಲಿಗರಿಗೆ ಅಮೂಲ್ಯ ಸಹಾಯವನ್ನು ಸಲ್ಲಿಸಬಲ್ಲರು. ಬೇಕಾದಷ್ಟು ಸಸ್ಯಗಳು, ದನಗಳ ಹೊಲಸು ಹಿಂಡಿ, ಎಲ್ಲ ಬಗೆಯ ಕಟ್ಟಿಗೆ ಮೊದಲಾದವುಗಳೆಲ್ಲ ಹೆಚ್ಚು ಪ್ರಮಾಣದಲ್ಲಿ ಇದೀಗ ಹಾಳಾಗುತಿರುವವು ಹಲವು ಸಲ ಇವೆಲ್ಲ ನಮಗೆ ಪೀಡೆಯನ್ನೂ ಕೊಡುತಿರುವವು. ಇವೆಲ್ಲ ಅಮೂಲ್ಯ ಪದಾರ್ಥಗಳನ್ನು ಸಮ್ಮಿಶ್ರಗೊಳಿಸಿ ಹಂಚತಕ್ಕದ್ದು. ನಗರಗಳಲ್ಲಿಯ ಹೊಲಸನ್ನೆಲ್ಲ ಮುನಸಿಪಾಲಿಟಿಯವರು ಉಪಯೋಗಿಸಬೇಕು. ಅಲ್ಲದೆ ದೊಡ್ಡ ನಗರಗಳ ಸುತ್ತಲೂ ಹಿಂಡುವ ದನಗಳು ಹೆಚ್ಚು ಪ್ರಮಾಣದಲ್ಲಿ ಇರುವವು. ಇವುಗಳ ಶಗಣಿ

ಮೂತ್ರವನ್ನು ಸಮ್ಮಿಶ್ರಗೊಳಿಸಬೇಕು. ಇದರಿಂದ ಹೆಚ್ಚು ಆಹಾರವನ್ನು ನಾವು ಬೆಳೆಯಬಲ್ಲೆವು. ಇಷ್ಟೇ ಅಲ್ಲ, ಪೌಷ್ಟಿಕ ಆಹಾರವನ್ನೂ ಬೆಳೆಯಬಲ್ಲೆವು.

ಈ ಪರಿಸ್ಥಿತಿಯಲ್ಲಿ ನಮ್ಮ ದೊಡ್ಡ ನಾಮಿಟ್ರೋಜನ ಫರ್ಟಿಲಾಯಿಜರ ಯಂತ್ರಗಳ ಗತಿಯೇನು? ರಸಾಯನಿಕ ದ್ರವ್ಯಗಳನ್ನು ಯಾವಾಗಲೂ ಸಣ್ಣಪ್ರಮಾಣದಲ್ಲಿ ಉಪಯೋಗಿಸಬೇಕು ಅವುಗಳ ಉಪಯುಕ್ತತೆಯೂ ಇದೆ. ಆದರೆ ಒಂದೇ ಸಮನೆ ದೊಡ್ಡ ಪ್ರಮಾಣದಲ್ಲಿ ಅವುಗಳ ಉಪಯೋಗ ಮಾಡಿದರೆ ಕೊನೆಯಲ್ಲಿ ಅವುಗಳಿಂದ ಅಪಾಯಕಾರಕ ಪರಿಣಾಮ ಉಂಟಾಗುವದೆಂಬಲ್ಲಿ ನನಗಂತೂ ಸಂಶಯವಿಲ್ಲ.— ಅದರಿಂದ ಮಣ್ಣಿನ ಮೇಲೆ ದುಷ್ಪರಿಣಾಮವಾಗಿ ಬಹಳ ಹಾನಿಯುಂಟಾಗುವದು. ಮಣ್ಣಿನಲ್ಲಿ ಅವಶ್ಯವಾಗಿ ಬೆಳೆಯಬೇಕಿದ್ದ ವಸ್ತುಗಳ ಮೇಲೆ ಅವು ದುಷ್ಪರಿಣಾಮವನ್ನುಂಟುಮಾಡುವವು. ಹಲ ಪ್ರಸಂಗಗಳಲ್ಲಿ ಅವು ಉಪಯುಕ್ತವಿರುವವೆಂದು ನಾವು ಹೇಳಬಹುದು. ಸಸ್ಯಗಳಿಗೆ ನಿತ್ಯದ ಆಹಾರ ಅವಾಗಲಾರವು. ಸರ್ ಅಲ್ಬರ್ಟ ಹಾವರ್ಡರು ಬರೆದುದನ್ನು ಉದ್ಧರಿಸುವಾ.

"ರೋಗದ ಪ್ರಮಾಣ ವಿತಿಮೀರಿದ್ದು ಒಕ್ಕಲಿಗನಿಗೆ ಒಳ್ಳೆ ವಿವಂಚನೆಗೆ ಕಾರಣವಾಗಿದೆ. ಈ ಅಸಮೂಧಾನಕರ ಪರಿಸ್ಥಿತಿಯ ಅರಿವು ಸಾರ್ವಜನಿಕರಿಗೆ ಸಾಕಷ್ಟಿರುವದಿಲ್ಲ. ಒಕ್ಕಲತನ ಶಾಸ್ತ್ರದ ಪರಿಣಾಮಗಳಿವೆಂದು ಹೇಳುವದಾದರೆ ಅವೇನು ಪ್ರೋತ್ಸಾಹಕರವಾಗಿರುವದಿಲ್ಲ, ನಿಜವಾಗಿಯೂ ಅವು ಮುಂದಟ್ಟಮೂಡುವಂಥವಿರುವದಿಲ್ಲ. ನಿಶ್ಚಿತವಾಗಿ ಅವು ಕಳೆದ ೪೦—೫೦ ವರ್ಷಗಳಿಂದ ನಡೆದುಬಂದವುಗಳು. ಕೃತಕ ಗೊಬ್ಬರದ ಆಧುನಿಕ ಉಪಯೋಗದ ಜತೆಯಲ್ಲಿಯೆ ಅವು ಸಾಗಿವೆ ಲೇಬಿಗ್‌ರವರ ಮಣ್ಣಿನ ರಸಾಯನಿಕ ದ್ರವ್ಯಗಳ ಸಂತೋಧನೆಯ ದುರುಪಯೋಗದಿಂದ ಕೃತಕ ಗೊಬ್ಬರದ ಉತ್ಪತ್ತಿಯಾಗಿದೆ. ಅಲ್ಲದೆ ಯಂತ್ರಗಳ ಸಂತೋಧನೆಯಿಂದ ಒಕ್ಕಲಿಗನಿಗೆ ಅಪರಿಹಾರ್ಯವೆಂದೆನಿಸಿದರಿಂದಲೂ ಕೃತ್ರಿಮ ಗೊಬ್ಬರದ ಉತ್ಪಾದನೆಯಾಯಿತು.

ಜಗತ್ತಿನಲ್ಲಿನ ವಿಶೇಷತಃ ಅಮೇರಿಕೆಯಲ್ಲಿಯ ಅನುಭವದಿಂದ ಅಳವಾಗಿ ಊಳಿದ ನಂತರ ಕೃತಕ ಗೊಬ್ಬರವನ್ನು ಮನಸ್ಸೀ ಹಾಕುವದರಿಂದ ಲಕ್ಷಾವಧಿ ಎಕರೆ ಅತ್ಯುತ್ತಮ ಭೂಮಿ ನಿಸ್ಸಾರವಾಗಿದೆಂದು ಕಂಡು ಬಂದಿದೆ. ಪ್ರತಿಯೊಂದು ಸಂದರ್ಭದಲ್ಲಿಯೂ ಸಾರವತ್ತಾದ ಮಣ್ಣಿನ ಅಭಾವವೆ ಮೂಲಕಾರಣವೆಂದು ಗೊತ್ತಾಗಿದೆ. ನಮ್ಮದೇಶ ಪಾಶ್ಚಾತ್ಯ ಪದ್ಧತಿಯಂತೆ ಪ್ರಗತಿ ಪಥದಲ್ಲಿ ಸಾಗಿದೆ. ಇದೀಗ ಪ್ರಗತಿಯ ಹೊಸ್ತಿಲಲ್ಲಿರುವೆವು. ಅಧುನಿಕ ಪಾಶ್ಚಾತ್ಯ ಒಕ್ಕಲಿಗರು ಯಾವತಗ್ಗಿನಲ್ಲಿ ಬಿದ್ದರೋ ಅಂಥ ತೆಗ್ಗಿನಲ್ಲಿ ನಾವಾದರೂ ಬೀಳಬಾರದೆಂದು ಆಶಿಸುವಾ. ಉಳಿದ ಹಲವು ದೇಶಗಳಲ್ಲಿಯಂತೆ ನಮಗೇನು ಪ್ರಾಣಿಗಳ ಗೊಬ್ಬರ ಸಿಕ್ಕುವದಿಲ್ಲವೆಂತಲ್ಲ. ನಮಗೆ ಬೇಕಾದ ಎಲ್ಲ ಬಗೆಯ ನೈಸರ್ಗಿಕ ಗೊಬ್ಬರ ನಮ್ಮಲ್ಲಿದೆ. ಆದರೆ ಯೋಗ್ಯರೀತಿಯಿಂದ ಅದರ ಉಪಯೋಗ ಮತ್ತು ಹಂಚಿಕೆಮಾಡಬೇಕಾಗಿದೆ. ಇದೇ ಮುಖ್ಯ ಕರ್ತವ್ಯ. ಅತ್ಯಂತ ದಕ್ಷ ಸಂಸ್ಥೆಯನ್ನು ಸಂಸ್ಥಾಪಿಸಬೇಕೆಂದೂ ಮಿಶ್ರಿತ ಗೊಬ್ಬರದ ವ್ಯವಸ್ಥೆ ಮಾಡಬೇಕೆಂದೂ ನಾವು ಸರಕಾರವನ್ನು ಬಿನ್ನವಿಸಿಕೊಳ್ಳಬೇಕಾಗಿದೆ. ಅಲ್ಲದೆ ಈಗ ಹೊರಗೆ ಹೋಗುತ್ತಿರುವ ಹಿಂಡಿ ಎಲುಬು ರಕ್ತ ಮುಂತಾದ್ದನ್ನೆಲ್ಲ ಹಿಂದುಸ್ತಾನದಲ್ಲಿಯೆ ಉಳಿಯುವಂತೆ ಮಾಡಬೇಕಾದುದೂ ಸರಕಾರದ ಕರ್ತವ್ಯವಾಗಿದೆ.

ಅ. ಕ. ಏಕೀಕರಣ ಪ್ರಚಾರ.

ಹಂಪಸಾಗರ, ಬದನೆಹಾಳು, ಆದವಾನಿ, ಅಲೂರು, ಹತ್ತಿಬೆಳಗಲ್ಲು, ಕೋಡಿಹಳ್ಳಿ, ಈ ಗ್ರಾಮಗಳಲ್ಲಿ ಪ್ರಚಾರವು ನಡೆದು ೧೬೦ ಸದಸ್ಯರನ್ನು ನೊಂದಾಯಿಸಲಾಯಿತು [ತಿ. ವೆ. ದೇಶಾಯಿ]

ಘಟನಾ ಸಮಿತಿಯ ಧ್ಯೇಯ ನಿರೂಪಣೆ.

ಪಂ. ಜವಹರಲಾಲರ ಗೊತ್ತುವಳಿ

ಪಂಡಿತ ಜವಹರಲಾಲರು ಹಿಂದುಸ್ತಾನದ ರಾಜ್ಯಘಟನೆ ಯಾವ ತತ್ವಗಳ ಮೇಲೆ ನಿರ್ಮಿಸಲ್ಪಡ ಬೇಕೆಂದು ಉಲ್ಲೇಖಿಸುವ ಗೊತ್ತುವಳಿಯೊಂದನ್ನು ಮೊದಲನೆಯದಾಗಿ ಘಟನಾ ಸಮಿತಿಯ ಸಭೆಯಲ್ಲಿ ತಾ ೧೩ಕ್ಕೆ ಮಂಡಿಸಿದರು. ಅದು ಹಿಂದುಸ್ತಾನವನ್ನು ಸ್ವತಂತ್ರ ಸಾರ್ವಭೌಮ ಪ್ರಜಾರಾಜ್ಯವೆಂದು ಉದ್ಘೋಷಿಸುತ್ತದೆ. ಅದಕ್ಕೆ ಳಂ ತಿದ್ದುಪಡಿಗಳು ಮಂಡಿಸಲ್ಪಟ್ಟಿದ್ದವು.

ಜವಹರರ ಗೊತ್ತುವಳಿ.

"ಹಿಂದುಸ್ತಾನವು ಸ್ವತಂತ್ರ ಸಾರ್ವಭೌಮ ಪ್ರಜಾರಾಜ್ಯವೆಂದು ಮತ್ತು ಅದರ ಭಾವೀ ಆಡಳಿತ ಕ್ಕಾಗಿ ಇಂದಿನ ಬ್ರಿಟಿಶ್ ಹಿಂದುಸ್ತಾನ, ದೇಶೀಯ ಸಂಸ್ಥಾನಗಳು, ಇವೆರಡು ಪ್ರದೇಶಗಳ ಹೊರಗಿರುವ ಹಿಂದುಸ್ತಾನದಲ್ಲಿ ಸೇರಬಯಸುವ ಬೇರೆ ಪ್ರದೇಶಗಳು ಇವುಗಳನ್ನೊಳಗೊಂಡ ಹಿಂದುಸ್ತಾನ ಒಕ್ಕೂಟಕ್ಕಾಗಿ ಒಂದು ರಾಜ್ಯಘಟನೆ ರಚಿಸಲಾಗುವದೆಂದು ಈ ಘಟನಾ ಸಮಿತಿಯು ಈ ಮೂಲಕ ತನ್ನ ದೃಢಹಾಗೂ ಗಂಭೀರ ನಿರ್ಧಾರವನ್ನು ಸಾರಿ ಹೇಳುತ್ತದೆ

ಅದರಲ್ಲಿ ಮೇಲ್ಕಾಣಿಸಿದ ಪ್ರದೇಶಗಳಿಗೆ— ಅವು ಈಗಿನ ಮೇರೆಗಳಂತೆಯೇ ಇರಲಿ ಅಥವಾ ಘಟನಾ ಸಮಿತಿಯು ನಿರ್ಣಯಿಸಿದಂತೆ ಬೇರೆ ಮೇರೆಗಳಂತಾಗಲಿ ಮತ್ತು ಅನಂತರ ಘಟನೆಯು ಕಾಯಿದೆಯಂತೆ ವ್ಯತ್ಯಸ್ತವಾದ ಸೀಮೆಗಳನ್ನೊಳಗೊಂಡಿರಲಿ, ಶೇಷಾಧಿಕಾರದೊಂದಿಗೆ ಪೂರ್ಣ ಸ್ವಾಯತ್ತತೆಯಿಂದ ಲಭ್ಯವಾಗತಕ್ಕದ್ದು. ಮತ್ತು ಹಿಂದುಸ್ತಾನದ ಒಕ್ಕೂಟ ಸರಕಾರಕ್ಕೆ ಬಿಟ್ಟು ಕೊಟ್ಟ ಅಥವಾ ಅದಕ್ಕೆ ಅಂತರ್ಗತ ಅಧಿಕಾರದಿಂದ ಪ್ರಾಪ್ತವಾಗುವ ಅಧಿಕಾರಗಳನ್ನು ಬಿಟ್ಟು ಉಳಿದ ವಿಷಯಗಳಲ್ಲಿ ಅವು ಸರಕಾರದ ಎಲ್ಲ ವ್ಯವಹಾರಗಳನ್ನು ನಡೆಸಬಹುದು; ಮತ್ತು ಸಾರ್ವಭೌಮ ಸ್ವತಂತ್ರ ಹಿಂದುಸ್ತಾನದ, ಅದರ ಅಂಗಗಳ ಹಾಗೂ ಸರಕಾರಗಳ ಅಧಿಕಾರವು ಜನತೆಯಿಂದ ಉಗಮವಾಗುತ್ತದೆ ಮತ್ತು ಸ್ವತಂತ್ರ ಹಿಂದುಸ್ತಾನದಲ್ಲಿ ಸಮಸ್ತ ಪ್ರಜಾಕೋಟಿಗೆ ನ್ಯಾಯ, ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಸಮಾನ ಸ್ಥಿತಿ ಅವಕಾಶ ಸಮತೆ ವಿಚಾರ, ಆಚಾರ, ಅರ್ಚನ ಧರ್ಮ, ಉದ್ಯೋಗ, ಸಂಘ ಮತ್ತು ಕೃತಿಸ್ವಾತಂತ್ರ್ಯ ಇವು ಕಾಯದೆಯಂತೆ ಹಾಗೂ ಸಾರ್ವಜನಿಕ ನೀತಿಗನುಸರಿಸಿ ದೊರಕುವಂತೆ ಆಶ್ವಾಸನ ಕೊಡಲಾಗುವದು ಮತ್ತು ಸ್ವತಂತ್ರ ಹಿಂದುಸ್ತಾನದಲ್ಲಿ ಅಲ್ಪಸಂಖ್ಯಾಕರು ಹಿಂದುಳಿದವರು ಗುಡ್ಡಗಾಡ ಜನರು, ದಲಿತ ವರ್ಗದವರು ಹಾಗೂ ಬೇರೆ ಹಿಂದುಳಿದ ಜಾತಿಯವರಿಗೆ ಸಾಕಷ್ಟು ಸಂರಕ್ಷಣೆಯನ್ನೊದಗಿಸಲಾಗುವದು; ಮತ್ತು ಪ್ರಜಾರಾಜ್ಯದ ಪ್ರದೇಶಗಳ ಅಖಂಡತನವನ್ನು ಹಾಗೂ ಭೂ, ಜಲವಾಯು, ಪ್ರದೇಶಗಳಲ್ಲಿ ಅದರ ಸಾರ್ವಭೌಮ ಹಕ್ಕುಗಳು ನ್ಯಾಯ ಮತ್ತು ಸುಸಂಸ್ಕೃತ ರಾಷ್ಟ್ರಗಳ ಕಾಯದೆಪದ್ಧತಿಗನುಸರಿಸಿ ರಕ್ಷಿಸಲಾಗುವದು. ಮತ್ತು ಈ ಪ್ರಾಚೀನ ರಾಷ್ಟ್ರವು ಪ್ರಪಂಚದಲ್ಲಿ ಅಧಿಕಾರ ಪೂರ್ಣವಾದ ಸನ್ಮಾನ್ಯ ಸ್ಥಾನವನ್ನು ಗಳಿಸಿ ಜಾಗತಿಕ ಶಾಂತಿ ಹಾಗು ಮಾನವಜನಾಂಗದ ಹಿತರಕ್ಷಣೆಯಲ್ಲಿ ಸಹಾಯ ಮಾಡುವಂತೆ ಪ್ರಯತ್ನಿಸಲಾಗುವದು'

ಶ್ರೀಮತಿ ವಿಜಯಲಕ್ಷ್ಮಿ ಪಂಡಿತ.

ಅಮೇರಿಕಾದಲ್ಲಿ ದಕ್ಷಿಣ ಆಫ್ರಿಕಾ ಭಾರತೀಯರ ಪರವಾಗಿ ಯಶಶ್ವಿಯಾಗಿ ವಾದಿಸಿ ಜಯವನ್ನು ಸಂಪಾದಿಸಿ ಶ್ರೀಮತಿಯವರು ಭಾರತಕ್ಕೆ ಬಂದರು—

ಭಾರತದ ವಿಷಯಕ್ಕೆ ಬ್ರಿಟಿಷ ಮಂತ್ರಿವರ್ಗದವರಾಗಲಿ, ಪಾರ್ಲಿಮೆಂಟದವರಾಗಲಿ ಏನೇಹೇಳಿದರೂ ಭಾರತದ ಪ್ರಗತಿಯನ್ನು ತಡೆಯಲು ಸಾಧ್ಯವಿಲ್ಲೆಂದು ಶ್ರೀಮತಿಯವರು ಅಭಿಪ್ರಾಯಪಟ್ಟರು.

'ಹರಿಜನ'ದ ಲೇಖನಗಳು.

(೧)

ಧರ್ಮದಲ್ಲಿ ಚಾಣಕ್ಯ ನೀತಿ.

ಯಾವುದೊಂದು ಧರ್ಮದ ಉತ್ಸಾಹೀ ಪುರಸ್ಕರ್ತರು ಸರಕಾರವನ್ನು ತಮ್ಮ ನಿಯಂತ್ರಣದಲ್ಲಿ ತೆಗೆದುಕೊಂಡು ಆ ಧರ್ಮದ ಪ್ರಚಾರ ಮಾಡುವ ಮಹತ್ವಾಕಾಂಕ್ಷೆಯನ್ನು ತಾಳಿದಾಗೆಲ್ಲ, ರಕ್ತಪಾತ ಮತ್ತು ಅಮಾನುಷ ಅತ್ಯಾಚಾರ ನಡೆದುದುಂಟು. ಪ್ರಾಚೀನಕಾಲದಲ್ಲಿ ಅರಸನೆ ರಾಜ್ಯದ ಸರ್ವಾಧಿಕಾರಿಯಾಗಿರುವಾಗ ತಮ್ಮ ಧರ್ಮವನ್ನು ಸ್ವೀಕರಿಸಲು ಅವನ ಮನವಲಿಸುವದು ಸುಲಭವಾದ ಮಾರ್ಗವಾಗಿದ್ದಿತು. ಅನಂತರ ಆ ಅರಸನ ಮುಖಾಂತರವಾಗಿಯೆ ದೇಶದಲ್ಲೆಲ್ಲ ಆ ಧರ್ಮದ ಪ್ರಚಾರ ಮಾಡಲಾಗುತಿದ್ದಿತು. ಆ ಧರ್ಮವನ್ನು ಸ್ವೀಕರಿಸುವವರಿಗೆ ಆಗ ವಿಶೇಷ ಲಾಭ ಮತ್ತು ನಿರಾಕರಿಸುವವರಿಗೆ ಶಿಕ್ಷೆ ಕಾಯ್ದಿಟ್ಟಿದ್ದವು. ತಪ್ಪಿತಸ್ಥನ ಮೇಲೆ ಕರ ಹೇರುವದು, ಬಹಿಷ್ಕರಿಸುವದು, ಸೆರೆಮನೆಗಟ್ಟುವದು ಅವನ ಅವಯವಗಳನ್ನು ಕಡೆದು ಹಾಕುವದು, ಅನಸ್ವಿತ ರೀತಿಯಿಂದ ಅವನ ಕೊಲೆ ಮಾಡುವದು. ಅವನ ಆಸ್ತಿಯನ್ನು ಜಪ್ತುಮಾಡುವದು, ದೇಶಭ್ರಷ್ಟಮಾಡುವದು, ಸ್ತ್ರೀಯರನ್ನು ಮತ್ತು ಅಶಕ್ತರನ್ನು ಒತ್ತಾಯದಿಂದ ಧರ್ಮಾಂತರಿಸುವದು, ಅಲ್ಲದೆ ತಮ್ಮ ಬುದ್ಧಿಶಕ್ತಿಗೆ ಹೊಳೆದ ವಿವಿಧ ರೂಪದಿಂದ ಛಲಿಸುವದು ಇವೇ ಮೊದಲಾದ ಶಿಕ್ಷೆಗಳು ಆಗ ವಿಧಿಸಲಾಗುತಿದ್ದವು. ಕತ್ತಿ ಗಂಡುಗಳ ಸಹಾಯದಿಂದಲೂ ಉಳಿದ ಹಲವು ದೇಶಗಳಲ್ಲಿ ಧರ್ಮಪ್ರಚಾರ ಸಾಗುತಿದ್ದಿತು.

ಬುದ್ಧನ ಅನುಯಾಯಿಗಳಲ್ಲೊಬ್ಬನಾದ ದೇವದತ್ತನು ಬುದ್ಧನನ್ನು ಬಿಟ್ಟುಹೋಗಿ ಬೇರೆ ಪಂಥವನ್ನು ಕಟ್ಟಲು ನಿರ್ಧರಿಸಿದಾಗ ನುಳಿದ ದೇಶದ ರಾಜ ಪುತ್ರನಾದ ಅಜಾತಶತ್ರುವನ್ನು ತನ್ನ ಬಲೆಯಲ್ಲಿ ಕೆಡಹಿಕೊಳ್ಳಬೇಕೆಂದು ಬಗೆದನು. ಹಾಗೆ ಅವನನ್ನು ಬಲೆಯಲ್ಲಿ ಕೆಡುಹಿಕೊಂಡ ನಂತರ ವೃದ್ಧರಾಜನನ್ನು ತುರಂಗದಲ್ಲಿಡಲು ಅವನನ್ನು ಪ್ರೇರೇಪಿಸಿದನಲ್ಲದೆ ರಾಜ್ಯಪೀಠವನ್ನಲಂಕರಿಸಲೂ ಅವನನ್ನು ಪ್ರೋತ್ಸಾಹಿಸಿದನು. ಅನಂತರ ಅವನ ಸಹಾಯದಿಂದ ಬುದ್ಧನ ಕೊಲೆ ಮಾಡಲು ಕೂಡ ಅವನು ಹಲವಾರು ಸಲ ಪ್ರಯತ್ನಿಸಿದನು. ಅವನ ಅನುಯಾಯಿಗಳನ್ನು ಛಲಿಸಲು ಹವಣಿಸಿದನು.

ಪ್ರಲ್ಲಾದರಾಜನ ಕತೆ— ಒಬ್ಬ ವ್ಯಕ್ತಿಯು ಜೀನನವೆಂದು ತೋರುವಂತೆ ಕಾವ್ಯಮಯವಾಗಿ ವರ್ಣಿಸಲ್ಪಟ್ಟಿದೆ. —ಪರಧರ್ಮೀಯ ಅರಸರು ಬೇರೆ ಧರ್ಮಪಂಥದವರನ್ನು ಅಮಾನುಷ ರೀತಿಯಿಂದ ಛಲಿಸುತ್ತಿರುವುದನ್ನು ವಿವರವಾಗಿ ಚಿತ್ರಿಸುತ್ತದೆ.

ಜಗತ್ತಿನ ಇತಿಹಾಸವೆಲ್ಲ ಇಂಥ ಛಲನೆಯ ವೃತ್ತಿಗಳಿಂದ ತುಂಬಿದೆ. ಅಧಿಕಾರ ಕೈಯ್ಯಲ್ಲಿದ್ದ ಒಂದು ಧರ್ಮದವರು ಪರಧರ್ಮೀಯರನ್ನು ಬಗೆಬಗೆಯಿಂದ ಛಲಿಸಿದ, ಕಾಲಾನಂತರ ಅಧರ್ಮದವರ ಕೈಯ್ಯಲ್ಲಿ ಅಧಿಕಾರ ಬಂದಾಗ ಮೊದಲು ತಮ್ಮನ್ನು ಛಲಿಸಿದವರನ್ನು ತಿರುಗಿ ಛಲಿಸಿದ್ದ ಉದಾಹರಣೆಗಳುಂಟು. ಈ ರೀತಿಯಾಗಿ ಹಿಂದುಸ್ತಾನದಲ್ಲಿ ವೈದಿಕರು, ಬುದ್ಧರು, ಜೈನರು, ಲಿಂಗಾಯಿತರು, ಶೈವರು, ವೈಷ್ಣವರು, ಶೀಖರು, ಮತ್ತು ಅವರ ಬೇರೆ ಬೇರೆ ಒಳಪಂಗಡದವರು ಅಧಿಕಾರದಲ್ಲಿದ್ದ ಧರ್ಮಾನುಯಾಯಿಗಳಿಂದ ಛಲಿಸಲ್ಪಟ್ಟಿದುಂಟು. ತಮ್ಮ ಕೈಯಲ್ಲಿ ಅಧಿಕಾರಬಂದ ಕೂಡಲೆ ಸರತಿಯಂತೆ ವಿರುದ್ಧ ಧರ್ಮವನ್ನು ಅವರು

ಸುಭಾಸ್
ರಾಷ್ಟ್ರಗೀತೆ

ಡಿಶಂಬರ್‌ನಲ್ಲಿ—ಪ್ರಕಟವಾಗಲಿದೆ.

ಈ ಚಿಕ್ಕ ಪುಸ್ತಕದಲ್ಲಿ ಆಜಾದ್ ಹಿಂದ್ ಭಾರತ ರಾಷ್ಟ್ರೀಯ ಸೈನ್ಯದ (INDIAN NATIONAL ARMY) ಕೂಚಿನ ಪದ, ರಣಗಾಯನಗಳಿವೆ.—೧೯೩೦, ೧೯೩೨, ೧೯೪೨, ಸತ್ಯಾಗ್ರಹ ಚಳುವಳಿಗಳಲ್ಲಿ ಹಾಡಲ್ಪಟ್ಟ- ಪ್ರಭಾತ ಫೇರಿಗಳಲ್ಲಿ ಹಾಡಲು ಯೋಗ್ಯವಾದ ರಾಷ್ಟ್ರೀಯ ಗಾಯನಗಳ ಇಂಥಾ ವಿಪುಲ ಸಂಗ್ರಹವು ಇದುವರಿವಿಗೆ ಕರ್ನಾಟಕದಲ್ಲಿ ಎಲ್ಲಿಯೂ ಪ್ರಕಟವಾಗಿಲ್ಲ.

ಕಾಗದದ ಅಭಾವದಿಂದ ಸ್ವಲ್ಪೇ ಪ್ರತಿಗಳನ್ನು ಪ್ರಕಟಿಸುತ್ತಲಿದ್ದೇವೆ. ೧೨ ಪುಸ್ತಕಗಳಿಗೆ ಕಡನು ಇಲ್ಲದೆ ತರಿಸಿಕೊಳ್ಳುವವರಿಗೆ ಟಪಾಲು ಖರ್ಚು ಮಾಫಿ—ತ್ವರೆ ಮಾಡಿರಿ.

ಕ್ರೌನು ಸೈಜು, ಸುಂದರ ಮುದ್ರಣ.

ಬೆಲೆ ೦-೮-೦

ನವಭಾರತ—ಕಾರ್ಯಾಲಯ, ಬಳ್ಳಾರಿ.

ಘಟನಾ ಸಮಿತಿ.

ಘಟನಾ ಸಮಿತಿಯಲ್ಲಿ ಪಂಡಿತ ಜವಹರಲಾಲರ ತೀರ್ಮಾನದಮೇಲೆ ಚರ್ಚೆಯು ಸಾಗಿದೆ ಡಾಕ್ಟರ್ ಜಯಕರರು ಮುಸ್ಲಿಂಲೀಗಿನವರು ಬಂದಿಲ್ಲವಾದಕಾರಣ ಇದರ ವಿಮರ್ಶೆಯನ್ನು ಮುಂದುವರಿಸಲು ಕೇಳಿದಾರೆ

ಗಾಂಧಿ ಜೀವನ—ಶ್ರೀರಾಂಪುರದಲ್ಲಿ

ಗಾಂಧೀಜಿಯವರು ವ್ರಾತಃಕಾಲ ೪ ಕ್ಕೆ ಎದ್ದು ರಾತ್ರೆ ೧೦ ಘಂಟೆವರಿವಿಗೂ ಕೆಲಸದಲ್ಲಿ ತೊಡಗಿರುವರು. ಹಿಂದೂಸ್ತಾನದ ಎಲ್ಲಾ ಭಾಗಗಳಿಂದಲೂ ಸಂದರ್ಶಕರು ಬಂದು ಅವರ ಸಲಹೆ ಸೂಚನೆಗಳನ್ನು ಪಡೆಯುತ್ತಲಿರುವರು. ಮಧುಪುರದಲ್ಲಿ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್‌ದವರು ನಡೆಸಲಿರುವ ಆಸ್ಪತ್ರೆಯ ಸಮೂರಂಭನನ್ನು ನಡೆಸುತ್ತ ಡಾಕ್ಟರವರು— ವರದೇಶದ ಔಷಧಗಳನ್ನವಲಂಬಿಸದೆ ಹಳ್ಳಿಗಳಲ್ಲಿ ಮೊರೆಯುವ ಶ್ರೀಸ್ಮ ಗಿಡಮೂಲಿಕೆಗಳ ಉಪಯೋಗಮೂಡಿ ಆಯುರ್ವೇದ ಯುನಾನಿಗಳಿಗೆ ಪ್ರೋತ್ಸಾಹ ಕೊಡಬೇಕೆಂದರು

ಕಾಂಗ್ರೆಸ್ ಕಾರ್ಯಕಾರೀ ಸಮಿತಿ.

ಮಹಾತ್ಮ ಗಾಂಧಿಯವರಿರುವ ನವಖಾಲಿ ಜಿಲ್ಲೆಯ ಕೊಮಿಲಾದಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯುಕೂಡಿ- ಗಾಂಧೀಜೀಯವರ ಸಲಹೆ ಸೂಚನೆಗಳನ್ನು ಪಡೆಯುವುದೆಂಬ ವಿಷಯವು ಪಂಡಿತ ಜವಹರಲಾಲರಿಂದ ಕಲ್ಕತ್ತೆಯಲ್ಲಿ ಘೋಷಿತವಾಯಿತು. ನೆಹರೂರವರು ಈ ತಿಂಗಳ ಕೊನೆಯಲ್ಲಿ ಗಾಂಧೀಜಿಯವರನ್ನು ನೋಡುವರೆಂದು ಹೇಳಿದರು. ಅವರು ನೋಡುವ ಮುನ್ನ ಕಾಂಗ್ರೆಸ್ ಮುಖಂಡರು ಕೆಲವರು ಮಹಾತ್ಮರನ್ನು ಕಾಣಲಿರುವರು

ಪಂಡಿತ ಜವಹರಲಾಲ್.

ಪಂಡಿತ ಜವಹರಲಾಲ್ ನೆಹರೂರವರು ಕಲ್ಕತ್ತಾ ಅಸೋಸಿಯೇಟೆಡ್ ಛೇಂಬರ್ ಆಫ್ ಕಾಮರ್ಸ್‌ದಲ್ಲಿ ಈ ವರ್ಷ ಭಾಷಣ ಮಾಡುತ್ತಾ ಭಾರತ ಇಂಗ್ಲೆಂಡಿನ ರಾಜಕೀಯ- ಆರ್ಥಿಕ ಸಂಬಂಧಗಳನ್ನು ವಿವರಿಸಿದರು. ಈ ಸಂಸ್ಥೆಯಲ್ಲಿ ಕಳೆದ ೨೫ ವರ್ಷಗಳಿಂದ- ವೈಸ್ರಾಯರು ರಾಜಕೀಯ ಭಾಷಣ ಕೊಡುವ ಸಾಂಪ್ರದಾಯವಿದ್ದಿತು.

ಬಳ್ಳಾರಿ ಜಿಲ್ಲಾ ಲೇಬರ್ ಸಲಹೆ ಸಮಿತಿ.
(Dt. Labour Advisory Committee.)

ಈ ತಿಂಗಳ ಕೊನೆಯ ವಾರದಲ್ಲಿ 30-12-46 ಸಮಾವೇಶವಾಗಲಿರುವ ಬಳ್ಳಾರಿಜಿಲ್ಲಾ ಸಲಹೆಸಮಿತಿ (ಕಲೆಕ್ಟರ್‌ರವರು ಅಧ್ಯಕ್ಷರು) ಗೆ ಜಿಲ್ಲಾ ಹರಿಜನಸೇವ ಕಸಂಘದ ಪರವಾಗಿ ಈ ನಿರ್ಣಯಗಳನ್ನು ಮಾಡಬೇ ಕೆಂದು ಪತ್ರವು ಹೋಗಿದೆ.

(1) ಲೇಬರ್ ಶಾಲೋಪಾಧ್ಯಾಯರಿಗೆ ಕೊಡಬೇ ಕಾದ ಸ್ಕೇಲ್ ಆಫ್‌ಪೇ ಇಕ್ರಿಮೆಂಟ್‌ಗಳನ್ನು ಕೊ ಟ್ಟು, ಹಿಂದೆ ಮಾಡಿದ ತಪ್ಪುಗಳನ್ನು ಸವರಣೆ ಮಾಡ ಬೇಕು.

(2) ಲೇಬರ್ ಶಾಲೋಪಾಧ್ಯಾಯರಿಗೆ ಕೊಡಬೇ ಕಾದ ಟಿ. ಎ. ಬಿಲ್. ಒತ್ತವು ಅನೇಕ ವರ್ಷಗಳಿಂದ ಬಾಕಿಯುಳಿದಿದೆ. ಇದನ್ನು ಕೊಡಬೇಕು. T. A. ಕೊಡಲಾಗದಿದ್ದರೆ. ಉಪಾಧ್ಯಾಯರನ್ನು ವರ್ಗಾಯಿಸ ಲೇಬಾರದು.

(3) ಇಷ್ಟೇ ಸರ್ವಿಸಿರಬೇಕೆಂಬ ನಿಯಮವನ್ನು ತೆಗೆದುಎಲ್ಲ ಉಪಾಧ್ಯಾಯರನ್ನೂ ಕಾಯಂ ಮಾಡಲು ಲೇಬರ್ ಕಮೀಶನರವರಿಗೆ ಸಿಫಾರ್ಸು ಪತ್ರಕಳು ಹಿಸುವುದು.

(4) ಕಳೆದ ೩ವರ್ಷಗಳಲ್ಲಿ ಜಿಲ್ಲಾಲೇಬರ್ ಆಫೀಸ ರವರು ಬಟ್ಟೆ, ಪುಸ್ತಕ, ಹಲಗೆಗಳಿಗಾಗಿ ಎಲ್ಲಿ, ಹೇಗೆ ಖರ್ಚುಮಾಡಿದ್ದರ ವಿವರ.

(5) ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ಹರಿಜನರಿಗೆ ಕುಡಿಯುವ ನೀರಿನ ಕೊರತೆ ಇರುವ ಕಾರಣ 1947-48ರಲ್ಲಿ ಕೊನೆಯಪಕ್ಷ 100 ಭಾವಿಗಳನ್ನಾದರೂ ಮುಗಿಸಬೇಕು. ಇದುವರಿವಿಗೆ 1946-47 ರ ಲ್ಲಿ ಎಷ್ಟು ಭಾವಿಗಳನ್ನು ಮುಗಿಸಲಾಗಿದೆ?

(6) ಹರಿಜನರಿಗೆ ಮನೆಕಟ್ಟಿಕೊಳ್ಳಲು ಭೂಮಿಯ ನ್ನು ಅಕ್ರಮಿಸುವ ವಿಧಾನದಲ್ಲಿ ಹೆಚ್ಚಿನ ಅಲಸ್ಯವಾ ಗುತ್ತಲಿದೆ. ಇದನ್ನು ತಪ್ಪಿಸಬೇಕು.

(7) ಬಳ್ಳಾರಿ ಹಿರಾಳುಕ್ಕಡ, ಮಹಾನಂದಿಕೊಟ್ಟಿದ ಹರಿಜನಕೇರಿಗಳಲ್ಲಿ- ಪಾಯಿಖಾನೆಗಳನ್ನು ಕಟ್ಟಿಸಲು ಕಮೀಶನರವರನ್ನು ಕೇಳುವುದು.

ಭಾರತದಿಂದ ಬಂಗಾರದ ನಿರ್ಯಾತ.

೧೭೦ ಲಕ್ಷರೂ. ಬೆಲೆ ಬಾಳುವ ಬಂಗಾರದ ಸ ವರನ್ನುಗಳು ಗ್ರೀಸ್ ರಾಜಧಾನಿ ಅಥೆನ್ಸ್‌ಕ್ಕೆ ಕಳುಹಿಸ ಲಾದವು. ಮತ್ತೊಂದು ಸಲ ಅದೇ ಸ್ಥಳಕ್ಕೆ ಭಂಗಾರದ ನಿರ್ಯಾತವಾಗಲಿದೆ.

ಪೋರ್ಚುಗೀಸ್ ಹಿಂದೂಸ್ತಾನ.

ಹಿಂದೂಸ್ತಾನದಲ್ಲಿ ಪೋರ್ಚುಗೀಸರ ಸ್ವಾಧೀನ ದಲ್ಲಿರುವ ಕೆಲ ಭಾಗಗಳ ರಾಜಕೀಯ ಪರಿಸ್ಥಿತಿಯನ್ನ ನುಲಕ್ಷಿಸಿ ನೂತನ ಸುಧಾರಣೆಯನ್ನು ಕೊಡಲು ಇ ಚ್ಛಿಸಿರುವುದಾಗಿ ಪ್ರಕಟವಾಗಿದೆ. ಇಲ್ಲಿನ ಕೆಲ ಸತ್ಯಾ ಗ್ರಹಿ ಕೈದಿಗಳನ್ನು ಪೋರ್ಚುಗಲ್ಲಿಗೆ ಕಳುಹಿಸಲು ಏ ರ್ಪಾಟು ನಡೆದಿದೆ. ಸುಮಾರು ೨೫ ಹಳ್ಳಿಗಳಲ್ಲಿಗೆ ಸಾಮೂಹಿಕ ಸತ್ಯಾಗ್ರಹವು ಪ್ರಾರಂಭವಾಗಿದೆ.

ಹರಪನಹಳ್ಳಿ.
(ನಮ್ಮಸ್ವಂತ ಸುದ್ದಿಗಾರರಿಂದ)

ಈ ಊರಿನಸೀದಾ ಅಂಗಡಿಗಳಿಗೆ ಕಳೆದ ೧೫ದಿ ನಗಳಿಂದ ಅಕ್ಕಿ, ಜೋಳದ, ಪೂರೈಕೆಯು ಸರಿಯಾಗಿ ಆಗದೆ, ಬೊಬ್ಬಾಟವೆದ್ದಿದೆ. ಕೂಲಿಕಾರ, ಬಡವರಿಗೆ ಅತೀವ ತೊಂದರೆಯಾಗಿದೆ. ಕಾ ರ್ಡು ಗ ಳ ನ್ನು (Ration cards) ಮುನಬಂದಂತೆ ಅದಲು ಬದಲು ಮಾಡುವ ಸ್ವೇಚ್ಛಾ ಪ್ರವೃತ್ತಿಗೆ ಕೂಡಲೇ ತಡೆಯಾಗ ಬೇಕು. ಗ್ರಾಮ ಸಮಿತಿಯು ನಿರ್ವೀರ್ಯವಾದಂತಿದೆ. ಕಲೆಕ್ಟರವರು ಪೂರೈಕೆಗೆ ಸರಿಯಾಗಿ ಕೂಡಲೇ ಏರ್ಪ ಡಿಸಬೇಕು.

ಳಲಿಸಿದ್ದೂ ಉಂಟು. ಅದೇ ರೀತಿಯಾಗಿ ಯುರೋಪಿನಲ್ಲಿ, ಪಶ್ಚಿಮ ಏಶಿಯಾದಲ್ಲಿ 'ಕ್ರೂಶೇಡ'ಗಳು ಮತ್ತು 'ಜಹಾದು'ಗಳು ನಡೆದವು. ಯಹೂದ್ಯರು ಮತ್ತು ರೋಮನ್‌ರು ಕ್ರಿಶ್ಚಿಯನರನ್ನು ಛಲಿಸುವದು, ಒಂದು ಕಾಲಕ್ಕೆ ನಡೆದರು, ಮತ್ತೊಂದು ಕಾಲಕ್ಕೆ ಕ್ರಿಶ್ಚಿನ್‌ರು ಯಹೂದ್ಯರನ್ನು ಛಲಿಸಿದ್ದುಂಟು. ಕ್ರಿಸ್ತಶಕದ ಪ್ರಾರಂಭದಿಂದ ಆರ್ವಾಚೀನ ಕಾಲದವರೆಗೆ ತಮ್ಮ ಧರ್ಮ ಪುಥಕ್ಕೆ ವಿರೋಧಿಯಾಗಿದ್ದವರನ್ನೆಲ್ಲ ಅನಸ್ಯೂತ ರೀತಿಯಿಂದ ಛಲಿಸಿದ ಹೃದಯದ್ರಾವಕ ವರ್ಣನೆಗಳು ಮತ್ತು ಬೋಲ್ಶೆವಿಕ್ ರಶಿಯದಲ್ಲಿ ಕ್ರಿಶ್ಚನ್ ಧರ್ಮವನ್ನೆ ಹತ್ತಿಕ್ಕಿಬಿಡಲು ಮಾಡಿದ ಪ್ರಯತ್ನಗಳು ಯುರೋಪ ಇತಿಹಾಸದಲ್ಲಿ ಸುಪ್ರಖ್ಯಾತವಿದ್ದುದರಿಂದ ಇಲ್ಲಿ ವಿವರವಾಗಿ ವರ್ಣಿಸುವ ಅವಶ್ಯಕತೆಯಿಲ್ಲ.

ಚೀನ ಮತ್ತು ಜಪಾನದಲ್ಲಿಯೂ ಇಂಥ ಕತೆಗಳಿಲ್ಲದಿಲ್ಲ. ಸರಕಾರಗಳು ಸರ್ವಧರ್ಮ ಪಂಥಾತೀತವಾಗಿ ಸಾರ್ವಜನಿಕ ಜೀವನಗಳಲ್ಲಿ ಪ್ರಜೆಗಳ ವಿಶಿಷ್ಟಧರ್ಮಕ್ಕೆ ಮಹತ್ವಕೊಡದೆ ನಿಷ್ಪಕ್ಷಪಾತ ರೀತಿಯಿಂದ ಎಲ್ಲ ಧರ್ಮದವರನ್ನು ನೋಡಹತ್ತಿದಂದಿನಿಂದಲೆ ಜನತೆಗೆ ಧರ್ಮ ಸ್ವಾತಂತ್ರ್ಯ ಸಿಕ್ಕಹತ್ತಿತು. ಮತ್ತು ಶಾಂತರೀತಿಯಿಂದ ತಮ್ಮ ಧರ್ಮವನ್ನನುಸರಿಸುವ ಅವಕಾಶ ದೊರೆಯಹತ್ತಿತು.

ಹಿಂದುಸ್ತಾನದಲ್ಲಿ ಬಹಳ ಸಂಕಷ್ಟಗಳನ್ನನುಭವಿಸಿದ ನಂತರ ಧರ್ಮಗಳ ಅಭಿವೃದ್ಧಿಯಾಗಿ ಧಾರ್ಮಿಕ ಸಹಿಷ್ಣುತೆಯ ಸದ್ಗುಣ ಆಯಾ ಧರ್ಮಾನುಯಾಯಿಗಳಲ್ಲಿ ಬರಹತ್ತಿತು. ಮತ್ತು ಶೈವ, ವೈಷ್ಣವ, ಜೈನ, ಬುದ್ಧ; ಏಕ ದೇವತಾವಾದಿ, ಅನೇಕ ದೇವತಾವಾದಿ, ಭೌತಿಕವಾದಿ, ಮತ್ತು ನಿರೀಶ್ವರವಾದಿ ಮೊದಲಾದ ಪರಸ್ಪರ ವಿರುದ್ಧ ಮತ್ತು ತೀರ ಭಿನ್ನ ಭಿನ್ನವಾದ ಧರ್ಮಪಂಥಗಳು ಹಿಂದೂ ಧರ್ಮವೆಂದು ಹೇಳುವದಾದರೆ ಪರಸ್ಪರ ಧರ್ಮಸಹಿಷ್ಣುತಾಭಾವವೊಂದೆ ಇವೆಲ್ಲವುಗಳಿಗೆ ಸಾಮಾನ್ಯ ಮುದ್ದೆಯಾಗಿದ್ದಿತೆಂದು ಹೇಳಬಹುದು.

ಕ್ರಿಸ್ತ ಶಕದ ಪೂರ್ವದಲ್ಲಿಯೇ ಹಿಂದುಸ್ತಾನ ಈ ಸತ್ಯವನ್ನು ಕಂಡುಕೊಂಡಿತು. ಅದು ಜೀವನದಲ್ಲಿ ಚೆನ್ನಾಗಿ ಸಮರಸವಾಗಬೇಕಾದರೆ ಮುಂದೆ ಹಲವಾರು ಶತಮಾನಗಳು ಹತ್ತಿದವೆಂಬ ಮಾತು ಬೇರೆ. ಬಹುಶಃ ಇಸ್ಲಾಮ ಮೊದಲು ಹಿಂದುಸ್ತಾನದಲ್ಲಿ ಕಾಲಿಟ್ಟಾಗ ಧರ್ಮಸಹಿಷ್ಣುತಾಭಾವನೆ ಹಿಂದುಸ್ತಾನದಲ್ಲಿ ಚೆನ್ನಾಗಿ ಬೇರು ಬಿಟ್ಟಿದ್ದಿತು. ಚಕ್ರವರ್ತಿ ಅಶೋಕನಿಗೆ ಇದರ ಸಂಪೂರ್ಣ ಅರಿವಾಗಿದ್ದಿತು. ವ್ಯಕ್ತಿಶಹ ಅವನು ಬುದ್ಧಧರ್ಮದ ಅನುಯಾಯಿಯಾಗಿದ್ದನು. ತನಗೆ ಪರಿಚಿತವಿದ್ದ ಜಗತ್ತಿನಲ್ಲೆಲ್ಲ ಬುದ್ಧ ಧರ್ಮದ ಸಂದೇಶವನ್ನು ಬೀರಬೇಕೆಂದೂ ಅವನು ಒಳ್ಳೆ ಉತ್ಸಾಹಿಯಾಗಿದ್ದನು. ಪಂಡಿತ ಜವಾಹರಲಾಲರು ಬರೆದ ಡಿಸ್ಕವರಿ ಆಫ್ ಇಂಡಿಯಾ ಪುಸ್ತಕದಲ್ಲಿ ಹೀಗೆ ಬರೆಯಲಾಗಿದೆ.

"ಅವನ ದೂತರು, ರಾಯಭಾರಿಗಳು ಸಿರಿಯಾ ಇಜಿಪ್ತ, ಮೆಸೆಡೋನಿಯಾ, ಸಿರಿನ ಮತ್ತು ಎಪಿರಸ್ ಮೊದಲಾದಪ್ರಗಳಿಗೆ ಹೋಗಿ ಅವನ ಶುಭಾಶಯವನ್ನು ಮತ್ತು ಬುದ್ಧನ ಸಂದೇಶವನ್ನು ಬೀರಿದರು. ಅವರು ಮಧ್ಯ ಏಶಿಯಾ, ಬ್ರಹ್ಮದೇಶ ಮತ್ತು ಸಯಾಮಗಳಿಗೂ ಹೋದರು. ಅವನು ತನ್ನ ಮಗನಾದ ಮಹೇಂದ್ರನನ್ನು ಮತ್ತು ಮಗಳಾದ ಸಂಘಮಿತ್ರಾಳನ್ನು ದಕ್ಷಿಣದಲ್ಲಿ ಸಿಲೋನಕ್ಕೆ ಕಳಿಸಿದನು. ಹೋದಲ್ಲೆಲ್ಲ ಕೇವಲ ಹೃದಯಗಳಿಗೆ ಬಿನ್ನಹ ಮಾಡಲಾಗುತ್ತಿದ್ದಿತಲ್ಲದೆ ಎಲ್ಲಿಯೂ ಒತ್ತಾಯ, ಜುಲುಮೆ ನಡೆಯಲಿಲ್ಲ. ಬುದ್ಧನ ನಿಷ್ಠುರ ಅನುಯಾಯಿ ಅವನು ಆಗಿದ್ದರೂ ಉಳಿದ ಧರ್ಮಗಳಿಗೂ ಅವನು ಗೌರವ ಮತ್ತು ಮನ್ನಣೆಯನ್ನು ಕೊಡುತ್ತಿದ್ದನು. ಅವನು ಒಂದು ರಾಜಶಾಸನದಲ್ಲಿ ಹೀಗೆ ಘೋಷಿಸಿದನು.

"ಒಂದಿಲ್ಲೊಂದು ಕಾರಣಗಳಿಗಾಗಿ ಎಲ್ಲ ಧರ್ಮ ಪಂಥಗಳೂ ಗೌರವಾರ್ಹವಾಗಿವೆ. ಈ ರೀತಿ ವರ್ತಿಸುವದರಿಂದ ಮಾನವನು ತನ್ನ ಧರ್ಮವನ್ನು ಉನ್ನತ ಸ್ಥಾನಕ್ಕೆ ಒಯ್ಯುವನಲ್ಲದೆ ಅದೇ ಕಾಲಕ್ಕೆ ಕೆಳದರ್ಜೆಗಳಜನರ ಸೇವೆಯನ್ನು ಮಾಡುವನು." (ಪುಗಳಿಗೆ)

ಹಿಂದುಸ್ತಾನದ ಮೇಲೆ ದಾಳಿ ಮಾಡಿದ ಪ್ರಾಚೀನ ಮುಸಲ್ಮಾನರು ಅನುಭವಿಗಳಿಗಿಂತ ಹೆಚ್ಚು ಉತ್ಸಾಹಿಗಳೆ ಆದ್ದರಿಂದ ಸರಕಾರದ ಸಹಾಯದಿಂದ ಲೆ ಇಸ್ಲಾಮಿನ ಪ್ರಚಾರ ಮಾಡುವ ಮಾರ್ಗವನ್ನೆ ಸಾಮಾನ್ಯವಾಗಿ ಅನುಸರಿಸಿದರು. ಆದರೆ ಅವರು ಇಲ್ಲಿಯೆ ವಾಶಿಸಹತ್ತಿದಂತೆ ಸ್ವಲ್ಪ ವಿವೇಕಶೀಲರಾಗ ಹತ್ತಿದರು. ಆದರೆ ಸರಕಾರ ಮತ್ತು ಅಧಿಕಾರಿಗಳೆನ್ನೆಲ್ಲ ಸರ್ವಧರ್ಮಾತೀತವಿಡಬೇಕೆಂಬ ಜಾಣತನ ಅವರಲ್ಲಿ ಪೂರ್ಣವಾಗಿ ಸಮರಸವಾಗುವ ವೇಳೆಗೆ ಅವರ ಕೈಯಲ್ಲಿ ಅಧಿಕಾರ ಉಳಿದಿರಲಿಲ್ಲ. ತತ್ಪರಿಣಾಮವಾಗಿ ಧರ್ಮ ಕಾರ್ಯಕ್ಕಾಗಿ ಸರಕಾರದ ಸಹಾಯವನ್ನು ಪಡೆಯಬೇಕೆಂದು ಅವರ ಮಹತ್ವಾಕಾಂಕ್ಷೆ ಇನ್ನೂ ಇರುತಿದೆ. ಇಸ್ಲಾಮಿನ ವಿಶಿಷ್ಟ ಸಂಸ್ಕೃತಿ ಮತ್ತು ಹಿತಸಂಬಂಧವೆಂದು ತಿಳಿದುಕೊಂಡದ್ದನ್ನೆಲ್ಲ ಪ್ರಚಾರ ಮಾಡುವದಕ್ಕಾಗಿ ಮುಸಲ್ಮಾನರುಳ್ಳ ಹಾಗು ಮುಸಲ್ಮಾನರು ಆಳುವ ಹಿಂದೀ ಮುಸಲ್ಮಾನ ರಾಜ್ಯವನ್ನು ಪ್ರಸ್ಥಾಪಿಸಬೇಕೆಂಬ ಆಶೆ ಮುಸ್ಲಿಂಲೀಗ ಧುರೀಣರ ಮನಸಿನಲ್ಲಿ ತುಂಬಿದೆ. ಅದರಂತೆಯೆ ಕೆಲ ಹಿರಿಯ ರಾಜಕಾರಣಿಗಳಲ್ಲಿಯೂ ಇದೇ ಬಗೆಯ ಮಹತ್ವಾಕಾಂಕ್ಷೆ ಇದೆ. ಈ ರೀತಿಯಾಗಿ ಚಾಣಕ್ಯನೀತಿ ಮತ್ತೆ ಧರ್ಮದಲ್ಲಿ ತಲೆಯೆತ್ತಿದೆ ಬಂಗಾಲದಲ್ಲಿ ಮುಸ್ಲಿಂಲೀಗು ಈಗಾಗಲೆ ಸ್ವಲ್ಪ ಅಧಿಕಾರವನ್ನು ಪಡೆದಿದೆ. ಅದು ಸಂಪೂರ್ಣವಾಗಿ ಸಂಘಟಿತವಾಗುವ ಮೊದಲೆ ಧಾರ್ಮಿಕ ತಳಹದಿಯ ಮೇಲಿರುವ ಸರಕಾರ, ಜನತೆಯ ಜೀವನದ ಮೇಲೆ ಎಷ್ಟೊಂದು ಅತ್ಯಾಚಾರ ನಡೆಸಬಲ್ಲುದೆಂಬುದರ ಕಟು ಅನುಭವ ಈಗಲೇ ನಮಗೆ ಬಂದಿದೆ.

ವರಧರ್ಮೀಯರು ಮೊದಲು ಮಾಡಿದ ಅತ್ಯಾಚಾರದ ಪ್ರತಿಕ್ರಿಯೆ ಬಿಹಾರ ಮತ್ತು ಉಳಿದ ಪ್ರಾಂತಗಳಲ್ಲಿ ನಡೆಯಿತು, ಎಂಬ ನೆವ ಮುಂದೆ ಮಾಡಿ ಹಿಂದುಗಳೂ ಸಾರಾಗಿ ಹೋಗಲಾರರು. ಧರ್ಮದಲ್ಲಿ ಚಾಣಕ್ಯ ನೀತಿ ನಡೆದರೆ ಎಷ್ಟೊಂದು ಅಪಾಯವುಂಟಾಗುವದೆಂಬದರ ಹಿಂದಿನ ಅನುಭವ ಅವರಿಗೆ ಸಾಕಷ್ಟಿದೆ. ವಿರುದ್ಧ ಸರಕಾರ ಮತ್ತೊಂದು ಧರ್ಮವನ್ನು ಎತ್ತಿ ಹಿಡಿಯುವದರಿಂದ ಆ ಅಪಾಯಕ್ಕೆ ಯೋಗ್ಯ ಮದ್ದಾಗಲಾರದು. ಹಿಂದು ಧರ್ಮ ಮತ್ತು ಸಂಸ್ಕೃತಿಗಾಗಿ ಪ್ರಯತ್ನಿಸುತಿರುವ ಸರಕಾರ ಅದು ಅಖಂಡ ಹಿಂದುಸ್ತಾನ ವಿರಲಿ ಅಥವಾ ಖಂಡ ಹಿಂದುಸ್ತಾನವಿರಲಿ ಮುಸ್ಲಿಮು ಧರ್ಮ ಮತ್ತು ಸಂಸ್ಕೃತಿಗೆ ಬದ್ಧವಾದ ಪಾಕಿಸ್ತಾನಕ್ಕೆ ಉತ್ತರದಾಯಿಯಾಗಲಾರದು. ಇವೆರಡೂ ಶೇಖ, ಕ್ರಿಶ್ಚನ್, ಝುರೊಸ್ಟ್ರಿಯನ್ ಮತ್ತು ಉಳಿದ ಧರ್ಮಗಳೊಡನೆ ಕೂಡಿಕೊಂಡು ಸರ್ವಸಾಮಾನ್ಯವಾದ ರಾಷ್ಟ್ರೀಯ ಅಥವಾ ಮಾನವೀಯ ಸಂಸ್ಕೃತಿ— ಹೆಚ್ಚು ಒಳಿತು. ಅಭಿವೃದ್ಧಿಯ ಮಾರ್ಗಗಳನ್ನು ಹುಡಕಬೇಬೇಕು. ಅಲ್ಲದೆ ಒಬ್ಬರಿಂದೊಬ್ಬರು ಬೇರ್ಪಾಟಾಗುವ ಮತ್ತು ಒಬ್ಬರನೊಬ್ಬರು ಬಹಿಷ್ಕರಿಸುವ ವೃತ್ತಿಯನ್ನು ಬಿಟ್ಟುಗೊಡಬೇಕು.

(೨)
ಕಥಾ ಕಾಲಕ್ಷೇಪ.

[ಆರ್. ಸಿ. ಟ್ರೆವಿಲ್ಯನ್ನರ "ವಿಂಡ್ ಫಾಲ್ಸ್" ಪುಸ್ತಕದಿಂದಾಯ್ದುದು. ಪ್ರಕಾಶಕರು ಅಲೆನ್ ಮತ್ತು ಅನ್ವಿನ್] ವಿ. ಜಿ. ಡಿ.

ಒಮ್ಮೆ ಬೋಧಿಸತ್ವನು ಆನೆಯಾಗಿ ಜನ್ಮವೆತ್ತಿದನು. ಅವನು ಪೂರ್ಣ ಪ್ರಮಾಣಕ್ಕೆ ಬೆಳೆದು ದೊಡ್ಡ ಆನೆಗಳ ಹಿಂಡಿಗೆ ಒಡೆಯನಾದಾಗ ತನ್ನ ಜತೆಗಾರರನ್ನು ಬಿಟ್ಟು ನಾಲ್ಕು ಸುತ್ತ ನಿರ್ಜಲ ಮರುಭೂಮಿಯಿಂದ ಆವರಿಸಲ್ಪಟ್ಟ ದೂರದ ಒಂದು ಅಡವಿಗೆ ಹೊರಟು ಹೋದನು ಅಲ್ಲಿ ಅವನು ಮುನಿಯಂತೆ ಮರಗಳ ಎಲೆ ಹಣ್ಣುಗಳನ್ನೂ ಕಮಲನಾಳಗಳನ್ನೂ ತಿಂದು ಜಲಾಶಯಗಳಲ್ಲಿ ಕೂಡಿದು ಬಾಳಿ ಅದರಲ್ಲೇ ಆನಂದವನ್ನು ಅನುಭವಿಸತೊಡಗಿದನು.

ಹೀಗಿರಲು, ಒಂದು ದಿನ ಅವನು ಆ ಅಡವಿಯ ಗಡಿಯಲ್ಲಿ ಅಡ್ಡಾಡುತಿದ್ದಾಗ ಯಾರೋ ಬಹಳ ಜನ

ರು ಅಳುತ್ತ ಗೋಳಿಡುತ್ತ ಇರುವ ಶಬ್ದವನ್ನು ಕೇಳಿದನು. ಅದರಿಂದ ಅವನು ಆಶಬ್ದ ಬರುತ್ತಿದ್ದ ದಿಕ್ಕಿನಲ್ಲಿ ವೇಗವಾಗಿ ಧಾವಿಸಿ ಅಡವಿಯಿಂದ ಹೊರಗೆ ಬಂದನು. ದೂರದಲ್ಲಿ ನೂರಾರು ಜನರು, ಕೆಲವರು ಕುಳಿತು ಕೆಲವರು ನೆಲದ ಮೇಲೆ ಹೊರಳುತ್ತ, ಹಸಿವು ನೀರಡಿಕೆ ಬಳಲಿಕೆಗಳಿನ್ನು ಸಹಿಸಲಾರದೆ ಅಳುತಿದ್ದುದು ಕಾಣಬಂತು. ಅಷ್ಟು ದೊಡ್ಡ ಆನೆಯನ್ನು ನೋಡಿ ಅವರು ಹೆದರಿ ಕಂಗಾಲಾದರೂ ಓಡುವಷ್ಟು ಶಕ್ತಿ ಕೂಡ ಅವರಲ್ಲಿದ್ದಿಲ್ಲ. ಆ ಮಹಾ ಪ್ರಾಣಿ ತನ್ನ ಸೊಂಡಿಲನ್ನು ಎತ್ತಿ ಮೈತ್ರಿ ಸೂಚಕವಾಗಿ ಮೆಲ್ಲ ಮೆಲ್ಲನೆ ಅಲ್ಲಾಡಿಸುತ್ತ ಅವರನ್ನು ಮೆಲ್ಲಗೆ ಸಮೀಪಿಸಿ, ಮನುಷ್ಯ ವಾಣಿಯಲ್ಲಿ ಹೀಗೆ ಹೇಳಿತು: "ಹೆದರಿಕೆ ಬೇಡ. ನೀವಾರು ಭೋ? ನೀವು ಈ ವಿಪತ್ತಿನಲ್ಲಿ ಹೇಗೆ ಸಿಲುಕಿದಿರಿ?"

ಅದರಿಂದ ಧೈರ್ಯಗೊಂಡವರಾಗಿ ಆ ಇಡೀಜನ ಸಮೂಹ ಎದ್ದುನಿಂತು ಅವನಿಗೆ ತಲೆಬಾಗಿತು. ಅವರಲ್ಲಿ ಹಿರಿಯನೊಬ್ಬನು ಹೇಳಿದ್ದು: "ಭೋ ಗಜರಾಜನೇ, ಅರಸನ ಕ್ರೂರ ಕೋಪದ ಬಿರುಗಾಳಿ ನನ್ನು ನ್ನು ಈ ಮರುಭೂಮಿಗೆ ಗಡಿ ಪಾರು ಮಾಡಿತು. ಆದರೂ ನಿನ್ನ ಮಂಗಲ ದರ್ಶನದಿಂದ ನಾವು ಅನಾಹುತದ ಮರುಭೂಮಿಯನ್ನು ದಾಟಿದ್ದೇವೆಂದು ನಂಬಿದ್ದೇವೆ"

ಆಗ ಆನೆ ಕೇಳಿ: "ನೀವೆಷ್ಟು ಮಂದಿ, ಭೋ?"

"ನಾವು ಮನೆಗಳಿಂದ ಅಟ್ಟಲ್ಪಟ್ಟಾಗ ೫೦೦ ಜನರಿದ್ದೆವು" ಎಂದಾ ಹಿರಿಯನು ಉತ್ತರವಿತ್ತನು.

"ಆದರೆ ನಮ್ಮಲ್ಲನೇಕರು ಹಸಿವೆ ನೀರಡಿಕೆ ನಿರಾಶೆಗಳಿಂದ ನಷ್ಟವಾಗಿ ಹೋಗಿರುವರು."

ಆಗ ಕಾರುಣ್ಯತುಂದಿಲವಾಗಿ ಆ ಮಹಾ ಪ್ರಾಣಿ ಹೇಳಿತು: "ಅಕಟಕಟಾ! ಈ ನಿಸ್ಸಹಾಯರಾದ ಅರಸರು ತಮ್ಮ ಸ್ವಂತ ಹಿತವನ್ನು ಕೂಡ ಕಾಣಲಾರದಷ್ಟು ಕುರುಡರಾಗಿರುವರಲ್ಲಾ! ಪ್ರಜಾಪೀಡನೆಯಿಂದೊದಗಿದ ಮಹಾ ವಿಪ್ಲವ ಅವರನ್ನೆಲ್ಲ ಅವರ ಸಮಸ್ತ ಅನ್ಯಾಯ ಕೃತ್ಯಗಳಿಂದ ಸುಟ್ಟು ಹಾಕುವದೆಂದು ಅವರರಿಯರು. ಇಂಥಾ ಅಜ್ಞಾನಕ್ಕೆ ಧಿಕ್ಕಾರ" ಮತ್ತು ಅದು ನೀರವವಾಗಿ ನಿಂತು, ತನ್ನ ಅತಿಥಿಗಳಿಗೆ ತಾನೆಂತು ಸತ್ಕಾರ ಮಾಡಬೇಕೆಂದು ಚಿಂತಿಸುತಿರಲು, ಆ ಜನರು ಕಣ್ಣೀರುದುಂಬಿ ಕೈಜೋಡಿಸಿ, ಆ ಭಯಂಕರ ಮರುಭೂಮಿಯಿಂದ ಪಾರಾಗುವ ಬಗೆಯನ್ನು ತೋರಿಸೆಂದು, ಇಲ್ಲದಿದ್ದರೆ ಜೀವನದಾಯಿಯಾದ ಒಂದು ನದಿಯನ್ನಾಗಲಿ ಜಲಾಶಯವನ್ನಾಗಲಿ ತೋರಿಸೆಂದು ಪ್ರಾರ್ಥಿಸಿದರು.

ಆಗ ಅವನು ತನ್ನ ಸೊಂಡಿಲವನ್ನೆತ್ತಿ ಉತ್ತರದ ಕಡೆ ಬೀಸುತ್ತ, ಅವರಿಗಂದದ್ದು: "ಆ ಕಡಿದಾದ ಗುಡ್ಡದ ಕೆಳಗೆ ಒಂದು ಶುದ್ಧ ಜಲದ ಕೊಳವಿದೆ. ಅಲ್ಲಿ ನೀವು ನೀರಡಿಕೆಯನ್ನು ಪರಿಹರಿಸಿಕೊಂಡು ಕೆಲ ಹೊತ್ತು ವಿಶ್ರಮಿಸಬಹುದು. ಆ ಮೇಲೆ ಮುಂದೆ ಸಾಗಿ ಅನತಿದೂರದಲ್ಲಿ ಒಂದು ಆನೆಯ ಕಳೇವರನ್ನು ಕಾಣುವಿರಿ. ಅದು ಇಂದೇ ಪರ್ವತಶಿಖರದಿಂದ ಕೆಳಗೆ ಉರುಳಿದ್ದು ಪರ್ವತದ ಬುಡದಲ್ಲಿ ಬಿದ್ದಿದೆ. ಅದರ ಮಾಂಸವನ್ನು ಆಹಾರವಾಗಿ ತೆಗೆದುಕೊಳ್ಳಿರಿ. ಅವನ ಜಠರ ಕೋಶದಿಂದ ನೀರಿನ ಚೀಲಗಳನ್ನು ತುಂಬಿಕೊಳ್ಳಿರಿ. ಈ ರೀತಿ ಪಾಥೇಯ ಪಡೆದವರಾದ ನೀವು ಈ ಅರಣ್ಯದಿಂದ ಕಷ್ಟವಿಲ್ಲದೆ ಪಾರಾಗುವಿರಿ."

ಇಷ್ಟು ಹೇಳಿ ಅವನು ಅವರನ್ನು ಬಿಟ್ಟು ಅವರ ಕಣ್ಣೋಟದಿಂದ ಪಾರಾಗಿ ಆ ಪರ್ವತದ ಆ ಬದಿಯನ್ನೇರಿದನು ಮತ್ತು ಒಂದು ಅಗಾಧವಾದ ಕಂದರದಲ್ಲಿ ಹಾರಿ ಕೆಳಗಿದ್ದ ಬಂಡೆಗೆ ಬಡಿದು ಪ್ರಾಣಬಿಟ್ಟನು.

ಅತ್ತ ಆ ಜನರು ಅವನ ಸೂಚನೆಯಂತೆ ಸಾಗಿ ಬೇಗನೆ ಸರೋವರವನ್ನು ತಲಪಿದರು ಮತ್ತು ನೀರು ಕುಡಿದು ಸ್ವಲ್ಪ ವಿಶ್ರಮಿಸಿಕೊಂಡರು. ಆ ಮೇಲೆ ಅವರು ಮುಂದುವರಿಯುತ್ತ ಹೋಗಿ ಒಂದು ಆನೆಯ ದೇಹವನ್ನು ಕಂಡರು ಆಗ ಅವರಲ್ಲಿ ಕೆಲವರು ಹೇಳಿದರು! "ಈ ಆನೆ ನಮ್ಮ ಗೆಳೆಯನಾದ ಆ ಗಜರಾಜನನ್ನು ಎಷ್ಟು ಹೋಲುತ್ತದೆ! " ಬೇರೆ ಕೆಲವರು ಅಂದುಕೊಂಡರು: "ಈ ಆನೆ ನಮ್ಮ ಗೆಳೆಯನೇ ಆಗಿರಬೇಕು. ಅವನು ಪರ್ವತಶಿಖರದಿಂದ ಹಾರಿಕೊಂಡು ನಮ್ಮನ್ನು ವಿಪತ್ತಿನಿಂದ ಉಳಿಸಲು ಬಯಸಿರಬೇಕು."

ಉರುಳಿ ಕಾಂಚನದ ವರದಿ.

ಗಾಂಧೀಜಿಯವರು ಕಳೆದ ಮಾರ್ಚ ತಿಂಗಳ ಕೊನೆಯಲ್ಲಿ ಪುಣೆಯ ಹತ್ತಿರ ಉರುಳಿಕಾಂಚನದಲ್ಲಿ ಸಂಸ್ಥಾಪಿಸಿದ ನಿಸರ್ಗ ಚಿಕಿತ್ಸಾಲಯದ ಮೇಲ್ವಿಚಾರಕರಾದ ಡಾ. ಭಾಗವತರು ತಮ್ಮ ಮತ್ತು ಸಹೋದ್ಯೋಗಿಗಳ ಕಾರ್ಯದ ಷಾಣ್ಮಾಸಿಕ (ಎಪ್ರಿಲದಿಂದ ಸಪ್ಟೆಂಬರ ೧೯೪೬) ವರದಿಯನ್ನು ಕಳಿಸಿರುವರು. ಅದರ ಈ ಸಂಕ್ಷಿಪ್ತ ವರದಿಯಿಂದ ಅಲ್ಲಿ ನಡೆದ ಚಟುವಟಿಕೆಗಳ ಪರಿಚಯ ವಾಚಕರಿಗೆ ಆಗುವದು.

ವಾಪಿ ಕಿಶೋರಲಾಲ ಮಶ್ರೂವಾಲಾ

ಗಾಂಧೀಜಿಯವರು ಮಾರ್ಚ ೨೩ನೇ ತಾರೀಕು ಈ ಕೇಂದ್ರವನ್ನು ಸ್ಥಾಪಿಸಿದರು. ಒಂದು ವಾರದವರೆಗೆ ಮಾತ್ರ ಅವರು ಪ್ರತ್ಯಕ್ಷವಾಗಿ ಅದರ ಕಾರ್ಯಕಲಾಪಗಳನ್ನು ನೋಡಿಕೊಂಡರು. ಅನಂತರ ಅದರ ಹೊಣೆಯನ್ನು ನನ್ನ ಮತ್ತು ನನ್ನ ಸಹೋದ್ಯೋಗಿಗಳ ಮೇಲೆ ಹೊರಿಸಲಾಯಿತು. ಗಾಂಧೀಜಿಯವರು ಇಲ್ಲಿ ಇರುವಾಗ ರೋಗಿಗಳ ಸಂಖ್ಯೆ ದಿನಾಲು ಹೆಚ್ಚುತಲೆ ಇದ್ದಿತು. ಆದರೆ ಅವರು ಇಲ್ಲಿಂದ ಹೋದ ಬಳಿಕ ಅದು ಬಹಳ ಕುಗ್ಗಿತು. ರೋಗಿಗಳ ಪ್ರತ್ಯಕ್ಷ ಚಿಕಿತ್ಸೆ ಎಪ್ರಿಲ ಎರಡನೆ ವಾರದಿಂದ ಪ್ರಾರಂಭವಾಯಿತು. ಮೇ ಮತ್ತು ಜೂನ ತಿಂಗಳಲ್ಲಿ ಒಂದೇ ಸವನೆ ನಡೆಯಿತು. ಮಳೆಗಾಲ ಪ್ರಾರಂಭವಾದ ನಂತರ ರೋಗಿಗಳ ಸಂಖ್ಯೆ ಕರಗುತ್ತಲೆ ನಡಿಯಿತು. ಮಳೆಗಾಲದಲ್ಲಿ ಹಳ್ಳಿಗರೆಲ್ಲ ಹೊಲಗಳ ಕೆಲಸದಲ್ಲಿ ತೊಡಗಿದ್ದರಿಂದ ಮತ್ತು ವಾಹನ ಸೌಕರ್ಯಗಳು ಇಲ್ಲದ್ದರಿಂದ ರೋಗಿಗಳ ಸಂಖ್ಯೆ ಕರಗಲು ಕಾರಣವಾಯಿತು.

ಈ ಕೇಂದ್ರದಲ್ಲಿ ಚಿಕಿತ್ಸೆ ಹೊಂದಿದ ರೋಗಿಗಳ ಒಟ್ಟು ಸಂಖ್ಯೆ ೫೬೭. ಅವರಲ್ಲಿ ೨೩ ರೋಗಿಗಳ ಸ್ಥಿತಿ ಬಹಳ ಕಠಿನವಿದ್ದುದರಿಂದ ಚಿಕಿತ್ಸೆ ಮಾಡಲಾಯಿತು. ಹಡೆಯಲ್ಲಿದ್ದ ಒಬ್ಬ ಹೆಣ್ಣುಮಗಳ ಚಿಕಿತ್ಸೆಯನ್ನೂ ಯಶಸ್ವಿಯಾಗಿ ಮಾಡಲಾಯಿತು. ಹತ್ತು ಕಿರುಕಳ ಶಸ್ತ್ರಕ್ರಿಯೆಗಳನ್ನು ಮಾಡಲಾಯಿತು. ಉಳಿದವರಿಗೆಲ್ಲ ರೇಚಕ, ಸ್ನಾನ, ಕಟಿಸ್ನಾನ ಮೊದಲಾದ ಚಿಕಿತ್ಸೆ ಮಾಡಲಾಯಿತು. ಮನೆಯಲ್ಲಿ ಕೆಲ ಪಥ್ಯಮಾಡಲು ಅವರಿಗೆ ವಿಧಿಸಲಾಯಿತು. ಮೇಲೆ ಹೇಳಿದ ಒಟ್ಟು ರೋಗಿಗಳಲ್ಲಿ ಸೂಮಾರು ೩೦೦ ಜನರು ಪೂರ್ಣ ಗುಣವಾಗುವವರೆಗೆ ಎಲ್ಲ ಬಗೆಯ ಚಿಕಿತ್ಸೆಯನ್ನು ಹೊಂದಿದರು. ನಾವು ಯಾವದೇ ಔಷಧವನ್ನು ಕೊಡಲಿಲ್ಲೆಂದೂ ಕಠಿನ ಪಥ್ಯವನ್ನು ಹೇಳಿದೆವೆಂದೂ ಮುಂತಾದ್ದಕ್ಕಾಗಿ ಉಳಿದವರು ಚಿಕಿತ್ಸೆ ಮಾಡಿಕೊಳ್ಳದೆ ಹೋದರು.

ಶುದ್ಧ ನೀರಿನ ರೇಚಕ, ಕಟಿಸ್ನಾನ, ಸಾದಾ ಸ್ನಾನ, ತಣ್ಣಗಿನ ಇಲ್ಲವೆ ಬಿಸಿಪೋಟೀಸು, ಮತ್ತು ಪೋಟೀಸದೊಂದಿಗೆ ನಿಯಮಿತ ಪಥ್ಯ ಹೇಳುವದು ಮೊದಲಾದವುಗಳೆಲ್ಲ ಚಿಕಿತ್ಸೆಯಲ್ಲಿ ಒಳಗೊಂಡಿದ್ದವು. ಪಥ್ಯ ಎಂದರೆ ನಿಂಬೀರಸ, ಜೇನು ತುಪ್ಪ, ಕಿತ್ತಳೆ ಹಣ್ಣು ಮತ್ತು ಉಳಿದ ಅಮ್ಲ ಫಲಗಳು, ನೆನೆಸಿಟ್ಟ ಮತ್ತು ಮೊಳಕೆಯೊಡೆದ ಅವರೆ, ಸಿಹಿ ಹಣ್ಣು ಕಾಯಿ ಮೊದಲಾದವುಗಳು. ಚಪಾತಿ ಮತ್ತು ಉಪ್ಪಿಲ್ಲದ ಪಲ್ಲೆ, ಮೆಣಶಿನಕಾಯಿ ಮತ್ತು ಮಸಾಲೆ ಬೀಯಿಸದ ಆಹಾರವನ್ನೊಳಗೊಳ್ಳುವವು. ಪೂರ್ಣ ಅನ್ನಾರೊಟ್ಟಿ ಮತ್ತು ಕಿಚಿಡಿಯನ್ನೂ ಹಲವು ಸಲ ಉಪಯೋಗಿಸಲಾಗುತ್ತದೆ. ಮೊಸರು ಮತ್ತು ಮಜ್ಜಿಗೆಯನ್ನು ಅನಶ್ಯವಿದ್ದಾಗ ಒಂದೊತ್ತಿನ ಊಟಕ್ಕಾಗಿ ಬೇಕಾದಷ್ಟು ಉಪಯೋಗಿಸಲಾಗುತ್ತದೆ.

ರೋಗಿಯ ಆರೋಗ್ಯ ಪರಿಸ್ಥಿತಿ ಮತ್ತು ಆರ್ಥಿಕ ಪರಿಸ್ಥಿತಿಗನುಸಾರವಾಗಿ ದಿನವ ವೆಚ್ಚ ಸರಾಸರಿ ಆಳಿಗೆಯಿಂದ ಎರಡು ರೂಪಾಯಿಗಳವರೆಗೆ ಬರುವದು.

(೧೧ ನೆಯ ಪುಟವನ್ನು ನೋಡಿರಿ)

ನವಭಾರತಕ್ಕೆ ಚಂದಾದಾರರಾಗಿರಿ.

ಉರುಳಿ ಕಾಂಚನದ ವರದಿ

(೧೦ ನೆಯ ಪುಟದಿಂದ ಮುಂದುವರಿದಿದೆ.)

ರೋಗಗಳ ವರ್ಗೀಕರಣ.

ಬೇನೆ	ಸಂಖ್ಯೆ	ಬೇನೆ	ಸಂಖ್ಯೆ
ಪುರುಕು ಕಜ್ಜಿ	೮೬	ಮಲೇರಿಯಾ	೫೮
ನುಲಾವರೋಧ	೫೬	ಜ್ವರ (ಸಾದಾ	೩೯
ಕಿವಿ ಬೇನೆ	೪೪	ಗಾಯಗಳು	೩೦
ಹೊಟ್ಟೆನೋವು	೨೪	ಸಂಧಿ ಬೇನೆ	೧೯
ಬಾವು	೧೭	ಹಲ್ಲುಕೀಳುವದು	೧೭
ಅತಿಸಾರ	೧೫	ವಾಮಲ	೧೭
ಅಗ್ನಿ ಮಾಂದ್ಯ	೧೩	ಹಲ್ಲುನೋವು	೧೨
ಕೆಮ್ಮು (ಬ್ರಾಂಕಾಯಟಿಸ್)	೧೧	ಸೆರಗು ಹೋಗುವದು	೧೦
ಗಜಕರ್ಣ	೮	ಗಂಡಸ್ಫೋಟ	೮
ಅಪಸ್ಮಾರ	೮	ಇಸಬು	೭
ತಲೆನೋವು	೫	ದಮ್ಮು	೫
ರಕ್ತಕ್ಷಯ	೫	ಜಂಗು	೪
ಕ್ಷಯವಿಕಾರ	೪	ಅಮ್ಲ ಅಗ್ನಿಮಾಂದ್ಯ	೪
ಮೂಲವ್ಯಾಧಿ	೪		
ಸಕ್ಷ್ಮವಾಯು	೩	ಸ್ಥೂಲ ಪ್ರಕೃತಿ	೩
ಶರ್ವಶೂಲಿ	೨	ಸಂದುತಪ್ಪಿದ್ದು	೧
ತಿತಲೆಶೂಲಿ	೨	ಜಾಡ್ಯ	೧
ತ್ವವಿಕಾರ	೧	ಹೆರಿಗೆ	೧
ಂಧವಾತ	೧	ಕಫ	೧
ತಿಪಿತ್ತ	೧	ನಾಯಿಕಡಿತ (ಹುಚ್ಚು ನಾಯಿಅಲ್ಲ)	೧
ಎಸನಕುಸುವು	೧	ಕೀರಕಳು	೩೧
		ಒಟ್ಟು	೫೬೭

ಇನ್ನು ಮುಂದಿನ ನಮ್ಮ ಆಸ್ಪತ್ರಿ ಯೋಜನೆಯಲ್ಲಿ ಹೆರಿಗೆ ವ್ಯವಸ್ಥೆಯನ್ನು ಪ್ರತ್ಯೇಕವಾಗಿ ಮಾಡಬೇಕೆಂದು ಬಗೆದಿದ್ದೇವೆ. ಸಣ್ಣದೊಂದು ಶಸ್ತ್ರಚಿಕಿತ್ಸಾಲಯವನ್ನೂ ಏರ್ಪಡಿಸಬೇಕೆಂದು ಮಾಡಿದ್ದೇವೆ. ಇದಲ್ಲದೆ ಗೋ ಸೇವೆಯನ್ನು ಸಂಘಟಿಸಬೇಕೆಂದೂ ಮಾಡಿದ್ದೇವೆ. ಇದರಿಂದ ಶುದ್ಧ ಹಾಲು ರೋಗಿಗೆ ಸಿಕ್ಕುವದು. ದನಗಳ ಹಟ್ಟಿಯನ್ನು ಕಟ್ಟಿಸಬೇಕೆಂದು ಮಾಡಿದ್ದೇವೆ. ಇದಕ್ಕಾಗಿ ಸುಮಾರು ೫೦೦೦ ರೂಪಾಯಿಗಳ ವೆಚ್ಚ ಮಾಡಬೇಕಾಗುವದು. ಸಕಾಲದಲ್ಲಿ ಯೋಗ್ಯ ಜನರಿಂದ ನಮಗೆ ಸಹಾಯ ಸಿಕ್ಕುವುದೆಂದು ಆಸಿಸುತ್ತೇವೆ.

ರೂಪನಗುಡಿ

ಹಣವನ್ನು ಅಲ್ಪರೀತಿಯಲ್ಲಾದರೂ ಉಳಿತಾಯ ಮಾಡಲು ಯೋಚಿಸಿದ ಸರ್ಕಾರಿ ವಿಧಾನವನ್ನು ಜನರಿಗೆ ತಿಳಿಯಪಡಿಸಲು ಬಳ್ಳಾರಿ ತಹಶೀಲ್ದಾರ್ ಶ್ರೀ ವೆಂಕಟೇಶಯ್ಯರವರ ಅಧ್ಯಕ್ಷತೆಯಲ್ಲಿ 13 ನೆಯ ತಾ|| ಒಂದು ಸಭೆಯು ಸಮಾವೇಶವಾಗಿದ್ದಿತು. ಅಧ್ಯಕ್ಷರೂ ಬಂಡೇಗೌಡರೂ ಉಪಯೋಗಗಳನ್ನು ತಿಳಿಸಿದ ನಂತರ ಶ್ರೀ ವಿ. ಶ್ರೀನಿವಾಸರಾಯರು ಗ್ರಾಮೊಭಿವೃದ್ಧಿ ಸಮಿತಿಯನ್ನು ನಿರ್ಮಿಸಿ ೨೦ ಹುಂಡಿ ಪೆಟ್ಟಿಗೆಗಳನ್ನು ಹಂಚಿದರು.

ಅರಸಿಕೆರೆ.

ಹರಪನಹಳ್ಳಿ ತಾಲೂಕು ಅರಸೀಕೆರೆಫಿರ್ಕಾ ಕೇಂದ್ರದಲ್ಲಿ ಮದ್ಯ ವಾನಿರೋಧವಿಶ್ರಾಂತಿ ಭವನದ ಪ್ರಾರಂಭೋತ್ಸವವು ಶ್ರೀ ಸಾ. ಚನ್ನಬಸಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಹಾರಿಮುಲ್ಲಾಪುರದ ಶ್ರೀ ಮಲ್ಲೇಶಪ್ಪನವರು ಮದ್ಯಪಾನದ ಕೆಡುಕುಗಳನ್ನು ಹೇಳಿದ ನಂತರ ತವುಡೂರು ತಾಂಡದ ಶ್ರೀ ನಿ. ಯಲ್ ಭೋಜಾನಾಯ್ಕರು– ಮದ್ರಾಸ್ ಪ್ರಾಂತದಲ್ಲಿ ಕಾಂಗ್ರೆಸ್ ಮಂತ್ರಿಮಂಡಲವು ಆರೂಢವಾದಮೇಲೆ– ಬಡವರು, ರೈತರು, ಕೂಲಿಕಾರರು ಮತ್ತು ಹರಿಜನರಿಗೆ ಹಿತಕರವಾದ ಅನೇಕ ಕಾರ್ಯಗಳನ್ನು ಸಾಧಿಸಿರುವರೆಂದು ಉಪನ್ಯಾಸಿಸಿದರು. ಫಿರ್ಕಾ ಜಿಲ್ಲೇದಾರ್, ಧಾನ್ಯದಧಿಕಾರಿಗಳು ಮಾತಾಡಿದರು.

The Rayalaseema Bank Limited, Bellayr.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— (ಬಳ್ಳಾರಿಜಿಲ್ಲಾ **ಹಡಗಲಿ, ಕೂಡ್ಲಿಗೆ,** ಚಿತ್ತೂರುಜಿಲ್ಲಾ **ನಾಗರಿಯಲ್ಲಿ**

ನಮ್ಮ ಶಾಖೆಗಳನ್ನು ಪ್ರಾರಂಭಿಸಿದೆವೆಂದು ತಿಳಿಸಲು ಹರ್ಷಿಸುತ್ತೇವೆ.

ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ.

ಅನಂತಪುರ:- ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ.

ಚಿತ್ತೂರು:- ಚಿತ್ತೂರು, ಮದನಪಲ್ಲಿ, ತಿರುಪತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ. **ಕಡಪ:-** ರಾಜಂಪೇಟೆ

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2ವರ್ಷಗಳಿಗೆ 3½%.

ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.

ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:- 3%.

ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.

—ರಾಷ್ಟ್ರೀಯ ಪುಸ್ತಕಗಳು.—

—: **ಕಾಂಗ್ರೆಸ್ ಸ್ವರೂಪ ದರ್ಶನ:**—

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ-ನಿವಾರಣೆ	0-12—0
ಪ್ರಾಂತಭಾಷೆ- ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ಸ್‌ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ(ಇತಿಹಾಸ-ತಂತ್ರ)	3-8 -0

ವಿ. ಪಿ. ಖರ್ಚುಬೇರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ.—

ನವಭಾರತ, — ಕಾರ್ಯಾಲಯ ಬಳ್ಳಾರಿ

ಹಿಂದೂಸ್ತಾನಿಯು ರಾಷ್ಟ್ರಭಾಷೆ

ಇದನ್ನು ತಪ್ಪದೆ ಕಲಿಯಿರಿ.

ಪ್ರಾರಂಭಿಕ ಪರೀಕ್ಷೆಗಳಾದ ಪ್ರಾಥಮಿಕ- ಮಧ್ಯಮ ರಾಷ್ಟ್ರಭಾಷೆ, ಉನ್ನತ ಪರೀಕ್ಷೆಗಳಾದ ಪ್ರವೇಶಿಕ, ವಿಶಾರದ- ಪ್ರಚಾರಕ, ಮದ್ರಾಸ್ ವಿಶ್ವವಿದ್ಯಾಲಯದ ಹಿಂದೀ- ವಿದ್ವಾನ್ ಪರೀಕ್ಷೆಗಳ ಮಾಹಿತಿಯನ್ನು ಉಚಿತವಾಗಿ ಕೊಟ್ಟು- ಶಿಕ್ಷಣದ ವಿಷಾಟಿಗೆ ಸಲಹೆಗಳನ್ನು ಕೊಡಲಾಗುವುದು- ಎಲ್ಲಾಪುಸ್ತಕಗಳು ದೊರೆಯುತ್ತವೆ. ಬಹಳ ಸುಲಭ ಭಾಷೆ- ಅತ್ಯಲ್ಪಕಾಲದಲ್ಲಿ ಕಲಿಯಬಹುದು. **ಟಿ. ಬಿ. ಕೇಶವರಾವ್**

ಹಿಂದೀಪ್ರಚಾರಕ, ಬಳ್ಳಾರಿ

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

SRI.....

.....

.....

Printed at Krishna Press Bellary QH No. B 17 FOR (Q.H. No. B-5)

Edited & Published by T. B. KESHAVA RAO.

ಜೈಹಿಂದ್ Reg. No.M. 4746

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟಳೆ ೫ ಸಂಚಿಕೆ ೨೧ ಬಳ್ಳಾರಿ ಡಿಸಂಬರು ೩೦ ಸೋಮವಾರ ೧೯೪೬ ಸಂಪಾದಕ ಮತ್ತು ಪ್ರಕಾಶಕ ಟಿ. ಬಿ ಕೇಶವರಾವು.

ಸು ಭಾ ಸ್
ರಾಷ್ಟ್ರ ಗೀತೆ

ಡಿಸಂಬರ್‌ನಲ್ಲಿ—ಪ್ರಕಟವಾಗಲಿದೆ.

ಈ ಚಿಕ್ಕ ಪುಸ್ತಕದಲ್ಲಿ ಆಜಾದ್ ಹಿಂದ್, ಭಾರತ ರಾಷ್ಟ್ರೀಯ ಸೈನ್ಯದ (Indian National Army) ಕೂಚಿನ ಪದ, ರಣಗಾಯನಗಳಿವೆ.- ೧೯೩೦, ೧೯೩೨, ೧೯೪೨, ಸತ್ಯಾಗ್ರಹ ಚಳುವಳಿಗಳಲ್ಲಿ ಹಾಡಲ್ಪಟ್ಟ-ಪ್ರಭಾತ ಫೇರಿಗಳಲ್ಲಿ ಹಾಡಲು ಯೋಗ್ಯವಾದ ರಾಷ್ಟ್ರೀಯ ಗಾಯನಗಳ ಇಂಥ ವಿಪುಲ ಸಂಗ್ರಹವು ಇದುವರಿವಿಗೆ ಕರ್ನಾಟಕದಲ್ಲಿ ಎಲ್ಲಿಯೂ ಪ್ರಕಟವಾಗಿಲ್ಲ.

ಕಾಗದದ ಅಭಾವನದಿಂದ ಸ್ವಲ್ಪವೇ ಪ್ರತಿಗಳನ್ನು ಪ್ರಕಟಿಸುತ್ತಲಿದ್ದೇವೆ. ೧೫ ಪುಸ್ತಕಗಳಿಗೆ ಕಡಿಮೆ ಇಲ್ಲದೆ ತರಿಸಿಕೊಳ್ಳುವವರಿಗೆ ಟಪಾಲು ಖರ್ಚು ಮಾಫಿ-ಪ್ಲೂರಿಮಾಡಿರಿ.

ಕ್ರೌನು ಸೈಜು, ಸುಂದರ ಮುದ್ರಣ.

ಬೆಲೆ ೦-೮-೦

ಸ ನ ಭಾ ರ ತ—ಕಾರ್ಯಾಲಯ, ಬಳ್ಳಾರಿ.

ಬಳ್ಳಾರಿ ಕಲೆಕ್ಟರ್
ಶ್ರೀ ಕೆ. ಯನ್. ಅನಂತರಾಮನ್‌ರವರ
ಸ್ತುತ್ಯ ಪ್ರಯತ್ನ
ಜಿಲ್ಲೆಯ ವಿದ್ಯಾ ಪ್ರಗತಿ.

ಬಳ್ಳಾರಿ ಕಲೆಕ್ಟರ್ ಶ್ರೀ ಕೆ. ಯನ್. ಅನಂತರಾಮನ್‌ರವರು ಜಿಲ್ಲಾ ಬೋರ್ಡಿನ ಸ್ಪೆಶಲ್ ಅಫೀಸರರಾದ ಮೇಲೆ, ಜಿಲ್ಲೆಯಲ್ಲೆಲ್ಲಾ ಪ್ರಾಥಮಿಕ ವಿದ್ಯಾ ಪ್ರಗತಿಯ ಮಾರ್ಗದಲ್ಲಿ ಅದ್ಭುತ ಚೈತನ್ಯವು ಕಂಡು ಬಂದಿದೆ. ಇವರು ಹೋದ ಕಡೆಯಲ್ಲೆಲ್ಲಾ ಶ್ರೀಮಂತರಾದ ದಾತೃಗಳು ಮುಂದೆ ಬಂದು ತಮ್ಮೂರಿನ ವಿದ್ಯಾ ಸೌಕರ್ಯಗಳನ್ನು ಕಲ್ಪಿಸಲು ವಾಗ್ದಾನ ಮಾಡುತ್ತಿರುವರು. ಕಳೆದ ತಿಂಗಳು ಕಲೆಕ್ಟರವರ ಸಂಚಾರದಲ್ಲಿ ಈ ಕಾರ್ಯಗಳಾದವು.

ಸಿರಿಗುಪ್ಪೆ:- ಹೈಸ್ಕೂಲ್ ಸ್ಥಾಪನೆಗಾಗಿ ಗ್ರಾಮಸ್ಥರು ೨೪ ಸಾವಿರ ರೂ. ದಿವಾಜಿಟ್ ಇಟ್ಟಿರುವರು. ೪ ಸಾವಿರ ರೂ. ಬೆಲೆಬಾಳುವ ೧೪ ಎಕರೆ ಭೂಮಿಯನ್ನು ಶಾಲಾಕಟ್ಟಡದ ನಿವೇಶನಕ್ಕಾಗಿ ಕೊಳ್ಳಲಾಗಿದೆ.

ತೆಕ್ಕಲಕೋಟೆ— ಶಾಲಾಯೋಗ್ಯವಯಸ್ಸಿನ ಬಾಲಕರು ಈ ಊರಲ್ಲಿ ೧೬೧೦ ಇದ್ದಾರೆ, ೨೦೦ ಬಾಲಕರಿಗೆ

204

ಮಾತ್ರ ಶಾಲೆಯಲ್ಲಿ ಸ್ಥಳವಿದೆ. ರಸ್ತೆಯ ಬಗಲಲ್ಲಿ ಸು ಮಾರು ೨೦೦೦ ರೂ. ಬೆಲೆಬಾಳುವ ಎರಡೆಕರೆ ಭೂಮಿ ಯನ್ನು ಶ್ರೀಗಳಾದ ರೊದ್ದಂ ವೆಂಕಟಸುಬ್ಬಯ್ಯನವ ರೂ. ಕೆ. ಪಂಪಣ್ಣನವರೂ. ಶಾಲಾಕಟ್ಟಡಕ್ಕಾಗಿ ದಾನವಿತ್ತಿರುವರು. ಈ ಊರಿನ ನೆಯ್ಯಾರರು ಮಗ್ಗ ಕ್ಕೆರಡು ರೂ. ನಂತೆ ೪ ಸಾವಿರ ಕೊಡಲು ನಿಶ್ಚಯಿಸಿ ರುವರು. ೧೦ ಸಾವಿರ ರೂ. ಬೆಲೆಯ ಕಟ್ಟಡ ನಿರ್ಮಾಣವಾಗಲಿದೆ.

ಸಿರುಗುಪ್ಪೆ ತೆಕ್ಕಲಕೋಟೆ ಶಾಲೆಗಳ ಶಂಕುಸ್ಥಾಪ ನೆಯು ಜನವರಿ ಎರಡನೆಯ ವಾರದಲ್ಲಿ ಗವರ್ನರ ರಿಂದ ನಡೆಯಲಿದೆಯೆಂದು ಗೊತ್ತಾಗಿದೆ.

ಮೊಲಗವೇಲಿ:- ಬೋರ್ಡು ಬಾಲಿಕಾ ಶಾಲೆಯ ಕಟ್ಟಡವನ್ನು ತಮ್ಮ ಮಾತೆಯ ಸ್ಮಾರಕವಾಗಿ ೬ ಸಾವಿ ರ ರೂ. ಬೆಲೆಯಿಂದ ಕಟ್ಟಿಸಲು ಶ್ರೀಲಕ್ಷ್ಮಿರೆಡ್ಡಿಯವರು ಮಧ್ಯಮಿಕ ಶಾಲೆಗೆ ಕಾಂಪೌಂಡು ಗೋಡೆಕಟ್ಟಿಸಲು ಶ್ರೀ ಚಿನ್ನ ಸಂಜೀವರೆಡ್ಡಿಯವರು ೨ ಮೈಲುದೂರದಿಂದ ೬೦ ಸಾವಿರಕಲ್ಲು ತರಿಸಿ ಕಟ್ಟಿಸಲು ಒಪ್ಪಿರುವರು.

ಕೆವುತಾಳ:-ಮಾಧ್ಯಮಿಕಶಾಲೆಯು ಬಹಳ ಸಣ್ಣಕ ಟ್ಟಡದಲ್ಲಿ ನಡೆಯುತ್ತಿತ್ತು. ಶ್ರೀ ದೇಶಾಯಿ ಭೀಮಸೇನ ರಾಯರು ೩ ಎಕರೆ ಭೂಮಿಯನ್ನು ಉಚಿತವಾಗಿ ಕೊ ಟ್ಟು ೧೫ ಸಾವಿರ ರೂ. ಬೆಲೆಯ ಕಟ್ಟಡವನ್ನು ಕಟ್ಟಿಸ ಲು ಒಪ್ಪಿ– ಅಲ್ಲಿಯವರಿವಿಗೆ ತಮ್ಮದೇ ಆದ ಮನೆಯ ನ್ನು ಬಾಡಿಗೆಯಿಲ್ಲದೆ ಶಾಲೆಯನ್ನು ನಡೆಸಲು ಕೊಟ್ಟಿ ರುವರು. ಶ್ರೀ ರಾಚವೆಡ್ಡಿಯವರು ಬೋರ್ಡು ಬಾಲಿಕಾ ಶಾಲೆಗಾಗಿ ಕಟ್ಟಡವನ್ನು ಕಟ್ಟಿಸಲು ೫ ಸಾವಿರ ರೂ. ವಾಗ್ದಾನ ಮಾಡಿರುವರು.

ಕೋಸಿಗಿ:— ಶ್ರೀ ಸಿದ್ದಪ್ಪನಾಯ್ಡು, ಸತ್ಯನಾರಾಯಣ ರಾಜು ಇವರು ೫ ಸಾವಿರ, ಹನುಮಂತಯ್ಯಶೆಟ್ಟಿ. ಶಾಲೆಪರಮೇಶ್ವರಪ್ಪ ಎಲುಕೂರು ಶೇಷಯ್ಯ– ಒಬ್ಬೊ ಬ್ಬರ ಐದೈದು ಸಾವಿರ, ಎ. ಆದಿಶೇಷಯ್ಯ ೩ ಸಾವಿ ರ ವಾಗ್ದಾನಮಾಡಿದರು. ಇದರ ಮೊದಲು ೧೫ ಸಾವಿ ರ ರೂ. ಸಂಗ್ರಹವಾಗಿ ಡಿಪಾಜಿಟ್ ಇಡಲಾಗಿದೆ. ಇಲ್ಲಿ ಹೈಸ್ಕೂಲ್ ಸ್ಥಾಪನೆಯಾಗಲಿದೆ.

ಎಮ್ಮಿಗನೂರು:— ಬೋರ್ಡಶಾಲಾಕಟ್ಟಡವನ್ನು ಒಂದುಲಕ್ಷ ರೂ. ಖರ್ಚಿನಿಂದ ಕಟ್ಟಿಸಲು ಈ ಊರಿ ನವರು ನಿಶ್ಚಯಿಸಿರುವರು– ಸುಮಾರು ೩೦ ಸಾವಿರ– ಸಂಗ್ರಹಿಸಿದ್ದಾರೆಂದು ಗೊತ್ತಾಗಿದೆ.

ಕೆಂಪಲಿ:— ಶಾಲಾಬಾಲಕರ ಆಟದ ಮೈದಾನಕ್ಕಾಗಿ ೧೦ ಎಕರೆ ಭೂಮಿಯು ಉಚಿತವಾಗಿ ಕೊಡಲಾಯಿ ತು. ಒಂದು ಸಮಿತಿಯೇರ್ಪಟ್ಟು ೩೦ ಸಾವಿರ ರೂ. ಖರ್ಚಿನಿಂದ ಸೂತಿಕಾಗೃಹ ನಿರ್ಮಿಸಲು ನಿಶ್ಚಯವಾ ಗಿದೆ.

ಒಂದು ಪ್ರಶಂಸಾರ್ಹ ಹಸ್ತಪತ್ರಿಕೆ.

ಡಾಕಾದ ಮೌಲವಿ ಅಹಸನುಲ್ಲಾ ಅವರು ಗಾಂ ಧೀಜಿಗೆ "ಪವಿತ್ರ ಕುರಾಣದ ದಾನಗಳು" ಎಂಬ ಹೆಸರಿನ ಒಂದು ಬಂಗಾಲಿ ಹಾಗು ಒಂದು ಉರ್ದು ಹಸ್ತಪತ್ರಿಕೆಗಳನ್ನು ಕಳಿಸಿದ್ದಾರೆ. ಎರಡೂ ಜಾತಿ ಯ ಜನರಿಗೆ ಮೌಲವೀ ಸಾಹೇಬರು ಅದನ್ನು ಪುಕ್ಕ ಟಿಯಾಗಿ ಹಂಚುತಿದ್ದಾರೆ. ಅದೊಂದು ಪ್ರಶಂಸಾ ರ್ಹ ಹಸ್ತಪತ್ರಿಕೆ. ಅದರಲ್ಲಿ ಒತ್ತಿಹೇಳಿದ ಕೆಲ ವಿಷ ಯಗಳನ್ನು ಇಲ್ಲಿ ಕೊಡುವೆ:

ಇಸ್ಲಾಮಿನ ಉಪದೇಶಗಳನ್ನು ತಾವಾಗಿಯೆ ಅರಿತುಕೊಳ್ಳಲು ಸಮರ್ಥರಾಗುವಂತೆ ಮುಸ್ಲಿಂ ಸ್ತ್ರೀ ಪುರುಷರೆಲ್ಲರೂ ಓದು ಬರಹ ಕಲಿಯಬೇಕೆಂದು ಆದು ಕೇಳಿಕೊಳ್ಳುತ್ತದೆ. ಪ್ರವಾದಿ ಮಹಮ್ಮದರು ಸ್ಪಷ್ಟವಾಗಿ ಅಪ್ಪಣೆ ಕೊಡಿಸಿದ್ದು: "ಜ್ಞಾನಾರ್ಜನೆ ಮಾಡುವದು ಪ್ರತಿಯೊಬ್ಬ ಮುಸಲ್ಮಾನ ಸ್ತ್ರೀ ಯ ಕರ್ತವ್ಯ. ಜೀವನದಲ್ಲಿ ಅನುಕೂಲಸ್ಥರಾದರೂ ವಿದ್ಯಾಭ್ಯಾಸ ಮಾಡಿರಿ"

ಇಸ್ಲಾಮವೆಂಬುದು ಶಾಂತಿಸೇವೆಗಳ ಧರ್ಮ. ಅದರ ಐದು ಸೂತ್ರಗಳು ಇಂತಿವೆ: "ಕಲಮಾ" ಅಂ ದರೆ ಉಕ್ತಿ "ನಮಾಜ" ಅಂದರೆ ಪ್ರಾರ್ಥನೆ "ರೋ

(11 ನೆಯ ಪುಟವನ್ನು ನೋಡಿರಿ)

ಹಿಂದುಸ್ತಾನದ ಗೆಲುವು.

ಯುಕ್ತರಾಷ್ಟ್ರ ಸಂಘದ ಮಹಾಸಭೆಯಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರೂ ಅವರ ಸಹಯೋಗಿಗಳೂ ದಕ್ಷಿಣ ಆಫ್ರಿಕೆಯ ವಿರುದ್ಧ ದೊರಕಿಸಿದ ಅಪೂರ್ವ ಯಶಸ್ವಿಗಾಗಿ ಹಿಂದುಸ್ತಾನ ಸಕಾರಣವಾಗಿ ಆನಂದಪಡಬಹುದು. ಮತ್ತು ನ್ಯಾಯವಾಗಿ ಹೆಮ್ಮೆ ತಾಳಬಹುದು. ಆಕೆಯ ಕೆಲಸ ಸರಳವಾಗಿರಲಿಲ್ಲ. ಅತ್ಯಂತ ಸಮರ್ಥ ಮತ್ತು ಜನಾದರಣೀಯ ಸಮಕಾಲೀನ ಮುತ್ಸದ್ದಿಗಳಲ್ಲಿ ಒಬ್ಬರೆಂದು ಹೆಸರಾದ ದಕ್ಷಿಣ ಆಫ್ರಿಕೆಯ ಅನುಭವಶಾಲಿ ಮುಖಮಂತ್ರಿಗಳಾದ ಫೀಲ್ಡ್ ಮಾರ್ಶಲ್ ಸ್ಮಟ್ಸ್‌ರ ವಿರುದ್ಧ ಆಕೆ ತನ್ನ ವಿವಾದವನ್ನು ಸಮರ್ಥಿಸಿಕೊಳ್ಳಬೇಕಾಗಿತ್ತು. ಅವರು ನಿಟ್ಟು ನಿಟ್ಟಿನಲ್ಲಿಯೂ ಕಡಿಪಾಗಿ ಸೆಣಸಿದರು. ಸ್ವಯಂ ಬ್ರಿಟಿಶ ಸರಕಾರದ, ಅಂತೆಯೆ ಬ್ರಿಟಿಶ ಸಾಮ್ರಾಜ್ಯದ ಪ್ರಮುಖ ಸದಸ್ಯರ ಬೆಂಬಲವೂ ಸ್ಮಟ್ಸ್‌ರಿಗಿತ್ತು. ಶ್ರೀಮತಿಯರು ಈ ನ್ಯಾಯವಾದ ಕಾರಣದಲ್ಲಿ ಮಾಡಿದ ಸ್ಫೂರ್ತಿಯುಕ್ತವಾದರೂ ಗೌರವ ಪೂರ್ಣ ಪ್ರತಿಪಾದನೆಯಿಂದ ಅನೇಕ ಸದಸ್ಯ ರಾಜ್ಯಗಳ ಸಹಾನುಭೂತಿ ಹಿಂದುಸ್ತಾನಕ್ಕೆ ದೊರೆಯಲು ಸಹಾಯವಾಯಿತು. ಚೀನ, ರಶಿಯಾ, ಫ್ರಾನ್ಸ ಮತ್ತು ಹಲವು ಏಶಿಯದ ರಾಜ್ಯಗಳು ವಿವಿಧ ಮತಗಣನೆಯಲ್ಲಿ ಹಿಂದುಸ್ತಾನಕ್ಕೆ ಬೆಂಬಲವಿತ್ತರೆ ಅಮೇರಿಕೆ, ಬ್ರಿಟೆನ್, ಕಾನಡಾ, ಸೆಸಲ್ವಂನ್ಸ್, ಬೆಲ್ಜಿಯಂ ಮೊದಲಾದ ರಾಷ್ಟ್ರಗಳು ವಿರುದ್ಧ ಪಕ್ಷದಲ್ಲಿದ್ದದು ಗಮನಾರ್ಹವಾಗಿದೆ

ದಕ್ಷಿಣ ಆಫ್ರಿಕೆಯಲ್ಲಿ ಆಗ್ನೇಯ ಆಫ್ರಿಕೆಯನ್ನು ಸೇರಿಸಿಬಿಡಬೇಕೆಂಬ ಪ್ರಶ್ನೆಯಲ್ಲಿಯೂ ಜನರಲ್ ಸ್ಮಟ್ಸ್‌ರಿಗೆ ಹಿಂದೀ ಪ್ರತಿನಿಧಿಗಳಿಂದ ಅಷ್ಟೇ ಅವೇಕ್ಷದ ವಿರೋಧ ಎದುರಾಯಿತು. ಇಲ್ಲಿಯೂ ದಕ್ಷಿಣ ಆಫ್ರಿಕಾದ ಮುಖ್ಯ ಮಂತ್ರಿಗೆ ದೊರೆತ ಸೋಲು ಸರಿಯಾಗಿಯೇ ಇತ್ತು.

ದಕ್ಷಿಣ ಆಫ್ರಿಕೆಯಲ್ಲಿ ಹಿಂದೀಯರ ಹೋರಾಟದ ಆರಂಭದಿಂದಲೆ ನಮಗೆ ದೊರೆತ ಯಶಸ್ಸಿನ ಬಹು ಭಾಗ ಹಿಂದೀ ಸ್ತ್ರೀಯರು ಅದರಲ್ಲಿ ವಹಿಸಿದ ಭೂಮಿಕೆಯ ಪರಿಣಾಮವೇ ಅಗಿತ್ತೆಂಬುದು ನೆನಪಿನಲ್ಲಿಡಬೇಕಾದ ಮಾತು. ಸ್ವರ್ಗೀಯ ಕಸ್ತೂರಬಾ ಗಾಂಧಿ ಮತ್ತು ಶ್ರೀಮತಿ ಸರೋಜಿನಿ ಇವರ ಹೆಸರುಗಳು ಯಾವಾಗಲೂ ಅಭಿಮಾನ ಆದರಗಳಿಂದ ನೆನೆಯಲ್ಪಡುತ್ತವೆ. ಈಗ ಪುನಃ ರಂಗದಲ್ಲಿ ಮೆರೆದಾಕೆ ಇನ್ನೊಬ್ಬ ಭಾರತ ಪುತ್ರಿಯೆ— ಬಹಳ ಮಾಡಿ ಯುಕ್ತರಾಷ್ಟ್ರ ಸಂಘದ ಏಕಮಾತ್ರ ಮಹಿಳಾ ಪ್ರತಿನಿಧಿ ಇರಬೇಕು ಅವಳು. ಅವಳು ನಿಜವಾಗಿ ಜಗತ್ತಿನ ದೃಷ್ಟಿಯಲ್ಲಿ ಹಿಂದುಸ್ತಾನದ ಗೌರವವನ್ನು ಹೆಚ್ಚಿಸಿದ್ದಾಳೆ.

ಹಿಂದುಸ್ತಾನಕ್ಕೆ ಬೆಂಬಲವಿತ್ತು ಇಗ ರಾಷ್ಟ್ರಗಳೂ ನಮ್ಮ ಹೃತ್ಪೂರ್ವಕ ಧನ್ಯವಾದಗಳಿಗೆ ಪಾತ್ರವಾಗಿವೆ. ಮೂಲಭೂತ ಮಾನವ ಹಕ್ಕು ಸಂಬಂಧಗಳ ಧ್ಯೇಯವನ್ನು ಎತ್ತಿ ಹಿಡಿದು ಅವರು ಯುಕ್ತರಾಷ್ಟ್ರ ಸಂಸ್ಥೆಯ ಗೌರವವನ್ನಷ್ಟೇ ಹೆಚ್ಚಿಸಲಿಲ್ಲ; ದಲಿತ ರಾಷ್ಟ್ರಗಳಲ್ಲಿ ಹೊಸ ಆಶೆ ಮೊಳೆಯುವಂತೆಯೂ ಮಾಡಿದ್ದಾರೆ.

ಬಳ್ಳಾರಿ ವಿದ್ಯಾರ್ಥಿ ಕಾಂಗ್ರೆಸ್.

ಫೆಬ್ರವರಿ ೧೯೪೭ ರ ಮೊದಲನೆಯ ವಾರದಲ್ಲಿ ಜಿಲ್ಲಾ ವಿದ್ಯಾರ್ಥಿ ಕಾಂಗ್ರೆಸ್ ಸಭೆಯನ್ನು ಸಮಾವೇಶಗೊಳಿಸಿ, ಶ್ರೀಗಳಾದ ಜೋಷಿ ಅಲ್ಲೂ, ಅಶೋಕ ಮೇಧಾ, ಎಸ್. ಯಸ್. ವರದಾಚಾರಿ, ದ್ರವ್ಯಂ ಇವರನ್ನು ಆಹ್ವಾನಿಸತಕ್ಕದ್ದೆಂದೂ, ಕ್ರಿಯಾಸಮಿತಿಯಲ್ಲಿ ಶ್ರೀ ಬಸವರಾಜ, ಸಿದ್ದನಗೌಡ, ಚಿದಾನಂದ ಶಾಸ್ತ್ರಿ ಇವರಿರತಕ್ಕದ್ದೆಂತಲೂ, ಬಸವರಾಜ್ ಜಿಲ್ಲಾ ಸಂಘಟನೆ ಮಾಡತಕ್ಕದೆಂತಲೂ ತೀರ್ಮಾನವಾಯಿತು.

ಮದ್ರಾಸ ಪ್ರಾಂತದಲ್ಲಿ ಗಿರಣಿ ಕೈಮಗ್ಗ ಬಟ್ಟೆ ಸೀದಾ

ಮುಖ್ಯ ಪ್ರಧಾನರ ಪ್ರಕಟನೆ

ಮದ್ರಾಸದ ಮುಖ್ಯ ಪ್ರಧಾನರಾದ ಪ್ರಕಾಶಂರು ಈ ಹೊತ್ತು ಒಂದು ಪ್ರಕಟನೆ ಹೊರಡಿಸಿ ಕೈಮಗ್ಗ ನೇಕಾರರ ಕೂಲಿ ಹಾಗು ಕೈಮಗ್ಗ ಬಟ್ಟೆಯ ಬೆಲೆ ನಿಯಂತ್ರಿಸಲು ರಚಿಸಲಾಗುವದೆಂದೂ ಗಿರಣಿಗಳಿಂದ ಬಟ್ಟೆ ಹಾಗು ನೂಲು ಕಳ್ಳತನದಿಂದ ಹೋಗದಂತೆ ನೋಡಿಕೊಳ್ಳಲು ಜವಳಿ ಗಿರಣಿಯಿದ್ದಲ್ಲೆಲ್ಲ ನಿಯಂತ್ರಕರನ್ನು ನೇಮಿಸಲಾಗುವದೆಂದೂ ನೂಲುವ ಗಿರಣಿಗಳಲ್ಲಿ ಮೂರು ಪಾಳಿಗಳನ್ನು ಜಾರಿಯಲ್ಲಿ ತರಲಾಗುವದೆಂದೂ ಪ್ರಸಿದ್ಧಿಸಿದ್ದಾರೆ.

ಪ್ರತಿಯೊಬ್ಬ ಪ್ರೌಢನಿಗೆ ೫ ಗಜ ಚಿಕ್ಕವನಿಗೆ ೨ ಗಜ ಬಟ್ಟೆಯನ್ನು ಇನ್ನು ಸೀದಾದಿಂದ ಹಂಚಲಾಗುವದು. ಇದಲ್ಲದೆ ಕೈಮಗ್ಗದ ಬಟ್ಟೆಗಳಲ್ಲಿ ಪ್ರೌಢನಿಗೆ ೬.೭ ಗಜ ಚಿಕ್ಕವನಿಗೆ ೩.೪ ಗಜಬಟ್ಟೆ ಸೀದಾ ಪ್ರಕಾರ ಹೆರೆಯುವದು.

ಕೈಮಗ್ಗದ ಬಟ್ಟೆ ಧಾರಣೆ ಹೆಚ್ಚು ಆಗಲಿಕ್ಕೆ ಕೆಳಗಿನ ಸಂಗತಿಗಳು ಕಾರಣವಿರುವವು. ಈ ಪ್ರಾಂತದಲ್ಲಿ ಪ್ರತಿ ತಿಂಗಳು ಸಿದ್ಧವಾಗುವ ೪೦ ಸಾವಿರ ಗಂಟು ನೂಲಿನಲ್ಲಿ ಕೇವಲ ೨೦ ಸಾವಿರ ಗಂಟುಗಳು ಕೈಮಗ್ಗದವರಿಗೆ ಸಿಗುವವು ಈ ನೂಲು ೧೦ ದಿನ ಸಹ ಅವರಿಗೆ ಸಾಕಾಗುವದಿಲ್ಲ ಉಳಿದ ದಿನ ಅವರು ನಿರುದ್ಯೋಗಿಗಳಾಗಬೇಕಾಗುವದು. ಆದ್ದರಿಂದ ಉದ್ಯೋಗದ ೧೦ ದಿನಗಳ ನೌಕರಿಯ ಅವರು ತಿಂಗಳ ಕೂಲಿ ದೊರಕಿಸಿಕೊಳ್ಳುವರು. ಈಗ ಹೊರಗೆ ಹೋಗುವ ೧೩ ಸಾವಿರ ಗಂಟು ನೂಲು ಅವರಿಗೆ ಸಿಕ್ಕಲ್ಲಿ, ಅವರ ಕೂಲಿಯೂ ಕಡಿಮೆಯಾಗಿ ಬಟ್ಟೆಯ ಬೆಲೆ ಇಳಿಯುವದು. ಸರಕಾರದವರು ಕೇಂದ್ರ ಸರಕಾರದೊಡನೆ ಈ ಬಗ್ಗೆ ವಿಚಾರ ನಡೆಸಿದ್ದಾರೆ. ಖಾದಿಗೆ ಉತ್ತೇಜನ ಕೊಡಲು ಗಿರಣಿ ಬಟ್ಟೆ ಸೀದಾ ಜಾರಿಯಲ್ಲಿ ತರಲಾಗಿದೆಂದು ಅರೋಪನ ಮಾಡುವದು ನಿರಾಧಾರವಾಗಿರುವದು ಮುಂತಾಗಿ ಪ್ರಕಟನೆಯಲ್ಲಿ ಕಾಣಿಸಲಾಗಿದೆ.

ಸರಕಾರದವರು ಲಕ್ಷಿಸಬೇಕು,

ಕೆನ್ನಡಿಗರು ಆಂದೋಳನ ಹೂಡಬೇಕು.

ನವಭಾರತ ಸಂಪಾದಕರಿಗೆ—

ಬಳ್ಳಾರಿ ಜಿಲ್ಲೆಯಲ್ಲಿ ಬಹುಮಟ್ಟಿಗೆ ಹಳ್ಳಿಗಳ ಕಡೆಗೆ ಬರುವ ದನಗಳ ರೋಗ ಚಿಕಿತ್ಸಾಕಾರರು (Touring Veterinary Surgeons) ಆಂಧ್ರ ದೇಶದಿಂದ ಬಂದವರಿದ್ದು ಅವರು ನಾವು ಹೇಳಿದುದನ್ನು ತಿಳಿದುಕೊಳ್ಳುವಂತಿಲ್ಲ. ಭಾಷೆಯನ್ನು ತಿಳಿಯದವರು ಬಂದರೆ ರೈತರಿಗೇನುಪಯೋಗ? ದನಗಳ ರೋಗವು ಹೇಗೆ ಹೋಗಬೇಕು? ಹೊಟ್ಟೆಯುಬ್ಬರಕ್ಕೆ, ಕೈ ಬಾಯಿರೋಗದ ಔಷಧ ಕೊಡಬಹುದು. ಒಂದಲ್ಲದೊಂದು ಆದರೆ ಯಾರು ಜವಾಬ್ದಾರಿ? ಕೂಡ್ಲಿಗೆ, ಹೊಸಪೇಟೆ ತಾಲೂಕುಗಳ ಹಳ್ಳಿ ಪ್ರದೇಶಗಳಲ್ಲಿ ತೆಲುಗು ಯಾರಿಗರ್ಥವಾಗುತ್ತದೆ? ಈವಿಷಯ್ಕೆ ನಮಗೆ ಕನ್ನಡಿಗರೆಲ್ಲಾ ಆಂದೋಳನ ಹೂಡಿ ಸಹಾಯ ಮಾಡಬೇಕು. [ಒ ಬ್ಬ ರೈ ತ]

(ನಾವು ಜಿಲ್ಲಾ ವೆಟರಿನರಿ ಅಧಿಕಾರಿಯನ್ನು ಕಂಡು ಬರಹ ಮೂಲಕ ತಿಳಿಸಿದ್ದೇವೆ. ಅವರು ಸರ್ಕಾರಕ್ಕೆ ಸಿಫಾರ್ಸುಮಾಡುತ್ತೇವೆಂದು ಭರವಸೆ ಕೊಟ್ಟರುವರು. ಹೊಸಪೇಟೆ ಭಾಗದ ಪ್ರಜಾ ಪ್ರತಿನಿಧಿಗಳಾದ ಶ್ರೀ ಬಿ. ಅನಂತಾಚಾರ್ಯರು, ಈವಿಷಯದಲ್ಲಿ ಶ್ರದ್ಧೆವಹಿಸಿ ಕನ್ನಡ ಬಲ್ಲ ಅಧಿಕಾರಿಗಳನ್ನು ನಿಯಮಿಸಲು ಸರ್ಕಾರಕ್ಕೆ ಬರೆಯುವರೆಂದು ನಂಬಿದ್ದೇವೆ.

ಉಜ್ಜಿನಿ ರೈತ ಸಂಘ

೧೫ ನೇ ತಾರೀ ಶ್ರೀ ಡಿ. ಕಾ. ಶರಣಪ್ಪನವರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ರೈತ ಸಂಘವು ಸ್ಥಾಪಿಸಲ್ಪಟ್ಟಿತು. ಸಭೆಯಲ್ಲಿಯೇ ೨೫ ಸದಸ್ಯರಾದರು. ಶ್ರೀ ನರಸಪ್ಪ ಶೆಟ್ಟರು ಅಧ್ಯಕ್ಷರು ಶ್ರೀ ದೊಡ್ಡ ಮಲ್ಲಪ್ಪನವರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟಿರುವರು.

ಎಂ. ಎಸ್. ಎಂ. ಕಂಪನಿಯ —ದೋಷಾತ್ಮಕ ನಿರ್ಲಕ್ಷ್ಯ—

ಹೊಸಪೇಟೆ ಕೂಲಿಕಾರರಿಗೆ ಪ್ರಾಣ ಸೌಕರ್ಯ ಮಾಡಿಸಿರಿ.

ಹೊಸಪೇಟೆಯ ಕೂಲಿಕಾರರೂ, ಇತರ ಕುಡುಕರೂ, ಮಧ್ಯಾನ್ಹ ಹೊಸಪೇಟೆಯಿಂದ ಹೊರಡುವ ಗಾಡಿಯಲ್ಲಿ ಹೈದರಾಬಾದ ಸರಹದ್ದಿನಲ್ಲಿರುವ ಮುನಿರಾಬಾದಿಗೆ ಹೋಗಿ ಮನದಣಿಯುವಂತೆ ಕುಡಿದು ಅಲ್ಲಿಂದ ಕೂಡಲೇ ಹೊರಟು ಹೊಸಪೇಟೆಗೆ ಬರುವ ಗಾಡಿಯಲ್ಲಿ ಹಿಂದಿರುಗುತ್ತಲಿರುವರು. ಬಳ್ಳಾರಿ ಜಿಲ್ಲೆಯಲ್ಲಿ ಮದ್ಯನಿರೋಧ ಕಾಯ್ದೆಯು ಜಾರಿಗೆ ಬಂದ ನಂತರ ಕುಡುಕರ ಹೋಗಿ ಬರುವ ಭರಾಟ ಹೆಚ್ಚಾಗಿದೆ. ನಿರೋಧ ಕಾಯ್ದೆಯಲ್ಲಿ ಇದಕ್ಕೆ ಪರಿಹಾರೋಪಾಯವಿಲ್ಲ. ಇದ್ದರೂ, ನಿಶ್ಕಪಟ ಕೃತಿಯೂಗಿದ್ದು, ಅಧಿಕಾರಿಗಳು ಇದರ ಪ್ರತಿಬಂಧಕ್ಕೆ ತಕ್ಕ ತಡೆಯು ನಿಯಮಗಳನ್ನಾಗಲಿ. ದಂಡ ಯೋಗ್ಯ ಶಿಕ್ಷೆಯನ್ನಾಗಲಿ ವಿಧಿಸುವಂತಿಲ್ಲ.

ಹುಬ್ಬಳ್ಳಿ ಕಡೆಯಿಂದ, ಗುಂತಕಲ್ ಕಡೆಯಿಂದ ಬರುವ ಗಾಡಿಗಳು ಹೊಸಪೇಟೆಯಲ್ಲಿ ಕಲೆತರಾಯಿತು. ಇಲ್ಲವೇ ಹುಬ್ಬಳ್ಳಿ ಕಡೆಯಿಂದ ಬರುವ ಗಾಡಿ ಮೊದಲೇ ಬರುವಂತಾದರೆ, ಪ್ರಾಣನಿರೋಧಕ್ಕೂ ಬಡವರ ಉದ್ಧಾರಕ್ಕೂ ಅವಕಾಶವಾಗುವುದೆಂದು ಹೊಸಪೇಟೆಯ ಸಂಸ್ಥೆಗಳೂ, ವ್ಯಕ್ತಿಗಳೂ ಲೆಕ್ಕವಿಲ್ಲದಷ್ಟು ಅರ್ಜಿ ಹಾಕಿಕೊಂಡರೂ, ರೈಲ್ವೆಯವರು ದೋಷಾತ್ಮಕ ಅಸಡ್ಡೆಯಿಂದ CRIMINAL NEGLIGENCE ಸಾರ್ವಜನಿಕಾಭಿಪ್ರಾಯವನ್ನು ಕಡೆಗಾಣಿಸಿರುವರು.

ಎಂ. ಎಸ್. ಎಂ. ಕಂಪನಿಯು ಈಗ ಖಾಸಗಿಸಂಸ್ಥೆ. ಇದರಲ್ಲಿ ಶೇರುದಾರರ ಭಾಗವಾಗಲಿ, ಷೇರ್ ಮಾತ್ಯರ ಸಂಪರ್ಕವಾಗಲಿ ಇರುವುದಿಲ್ಲ. ಇಂಡಿಯಾ ಸರ್ಕಾರದವರು ಕೊಂಡಿರುತ್ತಾರೆ. ಎಂ. ಎಸ್. ಎಂ. ಜಿ. ಐ. ಪಿ. ಮತ್ತು ಎಸ್. ಐ. ಆರ್. ರೈಲ್ವೇಗಳನ್ನು ಸರ್ಕಾರದವರು ಕೊಂಡಿದ್ದಾರೆ. (State-Railways) ಕೇಂದ್ರದಲ್ಲಿ ತಾತ್ಕಾಲಿಕ ರಾಷ್ಟ್ರೀಯ ಸರಕಾರವೂ, ಪ್ರಾಂತಗಳಲ್ಲಿ ಕಾಂಗ್ರೆಸ್ ಮಂತ್ರಿಗಳೂ ಅಧಿಕಾರಾರೂಢವಾಗಿವೆ. ಹೀಗಿದ್ದೂ ಮದ್ರಾಸ್‌ಮಂತ್ರಿವರ್ಗದ ಮುಖ್ಯ ಪ್ರಧಾನರು, ನಮ್ಮ ಹಿಂದಿನ ಬೇಡಿಕೆಗಳನ್ನು ಲಕ್ಷಿಸಿ– ಈವಿಚಾರದಲ್ಲಿ ತಕ್ಕ ಚರ್ಯೆಯನ್ನು ತೆಗೆದುಕೊಳ್ಳಬಹುದಾಗಿತ್ತು. ತಮ್ಮ ನೀತಿಯನ್ನೆ ತಾವು ಸಮರ್ಥಿಸಿಕೊಳ್ಳುವ ಕೃತಿಯಲ್ಲಿ ತೊಡಗದಿದ್ದರೆ, ಮತ್ತಾರು ಯತ್ನಿಸಬೇಕು? ಇದು ಪ್ರಜಾಪ್ರಭುತ್ವಕ್ಕೆ ಭೂಷಣವಲ್ಲ. ಇನ್ನು ಮೇಲಾದರೂ ಸರಕಾರವು ಕಣ್ಣುತೆಗೆಯುವುದೆಂದು ಆಶಿಸುತ್ತೇವೆ–

ಕರೂರು ವೆಂಕೋಬರಾವು ಹೊಸಪೇಟೆ–

—ಪ್ರಾಂತೀಕರಣಕ್ಕೆ ವಿಘ್ನ—

ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ವಗೈರೆ ಪ್ರಾಂತಗಳ ನಿರ್ಮಾಣತತ್ವವನ್ನು ಅಂಗೀಕರಿಸಿ– ಮೇರೆಯ ನಿರ್ಣಾಯಕ ಸಮಿತಿಯನ್ನು ನಿಯಮಿಸುವ ಕಾರ್ಯಕ್ಕೆ ಘಟನಾಸಮಿತಿಯು ಒಪ್ಪಿದರೆ, ಮುಸಲ್ಮಾನ ಅಧಿಕಸಂಖ್ಯಾಕ ಪ್ರಾಂತಗಳಲ್ಲಿ ಜಿನ್ನಾರವರು ತಮಗನುಕೂಲವಾಗುವಂತೆ ಹೆಚ್ಚು ಕಡಮೆಗಳನ್ನು ಮಾಡಿಕೊಳ್ಳುವರೆಂಬ ಭಯದಿಂದಲೇನೋ ಎಂಬಂತೆ- ಸದ್ಯಕ್ಕೆ ಪ್ರಾಂತೀಕರಣ ತತ್ವವನ್ನುಮಾತ್ರ ಒಪ್ಪುವರೆಂದು ದೆಹಲಿಯಿಂದ ಸುದ್ದಿಯು ಹುಟ್ಟಿದೆ.

ಚನ್ನಪಟ್ಟಣದಲ್ಲಿ ದಂಗೆ ಅತ್ಯಾಚಾರ.

ಮೈಸೂರು– ಬೆಂಗಳೂರು ಮಧ್ಯದಲ್ಲಿರುವ ಚನ್ನಪಟ್ಟಣವೆಂಬ ಮೈಸೂರು ದೇಶದ ನಗರದಲ್ಲಿ ಕಳೆದವಾರ ದಂಗೆಯಾಗಿ- ಕೆಲವರು ಕೊಲ್ಲಲ್ಪಟ್ಟಿರುವರು. ಹೈಸ್ಕೂಲ ಪ್ರಧಾನೋಪಾಧ್ಯಾಯರು, ಬಾಲಿಕೆಯರಮೇಲೆ ಪುಂಡರು ಎರಿಬಂದಾಗ ರಕ್ಷಿಸಲು ಹೋದರೆಂತಲೂ, ಆಗ ಅವರು ಕೊಲ್ಲಲ್ಪಟ್ಟರೆಂತಲೂ ಗೊತ್ತಾಗಿದೆ. ಹಿಂದೂ ಮುಸಲ್ಮಾನರಂಗಡಿಗಳು ಕೆಲವು ಲೂಟಿಯಾಗಿವೆ. ಪೋಲೀಸ- ಮತ್ತು ಮಿಲಿಟರಿ ಪಡೆ ಹೋಗಿದೆಯೆಂದು ಗೊತ್ತಾಗಿದೆ.

ಪ್ರಾಥಮಿಕ ಶಾಲೋಪಾಧ್ಯಾಯರ ಗೋಳು.

ಸಂಘಟಿತರಾಗದೆ ಮೋಕ್ಷವಿಲ್ಲ.

(ನೊಂದ ಒಬ್ಬ ಪ್ರಾಥಮಿಕೋಪಾಧ್ಯಾಯ)

ಪ್ರಪಂಚದ ಎಲ್ಲಾ ವೃತ್ತಿಗಳಲ್ಲಿ ಉಪಾಧ್ಯಾಯ ವೃತ್ತಿಯು ಶ್ರೇಷ್ಠವೆಂದು ಭಾವಿಸಲ್ಪಡುವುದಾದರೂ, ಉಪಾಧ್ಯಾಯನಷ್ಟು ನಿಸ್ಸಹಾಯ, ನಿರಾದರ, ಮತ್ತು ಅಲಕ್ಷಿಗೊಳಗಾದ ಪ್ರಾಣಿಯು ಯಾರೂ ಇಲ್ಲವೆನ್ನ ಬಹುದು. ಬೇರೆ ನೌಕರರಿಗೆ ಸರಕಾರವನ್ನು ಬೆದರಿಸುವ ಶಕ್ತಿಯುಂಟು. ಅವರು ಕೆಲಸ ಬಿಟ್ಟರೆ ಅಥವಾ ಸಂಪು ಹೂಡಿದರೆ, ಸರಕಾರದ ಯಂತ್ರವು ಕುಸಿದು ಬೀಳುವದೆಂದು ಸರಕಾರಕ್ಕೆ ಚೆನ್ನಾಗಿ ಗೊತ್ತಿರುವ ಕಾರಣವೇ ಅವರ ಆಂದೋಳನಕ್ಕೆ ಅಷ್ಟು ಮಹತ್ವ ದೊರೆಯಿತು. ಅವರ ಸಮಸ್ಯೆಯನ್ನು ಮಂತ್ರಿವರ್ಗದವರು ಆಲೋಚಿಸುವಂತಾಯಿತು. ತಾತ್ಕಾಲಿಕ ಪರಿಹಾರವೂ ಅವರಿಗೆ (INTERIM-RELIEF) ದೊರೆಯಿತು. ಹೀಗೆ ಸರಕಾರಿ ನೌಕರರಿಗೆ (Non gazetted officers) ಪರಿಹಾರವು ದೊರೆತದ್ದು ದೊರೆಯಲಿರುವುದು ಅವರ ಸಂಘಟಿತ ಶಕ್ತಿಯಿಂದ, ಆಂದೋಳನದಿಂದ ಮತ್ತು ಮೇಲಾಗಿ ಅವರ ಉದ್ಯೋಗಗಳ ಮುಖ್ಯತೆಯ ದೃಷ್ಟಿಯಿಂದ—

ಉಪಾಧ್ಯಾಯ ಶಾಲೆಯು ಕೆಲಸ ಬಿಟ್ಟರೆ ಸಂಪು ಹೂಡಿದರೆ, ಸರಕಾರದ ಯಂತ್ರವು ಕುಸಿದು ಬೀಳುವುದಿಲ್ಲ. ಸರಕಾರಕ್ಕೂ, ಸಾರ್ವಜನಿಕರಿಗೂ ಆರ್ಥಿಕವಾಗಿ ನಷ್ಟವಾಗುವುದಿಲ್ಲ. ಮಕ್ಕಳ ವಿದ್ಯಾ ಶಿಕ್ಷಣಕ್ಕೆ ಕೆಲ ಕಾಲ ಬಾಧೆತಟ್ಟಿದರೆ ಜನರೂ ಸುಮ್ಮನಿರುವರು. ಸರಕಾರವೂ ಸುಮ್ಮನಿರುವುದು. ಈ ಕಾರಣದಿಂದಲೇ ಮದ್ರಾಸ್ ಮುಖ್ಯ ಪ್ರಧಾನರಾದ ಪ್ರಕಾಶಂರವರು ಉಪಾಧ್ಯಾಯರ ವೇತನಶ್ರೇಣಿಯನ್ನು ಹೊರಟು ಅವರ ಸದನವನ್ನು ಮುಟ್ಟಿದಾಗ ಬೆದರಿಸಿ, ಮೂಡಲಿಸಿ, ಯಾವ ಭರವಸೆಗಳನ್ನೂ ಕೊಡದೆ ಕಳುಹಿಸಿಬಿಟ್ಟರು. ನಮಗೆ ಸರಕಾರದಲ್ಲೂ ಗೌರವವಿಲ್ಲ. ನಮ್ಮ ಮೇಲಧಿಕಾರಿಗಳಂತೂ ನಮ್ಮ ದೂರುಗಳನ್ನು ಲಕ್ಷಿಸುವುದೇ ಇಲ್ಲ ಕೊಡುವ ಸಂಬಳವನ್ನಾದರೂ, ತಿಂಗಳಿಗೊಮ್ಮೆ ಮುಟ್ಟಿಸುವುದಿಲ್ಲ. ರಜಾದ ಸಂಬಳ ದೇವರೇಗತಿ. ಜಿಲ್ಲಾ ಬೋರ್ಡು ಮೆಂಬರ ಮಾತನ್ನೂ, ಊರಿನ ಜಟೆಲ್ ಮೇರ ಮಾತನ್ನೂ ಅನಾವಶ್ಯಕ ತರ್ಲೆ ಅರ್ಜಿಗಳನ್ನೂ ನಂಬಿ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಫುಟ್‌ಬಾಲ್‌ನಂತೆ ಟಿ ಎ. ಕೂಡ ಕೊಡದೆ ಗೋಳಾಡಿಸಿ ಕೊಲ್ಲುತ್ತಿರುವರು. ಅಧಿಕಾರಿಗಳಿಗೆದುರು ಮಾತಾಡಿ ಅವರ ದುರಾಗ್ರಹಕ್ಕೆ ಒಳಗಾದ ಉಪಾಧ್ಯಾಯರು ವರ್ಷಕ್ಕೆ ನಾಲ್ಕೈದು ಊರುಗಳಲ್ಲಿ ಸಂಸಾರ ಹೂಡಬೇಕಾಗುತ್ತದೆ. ಡಿ ಇ. ಒರ ಅಪ್ಪಣೆ ತೆಗೆದುಕೊಂಡು ವರ್ಗಾಯಿಸಬೇಕೆಂಬುವದು ಹೊರಗೆ ಸಮಾಧಾನಕ್ಕಾಗಿ ಹೇಳುವ ಟೊಳ್ಳು ನಿಯಮ ಜಿಲ್ಲಾ ಬೋರ್ಡಿನವರಾಗಲಿ ಲೇಬರ್ ಶಾಖೆಯವರಾಗಲಿ ತಮ್ಮ ಮನಬಂದಂತೆ ವರ್ಗಾಯಿಸಿ, ನಂತರ ಡಿ. ಇ. ಒ. ರಿಗೆ ತಿಳಿಸಿದ್ದಾರೆ.

ಇನ್ನು ಶಾಲಾಕೆಲಸಕ್ಕೆ ಪೂರ್ವದಲ್ಲಿ ಗ್ರಾಮದೇವತೆಗಳನ್ನು ಸಮಾಧಾನವಾಗಿಟ್ಟುಕೊಂಡಿರುವ ಕಾರ್ಯ, ಇದು ಜೀವನ, ಮರಣ ಪ್ರಶ್ನೆ. ಈಗಿನ ಅಭಾವಪರಿಸ್ಥಿತಿಯಲ್ಲಿ ಊರಿನ ಕಾಳಿಸ—ಧೂರೆ, ಗ್ರಾಮಸಮಿತಿಯವರಿಗೆ ವಿಧೇಯನಾಗಿರದಿದ್ದರೆ ಕೂಳಿಲ್ಲದೆ ಸಾಯಬೇಕು. ಎಲ್ಲಾ ಉಪಾಧ್ಯಾಯರೂ ಇಂಥಾ ಸಮರ್ಥರೆ? ಇಲ್ಲ! ಎಂದು ಧಾರಾಳವಾಗಿ ಹೇಳಬಹುದು— ಹೀಗಾಗಿ ಉಪಾಧ್ಯಾಯನು ಹೆಂಡರು, ಮಕ್ಕಳೊಂದಿಗೆ ಒತ್ತಾ

ಯದ ಉಪವಾಸ ವ್ರತಮಾಡಬೇಕಾಗಿದೆ. ಬೇಡ, ಸಾಲದ ಶೂಲಕ್ಕೊಳಗಾಗಿ ಎಲ್ಲಿಂದಲಾದರೂ ಹಣವನ್ನು ಪಡಿಸಿಕೊಂಡು ಬಂದೆನೆನ್ನೋಣ- ಮನೆಯಲ್ಲಿ ಹೆಂಡತಿಯು ಬಾಣಂತಿತನವಿರಲಿ, ಮುದುಕರು, ಮಕ್ಕಳು ಹೊಟ್ಟೆನೋವಿನಬಾಧೆಯಿಂದ (ಮೆಳ್ಕಿಜೋಳ) ಒದ್ದಾಡುತ್ತಿರಲಿ- ಅಕ್ಕಿಯು ದೊರೆಯವಂತಿಲ್ಲ ಇಂಥಾ ಪರಿಸ್ಥಿತಿಯಲ್ಲಿ ಉಪಾಧ್ಯಾಯರನ್ನಿಟ್ಟು "ಭವಿಷ್ಯ ಜನಾಂಗದ ಎಷ್ಟು ಹೊಣೆಗಳು ನಿಮ್ಮ ಕೈಯಲ್ಲಿವೆ. ವಿದ್ಯಾದಾನದಿನಿಮ್ಮ ಕಾರ್ಯಮಹತ್ತರವಾದುದು ಭವಿಷ್ಯದ ರಾಜಕೀಯ, ಸಾಮಾಜಿಕ, ಆರ್ಥಿಕ, ನೈತಿಕ ದೃಷ್ಟಿಗಳಿಂದ ಸಂಪತ್ಸಮೃದ್ಧಿಕರವಾದ ಜಗತ್ತನ್ನು ಸೃಷ್ಟಿಸುವವರು ನೀವು....."ವಗೈರೆ ವೇದಾಂತವನ್ನೋದುತ್ತಾ ಇದ್ದಾರೆ, ಮಂತ್ರಿಗಳೂ, ಅಧಿಕಾರಿಗಳೂ. ಉಪಾಧ್ಯಾಯರು ಶಂಖವನ್ನೂದುತ್ತಾ ಅಧೋಗಾಮಿಗಳಾಗಿ, ನಿರುತ್ಸಾಹಿಗಳಾಗಿ, ನಿರ್ವೀರ್ಯರಾಗಿ.

ಸಂಘಟಿತರಾಗಬೇಕೆಂದರೆ ಬಂಧನಗಳು ಬೇರೆ ಬೇರೆ- ಜಿಲ್ಲಾಬೋರ್ಡು, ಲೇಬರ್, ಮ್ಯುನಿಸಿಪಾಲಿಟಿ ಮಿಷನ್, ಏಡೆಡ್, ಒಬ್ಬರಿಗೆ ಸಂಬಂಧವಿಲ್ಲದವರಂತಿದ್ದೇವೆ. ಅನೈಕಮತ್ಯ, ಸ್ವಾರ್ಥ, ಭಯ, ಅಧಿಕಾರಿಗಳ, ಊರಿನವರ ಭಯ ಎಲ್ಲಾ ತುಂಬಿಕೊಂಡು ಪರಸ್ಪರರಲ್ಲಿ ಐಕಮತ್ಯಕ್ಕೆ ಮಾರ್ಗವೇ ಇಲ್ಲದಂತಿದೆ- ಹಿಂದಿನ ಸರಕಾರದವರು ಇದರಲ್ಲಿಯೂ ತಮ್ಮ ಭೇದ ನೀತಿಯನ್ನು (DIVIDE AND RULE) ಚನ್ನಾಗಿ ವ್ಯಕ್ತಪಡಿಸಿರುವರು-ಪ್ರಾಥಮಿಕ ಶಾಲೆಗಳಲ್ಲೇ ಒಂದು ಶಿಕ್ಷಣ ಪ್ರಣಾಲಿಯೂ, ಪಾಠ್ಯ ಪುಸ್ತಕಗಳೂ ಸಮಾನವಾಗಿರಬೇಕು. ಸಂಬಳ ಕೊಡುವ ಧೋರಣೆಯು ಒಬ್ಬನಿರಬೇಕು (One agency) ಸರ್ವಿಸ್‌ನಿಯಮಗಳು ಎಲ್ಲಾ ಸಮನ್ವಯವಾಗಿರಬೇಕು- ಹೀಗಾದಲ್ಲಿ ಪ್ರಾಂತದ ಪ್ರಾಥಮಿಕ ಶಿಕ್ಷಣಕ್ಕೆ ಭವಿಷ್ಯವಿದೆ- ಇಲ್ಲವಾದರೆ ಉಪಾಧ್ಯಾಯರಿಗೂ ಮುಕ್ತಿ ಇಲ್ಲ. ಶಿಕ್ಷಣದ ಪ್ರಗತಿಯೂ ಆಗುವುದಿಲ್ಲ. ಸರಕಾರದ ನೌಕರರಿಗೆಲ್ಲಾ ಪೆನ್ಸನ್ ಇದೆ. ಅದರೆ ಸರ್ಕಾರದ ಅಧೀನದಲ್ಲೇಕಳೆದ ೨೦-೩೦ವರ್ಷಗಳಿಂದ ದುಡಿಯುತ್ತಿರುವ ಲೇಬರ್ ಶಾಲೋಪಾಧ್ಯಾಯರಿಗೆ ಪೆನ್ಸನ್ ಮಾತು ಹಾಗಿರಲಿ- ನೌಕರಿ ಕೂಡ ಕಾಯಂ ಇಲ್ಲ ಕೆಲ ಉಪಾಧ್ಯಾಯರಿಗೆ ಪ್ರಾವಿಡೆಂಟ ಫಂಡ ಸೌಕರ್ಯವು ಇಲ್ಲ. ಹತ್ತುವರ್ಷಕ್ಕಿಂತಲೂ ಹೆಚ್ಚಿಗೆ ಸರ್ವೀಸಾದವರಲ್ಲಿ.ಶೇಕಡ ೫೦ ರಷ್ಟು ಜನರನ್ನು ಮಾತ್ರ ಕಾಯಂಮಾಡಿರೆಂಬ ಲೇಬರ್ ಕಮೀಶನರವರ 1946 ಫಿಬ್ರವರಿ ಆಜ್ಞೆಯು, ಸೆಪ್ಟೆಂಬರಡಲ್ಲಿ ಜಾರಿಗೆ ಬಂದಿತು. ಅಂದರೆ ಉಳಿದವರನ್ನು ಯಾರು ಕೇಳಬೇಕು ? ಜಿಲ್ಲಾಬೋರ್ಡು, ಮುನಿಸಿಪಾಲಿಟಿಗಳಲ್ಲಿ ದುಡಿದು ದುಡಿದು ಸತ್ತು ಸುಣ್ಣವಾದನಂತರ- ಪ್ರಾವಿಡೆಂಟ ಫಂಡ ಸಾಲದಿಂದ ಸಣ್ಣವಾಗಿ ಸಾಯುತ್ತಿರುವವರ ಗಂಟಲಲ್ಲಿ ಗುಟುಕು ನೀರು ಬಿಡುತ್ತದೆ- ಗ್ರಾಮಗಳಲ್ಲಿ ಇರಲಿಕ್ಕೆ ಸರಿಯಾದ ಮನೆಯಿಲ್ಲ. ಕಾಳು ದೊರೆಯುವುದಿಲ್ಲ. ಕೈಗಡ ಕೂಡ ಕೊಡುವ ದಾತರಿಲ್ಲ. ಮಕ್ಕಳನ್ನು ಶ್ರದ್ಧೆಯಾಗಿ- ಸರಿಯಾಗಿ ಕಳುಹಿಸುವವರು ಕೂಡ ಇಲ್ಲ ಸರಿಯಾದ ಶಾಲಾಕಟ್ಟಡ, ಉಪಕರಣಗಳ ಅಭಾವವಂತೂ ಹೇಳಲೇಬೇಡ- ಇದರ ಮೇಲೆ ವಿದ್ಯಾಧಿಕಾರಿ, ವಿಚಾರಣಾಧಿಕಾರಿಗಳು ಬಂದು ತರಗತಿಯಲ್ಲಿ ಹಾಜರಿ ಕಡಮೆ. ಪ್ರೋಗ್ರೆಸ್ ಇಲ್ಲ. ಮೊದಲನೆ ತರಗತಿಯ 1/4 ಭಾಗವು ಬೇರೆ ತರಗತಿಯಲ್ಲಿಲ್ಲ ನಿಮ್ಮಮೇಲೆ ಕ್ರಮತೆಗೆದುಕೊಂಡು ನಿಮ್ಮನ್ನು ಏಕೆ ಶಿಕ್ಷಿಸಬಾರದು ? (Show cause why disciplinary action should not be taken against you)" ಎನ್ನುವರು. ಅಧಿಕಾರಿಗಳು ಬಂದಾಗ ಅವರಿಗೆ ಮೊದಲಿನಂತೆ ಆದರಾತಿಥ್ಯ ಮಾತಾವಶಕ್ತಿಯೂ ನಮ್ಮಲ್ಲಿಂದ ಮಾಯವಾಗಿದೆ-

ಸಂಘಟಿತರಾಗದೆ ಬೇರೊಂದುಪಾಯವೇ ಇಲ್ಲ.

ಜಗತ್ತಿನ ಸರ್ವಶ್ರೇಷ್ಠವ್ಯಕ್ತಿಗಳು ದಾರಿದ್ರ್ಯ ಕುಟುಂಬಗಳಲ್ಲಿ, ಕರುಣಾಜನಕ ಪರಿಸ್ಥಿತಿಗಳಲ್ಲಿ ಜನಿಸಿ ಲೋಕ ಕಲ್ಯಾಣಮಾಡಿದರು. ಕಷ್ಟವೂ, ದುಃಖವೂ ಹೆಚ್ಚಿದಂತೆ- ಪರಿಹಾರೋಪಾಯಗಳ ಆಲೋಚನೆಯೂ ಹೆಚ್ಚಬೇಕಾದುದು ಸಹಜವಾಗಿದೆ. ನಮ್ಮ

ನೇನಿರಾಶರಾಗಿ, ನಿರ್ವೀರ್ಯರುಗಿ ಕುಳಿತರೆ ನಮ್ಮ ನ್ನಾರು ಕೇಳಬೇಕು? ಧೈರ್ಯವಾಗಿ ಪ್ರಗತಿಯ ದಾರಿಯಲ್ಲಿ ಮುಂದೆ ಹೆಜ್ಜೆ ಇಡಬೇಕಾದುದು ಮನುಜ ಯೋಗ್ಯವಾದ ಧರ್ಮವಾಗಿರಬೇಕು. ನಾವೆಲ್ಲರೂ ಒಂದಾಗಿ ಸಂಘಟಿತರಾಗಬೇಕು. ನಮಗೊಂದು ನಿಲ್ದಾಣವು (Platform) ಬೇಕು. ನಾವು ನಮ್ಮ ಅಭಿಪ್ರಾಯಗಳನ್ನು ಧೈರ್ಯವಾಗಿ ಹೇಳುವದನ್ನು ಕಲಿಯಬೇಕು. ಪ್ರಜಾರಾಜ್ಯಭಾರದ ಈ ಕಾಲದಲ್ಲಾದರೂ ನಾವು ನಮ್ಮ ಹಕ್ಕುಗಳನ್ನು ಧೈರ್ಯವಾಗಿ ಪ್ರತಿಪಾದಿಸದಿದ್ದರೆ ಇನ್ನಾವಾಗ ಈ ಕೆಲಸ ಸಾಧಿಸೀತು? ಜಿಲ್ಲಾಬೋರ್ಡು- ಲೇಬರ್ ಮುನಿಸಿಪಾಲಿಟಿ ಮಿಷನ್, ಏಡೆಡ್- ಈ ಶಾಲೆಗಳ ಪ್ರಾಥಮಿಕೋಪಾಧ್ಯಾಯರೆಲ್ಲಾ ಒಂದಾಗಬೇಕು. ಶಿಕ್ಷಣ, ಧ್ಯೇಯ, ಸಮಾನವಿರಬೇಕಾದರೆ- ಇದರಲ್ಲಿ ಪರಸ್ಪರ ಭೇದಕ್ಕೆ ಮಾರ್ಗವೇ ಇಲ್ಲ. ಕೊನೆಯ ಪಕ್ಷ ವರ್ಷಕ್ಕೊಂದುಸಲವಾದರೂ ಕಲೆತು ಪರಸ್ಪರ ಕುಂದು ಕೊರತೆಗಳನ್ನು ಚರ್ಚಿಸಿ ತಮ್ಮಬೇಡಿಕೆ- ಹಕ್ಕುಗಳನ್ನು ಸಂಬಂಧಿಸಿದವರಿಗೆ ಸಂಘಟಿತವಾಗಿ ಕೊಟ್ಟು ಪರಿಹಾರ ಪಡೆಯಬೇಕು. ಬಳ್ಳಾರಿಯಲ್ಲಿ ನಮಗಾಗಿ ಕಾರ್ಯಾಲಯವನ್ನು ತೆಗೆದು- ಇಲ್ಲಿಯ ಖರ್ಚನ್ನೆಲ್ಲಾ ನಾವೇ ಭರಿಸಬೇಕು- ಜಿಲ್ಲೆಯಲ್ಲಿನ ಒಂದುಸಹಸ್ರ ಪ್ರಾಥಮಿಕೋಪಾಧ್ಯಾಯರು ತಲೆಗೆ ಒಂದುರೂಪಾಯಿನಂತೆ ವರ್ಷಕ್ಕೊಂದು ಸಲ ಕೊಟ್ಟರೆ, ಕಾರ್ಯಾಲಯ, ವಾರ್ಷಿಕ ಸಭೆ, ಪ್ರಕಟನೆಯ ಖರ್ಚು ವಗೈರೆ ಎಲ್ಲಾನಡೆಯುತ್ತದೆ. ಇದಕ್ಕಾಗಿ ಜಿಲ್ಲೆಯಲ್ಲಿನ ಕೆಲಉತ್ಸಾಹೀ ಉಪಾಧ್ಯಾಯರಾದರೂ ಮುಂದೆ ಬಂದು ಜಿಲ್ಲೆಗೆಲ್ಲಾ ಸಂಘವನ್ನು ಸ್ಥಾಪಿಸುವುದರಲ್ಲಿ ಯತ್ನವಾಗಬೇಕು. ಈ ಕಾರ್ಯದಲ್ಲಿ ಕನ್ನಡ- ತೆಲುಗು- ಹಿಂದೂ- ಮುಸಲ್ಮಾನ, ಬಾಯ್ಸ್‌ಸ್ಕೂಲ್, ಗರ್ಲ್ಸ್‌ಸ್ಕೂಲ್, ಲೇಬರ್ ಸ್ಕೂಲ್, ಏಡೆಡ್‌ಸ್ಕೂಲ್, ಈ ಭೇದಗಳು ಬರಬಾರದೆಂದು ನಾನು ಬೇಡುತ್ತೇನೆ ಶೀಘ್ರದಲ್ಲೇ ಪ್ರಾಂತಗಳು ಸ್ಥಾಪಿತವಾದಾಗ ನ್ಯಾಯವಾಗಿ ಸೇರಲೇಬೇಕಾದ ಭಾಗಗಳೆಲ್ಲಾ ಆಯಾ ಪ್ರಾಂತಗಳಿಗೆ ಸೇರುತ್ತವೆ- ಇದರಲ್ಲಿ ಸಂದೇಹವಿರಬಾರದು 'ಸಂಘ ಶಕ್ತಿ ಕಲೌ ಯುಗೇ' ಎಂಬಂತೆ ಸಂಘವಿಲ್ಲದೆ ನಮ್ಮನ್ನಾರೂ ಮ್ಮಾತಾಡಿಸುವುದಿಲ್ಲ. ಈ ಕಾರಣ ಜಿಲ್ಲೆಯ ವಿವಿಧ ಭಾಗಗಳಲ್ಲಿ ತಿಂಗಳಿಗೊಮ್ಮೆ ಕಲಿಯುವ ಉಪಾಧ್ಯಾಯ ಸಂಘ ಸಭೆಗಳಲ್ಲಿ ಈ ವಿಚಾರವನ್ನು ಚರ್ಚಿಸಿ ನಿರ್ಣಯಕ್ಕೆ ಬರಬೇಕು. 'ನವಭಾರತ' ಸಂಪಾದಕರನು ಕೇಳಿಕೊಂಡಿದ್ದೇವೆ. ಅವರು ಅಭಿಪ್ರಾಯಗಳನ್ನು ಪ್ರಕಟಿಸಿ ಸಂಘಟನೆಯ ಕಾರ್ಯಕ್ಕೆ ಸಹಾಯಮಾಡಲೊಪ್ಪಿರುವರು. ಎಲ್ಲಾ ಉಪಾಧ್ಯಾಯ ಸಂಘದವರೂ ಅವರಿಗೆ ಬರೆಯಬೇಕು ಎಲ್ಲಾನೌಕರರಸಂಬಳ ಅಲೋಯರ್ಯನ್ಸ್ ಹೆಚ್ಚಿ ನಮಗೆ- ಬರಬೇಕಾದ ಸ್ಕೇಲ್ ಇಕ್ರಿಮೆಂಟ್‌ಕೂಡ ಇಲ್ಲದಂತಾಗಿರುವಾಗ ನಾವು ಸಂಘಟಿತರಾಗದಿದ್ದರೆ, ನಮ್ಮನ್ನು ಬೀದಿಯ ನಾಯಿಯೂ ಮಾತಾಡಿಸುವುದಿಲ್ಲ. ಆದುದರಿಂದ ಎಲ್ಲಾ ಉಪಾಧ್ಯಾಯರೂ ನನ್ನ ಈ ಸೂಚನೆಗೆ ಬೆಂಬಲಕೊಡಬೇಕೆಂದೂ, ಬೋರ್ಡು, ಮುನಿಸಿಪಾಲಿಟಿ, ಗ್ರಾಂಟ್, ಮಿಷನ್, ಲೇಬರ್ ಶಾಲೋಪಾಧ್ಯಾಯರೆಲ್ಲಾ ಕಲೆಯಬೇಕೆಂದೂ ನಾನು ವಿನಯದಿಂದ ಬೇಡುತ್ತೇನೆ.

ಕ್ರಾಂತಿಯ ಕಹಳೆ

ಈ ಜಯ ಪ್ರಕಾಶರ ಗರ್ಜನೆ

ಘಟನಾ ಸಮಿತಿಯು ರಚಿಸುವ ಘಟನೆಯನ್ನು ಬ್ರಿಟಿಷ್ ಸರ್ಕಾರವು ಮಾನ್ಯ ಮಾಡದಿದ್ದರೆ ಭಾರತೀಯರು ಕ್ರಾಂತಿಯನ್ನು ಹೂಡಿ ಪ್ರತಿ ಸರಕಾರವನ್ನು ಸ್ಥಾಪಿಸಬೇಕು. ಬ್ರಿಟಿಷರು ನನ್ನು ಸ್ವಾತಂತ್ರ್ಯ ಸಂಗ್ರಾಮದ ವಿಕ್ಕನ್ನು ಬದಲಿಸಿ ನಮ್ಮನ್ನು ಯಾದವೀಯುದ್ಧಕ್ಕೆಳೆಯಬೇಕೆನ್ನುತ್ತಿದ್ದಾರೆ. ನಾವು (ಹಿಂದೂ-ಮುಸಲ್ಮಾನ) ಪರಸ್ಪರ ಸೇತು ತೀರಿಸಿಕೊಳ್ಳುವ ಮಾತೆತ್ತಿದರೆ ಫುನಃ ನಾವು ಬ್ರಿಟಿಶರ ಬೋನಿಗೆ ಬಿದ್ದಂತಾಗುವದು. ಸಂಸ್ಥಾನಗಳಲ್ಲಿಯೂ ಇವರು ಭೇದ

ನೀತಿಯ ಪ್ರಯೋಗ ನಡೆಸಿದ್ದಾರೆ. ಇಡೀ ಭಾರತದಲ್ಲಿ ಕ್ರಾಂತಿ ಸಂಭವಿಸಿದರೆ ಮಾತ್ರ ಬ್ರಿಟಿಶ ಕುತಂತ್ರಗಳೆಲ್ಲ ಹಾಳಾಗಿಹೋಗುವವು.

ಈ ಸಲದ ಹೋರಾಟದಲ್ಲಿ ನಾವು ಜೈಲುಗಳನ್ನು ತುಂಬಬೇಕಾಗಿಲ್ಲ. ನಮ್ಮ ಶತ್ರುಗಳನ್ನು ಬಂಧಿಸುವಷ್ಟು ಶಕ್ತಿ ನಮ್ಮಲ್ಲಿಇದೆಯೆಂಬುದನ್ನು ರಿಯಬೇಕು, ನಾವು ಈಗಿನಿಂದಲೆ ಸಿದ್ಧತೆನಡೆಸಿದರೆ ಕೆಲ ತಿಂಗಳುಗಳಲ್ಲಿ ಅದು ಪೂರೈಸಬಹುದು. ಈ ಕಾರಣ ಸಿದ್ಧತೆಯನ್ನು ಈಗಿನಿಂದಲೆ ಪ್ರಾರಂಭಿಸಬೇಕು. ಜನತೆಯು ಸರಕಾರಿಕಚೇರಿಗಳನ್ನು ಸಂಸ್ಥೆಗಳನ್ನು ನಶಪಡಿಸಿಕೊಂಡು ದುಡಿಯಲು ಇಚ್ಛೆ ಇರುವ ಜನರನ್ನಿಟ್ಟು ಪ್ರಜಾರಾಜ್ಯವನು ಸ್ಥಾಪಿಸಬೇಕು. ಬ್ರಿಟಿಷ್ ಪಕ್ಷಪಾತಿ ಅಧಿಕಾರಿಗಳನ್ನು ಹೊರದೂಡಿ ಹೊಸ ಅಧಿಕಾರವನ್ನು ನಿಯಮಿಸಿಕೊಳ್ಳಬೇಕು. ಹೊಸ ಸಕರಗಳನ್ನೆತ್ತಬೇಕು. ಪೋಲೀಸ್, ಸೈನ್ಯಗಳನ್ನು ಸಂಘಟಿಸಬೇಕು. ಇವರಿಗೆ ಹಳ್ಳಿಯ ಕಮ್ಮಾರರು ತಯಾರಿಸುವ ಆಯುಧ ಮೊದಲುಮಾಡಿ ಎಲ್ಲಾತರದ ಆಯುಧಗಳಿಂದ ಇವರನ್ನು ಸುಸಜ್ಜಿತಗೊಳಿಸಬೇಕು. ಮೂರು ತಿಂಗಳೊಳಗಾಗಿ ಬ್ರಿಟಿಷರ ಸಾಮ್ರಾಜ್ಯವನ್ನು ಸಮೂಲನಷ್ಟ ಮಾಡಬಹುದು ಎಂದು ಶ್ರೀ ಜಯಪ್ರಕಾಶರು ಬನಾರಸದ ಸಭೆಯಲ್ಲಿ ಭಾಷಣ ಮಾಡಿದರು.

ಗುಂಪುಗಳ ನಿಭಜನೆಗೆ ತೀವ್ರ ವಿರೋಧ

ಗಾಂಧೀಜಿಯವರ ಶಾಂತಿ ಪ್ರಯತ್ನದ ಮುನ್ನಡೆ

ಪೂರ್ವ ಬಂಗಾಲದಲ್ಲಿ ಮಹಾತ್ಮರು ನಡೆಸಿದ ಹಿಂದು ಮುಸಲ್ಮಾನ ಸ್ನೇಹ ಸಂಪಾದನೆಯ ಪ್ರಯತ್ನ ಅನಿರ್ಬಂಧವಾಗಿ ಸಾಗಿದೆ. ಸಾಯಂಪ್ರಾರ್ಥನೆಯ ಕಾಲಕ್ಕೆ ಹಾಡುವ ಗೀತಗಳ ಸಾರವನ್ನೆ ತೆಗೆದುಕೊಂಡು ಅವರು ತಮ್ಮ ಶಾಂತಿ ಸಂದೇಶವನ್ನು ಬೀರುತಿರುವರು. ಪ್ರಾರ್ಥನೆ ಯಾವಾಗಲೂ, ಹೃದಯದಿಂದ ಹೊರ ಹೊಮ್ಮಬೇಕು, ಎಂದರೆ ಪರಮಾತ್ಮನ ಸಾಕ್ಷಾತ್ಕಾರವಾಗುವದೆಂದು ಅವರು ೧೪ ನೇ ತಾರೀಕಿನ ಪ್ರಾರ್ಥನಾ ಸಭೆಯಲ್ಲಿ ಸಂತ ತುಳಸೀದಾಸರಿಗೆ ಪರಮಾತ್ಮನ ಸಾಕ್ಷಾತ್ಕಾರವಾದ ಬಗೆಯನ್ನು ವಿವರಿಸುತ್ತ ಹೇಳಿದರು. ಹೃದಯಾಂತರಾಳದಿಂದ ಹೊರ ಹೊಮ್ಮಿದ್ದ ಪ್ರಾರ್ಥನೆಕ ತ್ತಲೆಯಲ್ಲಿದ್ದವರನ್ನು ಬೆಳಕಿಗೆ ತರುತ್ತದೆ. ಭಯಗ್ರಸ್ತರನ್ನು ನಿರ್ಭಯರನ್ನಾಗಿ ಮಾಡುತ್ತದೆ. ಎಂದೂ ಅವರು ಹೇಳಿದರು.

೧೫ ನೇ ತಾರೀಖಿನ ಪ್ರಾರ್ಥನಾ ಪ್ರಾರಂಭವಾದ ಕೂಡಲೇ ಗಾಂಧೀಜಿ ತಮ್ಮ ಮೌನ ವ್ರತವನ್ನು ಪ್ರಾರಂಭಿಸಿದರು. ಈಗಿರಡು ವಾರಗಳಿಂದ ಮಹಾತ್ಮರು ರವಿವಾರ ಸಂಜೆ ಪ್ರಾರ್ಥನಾ ಸಮಯಕ್ಕೆ ಮೌನ ವ್ರತ ಪ್ರಾರಂಭಿಸಿ ಸೋಮವಾರ ಸಂಜೆ ಪ್ರಾರ್ಥನೆಯ ನಂತರ ಅದನ್ನು ಬಿಟ್ಟುಗೊಡುತ್ತಾರೆ. ಎರಡು ಮೈಲು ದೂರದ ಸೋನಾಪುರಕ್ಕೆ ಜನರು ರವಿವಾರ ದಿನ ಸಂತೆಗೆ ಹೋಗುವದರಿಂದ ಅಂದು ಪ್ರಾರ್ಥನೆಗೆ ಹೆಚ್ಚು ಜನ ಸೇರುವುದಿಲ್ಲವಾದ್ದರಿಂದ ಗಾಂಧೀಜಿ ತಮ್ಮ ಮೌನದಿನವನ್ನಿಂತು ಬದಲು ಮಾಡಿರುವರು. ಕರ್ನಲ್ ನಿರಂಜನಸಿಂಗಗಿಲ್ಲ, ಮತ್ತು ಅವರ ಪರಿವಾರದವರು ಮೊದಲಾದವರು ಇಂದು ಗಾಂಧೀಜಿಯನ್ನು ಕಂಡರು.

ಮಹಾತ್ಮರು ಇಂದು ೨೦ ನೇ ತಾರೀಕಿನಿಂದ ಗ್ರಾಮಸಂಚಾರವನ್ನು ಪಾದಚಾರಿಯಾಗಿ ನಡೆಸಲಿರುವರಷ್ಟೆ. ಆದರೆ ಅವರು ಈಗ ೨೨ ಕ್ಕೆ ಸಮೀಪದ ಒಂದು ಹಳ್ಳಿಯಲ್ಲಿಯ ಸಭೆಗೆ ಹೋಗುವ ಕಾರ್ಯಕ್ರಮವನ್ನಿಟ್ಟುಕೊಂಡಿರುವದರಿಂದ ಮತ್ತು ಆಗ ಒಂದೆರಡು ದಿನ ಅವರು ತಿರುಗಿ ಶ್ರೀರಾಮಪುರಕ್ಕೆ ಬರಲಿರುವದರಿಂದ ಈ ಗ್ರಾಮ ಸಂಚಾರ ಮುಂದೆ ಬೀಳುವ ಸಂಭವವಿದೆ.

ಮಾಧುಪುರದಲ್ಲಿ ಆಸ್ಪತ್ರೆ

ಮಹಾತ್ಮರು ಎರಡು ಮೈಲು ಕಾಲಿನಿಂದ ನಡೆದುಹೋಗಿ ಮಾಧುಪುರದಲ್ಲಿ ಭಾರತೀಯ ವೈದ್ಯ ಸಂಘದವರು ತೆರೆಯಲಿರುವ ಆಸ್ಪತ್ರೆಯ ಉದ್ಘಾಟನ ಸಮಾರಂಭವನ್ನು ಜರುಗಿದರು. ಶ್ರೀರಾಮಪುರದಿಂದ ಎರಡು ಮೈಲು ಅವರು ಕಾಲಿನಿಂದಲೆ ನಡೆಯುತ್ತ ಹೋದರು. ಡಾ. ದಾಸಗುಪ್ತರು ಅವರಿಗೆ ಪಲ್ಲಕ್ಕಿಯ ವ್ಯವಸ್ಥೆಮಾಡಿದ್ದರು. ಮಹಾತ್ಮರು ಅದರಲ್ಲಿ ಕೂಡ

ಲಿಲ್ಲ. ಪಂಡಿತ ಜವಹರಲಾಲರು ಬರುವರೆಂದು ಅಡಿಕೆ ಗಿಡದ ಬೊಡ್ಡೆಗಳನ್ನು ಹಾಕಿ ಸಣ್ಣ ಪೂಲು ಕಟ್ಟಿ ದಾರಿಯಲ್ಲಿ ಬರುವ ಹಳ್ಳವನ್ನು ದಾಟಲು ಅನುಕೂಲ ಮಾಡಿದೆಂದು ದಾಸಗುಪ್ತರು ಹೇಳಿದರು. ಅದಕ್ಕೆ ಗಾಂಧೀಜಿ 'ಪಂಡಿತನು ಬಂದಿಲ್ಲ, ನಾನೇ ಅದನ್ನು ಪಯೋಗಿಸುವ ಪಂಡಿತನಾಗುವೆ, ಎಂದು ಹೇಳಿ ಅಂಕು ಡೊಂಕಾದ ಅಲ್ಲಲ್ಲಿ ಬಿದರಿನಿಂದ ಪೂಲು ಕಡಿದ ದಾರಿ ಯಲ್ಲಿ ನಡೆಯಹತ್ತಿದರು. ನಾಲ್ಕತ್ತು ನಿಮಿಷಗಳಲ್ಲಿ ಈ ದಾರಿಯನ್ನು ಕ್ರಮಿಸಿ ಗಾಂಧೀಜಿ ಮಾಧುಪುರ ಮುಟ್ಟಿದರು. ಸರ್ವರ ಯೋಗಕ್ಷೇಮ ನೊಡಿಕೊಳ್ಳು ವ ಪರಮಾತ್ಮನೊಬ್ಬನೆ ಮಹಾ ವೈದ್ಯನು. ಅವನಲ್ಲಿ ಅಚಲ ವಿಶ್ವಾಸವಿಡುವದಗತ್ಯವೆಂದು ಗಾಂಧೀಜಿ ಅರ್ಧ ಗಂಟೆ ಭಾಷಣ ಮಾಡಿ ಆಸ್ಪತ್ರೆಯ ಉದ್ಘಾಟ ನ ಮಾಡಿದರು.

ನಿಃಸ್ವಾರ್ಥ ಸೇವಕರ ಅವಶ್ಯಕತೆ

ಶ್ರೀರಾಮಪುರದಲ್ಲಿ ೧೬ ನೇ ತಾರೀಖಿನಲ್ಲಿ ಪ್ರಾ ರ್ಥನಾ ಪೂರ್ವದ ಕಾರ್ಯಕರ್ತರ ಸಭೆಯಲ್ಲಿ ಭಾಷ ಣ ಮಾಡುತ್ತ ನಿಃಸ್ವಾರ್ಥ ಸೇವೆ ಮಾಡುವ ಗುಣವನ್ನು ಕಲಿಯಲು ಉಪದೇಶಿಸಿದರು. ಗ್ರಾಮ ಸೇವಕನ ಮುಖ್ಯ ಕರ್ತವ್ಯ ಆತ್ಮಶುದ್ಧಿ ಮಾಡಿಕೊಳ್ಳುವದು. ಇಂದು ನಮ್ಮ ಹಳ್ಳಿಗಳೆಂದರೆ ದೇಹದ ಮೇಲಿರುವ ಕೊಳೆತ ಹುಣ್ಣಿನಂತಿವೆ. ನಮ್ಮ ಎಲ್ಲ ಕೆಡಕುಗಳಿಗೆ ಬ್ರಿಟಿಶರೇ ಕಾರಣರೆಂದು ಅವರನ್ನು ಜರೆಯುತ್ತ ಹೋ ಗುವದರಲ್ಲಿ ಫಲವಿಲ್ಲ ನಗರಗಳನ್ನು ಹೆಚ್ಚು ಆಕರ್ಷಕ ಮಾಡಿದರೆ ಶ್ರೀಮಂತರು ಅಲ್ಲಿ ಬಂದು ವಾಸಿಸಹತ್ತು ವರು. ಇದರಿಂದ ಹಳ್ಳಿಗಳ ಶೋಷಣೆಗೆ ಅವಕಾಶ ಸಿಕ್ಕುವದೆಂದು ಬಗೆದು ಬ್ರಿಟಿಶರು ಮೊದಲು ಪಟ್ಟಣ ಗಳಲ್ಲಿ ತಳವೂರಿದರು. ಕಷ್ಟಗಳಲ್ಲಿ ಬಿದ್ದ ಹಳ್ಳಿಗರತ್ತ ಲಕ್ಷಿಸಲಿಲ್ಲ. ಈಗ ನಮ್ಮ ಜನರೇ ಅಡಳಿತ ವಹಿಸಿದ್ದ ರಿಂದ ಈ ಅಪವಾದಕ್ಕೆ ಅವರೂ ಗುರಿಯಾಗಬಾರದು ಹಳ್ಳಿಗಳ ಉದ್ಧಾರಕ್ಕಾಗಿ ಸರಕಾರ ಪ್ರಯತ್ನಿಸಲಿ ಸರಕಾರವನ್ನೇ ಕಾಯ್ದು, ಪ್ರತಿಯೊಬ್ಬ ನಾಗರಿಕನೂ ಇದನ್ನು ಮಾಡಬೇಕು. ಕೆರೆ ಹೊಳೆಯ ಹೊಲಸನ್ನೆಲ್ಲ ತೆಗೆದು ಹಾಕುವದವಶ್ಯವಾಗಿದೆ. ಅಲ್ಲಿನ ಪುಂಡರು ಸ್ವಾರ್ಥಕ್ಕಾಗಿ ಪರಿಸ್ಥಿತಿಯನ್ನು ಕೆಡಿಸಲು ಹೊಂಚು ಹಾಕಿರುವರು. ಈ ದೇಹ ಮತ್ತು ಮನೆಗಳ ಲ್ಲಿ ಹಬ್ಬಿದ ರೋಗಗಳನ್ನು ನಿರ್ಮೂಲ ಮಾಡುವ ಕಾರ್ಯಕ್ಕೆ ನಿಃಸ್ವಾರ್ಥ ಸಮಾಜ ಸೇವಕರು ಟೊಂಕ ಕಟ್ಟಬೇಕು. ಸರಕಾರದಿಂದಲೇ ಎಷ್ಟೋ ಕಾರ್ಯವಾ ಗಬಹುದು. ಆದರೆ ಇದಕ್ಕೂ ಸಾರ್ವಜನಿಕ ಬೆಂಬಲ ಅವಶ್ಯ. ಶಾಶ್ವತರೀತಿಯಿಂದ ಸತತ ಪ್ರಯತ್ನ ಮಾಡಹ ತ್ತಿದರೆ ಈ ಅಜ್ಞಾನ ದುಃಖಗಳನ್ನು ಹಳ್ಳಿಯಿಂದ ಓಡಿಸಬಹುದು. ಪುಂಡರ ಬೇಳೆ ಬೇಯುವ ದಿನಗಳು ಆ ಮೇಲೆ ಉಳಿಯಲಾರವು. ಜಡತನ ಅಜ್ಞಾನ ಹೋ ದಕೂಡಲೇ ಜಾತೀಯ ಐಕ್ಯ ಸಾಧಿಸುವದು. ಈ ಉ ದ್ದೇಶದಿಂದಲೇ ನಾನು ನೌಖಾಲಿಗೆ ಬಂದಿರುವೆನು. ನನ್ನ ಈ ಕಾರ್ಯ ಸಾಧಿಸುವವರೆಗೆ ನಾನು ಈ ಸ್ಥಳ ವನ್ನು ಬಿಟ್ಟು ಕದಲಲಾರೆ. ಈ ಪ್ರಯತ್ನದಲ್ಲಿಯೆ ಪ್ರಾಣಬಿಡಬೇಕಾದರೆ ನಾನು ಅದಕ್ಕೂ ಸಿದ್ಧನಿರುವೆ ಎಂದು ಮುಂತಾಗಿ ಮಹಾತ್ಮರು ಮಾತು ಮುಗಿಸಿ ದರು.—

ಆಸಾಮದ ನಿರ್ಧಾರ ಅಚಲವಾಗಲಿ

ಆಸಾಮದ ಮುಖ್ಯ ಮಂತ್ರಿಗಳಾದ ಬಾರ್ಡೋ ಲಾಯಿಯವರು ಘಟನಾ ಸಮಿತಿಯ ಗುಂಪುಗಳ ನಿರ್ಮಾಣದ ಬಗ್ಗೆ ಪತ್ರವನ್ನು ಕೊಟ್ಟು ಮಹಾತ್ಮರ ಕಡೆಗೆ ಕಳಿಸಿದ್ದರು. ಆ ಪತ್ರ ತೆಗೆದುಕೊಂಡು ಹೋದ ಮಹೇಂದ್ರ ಮೋಹನ ಚೌದರಿಯವರು ಆ ಪತ್ರ ಕೊ ಟ್ಟು ಸುಹಾತ್ಮರೊಡನೆ ಆ ಪ್ರಶ್ನೆಯನ್ನು ಚರ್ಚಿಸಿದರು ಮಹಾತ್ಮರು ನಾಲ್ಕು ಪುಟ್ಟಸ್ಕ್ಯಾಪ ಕಾಗದದಷ್ಟು ಉತ್ತರ ಕಳಿಸಿದ್ದು ಅವರಲ್ಲಿ ಹೀಗೆ ಬರೆದಿರುವರೆಂದು ಚೌದರಿಯವರು ಹೇಳುತ್ತಾರೆ. 'ಘಟನಾ, ಸಮಿತಿ ಗುಂಪುಗಳಲ್ಲಿ ಒಡೆದು ಹೋಗುವ ಸಮಯ ಬಂದಾಗ ಆಸಾಮವು ಘಟನಾ ಸಮಿತಿಯಿಂದ ಹೊರಬೀಳು ವೆದು ಎಂದು ನೀವು ಹೇಳಬೇಕು. ನಿಮ್ಮ ಮನವೊಲಿ

ಸಿ ನಿಮ್ಮಲ್ಲಿ ಧೈರ್ಯವನ್ನು ತುಂಬುವುದಕ್ಕಾಗಿ ನಾನೀ ಸಮಯವನ್ನೆಲ್ಲ ಉಪಯೋಗಿಸಿದ್ದೇನೆ. ಈಗ ನೀವು ಸರಿಯಾದ ಮಾರ್ಗದಿಂದ ನಡೆದು ಕೊಳ್ಳದಿದ್ದರೆ ಅಸಾಮಿನ ಅವತಾರ ಸಮಾಪ್ತಿಯಾಗುವುದು. ನನ್ನ ಮನಸ್ಸಿಗೆ ಯಾವ ಸಮಾಧಾನವೂ ಇಲ್ಲ. ಅಸಾಮು ತನ್ನ ಆತ್ಮವನ್ನು ಕಳೆದುಕೊಳ್ಳಬಾರದು. ಇಡೀ ಜಗತ್ತನ್ನೆದುರಿಸಿ ಅದನ್ನು ಕಾಪಾಡಿಕೊಳ್ಳಬೇಕು ಇತರದಿದ್ದರೆ ಅಸಾಮಿನಲ್ಲಿ ಜನರು ಇಲ್ಲ; ಆದರೆ ಗೊಂಬಿಗಳಿದ್ದಾರೆಂದು ನಾನು ಹೇಳುತ್ತೇನೆ. ಬಂಗಾಲ ಯಾವ ರೀತಿಯಲ್ಲಿಯೆ ಆಗಲಿ ಅಸಾಮಿನ ಮೇಲೆ ಪ್ರಭುತ್ವ ನಡೆಸಬೇಕೆಂಬ ಸೂಚನೆ ಉದ್ದಾಮತನದ್ದಾಗಿದೆ ಎಂದು ಗಾಂಧೀಜಿ ಬರೆದಿರುವರು.

ಜಾಧರಿಯವರು ಅವರೊಂದಿಗಿದ್ದ ಶ್ರೀ ಭಗವತಿಯವರು ಮಹಾತ್ಮರ ಆಶೀರ್ವಾದ ಕೋರಲು ಗಾಂಧೀಜಿ "ದೇವರ ಆಶೀರ್ವಾದದ ಮಾತನ್ನಾಡಿರಿ. ಅದು ಹೆಚ್ಚು ಸಮೃದ್ಧವಾಗಿರುತ್ತದೆ. ನಮ್ಮ ಮನಸ್ಸನ್ನು ತಿರುಗಿಸಲು ಸ್ವತಃ ಮಹಾತ್ಮರು ಪ್ರಯತ್ನಿಸಿದರೂ ನಾವು ಕೇಳುವದಿಲ್ಲ ಎಂದು ಅಸಾಮು ಜನರಿಗೆ ಹೇಳಿರಿ ಎಂದು ಉತ್ತರ ಕೊಟ್ಟರು. ಗುಂಪುಗಳ ನಿರ್ಮಾಣದ ಬಗ್ಗೆ ಮಹಾತ್ಮರು ಎಷ್ಟೊಂದು ವಿರುದ್ಧ ಇರುವರೆಂಬುದು ಇದರಿಂದ ಗೊತ್ತಾಗುವದು.

ಒಂದು ಪ್ರಶಂಸಾರ್ಹ ಹಸ್ತಪತ್ರಿಕೆ

(7 ನೆ ಪುಟದಿಂದ ಮುಂದುವರಿದಿದೆ)

ಪಾ" ಅಂದರೆ ಉಪವಾಸ, "ಧುಕತ್" ಅಂದರೆ ದಾನ ಧರ್ಮ ಮತ್ತು "ಹಾಜ" ಅಂದರೆ ತೀರ್ಥಯಾತ್ರೆ. ಮೊದಲನೆ ಮೂರು ಎಲ್ಲರಿಗೂ ವಿಧಿಸಲ್ಪಟ್ಟಿವೆ; ಉಳಿದೆರಡು ಅನುಕೂಲವಂತರಿಗಷ್ಟೆ.

ಕುರಾಣಕ್ಕನುಸಾರವಾಗಿ ಈ ಕೆಳಗಿನ ನಿಯಮಗಳನ್ನು ಪಾಲಿಸಿದರೆ ಐಹಿಕ ಆಮುಷ್ಮಿಕ ಸುಖದೊರೆಯುತ್ತದೆ:

೧. ಪ್ರಭಾತದಲ್ಲಿ ತಣ್ಣೀರ್ಸ್ನಿಗೆಯ ಪ್ರಾರ್ಥನೆ;

೨. ಪೂರ್ವಾಹ್ನದಲ್ಲಿ ನರಕದ ಬೆಂಕಿಯಿಂದ ಉಳಿಸೆಂದು ಪ್ರಾರ್ಥನೆ;

೩. ಸಾಯಂಕಾಲದಲ್ಲಿ ಋಣವಿಮೋಚನಾ ಪ್ರಾರ್ಥನೆ;

೪. ಸಂಧ್ಯಾಕಾಲದಲ್ಲಿ ಶತ್ರುಗಳಿಂದ ಕಾಪಾಡೆಂದು ಪ್ರಾರ್ಥನೆ;

೫. ರಾತ್ರಿಯಲ್ಲಿ ವಿಚಾರಣೆಯ ದಿನ ನ್ಯಾಯದಾನದಲ್ಲಿ ಪೂರ್ವಪ್ರಾಶಸ್ತ್ಯ ಕೊಡಬೇಕೆಂದು ಪ್ರಾರ್ಥನೆ

೬. ದ್ರವ್ಯಾರ್ಜನೆಗಾಗಿ ವ್ಯಾಪಾರ ವೃತ್ತಿಗಳ ಉಪಕ್ರಮ

೭. ಶಾಂತಿ ಸಾಮರಸ್ಯಗಳ ಪ್ರಸಾರಕ್ಕಾಗಿ ದಾನ ಧರ್ಮ;

೮. ರೋಗ ನಿವಾರಣೆಗಾಗಿ ಸ್ನಾನ ಮತ್ತು ಶುದ್ಧ ಜೀವನ;

೯. ಕೀರ್ತಿಗಾಗಿ ವಿದ್ಯೆ ಸಂಸ್ಕೃತಿಗಳ ಉಪಕ್ರಮ; ಮತ್ತು

೧೦. ನಾಯಕತ್ವಕ್ಕಾಗಿ ಪ್ರಾರ್ಥನೆ, ಸೇವೆ, ವಿನಯ ಮತ್ತು ಸಭ್ಯತೆ.

ಈ ಕೆಳಗಿನ ಹತ್ತು ಗುಣಗಳನ್ನು ಅಭ್ಯಸಿಸಬೇಕು:

೧. ಆಣೆ ಹಾಕದಿರುವದು;

೨. ವಿನೋದಕ್ಕಾದರೂ ಸುಳ್ಳು ಹೇಳದಿರುವದು;

೩. ಭಾಷೆಗೆ ತಪ್ಪದಿರುವದು;

೪. ಅಲ್ಲಾನ ಸೃಷ್ಟಿಯಲ್ಲಿ ನೀಚತಮವಾದುದನ್ನೂ ತಿರಸ್ಕರಿಸದಿರುವದು; ಮತ್ತು ಅದನ್ನು ಮನೋವಾಕ್ಕಾಯಗಳಿಂದ ಹಿಂಸಿಸದಿರುವದು;

೫. ಶಾಪ ಕೊಡದಿರುವದು;

೬ ಅಸ್ತಿಕನನ್ನು ಕಪಟಿಯೆಂದಾಗಲಿ ಪಾಖಂಡಿಯೆಂದಾಗಲಿ ನಿಂದಿಸದಿರುವದು;

೭. ಪಾಪಕೃತ್ಯಗಳಿಂದ ದೂರವಿರುವದು;

೮. ಮಾನವಜೀವಿಯ ಮೇಲೆ ಹೊರೆ ಹೊರಿಸದಿರುವದು;

೯. ಪರದ್ರವ್ಯಕ್ಕೆ ಬಾಯ್ಬಿಡದಿರುವದು;

೧೦. ವಿನಯಶೀಲರಾಗಿರುವದು.

214

The Rayalaseema Bank Limited, Bellayr.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— (ಬಳ್ಳಾರಿಜಿಲ್ಲಾ ಹಡಗಲಿ, ಕೂಡ್ಲಿಗೆ, ಚಿತ್ತೂರುಜಿಲ್ಲಾ ನಾಗರಿಯಲ್ಲಿ ನಮ್ಮ ಶಾಖೆಗಳನ್ನು ಪ್ರಾರಂಭಿಸಿದೆವೆಂದು ತಿಳಿಸಲು ಹರ್ಷಿಸುತ್ತೇವೆ.

ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ.
ಅನಂತಪುರ:- ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾವಿಡಿ, ತಿಮ್ಮನಚೆರ್ಲ, ಉರವಕೊಂಡ.
ಚಿತ್ತೂರು:- ಚಿತ್ತೂರು, ಮದನಪಲ್ಲಿ, ತಿರುಪತಿ. ಕರ್ನೂಲು:- ಕರ್ನೂಲು ಪತ್ತಿಕೊಂಡ. ಕಡಪ:- ರಾಜಂಪೆ

ಫಿಕ್ಸಡ್ ಡಿಪಾಜಿಟ್‌ನ ಬಡ್ಡೀದರ:— 6ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, ಸೇವಿಂಗ್ಸ ಬ್ಯಾಂಕು: 2% ಕ್ಯಾಷ್ ಸರ್ಟಿಫಿಕೇಟುಗಳು: 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:- 3%.

ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.

—ರಾಷ್ಟ್ರೀಯ ಪುಸ್ತಕಗಳು—

—: ಕಾಂಗ್ರೆಸ್ ಸ್ವರೂಪ ದರ್ಶನ:—

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶತಾ-ನಿವಾರಣೆ	0-12—0
ಪ್ರಾಂತಭಾಷೆ- ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ(ಇತಿಹಾಸ-ತಂತ್ರ)	3-8 0

ವಿ. ಪಿ. ಖರ್ಚುಬೇರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ.—

ನವಭಾರತ, — ಕಾರ್ಯಾಲಯ ಬಳ್ಳಾರಿ.

ಹಿಂದೂಸ್ತಾನಿಯು ರಾಷ್ಟ್ರಭಾಷೆ

ಇದನ್ನು ತಪ್ಪದೆ ಕಲಿಯಿರಿ.

ಪ್ರಾರಂಭಿಕ ಪರೀಕ್ಷೆಗಳಾದ ಪ್ರಾಥಮಿಕ- ಮಧ್ಯಮ ರಾಷ್ಟ್ರಭಾಷೆ, ಉನ್ನತ ಪರೀಕ್ಷೆಗಳಾದ ಪ್ರವೇಶಿಕ, ವಿಶಾರದ- ಪ್ರಚಾರಕ, ಮದ್ರಾಸ್ ವಿಶ್ವವಿದ್ಯಾಲಯದ ಹಿಂದೀ- ವಿದ್ವಾನ್ ಪರೀಕ್ಷೆಗಳ ಮಾಹಿತಿಯನ್ನು ಉಚಿತವಾಗಿ ಕೊಟ್ಟು- ಶಿಕ್ಷಣದ ಏರ್ಪಾಟಿಗೆ ಸಲಹೆಗಳನ್ನು ಕೊಡಲಾಗುವುದು:- ಎಲ್ಲಾಪುಸ್ತಕಗಳು ದೊರೆಯುತ್ತವೆ. ಬಹಳ ಸುಲಭ ಭಾಷೆ-ಅತ್ಯಲ್ಪಕಾಲದಲ್ಲಿ ಕಲಿಯಬಹುದು. ಟಿ. ಬಿ. ಕೇಶವರಾವ್

ಹಿಂದೀಪ್ರಚಾರಕ, ಬಳ್ಳಾರಿ

NAVA BHARAT. BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5-0-0	One Year 5 0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To
SRI.....
.....
.....

Printed at Krishna Press Bellary QH No. B 17 FOR (Q.H. NO. B-5)
Edited & Published by T. B. KESHAVARAO.